# ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ

ಗ್ರಂಥ ಕರ್ತ
**ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**

ಅನುವಾದಕ
**ಎಂ.ಉಬೈದುಲ್ಲಾ**

ಪರಿಶೀಲಕ
**ಮುಹಮ್ಮದ್ ಯೂಸುಫ್**

ಪ್ರಕಾಶಕರು
**ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ**
**ದಕ್ಷಿಣ ವಲಯ, ಕರ್ನಾಟಕ,**
**ನಂ. 1, 3ನೇ ಕ್ರಾಸ್,**
**ವಿಲ್ಸನ್ ಗಾರ್ಡನ್,**
**ಬೆಂಗಳೂರು–560027**


**ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ**
ಉರ್ದು ಮೂಲ ಗ್ರಂಥ ಕರ್ತ :
**ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**
ಅನುವಾದಕ :
**ಎಂ.ಉಬೈದುಲ್ಲಾ**
ಪರಿಶೀಲಕ :
**ಮುಹಮ್ಮದ್ ಯೂಸುಫ್**
ಪ್ರಕಾಶಕರು :
**ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ**
**ದಕ್ಷಿಣ ವಲಯ, ಕರ್ನಾಟಕ,**
**ನಂ. 1, 3ನೇ ಕ್ರಾಸ್, ವಿಲ್ಸನ್ ಗಾರ್ಡನ್,**
**ಬೆಂಗಳೂರು – 560 027**

---

**MUHAMMAD PAIGAMBARARA(SA)**
**JEEVANA CHARITRE**
*Urdu Origin Author :*
**MIRZA BASHIRUDDIN MAHMUD AHMAD**
*Translated by :*
**M.UBEIDULLAH**
*Revised by :*
**MUHAMMAD YUSUF**
*Published by :*
**MAJLIS KHUDDAMUL AHMADIYYA**
**South Zone, Karnataka,**
**No.1, 3rd Cross, Wilson Garden,**
**Bangalore - 560 027.**
*Distribution :*
**NAZARAT NASHRO ISHA'AT**
**Sadr Anjuman Ahmadiyya, Qadian - 143 516**
*Printed by :*
**DIGANTHA MUDRANA LTD.**
**Yeyyadi, Mangalore.**
**First Edition : 2012 Copies : 1000**
**ISBN : 978 - 81 - 7912 - 332 - 4**

## ವಿಷಯಾನುಕ್ರಮಣಿಕೆ


| ಸಂ. | ವಿಷಯ | ಪುಟ |
|---|---|---|
| 1 | ಪ್ರಸ್ತಾವನೆ | 9 |
| 2 | ಪೀಠಿಕೆ | 10 |
| 3 | ಪ್ರಕಾಶಕರ ನುಡಿ | 11 |
| 4 | ಮುನ್ನುಡಿ | 13 |
| 5 | ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಅರಬ್ ರಾಜ್ಯದ ಸ್ಥಿತಿ | 21 |
| 6 | ಮದ್ಯಪಾನ ಮತ್ತು ಜುಗಾರಿ ಆಟ | 22 |
| 7 | ವ್ಯಾಪಾರ | 23 |
| 8 | ಅರಬ್ ಜನತೆಯ ಇನ್ನಿತರ ಸ್ಥಿತಿಗಳು, ಸ್ವಭಾವಗುಣಗಳು ಮತ್ತು ಹವ್ಯಾಸಗಳು | 24 |
| 9 | ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜನನ | 26 |
| 10 | ಹಿಲ್‌ಫುಲ್ ಫುಝೂಲ್– ಸಾಧು ಸಂರಕ್ಷಣೆಗೆ ಪ್ರತಿಜ್ಞಾಬದ್ಧವಾದ ಸಂಘಟನೆಯಲ್ಲಿ ಹಝ್ರತ್ ಪೈಗಂಬರರ(ಸ) ಸೇರ್ಪಡೆ | 27 |
| 11 | ಹಝ್ರತ್ ಖದೀಜರೊಂದಿಗೆ(ರ) ವಿವಾಹ | 29 |
| 12 | ಗುಲಾಮರ ವಿಮೋಚನೆ ಮತ್ತು ಝೈದ್ | 30 |
| 13 | ಹಿರಾ ಗುಹೆಯಲ್ಲಿ ಅಲ್ಲಾಹನ ಆರಾಧನೆ | 32 |
| 14 | ಪವಿತ್ರ ಖುರ್‌ಆನ್ ವಚನಗಳ ಪ್ರಥಮ ಸಂದೇಶ | 32 |
| 15 | ಹಝ್ರತ್ ಅಬೂಬಕರ್(ರ) ಶಿಷ್ಯರಾದುದು | 35 |
| 16 | ಸತ್ಯವಿಶ್ವಾಸಿಗಳ ಕಿರುಸಂಘ | 35 |
| 17 | ಮಕ್ಕ ನಗರದ ಮುಂದಾಳುಗಳ ವಿರೋಧ | 36 |
| 18 | ಸತ್ಯವಿಶ್ವಾಸಿಗಳಾದ ಗುಲಾಮರ ಮೇಲೆ ಮಕ್ಕ ನಗರದ ಅವಿಶ್ವಾಸಿಗಳ ದೌರ್ಜನ್ಯಗಳ ಪರಂಪರೆ | 38 |
| 19 | ಗುಲಾಮರಲ್ಲದ ಸ್ವತಂತ್ರ ಮುಸ್ಲಿಮರ ಮೇಲೆ ದೌರ್ಜನ್ಯ | 42 |
| 20 | ಹಝ್ರತ್ ಪೈಗಂಬರರ(ಸ) ಮೇಲೆ ದೌರ್ಜನ್ಯ | 43 |
| 21 | ಇಸ್ಲಾಮಿನ ಸಂದೇಶ | 45 |





| | | |
|---|---|---|
| 22 | ಅಬೂತಾಲಿಬರೊಂದಿಗೆ ಮಕ್ಕ ನಗರದ ಅವಿಶ್ವಾಸಿಗಳ ದೂರು ಮತ್ತು ಹಝ್ರತ್ ಪೈಗಂಬರರ(ಸ) ಅಚಂಚಲ ಮನೋಭಾವ | 47 |
| 23 | ಅಬಿಸೀನಿಯಾ (ಇತಿಯೋಪಿಯಾ)ದ ಕಡೆಗೆ ವಲಸೆ | 49 |
| 24 | ಹಝ್ರತ್ ಉಮರ್(ರ) ಇಸ್ಲಾಮ್ ಸ್ವೀಕಾರ | 52 |
| 25 | ಮುಸ್ಲಿಮರಿಗೆ ಬಹಿಷ್ಕಾರ | 55 |
| 26 | ಧರ್ಮಪ್ರಚಾರದಲ್ಲಿ ಉಂಟಾದ ತಡೆಗಳು ಮತ್ತು ಹಝ್ರತ್ ಪೈಗಂಬರರ(ಸ) ತಾಯಿಫ್ ಪ್ರಯಾಣ | 57 |
| 27 | ಮದೀನದ ನಿವಾಸಿಗಳ ಇಸ್ಲಾಮ್ ಧರ್ಮ ಸ್ವೀಕಾರ | 63 |
| 28 | ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಪ್ನಯಾನ (ಇಸ್ರಾ ಅಥವಾ ಮಿಅ್‌ರಾಜ್) | 66 |
| 29 | ರೂಮಿನವರ ವಿಜಯ | 66 |
| 30 | ಅಖಬದಲ್ಲಿ ಪ್ರತಿಜ್ಞೆ | 69 |
| 31 | ಹಝ್ರತ್ ಪೈಗಂಬರರ(ಸ) ಮಕ್ಕದಿಂದ ಮದೀನಕ್ಕೆ ವಲಸೆ (ಹಿಜ್‌ರತ್) | 72 |
| 32 | ಸುರಾಖ ಬೆನ್ನಟ್ಟುವಿಕೆ | 75 |
| 33 | ಮದೀನಕ್ಕೆ ಹಝ್ರತ್ ಪೈಗಂಬರರ(ಸ) ಆಗಮನ | 78 |
| 34 | ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯವರ ಮನೆಯಲ್ಲಿ ಹಝ್ರತ್ ಪೈಗಂಬರರ(ಸ) ವಾಸ | 81 |
| 35 | ಹಝ್ರತ್ ಪೈಗಂಬರರ(ಸ) ಸೇವಕನಾದ ಹಝ್ರತ್ ಅನಸ್‌ರ ಸಾಕ್ಷ್ಯ | 82 |
| 36 | ಮಕ್ಕದಿಂದ ತನ್ನ ಕುಟುಂಬದವರನ್ನು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಕರೆಸಿಕೊಂಡದ್ದು ಮತ್ತು ಮಸ್‌ಜಿದ್ ನಬವೀಗೆ ಅಸ್ತಿಭಾರ ಹಾಕಿದ್ದು | 83 |
| 37 | ಮದೀನದ ಬಹುದೈವಾರಾಧಕ ಗೋತ್ರಗಳು ಇಸ್ಲಾಮ್ ಧರ್ಮಕ್ಕೆ ಸೇರ್ಪಡೆ | 83 |
| 38 | ಮುಸ್ಲಿಮರನ್ನು ಪುನಃ ಪೀಡಿಸಲು ಮಕ್ಕದ ಜನರ ಸಿದ್ಧತೆಗಳು | 85 |
| 39 | ಮದೀನದ ಮುಸ್ಲಿಮರ (ಅನ್‌ಸಾರ್‌ಗಳ) ಮತ್ತು ಮಕ್ಕದಿಂದ ವಲಸೆ ಬಂದ ಮುಸ್ಲಿಮರ (ಮುಹಾಜಿರ್‌ಗಳ) ಭ್ರಾತೃ ಪ್ರೇಮ | 86 |
| 40 | ಮುಹಾಜಿರ್, ಅನ್‌ಸಾರ್ ಮತ್ತು ಯಹೂದಿಯರ ಒಮ್ಮತದ ಒಪ್ಪಂದ | 87 |
| 41 | ಮಕ್ಕ ನಗರದ ಅವಿಶ್ವಾಸಿಗಳ ವಿರೋಧ ವರ್ತನೆಗಳು ಹೊಸದಾಗಿ ಆರಂಭಗೊಂಡದ್ದು | 89 |

42 ಮಕ್ಕದ ಅವಿಶ್ವಾಸಿಗಳ ಆಕ್ರಮಣಗಳನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಕೈಗೊಂಡ ಕ್ರಮಗಳು 91
43 ಮದೀನದಲ್ಲಿ ಇಸ್ಲಾಮೀ ಸರಕಾರದ ಸ್ಥಾಪನೆ 92
44 ಖುರೈಶ್ ವ್ಯಾಪಾರಿ ತಂಡದ ಆಗಮನ ಮತ್ತು ಬದ್ರ್ ಯುದ್ಧ 93
45 ಒಂದು ಮಹತ್ತಾದ ಭವಿಷ್ಯವಾಣಿಯ ಈಡೇರಿಕೆ 100
46 ಬದ್ರ್ ಯುದ್ಧದ ಸೆರೆಯಾಳುಗಳು 102
47 ಉಹುದ್ ಯುದ್ಧ 104
48 ವಿಜಯ ಅಪಜಯವಾದುದು 107
49 ಉಹುದ್ ಯುದ್ಧದಿಂದ ಮರಳಿಕೆ ಮತ್ತು ಮದೀನದವರಿಂದ ಸ್ನೇಹ ಮತ್ತು ನಿಷ್ಠೆಯ ಪ್ರಕಟಣೆ 114
50 ಮದ್ಯಪಾನ ನಿಷೇಧದ ಆಜ್ಞೆ ಮತ್ತು ಅದರ ಅಪ್ರತಿಮ ಪ್ರಭಾವ 118
51 ಉಹುದ್ ಯುದ್ಧದ ನಂತರ ಅವಿಶ್ವಾಸಿ ಗೋತ್ರಗಳ ಗೂಢ ಕಾರ್ಯಯೋಜನೆಗಳು 120
52 ಪವಿತ್ರ ಖುರ್‌ಆನನ್ನು ಕಂಠಪಾಠ ಮಾಡಿದ ಎಪ್ಪತ್ತು ಮಂದಿಯನ್ನು ವಧಿಸಿದ ಘೋರ ಸಂಭವ 124
53 ಬನೂ ಮುಸ್ತಲಿಖ್ ಯುದ್ಧ 126
54 ಮದೀನದ ಮೇಲೆ ಅರಬ್ ಗೋತ್ರಗಳ ಆಕ್ರಮಣ – ಕಂದಕ್ ಯುದ್ಧ 129
55 ಕಂದಕ್ ಯುದ್ಧದಲ್ಲಿ ಹೋರಾಡಿದ ಮುಸ್ಲಿಮ್ ಸೈನಿಕರ ಸಂಖ್ಯೆ ಎಷ್ಟು? 132
56 ಬನೂ ಖುರೈಝರ ದ್ರೋಹ 135
57 ಕಪಟ ವಿಶ್ವಾಸಿಗಳ ಮತ್ತು ಸತ್ಯ ವಿಶ್ವಾಸಿಗಳ ಮನೋಭಾವಗಳು 140
58 ಮೃತದೇಹಕ್ಕೆ ಗೌರವ 141
59 ಐಕ್ಯಕೂಟದ ಆಕ್ರಮಣ 142
60 ಬನೂ ಖುರೈಝು ಬಹುದೈವಾರಾಧಕರೊಂದಿಗೆ ಸೇರಿ ಮುಸ್ಲಿಮರನ್ನು ಆಕ್ರಮಿಸಲು ಸಿದ್ಧತೆಗಳನ್ನು ಮಾಡಿ ಸೋತದ್ದು 144
61 ಬನೂ ಖುರೈಝುರಿಗೆ ದ್ರೋಹದ ಶಿಕ್ಷೆ 147
62 ಬನೂ ಖುರೈಝುರಿಗೆ ಸಅದ್ ನೀಡಿದ ತೀರ್ಪು ಮೂಸಾ ಪ್ರವಾದಿಯ ನ್ಯಾಯಶಾಸ್ತ್ರ ಗ್ರಂಥದ ಪ್ರಕಾರ 150
63 ಮುಸ್ಲಿಮರ ವಿಜಯದ ಆರಂಭ 154


ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ


64 ಯುದ್ಧದ ಬಗ್ಗೆ ಯಹೂದಿ ಧರ್ಮ ಮತ್ತು ಕ್ರೈಸ್ತ ಧರ್ಮದ ಉಪದೇಶಗಳು 158
65 ಯುದ್ಧದ ಕುರಿತು ಇಸ್ಲಾಮಿನ ನಿಯಮಗಳು 161
66 ಕಂದಕ್ ಯುದ್ಧದ ನಂತರ ಅವಿಶ್ವಾಸಿಗಳ ಆಕ್ರಮಣಗಳು 172
67 ಮಕ್ಕದ ಕಡೆಗೆ ಹದಿನೈದು ನೂರು ಶಿಷ್ಯರೊಂದಿಗೆ ಹಝ್ರತ್ ಪೈಗಂಬರರ(ಸ) ಪ್ರಯಾಣ 173
68 ಹುದೈಬಿಯಾ ಸಂಧಿಯ ಶರ್ತಗಳು 178
69 ವಿವಿಧ ದೇಶಗಳ ದೊರೆಗಳಿಗೆ ಪತ್ರಗಳು 182
70 ಬೈಝಾಂಟೈನ್(ರೂಮ್) ಸಾಮ್ರಾಜ್ಯದ ಚಕ್ರವರ್ತಿ ಹೆರಾಕ್ಲಿಯಸ್‌ಗೆ ಬರೆದ ಪತ್ರ 182
71 ಹಝ್ರತ್ ಪೈಗಂಬರ್(ಸ) ಸತ್ಯವಂತನಾದ ಪ್ರವಾದಿ ಎಂದು ಖೈಸರ್ ಚಕ್ರವರ್ತಿಯ ತೀರ್ಮಾನ 185
72 ಹಿರ್‌ಕಲ್ ಚಕ್ರವರ್ತಿಗೆ ಕಳುಹಿಸಿದ ಪತ್ರ 186
73 ಪರ್ಶಿಯಾ (ಇರಾನ್) ದೊರೆಗೆ ಪತ್ರ 188
74 ಅಬಿಸೀನಿಯಾದ ದೊರೆ ನಜ್ಜಾಶಿಗೆ ಬರೆದ ಪತ್ರ 190
75 ಈಜಿಪ್ಟಿನ ದೊರೆ ಮುಖೌಖಿಸ್‌ನಿಗೆ ಪತ್ರ 192
76 ಬಹರೈನಿನ ದೊರೆಗೆ ಪತ್ರ 194
77 ಖೈಬರ್ ಕೋಟೆಯನ್ನು ವಶಪಡಿಸಿಕೊಂಡದ್ದು 196
78 ಮೂರು ವಿಚಿತ್ರ ಘಟನೆಗಳು 197
79 ಪವಿತ್ರ ಕಅ್‌ಬದ ಪ್ರದಕ್ಷಿಣೆ 201
80 ಹಝ್ರತ್ ಪೈಗಂಬರರ(ಸ) ಬಹು ಪತ್ನಿತ್ವದ ಕುರಿತು ಆಕ್ಷೇಪಗಳಿಗೆ ಉತ್ತರ 203
81 ಖಾಲಿದ್ ಬಿನ್ ವಲೀದ್ ಮತ್ತು ಅಮ್ರಿಬ್ನುಲ್ ಆಸ್ ಅವರ ಇಸ್ಲಾಮ್ ಧರ್ಮ ಸ್ವೀಕಾರ 204
82 ಮೂತ ಯುದ್ಧ 204
83 ಮಕ್ಕಃ ವಿಜಯ 210
84 ಹುನೈನ್ ಯುದ್ಧ 230
85 ಮಕ್ಕ ವಿಜಯ ಮತ್ತು ಹುನೈನ್ ಯುದ್ಧದ ನಂತರ 237
86 ತಬೂಕ್ ದಂಡಯಾತ್ರೆ 239

| | | |
|---|---|---|
| 87 | ಹಜ್ಜತುಲ್ ವಿದಾ – ಹಝ್ರತ್ ಪೈಗಂಬರರ(ಸ) ಪ್ರವಚನ | 244 |
| 88 | ಹಝ್ರತ್ ಪೈಗಂಬರರ(ಸ) ನಿಧನ | 248 |
| 89 | ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದಾಗ ಅವರ ಶಿಷ್ಯರ ಸ್ಥಿತಿ | 254 |
| 90 | ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳು | 258 |
| 91 | ಹಝ್ರತ್ ಪೈಗಂಬರರ(ಸ) ಆಂತರಿಕ ಮತ್ತು ಬಾಹ್ಯ ಪರಿಶುದ್ಧಿ | 259 |
| 92 | ಆಹಾರ ಪಾನೀಯಗಳಲ್ಲಿ ಸರಳತೆ ಮತ್ತು ಭಯಭಕ್ತಿ | 261 |
| 93 | ಉಡುಗೆ ತೊಡುಗೆಗಳಲ್ಲಿ ಮತ್ತು ಆಭರಣಗಳಲ್ಲಿ ಸರಳತೆ ಹಾಗೂ ಭಯ ಭಕ್ತಿ | 265 |
| 94 | ಹಾಸಿಗೆಯ ಸರಳತೆ | 267 |
| 95 | ಮನೆ ಮತ್ತು ವಾಸ ಸ್ಥಳದ ಸರಳತೆ | 267 |
| 96 | ಅಲ್ಲಾಹನೊಂದಿಗೆ ಪ್ರೇಮ ಮತ್ತು ಅವನ ಆರಾಧನೆ | 268 |
| 97 | ಅಲ್ಲಾಹನ ಬಗ್ಗೆ ಭರವಸೆ | 273 |
| 98 | ಹಝ್ರತ್ ಪೈಗಂಬರ್(ಸ) ಸ್ವಜನರೊಂದಿಗೆ ವರ್ತಿಸುತ್ತಿದ್ದ ರೀತಿ | 280 |
| 99 | ಶ್ರೇಷ್ಠ ಸ್ವಭಾವ ಗುಣಗಳು | 282 |
| 100 | ಆತ್ಮ ನಿಯಂತ್ರಣ | 284 |
| 101 | ನೀತಿ–ನ್ಯಾಯ | 286 |
| 102 | ಅನ್ಯರ ಭಾವನೆಗಳ ಬಗ್ಗೆ ಗೌರವ | 288 |
| 103 | ಬಡವರ ಬಗ್ಗೆ ಕಾಳಜಿ ಮತ್ತು ಅವರ ಭಾವನೆಗಳಿಗೆ ಗೌರವ | 288 |
| 104 | ಬಡವರ ಸಂಪತ್ತಿನ ಸಂರಕ್ಷಣೆ | 293 |
| 105 | ಗುಲಾಮರೊಂದಿಗೆ ಉತ್ತಮ ವರ್ತನೆ | 294 |
| 106 | ಮಾನವರ ಸೇವೆ ಮಾಡುವವರ ಬಗ್ಗೆ ಆದರ | 296 |
| 107 | ಮಹಿಳೆಯರೊಂದಿಗೆ ಉತ್ತಮ ನಡೆವಳಿಕೆ | 296 |
| 108 | ಮೃತರ ಬಗ್ಗೆ ಹಝ್ರತ್ ಪೈಗಂಬರರ ನಿರ್ದೇಶಗಳು | 300 |
| 109 | ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ | 301 |
| 110 | ತಂದೆ, ತಾಯಿ ಮತ್ತು ಅನ್ಯ ಸಂಬಂಧಿಕರೊಂದಿಗೆ ಉತ್ತಮ ವರ್ತನೆ ಬಗ್ಗೆ ಉಪದೇಶಗಳು | 302 |
| 111 | ಸತ್ಸಂಗ | 306 |
| 112 | ಜನರ ವಿಶ್ವಾಸವನ್ನು ರಕ್ಷಿಸುವ ಬಗ್ಗೆ ಶ್ರದ್ಧೆ | 307 |


ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆ


| | | |
|---|---|---|
| 113 | ಅನ್ಯರ ತಪ್ಪುಗಳನ್ನು ಮರೆಮಾಡುವುದು | 307 |
| 114 | ಸಹನೆ | 311 |
| 115 | ಪರಸ್ಪರ ಸಹಾಯ | 312 |
| 116 | ಪರರ ತಪ್ಪನ್ನು ಹುಡುಕದಿರುವಿಕೆ | 313 |
| 117 | ಸತ್ಯ ಸಂಧತೆ | 314 |
| 118 | ಗುಪ್ತಾನ್ವೇಷಣೆಯ ನಿಷೇಧ ಮತ್ತು ಒಳ್ಳೆಯದನ್ನೇ ಯೋಚಿಸಬೇಕೆಂಬ ಆಜ್ಞೆ | 316 |
| 119 | ವ್ಯಾಪಾರದ ಸರಕುಗಳಲ್ಲಿ ಮೋಸ ವಂಚನೆಗಳ ಬಗ್ಗೆ ಅತೃಪ್ತಿ | 316 |
| 120 | ನಿರಾಶೆ | 317 |
| 121 | ಮೃಗ ಪಕ್ಷಿಗಳೊಂದಿಗೆ ಉತ್ತಮ ವರ್ತನೆ | 317 |
| 122 | ಧಾರ್ಮಿಕ ಸೌಹಾರ್ದ | 318 |
| 123 | ಶೌರ್ಯ | 319 |
| 124 | ತಿಳಿಗೇಡಿಗಳೊಂದಿಗೆ ಸಹಾನುಭೂತಿ | 320 |
| 123 | ಒಪ್ಪಂದದ ಪಾಲನೆ | 320 |

بسم الله الرحمن الرحيم

## ಪ್ರಸ್ತಾವನೆ

ಅಲ್ಲಾಹನ ಅನುಗ್ರಹದಿಂದ ಕರ್ನಾಟಕ ರಾಜ್ಯದ ದಕ್ಷಿಣ ವಲಯ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಯುವಜನ ಸಂಘಕ್ಕೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವನ ಚರಿತ್ರೆಯನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸುವ ಸೌಭಾಗ್ಯ ಲಭಿಸಿದೆ. ಅಲ್‌ಹಮ್ದುಲಿಲ್ಲಾಹ್ (ಅಲ್ಲಾಹನಿಗೆ ಸ್ತುತಿ). ಈ ಪುಸ್ತಕ ಹಲವು ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿದೆ. ದಕ್ಷಿಣ ವಲಯದ ಖಾಯಿದ್ ಸಾಹೇಬರ ಅಪೇಕ್ಷೆ ಮೇರೆಗೆ ನಾನು ಖುದ್ದಾಮುಲ್ ಅಹ್ಮದಿಯಾ ಸಹೋದರರಿಗೆ ಹೇಳಲು ಇಚ್ಛಿಸುವುದೇನೆಂದರೆ,

> ಪ್ರತಿಯೊಬ್ಬ ಖಾದಿಮ್ ಹಝ್ರತ್ ಪೈಗಂಬರರ(ಸ) ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವುದು ಅಗತ್ಯ ಹಾಗೂ ಅದಕ್ಕನುಸಾರವಾಗಿ ತನ್ನ ಜೀವನ ನಡೆಸುವುದು ಕಡ್ಡಾಯ. ಅಲ್ಲಾಹನು ಎಲ್ಲ ಖಾದಿಮ್‌ಗಳಿಗೂ ಆ ಸೌಭಾಗ್ಯ ನೀಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಒಂದು ಫಾರ್ಸಿ ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

**ಬಅದಝ್ ಖುದಾ ಬಇಶ್ಕೆ ಮುಹಮ್ಮದ್ ಮುಹಮ್ಮರ್‌ರಮ್**
**ಗರ್ ಕುಫ್ರ್‌ಈನ್ ಬವದ್ ಬಖುದಾ ಕಾಫಿರಮ್**

ಅಂದರೆ, ಅಲ್ಲಾಹನ ನಂತರ ನಾನು ಹಝ್ರತ್ ಪೈಗಂಬರರನ್ನು ಪ್ರೀತಿಸುತ್ತೇನೆ. ಹಾಗೆ ಪ್ರೀತಿಸುವುದು ಕುಫ್ರ್ ಎಂದಾದರೆ, ನಾನು ಎಲ್ಲರಿಗಿಂತ ದೊಡ್ಡ ಕಾಫಿರ್ ಆಗಿದ್ದೇನೆ.

ಈ ಪುಸ್ತಕವನ್ನು ಪ್ರಕಟಿಸಲಿಕ್ಕೆ ಆರ್ಥಿಕ ಸಹಾಯ ಮತ್ತು ಇತರ ಸಹಾಯ ನೀಡಿದ ಎಲ್ಲರಿಗೂ ಅಲ್ಲಾಹನು ತಕ್ಕುದಾದ ಪ್ರತಿಫಲ ನೀಡಲಿ, ಆಮೀನ್.

**ಹಾಫಿಝ್ ಮಖ್‌ದೂಮ್ ಶರೀಫ್**
ಸದರ್, ಮಜ್ಲಿಸ್ ಖುದ್ದಾಮುಲ್
ಅಹ್ಮದಿಯಾ, ಭಾರತ.



## ಪೀಠಿಕೆ

ಅಲ್ಲಾಹನಿಗೆ ಸ್ತುತಿ. ಕರ್ನಾಟಕ ರಾಜ್ಯದ ದಕ್ಷಿಣ ವಲಯ ಖುದ್ದಾಮುಲ್ ಅಹ್ಮದಿಯಾ ಯುವಜನ ಸಂಘ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸರ ಒಪ್ಪಿಗೆ ಮೇರೆಗೆ ಮೊದಲ ಬಾರಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವನ ಚರಿತ್ರೆಯನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸಿದೆ. ಅಲ್ಲಾಹನು ಅದಕ್ಕೆ ತಕ್ಕುದಾದ ಪ್ರತಿಫಲ ನೀಡಲಿ ಹಾಗೂ ಕನ್ನಡ ಓದುಗರಿಗೆ ಅದರ ಪ್ರಯೋಜನ ಪಡೆಯುವ ಸೌಭಾಗ್ಯವನ್ನು ದಯಪಾಲಿಸಲಿ, ಆಮೀನ್.

ಈ ಉದ್ಗ್ರಂಥವನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ರಝಿಯಲ್ಲಾಹು ಅನ್‌ಹು) ಉರ್ದು ಭಾಷೆಯಲ್ಲಿ ರಚಿಸಿದರು. ಹಲವು ಭಾಷೆಗಳಲ್ಲಿ ಅದರ ಭಾಷಾಂತರಗಳು ಪ್ರಕಟಣೆಗೊಂಡಿದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆಯ ಬಗ್ಗೆ ಹಲವು ಪುಸ್ತಕಗಳಿವೆ. ಆದರೆ ಈ ಪುಸ್ತಕ ನಿಸ್ತುಲ್ಯವಾಗಿದೆ. ಅಲ್ಲಾಹನು ಹಝ್ರತ್ ಪೈಗಂಬರರ(ಸ) ಪಾವನ ಜೀವನದ ಮೂಲಕ ಎಲ್ಲ ಮಾನವರಿಗೆ ಮಾರ್ಗದರ್ಶನ ನೀಡಲಿ. ಆ ಮಾದರಿ ಪುರುಷನ ಅಧ್ಯಾಪನೆಗಳ ಮೂಲಕ ಲೋಕದಲ್ಲಿಡೀ ಶಾಂತಿ ಹರಡಲಿ, ಆಮೀನ್.

**ಮುಹಮ್ಮದ್ ಶಫೀಉಲ್ಲಾಹ್**
ಅಮೀರ್ ಜಮಾಅತ್ ಅಹ್ಮದಿಯಾ
ದಕ್ಷಿಣ ವಲಯ, ಕರ್ನಾಟಕ.

## ಪ್ರಕಾಶಕರ ನುಡಿ

ಇಸ್ಲಾಮ್ ಅತ್ಯಂತ ತಪ್ಪು ತಿಳುವಳಿಕೆಗೆ ಈಡಾದ ಧರ್ಮವಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅತ್ಯಂತ ತಪ್ಪು ತಿಳುವಳಿಕೆಗೆ ಗುರಿಯಾದ ಪ್ರವಾದಿಯಾಗಿದ್ದಾರೆ. ಇಸ್ಲಾಮಿನ ಯಥಾರ್ಥ ಅಧ್ಯಾಪನೆಗಳ ಕುರಿತು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಮಾದರಿಯ ಬಗ್ಗೆ ಇರುವ ಅಜ್ಞತೆಯೇ ಅದಕ್ಕೆ ಕಾರಣ. ಭಯೋತ್ಪಾದಕರು ಎಂಬ ಪದವನ್ನು ಮುಸ್ಲಿಮರಿಗೆ ಅಳವಡಿಸಿಕೊಂಡು ಕ್ಷುದ್ರ ಕೃತಿಗಳು ಪ್ರಕಟವಾಗುವುದನ್ನು ನಾವು ಕಾಣುತ್ತಿದ್ದೇವೆ. ಇಸ್ಲಾಮಿನ ಮತ್ತು ಪೈಗಂಬರರ ಸುಂದರ ರೂಪವನ್ನು ಇಂದು ಲೋಕಕ್ಕೆ ಪ್ರಾಯೋಗಿಕ ಜೀವಿತ ಮೂಲಕ ತೋರಿಸುವುದು ನಮ್ಮ ದೌತ್ಯವಾಗಿದೆ. ಮುಂದಿನ ಪೀಳಿಗೆಗೆ ಈ ಉದ್ದೇಶ ಸಿದ್ಧಿಗಿರುವ ಮಾರ್ಗ ದೀಪವಾಗಿದೆ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ ಎಂಬ ಈ ಕೃತಿ.

"ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಉತ್ತಮ ಮಾದರಿ ಇದೆ" ಎಂಬ ಪವಿತ್ರ ಖುರ್‌ಆನಿನ ಹೇಳಿಕೆಯಂತೆ, ಪೈಗಂಬರರ(ಸ) ಜನನದಿಂದ ಮರಣದವರೆಗೆ ಇರುವ ಘಟನಾ ವಿವರಣೆಗಳಿಂದ ಈ ಮಹದ್ಗ್ರಂಥ ತುಂಬಿದೆ. ಪೈಗಂಬರರ ಪರಿಶುದ್ಧ ಜೀವಿತದ ಧಾರ್ಮಿಕ – ನೈತಿಕ ಪಾಠಗಳನ್ನು ಅರಿತುಕೊಳ್ಳಲು ಈ ಕೃತಿ ಎಲ್ಲ ವಿಧದಲ್ಲೂ ಸಹಾಯಕವಾಗುವುದೆಂಬುದರಲ್ಲಿ ಸಂಶಯವಿಲ್ಲ. ಕನ್ನಡ ಭಾಷಾ ಸಾಹಿತ್ಯಕ್ಕೆ ಇದೊಂದು ಉತ್ತಮ ಸೇರ್ಪಡೆಯಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಅವರು ಪವಿತ್ರ ಖುರ್‌ಆನಿಗೆ ಉರ್ದು ಭಾಷೆಯಲ್ಲಿ ರಚಿಸಿದ "ತಫ್ಸೀರ್ ಕಬೀರ್" ಎಂಬ ಬೃಹತ್ ವ್ಯಾಖ್ಯಾನದ ಇಂಗ್ಲಿಷ್ ಭಾಷಾಂತರವನ್ನು ಐದು ಸಂಪುಟಗಳಲ್ಲಿ ಪ್ರಕಟಿಸುವಾಗ ಅದಕ್ಕೆ ಬರೆದ ಸುದೀರ್ಘ ಮುನ್ನುಡಿಯಲ್ಲಿ ಪವಿತ್ರ ಖುರ್‌ಆನ್ ಯಾರಿಗೆ ಅವತೀರ್ಣಗೊಂಡಿತೋ, ಆ ಮಹಾನುಭಾವರು ಎಂತಹ ವೈಭವಶಾಲಿ, ಪರಿಶುದ್ಧ, ಅಪ್ರತಿಮ ವ್ಯಕ್ತಿತ್ವವನ್ನು ಹೊಂದಿದ್ದರು ಎಂಬುದನ್ನು ಸ್ಪಷ್ಟಪಡಿಸಲು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವನ ಚರಿತ್ರೆಯನ್ನು ವಿವರಿಸಿದ್ದರು. ಅದರ ಭಾಷಾಂತರವಾಗಿದೆ ಈ ಪುಸ್ತಕ.

ಹೃದ್ಯವಾದ ಕನ್ನಡ ಭಾಷೆಗೆ ಈ ಕೃತಿಯನ್ನು ಜನಾಬ್ ಎಂ. ಉಬೈದುಲ್ಲಾ ಸಾಹೇಬ್ ಅನುವಾದಿಸಿದ್ದಾರೆ. "ಯುಗರಶ್ಮಿ" ಸಂಪಾದಕರಾದ ಜನಾಬ್ ಮುಹಮ್ಮದ್ ಯೂಸುಫ್ ಸಾಹೇಬ್ ಈ ಪುಸ್ತಕವನ್ನು ಆಮೂಲಾಗ್ರವಾಗಿಯೂ ಕೂಲಂಕಷವಾಗಿಯೂ ಪರಿಶೀಲನೆ ಮಾಡಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಜನಾಬ್ ಶಾಹಿದ್ ಪರ್ವೇಝ್ ಬದ್ರುದ್ದೀನ್ ಸಾಹೇಬ್, ಜನಾಬ್ ಜೆ. ಎಂ. ಮುಹಮ್ಮದ್ ಶರೀಫ್ ಸಾಹೇಬ್ ಮತ್ತು ಇತರರು ಈ ಪುಸ್ತಕದ ಪ್ರಕಟನೆ ಗೋಸ್ಕರ ತುಂಬಾ ಸಹಕಾರ ನೀಡಿದ್ದಾರೆ. ಜನಾಬ್ ಕೆ. ಕೆ. ಬದ್ರುದ್ದೀನ್ ಸಾಹೇಬ್



ಮತ್ತು ಕುಟುಂಬದವರು ಈ ಕೃತಿಯ ಪ್ರಕಟಣೆಗೆ ಆರ್ಥಿಕ ಸಹಾಯ ನೀಡಿದ್ದಾರೆ. ಇವರೆಲ್ಲರಿಗೂ ಅಲ್ಲಾಹನು ತಕ್ಕುದಾದ ಪ್ರತಿಫಲ ನೀಡಲಿ ಎಂದು ಪ್ರಾರ್ಥನೆ.

ಈ ಪುಸ್ತಕವನ್ನು ಪ್ರಕಟಿಸಲು ನಮಗೆ ಅನುಮತಿಯನ್ನಿತ್ತ ನಾಝಿರ್ ಸಾಹೇಬ್, ನಝಾರತ್ ನಶ್‌ರೋ ಇಶಾಅತ್, ಖಾದಿಯಾನ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶ್ರೇಷ್ಠ ಮಾನವೀಯ ಮೌಲ್ಯಗಳಿಂದ ಕೂಡಿದ ತ್ಯಾಗಪೂರ್ಣವಾದ ಜೀವನದ ಪುಟಗಳನ್ನು ಓದಿ ತಿಳಿದುಕೊಳ್ಳಲು ನಮಗೆ ಮಹಾಭಾಗ್ಯ ನೀಡಿದ ಸರ್ವಶಕ್ತನಾದ ಅಲ್ಲಾಹನಿಗೆ ಸರ್ವ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತಾ ಸಹೃದಯರಾದ ಓದುಗರ ಸಮಕ್ಷ ಈ ಕೃತಿಯನ್ನು ಸಮರ್ಪಿಸುತ್ತೇವೆ.

**ಮುಸದ್ದಿಖ್ ಅಹ್ಮದ್**
ಖಾಯಿದ್, ಕರ್ನಾಟಕ ದಕ್ಷಿಣ ವಲಯ,
ಬೆಂಗಳೂರು.



## ಮುನ್ನುಡಿ

ಪವಿತ್ರ ಖುರ್‌ಆನ್ ಯಾವ ಮಹಾನುಭಾವರಿಗೆ ಎಂತಹ ಪರಿಸ್ಥಿತಿಯಲ್ಲಿ ಅವತೀರ್ಣವಾಯಿತು ಎಂಬ ವಿಷಯ ಪವಿತ್ರ ಖುರ್‌ಆನಿನ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಲು ಅತ್ಯಂತ ಸಹಾಯಕವಾಗಿದೆ. ಆದರೆ ದಾರ್ಶನಿಕ ಮನೋಭಾವದ ಕೆಲವು ಜನರು ತಮ್ಮ ಮುಂದಿರಿಸಲಾದ ವಿಷಯವು ಯಾವ ಮಟ್ಟವನ್ನು ಹೊಂದಿದೆ ಎಂಬುದನ್ನು ಮಾತ್ರ ನೋಡುತ್ತಾರೆ. ಇದೇ ಭಾವನೆಯನ್ನು ಪುರಸ್ಕರಿಸುವ ಒಂದು ಅರಬಿ ನಾಣ್ಣುಡಿ ಹೀಗಿದೆ: "ನುಡಿದ ಮಾತನ್ನು ಮಾತ್ರ ನೋಡು, ಅದನ್ನು ನುಡಿದವನು ಯಾರೆಂದು ನೋಡಬೇಡ." ಆದರೆ ಲೋಕದ ಬಹುತೇಕ ಜನರು ಒಂದು ಮಾತನ್ನು ನುಡಿದುದು ಯಾರೆಂದು ತಿಳಿಯಲು ಇಚ್ಛಿಸುತ್ತಾರೆ. ವಿಶಿಷ್ಟವಾಗಿ ದೈವಿಕ ಗ್ರಂಥಗಳನ್ನು ಲೋಕದ ಮುಂದಿರಿಸಿದ ಪ್ರವಾದಿಗಳು ಜೀವಿಸಿದ ರೀತಿ ಹೇಗಿತ್ತೆಂದು ಲೋಕದ ಜನರು ತಿಳಿಯುವುದು ಅತ್ಯಾವಶ್ಯಕವಾಗಿದೆ. ಏಕೆಂದರೆ ಧಾರ್ಮಿಕ ನಿಯಮಗಳನ್ನು ಕೇವಲ ಆಜ್ಞೆಗಳನ್ನು ನೀಡುವ ಮೂಲಕ ಪಾಲಿಸಲ್ಪಡುವಂತೆ ಮಾಡಲಾಗುವುದಿಲ್ಲ. ಸರಕಾರವು ದೇಶದಲ್ಲಿ ಸುವ್ಯವಸ್ಥೆ ಉಂಟಾಗಲು ಸ್ಥಾಪಿಸಲ್ಪಡುತ್ತದೆ. ಅದು ಮನುಷ್ಯನ ಬಾಹ್ಯ ವರ್ತನೆಗೆ ಮಾತ್ರ ಸಂಬಂಧಿಸಿರುತ್ತದೆ. ಒಂದು ದೇಶದಲ್ಲಿ ಅದರ ಸಂವಿಧಾನವು ಒಂದು ಆಡಳಿತ ವ್ಯವಸ್ಥೆಯನ್ನು ರೂಪಿಸಲು ಸಾಕಾಗುತ್ತದೆ. ಕಾನೂನು ಕಾಯಿದೆಗಳ ಉದ್ದೇಶ ಜನರು ಬಾಹ್ಯವಾಗಿ ಕಾನೂನು ಕಾಯಿದೆಗಳನ್ನು ಪಾಲಿಸಬೇಕು ಎಂಬುದಕ್ಕೆ ಸೀಮಿತವಾಗಿರುತ್ತದೆ. ಒಬ್ಬನು ಕೆಟ್ಟ ಒಂದು ಉದ್ದೇಶವನ್ನು ಹೊಂದಿದ್ದನೆಂದು ಒಂದು ನ್ಯಾಯಾಲಯದಲ್ಲಿ ಸಾಬೀತುಗೊಳಿಸುವುದರಿಂದ ಮಾತ್ರ ಆತನು ಅಪರಾಧಿಯಾಗುವುದಿಲ್ಲ. ಆತನು ತನ್ನ ದುರುದ್ದೇಶದ ಪ್ರಕಾರ ಕಾರ್ಯಪ್ರವೃತ್ತನಾದನೆಂದು ಸಾಬೀತುಗೊಳಿಸಿದರೆ ಮಾತ್ರ ಆತ ಅಪರಾಧಿಯಾಗುತ್ತಾನೆ.

ಆದರೆ ಧಾರ್ಮಿಕ ಕ್ಷೇತ್ರಗಳಲ್ಲಿ ಬಾಹ್ಯ ವಿಷಯಗಳಿಗಿಂತ ಹೆಚ್ಚಾಗಿ ಮನುಷ್ಯನ ಆಂತರಿಕ ವಿಷಯಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಬಾಹ್ಯ ಕ್ರಿಯೆಗಳನ್ನು ಸಹ ಲಕ್ಷಿಸದೆ ಬಿಡಲು ಸಾಧ್ಯವಿಲ್ಲ ಎಂಬುದು ಸಂಶಯಾತೀತವಾದ ಸಂಗತಿಯಾಗಿದೆ. ಏಕೆಂದರೆ ಬಾಹ್ಯಾಚರಣೆ ಆಂತರಿಕ ವಿಶ್ವಾಸದ ಚಿಹ್ನೆಯಾಗಿದೆ. ಬಾಹ್ಯವಾದ ಆಚರಣೆಯೊಂದಿಗೆ ಆಂತರಿಕ ಸುಧಾರಣೆ ಸಹ ಆಗಬೇಕೆಂದಿಲ್ಲ. ಆದರೆ ಆಂತರಿಕವಾದ ಸುಧಾರಣೆಯೊಂದಿಗೆ ಬಾಹ್ಯವಾದ ಸುಧಾರಣೆ ಸಹ ಆಗುವುದು ನಿಶ್ಚಯವಾಗಿದೆ.



ಬೆಂಕಿ ಇದೆ, ಆದರೆ ಅದರಿಂದ ತಾಪ ಉಂಟಾಗುವುದಿಲ್ಲ ಎಂಬುದು ಅಸಂಭಾವ್ಯವಾದ ಹಾಗೆಯೇ ಹೃದಯದಲ್ಲಿ ಪರಿಶುದ್ಧಿ ಇದೆ, ಆದರೆ ಅದಕ್ಕೆ ಅನುಯೋಜ್ಯವಾದ ಕೃತಿಗಳಿಲ್ಲ ಎನ್ನುವುದು ಸಹ ಅಸಂಭಾವ್ಯವಾದ ಸಂಗತಿಯಾಗಿದೆ. ತಾತ್ಕಾಲಿಕ ನ್ಯೂನತೆಗಳು ಮತ್ತು ನಿರ್ಲಕ್ಷ್ಯತೆಗಳು ಇರಬಹುದು. ಆದರೆ ಸಾಮಾನ್ಯವಾಗಿ ಒಬ್ಬನ ಹೃದಯದ ಪರಿಶುದ್ಧತೆಗೆ ಅನುಸಾರವಾಗಿ ಅವನ ಕೆಲಸಗಳೂ ನಿರ್ವಹಿಸಲ್ಪಡುತ್ತವೆ. ಹೃದಯ ಪರಿಶುದ್ಧತೆಯನ್ನು ಗಳಿಸುವ ಅತ್ಯುತ್ತಮ ಮಾರ್ಗ ಉತ್ತಮ ಆದರ್ಶದ ಪಾಲನೆಯಾಗಿರುತ್ತದೆ. ಕಾನೂನು ಕಾಯಿದೆಗಳು ಮನುಷ್ಯನ ಬುದ್ಧಿಯ ಮೇಲೆ ಪ್ರಭಾವ ಬೀರುತ್ತವೆ. ಆದರೆ ಉತ್ತಮ ಆದರ್ಶ ಮನುಷ್ಯನ ಹೃದಯದ ಮೇಲೆ ಪ್ರಭಾವ ಬೀರುತ್ತದೆ. ಕಾನೂನು ಕಾಯಿದೆಗಳು ಮನುಷ್ಯನ ವಿಚಾರಗಳ ಮೇಲೆ ಅಧಿಕಾರ ಚಲಾಯಿಸುತ್ತವೆ. ಆದರೆ ಉತ್ತಮ ಆದರ್ಶ ಮನುಷ್ಯನ ಭಾವೋದ್ವೇಗಗಳ ಮೇಲೆ ಅಧಿಕಾರ ಚಲಾಯಿಸುತ್ತದೆ. ನಾವು ಮನುಷ್ಯನ ವಿಚಾರಗಳ ಸುಧಾರಣೆ ಮಾಡುವುದರಿಂದ ಆತನ ಶಾರೀರಿಕ ಮತ್ತು ಆಧ್ಯಾತ್ಮಿಕ ಸುಧಾರಣೆ ಮಾಡಲಾರೆವು. ವಿಚಾರಗಳ ಪರಿಣಾಮದಿಂದ ಮಾಡಲ್ಪಡುವ ಕೆಲಸಗಳು ನಿರಂತರವಾಗಿರಲಾರವು. ಆದರೆ ಭಾವೋದ್ವೇಗಗಳ ಪರಿಣಾಮವಾಗಿ ಮಾಡುವ ಕೃತ್ಯಗಳು ನಿರಂತರವಾಗಿ ಇರುತ್ತವೆ. ಒಬ್ಬ ಸಾಮಾನ್ಯ ಜನಹಿತ ಚಿಂತಕನಾದ ವ್ಯಕ್ತಿ ತನ್ನ ಸುತ್ತುಮುತ್ತಲಿನ ಜನರ ಹಿತಕ್ಕಾಗಿ ತೋರಿಸುವ ಕಾಳಜಿ ಒಬ್ಬ ತಾಯಿ ತನ್ನ ಮಗುವಿಗಾಗಿ ತೋರಿಸುವ ಕಾಳಜಿಗಿಂತ ವಿಭಿನ್ನವಾಗಿರುತ್ತದೆ. ಇದಕ್ಕೆ ಕಾರಣವೇನೆಂದರೆ, ಒಬ್ಬ ವ್ಯಕ್ತಿಯ ಬುದ್ಧಿಯು ಸದ್ಗುಣಗಳ ಉಪದೇಶದಿಂದ ಪ್ರಭಾವಿತವಾಗಿದ್ದರೂ ಯಾರ ಭಾವೋದ್ವೇಗಗಳು ಸದ್ಗುಣಗಳ ಉಪದೇಶದಿಂದ ಪ್ರಭಾವಿತವಾಗಿದೆಯೋ ಅಂತಹ ವ್ಯಕ್ತಿಗೆ ಅವನು ಸರಿಸಮಾನನಾಗಲಾರನು. ಒಬ್ಬ ತಾಯಿಯ ಪ್ರೀತಿಯು ತನ್ನ ಮಗುವಿನೊಂದಿಗೆ ಇರುವುದು ಭಾವೋದ್ವೇಗಗಳ ಕಾರಣದಿಂದ ಆಗಿರುತ್ತದೆ. ಆದರೆ ಒಬ್ಬ ತತ್ವಜ್ಞಾನಿ ತನ್ನ ನೆರೆಹೊರೆಯವರನ್ನು ಪ್ರೀತಿಸುವುದು ತಾತ್ವಿಕವಾದ ಸಾಕ್ಷ್ಯಾಧಾರಗಳ ಕಾರಣದಿಂದಾಗಿರುತ್ತದೆ.

ಪ್ರವಾದಿಗಳ ಕೃತ್ಯಗಳು ವಿವೇಕಯುತವೂ ಭಾವೋದ್ವೇಗಭರಿತವೂ ಆಗಿರುತ್ತವೆ. ಅವುಗಳು ಜನರಿಗೆ ಅನುಕರಣೀಯ ಆದರ್ಶಗಳಾಗಿರುತ್ತವೆ. ಯಾವ ಕೃತ್ಯಗಳು ಕೇವಲ ವಿಚಾರಗಳ ಪರಿಣಾಮವಾಗಿ ಮಾಡಲ್ಪಡುತ್ತಿವೆಯೋ ಅವುಗಳು ನಿರಂತರವಾಗಿ ಮುಂದುವರಿಯುವುದಿಲ್ಲ. ಏಕೆಂದರೆ ಕೆಲವು ಸಲ ಮನುಷ್ಯರ ಗಮನ ವಾಸ್ತವಿಕ ಸಂಗತಿಯ ಕಡೆಗೆ ಹರಿಯುವುದಿಲ್ಲ. ಕೆಲವು ಸಲ ಮನುಷ್ಯರ ನಿರ್ಧಾರ ಮತ್ತು ಕೃತ್ಯಗಳ ಮಧ್ಯೆ ದೀರ್ಘವಾದ ಚಿಂತನೆಗಳೂ ಆಲೋಚನೆಗಳೂ ತಡೆಯಾಗಿರುತ್ತವೆ. ಆದರೆ ತಮ್ಮ ಭಾವೋದ್ವೇಗಗಳ ಪರಿಣಾಮವಾಗಿ ಜನರು ಮಾಡುವ ಕೆಲಸಗಳು ಶೀಘ್ರ ಕೃತಿಶೀಲವೂ ನಿರಂತರವೂ ಆಗಿರುತ್ತವೆ. ಒಬ್ಬ ತಾಯಿಗೆ "ನೀನು ನಿನ್ನ ಮಗುವಿಗಾಗಿ ಪಡುತ್ತಿರುವ ಕಷ್ಟ ಮತ್ತು ಮಾಡುತ್ತಿರುವ ತ್ಯಾಗಗಳನ್ನು ನೀನು ಬಿಟ್ಟು ಬಿಡು" ಎಂದು ಉಪದೇಶಿಸಿ ಅದಕ್ಕೆ ಸಮರ್ಥನೆಯಾಗಿ ಒಂದು ಲಕ್ಷ ಸಾಕ್ಷ್ಯಾಧಾರಗಳನ್ನು ಯಾರಾದರೂ ಆಕೆಗೆ ನೀಡಿದರೂ ಆಕೆ ಆ ಮಾತುಗಳನ್ನು

ಎಂದೂ ಒಪ್ಪಲಾರಳು ಮತ್ತು ಮಗುವಿನಿಂದ ತನಗಾಗುವ ಕಷ್ಟಗಳ ಕುರಿತು ಯೋಚಿಸುತ್ತಾ ಕುಳಿತುಕೊಳ್ಳಲಾರಳು. ಆಕೆ ತನ್ನ ತೊಂದರೆಗಳ ಬಗ್ಗೆ ನಿರ್ಲಿಪ್ತಳಾಗಿ ತನ್ನ ಮಗುವಿನ ಹಿತಕ್ಕಾಗಿ ತನ್ನ ದೃಷ್ಟಿಯಲ್ಲಿ ಯೋಗ್ಯವಾದ ಕಾರ್ಯಗಳನ್ನು ಮಾಡಲು ಕೂಡಲೇ ತೊಡಗುವಳು. ರಾತ್ರಿ ಮತ್ತು ಹಗಲು ಆಕೆ ತನ್ನ ಮಗುವಿನ ಹಿತಚಿಂತನೆ ಮಾಡದಿರುವ ಯಾವುದೇ ಕ್ಷಣವಿರಲಾರದು. ಆದುದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಉತ್ತಮ ನಡವಳಿಕೆ ಮನುಷ್ಯನ ಭಾವನೆಯಲ್ಲಿ ಬೇರೂರಿ ಆತನ ಒಂದು ಭಾಗವೇ ಆಗುವ ತನಕ ಯಥಾರ್ಥವಾದ ಸುಧಾರಣೆ ಉಂಟಾಗಲಾರದು. ಅಂತಹ ವ್ಯಕ್ತಿಗಳು ಸದ್ಗುಣಗಳನ್ನು ಅವುಗಳ ಗುಣಾವಗುಣಗಳನ್ನು ಮಾತ್ರ ಚಿಂತಿಸಿ ತಮ್ಮ ನಡವಳಿಕೆಯ ಒಂದು ಭಾಗವನ್ನಾಗಿ ಮಾಡಿಕೊಳ್ಳುವುದಿಲ್ಲ. ಅವರು ಸದ್ಗುಣಗಳ ಅವಶ್ಯಕತೆಗಳನ್ನು ತಮ್ಮಲ್ಲಿಯೇ ಗಾಢವಾಗಿ ಮನಗಾಣುತ್ತಾರೆ. ಭಾವೋದ್ವೇಗಗಳನ್ನು ಕೆಲವರು ಕೆಟ್ಟದೆಂದು ಹೇಳುತ್ತಾರೆ. ಆದರೆ ಭಾವೋದ್ವೇಗಗಳು ಬರೇ ಕೆಟ್ಟದ್ದೇ ಆಗಿರುವುದಿಲ್ಲ. ಅವುಗಳಲ್ಲಿ ಒಳ್ಳೆಯವೂ ಇವೆ. ಭಾವೋದ್ವೇಗ ಎಂಬ ಪದದ ಮೂಲ ಅರ್ಥವೇನೆಂದರೆ, ನಿರ್ಧಾರ ಮತ್ತು ಕೃತಿ ಇವುಗಳ ಮಧ್ಯೆ ಇರುವ ವಿಚಾರದ ದೀರ್ಘವಾದ ತಡೆಗೋಡೆಯನ್ನು ಅದು ಕಿರಿದುಗೊಳಿಸುತ್ತದೆ ಅಥವಾ ಅದನ್ನು ಸಂಪೂರ್ಣವಾಗಿ ಧ್ವಂಸಗೊಳಿಸುತ್ತದೆ. ಭಾವೋದ್ವೇಗದ ಪರಿಣಾಮವಾಗಿ ಮನುಷ್ಯನ ಕೃತ್ಯಗಳು ಸೀಮಿತವಾಗದಿರುವಂತೆ ಮತ್ತು ನೂರಾರು ಪಟ್ಟು ಹೆಚ್ಚಾಗುವಂತೆ ಆಗುತ್ತದೆ. ಒಬ್ಬ ವ್ಯಕ್ತಿ ಕೇವಲ ವಿಚಾರವನ್ನು ಅವಲಂಬಿಸಿದರೆ ಆತನು ಹೆಚ್ಚಿನ ಸಮಯವನ್ನು ಚಿಂತಿಸಲು ಮತ್ತು ಯೋಚನೆ ಮಾಡಲು ವಿನಿಯೋಗಿಸುತ್ತಾನೆ. ಆದರೆ ಒಬ್ಬ ವ್ಯಕ್ತಿ ಒಮ್ಮೆ ಗಾಢವಾಗಿ ಚಿಂತಿಸಿ ಒಂದು ಸತ್ಯವನ್ನು ತಿಳಿದುಕೊಂಡರೆ ಮತ್ತು ಒಂದು ಒಳಿತನ್ನು ಗಳಿಸಿದರೆ ಆತನು ಆ ಸತ್ಯವನ್ನು ಮತ್ತು ಒಳಿತನ್ನು ತನ್ನ ಹೃದಯಕ್ಕೆ ಸ್ಥಾನಪಲ್ಲಟಗೊಳಿಸುತ್ತಾನೆ ಮತ್ತು ಅದನ್ನು ತನ್ನ ಭಾವೋದ್ವೇಗಗಳ ಒಂದು ಭಾಗವನ್ನಾಗಿ ಮಾಡಿಕೊಳ್ಳುತ್ತಾನೆ. ಆತನು ಆ ಸತ್ಯವನ್ನು ಅವಲಂಬಿಸಿ ಎಷ್ಟು ವೇಗವಾಗಿ ಮತ್ತು ಆವೇಶಭರಿತನಾಗಿ ಕೃತಿಶೀಲನಾಗುತ್ತಾನೆಂದರೆ, ಕೇವಲ ವಿಚಾರಗಳನ್ನು ಅವಲಂಬಿಸಿ ಕಾರ್ಯಪ್ರವೃತ್ತನಾಗುವ ಶೀಲವನ್ನು ಹೊಂದಿದವನು ಆತನ ಸರಿಸಮಾನನಾಗಲು ಎಂದೂ ಸಮರ್ಥನಾಗುವುದಿಲ್ಲ.

ವಿಚಾರ ಮಾಡುತ್ತಾ ಕಾರ್ಯಪ್ರವೃತ್ತನಾಗುವವನು ಎಷ್ಟು ಕಾಲಾವಧಿಯಲ್ಲಿ ಒಂದು ಕೆಲಸ ಮಾಡುತ್ತಾನೋ ಭಾವೋದ್ವೇಗದಿಂದ ಕೂಡಿ ವರ್ತಿಸುವ ವ್ಯಕ್ತಿ ಅಷ್ಟೇ ಸಮಯದಲ್ಲಿ ಅದರ ಇಪ್ಪತ್ತರಷ್ಟು ಕೆಲಸವನ್ನು ಮಾಡಬಲ್ಲನು. ಹಾಗೆ ಭಾವೋದ್ವೇಗದಿಂದ ಕೆಲಸ ಮಾಡುವವನನ್ನು ನಾವು ಅನಾಗರಿಕನೆಂದು ಹೇಳಲಾರೆವು. ಏಕೆಂದರೆ ಅವನು ತನ್ನ ಭಾವೋದ್ವೇಗಗಳ ಗುಲಾಮನಲ್ಲ. ಅವನು ವಿಚಾರ ಮತ್ತು ಗಹನವಾದ ಚಿಂತನೆಯ ಮೂಲಕ ಸತ್ಯವನ್ನು ಮತ್ತು ಒಳಿತನ್ನು ಹುಡುಕಿದವನು. ಅವುಗಳು ಲಭ್ಯವಾದ ನಂತರ ಅವುಗಳನ್ನು ಅವನು ತನ್ನ ಭಾವನೆಗಳ ಭಾಗವನ್ನಾಗಿ ಮಾಡಿಕೊಂಡನು. ಇಂತಹ ವ್ಯಕ್ತಿ ತನ್ನ ಭಾವೋದ್ರೇಕಗಳ ಪರಿಣಾಮವಾಗಿ ಮಾಡುವ



ಕೃತ್ಯಗಳು ಅವನ ನಿರ್ಧಾರಗಳಿಗೆ ಹೊರತಾಗಿರದೆ ನಿರ್ಧಾರಗಳಿಗೆ ಅಧೀನವಾಗಿರುತ್ತವೆ. ಅವನ ವೈಶಿಷ್ಟ್ಯವೇನೆಂದರೆ, ಅವನು ಒಂದು ವಿಷಯವನ್ನು ಚಿಂತಿಸಿ ಅಂಗೀಕರಿಸಿದ ಬಳಿಕ ಆ ವಿಷಯದ ಬಗ್ಗೆ ಪದೇ ಪದೇ ಮರುಚಿಂತನೆ ಮಾಡುವುದಿಲ್ಲ. ಅವನು ಮೊದಲೇ ಮಾಡಿದ ಒಂದು ಕಾರ್ಯವನ್ನು ಅನಾವಶ್ಯಕವಾಗಿ ಪುನರಾವರ್ತಿಸುವುದು ಬುದ್ಧಿವಂತಿಕೆಯ ಕೆಲಸವಲ್ಲ. ಅದು ಮೂರ್ಖತನದ ಕೆಲಸವಾಗುತ್ತದೆ. ಇದೊಂದು ವಾಸ್ತವಿಕ ಸಂಗತಿಯಾಗಿದೆ. ಸತ್ಯ ಮತ್ತು ಒಳಿತುಗಳು ಮನುಷ್ಯನ ಭಾವೋದ್ವೇಗಗಳ ಭಾಗಗಳಾಗಿ ಎಂದಿನ ತನಕ ಪರಿಣಮಿಸುವುದಿಲ್ಲವೋ ಅಂದಿನ ತನಕ ಲೋಕದ ಸುಧಾರಣೆ ಆಗಲಾರದು. ಎಲ್ಲಿಯವರೆಗೆ ಮನುಷ್ಯನು ವಿಚಾರವನ್ನು ಮಾತ್ರ ಅವಲಂಬಿಸುತ್ತಾನೋ ಅವನು ಅಲ್ಲಿಯ ತನಕ ಸಂದೇಹ, ಸಂಶಯ ಮತ್ತು ವಿಳಂಬಕ್ಕೆ ಗುರಿಯಾಗುವನು. ಸತ್ಯ ಮತ್ತು ಒಳಿತುಗಳ ತತ್ವಗಳನ್ನು ಗಾಢವಾದ ಚಿಂತನೆ ಮತ್ತು ಅಧ್ಯಯನದಿಂದ ಮನಗಂಡು ಅವುಗಳನ್ನು ತನ್ನ ಭಾವನೆಗಳ ಭಾಗಗಳಾಗಿ ಮಾಡಿಕೊಂಡರೆ ಅವನು ಸಂದೇಹ, ಸಂಶಯ ಮತ್ತು ವಿಳಂಬದಿಂದ ಸುರಕ್ಷಿತನಾಗುವನು. ಅವನು ಸತ್ಯವನ್ನು ಅನುಸರಿಸಿ ಕೃತಿಶೀಲನಾಗುವನು ಮತ್ತು ಒಳಿತುಗಳನ್ನು ಮಾಡುವನು. ಆದರೆ ಅವನು ಸಂದೇಹ, ಸಂಶಯ ಮತ್ತು ವಿಳಂಬಗಳಿಗೆ ಅಧೀನನಾಗದೆ ಹೀಗೆ ಮಾಡುವನು.

ಆದರೆ ಈ ಸಂಗತಿಗಳು ಉತ್ತಮ ಆದರ್ಶ ಮಾದರಿಯನ್ನು ಅನುಕರಿಸದೆ ಸಂಭವಿಸಲಾರವು. ವೈಚಾರಿಕ ಸಾಕ್ಷ್ಯಾಧಾರಗಳಿಂದ ನಮ್ಮ ಬುದ್ಧಿಗೆ ಸಮಾಧಾನ ನೀಡುತ್ತೇವೆ. ಆದರೆ ವೈಚಾರಿಕ ಭಾವನೆಗಳು ಪ್ರೇಮದ ಭಾವನೆಗಳನ್ನು ಉದ್ರೇಕಿಸುವುದಿಲ್ಲ. ಪ್ರೇಮದ ಭಾವನೆಗಳನ್ನು ತ್ಯಾಗ ಬಲಿದಾನದ ಮಾದರಿಗಳು ಮಾತ್ರ ಉದ್ರೇಕಿಸುತ್ತವೆ. ದೇವರನ್ನು ಆರಾಧಿಸುವಾಗ ಉಚ್ಚರಿಸುವ ಶಬ್ದಗಳೂ ವಾಕ್ಯಗಳೂ ಎಷ್ಟು ಶೋಭಾಯಮಾನವಾಗಿದ್ದರೂ ಅವುಗಳನ್ನು ಉಚ್ಚರಿಸುವುದರಿಂದ ಉಂಟಾಗುವ ಮನಕರಗುವಿಕೆ ಮತ್ತು ಅಳಲು ಒಬ್ಬ ವ್ಯಕ್ತಿ ಮನಕರಗಿ ಅಳುತ್ತಾ ಪ್ರಾರ್ಥಿಸುತ್ತಾ ಇರುವುದನ್ನು ನೋಡುವುದರಿಂದ ಉಂಟಾಗುವಷ್ಟು ಪ್ರಭಾವಶಾಲಿಯಾಗಿರುವುದಿಲ್ಲ. ಕೇವಲ ಪ್ರದರ್ಶನವನ್ನು ಮಾತ್ರ ಅವಲಂಬಿಸಿ ದಾರಿತಪ್ಪುವ ಸಾಧ್ಯತೆಗಳಿವೆಯೆಂಬುದು ಸಹ ಒಂದು ಸಂಶಯಾತೀತವಾದ ಸಂಗತಿಯಾಗಿದೆ. ವಿಚಾರಶುದ್ಧವಾಗುವ ತನಕ ಭಾವೋದ್ವೇಗಗಳು ಆಚಾರ ಮತ್ತು ಸಂಪ್ರದಾಯಗಳ ರೂಪವನ್ನು ಪಡೆಯುತ್ತವೆ. ಆಚಾರ ಮತ್ತು ಸಂಪ್ರದಾಯಗಳು ಬುದ್ಧಿ ಮತ್ತು ವಿವೇಕವನ್ನು ಕೊಲೆಮಾಡುವ ಸಂಗತಿಗಳಾಗಿವೆ. ಆದುದರಿಂದ ಸಾಕ್ಷ್ಯಾಧಾರಗಳಿಂದ ಸಾಬೀತಾಗಬಲ್ಲ ಉಪದೇಶಗಳು ಮತ್ತು ಪರಿಶುದ್ಧವಾದ ಮಾದರಿ ಒಂದೇ ಕಾಲದಲ್ಲಿ ಇರಬೇಕಾದುದು ಆವಶ್ಯಕವಾಗಿದೆ. ಇದೇ ಕಾರಣದಿಂದ ದೈವಿಕಗ್ರಂಥಗಳು ಪ್ರವಾದಿಗಳಿಗೆ ಅವತೀರ್ಣವಾಗುತ್ತಿದ್ದವು. ಬರೇ ಗ್ರಂಥ ಆಕಾಶದಿಂದ ಕೆಳಗೆಸೆಯಲ್ಪಡಲಿಲ್ಲ. ದೈವಿಕ ಗ್ರಂಥ ಮನುಷ್ಯರ ಬುದ್ಧಿಗೆ ಬೆಳಕು ನೀಡುತ್ತದೆ. ಗ್ರಂಥದ ಉಪದೇಶವನ್ನು ಅನುಷ್ಠಾನಕ್ಕೆ ತಂದ ಮಾದರಿ ವ್ಯಕ್ತಿಯಾದ ಪ್ರವಾದಿ ಆ ಗ್ರಂಥದ ಉಪದೇಶಗಳನ್ನು ಮನುಷ್ಯರ ಹೃದಯಗಳಲ್ಲಿ ಪ್ರವೇಶಗೊಳಿಸುತ್ತಾರೆ

ಮತ್ತು ಅವುಗಳನ್ನು ತನ್ನ ಅನುಯಾಯಿಗಳ ಭಾವೋದ್ವೇಗಗಳ ಭಾಗಗಳನ್ನಾಗಿ ಮಾಡುತ್ತಾರೆ. ಇದೇ ಕಾರಣದಿಂದ ಯಾವ ಕ್ಷೇತ್ರಗಳಲ್ಲಿ ದೇವನ ಪ್ರವಾದಿಗಳು ವಿಜಯಿಗಳಾದರೋ ತತ್ವಜ್ಞಾನಿಗಳು ಆ ಕ್ಷೇತ್ರಗಳಲ್ಲಿ ಯಾವಾಗಲೂ ಸೋತು ಹೋದರು. ಏಕೆಂದರೆ ತತ್ವಜ್ಞಾನಿಗಳು ತಮ್ಮ ತಾತ್ವಿಕ ಉಪದೇಶಗಳಿಂದ ಜನರ ಬುದ್ಧಿಯನ್ನು ಸುಧಾರಣೆ ಮಾಡಲು ಚಿಂತಿಸುತ್ತಾರೆ. ಆದರೆ ತಮ್ಮ ಉತ್ತಮ ಮಾದರಿಯ ಮೂಲಕ ಅವರ ಸುಧಾರಣೆಯನ್ನು ಮಾಡುವುದಿಲ್ಲ. ಪ್ರವಾದಿಗಳು ದೈವಿಕ ಗ್ರಂಥಗಳ ಮೂಲಕ ಜನರ ಬುದ್ಧಿಗಳಿಗೆ ಪ್ರಕಾಶ ನೀಡುತ್ತಿದ್ದರಲ್ಲದೆ ತಮ್ಮ ನಡೆವಳಿಕೆಯ ಉತ್ತಮ ಮಾದರಿಯ ಮೂಲಕ ಅವರು ಜನರ ಹೃದಯಗಳನ್ನು ಪರಿಶುದ್ಧಗೊಳಿಸುತ್ತಾರೆ. ಅವರ ಮೂಲಕ ದೇವನ ಅದ್ಭುತಕಾರ್ಯಗಳು ಮತ್ತು ದೃಷ್ಟಾಂತಗಳು ಪ್ರಕಟವಾಗಿ ಅವರು ಜನರ ವಿಶ್ವಾಸ ಮತ್ತು ನಂಬಿಕೆಗಳ ವೃದ್ಧಿಗೆ ಕಾರಣೀಭೂತರಾಗುತ್ತಾರೆ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ರವರ ಜೀವಿತ ಚರಿತ್ರೆಯನ್ನು ವಿವರಿಸಲು ಉದ್ದೇಶಿಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತ ವೃತ್ತಾಂತಗಳು ಎಷ್ಟು ವಿಪುಲವಾಗಿಯೂ ಸ್ಪಷ್ಟವಾಗಿಯೂ ತಿಳಿದಿದೆಯೋ ಅಷ್ಟು ವಿಪುಲವಾಗಿಯೂ ಸ್ಪಷ್ಟವಾಗಿಯೂ ಬೇರೆ ಯಾವುದೇ ಪ್ರವಾದಿಯ ಜೀವಿತ ವೃತ್ತಾಂತಗಳು ಲಭ್ಯವಾಗಿಲ್ಲ ಎಂಬುದು ದೇವನ ದೊಡ್ಡದಾದೊಂದು ದೃಷ್ಟಾಂತವೂ ಇಸ್ಲಾಮ್ ಧರ್ಮದ ಸತ್ಯವನ್ನು ಸಾಬೀತುಗೊಳಿಸುವ ಒಂದು ಮಹತ್ವಪೂರ್ಣ ಸಾಕ್ಷ್ಯವೂ ಆಗಿದೆ. ಹಝ್ರತ್ ಪೈಗಂಬರರ(ಸ) ಜೀವಿತ ವೃತ್ತಾಂತಗಳು ಸವಿಸ್ತಾರವಾಗಿ ಲಭ್ಯವಾಗಿರುವ ಕಾರಣದಿಂದಲೇ ಬೇರೆ ಯಾವುದೇ ಪ್ರವಾದಿಯ ಮೇಲೆ ಹೊರಿಸಿರದಷ್ಟು ಅಪವಾದಗಳು ಅವರ ಮೇಲೆ ಹೊರಿಸಲ್ಪಟ್ಟಿವೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ಅಪವಾದಗಳನ್ನು ಪರಿಹರಿಸಿಕೊಂಡ ನಂತರ ಎಷ್ಟು ಹೃತ್ಪೂರ್ವಕವಾಗಿ ಹಝ್ರತ್ ಪೈಗಂಬರರನ್ನು(ಸ) ಒಬ್ಬ ಮನುಷ್ಯನು ಪ್ರೀತಿಸಬಲ್ಲನೋ ಅದೇ ರೀತಿ ಬೇರೆ ಯಾವುದೇ ವ್ಯಕ್ತಿಯನ್ನು ಅವನು ಎಂದೂ ಪ್ರೀತಿಸಲಾರನು. ಏಕೆಂದರೆ ಯಾರ ಜೀವಿತ ರೀತಿ ರಹಸ್ಯವಾಗಿದೆಯೋ ಅಂತಹವರನ್ನು ಪ್ರೀತಿಸುವುದರಲ್ಲಿ ಒಡಕು ಉಂಟಾಗುವುದು ಯಾವಾಗಲೂ ಸಂಭಾವ್ಯವಾಗಿದೆ. ಹಝ್ರತ್ ಪೈಗಂಬರರ(ಸ) ಜೀವಿತ ಒಂದು ತೆರೆದ ಗ್ರಂಥವಾಗಿತ್ತು. ಶತ್ರುಗಳ ಆಕ್ಷೇಪಗಳು ಪರಿಹಾರಗೊಂಡ ನಂತರ ಅವರ ಜೀವಿತದ ಕುರಿತು ನಮ್ಮಲ್ಲಿ ಹೊಸ ದೃಷ್ಟಿಕೋನವನ್ನು ಉಂಟುಮಾಡಬಲ್ಲ ಯಾವುದೇ ಅಜ್ಞಾತ ಮೂಲೆಯೂ ಬಾಕಿ ಇರುವುದಿಲ್ಲ ಅಥವಾ ಯಾವುದಾದರೂ ವಾಸ್ತವಿಕ ಸಂಗತಿಗಳನ್ನು ನಮಗೆ ಹೊಸದಾಗಿ ಬಹಿರಂಗಪಡಿಸಬಹುದಾದ ಉಳಿಕೆಯಾದ ವಿವರಗಳೂ ಇರಲಾರವು. ಇಂತಹ ಮಹಾನುಭಾವರ ಜೀವನ ಚರಿತ್ರೆಯನ್ನು ಪವಿತ್ರ ಖುರ್‌ಆನಿನ ಅಧ್ಯಯನಕ್ಕೆ ಮುನ್ನುಡಿ ರೂಪವಾಗಿ ಸಂಕ್ಷಿಪ್ತವಾಗಿ ಸಹ ಬರೆಯಲು ಸಾಧ್ಯವಾಗಲಾರದು. ಅವರ ಜೀವಿತದ ಕಡೆಗೆ ಒಂದು ಸೂಚನೆಯ ರೂಪದಲ್ಲಿ ಮಾತ್ರ ಇಲ್ಲಿ ಬರೆಯಲಾಗಿದೆ.



ನಾನು ಈ ಮೊದಲು ಬರೆದಂತೆ ದೈವಿಕ ಗ್ರಂಥಗಳು ಸರಿಯಾಗಿ ಜನರ ಮನಸ್ಸಿನಲ್ಲಿ ನೆಲೆಸಬೇಕಾದರೆ ಒಂದು ದೈವಿಕ ಗ್ರಂಥದ ಜೊತೆಯಲ್ಲಿ ಅದನ್ನು ಅನುಸರಣೆಯಲ್ಲಿ ತಂದ ಒಬ್ಬ ಮಾದರಿ ಮಹಾನುಭಾವ ಇರಬೇಕಾದುದು ಸಹ ಅತ್ಯಾವಶ್ಯಕವಾಗಿದೆ. ಆದರೆ ಎಲ್ಲದಕ್ಕಿಂತಲೂ ಶ್ರೇಷ್ಠ ಮಾದರಿ ಆಗಬಲ್ಲ ವ್ಯಕ್ತಿ ಗ್ರಂಥ ಅವತೀರ್ಣಗೊಂಡ ಪ್ರವಾದಿಯೇ ಆಗಿದ್ದಾರೆ. ಈ ಅಂಶ ಬಹಳ ಸೂಕ್ಷ್ಮವೂ ತಾತ್ವಿಕವೂ ಆಗಿದೆ. ಕೆಲವು ಧರ್ಮಗಳು ಈ ವಾಸ್ತವಿಕ ಸಂಗತಿಯನ್ನು ಮನವರಿಕೆ ಮಾಡಿಕೊಂಡಿಲ್ಲ. ಹಿಂದೂ ಧರ್ಮವು ವೇದಗಳನ್ನು ತನ್ನ ದೈವಿಕ ಗ್ರಂಥಗಳನ್ನಾಗಿ ಹೇಳುತ್ತಿದೆಯಾದರೂ ಆ ವೇದಗಳನ್ನು ತಂದ ಋಷಿಗಳ ಮತ್ತು ಮುನಿಗಳ ಚರಿತ್ರೆಯ ಬಗ್ಗೆ ಸಂಪೂರ್ಣವಾಗಿ ಮೌನಾವಲಂಬಿಯಾಗಿದೆ. ಹಿಂದೂ ಧರ್ಮದ ವಿದ್ವಾಂಸರು ಇದನ್ನು ತಿಳಿದುಕೊಳ್ಳುವ ಆವಶ್ಯಕತೆಯನ್ನು ಇಷ್ಟರವರೆಗೆ ಮನವರಿಕೆ ಮಾಡಿಕೊಂಡಿಲ್ಲ. ಇದೇ ರೀತಿ ಕ್ರೈಸ್ತ ಮತ್ತು ಯಹೂದಿ ವಿದ್ವಾಂಸರೂ ಪಾದ್ರಿಗಳೂ ಬಹಳ ನಿರ್ಭಯವಾಗಿ ಹೇಳುತ್ತಾರೆ: ಇಸ್ರಾಈಲ್ ಸಂತತಿಯಲ್ಲಿ ಇಂತಿಂತಹ ಪ್ರವಾದಿಗಳಲ್ಲಿ ಇಂತಿಂತಹ ನ್ಯೂನತೆಗಳಿದ್ದವು, ಈ ಪ್ರವಾದಿಯಲ್ಲಿ ಈ ನ್ಯೂನತೆ ಇತ್ತು, ಇತ್ಯಾದಿ.

ಯಾವ ವ್ಯಕ್ತಿಯನ್ನು ದೇವನು ತನ್ನ ಸಂದೇಶವಾಣಿ ನೀಡಲಿಕ್ಕೋಸ್ಕರ ಆಯ್ಕೆ ಮಾಡಿರುವನೋ ಅಂತಹವನನ್ನು ಆ ಸಂದೇಶವಾಣಿ ಸುಧಾರಣೆ ಮಾಡಿರದಿದ್ದಲ್ಲಿ ಅದು ಬೇರೊಬ್ಬನನ್ನು ಹೇಗೆ ತಾನೆ ಸುಧಾರಣೆ ಮಾಡಬಲ್ಲದು? ಎಂಬ ವಿಷಯವನ್ನು ಅವರು ಮನವರಿಕೆ ಮಾಡಿಕೊಂಡಿಲ್ಲ. ಆತನು ಸುಧಾರಣೆಗೊಳ್ಳಲು ಅನರ್ಹನಾಗಿದ್ದರೆ ದೇವನು ಅವನನ್ನು ಆಯ್ಕೆ ಮಾಡಿದುದಾದರೂ ಏಕೆ? ಬೇರೆ ಯಾರನ್ನಾದರೂ ದೇವನು ಏಕೆ ಆಯ್ಕೆ ಮಾಡಲಿಲ್ಲ? ಝುಬೂರ್ (ಬೈಬಲಿನ ಕೀರ್ತನೆಗಳು) ಗ್ರಂಥಕ್ಕಾಗಿ ದಾವೂದರನ್ನು (ಪ್ರವಾದಿ ದಾವೀದ) ಆಯ್ಕೆ ಮಾಡಲು ದೇವರು ಯಾರದಾದರೂ ಬಲವಂತಕ್ಕೆ ಒಳಗಾಗಿದ್ದನೆ? ಅವನು ಇಸ್ರಾಈಲ್ ಸಂತತಿಗಳಲ್ಲಿ ಬೇರೆ ಯಾರನ್ನಾದರೂ ಆಯ್ಕೆ ಮಾಡಬಹುದಾಗಿತ್ತಲ್ಲವೇ?

ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಎರಡು ಸಂಗತಿಗಳೂ ವಿವೇಕ ಶೂನ್ಯವಾಗಿವೆ: ದೇವನು ಯಾರಿಗೆ ತನ್ನ ಸಂದೇಶವಾಣಿಯನ್ನು ಅವತೀರ್ಣ ಗೊಳಿಸಿದನೋ ಆ ಸಂದೇಶವಾಣಿ ಆತನನ್ನು ಸುಧಾರಣೆ ಮಾಡಲಿಲ್ಲ ಎಂಬ ಯೋಚನೆ. ಹಾಗೆಯೇ ಸುಧಾರಣೆ ಮಾಡಲು ಅನರ್ಹನಾದ ಒಬ್ಬ ವ್ಯಕ್ತಿಯನ್ನು ದೇವನು ಆಯ್ಕೆ ಮಾಡಿರುವನೆಂದು ಯೋಚಿಸುವುದು ಇವೆರಡೂ ಬುದ್ಧಿಗೆ ವಿರುದ್ಧವಾದ ಸಂಗತಿಗಳಾಗಿವೆ.

ಆದರೆ ವಿವಿಧ ಧರ್ಮಗಳು ತಮ್ಮ ಧರ್ಮದ ಉಗಮದ ನಂತರ ದೀರ್ಘಕಾಲ ದಾಟಿ ಹೋದುದರಿಂದ ಅವುಗಳಲ್ಲಿ ಈ ರೀತಿಯ ತಪ್ಪು ಯೋಚನೆಗಳು ತಲೆದೋರಿವೆ ಅಥವಾ ಹೀಗೆಯೂ ಹೇಳಬಹುದು: ಮನುಷ್ಯನ ಬುದ್ಧಿ ಪೂರ್ಣವಾಗಿ ಬೆಳವಣಿಗೆಯನ್ನು ಪಡೆಯದೆ ಇದ್ದುದರಿಂದ ಪುರಾತನ ಕಾಲದಲ್ಲಿ ಈ ಸಂಗತಿಗಳ

ಮಹತ್ವವನ್ನು ಅವು ತಿಳಿದುಕೊಳ್ಳಲಿಲ್ಲ.

ಆದರೆ ಇಸ್ಲಾಮ್ ಧರ್ಮದಲ್ಲಿ ಈ ವಿಷಯದ ಮಹತ್ವವನ್ನು ಆರಂಭ ಕಾಲದಿಂದಲೇ ತಿಳಿಯಲಾಗಿತ್ತು. ಹಝ್ರತ್ ಪೈಗಂಬರರ(ಸ) ಪತ್ನಿ ಹಝ್ರತ್ ಆಯಿಶಾ (ರಝಿಯಲ್ಲಾಹು ಅನ್‌ಹಾ) 13–14 ವರ್ಷ ಪ್ರಾಯದಲ್ಲಿ ಹಝ್ರತ್ ಪೈಗಂಬರರನ್ನು(ಸ) ವಿವಾಹವಾಗಿದ್ದರು. ಅವರು ಅಂದಾಜು ಏಳು ವರ್ಷ ಹಝ್ರತ್ ಪೈಗಂಬರರ(ಸ) ಜೊತೆಗೆ ಇದ್ದರು. ಹಝ್ರತ್ ಪೈಗಂಬರರು(ಸ) ಮೃತರಾದಾಗ ಅವರ ಪ್ರಾಯ ಇಪ್ಪತ್ತೊಂದು ವರ್ಷಗಳಾಗಿದ್ದವು. ಅವರು ಓದು ಬರಹ ಕಲಿತವರೂ ಆಗಿರಲಿಲ್ಲ. ಆದರೆ ಅವರಿಗೆ ಈ ತತ್ವ ಸ್ಪಷ್ಟವಾಗಿತ್ತು. ಒಮ್ಮೆ ಒಬ್ಬರು ಹಝ್ರತ್ ಆಯಿಶಾರೊಡನೆ ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳ ಬಗ್ಗೆ ಕೇಳಿದಾಗ ಅವರು ಹೇಳಿದರು: **"ಕಾನ ಖುಲ್‌ಖುಹು ಕುಲ್ಲುಹುಲ್ ಖುರ್‌ಆನ್"**[1] ಅವರ ಸ್ವಭಾವ ಗುಣಗಳು ಪೂರ್ಣವಾಗಿ ಖುರ್‌ಆನ್ ಪ್ರಕಾರ ಆಗಿತ್ತು.

ಎಂದರೆ ಹಝ್ರತ್ ಪೈಗಂಬರರು(ಸ) ಯಾವ ವಿಷಯವನ್ನು ಹೇಳುತ್ತಿದ್ದರೋ ಅವುಗಳ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಆಜ್ಞೆಗಳಿವೆ. ಪವಿತ್ರ ಖುರ್‌ಆನಿನ ಉಪದೇಶಗಳು ಅವರ ನಡವಳಿಕೆಗಿಂತ ಭಿನ್ನವಾಗಿರಲಿಲ್ಲ. ಪವಿತ್ರ ಖುರ್‌ಆನ್ ವಿವರಿಸಿದ ಪ್ರತಿಯೊಂದು ಉನ್ನತ ಸ್ವಭಾವ ಗುಣವನ್ನು ಅವರು ಕೃತಿಗಿಳಿಸಿದ್ದರು. ಅವರು ಮಾಡುತ್ತಿದ್ದ ಪ್ರತಿಯೊಂದು ಕೆಲಸದ ಕುರಿತು ಪವಿತ್ರ ಖುರ್‌ಆನ್‌ನಲ್ಲಿ ಉಪದೇಶಗಳಿವೆ.

ಇದು ಎಷ್ಟು ಸೂಕ್ಷ್ಮವಾದ ವಿವರಣೆಯಾಗಿದೆ. ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳು ಎಷ್ಟು ವಿಶಾಲವೂ ಶ್ರೇಷ್ಠವೂ ಆಗಿದ್ದುವೆಂದರೆ ಅವು ಒಬ್ಬ ಅವಿದ್ಯಾವಂತೆಯಾದ ಯುವತಿಯ ಗಮನವನ್ನು ಸಹ ಅಷ್ಟರಮಟ್ಟಿಗೆ ಸೆಳೆಯಲು ಸಮರ್ಥವಾದುವು. ಹಿಂದೂ, ಯಹೂದಿ ಮತ್ತು ಕ್ರೈಸ್ತ ದಾರ್ಶನಿಕರು ಯಾವ ಸಂಗತಿಯ ವಾಸ್ತವಿಕಾಂಶವನ್ನು ಮನವರಿಕೆ ಮಾಡಲು ಸಮರ್ಥರಾಗಲಿಲ್ಲವೋ ಆ ಸಂಗತಿಯ ವಾಸ್ತವಿಕತೆಯೇನೆಂಬುದನ್ನು ಹಝ್ರತ್ ಆಯಿಶಾ(ರ) ಮನವರಿಕೆ ಮಾಡಲು ಸಮರ್ಥರಾದರು ಮತ್ತು ಒಂದು ಚಿಕ್ಕ ವಾಕ್ಯದ ಮೂಲಕ ಈ ಸೂಕ್ಷ್ಮ ತತ್ವವನ್ನು ವಿವರಿಸಿದರು:

ಒಬ್ಬ ಸತ್ಯನಿಷ್ಠನೂ ನಿಷ್ಕಳಂಕನೂ ಆಗಿರುವ ವ್ಯಕ್ತಿ ಲೋಕಕ್ಕೆ ಬಂದು ಉಪದೇಶವನ್ನು ನೀಡಿ ಅದರ ಪ್ರಕಾರ ತಾನು ನಡೆಯದಿರಲು ಸಾಧ್ಯವೇ? ಅಥವಾ ಉತ್ತಮ ರೀತಿಯಲ್ಲಿ ಕಾರ್ಯಪ್ರವೃತ್ತನಾಗಿ ಅದನ್ನು ಲೋಕದಿಂದ ಅಡಗಿಸಿಡಲು ಸಾಧ್ಯವೇ? ಆದುದರಿಂದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಭಾವ ಗುಣಗಳನ್ನು ಅರಿತುಕೊಳ್ಳಲು ಯಾವುದೇ ಚರಿತ್ರೆಯ ಅಧ್ಯಯನದ ಅವಶ್ಯಕತೆ ಇರುವುದಿಲ್ಲ. ಹಝ್ರತ್ ಪೈಗಂಬರರು(ಸ) ಸತ್ಯಸಂಧರೂ ನಿಷ್ಕಪಟಿಯೂ ಆಗಿದ್ದರು.

1. ಬುಖಾರಿ ಮತ್ತು ಅಬೂ ದಾವೂದ್: ಬಾಬ್ ಫೀ ಸಲಾತಿಲ್ಲೈಲಿ.



ಅವರು ನುಡಿದಂತೆ ನಡೆಯುತ್ತಿದ್ದರು. ಅವರು ಮಾಡುತ್ತಾ ಇದ್ದುದನ್ನೇ ಹೇಳುತ್ತಾ ಇದ್ದರು. ಅವರನ್ನು ನೋಡಿ ನಾವು ಪವಿತ್ರ ಖುರ್‌ಆನನ್ನು ಅರಿತುಕೊಂಡಿರುವೆವು. ಆದುದರಿಂದ ಅವರ ನಂತರ ಬಂದಿರುವ ನೀವು ಪವಿತ್ರ ಖುರ್‌ಆನನ್ನು ಓದಿರಿ ಮತ್ತು ಹಝ್ರತ್ ಪೈಗಂಬರರನ್ನು(ಸ) ಅರಿತುಕೊಳ್ಳಿರಿ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್.**

# ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿ ಅರಬ್ ರಾಜ್ಯದ ಸ್ಥಿತಿ

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯಾವ ಕಾಲದಲ್ಲಿ ಜನಿಸಿದರೋ ಆ ಕಾಲದ ಪರಿಸ್ಥಿತಿಯನ್ನು ಸಹ ಅವರ ಜೀವಿತದ ಒಂದು ಭಾಗವನ್ನಾಗಿ ಗಣಿಸಬೇಕಾಗಿದೆ. ಆ ಹಿನ್ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹಝ್ರತ್‌ಪೈಗಂಬರರ(ಸ) ಜೀವಿತದ ರೀತಿಯ ಮಹತ್ವವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಸೌರಮಾನ ಗಣನೆಯ ಪ್ರಕಾರ ಕ್ರಿಸ್ತಶಕ 570ರ ಆಗಸ್ಟ್ ತಿಂಗಳಲ್ಲಿ ಮಕ್ಕ ನಗರದಲ್ಲಿ ಅವರ ಜನನವಾಯಿತು. ಅವರಿಗೆ ಮುಹಮ್ಮದ್ ಎಂದು ಹೆಸರಿಡಲಾಯಿತು. "ಸ್ತುತಿಸಲ್ಪಟ್ಟವ" ಎಂದು ಅದರ ಅರ್ಥವಾಗಿದೆ. ಅವರ ಜನನದ ಕಾಲದಲ್ಲಿ ಕೆಲವು ಜನರನ್ನು ಹೊರತುಪಡಿಸಿ ಅರಬ್ ರಾಜ್ಯದ ನಿವಾಸಿಗಳೆಲ್ಲರೂ ಬಹುದೈವಾರಾಧಕರಾಗಿದ್ದರು. ಅರಬಿಗಳು ತಾವು ಪ್ರವಾದಿ ಹಝ್ರತ್ ಇಬ್ರಾಹೀಮರ(ಅ) ವಂಶಕ್ಕೆ ಸೇರಿದವರೆಂದು ಹೇಳುತ್ತಿದ್ದರು. ಹಝ್ರತ್ ಇಬ್ರಾಹೀಮ್(ಅ) ಬಹುದೈವಾರಾಧಕರಾ ಗಿರಲಿಲ್ಲವೆಂದೂ ಅವರು ಅಂಗೀಕರಿಸುತ್ತಿದ್ದರು. ಆದರೆ ಅರಬಿಗಳು ತಮ್ಮ ಬಹು ದೇವಾರಾಧನೆಯನ್ನು ಹೀಗೆ ಸಮರ್ಥಿಸಿಕೊಳ್ಳುತ್ತಿದ್ದರು: ಕೆಲವು ಜನರು ಆಧ್ಯಾತ್ಮಿಕವಾಗಿ ದೇವನಿಗೆ ಎಷ್ಟು ಸಮೀಪಸ್ಥರಾಗಿರುವರೆಂದರೆ ಅವರ ಶಿಫಾರಸುಗಳು ದೇವನ ಸಾನ್ನಿಧ್ಯದಲ್ಲಿ ನಿಶ್ಚಯವಾಗಿಯೂ ಅಂಗೀಕರಿಸಲ್ಪಡುತ್ತವೆ. ದೇವನು ಮಹೋನ್ನತ ಸ್ಥಾನದಲ್ಲಿರುವ ಕಾರಣದಿಂದ ಅವನನ್ನು ಪ್ರತಿಯೊಬ್ಬ ಮನುಷ್ಯನು ತಲುಪಲಾರನು. ಪರಿಪೂರ್ಣರಾದ ಮನುಷ್ಯರೇ ಅವನ ಸಮೀಪಕ್ಕೆ ತಲುಪಬಲ್ಲರು. ಆದುದರಿಂದ ಸಾಮಾನ್ಯ ಮನುಷ್ಯನು ಯಾವುದಾದರೊಂದು ಮಾಧ್ಯಮವನ್ನು ಅವಲಂಬಿಸಬೇಕಾಗಿದೆ. ಆ ಮಾಧ್ಯಮದ ಮೂಲಕ ದೇವನ ತೃಪ್ತಿಯನ್ನೂ ಸಹಾಯವನ್ನೂ ಗಳಿಸಬೇಕಾಗಿದೆ.

ಅರಬಿಗಳು ಹಝ್ರತ್ ಇಬ್ರಾಹೀಮ್‌ರನ್ನು(ಅ) ಏಕದೇವ ವಿಶ್ವಾಸಿ ಎಂದು ಒಪ್ಪಿಕೊಂಡಿದ್ದರೂ ಅವರು ಮೇಲಿನ ರೀತಿಯ ವಿಚಿತ್ರ ನಂಬಿಕೆಗಳ ಮೂಲಕ ತಮ್ಮ ಬಹು ದೇವಾರಾಧನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಹಝ್ರತ್ ಇಬ್ರಾಹೀಮ್(ಅ) ಬಹಳ ಪರಿಶುದ್ಧರಾಗಿದ್ದರು. ಅವರು ದೇವನನ್ನು ನೇರವಾಗಿ ತಲುಪಬಲ್ಲವರಾಗಿದ್ದರು ಎಂದು ಅವರು ಹೇಳುತ್ತಿದ್ದರು. ಆದರೆ ಮಕ್ಕದ ಜನರು ಅವರ ಸ್ಥಾನ ಪಡೆದವರಾಗಿರಲಿಲ್ಲ. ಆದುದರಿಂದ ಅವರು ಬೇರೆ ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳನ್ನು ದೇವನನ್ನು ತಲುಪುವ ಮಾಧ್ಯಮವನ್ನಾಗಿ ಮಾಡಿಕೊಳ್ಳುವುದು ಅಗತ್ಯವಾಗಿತ್ತು. ತಮ್ಮ ಉದ್ದೇಶವನ್ನು ಸಫಲೀಕರಿಸಲು ಅವರು ಆ ವ್ಯಕ್ತಿಗಳ ವಿಗ್ರಹಗಳನ್ನು ಪೂಜಿಸುತ್ತಿದ್ದರು. ಈ ರೀತಿಯಲ್ಲಿ ಅವರು ತಮ್ಮ ಭಾವನೆಗಳ ಪ್ರಕಾರ ಆ ಮಧ್ಯವರ್ತಿಗಳನ್ನು ಸಂತೋಷಪಡಿಸಿ ಅವರನ್ನು ದೇವನ ಆಸ್ಥಾನದಲ್ಲಿ ತಮ್ಮ ಶಿಫಾರಸುಗಾರರನ್ನಾಗಿ ಮಾಡುತ್ತಿದ್ದರು. ಅವರ ನಂಬಿಕೆಗಳ ಲೋಪದೋಷಗಳ ಕುರಿತು ಮತ್ತು ಅವುಗಳ ಅಸಂಬದ್ಧತೆಯ ಕುರಿತು ಅವರು ಎಂದೂ ಚಿಂತಿಸುತ್ತಲೇ



ಇರಲಿಲ್ಲ. ಏಕದೇವ ವಿಶ್ವಾಸವನ್ನು ಬೋಧಿಸುವ ಯಾವುದೇ ಅಧ್ಯಾಪಕ ಅವರಿಗೆ ಲಭಿಸಿರಲಿಲ್ಲ.

ಒಂದು ಸಮುದಾಯದಲ್ಲಿ ಬಹುದೇವಾರಾಧನೆ ಪ್ರಾರಂಭವಾದರೆ ಅದು ಹೆಚ್ಚು ಹೆಚ್ಚಾಗುತ್ತಲೇ ಹೋಗುತ್ತದೆ. ಆರಾಧಿಸಲ್ಪಡುವ ದೈವ ಒಂದರಿಂದ ಎರಡಾಗುತ್ತದೆ. ಎರಡರಿಂದ ಮೂರು. ಈಗ ಮುಸ್ಲಿಮರ ಪವಿತ್ರ ಮಸ್‌ಜಿದಾಗಿರುವ ಕಅ್‌ಬ ಹಝ್ರತ್ ಇಬ್ರಾಹೀಮ್(ಅ) ಮತ್ತು ಅವರ ಪುತ್ರ ಹಝ್ರತ್ ಇಸ್ಮಾಈಲ್(ಅ) ಏಕದೇವಾರಾಧನೆಗಾಗಿ ನಿರ್ಮಿಸಿದ ಆರಾಧನಾಲಯವಾಗಿತ್ತು. ಹಝ್ರತ್ ಪೈಗಂಬರರ(ಸ) ಜನನ ಕಾಲದಲ್ಲಿ ಈ ಆರಾಧನಾಲಯದಲ್ಲಿ ಚರಿತ್ರೆಗಾರರ ಹೇಳಿಕೆ ಪ್ರಕಾರ ಮುನ್ನೂರ ಅರುವತ್ತು ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿತ್ತು.[2] ಎಂದರೆ, ಚಾಂದ್ರಮಾನ ಗಣನೆಯ ತಿಂಗಳ ಲೆಕ್ಕಾಚಾರದಂತೆ ವರ್ಷದ ಪ್ರತಿ ತಿಂಗಳು ಪ್ರತಿದಿನ ಒಂದು ಪ್ರತ್ಯೇಕ ವಿಗ್ರಹವನ್ನು ಆರಾಧಿಸಲಾಗುತ್ತಿತ್ತು. ಈ ವಿಗ್ರಹಗಳಲ್ಲದೆ ಮಕ್ಕ ನಗರದ ಸುತ್ತು ಮುತ್ತಲಿನ ಪ್ರದೇಶಗಳಲ್ಲಿದ್ದ ದೊಡ್ಡ ಪಟ್ಟಣಗಳಲ್ಲಿ ಮತ್ತು ದೊಡ್ಡ ದೊಡ್ಡ ಗೋತ್ರಗಳ ಕೇಂದ್ರಸ್ಥಳಗಳಲ್ಲಿ ಬೇರೆ ವಿಗ್ರಹಗಳೂ ಆರಾಧಿಸಲ್ಪಡುತ್ತಿದ್ದುವು.ಈ ರೀತಿ ಅರಬ್ ದೇಶದ ಪ್ರತಿಯೊಂದು ಭಾಗವು ಬಹುದೇವಾರಾಧನೆಯಲ್ಲಿ ಮುಳುಗಿತ್ತು. ಆದರೆ ಅರಬ್ ಜನತೆಗೆ ತಮ್ಮ ಭಾಷೆಯ ಸಂಸ್ಕಾರ ಮತ್ತು ಪರಿಷ್ಕಾರಗಳ ಬಗ್ಗೆ ಅತೀವ ಶ್ರದ್ಧೆ ಇತ್ತು. ಅವರು ತಮ್ಮ ಭಾಷೆಯನ್ನು ಅತ್ಯಧಿಕ ಜ್ಞಾನವರ್ಧಕವಾಗಿ ಮಾಡಿಕೊಳ್ಳಲು ಪ್ರಯತ್ನಶೀಲರಾಗಿದ್ದರು. ಆದರೆ ಅವರ ದೃಷ್ಟಿಯಲ್ಲಿ ಜ್ಞಾನಾರ್ಜನೆಗೆ ಇದರ ಹೊರತು ಬೇರೆ ಯಾವುದೇ ಅರ್ಥವಿರಲಿಲ್ಲ. ಅವರು ಚರಿತ್ರೆ, ಭೂಗೋಳಶಾಸ್ತ್ರ, ಗಣಿತ ಮೊದಲಾದವುಗಳಲ್ಲಿ ಒಂದು ವಿಷಯದ ಬಗ್ಗೆಯೂ ಜ್ಞಾನವನ್ನು ಹೊಂದಿರಲಿಲ್ಲ. ಆದರೆ ಅವರು ಮರುಭೂಮಿಯ ನಿವಾಸಿಗಳಾದುದರಿಂದ ಮತ್ತು ಮರುಭೂಮಿಗಳಲ್ಲಿ ಸಂಚರಿಸುತ್ತಾ ಇದ್ದುದರಿಂದ ಅವರು ಖಗೋಳ ಜ್ಞಾನದಲ್ಲಿ ಪರಿಣಿತರಾಗಿದ್ದರು. ಇಡೀ ಅರಬ್ ದೇಶದಲ್ಲಿ ಒಂದೇ ಒಂದು ಶಾಲೆ ಸಹ ಇರಲಿಲ್ಲ. ಮಕ್ಕನಗರದಲ್ಲಿ ಬೆರಳೆಣಿಕೆಯ ಕೆಲವು ಜನರು ಓದು ಬರಹ ಬಲ್ಲವರಾಗಿದ್ದರೆಂದು ಹೇಳಲಾಗುತ್ತಿತ್ತು.

ಅರಬ್ ಜನತೆ ವಿಚಿತ್ರವಾದ ಸ್ವಭಾವ ವೈರುದ್ಧ್ಯಗಳನ್ನು ಹೊಂದಿದವರಾಗಿದ್ದರು. ಅವರು ಕೆಲವು ಅಪಾಯಕಾರಿ ಪಾಪಕೃತ್ಯಗಳನ್ನು ಮಾಡುತ್ತಿದ್ದರೂ ಅವರಲ್ಲಿ ಕೆಲವು ಸದ್ಗುಣಗಳೂ ಕಂಡುಬರುತ್ತಿದ್ದವು. ಅವುಗಳು ಅವರ ಜನಾಂಗದ ಸ್ಥಾನವನ್ನು ಬಹಳ ಮೇಲಕ್ಕೆತ್ತುತ್ತಿದ್ದುವು.

## ಮದ್ಯಪಾನ ಮತ್ತು ಜುಗಾರಿ ಆಟ

ಅರಬ್ ಜನತೆ ನಿತ್ಯ ಮದ್ಯಪಾನ ಮಾಡುವವರಾಗಿದ್ದರು. ಮದ್ಯದ ಅಮಲಿನಲ್ಲಿ ಮೈಮರೆತು ಬೀಳುವುದು, ಅರ್ಥಶೂನ್ಯವಾಗಿ ಮಾತನಾಡುವುದು ಅವರ ದೃಷ್ಟಿಯಲ್ಲಿ

2. ಬುಖಾರಿ, ಕಿತಾಬುಲ್ ಮಗಾಝಿ ಬಾಬ್ ಫತಹ್ ಮಕ್ಕ ನೋಡಿರಿ. ಖುರ್‌ಆನ್ ಸಂಪುಟ 2 ಪುಟ 234 ಸಹ ನೋಡಿರಿ.

ಯಾವುದೇ ದೋಷಕೃತ್ಯವಾಗಿರಲಿಲ್ಲ; ಅದು ಉತ್ತಮ ಕೆಲಸವಾಗಿತ್ತು. ಒಬ್ಬ ಮಾನ್ಯ ವ್ಯಕ್ತಿಯ ಮಾನ್ಯತೆಯ ಗುರುತುಗಳಲ್ಲಿ ಒಂದು, ತನ್ನ ಸ್ನೇಹಿತರು ಮತ್ತು ನೆರೆಹೊರೆಯವರಿಗೆ ಚೆನ್ನಾಗಿ ಮದ್ಯಪಾನ ಮಾಡಿಸುವುದಾಗಿತ್ತು. ದಿನನಿತ್ಯ ಐದು ಹೊತ್ತು ಮದ್ಯಪಾನ ಕೂಟ ಏರ್ಪಡಿಸುವುದು ಧನಿಕರೆಂದು ಕರೆಸಿಕೊಳ್ಳಲು ಅಗತ್ಯವಾಗಿತ್ತು. ಜುಗಾರಿ ಅವರ ರಾಷ್ಟ್ರೀಯ ಆಟವಾಗಿತ್ತು. ಅವರು ಅದನ್ನೊಂದು ಕಲೆಯನ್ನಾಗಿ ಮಾಡಿಕೊಂಡಿದ್ದರು. ಅವರು ಜುಗಾರಿ ಆಡುತ್ತಿದ್ದುದು ತಮ್ಮ ಸಂಪತ್ತನ್ನು ವರ್ಧಿಸಲಿಕ್ಕಾಗಿರಲಿಲ್ಲ. ಅವರು ಜುಗಾರಿ ಆಟವನ್ನು ತಮ್ಮ ಔದಾರ್ಯದ ಮತ್ತು ತಮ್ಮ ಹೆಗ್ಗಳಿಕೆಯ ಸಾಧನವನ್ನಾಗಿ ಮಾಡಿದ್ದರು. ಉದಾಹರಣೆಗೆ, ಜುಗಾರಿ ಆಟದಲ್ಲಿ ಜಯಿಸಿದವರು ತಾವು ಗಳಿಸಿದ ಸಂಪತ್ತಿನಿಂದ ತಮ್ಮ ಸ್ನೇಹಿತರಿಗೂ ತಮ್ಮ ಗೋತ್ರದ ಜನರಿಗೂ ಔತಣವೇರ್ಪಡಿಸಲಾಗುವುದೆಂದು ಅವರು ಪರಸ್ಪರ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಅರಬ್ ಜನತೆ ಜುಗಾರಿ ಆಟವನ್ನು ಯುದ್ಧಕಾಲದಲ್ಲಿ ಧನವನ್ನು ಸಂಗ್ರಹಿಸುವ ಮಾರ್ಗವನ್ನಾಗಿ ಮಾಡಿದ್ದರು. ಯುದ್ಧಕಾಲದಲ್ಲಿ ಲಾಟರಿ ನಡೆಸುವುದು ಇಂದಿನ ಕಾಲದಲ್ಲಿಯೂ ಜಾರಿಯಲ್ಲಿರುವ ಪದ್ಧತಿಯಾಗಿದೆ. ಇಂದಿನ ಲಾಟರಿ ಪದ್ಧತಿಯನ್ನು ಮೊತ್ತಮೊದಲು ಆವಿಷ್ಕಾರ ಮಾಡಿದವರು ಅರಬ್ ಜನತೆ ಎಂಬ ಸಂಗತಿಯನ್ನು ಯುರೋಪ್ ಮತ್ತು ಅಮೇರಿಕದಲ್ಲಿ ಲಾಟರಿ ನಡೆಸುವವರು ತಿಳಿದುಕೊಳ್ಳಬೇಕು.

ಯುದ್ಧ ನಡೆಯುವಾಗ ಅರಬಿ ಗೋತ್ರಗಳಿಗೆ ಸೇರಿದವರು ಪರಸ್ಪರ ಪಂದ್ಯ ಕಟ್ಟುತ್ತಿದ್ದರು. ಪಂದ್ಯದಲ್ಲಿ ಗೆಲ್ಲುವವರು ಯುದ್ಧದ ಖರ್ಚಿನ ಬಹುತೇಕ ಭಾಗವನ್ನು ವಹಿಸಿಕೊಳ್ಳುತ್ತಿದ್ದರು. ಒಟ್ಟಾರೆ ಹೇಳುವುದಾದರೆ, ಲೌಕಿಕವಾದ ಇನ್ನಿತರ ಸೌಲಭ್ಯಗಳಿಂದ ಮತ್ತು ಅನುಕೂಲತೆಗಳಿಂದ ಅವರು ವಂಚಿತರಾದುದಕ್ಕೆ ಮದ್ಯಪಾನ ಮತ್ತು ಜುಗಾರಿ ಆಟದಿಂದ ಅದಕ್ಕೆ ಪ್ರತೀಕಾರ ಮಾಡಿಕೊಂಡಿದ್ದರು.

## ವ್ಯಾಪಾರ

ಅರಬ್ ದೇಶದ ನಿವಾಸಿಗಳು ವ್ಯಾಪಾರದಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಅವರ ವ್ಯಾಪಾರದ ಸಂಚಾರಿ ಸಂಘಗಳು ದೂರ ದೂರ ಪ್ರದೇಶಗಳಿಗೆ ಹೋಗುತ್ತಿದ್ದವು. ಅವರು ಅಬಿಸೀನಿಯಾ ದೇಶದೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು. ಅವರು ಸಿರಿಯಾ ಮತ್ತು ಪಾಲೆಸ್ತೀನ್‌ದೊಂದಿಗೂ ವ್ಯಾಪಾರ ಮಾಡುತ್ತಿದ್ದರು. ಭಾರತದೊಂದಿಗೂ ಅವರು ವ್ಯಾಪಾರ ಸಂಬಂಧವನ್ನು ಸ್ಥಾಪಿಸಿದ್ದರು. ಭಾರತದಲ್ಲಿ ತಯಾರಿಸಲಾದ ಖಡ್ಗಗಳನ್ನು ಅರಬ್ ದೇಶದ ಧನಿಕರು ಉತ್ತಮವೆಂದು ಗ್ರಹಿಸುತ್ತಿದ್ದರು. ಬಟ್ಟೆಬರೆಗಳು ಯಮನ್ ಮತ್ತು ಸಿರಿಯಾದಿಂದ ಬರುತ್ತಿದ್ದವು. ಈ ವ್ಯಾಪಾರ ವ್ಯವಹಾರಗಳನ್ನು ಅರಬ್ ದೇಶದ ನಗರಗಳ ನಿವಾಸಿಗಳು ಮಾಡುತ್ತಿದ್ದರು. ಯಮನ್ ಮತ್ತು ಉತ್ತರದ ಕೆಲವು ಪ್ರದೇಶಗಳ ಹೊರತು ಅರಬ್ ದೇಶದ ಉಳಿದ ಪ್ರದೇಶಗಳ ಜನರು ಗ್ರಾಮೀಣ ಜೀವನವನ್ನು ಅವಲಂಬಿಸಿದ್ದರು. ಈ ಪ್ರದೇಶಗಳಲ್ಲಿ ನಗರಗಳಾಗಲೀ ಚಿಕ್ಕ ಪಟ್ಟಣಗಳಾಗಲೀ ಇರಲಿಲ್ಲ. ಅರಬ್



ದೇಶದ ವಿವಿಧ ಗೋತ್ರಗಳು ದೇಶದ ವಿವಿಧ ಪ್ರದೇಶಗಳನ್ನು ತಮ್ಮೊಳಗೆ ಹಂಚಿಕೊಂಡಿದ್ದವು. ಈ ಪ್ರದೇಶಗಳಲ್ಲಿ ಗೋತ್ರಗಳು ಅಲೆಮಾರಿ ಜೀವನ ನಡೆಸುತ್ತಿದ್ದವು. ಎಲ್ಲಿ ನೀರಿನ ಆಸರೆ ಮುಗಿಯುವುದೋ ಅಲ್ಲಿಂದ ಅವರು ಹೊರಡುತ್ತಿದ್ದರು ಮತ್ತು ಎಲ್ಲಿ ನೀರು ಸಿಗುವುದೋ ಅಲ್ಲಿ ಅವರು ಡೇರೆ ಹಾಕುತ್ತಿದ್ದರು. ಕುರಿ, ಆಡು, ಒಂಟೆ ಅವರ ಸಂಪತ್ತಾಗಿತ್ತು. ಅವುಗಳ ಉಣ್ಣೆಗಳಿಂದಲೂ ರೋಮಗಳಿಂದಲೂ ಅವರು ಬಟ್ಟೆಗಳನ್ನು ನೇಯುತ್ತಿದ್ದರು. ಅವುಗಳ ಚರ್ಮದಿಂದ ಅವರು ಡೇರೆಗಳನ್ನು ತಯಾರು ಮಾಡುತ್ತಿದ್ದರು. ಸ್ವಂತಕ್ಕೆ ಬಳಸಿ ಉಳಿದವುಗಳನ್ನು ಅವರು ಮಾರುಕಟ್ಟೆಗಳಲ್ಲಿ ಮಾರಾಟಮಾಡುತ್ತಿದ್ದರು.

## ಅರಬ್ ಜನತೆಯ ಇನ್ನಿತರ ಸ್ಥಿತಿಗಳು, ಸ್ವಭಾವಗುಣಗಳು ಮತ್ತು ಹವ್ಯಾಸಗಳು

ಚಿನ್ನ ಮತ್ತು ಬೆಳ್ಳಿ ಅವರಿಗೆ ತಿಳಿದಿರದ ಲೋಹಗಳಾಗಿರಲಿಲ್ಲ. ಆದರೆ ಚಿನ್ನ, ಬೆಳ್ಳಿ ಅವರಿಗೆ ಅತ್ಯಲ್ಪವಾಗಿ ಲಭ್ಯವಾಗಿದ್ದವು. ಸಾಮಾನ್ಯ ಜನರ ಮತ್ತು ಬಡವರ ಆಭರಣಗಳು ಕವಡೆಗಳಿಂದಲೂ ಸುವಾಸನೆಯ ಸಾಮಗ್ರಿಗಳಿಂದಲೂ ಮಾಡಲ್ಪಡುತ್ತಿದ್ದವು. ಲವಂಗದಿಂದಲೂ ಖರಬೂಜ ಮತ್ತು ಸೌತೆಕಾಯಿ ಮೊದಲಾದವುಗಳ ಬೀಜಗಳಿಂದಲೂ ಇದೇ ರೀತಿಯ ಬೇರೆ ವಸ್ತುಗಳಿಂದಲೂ ಅವರು ಹಾರಗಳನ್ನು ತಯಾರಿಸುತ್ತಿದ್ದರು. ಅವರ ಸ್ತ್ರೀಯರು ಈ ಹಾರಗಳನ್ನು ಧರಿಸಿಕೊಂಡು ಆಭರಣ ಭೂಷಿತರಾಗುತ್ತಿದ್ದರು. ಅಧಾರ್ಮಿಕ ವರ್ತನೆ ಮತ್ತು ಅಶ್ಲೀಲತೆ ಅವರಲ್ಲಿ ಅತ್ಯಧಿಕವಾಗಿದ್ದವು. ಕಳ್ಳತನದ ಸ್ವಭಾವ ಅವರಲ್ಲಿ ಕಡಿಮೆ ಇದ್ದಿತು. ಆದರೆ ದರೋಡೆಯಲ್ಲಿ ಅವರು ಮಿತಿಮೀರುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ಸುಲಿಗೆ ಮಾಡುವುದು ತಮ್ಮ ಜನಾಂಗದ ಹಕ್ಕೆಂದು ಅವರು ಗ್ರಹಿಸುತ್ತಿದ್ದರು. ಆದರೆ ವಚನ ಪಾಲನೆಯ ಬಗ್ಗೆ ಅವರಿಗಿದ್ದ ನಿಷ್ಠೆ ಬೇರೆ ಯಾವುದೇ ಜನಾಂಗದಲ್ಲಿರಲಿಲ್ಲ. ಯಾವನಾದರೂ ವ್ಯಕ್ತಿ ಶಕ್ತಿಶಾಲಿಯಾದ ಇನ್ನೊಬ್ಬ ವ್ಯಕ್ತಿ ಅಥವಾ ಗೋತ್ರದ ಬಳಿಗೆ ಬಂದು, "ನಾನು ನಿಮ್ಮ ಸಂರಕ್ಷಣೆಯನ್ನು ಬಯಸುತ್ತೇನೆ" ಎಂದು ಹೇಳಿದರೆ ಆ ಶಕ್ತಿಶಾಲಿ ವ್ಯಕ್ತಿ ಅಥವಾ ಗೋತ್ರ ಆ ಅಭಯಾರ್ಥಿಗೆ ಆಶ್ರಯ ನೀಡುವುದು ಅವರ ಸಂಪ್ರದಾಯ ಪ್ರಕಾರ ಕಡ್ಡಾಯವಾಗಿತ್ತು. ಅಭಯವನ್ನು ಯಾಚಿಸಿದವನಿಗೆ ವ್ಯಕ್ತಿ ಅಥವಾ ಗೋತ್ರ ಆಶ್ರಯವನ್ನು ನೀಡದಿದ್ದರೆ ಅವರು ಅರಬ್ ದೇಶದಲ್ಲೆಲ್ಲಾ ನಿಂದಿಸಲ್ಪಡುತ್ತಿದ್ದರು. ಕವಿಗಳಿಗೆ ಅವರ ಮಧ್ಯದಲ್ಲಿ ಶಕ್ತಿ ಮತ್ತು ಪ್ರಭಾವಗಳಿದ್ದವು. ಕವಿಗಳನ್ನು ರಾಷ್ಟ್ರೀಯ ನಾಯಕರೆಂಬಂತೆ ಗಣಿಸಲಾಗುತ್ತಿತ್ತು. ರಾಷ್ಟ್ರೀಯ ನಾಯಕನಾಗಲು ಭಾಷೆಯಲ್ಲಿ ಪ್ರಭುತ್ವ ಹೊಂದುವುದು ಮತ್ತು ಸಾಧ್ಯವಿದ್ದರೆ ಕವಿಯಾಗುವುದು ಅತ್ಯಾವಶ್ಯಕವಾಗಿತ್ತು. ಅತಿಥಿ ಸತ್ಕಾರವನ್ನು ಅವರು ಸಂಭ್ರಮದಿಂದ ಮಾಡುತ್ತಿದ್ದರು. ಕಾಡು ಗುಡ್ಡಗಳಲ್ಲಿ ದಾರಿ ತಪ್ಪಿದ ಪ್ರಯಾಣಿಕನು ಯಾವುದಾದರೂ ಗೋತ್ರದ ಗುಂಪಿನ ಸಮೀಪಕ್ಕೆ ಬಂದು, "ನಾನು ನಿಮ್ಮ ಅತಿಥಿಯಾಗಿ ಆಗಮಿಸಿರುವೆನು" ಎಂದು ಹೇಳಿದರೆ ಬೇರೆ ಏನನ್ನೂ ಯೋಚಿಸದೆ ತಕ್ಷಣ ಕುರಿ,

ಆಡು, ಅಥವಾ ಒಂಟೆಯನ್ನು ಔತಣ ನೀಡಲು ವಧಿಸುತ್ತಿದ್ದರು. ಅವರಿಗೆ ಅತಿಥಿಯ ಸ್ಥಾನಮಾನದ ಬಗ್ಗೆ ಯಾವುದೇ ಆಸಕ್ತಿ ಇರಲಿಲ್ಲ. ಅತಿಥಿಯ ಆಗಮನವೇ ಅವರ ದೃಷ್ಟಿಯಲ್ಲಿ ಅವರ ಗೋತ್ರದ ಗೌರವಾದರಗಳನ್ನು ವರ್ಧಿಸುವುದಾಗಿತ್ತು. ಅತಿಥಿಗಳನ್ನು ಗೌರವಿಸಿ ತಮ್ಮ ಗೌರವವನ್ನು ವೃದ್ಧಿಗೊಳಿಸುವುದು ಪ್ರತಿಯೊಂದು ಗೋತ್ರದ ಕರ್ತವ್ಯವಾಗಿತ್ತು.

ಅರಬ್ ಜನತೆಯ ಮಹಿಳೆಯರಿಗೆ ಯಾವುದೇ ಹಕ್ಕುಗಳು ಲಭಿಸಿರಲಿಲ್ಲ. ಕೆಲವು ಗೋತ್ರಗಳಲ್ಲಿ ತಂದೆ ತನ್ನ ಹೆಣ್ಣುಶಿಶುವನ್ನು ಕೊಲ್ಲುವುದು ಆತನಿಗೆ ಗೌರವಾರ್ಹವೆಂದು ಗ್ರಹಿಸಲಾಗುತ್ತಿತ್ತು. ಅರಬ್ ದೇಶದಲ್ಲಿ ಎಲ್ಲೆಡೆಗಳಲ್ಲೂ ಹೆಣ್ಣು ಮಕ್ಕಳನ್ನು ಕೊಲ್ಲುವ ಸಂಪ್ರದಾಯವಿತ್ತೆಂದು ಚರಿತ್ರೆಗಾರರು ತಪ್ಪಾಗಿ ಉಲ್ಲೇಖಿಸಿದ್ದಾರೆ. ಈ ಸಂಪ್ರದಾಯ ಸಂಪೂರ್ಣವಾಗಿ ಅರಬ್ ದೇಶದಲ್ಲಿ ಜಾರಿಯಲ್ಲಿರಲು ಸಾಧ್ಯವಿರಲಿಲ್ಲವೆಂದು ಸಹಜ ಕಾರಣಗಳಿಂದ ತಿಳಿಯಬಹುದಾಗಿದೆ. ಈ ಸಂಪ್ರದಾಯ ಆ ದೇಶದಲ್ಲೆಲ್ಲಾ ವ್ಯಾಪಿಸಿದ್ದರೆ ಆ ದೇಶದ ಪೀಳಿಗೆಗಳು ಬಾಕಿಯಾಗಿ ಉಳಿದುದಾದರೂ ಹೇಗೆ? ವಾಸ್ತವಿಕ ಸಂಗತಿ ಏನೆಂದರೆ ಅರಬ್ ದೇಶ, ಭಾರತ ಅಥವಾ ಇಂತಹ ಸಂಪ್ರದಾಯಗಳು ಜಾರಿಯಲ್ಲಿದ್ದ ದೇಶಗಳಲ್ಲಿ ಕೆಲವು ಕುಟುಂಬಗಳು ತಮ್ಮನ್ನು ಕುಲೀನರೆಂದು ಭಾವಿಸಿಕೊಂಡು ತಮಗೆ ತಮ್ಮ ಸ್ಥಾನಮಾನಗಳಿಗೆ ತಕ್ಕುದಾದ ಸಂಬಂಧ ತಮ್ಮ ಹೆಮ್ಮಕ್ಕಳಿಗೆ ದೊರಕಲಾರದೆಂದೂ ಆದುದರಿಂದ ತಾವು ಕಷ್ಟಪಡುವೆವು ಎಂದೂ ಊಹಿಸಿಕೊಂಡು ಅವರು ತಮ್ಮ ಹೆಮ್ಮಕ್ಕಳನ್ನು ಕೊಲ್ಲುತ್ತಿದ್ದರು. ಈ ಸಂಪ್ರದಾಯದ ಕೆಡುಕು ಸಮಾಜದಿಂದ ಹೆಣ್ಣು ಮಕ್ಕಳನ್ನು ನಾಮಾವಶೇಷಗೊಳಿಸುತ್ತಿತ್ತು ಎಂಬುದಕ್ಕಿಂತ ಮಿಗಿಲಾಗಿ ಅದರ ದೌರ್ಜನ್ಯತೆಯಲ್ಲಿ ಹೆಚ್ಚು ಅಡಕವಾಗಿದೆ. ಕೆಲವು ಗೋತ್ರಗಳ ಜನರು ತಮ್ಮ ಹೆಮ್ಮಕ್ಕಳನ್ನು ಜೀವಂತವಾಗಿ ಹೂಳುತ್ತಿದ್ದರು. ಬೇರೆ ಕೆಲವರು ಉಸಿರುಗಟ್ಟಿಸಿ ಕೊಲ್ಲುತ್ತಿದ್ದರು. ಇನ್ನಿತರ ರೀತಿಗಳಲ್ಲಿ ಬೇರೆ ಕೆಲವರು ಕೊಲ್ಲುತ್ತಿದ್ದರು.

ಅರಬ್ ದೇಶದ ಜನರು ಹೆತ್ತ ತಾಯಿಯನ್ನು ಮಾತ್ರ ತಮ್ಮ ತಾಯಿಯೆಂದು ಗೌರವಿಸುತ್ತಿದ್ದರು. ಮಲತಾಯಿಯನ್ನು ಅವರು ತಾಯಿಯ ಹಾಗೆ ಪರಿಗಣಿಸದೆ ಅವರನ್ನು ವಿವಾಹವಾಗುವುದನ್ನು ಅನುಚಿತವೆಂದು ಗ್ರಹಿಸುತ್ತಿರಲಿಲ್ಲ. ತಮ್ಮ ತಂದೆ ತೀರಿಹೋದ ನಂತರ ಪುತ್ರರು ತಮ್ಮ ಮಲತಾಯಿಯನ್ನು ವಿವಾಹವಾಗುತ್ತಿದ್ದರು. ಬಹುಪತ್ನಿತ್ವ ಅವರಲ್ಲಿ ಅಧಿಕವಾಗಿತ್ತು. ಪತ್ನಿಯರ ಸಂಖ್ಯೆಗೆ ಮಿತಿಯಿರಲಿಲ್ಲ. ಅವರು ತಮ್ಮ ಪತ್ನಿಯರು ಜೀವಿಸಿರುವಾಗ ತಮ್ಮ ಪತ್ನಿಯರ ಸಹೋದರಿಯರನ್ನು ವಿವಾಹವಾಗುತ್ತಿದ್ದರು. ಅವರು ಯುದ್ಧದಲ್ಲಿ ಕಠಿಣ ದೌರ್ಜನ್ಯದಿಂದ ವರ್ತಿಸುತ್ತಿದ್ದರು. ಹಗೆತನ ಅತ್ಯಧಿಕವಾಗಿದ್ದರೆ ಗಾಯಾಳುಗಳ ಹೊಟ್ಟೆಯನ್ನು ಸೀಳಿ ಯಕೃತ್ತನ್ನು ಕಚ್ಚಿ ಜಗಿಯುತ್ತಿದ್ದರು. ಅವರು ಶತ್ರುಗಳ ಮೂಗನ್ನೂ ಕಿವಿಗಳನ್ನೂ ಕತ್ತರಿಸುತ್ತಿದ್ದರು. ಕಣ್ಣುಗಳನ್ನು ಕೀಳುತ್ತಿದ್ದರು. ಗುಲಾಮಗಿರಿ ಸಂಪ್ರದಾಯ ಸಾಮಾನ್ಯವಾಗಿತ್ತು. ಸುತ್ತಮುತ್ತಲಿನ ಬಲಹೀನ ಗೋತ್ರಗಳ ಜನರನ್ನು ಸೆರೆಹಿಡಿದು ಅವರನ್ನು



ಗುಲಾಮರನ್ನಾಗಿ ಮಾಡುತ್ತಿದ್ದರು. ಗುಲಾಮರಿಗೆ ಯಾವುದೇ ಹಕ್ಕುಗಳು ಲಭಿಸುತ್ತಿರಲಿಲ್ಲ. ಪ್ರತಿಯೊಬ್ಬ ಮಾಲಿಕ ತನ್ನ ಗುಲಾಮನೊಂದಿಗೆ ತನಗೆ ಮನಬಂದಂತೆ ವರ್ತಿಸಬಹುದಾಗಿತ್ತು. ಮಾಲಿಕನ ಮೇಲೆ ಯಾವ ನಿಯಂತ್ರಣವೂ ಇರಲಿಲ್ಲ. ಮಾಲಿಕನು ಗುಲಾಮನನ್ನು ವಧಿಸಿದರೂ ಅವನ ಮೇಲೆ ಯಾವುದೇ ಆರೋಪ ಹೊರಿಸಲಾಗುತ್ತಿರಲಿಲ್ಲ. ಬೇರೊಬ್ಬನ ಗುಲಾಮನನ್ನು ಕೊಂದರೂ ಕೊಂದವನಿಗೆ ಮರಣದಂಡನೆಯಿಂದ ಸಂರಕ್ಷಣೆ ದೊರಕುತ್ತಿತ್ತು. ಕೊಲ್ಲಲ್ಪಟ್ಟ ಗುಲಾಮನ ಮಾಲಿಕನಿಗೆ ಏನಾದರೂ ಪರಿಹಾರ ಕೊಟ್ಟು ಕೊಲೆಗಾರ ದೋಷಮುಕ್ತನಾಗುತ್ತಿದ್ದನು. ಸ್ತ್ರೀ ಗುಲಾಮರನ್ನು ಮಾಲಿಕನು ತನ್ನ ಕಾಮತೃಷ್ಣೆಯನ್ನು ನಿವಾರಿಸಲು ಒಂದು ಸಾಧನವನ್ನಾಗಿ ಮಾಡಿಕೊಳ್ಳುವುದು ನ್ಯಾಯಬದ್ಧವಾದ ಹಕ್ಕೆಂದು ಅಂಗೀಕರಿಸಲಾಗುತ್ತಿತ್ತು. ಸ್ತ್ರೀ ಗುಲಾಮರ ಮಕ್ಕಳು ಸಹ ಗುಲಾಮರಾಗಿರುತ್ತಿದ್ದರು. ಮಕ್ಕಳನ್ನು ಹೆತ್ತ ಗುಲಾಮ ಸ್ತ್ರೀಯರು ಗುಲಾಮರಾಗಿಯೇ ಮುಂದುವರಿಯುತ್ತಿದ್ದರು. ಸಂಕ್ಷಿಪ್ತವಾಗಿ ಹೇಳುವುದಾದರೆ, ವಿದ್ಯೆ ಮತ್ತು ಅಭಿವೃದ್ಧಿಯ ದೃಷ್ಟಿಯಲ್ಲಿ ಅರಬ್ ದೇಶದ ಜನರು ಬಹಳ ಹಿಂದುಳಿದಿದ್ದರು. ಜನಾಂಗಗಳ ಮಧ್ಯೆ ದಯೆ ಮತ್ತು ಸೌಹಾರ್ದಪೂರ್ಣ ಸಂಬಂಧ ಸ್ಥಾಪಿಸುವ ದೃಷ್ಟಿಯಲ್ಲಿಯೂ ಅವರು ಬಹಳ ಹಿಂದುಳಿದಿದ್ದರು. ಮಹಿಳೆಯರೊಂದಿಗೆ ಅವರ ವರ್ತನೆಯಲ್ಲೂ ಇತರ ಜನಾಂಗಗಳಿಗಿಂತ ಕೀಳುಮಟ್ಟವನ್ನು ಅವರು ಹೊಂದಿದ್ದರು. ಆದರೆ ಕೆಲವು ವೈಯಕ್ತಿಕ ಸದ್ಗುಣಗಳೂ ಶೌರ್ಯವೂ ಅವರಲ್ಲಿ ನಿಶ್ಚಯವಾಗಿಯೂ ಇದ್ದುವು. ಪ್ರಾಯಶಃ ಆ ಕಾಲಘಟ್ಟದಲ್ಲಿ ಬೇರೆ ಜನಾಂಗಗಳಲ್ಲಿ ಅಂತಹ ಗುಣಗಳು ಕಂಡು ಬರುತ್ತಿರಲಿಲ್ಲ.

## ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಜನನ

ಮೇಲೆ ವಿವರಿಸಿದಂತಹ ಸಮಾಜದಲ್ಲಿ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಜನಿಸಿದರು. ಅವರ ಜನನಕ್ಕೆ ಮೊದಲು, ಅವರು ತಮ್ಮ ತಾಯಿಯ ಗರ್ಭದಲ್ಲಿರುವಾಗಲೇ ಅವರ ಪಿತ ಅಬ್ದುಲ್ಲಾ ನಿಧನ ಹೊಂದಿದರು. ಹಝ್‌ರತ್ ಪೈಗಂಬರರನ್ನೂ(ಸ) ಅವರ ಮಾತೆ ಆಮಿನರನ್ನೂ ಅವರ ಪಿತಾಮಹ ಅಬ್ದುಲ್ ಮುತ್ತಲಿಬ್ ತಮ್ಮ ಸಂರಕ್ಷಣೆಗೆ ಒಳಪಡಿಸಿದ್ದರು.

ಅರಬ್ ದೇಶದ ಸಂಪ್ರದಾಯದ ಪ್ರಕಾರ ಹಝ್‌ರತ್ ಪೈಗಂಬರ್(ಸ) ಶಿಶುವಾಗಿದ್ದಾಗ ಅವರಿಗೆ ಹಾಲೂಡಿಸಲಿಕ್ಕಾಗಿ ತಾಯಿಫ್ ನಗರದ ಸಮೀಪದ ಒಬ್ಬ ಮಹಿಳೆಗೆ ಅವರನ್ನು ವಹಿಸಿಕೊಡಲಾಗಿತ್ತು. ಅರಬ್ ದೇಶದವರು ತಮ್ಮ ಮಕ್ಕಳನ್ನು ಹಾಲೂಡಿಸಲು ಗ್ರಾಮ ಪ್ರದೇಶದ ಮಹಿಳೆಯರಿಗೆ ವಹಿಸಿಕೊಡುತ್ತಿದ್ದರು. ಮಕ್ಕಳ ಭಾಷೆ ಶುದ್ಧವಾಗಲು ಮತ್ತು ಅವರನ್ನು ಆರೋಗ್ಯವಂತರನ್ನಾಗಿ ಮಾಡಲು ಹೀಗೆ ಮಾಡಲಾಗುತ್ತಿತ್ತು.

ಹಝ್‌ರತ್ ಪೈಗಂಬರರ(ಸ) ಆರನೆಯ ವಯಸ್ಸಿನಲ್ಲಿ ಅವರ ತಾಯಿ ತಮ್ಮ ಅಜ್ಜಿಯ ಸಂಬಂಧಿಕರನ್ನು ಭೇಟಿಯಾಗಿ ಮದೀನದಿಂದ ಮರಳಿ ಬರುತ್ತಾ ಇದ್ದಾಗ ಮಕ್ಕವನ್ನು ತಲುಪುವ ಮೊದಲೇ ದಾರಿಯಲ್ಲಿ ಮೃತರಾದರು. ಅವರನ್ನು ಅಲ್ಲಿಯೇ

ದಫನು ಮಾಡಲಾಯಿತು. ಚಿಕ್ಕ ಮಗುವಾಗಿದ್ದ ಹಝ್ರತ್ ಪೈಗಂಬರರನ್ನು(ಸ) ಅವರ ತಾಯಿಯ ಸೇವಕಿ ತನ್ನ ಜೊತೆಗೆ ಕರೆದುಕೊಂಡು ಬಂದು ಅವರ ಪಿತಾಮಹರ ಸ್ವಾಧೀನಕ್ಕೆ ನೀಡಿದ್ದರು. ಹಝ್ರತ್ ಪೈಗಂಬರರ(ಸ) ಎಂಟನೆಯ ವಯಸ್ಸಿನಲ್ಲಿ ಅವರ ಸಂರಕ್ಷಕರಾಗಿದ್ದ ಅವರ ಪಿತಾಮಹ ಮೃತರಾದರು. ಅನಂತರ ಅವರ ಚಿಕ್ಕಪ್ಪ ಅಬೂತಾಲಿಬ್ ತನ್ನ ಪಿತನ ಮರಣ ಶಾಸನದ ಪ್ರಕಾರ ಹಝ್ರತ್ ಪೈಗಂಬರರ(ಸ) ಸಂರಕ್ಷಕರಾದರು.

ಹಝ್ರತ್ ಪೈಗಂಬರರಿಗೆ(ಸ) ಅರಬ್ ರಾಜ್ಯದಿಂದ ಹೊರಗೆ ಎರಡು ಮೂರು ಸಾರಿ ಹೋಗಿ ಬರಲು ಸಂದರ್ಭವೊದಗಿ ಬಂದಿತ್ತು. ಅವರ ಒಂದು ಪ್ರಯಾಣ ಅವರ ಹನ್ನೆರಡನೆಯ ವಯಸ್ಸಿನಲ್ಲಿ ತನ್ನ ಚಿಕ್ಕಪ್ಪರೊಂದಿಗೆ ವ್ಯಾಪಾರಕ್ಕಾಗಿ ಸಿರಿಯಾ ದೇಶಕ್ಕಾಗಿತ್ತು. ಅವರ ಈ ಪ್ರಯಾಣ ಸಿರಿಯಾ ದೇಶದ ದಕ್ಷಿಣಪೂರ್ವ ದಿಕ್ಕಿನಲ್ಲಿದ್ದ ವಾಣಿಜ್ಯ ಕೇಂದ್ರಗಳಿಗೆ ಸೀಮಿತವಾಗಿತ್ತು. ಈ ಪ್ರಯಾಣ ಕಾಲದಲ್ಲಿ ಅವರು ಬೈತುಲ್ ಮುಖದ್ದಸ್ (ಜೆರುಸಲೇಮ್) ಮೊದಲಾದ ಸ್ಥಳಗಳನ್ನು ಸಂದರ್ಶಿಸಿದ ಕುರಿತು ಯಾವುದೇ ಉಲ್ಲೇಖ ಎಲ್ಲಿಯೂ ಕಂಡು ಬರುವುದಿಲ್ಲ. ಅನಂತರ ಅವರು ಯುವಕರಾಗುವ ತನಕ ಮಕ್ಕನಗರದಲ್ಲಿಯೇ ವಾಸಿಸುತ್ತಿದ್ದರು.

## ಹಿಲ್‌ಫುಲ್ ಫುಝೂಲ್– ಸಾಧು ಸಂರಕ್ಷಣೆಗೆ ಪ್ರತಿಜ್ಞಾಬದ್ಧವಾದ ಸಂಘಟನೆಯಲ್ಲಿ ಹಝ್ರತ್ ಪೈಗಂಬರರ(ಸ) ಸೇರ್ಪಡೆ

ಹಝ್ರತ್ ಪೈಗಂಬರರು(ಸ) ಬಾಲ್ಯದಿಂದಲೇ ಚಿಂತಿಸುವ ಮತ್ತು ಗಾಢಾಲೋಚನೆ ಮಾಡುವ ಅಭ್ಯಾಸ ಹೊಂದಿದ್ದರು. ಅವರು ಜನರ ಜಗಳಗಳಲ್ಲೂ ವಿವಾದಗಳಲ್ಲೂ ಭಾಗವಹಿಸುತ್ತಿರಲಿಲ್ಲ. ಆದರೆ ಅವರು ಜಗಳಗಳನ್ನೂ ಕಲಹಗಳನ್ನೂ ತಡೆಗಟ್ಟುವ ಕೆಲಸಗಳಲ್ಲಿ ಭಾಗವಹಿಸುತ್ತಿದ್ದರು. ಮಕ್ಕನಗರ ಮತ್ತು ಸುತ್ತಮುತ್ತಲಿನ ಗೋತ್ರಗಳ ಪರಸ್ಪರ ಯುದ್ಧಗಳಿಂದ ಬೇಸತ್ತು ಮಕ್ಕ ನಗರದ ಕೆಲವು ಯುವಕರು ಒಂದು ಸಂಘವನ್ನು ರೂಪಿಸಿದ್ದರು. ದೌರ್ಜನ್ಯಕ್ಕೀಡಾದವರಿಗೆ ಸಹಾಯ ಮಾಡುವುದು ಅದರ ಉದ್ದೇಶವಾಗಿತ್ತು. ಹಝ್ರತ್ ಪೈಗಂಬರ್(ಸ) ಬಹಳ ಸಂತೋಷದಿಂದ ಈ ಸಂಘದಲ್ಲಿ ಸೇರಿದರು. ಆ ಸಂಘದ ಸದಸ್ಯರು ಹೀಗೆ ಪ್ರಮಾಣ ಮಾಡುತ್ತಿದ್ದರು:

*“ದೌರ್ಜನ್ಯಕ್ಕೀಡಾದವರಿಗೆ ಸಹಾಯ ಮಾಡುವೆವು. ಅವರ ಹಕ್ಕುಗಳನ್ನು ಅಪಹರಿಸಿದವರಿಂದ ಅವುಗಳನ್ನು ಮರಳಿ ಕೊಡಿಸುವೆವು. ಸಮುದ್ರದಲ್ಲಿ ಒಂದು ಬಿಂದು ನೀರು ಬಾಕಿಯಾಗಿ ಉಳಿಯುವ ತನಕ ನಾವು ಈ ಕೆಲಸವನ್ನು ಮುಂದುವರಿಸುವೆವು. ದೌಜನ್ಯಕ್ಕೀಡಾದವರಿಗೆ ಅವರ ಹಕ್ಕುಗಳನ್ನು ಮರಳಿ ಕೊಡಿಸಲು ನಾವು ಅಸಮರ್ಥರಾದರೆ ನಾವು (ಎಂದರೆ ಈ ಸಂಘದ ಸದಸ್ಯರು) ದೌರ್ಜನ್ಯಕ್ಕೀಡಾದವರ ಹಕ್ಕುಗಳನ್ನು ನಾವು ಸ್ವತಃ ನೀಡುವೆವು.”*

ಪ್ರಾಯಶಃ ಈ ಪ್ರತಿಜ್ಞೆಪ್ರಕಾರ ವರ್ತಿಸುವ ಸಂದರ್ಭ ಹಝ್ರತ್ ಪೈಗಂಬರ್(ಸ)

3. ಇಬ್ನು ಹಿಶಾಮ್ ಸಂಪುಟ–1 ಪುಟ 136.



ಹೊರತು ಬೇರೆ ಯಾರಿಗೂ ದೊರಕಲಿಲ್ಲ. ಅವರು ತಾನು ಪ್ರವಾದಿ ಎಂದು ವಾದಿಸಿದಾಗ ಮಕ್ಕದ ಮುಂದಾಳುವಾಗಿದ್ದ ಅಬೂಜಹಲನು ಅವರನ್ನು ಹೆಚ್ಚು ಹೆಚ್ಚಾಗಿ ವಿರೋಧಿಸಿ ಜನರೊಂದಿಗೆ, “ಮುಹಮ್ಮದನೊಂದಿಗೆ ಮಾತನಾಡಬೇಡಿರಿ. ಆತನ ಯಾವುದೇ ಮಾತನ್ನು ಅಂಗೀಕರಿಸಬೇಡಿರಿ. ಸಾಧ್ಯವಿರುವ ಎಲ್ಲಾ ರೀತಿಗಳಲ್ಲೂ ಆತನನ್ನು ಅಪಮಾನಿಸಿರಿ” ಎಂದು ಹೇಳುತ್ತಾ ಇದ್ದನು. ಆ ಕಾಲದಲ್ಲಿ ಒಬ್ಬ ವ್ಯಕ್ತಿ ಮಕ್ಕ ನಗರಕ್ಕೆ ಬಂದು ತಾನು ಅಬೂಜಹಲನಿಗೆ ಸಾಲವಾಗಿ ನೀಡಿದ ಹಣವನ್ನು ಮರುಪಾವತಿಸಲು ಆವನನ್ನು ಕೇಳಿದನು. ಆಗ ಅಬೂಜಹಲನು ತಾನು ಕೊಡಬೇಕಾದ ಸಾಲದ ಹಣವನ್ನು ಹಿಂದಿರುಗಿಸಲು ನಿರಾಕರಿಸಿದನು. ಆ ವ್ಯಕ್ತಿ ಮಕ್ಕ ನಗರದ ಕೆಲವು ಜನರಿಗೆ ಈ ವಿಷಯದ ಬಗ್ಗೆ ದೂರಿತ್ತನು. ಆಗ ಕೆಲವು ಯುವಕರು ಕುಚೋದ್ಯದಿಂದ ಆತನಿಗೆ ಹಝ್ರತ್ ಪೈಗಂಬರರನ್ನು(ಸ) ಸೂಚಿಸಿ ಹೀಗೆಂದರು: “ನೀನು ಅವರ ಬಳಿಗೆ ಹೋಗು. ಅವರು ನಿನಗೆ ಈ ಬಗ್ಗೆ ಸಹಾಯ ಮಾಡುವರು.”

ಆ ಯುವಕರ ಉದ್ದೇಶ ಹೀಗಿತ್ತು: ಮಕ್ಕದ ಜನರು ಸಾಮಾನ್ಯವಾಗಿ ಮತ್ತು ಅಬೂಜಹಲ್ ವಿಶಿಷ್ಟವಾಗಿ ಹಝ್ರತ್ ಪೈಗಂಬರರನ್ನು(ಸ) ವಿರೋಧಿಸುತ್ತಾ ಇದ್ದುದರಿಂದ ಅವರು ತನ್ನಿಂದ ಸಹಾಯ ಯಾಚಿಸಿದವನಿಗೆ ಸಹಾಯ ಮಾಡಲು ನಿರಾಕರಿಸುವರು. ಆಗ ಅವರು ತಮ್ಮ ಪ್ರತಿಜ್ಞೆಯನ್ನು ಉಲ್ಲಂಘಿಸಿದವರೆಂದು ಕರೆಯಲ್ಪಟ್ಟು ಜನರಿಂದ ಅಪಮಾನಿತರಾಗುವರು. ಅಥವಾ ಅವರು ಸಾಲ ನೀಡಿದವನ ಸಹಾಯಕ್ಕಾಗಿ ಅಬೂಜಹಲನ ಮನೆಗೆ ಹೋದರೆ ಅಬೂಜಹಲನು ಅವರ ಮಾತನ್ನು ನಿರಾಕರಿಸಿ ಅವರನ್ನು ಅಪಮಾನಗೊಳಿಸಿ ಮನೆಯಿಂದ ಹೊರಹಾಕುವನು.

ಅಬೂಜಹಲನಿಗೆ ಸಾಲ ನೀಡಿದ ಆ ವ್ಯಕ್ತಿ ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ಅಬೂಜಹಲನ ವಿರುದ್ಧ ದೂರಿತ್ತಾಗ ಅವರು ಕೂಡಲೇ ಆತನ ಜೊತೆಗೆ ಹೊರಟು ಅಬೂಜಹಲನ ಮನೆಬಾಗಿಲನ್ನು ತಟ್ಟಿದರು. ಅಬೂಜಹಲನು ಬಾಗಿಲನ್ನು ತೆರೆದು ನೋಡಿದಾಗ ತನಗೆ ಸಾಲವಿತ್ತವನು ಹಝ್ರತ್ ಪೈಗಂಬರರ(ಸ) ಜೊತೆ ತನ್ನ ಮನೆಬಾಗಿಲ ಮುಂದೆ ನಿಂತಿದ್ದನ್ನು ಕಂಡನು.

ಹಝ್ರತ್ ಪೈಗಂಬರ್(ಸ) ಅಬೂಜಹಲನೊಂದಿಗೆ ಆ ವ್ಯಕ್ತಿಗೆ ಮರುಪಾವತಿಸಬೇಕಾದ ಸಾಲದ ಬಗ್ಗೆ ಸೂಚಿಸಿ ಅದನ್ನು ಆತನಿಗೆ ನೀಡಲು ಹೇಳಿದರು. ಅಬೂಜಹಲನು ಚಾಚೂ ಎನ್ನದೆ ಕೂಡಲೆ ಹಣವನ್ನು ಸಾಲನೀಡಿದವನಿಗೆ ಮರುಪಾವತಿ ಮಾಡಿದನು. ನಗರದ ಗಣ್ಯರು ಅಬೂಜಹಲನನ್ನು ಆಕ್ಷೇಪಿಸಿ ಹೀಗೆ ಹೇಳಿದರು: “ನೀನು ನಮ್ಮೊಂದಿಗೆ ಮುಹಮ್ಮದನನ್ನು ಅಪಮಾನಿಸಲು ಮತ್ತು ಆತನೊಂದಿಗೆ ಯಾವುದೇ ಸಂಬಂಧವಿರಿಸಿಕೊಳ್ಳಬಾರದೆಂದು ಹೇಳುತ್ತಿದ್ದೆ. ಆದರೆ ನೀನು ಸ್ವತಃ ಆತನ ಮಾತಿಗೆ ಒಪ್ಪಿಗೆ ನೀಡಿದೆ ಮತ್ತು ಆತನ ಗೌರವವನ್ನು ಕಾಪಾಡಿದೆ ಅಲ್ಲವೇ?” ಆಗ ಅಬೂಜಹಲನು ಹೀಗೆ ಉತ್ತರ ನೀಡಿದನು: “ದೇವರಾಣೆ ಹಾಕಿ ಹೇಳುತ್ತೇನೆ. ನೀವು ನನ್ನ ಸ್ಥಾನದಲ್ಲಿರುತ್ತಿದ್ದರೆ ನೀವು ಸಹ ಹೀಗೆಯೇ ವರ್ತಿಸುತ್ತಿದ್ದಿರಿ. ನಾನು ಮುಹಮ್ಮದನ ಎಡಬಲಗಳಲ್ಲಿ ಮದೋನ್ಮತ್ತ ಎರಡು

ಒಂಟೆಗಳು ನನ್ನನ್ನು ಆಕ್ರಮಿಸಿ ನನ್ನ ಕತ್ತನ್ನು ಮುರಿದು ಹಾಕಿ ನನ್ನನ್ನು ನಾಶಮಾಡಲು ನಿಂತಿರುವುದಾಗಿ ಕಂಡೆನು."[4]

ಅಬೂಜಹಲನು ಹೇಳಿದುದು ಸತ್ಯವೋ ಅಲ್ಲವೋ ಎಂಬುದು ಅಲ್ಲಾಹನಿಗೆ ಮಾತ್ರ ತಿಳಿದಿದೆ. ಅಲ್ಲಾಹನು ವಾಸ್ತವಿಕವಾಗಿ ಒಂದು ದೃಷ್ಟಾಂತವನ್ನು ತೋರಿಸಿಕೊಟ್ಟನೋ ಅಥವಾ ಸತ್ಯದ ಭಯವು ಅವನನ್ನು ಆವರಿಸಿದ್ದಿತ್ತೊ? ನಮಗೆ ತಿಳಿಯದು. ಮಕ್ಕದ ನಿವಾಸಿಗಳಿಂದೆಲ್ಲಾ ನಿಂದಿಸಲ್ಪಟ್ಟ ಮತ್ತು ಅವರ ಕೋಪೋದ್ರೇಕಕ್ಕೆ ಗುರಿಯಾದ ವ್ಯಕ್ತಿಯೊಬ್ಬ ದೌರ್ಜನ್ಯಕ್ಕೊಳಗಾದ ಇನ್ನೊಬ್ಬ ವ್ಯಕ್ತಿಯ ಸಹಾಯಕ್ಕಾಗಿ ಬಾಹ್ಯವಾದ ಯಾವುದೇ ಸಂರಕ್ಷಣೆಯನ್ನು ಹೊಂದದೆ ಉತ್ಸಾಹದಿಂದ ಒಬ್ಬಂಟಿಗನಾಗಿ ಮಕ್ಕದ ಮುಂದಾಳುವಿನ ಮನೆಯ ಮುಂದೆ ಹಾಜರಾಗಿ "ಈ ವ್ಯಕ್ತಿಗೆ ನೀನು ನೀಡಬೇಕಾದ ಹಕ್ಕುಗಳನ್ನು ಕೊಡು" ಎಂದು ಹೇಳಿದಾಗ ಸತ್ಯದ ಬಗ್ಗೆ ಅಬೂಜಹಲನಿಗಿದ್ದ ಭೀತಿ ಅವನ ಕುಕೃತ್ಯಗಳ ಸ್ಫೂರ್ತಿಯನ್ನು ಅದುಮಿಹಾಕಿತು ಮತ್ತು ಅವನು ಸತ್ಯದ ಮುಂದೆ ತಲೆಬಾಗಬೇಕಾಯಿತು.

## ಹಝ್ರತ್ ಖದೀಜರೊಂದಿಗೆ(ರ) ವಿವಾಹ

ಹಝ್ರತ್ ಪೈಗಂಬರ್(ಸ) ಇಪ್ಪತ್ತೈದು ವರ್ಷ ಪ್ರಾಯದವರಾದಾಗ ಅವರ ಸದ್ಗುಣಗಳ ಮತ್ತು ಭಯ ಭಕ್ತಿಯ ಕೀರ್ತಿ ಎಲ್ಲೆಡೆಗಳಲ್ಲೂ ವ್ಯಾಪಿಸಿದ್ದಿತು. ಜನರು ಅವರ ಕಡೆಗೆ ಬೆರಳು ತೋರಿಸಿ "ಸತ್ಯವಂತನಾದ ಮನುಷ್ಯನು ಅದೋ ಅಲ್ಲಿ ಹೋಗುತ್ತಿದ್ದಾನೆ", "ಪ್ರಾಮಾಣಿಕನಾದ ಮನುಷ್ಯನು ಹೋಗುತ್ತಿದ್ದಾನೆ" ಎಂದೆಲ್ಲಾ ಹೇಳುತ್ತಿದ್ದರು. ಈ ವಿಷಯ ಮಕ್ಕನಗರದ ಒಬ್ಬ ಶ್ರೀಮಂತ ವಿಧವೆಯಾಗಿದ್ದ ಹಝ್ರತ್ ಖದೀಜರಿಗೆ(ರ) ತಿಳಿಯಿತು. ಅವರು ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪನವರೊಂದಿಗೆ ಹೀಗೆ ಅಪೇಕ್ಷಿಸಿದರು: "ನನ್ನ ವ್ಯಾಪಾರ ಸಾಮಗ್ರಿಗಳನ್ನು ವ್ಯಾಪಾರಿ ಸಂಘದ ಜೊತೆಯಲ್ಲಿ ಸಿರಿಯಾ ಪ್ರದೇಶಕ್ಕೆ ಕಳುಹಿಸುತ್ತಿರುವೆನು. ಅದರ ಮಾರಾಟದ ವ್ಯವಸ್ಥೆಯನ್ನು ಕೈಗೆತ್ತಿಕೊಳ್ಳಲು ನಿಮ್ಮ ಸಹೋದರ ಪುತ್ರನೊಂದಿಗೆ ಹೇಳಿರಿ."

ಅಬೂತಾಲಿಬರು ಈ ವಿಷಯವನ್ನು ಹಝ್ರತ್ ಪೈಗಂಬರರಿಗೆ(ಸ) ತಿಳಿಸಿದಾಗ ಅವರು ತನ್ನ ಸಮ್ಮತಿಯನ್ನು ಸೂಚಿಸಿದರು. ವ್ಯಾಪಾರಕ್ಕಾಗಿ ಮಾಡಿದ ಆ ಪಯಣದಲ್ಲಿ ಜಯ ಲಭಿಸಿತು. ಪ್ರತೀಕ್ಷಿಸಿದಕ್ಕಿಂತಲೂ ಹೆಚ್ಚು ಲಾಭಗಳಿಸಿ ಅವರು ಮರಳಿಬಂದರು. ಹಝ್ರತ್ ಖದೀಜ ಹೀಗೆ ಮನವರಿಕೆ ಮಾಡಿಕೊಂಡರು: ಈ ಲಾಭ ಮಾರುಕಟ್ಟೆಗಳ ಏರುಪೇರುಗಳಿಂದ ಮಾತ್ರ ಲಭಿಸಿದುದಲ್ಲ, ವ್ಯಾಪಾರಿ ಸಂಘದ ನಾಯಕರಾದ ಹಝ್ರತ್ ಮುಹಮ್ಮದ್‌ರವರ(ಸ) ಸದ್ಗುಣ ಮತ್ತು ವಿಶ್ವಾಸಾರ್ಹತೆಯ ಕಾರಣದಿಂದ ಇದು ಲಭಿಸಿದುದಾಗಿದೆ.

4. ಇಬ್ನು ಹಿಶಾಮ್ ಸಂಪುಟ–1 ಪುಟ–136.



ಹಝ್ರತ್ ಖದೀಜ ವ್ಯಾಪಾರಿ ಸಂಘದ ಜೊತೆಗೆ ಹೋಗಿದ್ದ ತನ್ನ ಗುಲಾಮನಾದ ಮಯ್‌ಸಿರನೊಂದಿಗೆ ಈ ಬಗ್ಗೆ ವಿಚಾರಿಸಿದರು. ಆತನು ಹಝ್ರತ್ ಖದೀಜರವರ ಅಭಿಪ್ರಾಯಗಳನ್ನು ಅನುಮೋದಿಸಿದನು. ಹಝ್ರತ್ ಮುಹಮ್ಮದ್(ಸ) ಪ್ರಾಮಾಣಿಕವಾಗಿ ಮತ್ತು ಹಝ್ರತ್ ಖದೀಜರವರ ಹಿತಕಾಂಕ್ಷೆಯಿಂದ ವರ್ತಿಸಿದುದನ್ನು ವಿವರಿಸಿ ವ್ಯಾಪಾರದಿಂದ ಲಭಿಸಿದ ಲಾಭದ ಶ್ರೇಯಸ್ಸು ಹಝ್ರತ್ ಮುಹಮ್ಮದ್‌ರಿಗೆ(ಸ) ಸಲ್ಲಬೇಕಾಗಿದೆ ಎಂದು ಹೇಳಿದನು. ಈ ಮಾತು ಹಝ್ರತ್ ಖದೀಜರವರ ಮೇಲೆ ಅತ್ಯಧಿಕ ಪ್ರಭಾವ ಬೀರಿತು. ಆ ಸಮಯದಲ್ಲಿ ಹಝ್ರತ್ ಖದೀಜರವರ ಪ್ರಾಯ ನಲ್ವತ್ತು ವರ್ಷವಾಗಿತ್ತು. ಅವರು ಎರಡು ಸಾರಿ ವಿಧವೆಯೂ ಆಗಿದ್ದರು. ಅವರು ತನ್ನ ಒಬ್ಬ ಸ್ನೇಹಿತೆಯನ್ನು ಹಝ್ರತ್ ಮುಹಮ್ಮದ್‌ರವರ(ಸ) ಸಮೀಪಕ್ಕೆ ಕಳುಹಿಸಿ ತನ್ನನ್ನು ವಿವಾಹವಾಗಲು ಅವರು ಸಮ್ಮತಿಸುವರೋ ಎಂದು ತಿಳಿಯಲು ಬಯಸಿದರು. ಆ ಸ್ತ್ರೀ ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಬಂದು, "ನೀವು ಯಾಕೆ ವಿವಾಹವಾಗುವುದಿಲ್ಲ?" ಎಂದು ಕೇಳಿದಳು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನನ್ನ ಬಳಿ ವಿವಾಹಕ್ಕೆ ಖರ್ಚು ಮಾಡಲು ಹಣವಿಲ್ಲ." ಆಗ ಆ ಸ್ತ್ರೀ ಹೇಳಿದಳು: "ನಿಮ್ಮ ಕಷ್ಟ ನಿವಾರಣೆಯಾಗಿ, ಸದ್ಗುಣ ಸಂಪನ್ನೆಯಾದ ಒಬ್ಬ ಐಶ್ವರ್ಯವಂತ ಮಹಿಳೆಯೊಂದಿಗೆ ನಿಮ್ಮ ಮದುವೆ ನಡೆಸುವುದು ನಿಮಗೆ ಸಮ್ಮತವೇ?" ಆಗ ಹಝ್ರತ್ ಪೈಗಂಬರ್(ಸ) "ಆ ಮಹಿಳೆ ಯಾರು?" ಎಂದು ಕೇಳಿದರು. ಆ ಸ್ತ್ರೀ ಹೇಳಿದಳು: "ಖದೀಜರವರೆ ಆ ಮಹಿಳೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಆಕೆಯನ್ನು ಹೇಗೆ ತಾನೆ ವಿವಾಹವಾಗಬಲ್ಲೆ?" ಆ ಸ್ತ್ರೀ ಹೇಳಿದಳು: "ಅದು ನನ್ನ ಹೊಣೆಗಾರಿಕೆಯಾಗಿದೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅದಕ್ಕೆ ನನ್ನ ಒಪ್ಪಿಗೆ ಇದೆ." ಅನಂತರ ಹಝ್ರತ್ ಖದೀಜ(ರ) ಅಬೂತಾಲಿಬರ ಮೂಲಕ ಮದುವೆಯ ನಿಶ್ಚಯ ಮಾಡಿಸಿದರು. ಹಝ್ರತ್ ಪೈಗಂಬರರ(ಸ) ವಿವಾಹ ಹಝ್ರತ್ ಖದೀಜರೊಂದಿಗೆ ನೆರವೇರಿತು. ಒಬ್ಬ ಬಡ, ಅನಾಥ ಯುವಕನಿಗೆ ಐಶ್ವರ್ಯದ ಈ ಪ್ರಥಮ ಬಾಗಿಲು ತೆರೆಯಲ್ಪಟ್ಟಿತು. ಆದರೆ ಆ ಯುವಕ ಆ ಸಂಪತ್ತನ್ನು ವಿನಿಯೋಗಿಸಿದ ರೀತಿ ಸಂಪೂರ್ಣ ವಿಶ್ವಕ್ಕೆ ಮಾರ್ಗದರ್ಶಕ ಪಾಠವನ್ನು ನೀಡುತ್ತದೆ.

## ಗುಲಾಮರ ವಿಮೋಚನೆ ಮತ್ತು ಝೈದ್

ಹಝ್ರತ್ ಪೈಗಂಬರರನ್ನು(ಸ) ವಿವಾಹವಾದ ನಂತರ ಹಝ್ರತ್ ಖದೀಜ(ರ) ಹೀಗೆ ಯೋಚಿಸಿದರು: ಹಝ್ರತ್ ಮುಹಮ್ಮದ್‌ರ(ಸ) ಸಂವೇದನಶೀಲ ಮನಸ್ಸು ತನ್ನ ಪತ್ನಿ ಶ್ರೀಮಂತೆಯಾಗಿದ್ದು ತಾನು ಆಕೆಯನ್ನು ಅವಲಂಬಿಸಿ ಬದುಕಬೇಕಾದ ಜೀವಿತದಿಂದ ಯಾವುದೇ ಸಂತೋಷ ಗಳಿಸಲಾರದು.

ಹಝ್ರತ್ ಖದೀಜ(ರ) ಹಝ್ರತ್ ಪೈಗಂಬರರಿಗೆ(ಸ) ಹೇಳಿದರು: "ನಾನು ನನ್ನ ಸಂಪತ್ತನ್ನೂ ನನ್ನ ಗುಲಾಮರನ್ನೂ ನಿಮ್ಮ ಸ್ವಾಧೀನಕ್ಕೆ ನೀಡುತ್ತೇನೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಖದೀಜ, ನಿಜವಾಗಿಯೂ ನೀನು

ಹೀಗೆಯೇ ನಿರ್ಧರಿಸಿರುವೆಯೋ?" ಆಗ ಹಝ್ರತ್ ಖದೀಜ(ರ) ತನ್ನ ಅಪೇಕ್ಷೆಯನ್ನು ಪುನರಾವರ್ತಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಮಾಡುವ ಮೊದಲನೆಯ ಕೆಲಸ ಗುಲಾಮರನ್ನೆಲ್ಲಾ ಬಂಧವಿಮೋಚನೆ ಮಾಡುವುದಾಗಿದೆ."

ಹಝ್ರತ್ ಪೈಗಂಬರ್(ಸ) ಹಝ್ರತ್ ಖದೀಜರವರ(ರ) ಗುಲಾಮರನ್ನೆಲ್ಲಾ ಕರೆದು ಹೇಳಿದರು: "ನೀವೆಲ್ಲರೂ ಇಂದಿನಿಂದ ಬಂಧ ವಿಮೋಚನೆ ಪಡೆದು ಸ್ವತಂತ್ರರಾಗಿರುವಿರಿ."

ಹಝ್ರತ್ ಪೈಗಂಬರ್(ಸ) ಸಂಪತ್ತಿನ ಬಹುತೇಕ ಭಾಗವನ್ನು ಬಡವರಿಗೆ ಹಂಚಿದರು. ವಿಮೋಚಿತ ಗುಲಾಮರಲ್ಲಿ ಝೈದ್ ಇತರ ಗುಲಾಮ ರಿಗಿಂತ ಹೆಚ್ಚು ಬುದ್ಧಿಶಾಲಿ ಮತ್ತು ಚಾತುರ್ಯವಂತ ಆಗಿದ್ದ. ಆತನು ಒಂದು ಕುಲೀನ ಮನೆತನದಲ್ಲಿ ಜನಿಸಿದ್ದ. ಚಿಕ್ಕ ವಯಸ್ಸಿನಲ್ಲಿ ದರೋಡೆಕೋರರು ಆತನನ್ನು ಅಪಹರಿಸಿ ಕೊಂಡೊಯ್ದು ಮಾರಾಟ ಮಾಡಿದ್ದರು. ಆತನು ಗುಲಾಮನಾಗಿ ಮಾರಾಟವಾಗುತ್ತಾ ಕೊನೆಗೆ ಮಕ್ಕ ನಗರವನ್ನು ತಲುಪಿದ್ದ. ಯುವಕ ಝೈದ್ ತನ್ನ ಬುದ್ಧಿಚಾತುರ್ಯದಿಂದ ಹೀಗೆ ಮನವರಿಕೆ ಮಾಡಿದ್ದರು: "ಸ್ವತಂತ್ರನಾಗಿ ಹೋಗುವುದಕ್ಕಿಂತ ಈ ಮಹಾಪುರುಷನ ದಾಸನಾಗಿರುವುದು ಉತ್ತಮ."

ಹಝ್ರತ್ ಪೈಗಂಬರರೊಂದಿಗೆ(ಸ) ಝೈದ್ ಹೀಗೆ ಹೇಳಿದರು: "ನೀವು ನನ್ನನ್ನು ಬಂಧವಿಮೋಚನೆಗೊಳಿಸಿರುವಿರಿ. ಆದರೆ ನಾನು ಸ್ವತಂತ್ರನಾಗಿ ನಿಮ್ಮನ್ನು ಬಿಟ್ಟು ಹೋಗಲಾರೆನು. ನಾನು ನಿಮ್ಮ ಜೊತೆಗೆಯೇ ಇರಲು ಬಯಸುತ್ತೇನೆ." ಝೈದ್ ಹಝ್ರತ್ ಪೈಗಂಬರರನ್ನು(ಸ) ಬಿಟ್ಟು ಹೋಗಲಿಲ್ಲ. ಝೈದ್ ಹಝ್ರತ್ ಪೈಗಂಬರರನ್ನು(ಸ) ದಿನಗಳೆದಂತೆ ಹೆಚ್ಚು ಹೆಚ್ಚಾಗಿ ಪ್ರೀತಿಸತೊಡಗಿದರು. ಝೈದ್ ಶ್ರೀಮಂತ ಕುಟುಂಬಕ್ಕೆ ಸೇರಿದವರಾದುದರಿಂದ ಅವರ ಪಿತ ಮತ್ತು ಅವರ ಪಿತೃಸಹೋದರ ಅವರನ್ನು ಹುಡುಕುತ್ತಾ ಇದ್ದರು. ಝೈದ್ ಮಕ್ಕದಲ್ಲಿರುವುದು ಅವರಿಗೆ ತಿಳಿದಾಗ, ಅವರು ಮಕ್ಕಕ್ಕೆ ಬಂದು ಹಝ್ರತ್ ಪೈಗಂಬರರೊಂದಿಗೆ(ಸ) ಹೀಗೆ ಹೇಳಿದರು: "ನಮ್ಮ ಹುಡುಗನನ್ನು ಸ್ವತಂತ್ರಗೊಳಿಸಿರಿ. ನಿಮಗೆ ಬೇಕಾದಷ್ಟು ಹಣವನ್ನು ನಮ್ಮಿಂದ ತೆಗೆದುಕೊಳ್ಳಿರಿ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಝೈದ್‌ನನ್ನು ಬಿಡುಗಡೆಗೊಳಿಸಿದ್ದೇನೆ. ಅವನು ಸಂತೋಷದಿಂದ ನಿಮ್ಮ ಜೊತೆ ಹೋಗಬಹುದು."

ಹಝ್ರತ್ ಪೈಗಂಬರ್(ಸ) ಝೈದ್‌ರನ್ನು ಕರೆದು ಅವರ ಪಿತ ಮತ್ತು ಪಿತನ ಸಹೋದರರ ಭೇಟಿ ಮಾಡಿಸಿದರು. ಅವರು ಪರಸ್ಪರ ಭೇಟಿಯಾಗಿ ಆನಂದಾಶ್ರುವಿನಿಂದ ತಮ್ಮ ಹೃದಯದ ನೋವನ್ನು ಶಮನಗೊಳಿಸಿದಾಗ, ಝೈದರ ತಂದೆ ಹೀಗೆಂದರು: "ಈ ಉತ್ತಮ ಪುರುಷರು ನಿನ್ನನ್ನು ಸ್ವತಂತ್ರಗೊಳಿಸಿದ್ದಾರೆ. ನಿನ್ನ ತಾಯಿ ನಿನ್ನನ್ನು ನೆನಪಿಸುತ್ತಾ ಚಡಪಡಿಸುತ್ತಿದ್ದಾಳೆ. ನೀನು ಬೇಗನೆ ನಮ್ಮ ಜೊತೆ ಹೊರಡು ಮತ್ತು ನಿನ್ನ ತಾಯಿಗೆ ಸಂತೋಷ ನೀಡು." ಆಗ ಝೈದ್ ಹೇಳಿದರು: "ತಂದೆ ತಾಯಿ ಯಾರಿಗೆ ತಾನೆ ಪ್ರಿಯರಾಗಿರುವುದಿಲ್ಲ. ನನ್ನ ಹೃದಯ



ಸಹ ಈ ಪ್ರೀತಿಯಿಂದ ಬರಿದಾಗಿಲ್ಲ. ಆದರೆ ಹಝ್ರತ್ ಮುಹಮ್ಮದ್‌ರವರ(ಸ) ಮೇಲೆ ನನಗಿರುವ ಪ್ರೀತಿ ನನ್ನ ಹೃದಯವನ್ನು ಎಷ್ಟು ತುಂಬಿಬಿಟ್ಟಿದೆ ಎಂದರೆ ನಾನು ಅವರಿಂದ ಬೇರೆಯಾಗಿ ಹೋಗಲಾರೆನು. ಈ ದಿನ ನಿಮ್ಮನ್ನು ಭೇಟಿಯಾಗಿ ನಾನು ಸಂತೋಷಗೊಂಡಿರುವೆನು. ಆದರೆ ಹಝ್ರತ್ ಮುಹಮ್ಮದ್‌ರನ್ನು(ಸ) ಬಿಟ್ಟುಹೋಗಲು ನನಗೆ ಶಕ್ತಿ ಸಾಲದು."

ಝೈದ್‌ರ ತಂದೆ ಮತ್ತು ಚಿಕ್ಕಪ್ಪ ಅವರನ್ನು ಬಹಳ ಒತ್ತಾಯಿಸಿದರು. ಆದರೆ ಝೈದ್ ಅವರ ಜೊತೆಗೆ ಹೋಗಲು ಒಪ್ಪಲಿಲ್ಲ. ಝೈದರ ಈ ಪ್ರೀತಿಯನ್ನು ಕಂಡು ಹಝ್ರತ್ ಪೈಗಂಬರ್(ಸ) ಎದ್ದು ನಿಂತು ಹೇಳಿದರು: "ಝೈದ್ ಇದರ ಮೊದಲೇ ದಾಸ್ಯ ವಿಮೋಚನೆ ಪಡೆದಿರುವನು. ಆದರೆ ಈ ದಿನದಿಂದ ಈತನು ನನ್ನ ಪುತ್ರನಾಗಿರುವನು."

ಈ ಹೊಸ ಪರಿಸ್ಥಿತಿಯನ್ನು ನೋಡಿಕೊಂಡು ಝೈದರ ತಂದೆ ಮತ್ತು ಚಿಕ್ಕಪ್ಪ ತಮ್ಮ ಊರಿಗೆ ಹೊರಟು ಹೋದರು. ಝೈದ್ ಮಕ್ಕದ ಶಾಶ್ವತ ನಿವಾಸಿಯಾದರು.

## ಹಿರಾ ಗುಹೆಯಲ್ಲಿ ಅಲ್ಲಾಹನ ಆರಾಧನೆ

ಹಝ್ರತ್ ಪೈಗಂಬರರ(ಸ) ವಯಸ್ಸು ಮೂವತ್ತನ್ನು ದಾಟಿದಾಗ ಅವರ ಹೃದಯದಲ್ಲಿ ಅಲ್ಲಾಹನ ಆರಾಧನೆಯ ಆಸಕ್ತಿ ಹೆಚ್ಚಾಗಲು ತೊಡಗಿತು. ಕೊನೆಗೆ ಅವರು ನಗರವಾಸಿಗಳ ಅಧಾರ್ಮಿಕ ವರ್ತನೆಗಳಿಂದಲೂ ದುಷ್ಕೃತ್ಯಗಳಿಂದಲೂ ದೌರ್ಜನ್ಯಗಳಿಂದಲೂ ಬೇಸತ್ತು ಮಕ್ಕನಗರದಿಂದ ಎರಡು ಮೂರು ಮೈಲು ದೂರವಿರುವ ಒಂದು ಚಿಕ್ಕ ಬೆಟ್ಟದಲ್ಲಿ ಬಂಡೆಕಲ್ಲುಗಳಿಂದ ಪ್ರಾಕೃತಿಕವಾಗಿ ನಿರ್ಮಿತವಾದ ಒಂದು ಗುಹೆಯಲ್ಲಿ ಅಲ್ಲಾಹನ ಧ್ಯಾನಾರಾಧನೆ ಮಾಡಲು ತೊಡಗಿದರು. ಹಝ್ರತ್ ಖದೀಜ(ರ) ಕೆಲವು ದಿನಗಳ ಆಹಾರ ತಯಾರಿಸಿ ಕೊಡುತ್ತಿದ್ದರು. ಹಝ್ರತ್ ಪೈಗಂಬರರು(ಸ) ಅದನ್ನು ತೆಗೆದುಕೊಂಡು ಹಿರಾ ಗುಹೆಗೆ ಹೋಗಿ ಅದರ ಒಳಭಾಗದಲ್ಲಿ ವಾಸಮಾಡಿ ಅಲ್ಲಾಹನ ಆರಾಧನೆಯಲ್ಲಿ ರಾತ್ರಿ ಹಗಲುಗಳನ್ನು ವಿನಿಯೋಗಿಸುತ್ತಾ ಇದ್ದರು.

## ಪವಿತ್ರ ಖುರ್‌ಆನ್ ವಚನಗಳ ಪ್ರಥಮ ಸಂದೇಶ

ಹಝ್ರತ್ ಪೈಗಂಬರರು(ಸ) ನಲ್ವತ್ತು ವರ್ಷ ಪ್ರಾಯದವರಾದಾಗ ಒಂದು ದಿನ ಹಿರಾ ಗುಹೆಯಲ್ಲಿ ಒಂದು ದಿವ್ಯ ದರ್ಶನವನ್ನು ಕಂಡರು. ಒಬ್ಬ ದೇವದೂತ ಹಝ್ರತ್ ಪೈಗಂಬರರನ್ನು(ಸ) ಸಂಬೋಧಿಸಿ, "ನೀನು ಓದು" ಎಂದು ಹೇಳುವುದಾಗಿ ಕಂಡರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನನಗೆ ಓದಲು ಗೊತ್ತಿಲ್ಲ." ಆಗ ಆ ದೇವದೂತ ಎರಡನೆಯ ಸಾರಿ ಮತ್ತು ಮೂರನೆಯ ಸಾರಿ ಹಾಗೆಯೇ ಹೇಳಿ ಕೊನೆಗೆ ಹಝ್ರತ್ ಪೈಗಂಬರರು(ಸ) ಈ ಕೆಳಗಿನ ವಚನಗಳನ್ನು ಉಚ್ಚರಿಸುವಂತೆ ಮಾಡಲಾಯಿತು:

**"ನೀನು ಓದು (ಸರ್ವ ವಸ್ತುಗಳನ್ನೂ) ಸೃಷ್ಟಿಸಿದ ನಿನ್ನ ಪ್ರಭುವಿನ ನಾಮದಿಂದ. ಅವನು ಮನುಷ್ಯನನ್ನು (ಗರ್ಭಕೋಶದೊಳಗೆ) ಅಂಟಿಕೊಳ್ಳುವ ವಸ್ತುವಿನಿಂದ ಸೃಷ್ಟಿಸಿದನು. ನೀನು ಓದು. ನಿನ್ನ ಪ್ರಭು ಅತ್ಯಂತ ಗೌರವಾನ್ವಿತನು. ಅವನೇ ಲೇಖನಿಯಿಂದ ವಿದ್ಯೆಯನ್ನು ಕಲಿಸಿದನು. ಅವನು ಮನುಷ್ಯನಿಗೆ, ಅವನಿಗೆ ತಿಳಿದಿರದುದನ್ನು ಕಲಿಸಿದನು."** (ಪವಿತ್ರ ಖುರ್‌ಆನ್ 96 : 2–6)

ಇದು ಹಝ್ರತ್ ಪೈಗಂಬರರಿಗೆ(ಸ) ಅಲ್ಲಾಹನಿಂದ ಅವತೀರ್ಣವಾದ ಪವಿತ್ರ ಖುರ್‌ಆನಿನ ವಚನಗಳ ಪ್ರಥಮ ಸಂದೇಶವಾಗಿತ್ತು. ಈ ವಚನಗಳ ಭಾವಾರ್ಥ ಹೀಗೆ:

"ನಿನ್ನನ್ನು ಮತ್ತು ಎಲ್ಲಾ ಸೃಷ್ಟಿಗಳನ್ನು ಸೃಷ್ಟಿಸಿದ ನಿನ್ನ ಸೃಷ್ಟಿಕರ್ತನ ನಾಮದಿಂದ ದೇವಸಂದೇಶವನ್ನು ಲೋಕಕ್ಕೆ ಓದಿ ಹೇಳು. ಅಲ್ಲಾಹನು ಮನುಷ್ಯನನ್ನು ಹೇಗೆ ಸೃಷ್ಟಿಸಿರುವನು ಎಂದರೆ ಅವನ (ಮನುಷ್ಯನ) ಹೃದಯದಲ್ಲಿ ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಮೇಲಿನ ಪ್ರೀತಿಯ ಬೀಜವನ್ನು ಬಿತ್ತಲಾಗಿದೆ. ನೀನು ಸಕಲ ಲೋಕಗಳಿಗೆ ಈ ಸಂದೇಶವನ್ನು ನೀಡು. ಎಲ್ಲರಿಗಿಂತಲೂ ಹೆಚ್ಚು ಗೌರವಾನ್ವಿತನಾದ ಅಲ್ಲಾಹನು ನಿನ್ನ ಜೊತೆಗಿರುವನು. ಅವನೇ ವಿಶ್ವಕ್ಕೆ ವಿದ್ಯೆ ಕಲಿಸಲು ಲೇಖನಿಯನ್ನು ಉಂಟುಮಾಡಿದನು. ಮನುಷ್ಯನು ಇದರ ಮೊದಲು ಕಲಿತಿರದುದನ್ನು ಅವನಿಗೆ ಕಲಿಸಲು ಅವನು ಸನ್ನದ್ಧನಾದನು."

ಪವಿತ್ರ ಖುರ್‌ಆನಿನ ಈ ಕೆಲವು ವಚನಗಳು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಅವತೀರ್ಣವಾಗಲಿದ್ದ ಎಲ್ಲಾ ಉಪದೇಶಗಳ ಸಾರಾಂಶವನ್ನೊಳಗೊಂಡಿದೆ. ಪ್ರಪಂಚದ ಸುಧಾರಣೆಯ ಒಂದು ಮಹತ್ತಾದ ಬೀಜ ಈ ವಚನಗಳಲ್ಲಿ ಅಡಕವಾಗಿದೆ. ಇವುಗಳ ವ್ಯಾಖ್ಯಾನ ಪವಿತ್ರ ಖುರ್‌ಆನಿನ ವ್ಯಾಖ್ಯಾನ ಗ್ರಂಥಗಳಲ್ಲಿ ವಿವರಿಸಲಾಗಿದೆ.[5]

ಈ ವಚನಗಳ ಬಗ್ಗೆ ಇಲ್ಲಿ ಹೇಳಿದುದು ಈ ವಚನಗಳು ಅವತೀರ್ಣವಾದುದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದ ಒಂದು ಮಹತ್ವಪೂರ್ಣವಾದ ಸಂಭವವಾದುದರಿಂದಾಗಿದೆ. ಈ ವಚನಗಳು ಪವಿತ್ರ ಖುರ್‌ಆನಿನ ಕಟ್ಟಡದ ಅಸ್ತಿಭಾರದ ರೂಪದಲ್ಲಿದೆ. ಹಝ್ರತ್ ಪೈಗಂಬರರಿಗೆ(ಸ) ಈ ವಚನಗಳು ಅವತೀರ್ಣಗೊಂಡಾಗ ಅವರಿಗೆ ಭಯವುಂಟಾಯಿತು. "ನಾನು ಇಷ್ಟು ಮಹತ್ವಪೂರ್ಣವಾದ ಜವಾಬ್ದಾರಿಯನ್ನು ನೆರವೇರಿಸಬಲ್ಲೆನೋ" ಎಂದು ಅವರು ಭಯವಿಹ್ವಲರಾದರು. ಬೇರೆ ಯಾರಾದರೂ ಅವರ ಸ್ಥಾನದಲ್ಲಿದ್ದರೆ ದುರಹಂಕಾರದಿಂದಲೂ ಹೆಮ್ಮೆಯಿಂದಲೂ ಆ ವ್ಯಕ್ತಿಯ ತಲೆತಿರುಗಿ ಹೋಗುತ್ತಿತ್ತು. "ಸರ್ವಶಕ್ತನು ನನಗೊಂದು ಮಹತ್ತಾದ ಕೆಲಸವನ್ನು ವಹಿಸಿ ಕೊಟ್ಟಿರುವನು" ಎಂದು ಹೆಮ್ಮೆಯಿಂದ ಬೀಗುತ್ತಿದ್ದನು. ಆದರೆ ಹಝ್ರತ್ ಪೈಗಂಬರರಿಗೆ(ಸ) ಕೆಲಸ ಮಾಡಲು ತಿಳಿದಿತ್ತಲ್ಲದೆ ತನ್ನ ಕೆಲಸದ ಬಗ್ಗೆ ಹೆಮ್ಮೆಯಿಂದ

5. ತಫ್‌ಸೀರ್ ಕಬೀರ್ ನೋಡಿರಿ.



ವರ್ತಿಸಲು ಅವರಿಗೆ ತಿಳಿದಿರಲಿಲ್ಲ.

ಹಝ್ರತ್ ಪೈಗಂಬರರಿಗೆ(ಸ) ಪವಿತ್ರ ಖುರ್‌ಆನಿನ, ಮೇಲೆ ವಿವರಿಸಿದ ವಚನಗಳು ಅವತೀರ್ಣಗೊಂಡ ನಂತರ ಹಝ್ರತ್ ಖದೀಜರ(ರ) ಬಳಿಗೆ ಬಂದಾಗ ಅವರ ಮುಖಾರವಿಂದದಲ್ಲಿ ಗಾಬರಿ ಕಂಡು ಬರುತ್ತಿತ್ತು

ಹಝ್ರತ್ ಖದೀಜ(ರ) ಅವರೊಂದಿಗೆ "ನಿಮಗೇನಾಗಿದೆ?" ಎಂದು ವಿಚಾರಿಸಿದರು. ಹಝ್ರತ್ ಪೈಗಂಬರ್(ಸ) ಎಲ್ಲಾ ಸಂಭವಗಳನ್ನು ಅವರಿಗೆ ವಿವರಿಸಿ, "ನನ್ನಂತಹ ಬಲಹೀನ ಮನುಷ್ಯನು ಈ ಭಾರವನ್ನು ಹೇಗೆ ಹೊರಬಲ್ಲನು?" ಎಂದು ಹೇಳಿದರು.

ಆಗ ಹಝ್ರತ್ ಖದೀಜ(ರ) ಹೇಳಿದರು: "ಅಲ್ಲಾಹನಾಣೆ, ಅಲ್ಲಾಹನು ನಿಮಗೆ ಈ ವಚನಗಳನ್ನು ಅವತೀರ್ಣಗೊಳಿಸಿದುದು ನೀವು ನಿಮ್ಮ ಉದ್ದೇಶಲಕ್ಷ್ಯವನ್ನು ತಲುಪದೆ ನಿರಾಸೆ ಹೊಂದಿ ಅಪಮಾನಿತರಾಗಲಿಕ್ಕಾಗಿ ಅಲ್ಲ. ಅಲ್ಲಾಹನು ನಿಮ್ಮನ್ನು ಎಂದೂ ಕೈ ಬಿಡಲಾರನು. ಏಕೆಂದರೆ ನೀವು ನಿಮ್ಮ ಸಂಬಂಧಿಕರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವಿರಿ. ನೀವು ನಿರಾಶ್ರಿತರಾದ, ನಿಸ್ಸಹಾಯಕರಾದ ಜನರ ಭಾರವನ್ನು ಹೊರುವವರಾಗಿದ್ದೀರಿ. ಸಮುದಾಯದಿಂದ ಅಳಿಸಿ ಹೋಗುತ್ತಿರುವ ಸುಸ್ವಭಾವಗಳು ನಿಮ್ಮ ಮೂಲಕ ಪುನಃ ಸ್ಥಾಪಿಸಲ್ಪಡುತ್ತಿವೆ. ನೀವು ಅತಿಥಿಗಳನ್ನು ಸತ್ಕರಿಸುತ್ತೀರಿ. ಆಪತ್ತುಗಳು ಬಂದಾಗ ನೀವು ಜನರಿಗೆ ಸಹಾಯ ಮಾಡುತ್ತೀರಿ. ಇಂತಹ ವ್ಯಕ್ತಿಯನ್ನು ಅಲ್ಲಾಹನು ಕಷ್ಟಕ್ಕೆ ಗುರಿಪಡಿಸುವನೋ?"[6]

ಹಝ್ರತ್ ಖದೀಜ(ರ) ಹಝ್ರತ್ ಪೈಗಂಬರರನ್ನು(ಸ) ತಮ್ಮ ಚಿಕ್ಕಪ್ಪನ ಮಗನಾದ ವರಖ ಬಿನ್ ನೌಫಲ್ ಬಳಿಗೆ ಕರೆದುಕೊಂಡು ಹೋದರು. ಅವರು ಕ್ರೈಸ್ತ ಮತಾವಲಂಬಿಯಾಗಿದ್ದರು. ಅವರಿಗೆ ನಡೆದ ಸಂಭವ ವಿವರಿಸಿದಾಗ ಅವರು ಹೇಳಿದರು: "ಹಝ್ರತ್ ಮೂಸಾರ(ಅ) ಬಳಿಗೆ ಇಳಿದು ಬಂದ ದೇವದೂತರೇ ನಿಮ್ಮ ಬಳಿಗೆ ಸಹ ಇಳಿದು ಬಂದಿರುವರು."[7]

ವರಖ ಬಿನ್ ನೌಫಲ್ ಬೈಬಲಿನ ಹಳೆ ಒಡಂಬಡಿಕೆಯ ಧರ್ಮೋಪದೇಶ ಕಾಂಡದ ಅಧ್ಯಾಯ 18 ವಚನ 18ರಲ್ಲಿ ಉಲ್ಲೇಖಿತವಾದ ಭವಿಷ್ಯವಾಣಿಯ ಕಡೆಗೆ ಸೂಚಿಸಿ ಹಾಗೆ ಹೇಳಿದ್ದರು.[8]

ಮೇಲೆ ವಿವರಿಸಿದ ಸಂಭವಗಳು ಹಝ್ರತ್ ಪೈಗಂಬರರಿಂದ(ಸ) ಬಂಧ ವಿಮೋಚನೆಗೊಂಡ, ಅಂದಾಜು 25–30 ವರ್ಷ ಪ್ರಾಯದ ಝೈದ್‌ರಿಗೆ(ರ) ಮತ್ತು

6. ಬುಖಾರಿ ಬಾಬ್ ಬದವುಲ್ ವಹೀ. 7. ಬುಖಾರಿ ಬಾಬ್ ಬದವುಲ್ ವಹೀ.

8. ಬೈಬಲಿನಲ್ಲಿ ಹೀಗೆ ಬರೆದಿದೆ: "ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು." (ಧರ್ಮೋಪದೇಶ ಕಾಂಡ 18:18)

ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪನವರ ಪುತ್ರ, ಅಂದಾಜು ಹನ್ನೊಂದು ವರ್ಷ ಪ್ರಾಯದ ಹಝ್ರತ್ ಅಲಿಯವರಿಗೆ(ರ) ತಲುಪಿದಾಗ ಅವರಿಬ್ಬರೂ ಕೂಡಲೇ ಹಝ್ರತ್ ಪೈಗಂಬರರಿಗೆ(ಸ) ನಿಷ್ಠೆಯನ್ನು ಸೂಚಿಸಿ ಅವರ ಶಿಷ್ಯರಾದರು.

## ಹಝ್ರತ್ ಅಬೂಬಕರ್(ರ) ಶಿಷ್ಯರಾದುದು

ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರ(ಸ) ಬಾಲ್ಯಕಾಲದಿಂದಲೇ ಸ್ನೇಹಿತರಾಗಿದ್ದರು. ಮೇಲೆ ವಿವರಿಸಿದ ಸಂಭವದ ಕಾಲದಲ್ಲಿ ಅವರು ನಗರದಿಂದ ಹೊರಗೆ ಹೋಗಿದ್ದರು. ಅವರು ನಗರವನ್ನು ಪ್ರವೇಶಿಸಿದ ಕೂಡಲೆ ಅವರಿಗೆ, "ನಿನ್ನ ಸ್ನೇಹಿತನು ಹುಚ್ಚನಾಗಿರುವನು. ಆಕಾಶದಿಂದ ದೇವದೂತರು ಇಳಿದು ಬಂದು ತನ್ನೊಂದಿಗೆ ಮಾತನಾಡುತ್ತಿರುವರು ಎಂದು ಅವನು ಹೇಳುತ್ತಾನೆ" ಎಂದು ಹೇಳುವ ಜನರ ಮಾತುಗಳು ಕೇಳಿಸಿದುವು. ಹಝ್ರತ್ ಅಬೂಬಕರ್(ರ) ನೇರವಾಗಿ ಹಝ್ರತ್ ಪೈಗಂಬರರ(ಸ) ಮನೆಗೆ ಹೋಗಿ ಬಾಗಿಲು ತಟ್ಟಿದಾಗ ಹಝ್ರತ್ ಪೈಗಂಬರ್(ಸ) ಬಾಗಿಲು ತೆರೆದಾಗ ಹಝ್ರತ್ ಅಬೂಬಕರ್(ರ) ವಾಸ್ತವಿಕ ಸಂಗತಿ ಏನೆಂದು ಕೇಳಿದರು. ಹಝ್ರತ್ ಪೈಗಂಬರ್(ಸ) ತನ್ನ ಸ್ನೇಹಿತ ತಪ್ಪುದಾರಿ ಸ್ವೀಕರಿಸದಿರಲಿಯೆಂದು ಸ್ವಲ್ಪ ಹೆಚ್ಚಿಗೆ ವಿವರಣೆ ನೀಡಬಯಸಿದ್ದರು. ಆಗ ಹಝ್ರತ್ ಅಬೂಬಕರ್(ರ) ಅವರನ್ನು ತಡೆದು ಹೇಳಿದರು: "ನನಗೆ ಕೇವಲ ಇಷ್ಟು ಮಾತ್ರ ಉತ್ತರ ನೀಡಿರಿ. ನಿಮ್ಮ ಸಮೀಪಕ್ಕೆ ಅಲ್ಲಾಹನ ದೂತರು ಬಂದು ನಿಮ್ಮೊಂದಿಗೆ ಮಾತನಾಡಿರುವರೆಂದು ನೀವು ಘೋಷಿಸಿರುವಿರೋ?" ಆಗ ಪುನಃ ಹಝ್ರತ್ ಪೈಗಂಬರ್(ಸ) ಸವಿಸ್ತಾರವಾಗಿ ಎಲ್ಲವನ್ನೂ ವಿವರಿಸಲು ಉದ್ದೇಶಿಸಿದಾಗ, ಹಝ್ರತ್ ಅಬೂಬಕರ್(ರ) ಅಲ್ಲಾಹನ ಪ್ರಮಾಣ ಮಾಡಿ ಹೇಳಿದರು: "ಕೇವಲ ನನ್ನ ಪ್ರಶ್ನೆಗೆ ಮಾತ್ರ ಉತ್ತರ ನೀಡಿರಿ, ಬೇರೆ ಏನನ್ನೂ ಹೇಳಬೇಡಿರಿ." ಆಗ ಹಝ್ರತ್ ಪೈಗಂಬರ್(ಸ) ತಾನು ಹಾಗೆ ಹೇಳಿದುದಾಗಿ ಒಪ್ಪಿಕೊಂಡರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: "ನೀವು ಸಾಕ್ಷಿಯಾಗಿರಿ. ನಾನು ನಿಮ್ಮನ್ನು ನಂಬಿರುವೆನು." ಅನಂತರ ಹಝ್ರತ್ ಅಬೂಬಕರ್(ರ) ಹೀಗೆಂದರು: "ನೀವು ಸಾಕ್ಷ್ಯಾಧಾರಗಳನ್ನು ನೀಡಿ ನನ್ನ ವಿಶ್ವಾಸವನ್ನು ಬಲಹೀನಪಡಿಸಲು ತೊಡಗಿದಿರಿ. ಆದರೆ ಯಾರು ನಿಮ್ಮ ಜೀವಿತವನ್ನು ನೋಡಿರುವನೋ ಅವನಿಗೆ ನಿಮ್ಮ ಸತ್ಯಸಂಧತೆಯ ಬಗ್ಗೆ ಬೇರೆ ಯಾವುದಾದರೂ ಸಾಕ್ಷ್ಯಾಧಾರದ ಅವಶ್ಯಕತೆ ಇದೆಯೇ?"

## ಸತ್ಯವಿಶ್ವಾಸಿಗಳ ಕಿರುಸಂಘ

ಸತ್ಯವಿಶ್ವಾಸಿಗಳ ಒಂದು ಕಿರು ಸಂಘದ ಮೂಲಕ ಇಸ್ಲಾಮ್ ಧರ್ಮದ ಅಸ್ತಿಭಾರವನ್ನು ಹಾಕಲಾಯಿತು. ವೃದ್ಧಾಪ್ಯವನ್ನು ತಲುಪಲಿದ್ದ ಒಬ್ಬ ಮಹಿಳೆ, ಹನ್ನೊಂದು ವರ್ಷ ಪ್ರಾಯದ ಒಬ್ಬ ಬಾಲಕ, ಗುಲಾಮಗಿರಿಯಿಂದ ವಿಮೋಚಿಸಲಾದ, ಆದರೆ ರಕ್ತ ಸಂಬಂಧಿಗಳಾಗಲೀ ಬೆಂಬಲಿಗರಾಗಲೀ ಇಲ್ಲದೆ ಅನ್ಯರೊಂದಿಗೆ ಜೀವಿಸುತ್ತಿದ್ದ ಒಬ್ಬ ಯುವಕ, ಸ್ನೇಹಿತನಾದ ಇನ್ನೊಬ್ಬ ತರುಣ ಮತ್ತು ದೇವಸಂದೇಶ ಪಡೆದಿರುವುದಾಗಿ ವಾದಿಸುವ ಒಬ್ಬ ಪೈಗಂಬರ್ (ಪ್ರವಾದಿ) ಈ ಸಂಘದ



ಸದಸ್ಯರಾಗಿದ್ದರು. ಈ ಚಿಕ್ಕ ಸಂಘ ಪ್ರಪಂಚದಲ್ಲಿ ಸತ್ಯದ ಪ್ರಕಾಶವನ್ನು ಹಬ್ಬಿಸಲಿಕ್ಕಾಗಿ ಅವಿಶ್ವಾಸ ಮತ್ತು ಅಧರ್ಮದ ವಿರುದ್ಧದ ಹೋರಾಟದ ಮೈದಾನದ ಕಡೆಗೆ ಪಯಣ ಹೊರಟಿತು. ಜನರು ಇವರ ಬಗ್ಗೆ ತಿಳಿದಾಗ ನಕ್ಕು ಪರಿಹಾಸ ಮಾಡಿದರು. ಪರಸ್ಪರ ಕಣ್ಣಿನ ಮೂಲಕ ಸಂಜ್ಞೆಗಳನ್ನು ಮಾಡಿದರು. ಪರಸ್ಪರ ನೋಟಗಳ ಮೂಲಕ, "ಈ ಜನರು ಹುಚ್ಚರಾಗಿರುವರು. ಅವರ ಮಾತುಗಳಿಂದ ಆಶ್ಚರ್ಯಚಕಿತರಾಗಬೇಡಿರಿ, ಅವರ ಮಾತುಗಳನ್ನು ಆಲಿಸಿ ಅವುಗಳಿಂದ ರಸಾಸ್ವಾದನೆ ಮಾಡಿರಿ" ಎಂದು ಸೂಚಿಸಿದರು.

ಆದರೆ ಸತ್ಯವು ತನ್ನ ಪೂರ್ಣ ಮಹತ್ವದೊಂದಿಗೆ ಪ್ರತ್ಯಕ್ಷವಾಗಲು ತೊಡಗಿತು. ಯೆಶಾಯ ಪ್ರವಾದಿಯ ಭವಿಷ್ಯವಾಣಿಗಳ ಪ್ರಕಾರ "ಆಜ್ಞೆಯ ಮೇಲೆ ಆಜ್ಞೆ; ಆಜ್ಞೆಯ ಮೇಲೆ ಆಜ್ಞೆ; ಸೂತ್ರದ ಮೇಲೆ ಸೂತ್ರ: ಸೂತ್ರದ ಮೇಲೆಸೂತ್ರ;"[9] ಪ್ರಕಟವಾಗುತ್ತಾ ಹೋಯಿತು. "ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ" ಮತ್ತು ಅರಬ್ ದೇಶವಾಸಿಗಳು ಅದಕ್ಕಿಂತ ಮೊದಲು ತಿಳಿದಿರದ "ಅಪರಿಚಿತ ಭಾಷೆಯಲ್ಲಿ" ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೂಲಕ ಅರಬ್ ಜನತೆಯೊಂದಿಗೆ ಮಾತನಾಡಲು ತೊಡಗಿದನು. ಯುವಕರ ಹೃದಯಗಳು ಕಂಪಿಸಲು ತೊಡಗಿದುವು. ಸತ್ಯಾನ್ವೇಷಿಗಳ ದೇಹಗಳಲ್ಲಿ ನವೋತ್ಸಾಹ ಉಂಟಾಯಿತು. ಅವರ ನಗು ಮತ್ತು ಪರಿಹಾಸದ ಶಬ್ದಗಳ ಸ್ಥಾನದಲ್ಲಿ ಮೆಚ್ಚುಗೆಯ ಮತ್ತು ಪ್ರಶಂಸೆಯ ಪದಗಳು ಮೆಲ್ಲಮೆಲ್ಲನೆ ಹೆಚ್ಚಾಗಲು ತೊಡಗಿದುವು. ಗುಲಾಮರ, ತರುಣರ, ಮತ್ತು ದೌರ್ಜನ್ಯಪೀಡಿತರಾದ ಸ್ತ್ರೀಯರ ಒಂದು ಗುಂಪು ಹಝ್ರತ್ ಪೈಗಂಬರರ(ಸ) ಸುತ್ತುಮುತ್ತು ಜಮಾಯಿಸಲು ತೊಡಗಿತು.

ಹಝ್ರತ್ ಪೈಗಂಬರರ(ಸ) ಧ್ವನಿಯಲ್ಲಿ ಸ್ತ್ರೀಯರು ತಮ್ಮ ಹಕ್ಕುಗಳ ಸಂರಕ್ಷಣೆಯನ್ನು ಕಾಣುತ್ತಿದ್ದರು. ಗುಲಾಮರು ತಮ್ಮ ಸ್ವಾತಂತ್ರ್ಯದ ಪ್ರಕಟಣೆಯನ್ನು ಆಲಿಸುತ್ತಿದ್ದರು. ತರುಣರು ದೊಡ್ಡ ದೊಡ್ಡ ಆಶೆಗಳ ಮತ್ತು ಅಭಿವೃದ್ಧಿಯ ಮಾರ್ಗಗಳು ತೆರೆಯುತ್ತಿರುವುದಾಗಿ ಮನವರಿಕೆ ಮಾಡಿಕೊಳ್ಳುತ್ತಿದ್ದರು.

## ಮಕ್ಕ ನಗರದ ಮುಂದಾಳುಗಳ ವಿರೋಧ

ನಗು ಮತ್ತು ಪರಿಹಾಸದ ಮಧ್ಯೆ ಪ್ರಶಂಸೆ ಮತ್ತು ಸ್ತುತಿಯ ಸ್ವರಗಳು ಸಹ ಮೇಲಕ್ಕೇಳಲು ಪ್ರಾರಂಭಿಸಿದಾಗ ಮಕ್ಕ ನಗರದ ಮುಂದಾಳುಗಳು ಗಾಬರಿಗೊಂಡರು. ಅಧಿಕಾರಿಗಳ ಹೃದಯದಲ್ಲಿ ಭಯವುಂಟಾಗಲು ತೊಡಗಿತು. ಅವರು ಒಟ್ಟಿಗೆ ಸೇರಿದರು, ಸಮಾಲೋಚನೆ ನಡೆಸಿದರು ಮತ್ತು ತಂತ್ರೋಪಾಯಗಳನ್ನು ಕೈಗೊಳ್ಳಲು ನಿರ್ಧರಿಸಿದರು. ಅವರು ನಗು ಮತ್ತು ಪರಿಹಾಸದ ಸ್ಥಾನದಲ್ಲಿ ದೌರ್ಜನ್ಯ, ಅನ್ಯಾಯ, ಕ್ರೂರವರ್ತನೆ ಮತ್ತು ಸಂಬಂಧ ವಿಚ್ಛೇದನೆಯ ಪರಿಹಾರೋಪಾಯಗಳನ್ನು ಕೈಗೊಳ್ಳಲು ತೀರ್ಮಾನಿಸಿದರು ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರಲು

9. ಯೆಶಾಯ 28:13

ಪ್ರಾರಂಭಿಸಿದರು. ಮಕ್ಕ ನಗರದ ನಿವಾಸಿಗಳು ಇಸ್ಲಾಮಿನ ವಿರುದ್ಧ ಕಾರ್ಯೋನ್ಮುಖರಾಗಲು ನಿರ್ಧರಿಸಿದರು. ಆಗ ಅವರ ದೃಷ್ಟಿಯಲ್ಲಿ "ಹುಚ್ಚು ವಾದ"ವಾಗಿದ್ದುದು ಈಗ ಒಂದು ಅಭಿವೃದ್ಧಿಶೀಲ ವಾಸ್ತವಿಕತೆಯಾಗಿ ಕಂಡು ಬಂದಿತು. ಮಕ್ಕದ ರಾಜಕೀಯ ವ್ಯವಸ್ಥೆಗೆ ಅಪಾಯ, ಮಕ್ಕದ ಧರ್ಮಕ್ಕೆ ಅಪಾಯ, ಮಕ್ಕದ ನಾಗರಿಕ ವ್ಯವಸ್ಥೆಗೆ ಅಪಾಯ ಮತ್ತು ಮಕ್ಕದ ಸಂಪ್ರದಾಯಗಳಿಗೆ ಹಾಗೂ ಕಟ್ಟುಕಟ್ಟಳೆಗಳಿಗೆ ಅಪಾಯ ಅವರಿಗೆ ಕಾಣಿಸುತ್ತಿತ್ತು. ಇಸ್ಲಾಮ್ ಒಂದು ಹೊಸ ಆಕಾಶವನ್ನು ಮತ್ತು ಹೊಸ ಭೂಮಿಯನ್ನು ಸೃಷ್ಟಿಸುತ್ತಿರುವುದಾಗಿ ಅವರಿಗೆ ಕಾಣಿಸಿತು. ಆ ಹೊಸ ಆಕಾಶ ಮತ್ತು ಹೊಸ ಭೂಮಿಯು ಅಸ್ತಿತ್ವಕ್ಕೆ ಬರುತ್ತಿರುವಾಗ ಅರಬ್ ದೇಶದ ಹಳೆಯ ಆಕಾಶ ಮತ್ತು ಹಳೆಯ ಭೂಮಿ ಬಾಕಿಯಾಗಿ ಉಳಿಯುವುದು ಸಾಧ್ಯವಿರಲಿಲ್ಲ. ಈಗ ಇಸ್ಲಾಮ್ ಮಕ್ಕ ನಗರದ ನಿವಾಸಿಗಳಿಗೆ ಕೇವಲ ಪರಿಹಾಸಯೋಗ್ಯ ಸಮಸ್ಯೆಯಾಗಿ ಉಳಿಯಲಿಲ್ಲ. ಇದು ಈಗ ಜೀವಿತ ಮತ್ತು ಮರಣದ ಸವಾಲಾಗಿ ಪರಿಣಮಿಸಿತು. ಹಿಂದಿನ ಪ್ರವಾದಿಗಳ ವಿರೋಧಿಗಳು ಆಯಾಕಾಲದ ಪ್ರವಾದಿಯ ಪಂಥಾಹ್ವಾನಗಳನ್ನು ಎದುರಿಸುತ್ತಾ ಇದ್ದ ಹಾಗೆ ಅವರು ಇಸ್ಲಾಮಿನ ಪಂಥಾಹ್ವಾನವನ್ನೂ ಎದುರಿಸಿದರು. ಅವರು ಸಾಕ್ಷ್ಯಾಧಾರಕ್ಕೆ ಉತ್ತರವಾಗಿ ಸಾಕ್ಷ್ಯಾಧಾರಗಳನ್ನು ನೀಡುವುದಕ್ಕೆ ಪ್ರತಿಯಾಗಿ ಖಡ್ಗ ಮತ್ತು ಬಾಣಗಳ ಮೂಲಕ ಉತ್ತರ ನೀಡಲು ಸನ್ನದ್ಧರಾದರು. ಇಸ್ಲಾಮ್‌ಧರ್ಮದ ಶುಭಾಶಯಗಳಿಗೆ ಉತ್ತರವಾಗಿ, ಅಂತಹದೇ ಉನ್ನತ ಸ್ವಭಾವಗುಣಗಳ ಮೂಲಕವಲ್ಲ, ಬದಲಾಗಿ ಬೈಗಳು ಮತ್ತು ಕಠೋರವಾಕ್ಯಗಳಿಂದ ಉತ್ತರ ನೀಡಲು ತೀರ್ಮಾನಿಸಿದರು. ಹಿಂದಿನ ಕಾಲದ ಹಾಗೆ ಇನ್ನೊಮ್ಮೆ ವಿಶ್ವಾಸ ಮತ್ತು ಅವಿಶ್ವಾಸದ ನಡುವೆ ಯುದ್ಧ ಪ್ರಾರಂಭವಾಯಿತು. ಶೈತಾನನ ಸೇನಾಬಲದವರು ಇನ್ನೊಂದು ಸಾರಿ ದೇವದೂತರನ್ನು ಆಕ್ರಮಿಸಲು ತೊಡಗಿದರು. ಅಲ್ಪಸಂಖ್ಯಾತರಾದ ಸತ್ಯವಿಶ್ವಾಸಿಗಳು ಮಕ್ಕದ ನಿವಾಸಿಗಳ ಅಕ್ರಮ ವರ್ತನೆಗಳನ್ನು ತಡೆಯಲು ಅಸಮರ್ಥರಾದರು. ಸ್ತ್ರೀಯರು ಬಹಳ ಅಪಮಾನಕರವಾಗಿ ವಿವಿಧ ರೀತಿಗಳಲ್ಲಿ ಕೊಲ್ಲಲ್ಪಟ್ಟರು. ಪುರುಷರ ಕಾಲುಗಳನ್ನು ಕಡಿದು ಹಾಕಿ ಕೊಂದರು. ಗುಲಾಮರನ್ನು ಬಿಸಿಲಿನಲ್ಲಿ ಬೆಂದ ಮರಳಿನಲ್ಲಿ ಮತ್ತು ಒರಟಾದ ಕಲ್ಲುಗಳ ಮೇಲೆ ಎಳೆಯಲಾಯಿತು. ಅಂತಹ ಜನರ ಚರ್ಮಗಳು ಮಾನವರ ಚರ್ಮದ ರೂಪವನ್ನು ಕಳೆದುಕೊಂಡು ಮೃಗಗಳ ಚರ್ಮದಂತೆ ಆದುವು. ಒಂದು ಕಾಲಾವಧಿಯ ನಂತರ ಇಸ್ಲಾಮಿನ ವಿಜಯದ ಕಾಲದಲ್ಲಿ ಇಸ್ಲಾಮಿನ ಪತಾಕೆ ಪೂರ್ವದಲ್ಲಿಯೂ ಪಶ್ಚಿಮದಲ್ಲಿಯೂ ಹಾರಾಡುತ್ತಿದ್ದಾಗ, ಆದ್ಯಕಾಲದಲ್ಲಿಯೇ ಇಸ್ಲಾಮಿಗೆ ಸೇರಿದ ನವಮುಸ್ಲಿಮ್ ಗುಲಾಮರಾಗಿದ್ದ ಹಝ್ರತ್ ಖಬಾಬ್(ರ) ಎಂಬವರ ಬೆನ್ನು ಒಮ್ಮೆ ನಗ್ನವಾದಾಗ ಅವರ ಸಂಗಡಿಗರು ಅವರ ಬೆನ್ನನ್ನು ನೋಡಿದಾಗ ಅವರ ಬೆನ್ನಿನ ಚರ್ಮ ಮನುಷ್ಯರ ಚರ್ಮದಂತಿರದೆ ಮೃಗಗಳ ಚರ್ಮದ ಹಾಗೆ ಇರುವುದನ್ನು ಕಂಡು ಗಾಬರಿಗೊಂಡು, "ನಿಮಗೆ ಯಾವ ರೋಗ ತಗಲಿದೆ?' ಎಂದು ಪ್ರಶ್ನಿಸಿದಾಗ ಅವರು ನಕ್ಕು ಹೇಳಿದರು: "ನನಗೆ ಯಾವುದೇ ರೋಗವಿಲ್ಲ, ಇದೊಂದು ಸ್ಮಾರಕವಾಗಿದೆ. ನವಮುಸ್ಲಿಮರಾದ



ಗುಲಾಮರನ್ನು ಮಕ್ಕದ ಜನರು ನಗರದ ಮಾರ್ಗಗಳಲ್ಲಿ ಕಠಿಣ ಮತ್ತು ಒರಟು ಕಲ್ಲುಗಳ ಮೇಲೆ ಎಳೆದುಕೊಂಡು ಹೋಗುತ್ತಿದ್ದರು. ಅವರು ದೌರ್ಜನ್ಯವನ್ನು ಪುನರಾವರ್ತಿಸುತ್ತಿದ್ದರು. ಇದರ ಫಲಸ್ವರೂಪವಾಗಿ ನನ್ನ ಬೆನ್ನಿನ ಚರ್ಮ ಈ ರೂಪವನ್ನು ಹೊಂದಿದೆ."

## ಸತ್ಯವಿಶ್ವಾಸಿಗಳಾದ ಗುಲಾಮರ ಮೇಲೆ ಮಕ್ಕ ನಗರದ ಅವಿಶ್ವಾಸಿಗಳ ದೌರ್ಜನ್ಯಗಳ ಪರಂಪರೆ

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೇಲೆ ವಿಶ್ವಾಸ ಹೊಂದಿದ ಗುಲಾಮರು ವಿವಿಧ ಜನಾಂಗಗಳಿಗೆ ಸೇರಿದವರಾಗಿದ್ದರು. ಅವರಲ್ಲಿ ಹಝ್ರತ್ ಬಿಲಾಲ್(ರ) ರಂತಹ ಇತಿಯೋಪ್ಯದವರೂ ಇದ್ದರು; ಹಝ್ರತ್ ಸಹೀಬ್(ರ)ರಂತಹ ಪೌರ್ವಾತ್ಯ ರೋಮನ್ ಸಾಮ್ರಾಜ್ಯದ (Eastern Roman Empire) ನಿವಾಸಿಗಳೂ ಇದ್ದರು. ಅವರಲ್ಲಿ ಕೆಲವರು ಹಝ್ರತ್ ಜಬೀರ್ ಮತ್ತು ಹಝ್ರತ್ ಸಹೀಬ್‌ರಂತಹವರು ಹಿಂದೆ ಕ್ರೈಸ್ತರಾಗಿದ್ದರು. ಹಝ್ರತ್ ಬಿಲಾಲ್(ರ) ಮತ್ತು ಹಝ್ರತ್ ಅಮ್ಮಾರ್(ರ) ಹಾಗಿರುವವರು ಹಿಂದೆ ಬಹುದೈವ ವಿಶ್ವಾಸಿಗಳಾಗಿದ್ದರು.

ಹಝ್ರತ್ ಬಿಲಾಲ್‌ರನ್ನು ಅವರ ಮಾಲಿಕನು ಕಠಿಣ ಬಿಸಿಲಿನಲ್ಲಿ ಬೆಚ್ಚಗಾದ ಮರಳಿನಲ್ಲಿ ಮಲಗಿಸಿ ಅವರ ಮೇಲೆ ಕಲ್ಲುಗಳನ್ನು ಇಡುತ್ತಿದ್ದನು ಅಥವಾ ಅವರ ಎದೆಯ ಮೇಲೆ ಹಾರಲು ಯುವಕರನ್ನು ಏರ್ಪಡಿಸುತ್ತಿದ್ದನು.

ನೀಗ್ರೋ ವಂಶದ ಹಝ್ರತ್ ಬಿಲಾಲ್, ಉಮಯ್ಯ ಬಿನ್ ಖಲಫ್ ಎಂಬ ಶ್ರೀಮಂತನ ಗುಲಾಮರಾಗಿದ್ದರು. ಉಮಯ್ಯ ಅವರನ್ನು ಬೇಸಗೆ ಕಾಲದಲ್ಲಿ ಮಧ್ಯಾಹ್ನದ ಹೊತ್ತು ಮಕ್ಕದಿಂದ ಹೊರಗೆ ಕರೆದುಕೊಂಡು ಹೋಗಿ ಬಿಸಿಲಿನ ಬೇಗೆಯಿಂದ ಬೆಚ್ಚಗಾದ ಮರಳಿನಲ್ಲಿ ನಗ್ನಗೊಳಿಸಿ ಮಲಗಿಸುತ್ತಿದ್ದನು. ದೊಡ್ಡ ದೊಡ್ಡ ಬೆಚ್ಚಗಾದ ಕಲ್ಲುಗಳನ್ನು ಅವರ ಎದೆಯ ಮೇಲೆ ಇರಿಸಿ ಹೀಗೆ ಹೇಳುತ್ತಿದ್ದನು: "ಲಾತ್ ಮತ್ತು ಉಝ್ಝಾರ ದೈವತ್ವವನ್ನು ಅಂಗೀಕರಿಸಿ ಮುಹಮ್ಮದನ ಮೇಲಿನ ವಿಶ್ವಾಸವನ್ನು ತ್ಯಜಿಸಿರುವುದಾಗಿ ಹೇಳು." ಹಝ್ರತ್ ಬಿಲಾಲ್(ರ) ಅದಕ್ಕುತ್ತರವಾಗಿ "ಅಹದ್, ಅಹದ್" ಎಂದರೆ ಅಲ್ಲಾಹನು ಒಬ್ಬನೇ, ಅಲ್ಲಾಹನು ಒಬ್ಬನೇ ಎಂದೆನ್ನುತ್ತಿದ್ದರು. ಅವರು ಪದೇ ಪದೇ ಹೀಗೆ ಹೇಳುತ್ತಿದ್ದುದನ್ನು ಆಲಿಸಿ ಉಮ್ಮಯ್ಯನಿಗೆ ಕೋಪ ಬರುತ್ತಿತ್ತು. ಅವನು ಹಝ್ರತ್ ಬಿಲಾಲ್‌ರವರ(ರ) ಕೊರಳಿಗೆ ಹಗ್ಗ ಹಾಕಿ ಪುಂಡು ಪೋಕರಿಗಳಾದ ಹುಡುಗರ ವಶಕ್ಕೆ ಕೊಟ್ಟು ಹೀಗೆ ಹೇಳುತ್ತಿದ್ದನು: "ಅವನನ್ನು ಮಕ್ಕದ ಮಾರ್ಗಗಳಲ್ಲಿ ಬಿರುಸು ಕಲ್ಲುಗಳ ಮೇಲೆ ಎಳೆದುಕೊಂಡು ಹೋಗಿರಿ." ಹುಡುಗರು ಹಾಗೆ ಮಾಡಿದಾಗ ಹಝ್ರತ್ ಬಿಲಾಲ್‌ರವರ ಶರೀರವಿಡೀ ರಕ್ತಮಯವಾಗುತ್ತಿತ್ತು. ಆದರೆ ಅವರು ತಮ್ಮ ಅಹದ್, ಅಹದ್ (ಅಲ್ಲಾಹನು ಒಬ್ಬನೇ, ಅಲ್ಲಾಹನು ಒಬ್ಬನೇ) ಎಂಬ ಘೋಷಣೆಯನ್ನು ಉಚ್ಚರಿಸುತ್ತಾ ಹೋಗುತ್ತಿದ್ದರು.

ಕೆಲವು ಕಾಲದ ನಂತರ ಅಲ್ಲಾಹನು ಮುಸ್ಲಿಮರನ್ನು ಮದೀನದಲ್ಲಿ

ಸುರಕ್ಷಿತರನ್ನಾಗಿ ಮಾಡಿದಾಗ ಮತ್ತು ಅವರು ಸ್ವತಂತ್ರರಾಗಿ ನಿರ್ಭಯರಾಗಿ ಅಲ್ಲಾಹನನ್ನು ಆರಾಧಿಸಲು ಸಮರ್ಥರಾದಾಗ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಹಝ್ರತ್ ಬಿಲಾಲ್‌ರವರನ್ನು ಪ್ರಾರ್ಥನೆಗೆ ಕರೆ (ಅಝಾನ್) ನೀಡಲು ನಿಶ್ಚಯಿಸಿದರು. ನೀಗ್ರೋ ವಂಶಜರಾದ ಅವರು ಪ್ರಾರ್ಥನೆಗೆ ಕರೆ ನೀಡುವಾಗ ಅಶ್‌ಹದು (ನಾನು ಸಾಕ್ಷ್ಯ ವಹಿಸುತ್ತೇನೆ) ಎಂಬ ಪದದಲ್ಲಿರುವ "ಶ"ಕಾರಕ್ಕೆ ಬದಲಾಗಿ "ಸ"ಕಾರ ಬಳಸಿ ಅಸ್‌ಹದು ಎಂದು ತಪ್ಪಾಗಿ ಉಚ್ಚರಿಸುತ್ತಿದ್ದಾಗ, ಅವರ ತ್ಯಾಗಗಳ ಕುರಿತು ತಿಳಿಯದವರು ಅದನ್ನು ಆಲಿಸಿ ನಗುತ್ತಿದ್ದರು. ಒಮ್ಮೆ ಹಝ್ರತ್ ಪೈಗಂಬರರು(ಸ) ಹಝ್ರತ್ ಬಿಲಾಲ್‌ರವರು ಪ್ರಾರ್ಥನೆಗೆ ಕರೆ ನೀಡಿದಾಗ ಅವರ ತಪ್ಪು ಉಚ್ಚಾರಣೆ ಕೇಳಿ ಜನರು ನಗುತ್ತಿರುವುದಾಗಿ ಕಂಡರು. ಆಗ ಹಝ್ರತ್ ಪೈಗಂಬರರು(ಸ) ಆ ಜನರನ್ನು ಅಭಿಮುಖೀಕರಿಸಿ ಹೀಗೆಂದರು: "ನೀವು ಬಿಲಾಲ್‌ರ ಅಝಾನ್ ಕೇಳಿ ನಗುತ್ತಿರುವಿರಿ. ಆದರೆ ಅಲ್ಲಾಹನು ಅದನ್ನು ಆಲಿಸಿ ತನ್ನ ಸಿಂಹಾಸನದಲ್ಲಿ ಹರ್ಷಿಸುತ್ತಿರುವನು." ಹಝ್ರತ್ ಪೈಗಂಬರರ(ಸ) ಮಾತಿನ ಅರ್ಥ ಹೀಗೆ: ಈ ವ್ಯಕ್ತಿ ಶ ಎಂಬ ಅಕ್ಷರವನ್ನು ಸರಿಯಾಗಿ ಉಚ್ಚರಿಸಲಾರರು ಎಂಬ ವಿಷಯ ನಿಮ್ಮ ದೃಷ್ಟಿಗೆ ಬಂದಿದೆ. ಆದರೆ "ಶ"ಕಾರದಲ್ಲಿ ಮತ್ತು "ಸ"ಕಾರದಲ್ಲಿ ಏನೂ ಇಲ್ಲ. ಸುಡುತ್ತಿದ್ದ ಮರಳಿನಲ್ಲಿ ಬಿಲಾಲ್‌ರವರನ್ನು ಮಲಗಿಸಿ ಅವರ ಎದೆಯ ಮೇಲೆ ದೌರ್ಜನ್ಯಗಾರರು ತಮ್ಮ ಪಾದರಕ್ಷೆಗಳೊಂದಿಗೆ ಹಾರುತ್ತಿದ್ದರು. ಅವರೊಂದಿಗೆ "ನೀನು ಇನ್ನಾದರೂ ಪಾಠ ಕಲಿತಿರುವೆಯೋ ಇಲ್ಲವೋ?" ಎಂದು ಅವರು ಕೇಳುತ್ತಿದ್ದಾಗ ಅವರು "ಅಹದ್, ಅಹದ್" ಎಂದು ಹೇಳಿ ಅಲ್ಲಾಹನ ಏಕತೆಯ ಪ್ರಕಟಣೆ ಮಾಡುತ್ತಿದ್ದರು. ಅವರು ತಮ್ಮ ನಿಷ್ಠೆ, ಏಕದೇವ ವಿಶ್ವಾಸ ಮತ್ತು ತಮ್ಮ ಮನೋಬಲವನ್ನು ಸಾಬೀತುಗೊಳಿಸುತ್ತಿದ್ದರು ಎಂಬುದು ಅಲ್ಲಾಹನಿಗೆ ತಿಳಿದಿದೆ. ಆದುದರಿಂದ ಅವರು ಅಸ್‌ಹದು ಎಂದು ಹೇಳುವುದು ಬೇರೆ ಜನರು ಅಶ್‌ಹದು ಎಂದು ಹೇಳುವುದಕ್ಕಿಂತ ಹೆಚ್ಚು ಮೌಲ್ಯವನ್ನು ಹೊಂದಿದೆ.

ಹಝ್ರತ್ ಬಿಲಾಲ್‌ರವರ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಹಝ್ರತ್ ಅಬೂಬಕರ್(ರ) ನೋಡಿದಾಗ ಅವರ ಮಾಲಿಕನಿಗೆ ವಿಮೋಚನೆಯ ಮೌಲ್ಯವನ್ನು ನೀಡಿ ಅವರನ್ನು ಬಿಡುಗಡೆಗೊಳಿಸಿದರು. ಹೀಗೆಯೇ ಇತರ ಹಲವು ಗುಲಾಮರನ್ನೂ ಹಝ್ರತ್ ಅಬೂಬಕರ್(ರ) ಬಿಡುಗಡೆಗೊಳಿಸಿದರು. ವಿಮೋಚಿತ ಗುಲಾಮರಲ್ಲಿ ಹಝ್ರತ್ ಸಹೀಬ್(ರ) ಅನಂತರ ಧನಿಕರಾದರು. ಅವರು ವ್ಯಾಪಾರ ಮಾಡುತ್ತಿದ್ದರು. ಅವರು ಮಕ್ಕದ ಧನಾಧಿಪರಲ್ಲಿ ಒಬ್ಬರಾಗಿದ್ದರು. ಅವರು ಐಶ್ವರ್ಯವಂತರಾಗಿದ್ದರೂ ಸ್ವತಂತ್ರರಾಗಿದ್ದರೂ ಅವರು ಮುಸ್ಲಿಮರಾದ ನಂತರ ಮಕ್ಕದ ಅರಬ್ ಗೋತ್ರವಾದ ಖುರೈಶ್‌ಗೆ ಸೇರಿದವರು ಅವರನ್ನು ಹೊಡೆದು ಬಡಿದು ಪ್ರಜ್ಞಾಶೂನ್ಯರನ್ನಾಗಿ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋದಾಗ ಅವರ ನಂತರ ಹಝ್ರತ್ ಸಹೀಬ್(ರ) ಸಹ ಮದೀನಕ್ಕೆ ವಲಸೆ ಹೋಗಲು ಬಯಸಿದರು. ಆದರೆ ಮಕ್ಕದವರು ಅವರನ್ನು ತಡೆದು ನಿಲ್ಲಿಸಿ ಹೇಳಿದರು: "ಮಕ್ಕದಲ್ಲಿ ಸಂಪಾದಿಸಿದ



ಸಂಪತ್ತನ್ನು ನೀವು ಮಕ್ಕದ ಹೊರಗೆ ಹೇಗೆ ತಾನೆ ಕೊಂಡು ಹೋಗಬಲ್ಲಿರಿ? ನಾವು ನಿಮ್ಮನ್ನು ಮಕ್ಕದಿಂದ ಹೋಗಲು ಬಿಡಲಾರೆವು." ಹಝ್ರತ್ ಸಹೀಬ್ ಕೇಳಿದರು: "ನಾನು ಈ ಸಂಪತ್ತನ್ನು ಬಿಟ್ಟು ಹೋಗುವುದಾದರೆ ನೀವು ನನ್ನನ್ನು ಹೋಗಲು ಬಿಡುವಿರೇನು?" ಆಗ ಮಕ್ಕದ ನಿವಾಸಿಗಳು ಅದಕ್ಕೆ ಒಪ್ಪಿಗೆ ಸೂಚಿಸಿದರು. ತಮ್ಮ ಎಲ್ಲಾ ಸಂಪತ್ತನ್ನು ಮಕ್ಕದ ಜನರಿಗೊಪ್ಪಿಸಿ ಬರಿಗೈಯಲ್ಲಿ ಮದೀನಕ್ಕೆ ಹೋಗಿ ಅಲ್ಲಿ ಹಝ್ರತ್ ಪೈಗಂಬರರನ್ನು(ಸ) ಹಝ್ರತ್ ಸಹೀಬ್(ರ) ಭೇಟಿಯಾದಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಸಹೀಬ್, ನಿಮ್ಮ ಈ ವ್ಯಾಪಾರ ನೀವು ಈ ಮೊದಲು ಮಾಡಿದ ವ್ಯಾಪಾರಗಳಿಗಿಂತ ಹೆಚ್ಚು ಲಾಭದಾಯಕವಾಗಿದೆ. ನೀವು ಹಿಂದೆ ಸಾಮಗ್ರಿಗಳ ಬದಲಾಗಿ ಹಣ ಗಳಿಸುತ್ತಿದ್ದಿರಿ. ಈಗ ಹಣಕ್ಕೆ ಬದಲಾಗಿ ಸತ್ಯವಿಶ್ವಾಸವನ್ನು ಗಳಿಸಿರುವಿರಿ."

ಗುಲಾಮರಲ್ಲಿ ಬಹುತೇಕ ಮಂದಿ ಬಾಹ್ಯವಾಗಿ ಮತ್ತು ಆಂತರಿಕವಾಗಿ ಸ್ಥಿರತೆಯುಳ್ಳವರಾಗಿದ್ದರು. ಆದರೆ ಕೆಲವರಲ್ಲಿ ಕೆಲವು ಲೋಪದೋಷಗಳು ಕಂಡು ಬರುತ್ತಿದ್ದುವು. ಒಮ್ಮೆ ಹಝ್ರತ್ ಪೈಗಂಬರ್(ಸ) ಅಮ್ಮಾರ್ ಎಂಬ ಒಬ್ಬ ಗುಲಾಮನ ಸಮೀಪದಿಂದ ದಾಟಿಹೋಗುತ್ತಿದ್ದಾಗ ಆ ಗುಲಾಮ ನಿಡುಸುಯ್ಯುತ್ತಾ ತಮ್ಮ ಕಣ್ಣುಗಳನ್ನು ಒರೆಸುತ್ತಿದ್ದರು. ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: "ಅಮ್ಮಾರ್, ಸಂಗತಿ ಏನು?" ಆಗ ಹಝ್ರತ್ ಅಮ್ಮಾರ್ ಹೇಳಿದರು: "ಓ ಅಲ್ಲಾಹನ ಪ್ರವಾದಿಯವರೇ, ನನ್ನ ಸಂಗತಿ ಬಹಳ ಕೆಟ್ಟದ್ದಾಗಿದೆ. ಶತ್ರುಗಳು ನನ್ನನ್ನು ಹೊಡೆಯುತ್ತಾ ಹಿಂಸಿಸುತ್ತಾ ಹೋದರು. ನಾನು ನಿಮ್ಮ ವಿರುದ್ಧ ಮತ್ತು ಅವರ ದೇವತೆಗಳ ಪರವಾಗಿ ನನ್ನಿಂದ ಮಾತುಗಳನ್ನು ಹೊರಡಿಸುವ ತನಕ ನನ್ನನ್ನು ಬಿಡಲಿಲ್ಲ." ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: "ನೀವು ನಿಮ್ಮ ಹೃದಯದಲ್ಲಿ ಏನೆಂದು ಗ್ರಹಿಸಿರುವಿರಿ?" ಆ ಹಝ್ರತ್ ಅಮ್ಮಾರ್ ಹೇಳಿದರು: "ನಾನು ನನ್ನ ಹೃದಯದಲ್ಲಿ ಎಂದೂ ನಶಿಸಿಹೋಗದ ವಿಶ್ವಾಸವನ್ನು ಹೊಂದಿರುತ್ತೇನೆ." ಹಝ್ರತ್ ಪೈಗಂಬರ್(ಸ) ಹೇಳಿದರು: "ನಿಮ್ಮ ಹೃದಯ ವಿಶ್ವಾಸದಿಂದ ಸಮಾಧಾನಗೊಂಡಿದ್ದರೆ ಅಲ್ಲಾಹನು ನಿಮ್ಮ ಬಲಹೀನತೆಯನ್ನು ಕ್ಷಮಿಸುವನು." ಹಝ್ರತ್ ಅಮ್ಮಾರರ ತಂದೆ ಹಝ್ರತ್ ಯಾಸರ್ ಮತ್ತು ಅವರ ತಾಯಿ ಸಮಿಯ್ಯರನ್ನು ಸಹ ಅವಿಶ್ವಾಸಿಗಳು ಬಹಳ ಹಿಂಸಿಸುತ್ತಿದ್ದರು. ಒಮ್ಮೆ ಅವರಿಬ್ಬರಿಗೆ ಹಿಂಸೆ ನೀಡುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಅವರ ಸಮೀಪಕ್ಕೆ ಹೋದಾಗ ಅವರಿಗೆ ಅವರ ಕಷ್ಟವನ್ನು ಕಂಡು ದುಃಖವು ಉಮ್ಮಳಿಸಿತು. ಅವರು ಅವರಿಬ್ಬರೊಡನೆ ಹೀಗೆ ಹೇಳಿದರು:

"ಸಬರನ್ ಆಲ ಯಾಸರ್ ಮೌಯಿದಕುಮ್ ಜನ್ನತ– ಓ ಯಾಸರ್ ಕುಟುಂಬದವರೇ, ನೀವು ಸಹನೆದೋರಿರಿ. ಅಲ್ಲಾಹನು ನಿಮಗೆ ಸ್ವರ್ಗವನ್ನು ಸಿದ್ಧಪಡಿಸಿಟ್ಟಿರುವನು."[10]

---

10. ಇಬ್ನು ಹಿಶಾಮ್ ಸಂಪುಟ–1 ಪುಟ–110.

ಈ ಭವಿಷ್ಯವಾಣಿ ಕೆಲವೇ ದಿನಗಳಲ್ಲಿ ಈಡೇರಿತು. ಹಝ್ರತ್ ಯಾಸರ್ ಶತ್ರುಗಳ ಆಕ್ರಮಣಕ್ಕೆ ಬಲಿಯಾಗಿ ಮೃತರಾದರು. ಆದರೂ ಅವಿಶ್ವಾಸಿಗಳಿಗೆ ಸಮಾಧಾನವಾಗಲಿಲ್ಲ. ಅವಿಶ್ವಾಸಿಗಳು ಹಝ್ರತ್ ಯಾಸರ್‌ರವರ ಮುದಿ ಪತ್ನಿ ಸುಮಯ್ಯ ಮೇಲೆ ಹಿಂಸೆಯನ್ನು ಮುಂದುವರಿಸಿದರು. ಅಬೂಜಹಲನು ಸಿಟ್ಟಿನಿಂದ ಅವರ ತೊಡೆಗೆ ಈಟಿಯಿಂದ ಜೋರಾಗಿ ತಿವಿದಾಗ ಅದು ತೊಡೆಯನ್ನು ಸೀಳಿ ದಾಟಿ ಹೊಟ್ಟೆಯೊಳಗೆ ನಾಟಿಕೊಂಡಿತು. ಅವರು ನರಳುತ್ತಾ ಪ್ರಾಣಬಿಟ್ಟರು.

ಝುನ್‌ಬೀರ ಎಂಬ ಗುಲಾಮ ಮಹಿಳೆಗೆ ಅಬೂಜಹಲನು ಎಷ್ಟು ಹೊಡೆದನೆಂದರೆ ಅವರ ಕಣ್ಣುಗಳು ದೃಷ್ಟಿಹೀನವಾದುವು. ಅಬೂಫಕ್‌ಹಿಯ ಎಂಬವರು ಸಫ್‌ವಾನ್‌ಬಿನ್ ಉಮ್ಮಯ್ಯನ ಗುಲಾಮರಾಗಿದ್ದರು. ಅವರ ಮಾಲಿಕನು ಮತ್ತು ಆತನ ಕುಟುಂಬದವರು ಬಿಸಿಲಲ್ಲಿ ಬೆಂದು ಸುಡುತ್ತಿರುವ ನೆಲದಲ್ಲಿ ಅವರನ್ನು ಮಲಗಿಸುತ್ತಿದ್ದರು ಮತ್ತು ದೊಡ್ಡ ದೊಡ್ಡ ಬಿಸಿಯಾದ ಕಲ್ಲುಗಳನ್ನು ಅವರ ಎದೆಯ ಮೇಲೆ ಇಡುತ್ತಿದ್ದರು. ಈ ಹಿಂಸಾಚಾರದ ಕಾರಣದಿಂದ ಅವರ ನಾಲಗೆ ಹೊರಗೆ ಚಾಚುತ್ತಿತ್ತು. ಬೇರೆ ಗುಲಾಮರು ಸಹ ಇದೇ ರೀತಿ ಹಿಂಸೆಯನ್ನು ಅನುಭವಿಸುತ್ತಾ ಇದ್ದರು.

ಈ ಹಿಂಸಾಚಾರಗಳನ್ನು ಸಹಿಸುವುದು ಮಾನವ ಶಕ್ತಿಗೆ ಮೀರಿದುದಾಗಿತ್ತು. ಆದರೆ ಆ ಹಿಂಸಾಚಾರಗಳಿಗೆ ಗುರಿಯಾದ ಜನರು ಬಾಹ್ಯವಾಗಿ ಮನುಷ್ಯರಾಗಿದ್ದರೂ ಆಂತರಿಕವಾಗಿ ದೇವದೂತ(ಮಲಕ್) ಆಗಿದ್ದರು. ಪವಿತ್ರ ಖುರ್‌ಆನನ್ನು ಅಲ್ಲಾಹನು ಹಝ್ರತ್ ಪೈಗಂಬರ್‌ರವರ(ಸ) ಕಿವಿ ಮತ್ತು ಹೃದಯಗಳಿಗೆ ಅವತೀರ್ಣಗೊಳಿಸುತ್ತಿದ್ದ ಹಾಗೆಯೇ ಅಲ್ಲಾಹನು ಅವರ ಹೃದಯಗಳಲ್ಲೂ ಮಾತನಾಡುತ್ತಿದ್ದನು. ಯಾವುದೇ ಧರ್ಮವು ಅದರ ಪ್ರಾರಂಭದ ವಿಶ್ವಾಸಿಗಳ ಹೃದಯಗಳಲ್ಲಿ ದೈವಿಕ ಶಬ್ದವು ಪ್ರಕಟವಾಗದಿದ್ದರೆ ನೆಲೆನಿಲ್ಲಲಾರದು. ಸತ್ಯವಿಶ್ವಾಸಿಗಳನ್ನು ಜನರು ಬಿಟ್ಟುಬಿಡುವಾಗ ಮತ್ತು ಸಂಬಂಧಿಕರು ಅವರಿಂದ ಮುಖತಿರುಗಿಸಿ ಹೋಗುವಾಗ ಅಲ್ಲಾಹನು ಅವರ ಹೃದಯಗಳಲ್ಲಿ ಹೇಳುತ್ತಾನೆ: "ನಾನು ನಿಮ್ಮ ಜೊತೆಗಿದ್ದೇನೆ, ನಾನು ನಿಮ್ಮ ಜೊತೆಗಿದ್ದೇನೆ."

ಎಲ್ಲಾ ಹಿಂಸಾಚಾರಗಳು ಸತ್ಯವಿಶ್ವಾಸಿಗಳಿಗೆ ಅಂತಿಮವಾಗಿ ಸುಖದಾಯಕವಾಗುತ್ತಿದ್ದವು. ಅವರಿಗೆ ಬೈಗಳು ಪ್ರಾರ್ಥನೆಯಾಗಿ ಮಾರ್ಪಡುತ್ತಿದ್ದವು. ಕಲ್ಲುಗಳು ಅವರ ಹೃದಯಗಳ ಗಾಯಗಳನ್ನು ವಾಸಿಮಾಡುವ ಲೇಪನದ ಕೆಲಸ ಮಾಡುತ್ತಿದ್ದವು.

ಅವಿಶ್ವಾಸಿಗಳ ವಿರೋಧ ಹೆಚ್ಚಾಗುತ್ತಾ ಹೋದ ಹಾಗೆ ಸತ್ಯವಿಶ್ವಾಸಿಗಳ ವಿಶ್ವಾಸವು ಹೆಚ್ಚು ದೃಢವಾಗುತ್ತಾ ಇತ್ತು. ದೌರ್ಜನ್ಯ ಅತ್ಯಧಿಕವಾದರೂ ವಿಶ್ವಾಸವು ಹಿಂದಿನ ಎಲ್ಲಾ ಮೇರೆಗಳನ್ನು ಮೀರಿ ವರ್ಧಿಸಿತು.



## ಗುಲಾಮರಲ್ಲದ ಸ್ವತಂತ್ರ ಮುಸ್ಲಿಮರ ಮೇಲೆ ದೌರ್ಜನ್ಯ

ಗುಲಾಮರಲ್ಲದ ಸ್ವತಂತ್ರ ಮುಸ್ಲಿಮರ ಮೇಲೆ ನಡೆಯುತ್ತಿದ್ದ ಹಿಂಸಾಚಾರ ಗುಲಾಮರ ಮೇಲೆ ನಡೆಸಲಾಗುತ್ತಿದ್ದ ಹಿಂಸಾಚಾರಗಳಿಗಿಂತ ಕಡಿಮೆಯೇನೂ ಇರಲಿಲ್ಲ. ಸತ್ಯವಿಶ್ವಾಸ ಸ್ವೀಕರಿಸಿದ ಯುವಕರಿಗೆ ಅವರ ಹಿರಿಯರು ಮತ್ತು ಕುಟುಂಬದ ಗಣ್ಯರು ವಿವಿಧ ರೀತಿಯ ಕಷ್ಟ ಕೊಡುತ್ತಿದ್ದರು. ಹಝ್ರತ್ ಉಸ್ಮಾನ್(ರ) ಸತ್ಯವಿಶ್ವಾಸವನ್ನು ಸ್ವೀಕರಿಸಿದಾಗ ಅವರ ಪ್ರಾಯ ನಲ್ವತ್ತು ವರ್ಷವಾಗಿತ್ತು. ಅವರು ಐಶ್ವರ್ಯವಂತರಾಗಿದ್ದರು. ಮಕ್ಕದ ಖುರೈಶಿ ಗೋತ್ರದವರು ಮುಸ್ಲಿಮರನ್ನು ಹಿಂಸೆಗೆ ಗುರಿಪಡಿಸಲು ನಿರ್ಧರಿಸಿದಾಗ ಹಝ್ರತ್ ಉಸ್ಮಾನ್‌ರವರ(ರ) ಚಿಕ್ಕಪ್ಪ ಹಕಮ್ ಎಂಬ ವ್ಯಕ್ತಿ ಅವರನ್ನು ಹಗ್ಗದಿಂದ ಕಟ್ಟಿಹಾಕಿ ಬಹಳ ಹೊಡೆದನು. ಝುಬೈರ್ ಬಿನ್ ಅಲ್‌ಅವಾಮ್ ಬಹಳ ಶೂರರಾದ ಯುವಕರಾಗಿದ್ದರು. ಇಸ್ಲಾಮಿನ ವಿಜಯದ ಕಾಲದಲ್ಲಿ ಅವರು ಬಹಳ ಶೌರ್ಯಶಾಲಿ ಸೇನಾನಾಯಕರಾಗಿದ್ದರು. ಅವರ ಚಿಕ್ಕಪ್ಪ ಸಹ ಅವರಿಗೆ ಬಹಳ ಹಿಂಸೆ ಕೊಡುತ್ತಿದ್ದನು. ಅವರನ್ನು ಚಾಪೆಯಲ್ಲಿ ಸುತ್ತಿ ಕೆಳಗೆ ಹೊಗೆ ಹಾಕಿ ಉಸಿರುಗಟ್ಟುವಂತೆ ಮಾಡುತ್ತಿದ್ದನು ಮತ್ತು "ಇನ್ನಾದರೂ ಇಸ್ಲಾಮಿನಿಂದ ವಿಮುಖನಾಗುವೆಯೋ ಇಲ್ಲವೋ?" ಎಂದು ಕೇಳುತ್ತಿದ್ದನು. ಆದರೆ ಅವರು ಕಷ್ಟ ಸಹಿಸುತ್ತಾ ಹೀಗೆ ಹೇಳುತ್ತಿದ್ದರು: "ನಾನು ಸತ್ಯವನ್ನು ಗುರುತಿಸಿದ ನಂತರ ಅದನ್ನು ನಿರಾಕರಿಸಲಾರೆನು."

ಹಝ್ರತ್ ಅಬೂ ಝರ್ ಎಂಬವರು ಗಫ್ಫಾರ್ ಗೋತ್ರಕ್ಕೆ ಸೇರಿದ್ದರು. ಒಬ್ಬ ವ್ಯಕ್ತಿ ಮಕ್ಕ ನಗರದಲ್ಲಿ ತಾನು ಅಲ್ಲಾಹನಿಂದ ಆಗತನಾದವನೆಂದು ವಾದಿಸಿದುದಾಗಿ ಅವರು ತಿಳಿದರು. ಅವರು ವಾಸ್ತವಿಕ ಸಂಗತಿ ತಿಳಿಯಲು ಮಕ್ಕಕ್ಕೆ ಬಂದರು. ಆಗ ಮಕ್ಕದವರು ಅವರಿಗೆ ತಪ್ಪು ಮಾಹಿತಿ ನೀಡಲು ಪ್ರಯತ್ನಿಸಿದರು. ಅಲ್ಲಿನ ಜನರು ಹೀಗೆಂದರು: "ಮುಹಮ್ಮದ್ ನಮ್ಮ ಸಂಬಂಧಿಕ. ಅವನ ಬಗ್ಗೆ ನಮಗೆಲ್ಲಾ ಗೊತ್ತಿದೆ. ಅವನು ಒಂದು ವ್ಯಾಪಾರದ ಮಳಿಗೆಯನ್ನು ತೆರೆದಿರುವನು." ಆದರೆ ಅಬೂಝರ್ ತನ್ನ ನಿರ್ಧಾರ ಬದಲಾಯಿಸಲಿಲ್ಲ. ಅವರು ಅನೇಕ ಉಪಾಯಗಳನ್ನು ಹೂಡಿ ಕೊನೆಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಮೀಪಕ್ಕೆ ತಲುಪಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ಇಸ್ಲಾಮ್ ಧರ್ಮ ತತ್ವಗಳನ್ನು ವಿವರಿಸಿಕೊಟ್ಟರು. ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಅನಂತರ ಅವರು ಹಝ್ರತ್ ಪೈಗಂಬರರೊಂದಿಗೆ ಹೀಗೆ ಹೇಳಿ ಅನುಮತಿ ಕೋರಿದರು: "ನಾನು ಇಸ್ಲಾಮ್ ಧರ್ಮಕ್ಕೆ ಸೇರಿದುದನ್ನು ಸ್ವಲ್ಪಕಾಲದ ತನಕ ನನ್ನ ಗೋತ್ರದ ಜನರಿಗೆ ತಿಳಿಸದೆ ಇದ್ದರೆ ತಪ್ಪಾಗುವುದೇ?" ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಸ್ವಲ್ಪ ಕಾಲ ಹಾಗೆ ಮಾಡಿದರೆ ತಪ್ಪಿಲ್ಲ." ಈ ಅನುಮತಿಯೊಂದಿಗೆ ಅವರು ತನ್ನ ಗೋತ್ರದವರ ಬಳಿಗೆ ಹೋಗುತ್ತಿರುವಾಗ ಮನಸ್ಸಿನಲ್ಲಿ ಹೀಗೆ ನಿರ್ಧರಿಸಿದರು: "ಸ್ವಲ್ಪ ಕಾಲದೊಳಗೆ ಪರಿಸ್ಥಿತಿಯನ್ನು ಸರಿಪಡಿಸಿಕೊಂಡು ನಾನು ಇಸ್ಲಾಮ್ ಧರ್ಮ ಸ್ವೀಕರಿಸಿದುದನ್ನು

ಬಹಿರಂಗಪಡಿಸುವೆನು.” ಅವರು ಮಕ್ಕನಗರದ ಮಾರ್ಗಗಳಲ್ಲಿ ಹೋಗುತ್ತಿದ್ದಾಗ ಮಕ್ಕದ ಅವಿಶ್ವಾಸಿಗಳ ನಾಯಕರು ಇಸ್ಲಾಮ್ ಧರ್ಮದ ವಿರುದ್ಧ ಬಿರುನುಡಿಗಳನ್ನೂ ಬೈಗಳನ್ನೂ ಪ್ರಯೋಗಿಸುತ್ತಾ ಇರುವುದಾಗಿ ಕಂಡರು. ಸ್ವಲ್ಪ ಕಾಲದವರೆಗೆ ತನ್ನ ವಿಶ್ವಾಸವನ್ನು ಗುಪ್ತವಾಗಿಡಬೇಕೆಂಬ ಆಲೋಚನೆ ಆಗಲೇ ಅವರ ಮನಸ್ಸಿನಿಂದ ಅಳಿಸಿಹೋಯಿತು. ಅವರು ಫಕ್ಕನೆ ಅವಿಶ್ವಾಸಿಗಳ ಮುಂದೆ ಸಾಗಿ ಹೀಗೆ ಪ್ರಕಟಿಸಿದರು:

“ಅಶ್‌ಹದು ಅ(ನ್)ಲ್ಲಾ ಇಲಾಹ ಇಲ್ಲಲ್ಲಾಹು ವಹ್‌ದಹೂ ಲಾ ಶರೀಕಲಹೂ ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲುಹೂ.”

ಅಂದರೆ, “ನಾನು ಸಾಕ್ಷ್ಯ ಹೇಳುತ್ತೇನೆ. ಅಲ್ಲಾಹನು ಒಬ್ಬನೇ. ಅವನಿಗೆ ಯಾರೂ ಸರಿಸಮಾನ ಇಲ್ಲ. ಮುಹಮ್ಮದ್ ಅವರ ದಾಸ ಮತ್ತು ಸಂದೇಶವಾಹಕ ಆಗಿರುವರು.”

ಅವಿಶ್ವಾಸಿಗಳ ಮುಂದೆ ಹಝ್‌ರತ್ ಅಬೂಝರ್(ರ) ಹೀಗೆ ಹೇಳಿದಾಗ ಅವರು ಅಬೂಝರ್ ಜ್ಞಾನಶೂನ್ಯರಾಗಿ ಬಿದ್ದುಬಿಡುವ ತನಕ ಹೊಡೆದರು. ಆದರೆ ಅನಂತರ ಸಹ ಅವರು ಹೊಡೆಯುತ್ತಾ ಇದ್ದಾಗ ಹಝ್‌ರತ್ ಪೈಗಂಬರರ(ಸ) ಆಗಿನ್ನೂ ಇಸ್ಲಾಮ್ ಧರ್ಮ ಸ್ವೀಕರಿಸಿರದ ಅವರ ಚಿಕ್ಕಪ್ಪ ಅಬ್ಬಾಸ್(ರ) ಅಲ್ಲಿಗೆ ಬಂದರು. ಅವರು ಹೊಡೆಯುತ್ತಿರುವವರೊಂದಿಗೆ ಹೀಗೆ ಹೇಳಿದರು: “ನಿಮಗೆ ಆಹಾರ ಧಾನ್ಯಗಳನ್ನು ತರುವ ಕಾರವಾನ್ ಅಬೂಝರ್‌ರವರ ಗಫ್ಫಾರ್ ಗೋತ್ರದ ಪ್ರದೇಶದ ಮೂಲಕ ಹಾದು ಬರಬೇಕಾಗಿದೆ. ಅವರ ಗೋತ್ರದವರಿಗೆ ಸಿಟ್ಟು ಬಂದರೆ ನಿಮಗೆ ಆಹಾರದ ಸಾಗಾಣಿಕೆ ತಡೆಯಲ್ಪಡುವುದು ಮತ್ತು ಮಕ್ಕದ ನಿವಾಸಿಗಳು ಹಸಿವೆಯಿಂದ ಸಾಯಬೇಕಾದೀತು.” ಆಗ ಶತ್ರುಗಳು ಅಬೂಝರ್‌ರವರನ್ನು ಬಿಟ್ಟು ಬಿಟ್ಟರು. ಅವರು ಒಂದು ದಿನದ ವಿಶ್ರಾಂತಿ ಪಡೆದು ಮರುದಿನ ಅದೇ ಸ್ಥಳಕ್ಕೆ ಹೋದರು. ಅಲ್ಲಿ ಪ್ರತಿದಿನ ಹಝ್‌ರತ್ ಪೈಗಂಬರರನ್ನು(ಸ) ನಿಂದಿಸುವ ಕಾರ್ಯಕ್ರಮ ಜರಗುತ್ತಿತ್ತು. ಅವರು ಅಲ್ಲಿಂದ ಪವಿತ್ರ ಕಅ್‌ಬ ದೇವಮಂದಿರದ ಕಡೆಗೆ ಹೋದಾಗ ಅಲ್ಲಿ ಸಹ ಅವಿಶ್ವಾಸಿಗಳು ಇಸ್ಲಾಮ್ ವಿರುದ್ಧ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಅಲ್ಲಿ ಹಝ್‌ರತ್ ಅಬೂಝರ್ ಎದ್ದು ನಿಂತು ತನ್ನ ಏಕದೇವ ವಿಶ್ವಾಸವನ್ನು ಪುನಃ ಬಹಿರಂಗಪಡಿಸಿದರು. ಅವರನ್ನು ಜನರು ಪುನಃ ಹೊಡೆಯಲು ಪ್ರಾರಂಭಿಸಿದರು. ಮೂರು ದಿವಸ ಹೀಗೆಯೇ ನಡೆಯಿತು. ಅನಂತರ ಅವರು ತನ್ನ ಗೋತ್ರದ ಜನರ ಕಡೆಗೆ ಹೋದರು.

## ಹಝ್‌ರತ್ ಪೈಗಂಬರರ(ಸ) ಮೇಲೆ ದೌರ್ಜನ್ಯ

ಹಝ್‌ರತ್ ಪೈಗಂಬರ್(ಸ) ಕೂಡ ದೌರ್ಜನ್ಯದಿಂದ ಸುರಕ್ಷಿತರಾಗಿರಲಿಲ್ಲ. ಅವರನ್ನು ನಾನಾ ರೀತಿಗಳಲ್ಲಿ ಅವಿಶ್ವಾಸಿಗಳು ಹಿಂಸಿಸುತ್ತಿದ್ದರು. ಒಮ್ಮೆ ಅವರು ಆರಾಧನೆ ಮಾಡುತ್ತಾ ಇದ್ದಾಗ ಅವಿಶ್ವಾಸಿಗಳು ಅವರ ಕುತ್ತಿಗೆಗೆ ಬಟ್ಟೆ ಹಾಕಿ ಎಳೆಯತೊಡಗಿದರು. ಅವರ ಕಣ್ಣುಗಳು ಹೊರಬರುವಂತೆ ಆಗುವಾಗ ಅಲ್ಲಿಗೆ ಹಝ್‌ರತ್ ಅಬೂಬಕರ್(ರ) ಬಂದು “ನೀವು ಒಬ್ಬನನ್ನು ಅವನು ಅಲ್ಲಾಹನೇ



ನನ್ನ ಪ್ರಭು ಎಂದು ಹೇಳಿದ ಅಪರಾಧಕ್ಕಾಗಿ ಕೊಲ್ಲುತ್ತಿರುವಿರೇನು?” ಎಂದು ಹೇಳುತ್ತಾ ಶತ್ರುಗಳಿಂದ ಹಝ್‌ರತ್ ಪೈಗಂಬರರನ್ನು(ಸ) ಬಿಡಿಸಿದರು. [11]

ಹಝ್‌ರತ್ ಪೈಗಂಬರ್(ಸ) ಒಮ್ಮೆ ನಮಾಝ್ ಮಾಡುತ್ತಾ ಸುಜೂದ್‌ನಲ್ಲಿದ್ದಾಗ ಅವರ ಬೆನ್ನ ಮೇಲೆ ಒಂಟೆಯ ಕರುಳುಗಳನ್ನು ಇರಿಸಲಾಯಿತು. ಆ ಕರುಳುಗಳನ್ನು ಅವರ ಬೆನ್ನಿನಿಂದ ಬೇರೆಯವರು ತೆಗೆದು ಹಾಕುವ ತನಕ ಅವರಿಗೆ ತಮ್ಮ ತಲೆಯನ್ನು ಮೇಲಕ್ಕೆತ್ತಲು ಸಾಧ್ಯವಾಗಲಿಲ್ಲ.[12]

ಒಮ್ಮೆ ಹಝ್‌ರತ್ ಪೈಗಂಬರ್(ಸ) ಮಕ್ಕದ ಪೇಟೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಮಕ್ಕದ ಪುಂಡರ ಒಂದು ಗುಂಪು ಅವರನ್ನು ಸುತ್ತುವರಿದು ಅವರ ಮೇಲೆ ದಾರಿಯುದ್ದಕ್ಕೂ ಕಲ್ಲೆಸೆಯುತ್ತಾ “ಓ ಜನರೇ, ಇವನು ಪ್ರವಾದಿ ಎಂದು ವಾದಿಸುವವನಾಗಿದ್ದಾನೆ” ಎಂದು ಹೇಳುತ್ತಾ ಇದ್ದರು.

ಹಝ್‌ರತ್ ಪೈಗಂಬರರ(ಸ) ಮನೆಗೆ ಸುತ್ತುಮುತ್ತಲಿನ ಮನೆಗಳಿಂದ ನಿರಂತರವಾಗಿ ಕಲ್ಲುಗಳು ಎಸೆಯಲ್ಪಡುತ್ತಿದ್ದುವು. ಅವರ ಅಡಿಗೆ ಕೋಣೆಗೆ ಕೊಳಕು ಪದಾರ್ಥಗಳನ್ನು ಎಸೆಯಲಾಗುತ್ತಿತ್ತು. ಅವುಗಳಲ್ಲಿ ಆಡುಗಳ ಮತ್ತು ಒಂಟೆಗಳ ಕರುಳುಗಳು ಸೇರಿದ್ದುವು. ಅವರು ನಮಾಝ್ ಮಾಡುತ್ತಾ ಇರುವಾಗ ಅವರ ಮೇಲೆ ಧೂಳನ್ನೂ ಮಣ್ಣನ್ನೂ ಹಾಕಲಾಗುತ್ತಿತ್ತು. ಕೊನೆಗೆ ಅವರು ಪರ್ವತ ಶಿಖರದಿಂದ ಹೊರಚಾಚಿದ ಒಂದು ಬಂಡೆಯ ಅಡಿಭಾಗದಲ್ಲಿ ಅಡಗಿಕೊಂಡು ನಮಾಝ್ ಮಾಡಬೇಕಾಯಿತು. ಆದರೆ ಈ ದೌರ್ಜನ್ಯಗಳನ್ನು ಸಹಿಸಿದುದು ನಿರರ್ಥಕವಾಗಲಿಲ್ಲ. ಸುಸ್ವಭಾವಿಗಳಾದ ಜನರು ಅವರನ್ನು ನೋಡಿದಾಗ ಇಸ್ಲಾಮಿನ ಕಡೆಗೆ ಅವರ ಹೃದಯಗಳು ಆಕರ್ಷಿತವಾಗುತ್ತಿದ್ದುವು.

ಹಝ್‌ರತ್ ಪೈಗಂಬರ್(ಸ) ಒಮ್ಮೆ ಸಫಾ ಪರ್ವತದ ಮೇಲೆ ಕುಳಿತಿದ್ದಾಗ ಅವರ ಅತ್ಯಂತ ದೊಡ್ಡ ಶತ್ರುವೂ ಮಕ್ಕದ ಮುಂದಾಳುಗಳಲ್ಲೊಬ್ಬನೂ ಆಗಿದ್ದ ಅಬೂಜಹಲನು ಅಲ್ಲಿಂದ ದಾಟಿ ಹೋಗುವಾಗ ಅವರನ್ನು ಕಂಡು ಬೈಯ್ಯಲು ತೊಡಗಿದನು. ಅವರು ಆ ಬೈಗಳನ್ನು ಆಲಿಸಿದರೂ ಏನೂ ಉತ್ತರ ನೀಡದೆ ಎದ್ದು ತಮ್ಮ ಮನೆಗೆ ಹೋದರು. ಅವರ ಕುಲದ ಒಬ್ಬ ದಾಸಿ ಈ ಸಂಭವವನ್ನು ನೋಡಿದ್ದಳು. ಆ ದಿನ ಸಾಯಂಕಾಲ ಹಝ್‌ರತ್ ಪೈಗಂಬರರ(ಸ) ಚಿಕ್ಕಪ್ಪ ಹಝ್‌ರತ್ ಹಮ್‌ಝ (ಅವರು ಬಹಳ ಧೈರ್ಯಶಾಲಿಯೂ ಶೂರರೂ ಆಗಿದ್ದರು. ಅವರ ಶೌರ್ಯದ ಕಾರಣದಿಂದ ಮಕ್ಕದ ಜನರು ಅವರಿಗೆ ಭಯಪಡುತ್ತಿದ್ದರು) ಬೇಟೆಯಾಡಿ ಕಾಡುಗುಡ್ಡಗಳಿಂದ ಹಿಂತಿರುಗುತ್ತಿದ್ದರು. ಅವರು ಬಿಲ್ಲು ಬಾಣಗಳಿಂದ ಭೂಷಿತರಾಗಿದ್ದರು. ಅವರು ಬಹಳ ಠೀವಿಯಿಂದ ಮನೆಗೆ ಪ್ರವೇಶಿಸಿದರು. ದಾಸಿಯ ಹೃದಯ ಬೆಳಗ್ಗಿನ ಸಂಭವದಿಂದ ದುಃಖಗೊಂಡಿತ್ತು. ಅವಳಿಗೆ

---

11 ಬುಖಾರಿ: ಅಬ್‌ವಾಬ್ ಬುನ್‌ಯಾನುಲ್ ಕಅ್‌ಬ.

12. ಬುಖಾರಿ: ಕಿತಾಬುಸ್ಸಲಾತ್.

ಹಝ್ರತ್ ಹಮ್ಝರವರ ಠೀವಿಯನ್ನು ನೋಡಿ ಸಹಿಸಲಾಗಲಿಲ್ಲ. ಅವಳು ಅವರನ್ನು ಚುಡಾಯಿಸುತ್ತಾ ಹೇಳಿದಳು: "ನೀವು ಬಹಳ ಶೂರನಾಗಿ ತಿರುಗಾಡುತ್ತಿರುವಿರಿ. ನೀವು ಸದಾ ಆಯುಧ ಸನ್ನದ್ಧರಾಗಿರುತ್ತೀರಿ. ಆದರೆ ಬೆಳಗ್ಗೆ ಅಬೂಜಹಲ್ ನಿಮ್ಮ ಸಹೋದರ ಪುತ್ರನೊಂದಿಗೆ ಹೇಗೆ ವರ್ತಿಸಿದನೆಂದು ನಿಮಗೆ ಗೊತ್ತಿದೆಯೇ?" ಹಝ್ರತ್ ಹಮ್ಝ[ರ] "ಏನಾಯಿತು?" ಎಂದು ವಿಚಾರಿಸಿದರು. ಆಗ ಆ ದಾಸಿ ನಡೆದ ಘಟನೆಯನ್ನು ವಿವರಿಸಿದಳು. ಹಝ್ರತ್ ಹಮ್ಝ ಆಗ ಮುಸ್ಲಿಮ್ ಆಗಿರಲಿಲ್ಲವಾದರೂ ಅವರ ಹೃದಯ ಒಳ್ಳೆಯದಾಗಿತ್ತು. ಅವರು ಇಸ್ಲಾಮಿನ ಕುರಿತು ಸಮಾಚಾರಗಳನ್ನು ಆಲಿಸಿದ್ದರು. ಅವರ ಹೃದಯ ನಿಶ್ಚಯವಾಗಿಯೂ ಅವುಗಳಿಂದ ಪ್ರಭಾವಿತವಾಗಿತ್ತು. ಆದರೆ ಅವರ ಸ್ವತಂತ್ರ ಜೀವಿತದಲ್ಲಿ ಆ ಬಗ್ಗೆ ತಳಸ್ಪರ್ಶಿಯಾಗಿ ಚಿಂತಿಸಲು ಅವರಿಗೆ ಸಂದರ್ಭ ಲಭಿಸಿರಲಿಲ್ಲ. ಈ ಘಟನೆ ಬಗ್ಗೆ ತಿಳಿದ ನಂತರ ಅವರಿಗೆ ಪ್ರಜ್ಞೆ ಉಂಟಾಯಿತು. ಅವರ ಕಣ್ಣುಗಳಿಂದ ನಿರ್ಲಕ್ಷ್ಯದ ಪರದೆ ಸರಿದು ಹೋಯಿತು. ಬೆಲೆಬಾಳುವ ಒಂದು ವಸ್ತು ತನ್ನ ಕೈ ಬಿಟ್ಟು ಹೋಗುವಂತೆ ಅವರಿಗೆ ಭಾಸವಾಯಿತು. ಅವರು ಆಗಲೇ ಮನೆಯಿಂದ ಹೊರಕ್ಕೆ ಹೋದರು. ಅವರು ಮಕ್ಕದ ಮುಂದಾಳುಗಳ ಸಮಾಲೋಚನೆಯ ವಿಶಿಷ್ಟ ಕೇಂದ್ರವಾದ ಕಅ್ಬದ ಕಡೆಗೆ ಹೋಗಿ ಅಲ್ಲಿ ತಮ್ಮ ಬಿಲ್ಲನ್ನು ಭುಜದಿಂದ ಇಳಿಸಿ ಅದರಿಂದ ಬಲಯುತವಾಗಿ ಅಬೂಜಹಲನಿಗೆ ಹೊಡೆದು ಹೀಗೆ ಹೇಳಿದರು: "ನೀವೆಲ್ಲರೂ ಆಲಿಸಿರಿ. ನಾನು ಮುಹಮ್ಮದರ ಧರ್ಮವನ್ನು ಸ್ವೀಕರಿಸುತ್ತೇನೆ. ಮುಹಮ್ಮದ್ ಮರುತ್ತರ ನೀಡುವುದಿಲ್ಲವೆಂದು ಓ ಅಬೂಜಹಲ್, ನೀನು ಅವರನ್ನು ಬೆಳಗ್ಗೆ ನಿಂದಿಸಿದೆ. ನೀನು ಶೂರನಾದರೆ ನಾನು ನಿನಗೆ ನೀಡಿದ ಹೊಡೆತಕ್ಕೆ ನನಗೆ ಮರು ಹೊಡೆತ ನೀಡು."

ಇದು ಅನೀರಿಕ್ಷಿತವಾಗಿ ಸಂಭವಿಸಿದುದರಿಂದ ಅಬೂಜಹಲನು ಗಾಬರಿಗೊಂಡನು. ಆತನ ಸಂಗಡಿಗರು ಹಝ್ರತ್ ಹಮ್ಝರೊಂದಿಗೆ ಹೊಡೆದಾಟಕ್ಕೆ ಎದ್ದರು. ಆದರೆ ಅಬೂಜಹಲನು ಹಝ್ರತ್ ಹಮ್ಝರವರ ಶೌರ್ಯ ಮತ್ತು ಅವರ ಗೋತ್ರ ಮಹಿಮೆಯನ್ನು ಪರಿಗಣಿಸಿ, ಜಗಳ ಪ್ರಾರಂಭವಾದರೆ ಅದರ ಪರಿಣಾಮ ಅಪಾಯಕಾರಿಯಾಗುವುದು ಎಂದು ಮನವರಿಕೆ ಮಾಡಿಕೊಂಡು ಸಂದರ್ಭೋಚಿತವಾಗಿ ವರ್ತಿಸಿ ತನ್ನ ಸಂಗಡಿಗರನ್ನು ಹೀಗೆ ಹೇಳುತ್ತಾ ತಡೆದನು:

"ಹೋಗಲಿ ಬಿಡಿರಿ. ನಾನು ಅವರ ಸಹೋದರ ಪುತ್ರನಿಗೆ ವಾಸ್ತವಿಕವಾಗಿ ಬಹಳ ಕೆಟ್ಟದಾಗಿ ಬೈದಿದ್ದೆನು."[13]

## ಇಸ್ಲಾಮಿನ ಸಂದೇಶ

ಅವಿಶ್ವಾಸಿಗಳ ವಿರೋಧ ಹೆಚ್ಚಾಗುತ್ತಾ ಇದ್ದರೂ ಹಝ್ರತ್ ಪೈಗಂಬರ್[ಸ] ಮತ್ತು ಅವರ ಶಿಷ್ಯರು ಇಸ್ಲಾಮಿನ ಸಂದೇಶವನ್ನು ನಿರ್ಭೀತಿಯಿಂದ ತಲಪಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು:

13. ಇಬ್ನು ಹಿಶಾಮ್ ಸಂಪುಟ–1 ಪುಟ–9 ಮತ್ತು ತಬರಿ ಸಂಪುಟ–3 ಪುಟ–1187



"ಈ ಪ್ರಪಂಚದ ಸೃಷ್ಟಿಕರ್ತನು ಒಬ್ಬನೇ. ಅವನ ಹೊರತು ಬೇರೆ ಆರಾಧ್ಯನಿಲ್ಲ. ಇದರ ಮೊದಲು ಬಂದ ಪ್ರವಾದಿಗಳೆಲ್ಲರೂ ಅವನ ಏಕತೆಯನ್ನು ಪ್ರಕಟಿಸುತ್ತಾ ಇದ್ದರು. ಅವರು ತಮ್ಮ ಜನಾಂಗದ ಜನರನ್ನು ಇದೇ ತತ್ವದ ಕಡೆಗೆ ಆಹ್ವಾನಿಸುತ್ತಿದ್ದರು. ಓ ಜನರೇ, ನೀವು ಏಕನಾದ ಅಲ್ಲಾಹನನ್ನು ಮಾತ್ರ ಆರಾಧಿಸಿರಿ. ಈ ಕಲ್ಲಿನ ವಿಗ್ರಹಗಳನ್ನು ಆರಾಧಿಸುವುದನ್ನು ಬಿಟ್ಟು ಬಿಡಿರಿ. ಅವುಗಳು ವ್ಯರ್ಥವಾಗಿವೆ. ಅವುಗಳಿಗೆ ಯಾವುದೇ ಶಕ್ತಿ ಇಲ್ಲ. ಓ ಮಕ್ಕದ ನಿವಾಸಿಗಳೇ, ವಿಗ್ರಹಗಳ ಮುಂದೆ ನೀವಿರಿಸಿದ ನೈವೇದ್ಯಗಳ ಮತ್ತು ಅರ್ಪಿತ ವಸ್ತುಗಳ ಮೇಲೆ ನೊಣಗಳ ಹಿಂಡು ಬಂದು ಕುಳಿತರೂ ಆ ವಿಗ್ರಹಗಳು ಆ ನೊಣಗಳನ್ನು ಹೊಡೆದೋಡಿಸಲು ಕೂಡ ಶಕ್ತವಾಗಿರುವುದಿಲ್ಲ. ಯಾರಾದರೂ ಆಕ್ರಮಿಸಿದರೆ ವಿಗ್ರಹಗಳು ತಮ್ಮ ಸಂರಕ್ಷಣೆ ಮಾಡಲಾರವು. ಯಾರಾದರೂ ಅವುಗಳನ್ನುಪ್ರಶ್ನಿಸಿದರೆ ಅವು ಪ್ರಶ್ನೆಗೆ ಉತ್ತರ ನೀಡಲಾರವು. ಯಾರಾದರೂ ಅವುಗಳಿಂದ ಸಹಾಯ ಯಾಚಿಸಿದರೆ ಅವುಗಳು ಯಾವ ಸಹಾಯವನ್ನೂ ನೀಡಲಾರವು. ಆದರೆ ಏಕದೇವನು ಬೇಡುವವರ ಅವಶ್ಯಕತೆಗಳನ್ನು ನೆರವೇರಿಸುತ್ತಾನೆ. ಪ್ರಶ್ನಿಸುವವನಿಗೆ ಉತ್ತರ ಕೊಡುತ್ತಾನೆ. ಸಹಾಯ ಯಾಚಿಸುವವನಿಗೆ ಸಹಾಯ ನೀಡುತ್ತಾನೆ. ಅವನು ತನ್ನ ಶತ್ರುಗಳನ್ನು ನೈಚ್ಯಾವಸ್ಥೆಗೆ ತಳ್ಳುತ್ತಾನೆ. ಅವನು ತನ್ನ ಭಕ್ತ ದಾಸರಿಗೆ ಅತ್ಯುನ್ನತ ಅಭಿವೃದ್ಧಿಯನ್ನು ನೀಡುತ್ತಾನೆ. ಅವನಿಂದ ಪ್ರಕಾಶ ಬರುತ್ತದೆ. ಅವನನ್ನು ಆರಾಧಿಸುವವರ ಹೃದಯಗಳನ್ನು ಅದು ಪ್ರಕಾಶಗೊಳಿಸುತ್ತದೆ. ಆದುದರಿಂದ ನೀವು ಇಂತಹ ದೇವನನ್ನು ಬಿಟ್ಟು ನಿರ್ಜೀವ ವಿಗ್ರಹಗಳ ಮುಂದೆ ಏಕೆ ತಲೆಬಾಗುತ್ತಿರುವಿರಿ? ನೀವು ನಿಮ್ಮ ಆಯುಷ್ಯವನ್ನು ಏಕೆ ವ್ಯರ್ಥಗೊಳಿಸುತ್ತಿರುವಿರಿ. ನೀವು ದೇವನ ಏಕತ್ವವನ್ನು ನಂಬದಿರುವುದರಿಂದ ನಿಮ್ಮ ಯೋಚನೆಗಳು ಕೊಳಕಾಗಿ ನಿಮ್ಮ ಹೃದಯಗಳು ಅಂಧಕಾರಮಯವಾಗಿರುವುದನ್ನು ನೀವು ನೋಡುವುದಿಲ್ಲವೇ? ನೀವು ವಿವಿಧ ಊಹಾಪೋಹಗಳ ಉಪದೇಶಗಳನ್ನು ಅವಲಂಬಿಸಿರುವಿರಿ. ಯಾವುದು ನ್ಯಾಯಬದ್ಧ? ಯಾವುದು ನಿಷಿದ್ಧ? ಎಂಬುದರ ವ್ಯತ್ಯಾಸವನ್ನು ನೀವು ಪರಿಗಣಿಸುವುದಿಲ್ಲ. ಒಳಿತು ಕೆಡುಕುಗಳ ವ್ಯತ್ಯಾಸವನ್ನು ನೀವು ಗುರುತಿಸಲಾರಿರಿ, ನೀವು ನಿಮ್ಮ ತಾಯಂದಿರಿಗೂ ಅವಮರ್ಯಾದೆ ಮಾಡುತ್ತಿರುವಿರಿ. ನೀವು ನಿಮ್ಮ ಸಹೋದರಿಯರಿಗೂ ಹೆಮ್ಮಕ್ಕಳಿಗೂ ಅನ್ಯಾಯ ಮಾಡುತ್ತಿರುವಿರಿ. ನೀವು ಅವರ ಹಕ್ಕುಗಳನ್ನು ನೀಡುತ್ತಾ ಇಲ್ಲ. ನಿಮ್ಮ ಪತ್ನಿಯರೊಂದಿಗೆ ನಿಮ್ಮ ನಡೆವಳಿಕೆ ಚೆನ್ನಾಗಿಲ್ಲ. ನೀವು ಅನಾಥರ ಹಕ್ಕುಗಳನ್ನು ಅಪಹರಿಸುತ್ತಿರುವಿರಿ. ನೀವು ವಿಧವೆಯರೊಂದಿಗೆ ಕೆಟ್ಟದಾಗಿ ವರ್ತಿಸುತ್ತಿರುವಿರಿ. ನೀವು ಬಡವರೊಂದಿಗೆ ಮತ್ತು ಬಲಹೀನರೊಂದಿಗೆ ಅನ್ಯಾಯದಿಂದ ವರ್ತಿಸುತ್ತಿರುವಿರಿ. ನೀವು ಬೇರೆಯವರ ಹಕ್ಕುಗಳನ್ನು ಅಪಹರಿಸಿ ನಿಮ್ಮ ದೊಡ್ಡಸ್ಥಿಕೆಯನ್ನು ಸ್ಥಾಪಿಸಿಡಲು ಇಚ್ಛಿಸುತ್ತಿರುವಿರಿ. ಸುಳ್ಳು ಮತ್ತು ಮೋಸದ ಬಗ್ಗೆ ನಿಮಗೆ ಯಾವುದೇ ನಾಚಿಕೆ ಇಲ್ಲ. ಕಳ್ಳತನ ಮತ್ತು ದರೋಡೆಯ ಬಗ್ಗೆ ನಿಮಗೆ ಯಾವುದೇ ದ್ವೇಷವಿಲ್ಲ. ಜುಗಾರಿ ಆಟ ಮತ್ತು ಮದ್ಯಪಾನ ನಿಮ್ಮ ಹವ್ಯಾಸಗಳಾಗಿವೆ. ವಿದ್ಯಾರ್ಜನೆ ಮತ್ತು ಸಾಮಾಜಿಕ ಸೇವೆಯ ಬಗ್ಗೆ ನಿಮಗೆ

ಕಾಳಜಿ ಇಲ್ಲ. ಏಕದೇವನ ಬಗ್ಗೆ ನೀವು ಎಲ್ಲಿಯತನಕ ನಿರ್ಲಕ್ಷ್ಯದಿಂದಿರಬಲ್ಲಿರಿ? ನೀವು ಬನ್ನಿರಿ, ನಿಮ್ಮನ್ನು ಸುಧಾರಣೆ ಮಾಡಿಕೊಳ್ಳಿರಿ. ದೌರ್ಜನ್ಯವನ್ನು ಬಿಟ್ಟುಬಿಡಿರಿ. ಪ್ರತಿಯೊಬ್ಬ ಹಕ್ಕುದಾರನಿಗೆ ಅವನ ಹಕ್ಕುಗಳನ್ನು ನೀಡಿರಿ. ನಿಮಗೆ ಅಲ್ಲಾಹನು ಧನವನ್ನು ನೀಡಿದ್ದರೆ ದೇಶ ಮತ್ತು ಸಮಾಜದ ಸೇವೆಗಾಗಿ, ಬಡವರ ಮತ್ತು ಬಲಹೀನರ ಅಭಿವೃದ್ಧಿಗಾಗಿ ವಿನಿಯೋಗಿಸಿರಿ. ಮಹಿಳೆಯರನ್ನು ಗೌರವಿಸಿರಿ, ಅವರ ಹಕ್ಕುಗಳನ್ನು ಕೊಡಿರಿ. ಅನಾಥರನ್ನು ಅಲ್ಲಾಹನ ವಿಶ್ವಸ್ತನಿಧಿಗಳೆಂದು ಪರಿಗಣಿಸಿರಿ. ಅವರ ಸಂರಕ್ಷಣೆಯು ಉನ್ನತ ಸ್ಥಾನ ಪಡೆದ ಒಳಿತೆಂದು ಮನವರಿಕೆ ಮಾಡಿಕೊಳ್ಳಿರಿ. ನೀವು ವಿಧವೆಯರಿಗೆ ಸಹಾಯ ಮಾಡುವವರಾಗಿರಿ. ನೀವು ಒಳಿತನ್ನೂ ಭಯಭಕ್ತಿಯನ್ನೂ ಸ್ಥಾಪಿಸಿರಿ. ನೀವು ನ್ಯಾಯ ಮತ್ತು ಸಮತೆಯನ್ನು ಮಾತ್ರವಲ್ಲದೆ ದಯೆ ಮತ್ತು ಪರೋಪಕಾರವನ್ನು ನಿಮ್ಮ ಗುಣಗಳನ್ನಾಗಿ ಮಾಡಿಕೊಳ್ಳಿರಿ. ಈ ಲೋಕದಲ್ಲಿ ನೀವು ಜನಿಸಿದುದು ವ್ಯರ್ಥವಾಗಬಾರದು. ನೀವು ಒಳ್ಳೆಯ ಗುರುತುಗಳನ್ನು ನಿಮ್ಮ ಹಿಂದೆ ಬಿಟ್ಟುಹೋಗಿರಿ. ನೀವು ಸ್ಥಿರವಾಗಿ ನೆಲೆನಿಲ್ಲುವ ಒಳಿತಿನ ಬೀಜವನ್ನು ಬಿತ್ತಿರಿ. ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದರಲ್ಲಿ ಅಲ್ಲ, ಬಲಿದಾನ ಮತ್ತು ತ್ಯಾಗ ಮಾಡುವುದರಲ್ಲಿ ನಿಜವಾದ ಗೌರವವಿದೆ. ಆದುದರಿಂದ ನೀವು ಬಲಿದಾನ ಮಾಡಿರಿ. ನೀವು ಅಲ್ಲಾಹನಿಗೆ ಸಮೀಪವಾಗಿರಿ. ನೀವು ತ್ಯಾಗ ಮಾಡುವುದರಲ್ಲಿ ಅಲ್ಲಾಹನ ಇತರ ದಾಸರೊಂದಿಗೆ ಸ್ಪರ್ಧಿಸಿರಿ. ಅಲ್ಲಾಹನ ಸಾನ್ನಿಧ್ಯದಲ್ಲಿ ನಿಮ್ಮ ಹಕ್ಕುಗಳು ಕಾಪಾಡಲ್ಪಡಲಿ. ನಾವು ಶಕ್ತಿಹೀನರೆಂಬುದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ಶಕ್ತಿಹೀನತೆಯನ್ನು ನೋಡಬೇಡಿರಿ. ಸತ್ಯ ಜಯಿಸುವುದೆಂಬ ತೀರ್ಮಾನ ಆಕಾಶದಲ್ಲಿ ಆಗಿಬಿಟ್ಟಿದೆ. ಈಗ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೂಲಕ ನ್ಯಾಯದ ತಕ್ಕಡಿ ಸ್ಥಾಪಿಸಲ್ಪಡುವುದು. ನ್ಯಾಯ ಮತ್ತು ದಯೆಯ ಆಧಿಪತ್ಯ ಸ್ಥಾಪಿತವಾಗುವುದು. ಈ ಆಧಿಪತ್ಯದಲ್ಲಿ ಯಾರಿಗೂ ಅನ್ಯಾಯವಾಗಲಾರದು. ಧರ್ಮದ ವಿಷಯದಲ್ಲಿ ಯಾವುದೇ ಹಸ್ತಕ್ಷೇಪವಾಗಲಾರದು. ಮಹಿಳೆಯರಿಗೆ ಮತ್ತು ಗುಲಾಮರಿಗೆ ಆಗುತ್ತಿದ್ದ ಅನ್ಯಾಯ ಕೊನೆಗೊಳಿಸಲ್ಪಡುವುದು. ಶೈತಾನನ ಆಧಿಪತ್ಯಕ್ಕೆ ಪ್ರತಿಯಾಗಿ ಏಕದೇವನ ಆಧಿಪತ್ಯ ಸ್ಥಾಪಿತವಾಗುವುದು."

## ಅಬೂತಾಲಿಬರೊಂದಿಗೆ ಮಕ್ಕ ನಗರದ ಅವಿಶ್ವಾಸಿಗಳ ದೂರು ಮತ್ತು ಹಝ್ರತ್ ಪೈಗಂಬರರ(ಸ) ಅಚಂಚಲ ಮನೋಭಾವ

ಮೇಲೆ ವಿವರಿಸಲಾದ ಉಪದೇಶಗಳನ್ನು ಮಕ್ಕ ನಗರದ ನಿವಾಸಿಗಳಿಗೆ ಪದೇ ಪದೇ ನೀಡಿದಾಗ ಸಜ್ಜನರ ಹೃದಯಗಳು ಇಸ್ಲಾಮ್ ಧರ್ಮದ ಕಡೆಗೆ ಆಕರ್ಷಿಸಲ್ಪಡಲು ತೊಡಗಿದವು. ಆಗ ಮಕ್ಕದ ಮುಂದಾಳುಗಳು ಗಾಬರಿಗೊಂಡು ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪ ಅಬೂತಾಲಿಬರ ಬಳಿಗೆ ಬಂದು ಹೀಗೆ ಹೇಳಿದರು: "ನೀವು ನಮ್ಮ ಹಿರಿಯ ನಾಯಕರಾಗಿರುವಿರಿ. ನಿಮ್ಮನ್ನು ಪರಿಗಣಿಸಿ ನಿಮ್ಮ ಸಹೋದರ ಪುತ್ರ ಮುಹಮ್ಮದ್‌ನಿಗೆ ನಾವು ಏನೂ ಹೇಳಿಲ್ಲ. ಈಗ ನಿಮ್ಮೊಂದಿಗೆ ಕೊನೆಯ ತೀರ್ಮಾನ ಮಾಡುವ ಸಮಯ ಬಂದಿದೆ. ನೀವು ಮುಹಮ್ಮದ್‌ನಿಗೆ



ಉಪದೇಶಿಸಿರಿ. ಅವನು ನಮ್ಮಿಂದ ಏನನ್ನು ಬಯಸುತ್ತಾನೆಂದು ಕೇಳಿರಿ. ಅವನು ನಮ್ಮಿಂದ ಗೌರವಿಸಲ್ಪಡಲು ಬಯಸುವುದಾದರೆ ನಾವು ಅವನನ್ನು ನಮ್ಮ ಅಧಿನಾಯಕನನ್ನಾಗಿ ಮಾಡಲು ಸಿದ್ಧರಾಗುವೆವು. ಅವನು ಐಶ್ವರ್ಯವನ್ನು ಬಯಸುವುದಾದರೆ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಐಶ್ವರ್ಯದ ಒಂದು ಪಾಲನ್ನು ಅವನಿಗೆ ಕೊಡಲು ಸಿದ್ಧನಾಗಿರುತ್ತಾನೆ. ಅವನು ವಿವಾಹವಾಗಲು ಬಯಸುವುದಾದರೆ ಮಕ್ಕದಲ್ಲಿ ಅವನು ಬಯಸುವ ಯಾವುದೇ ಹುಡುಗಿಯನ್ನು ಅವನು ಹೆಸರಿಸಲಿ. ನಾವು ಅವಳೊಂದಿಗೆ ಅವನ ವಿವಾಹ ನೆರವೇರಿಸಿ ಕೊಡುವೆವು. ನಾವು ಅವನಿಂದ ಅದಕ್ಕೆ ಪ್ರತಿಯಾಗಿ ಏನನ್ನೂ ಬಯಸುವುದಿಲ್ಲ. ಅವನನ್ನು ಯಾವುದರಿಂದಲೂ ನಾವು ತಡೆಯಲಾರೆವು. ಅವನು ನಮ್ಮ ವಿಗ್ರಹಗಳನ್ನು ದೂಷಿಸುವುದನ್ನು ಮಾತ್ರ ಬಿಟ್ಟುಬಿಡಲಿ. ದೇವನು ಏಕನೆಂದು ಬೇಕಾದರೆ ಅವನು ಹೇಳಲಿ. ಆದರೆ ನಮ್ಮ ವಿಗ್ರಹಗಳು ಕೆಟ್ಟದೆಂದು ಹೇಳಬಾರದು. ಇಷ್ಟು ಮಾತನ್ನು ಒಪ್ಪಿದರೆ ನಾವು ಅವನೊಂದಿಗೆ ರಾಜಿ ಮಾಡಿಕೊಳ್ಳುವೆವು. ನೀವು ಅವನಿಗೆ ಉಪದೇಶಿಸಿ ನಮ್ಮ ಪ್ರಸ್ತಾಪವನ್ನು ಅಂಗೀಕರಿಸುವಂತೆ ಮಾಡಿರಿ. ಅವನು ನಮ್ಮ ಪ್ರಸ್ತಾಪವನ್ನು ಅಂಗೀಕರಿಸದಿದ್ದರೆ ಎರಡು ಸಂಗತಿಗಳಲ್ಲಿ ಒಂದು ಆಗಿಯೇ ತೀರುವುದು. ನೀವು ನಿಮ್ಮ ಸಹೋದರ ಪುತ್ರನನ್ನು ಬಿಟ್ಟು ಬಿಡಬೇಕಾಗುವುದು ಅಥವಾ ನಿಮ್ಮ ಗೋತ್ರದವರು ನಿಮ್ಮ ನಾಯಕತ್ವವನ್ನು ನಿರಾಕರಿಸಿ ನಿಮ್ಮನ್ನು ಬಿಟ್ಟು ಬಿಡುವರು."

ಮಕ್ಕದ ಮುಂದಾಳುಗಳ ಮಾತು ಅಬೂತಾಲಿಬರ ಮನಸ್ಸಿಗೆ ಬಹಳ ನಾಟಿತು. ಅರಬ್ ದೇಶದ ನಿವಾಸಿಗಳಲ್ಲಿ ಹಣಕಾಸು ಹೆಚ್ಚೇನೂ ಇರಲಿಲ್ಲ. ಆದರೆ ಅವರಲ್ಲಿ ನಾಯಕತ್ವದ ಬಗ್ಗೆ ಅಭಿಮಾನವಿತ್ತು. ನಾಯಕರು ತಮ್ಮ ಗೋತ್ರಗಳಿಗಾಗಿ ಜೀವಿಸುತ್ತಿದ್ದರು. ಗೋತ್ರಗಳು ತಮ್ಮ ನಾಯಕರಿಗಾಗಿ ಜೀವಿಸುತ್ತಿದ್ದುವು. ಅಬೂತಾಲಿಬರು ಮುಂದಾಳುಗಳ ಮಾತಿನಿಂದ ಸಂತಾಪಗೊಂಡರು. ಅವರು ಹಝ್ರತ್ ಪೈಗಂಬರರನ್ನು(ಸ) ಕರೆದು ಹೇಳಿದರು:

"ಓ ನನ್ನ ಸಹೋದರಪುತ್ರಾ, ನನ್ನ ಗೋತ್ರದವರು ನನ್ನ ಬಳಿಗೆ ಬಂದು ಹೀಗೆಂದಿರುವರು: 'ನಾವು ನೀಡಿದ ವಿವಿಧ ಪ್ರಸ್ತಾಪಗಳಲ್ಲಿ ಯಾವುದನ್ನೂ ನಿಮ್ಮ ಸಹೋದರಪುತ್ರ ಅಂಗೀಕರಿಸುವುದಿಲ್ಲವಾದರೆ ಮತ್ತು ಅವನು ತನ್ನ ನಡೆವಳಿಕೆಯನ್ನು ನಾವು ಹೇಳಿದಂತೆ ಬದಲಾಯಿಸುವುದಿಲ್ಲವಾದರೆ ನೀವು ಅವನನ್ನು ಬಿಟ್ಟು ಬಿಡಬೇಕಾಗುವುದು ನಿಮ್ಮ ಕರ್ತವ್ಯವಾಗಿದೆ. ನೀವು ಅವನನ್ನು ಬಿಡುವುದಿಲ್ಲವಾದರೆ ನಾವು ನಿಮ್ಮ ನಾಯಕತ್ವವನ್ನು ಅಲ್ಲಗಳೆದು ನಿಮ್ಮನ್ನು ಬಿಟ್ಟು ಬಿಡುವೆವು.'"

ಅಬೂತಾಲಿಬರು ಮೇಲಿನ ಮಾತುಗಳನ್ನು ಹೇಳುತ್ತಿದ್ದಾಗ ಅವರ ಕಣ್ಣುಗಳು ಅಶ್ರುಭರಿತವಾದುವು. ಅದನ್ನು ಕಂಡು ಹಝ್ರತ್ ಪೈಗಂಬರರ(ಸ) ಕಣ್ಣುಗಳೂ ಅಶ್ರುಭರಿತವಾದುವು. ಅವರು ಹೀಗೆಂದರು:

"ಓ ನನ್ನ ಚಿಕ್ಕಪ್ಪಾ, ನೀವು ನಿಮ್ಮ ಗೋತ್ರದವರನ್ನು ಬಿಟ್ಟು ನನಗೆ ಸಹಾಯ ಮಾಡಬೇಕೆಂದು ನಾನು ಹೇಳುವುದಿಲ್ಲ. ನೀವು ಯಾವುದೇ ಶಂಕೆಯಿಲ್ಲದೆ ನನ್ನನ್ನು

ಬಿಟ್ಟು ಬಿಡಿರಿ ಮತ್ತು ನಿಮ್ಮ ಗೋತ್ರದವರೊಂದಿಗೆ ಸೇರಿಕೊಳ್ಳಿರಿ. ಆದರೆ ನಾನು ಏಕನಾದ ಮತ್ತು ಯಾರೂ ಸರಿಸಮಾನರಿಲ್ಲದ ಅಲ್ಲಾಹನ ನಾಮದಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ: ನನ್ನ ಬಲಭಾಗದಲ್ಲಿ ಸೂರ್ಯನನ್ನೂ ಎಡಭಾಗದಲ್ಲಿ ಚಂದ್ರನನ್ನೂ ತಂದು ನಿಲ್ಲಿಸಿದರೂ ನಾನು ಅಲ್ಲಾಹನ ಏಕತ್ವದ ಉಪದೇಶವನ್ನು ನೀಡುವುದನ್ನು ನಿಲ್ಲಿಸಲಾರೆನು. ನಾನು ಮೃತಪಡುವ ತನಕ ನನ್ನ ಕೆಲಸವನ್ನು ಮುಂದುವರಿಸುತ್ತಾ ಹೋಗುವೆನು. ನಿಮಗೆ ತಕ್ಕುದಾದ ನಿರ್ಧಾರವನ್ನು ನೀವೇ ಸ್ವತಃ ಯೋಚಿಸಿರಿ."

ಸತ್ಯವಿಶ್ವಾಸದಿಂದ ಕೂಡಿದ ಮತ್ತು ನಿಷ್ಠೆಯಿಂದ ತುಂಬಿದ ಈ ಉತ್ತರ ಅಬೂತಾಲಿಬರ ಕಣ್ಣನ್ನು ತೆರೆಯಲು ಪರ್ಯಾಪ್ತವಾಗಿತ್ತು. ಅವರು ಹೀಗೆ ಮನವರಿಕೆ ಮಾಡಿಕೊಂಡರು: ನನಗೆ ಸತ್ಯವಿಶ್ವಾಸವನ್ನು ಅಂಗೀಕರಿಸುವ ಭಾಗ್ಯ ಲಭಿಸಿಲ್ಲ. ಆದರೆ ಸತ್ಯವಿಶ್ವಾಸದ ದೃಶ್ಯಗಳನ್ನು ಕಾಣುವ ಭಾಗ್ಯ ಲಭಿಸಿದುದು ಎಲ್ಲಾ ಐಶ್ವರ್ಯಗಳಿಗಿಂತಲೂ ದೊಡ್ಡ ಸಂಪತ್ತಾಗಿದೆ.

ಅವರು ಹೀಗೆ ಹೇಳಿದರು: "ಓ ನನ್ನ ಸಹೋದರಪುತ್ರಾ, ನೀನು ಹೋಗು ಮತ್ತು ನಿನ್ನ ಕರ್ತವ್ಯವನ್ನು ನಿರ್ವಹಿಸು. ನನ್ನ ಗೋತ್ರದವರು ನನ್ನನ್ನು ಬಿಟ್ಟು ಬಿಡುವುದಾದರೆ ಬಿಟ್ಟು ಬಿಡಲಿ. ನಾನು ನಿನ್ನನ್ನು ಬಿಡಲಾರೆ."[14]

## ಅಬಿಸೀನಿಯಾ (ಇತಿಯೋಪಿಯಾ)ದ ಕಡೆಗೆ ವಲಸೆ

ಮಕ್ಕದ ನಿವಾಸಿಗಳ ದೌರ್ಜನ್ಯ ಅತ್ಯಧಿಕವಾದಾಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಶಿಷ್ಯರನ್ನು ಕರೆದು ಹೀಗೆಂದರು: "ಪಶ್ಚಿಮದ ದಿಕ್ಕಿನಲ್ಲಿ ಸಮುದ್ರದ ಆಚೆ ದಡದಲ್ಲಿ ಒಂದು ದೇಶವಿದೆ. ಅಲ್ಲಿನ ಜನರನ್ನು ಅವರು ಮಾಡುವ ಆರಾಧನೆಯ ವಿಧಾನದ ವ್ಯತ್ಯಾಸದ ಕಾರಣದಿಂದ ಹಿಂಸಿಸಲಾಗುವುದಿಲ್ಲ. ಧರ್ಮ ಪರಿವರ್ತನೆ ಮಾಡುವವರನ್ನು ಕೊಲ್ಲಲಾಗುವುದಿಲ್ಲ. ಅಲ್ಲಿ ನ್ಯಾಯನಿಷ್ಠುರರಾದ ಒಬ್ಬ ಅರಸರಿದ್ದಾರೆ. ನೀವು ಅಲ್ಲಿಗೆ ವಲಸೆ ಹೋಗಿರಿ. ಪ್ರಾಯಶಃ ಅಲ್ಲಿ ನಿಮಗೆ ಸುಖ ಸೌಲಭ್ಯದ ಮಾರ್ಗ ಸುಗಮವಾಗುವುದು."

ಹಝ್ರತ್ ಪೈಗಂಬರರ(ಸ) ಉಪದೇಶ ಪ್ರಕಾರ ಕೆಲವು ಮುಸ್ಲಿಮ್ ಪುರುಷರೂ ಸ್ತ್ರೀಯರೂ ಮಕ್ಕಳೂ ಅಬಿಸೀನಿಯಾ ದೇಶಕ್ಕೆ ವಲಸೆ ಹೋದರು. ಅವರು ಮಕ್ಕ ಬಿಟ್ಟು ಹೋದುದು ಸಾಮಾನ್ಯ ವಿಷಯವೇನೂ ಆಗಿರಲಿಲ್ಲ. ಮಕ್ಕದ ನಿವಾಸಿಗಳು ತಮ್ಮನ್ನು ಪವಿತ್ರ ಕಅ್‌ಬದ ಮೇಲುಸ್ತುವಾರಿ ನೋಡಿಕೊಳ್ಳುವವರಾಗಿ ಪರಿಗಣಿಸುತ್ತಿದ್ದರು. ಮಕ್ಕವನ್ನು ಬಿಟ್ಟು ಹೋಗುವುದು ಅವರನ್ನು ಅಸಹನೀಯ ದುಃಖಕ್ಕೆ ಈಡು ಮಾಡುತ್ತಿತ್ತು. ಅವರಿಗೆ ಮಕ್ಕದಲ್ಲಿ ಜೀವಿಸಲು ಅಷ್ಟು ದುರ್ಭರವಾದುದರಿಂದಲೇ ಅವರು ಮಕ್ಕವನ್ನು ಬಿಟ್ಟು ಹೋಗುವ ನಿರ್ಧಾರ ಮಾಡಿದರು. ಅವರು ಮಕ್ಕ ನಗರದಿಂದ ಹೊರಟು ಹೋಗುವುದು ಅವರಿಗೆ ಅತ್ಯಂತ ವೇದನೆ ಉಂಟುಮಾಡುವ ಸಂಭವವಾಗಿತ್ತು. ಅವರ ವಲಸೆ ಹೋಗುವಿಕೆ

14. ಇಬ್ನು ಹಿಶಾಮ್ ಸಂಪುಟ–1 ಪುಟ– 88 ಮತ್ತು ತಬರಿ ನೋಡಿರಿ



ಸಹ ಗೌಪ್ಯವಾಗಿರಬೇಕಾಗಿತ್ತು. ಮಕ್ಕದವರಿಗೆ ವಲಸೆ ಹೋಗುವವರ ಕುರಿತು ತಿಳಿದರೆ ಅವರನ್ನು ತಡೆಗಟ್ಟುವರೆಂದು ತಿಳಿದಿತ್ತು. ಆದುದರಿಂದ ವಲಸಿಗರಿಗೆ ತಮ್ಮ ಬಂಧುಗಳನ್ನೂ ಮಿತ್ರರನ್ನೂ ಕೊನೆಯದಾಗಿ ಭೇಟಿಯಾಗಲು ಕೂಡ ಸಾಧ್ಯವಾಗಲಿಲ್ಲ. ಅವರ ಹೃದಯದ ಸ್ಥಿತಿ ಹೇಗಿತ್ತೆಂದು ಅವರಿಗೆಯೇ ತಿಳಿದಿತ್ತು. ಅವರನ್ನು ನೋಡುವವರು ಸಹ ಅವರ ಕಷ್ಟದ ಸ್ಥಿತಿಯಿಂದ ಪ್ರಭಾವಿತರಾಗದೆ ಇರಲಿಲ್ಲ. ಈ ವಲಸೆಗಾರರ ಸಂಘ ಹೊರಟಾಗ ಆ ಕಾಲದಲ್ಲಿ ಅವಿಶ್ವಾಸಿಯಾಗಿದ್ದ ಮತ್ತು ಇಸ್ಲಾಮಿನ ಕಠಿಣ ಶತ್ರುವಾಗಿದ್ದ ಮತ್ತು ಮುಸ್ಲಿಮರಿಗೆ ಹಿಂಸೆ ಕೊಡುವುದರಲ್ಲಿ ಅಗ್ರಗಣ್ಯರಾಗಿದ್ದ ಹಝ್ರತ್ ಉಮರ್(ರ) ವಲಸೆಗಾರರಲ್ಲಿ ಕೆಲವರನ್ನು ಆಕಸ್ಮಿಕವಾಗಿ ಭೇಟಿಯಾಗಿದ್ದರು. ವಲಸೆಗಾರರಲ್ಲಿ ಹಝ್ರತ್ ಉಮ್ಮು ಅಬ್ದುಲ್ಲಾಹ್ ಎಂಬ ಒಬ್ಬ ಸ್ತ್ರೀಯು ಸಹ ಇದ್ದರು. ಕಟ್ಟಿ ಇಡಲಾದ ಸಾಮಗ್ರಿಗಳು ಮತ್ತು ಸಿದ್ಧಪಡಿಸಲಾದ ಸವಾರಿ ಮೃಗಗಳನ್ನು ಹಝ್ರತ್ ಉಮರ್(ರ) ಕಂಡಾಗ ಆ ಜನರು ಮಕ್ಕದಿಂದ ವಲಸೆ ಹೋಗಲಿದ್ದಾರೆಂದು ಅವರಿಗೆ ತಿಳಿದು ಅವರು ಹೀಗೆಂದರು: "ಓ ಉಮ್ಮು ಅಬ್ದುಲ್ಲಾಹ್, ಇದು ವಲಸೆ ಹೋಗುವ ಸಿದ್ಧತೆ ಎಂದು ತಿಳಿಯುತ್ತದೆ." ಆಗ ಉಮ್ಮು ಅಬ್ದುಲ್ಲಾ ಹೀಗೆ ಹೇಳಿದರೆಂದು ವರದಿಯಾಗಿದೆ: "ಅಲ್ಲಾಹನಾಣೆ, ನಾವು ಯಾವುದೋ ವಿದೇಶಕ್ಕೆ ವಲಸೆ ಹೋಗಲಿರುವೆವು. ಏಕೆಂದರೆ ನೀವು ನಮಗೆ ಬಹಳ ಹಿಂಸೆ ನೀಡಿದಿರಿ. ನಮ್ಮನ್ನು ಅನೇಕ ಕಷ್ಟಗಳಿಗೆ ಗುರಿಮಾಡಿದಿರಿ. ಅಲ್ಲಾಹನು ನಮಗೆ ಶಾಂತಿ ಮತ್ತು ಸಮಾಧಾನದ ಪರಿಸ್ಥಿತಿಯನ್ನು ಉಂಟುಮಾಡುವ ತನಕ ನಾವು ನಮ್ಮ ದೇಶಕ್ಕೆ ಮರಳಿಬರಲಾರೆವು." ಆಗ ಹಝ್ರತ್ ಉಮರ್(ರ), "ಒಳ್ಳೆಯದು, ದೇವನು ನಿಮ್ಮ ಜೊತೆಗಿರಲಿ" ಎಂದು ಹೇಳಿದುದಾಗಿ ಹಝ್ರತ್ ಉಮ್ಮು ಅಬ್ದುಲ್ಲಾ ವರದಿ ಮಾಡಿದ್ದಾರೆ. ಅವರ ಮಾತಿನಲ್ಲಿ ಹಿಂದೆಂದೂ ಕಂಡಿರದ ದುಃಖವನ್ನು ತಾನು ಮನವರಿಕೆ ಮಾಡಿದೆನೆಂದೂ ಅವರು ಅಲ್ಲಿಂದ ಬೇಗನೆ ಮುಖ ತಿರುಗಿಸಿ ಹೋದರೆಂದೂ ಅವರು ಈ ಕಾರಣದಿಂದ ಅತ್ಯಂತ ದುಃಖಿತರಾಗಿರುವರೆಂದು ತಾನು ತಿಳಿದುಕೊಂಡೆನೆಂದೂ ಉಮ್ಮು ಅಬ್ದುಲ್ಲಾ ವಿವರಿಸಿದ್ದಾರೆ. ಈ ಜನರು ವಲಸೆ ಹೋಗುವುದು ಮಕ್ಕದ ನಿವಾಸಿಗಳಿಗೆ ತಿಳಿದಾಗ ಅವರು ವಲಸೆಗಾರರನ್ನು ಬೆನ್ನಟ್ಟಿ ಸಮುದ್ರದ ತನಕ ಹೋದರು. ಆದರೆ ವಲಸೆಗಾರರು ಅವಿಶ್ವಾಸಿಗಳು ಸಮುದ್ರದ ಕರಾವಳಿ ತಲಪುವ ಮೊದಲೇ ಅಬಿಸೀನಿಯಾ ದೇಶಕ್ಕೆ ಹೊರಟಿದ್ದರು. ಮಕ್ಕದವರಿಗೆ ಈ ಸಂಗತಿ ತಿಳಿದಾಗ ಅಬಿಸೀನಿಯಾದ ಅರಸನ ಬಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಅರಸನನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಲು ಮತ್ತು ಅಲ್ಲಿಗೆ ಹೋದ ಮುಸ್ಲಿಮರನ್ನು ಮಕ್ಕದವರ ವಶಕ್ಕೆ ನೀಡಲು ಪ್ರೇರೇಪಿಸಿ ಅರಸನು ಅದಕ್ಕೆ ಒಪ್ಪಿದರೆ ಮುಸ್ಲಿಮರಿಗೆ ತಮಗೆ ಮನಬಂದಂತೆ ಶಿಕ್ಷೆ ನೀಡಲು ಅವರು ತೀರ್ಮಾನಿಸಿದರು. ಮಕ್ಕದ ಅವಿಶ್ವಾಸಿಗಳ ಮುಂದಾಳುಗಳ ಶಿಕ್ಷೆಯನ್ನು ಸಹಿಸದೆ ಮಕ್ಕದಿಂದ ಹೊರಗೆ ವಲಸೆ ಹೋದುದು ಮುಸ್ಲಿಮರ ಅಪರಾಧವಾಗಿ ಅವಿಶ್ವಾಸಿಗಳು ಪರಿಗಣಿಸಿದ್ದರು. ಅರಸನ ಬಳಿಗೆ ಕಳುಹಿಸಲಾದ ಪ್ರತಿನಿಧಿಗಳಲ್ಲಿ ಅನಂತರ ಮುಸ್ಲಿಮರಾದ ಹಝ್ರತ್

ಅಮರಿಬ್ನು ಆಸ್ ಸಹ ಇದ್ದರು. ಈಜಿಪ್ಟ್ ಅನಂತರ ಅವರಿಂದಲೇ ಜಯಿಸಲ್ಪಟ್ಟಿತು.

ಮಕ್ಕದವರ ಪ್ರತಿನಿಧಿಗಳು ಅಬಿಸೀನಿಯಾ ದೇಶಕ್ಕೆ ಹೋಗಿ ಅಲ್ಲಿನ ಅರಸನನ್ನು ಭೇಟಿಯಾದರು. ಅವರು ಅಲ್ಲಿನ ಆಸ್ಥಾನಿಕರನ್ನು ಮುಸ್ಲಿಮರ ವಿರುದ್ಧ ಚೆನ್ನಾಗಿ ಪ್ರಚೋದಿಸಿದರು. ಆದರೆ ಅಲ್ಲಾಹನು ಅಬಿಸೀನಿಯಾದ ಅರಸನ ಹೃದಯವನ್ನು ಬಲಪಡಿಸಿದ್ದನು. ಮಕ್ಕದ ಅವಿಶ್ವಾಸಿಗಳು ಒತ್ತಾಯಿಸಿದರೂ ಆತನ ಆಸ್ಥಾನಿಕರು ಅದಕ್ಕೆ ಪ್ರೇರೇಪಿಸಿದರೂ ಆತನು ಮುಸ್ಲಿಮರನ್ನು ಅವಿಶ್ವಾಸಿಗಳ ವಶಕ್ಕೆ ನೀಡಲು ಸಮ್ಮತಿಸಲಿಲ್ಲ.

ಮಕ್ಕದ ಪ್ರತಿನಿಧಿಗಳ ಸಂಘವು ಅಬಿಸೀನಿಯಾದಿಂದ ತಮ್ಮ ಉದ್ದೇಶ ಸಫಲವಾಗದೆ ಹಿಂದಿರುಗಿದಾಗ ಮಕ್ಕದ ಮುಂದಾಳುಗಳು ಮುಸ್ಲಿಮರನ್ನು ಹಿಂದಕ್ಕೆ ಕರೆತರಲು ಬೇರೆ ಒಂದು ಉಪಾಯವನ್ನು ಹೂಡಿದರು. ಅಬಿಸೀನಿಯಾ ದೇಶಕ್ಕೆ ಹೋಗುವ ವ್ಯಾಪಾರಿಗಳನ್ನು "ಮಕ್ಕದ ಎಲ್ಲಾ ಜನರು ಮುಸ್ಲಿಮರಾದರು" ಎಂದು ಸುಳ್ಳು ಪ್ರಚಾರ ಮಾಡಲು ಪ್ರೋತ್ಸಾಹಿಸಲಾಯಿತು. ಈ ಸುದ್ದಿ ಅಬಿಸೀನಿಯಾದಲ್ಲಿದ್ದ ಮುಸ್ಲಿಮರಿಗೆ ತಲುಪಿದಾಗ ಅವರಲ್ಲಿ ಬಹುತೇಕ ಜನರು ಮಕ್ಕಕ್ಕೆ ಮರಳಿದರು. ಆ ಸುದ್ದಿ ಕುಚೋದ್ಯದಿಂದ ಹಬ್ಬಿಸಲಾಗಿತ್ತೆಂದೂ ಅದರಲ್ಲಿ ಸತ್ಯಾಂಶ ಇರಲಿಲ್ಲವೆಂದೂ ಅವರಿಗೆ ಆಗ ತಿಳಿಯಿತು. ಅವರಲ್ಲಿ ಕೆಲವರು ಅಬಿಸೀನಿಯಾ ದೇಶಕ್ಕೆ ಹಿಂದಿರುಗಿದರು. ಕೆಲವರು ಮಕ್ಕದಲ್ಲಿಯೇ ತಂಗಿದರು. ಹೀಗೆ ಮಕ್ಕದಲ್ಲಿ ಉಳಿದವರಲ್ಲಿ ಉಸ್ಮಾನ್ ಬಿನ್ ಮಝ್‌ವೂನ್ ಸಹ ಇದ್ದರು. ಅವರು ಮಕ್ಕದ ಒಬ್ಬ ಐಶ್ವರ್ಯವಂತರ ಪುತ್ರರಾಗಿದ್ದರು. ಅವರಿಗೆ ಅವರ ತಂದೆಯ ಸ್ನೇಹಿತರಾಗಿದ್ದ ವಲೀದ್ ಬಿನ್ ಮುಘೀರ ಆಶ್ರಯ ನೀಡಿದರು. ಅವರು ಮಕ್ಕದಲ್ಲಿ ಯಾವುದೇ ತೊಂದರೆಗೀಡಾಗದೆ ದಿನಗಳೆಯುತ್ತಿದ್ದರು. ಆದರೆ ಬೇರೆ ಮುಸ್ಲಿಮರಿಗೆ ತೊಂದರೆ ಕೊಡಲಾಗುತ್ತಿತ್ತು. ಮುಸ್ಲಿಮರಿಗೆ ಕಠಿಣವಾದ ಕಷ್ಟವನ್ನು ಕೊಡುವುದನ್ನು ಕಂಡಾಗ ಅಭಿಮಾನಿ ತರುಣರಾದ ಅವರು ವಲೀದರ ಬಳಿಗೆ ಹೋಗಿ ಹೀಗೆ ಹೇಳಿದರು: "ನಾನು ನಿಮ್ಮ ಸಂರಕ್ಷಣೆಯನ್ನು ನಿಮಗೆ ಮರಳಿಸುತ್ತೇನೆ. ಬೇರೆ ಮುಸ್ಲಿಮರು ಕಷ್ಟಪಡುತ್ತಾ ಇರುವಾಗ ನಾನು ನಿಮ್ಮ ಆಶ್ರಯದಲ್ಲಿ ಸುಖದಿಂದಿರಲಾರೆನು." ಆಗ ವಲೀದ್, "ಉಸ್ಮಾನ್ ನನ್ನ ಸಂರಕ್ಷಣೆಯಲ್ಲಿ ಈಗ ಇಲ್ಲ" ಎಂದು ಪ್ರಕಟಿಸಿದರು.

ಒಂದು ದಿನ ಲಬೀದ್ ಎಂಬ ಒಬ್ಬ ಪ್ರಸಿದ್ಧ ಅರಬಿ ಕವಿ ಮಕ್ಕ ನಗರದ ಗಣ್ಯರ ಜೊತೆಗೆ ಕುಳಿತುಕೊಂಡು ತನ್ನ ಪದ್ಯವನ್ನು ಅವರಿಗೆ ಓದಿ ಹೇಳುತ್ತಿದ್ದನು. ಅವನ ಪದ್ಯದ ಒಂದು ಚರಣ ಹೀಗಿತ್ತು:

"ವ ಕುಲ್ಲು ನಯೀಮಿನ್ ಲಾ ಮಹಾಲತ ಝಾಯಿಲುನ್."

ಅಂದರೆ, ಎಲ್ಲಾ ಅನುಗ್ರಹಗಳು ನಿಶ್ಚಯವಾಗಿಯೂ ಕೊನೆಗೆ ನಾಶವಾಗಲಿರುವುವು.

ಆಗ ಹಝ್ರತ್ ಉಸ್ಮಾನ್(ರ) ಹೀಗೆಂದರು: "ಇದು ತಪ್ಪು. ಸ್ವರ್ಗದ



ಅನುಗ್ರಹಗಳು ಸದಾ ಕಾಲ ನೆಲೆನಿಲ್ಲುವುವು."

ಲಬೀದ್ ಬಹಳ ಗೌರವಿಸಲ್ಪಡುವ ದೊಡ್ಡ ವ್ಯಕ್ತಿಯಾಗಿದ್ದನು. ಆವನು ಉಸ್ಮಾನ್‌ರವರ ಆ ಉತ್ತರ ಕೇಳಿ ಕೆರಳಿದನು. ಅವನು ಹೇಳಿದನು: "ಓ ಖುರೈಶ್ ಜನರೇ, ನಿಮ್ಮ ಅತಿಥಿಗಳನ್ನು ಈ ರೀತಿ ಇದರ ಮೊದಲು ಅಪಮಾನಿಸಲು ಸಾಧ್ಯವಿರಲಿಲ್ಲ. ಈ ಹೊಸ ಸಂಪ್ರದಾಯ ಎಂದಿನಿಂದ ಪ್ರಾರಂಭವಾಯಿತು?" ಆಗ ಒಬ್ಬನು ಹೀಗೆಂದನು: "ಆತನೊಬ್ಬ ಮೂಢನಾಗಿದ್ದಾನೆ. ಆತನ ಮಾತನ್ನು ನಿರ್ಲಕ್ಷಿಸಿರಿ." ಆಗ ಉಸ್ಮಾನ್ ಹೇಳಿದರು: "ಇಲ್ಲಿ ಮೌಢ್ಯತೆ ಏನಿದೆ? ನಾನು ಹೇಳಿದುದು ಸತ್ಯವೇ ಆಗಿದೆ". ಆಗ ಆ ವ್ಯಕ್ತಿ ಉಸ್ಮಾನರ ಮುಖಕ್ಕೆ ಬಲವಾಗಿ ಗುದ್ದಿದನು. ಅದರಿಂದ ಅವರ ಒಂದು ಕಣ್ಣು ಹೊರಗೆ ಬಂತು, ವಲೀದ್ ಆ ಸಂದರ್ಭದಲ್ಲಿ ಅಲ್ಲಿ ಕುಳಿತಿದ್ದರು. ಉಸ್ಮಾನರ ತಂದೆಯೊಂದಿಗೆ ಅವರಿಗೆ ಬಹಳ ಗಾಢವಾದ ಸ್ನೇಹ ಸಂಬಂಧವಿತ್ತು. ತನ್ನ ಮೃತ ಸ್ನೇಹಿತನ ಮಗನು ಈ ಅವಸ್ಥೆಯಲ್ಲಿರುವುದನ್ನು ನೋಡಲು ಅವರಿಗೆ ಆಗಲಿಲ್ಲ. ಆದರೆ ಮಕ್ಕದ ಸಂಪ್ರದಾಯ ಪ್ರಕಾರ ಉಸ್ಮಾನ್ ಅವರ ಸಂರಕ್ಷಣೆಯಲ್ಲಿ ಇಲ್ಲದುದರಿಂದ ಅವರಿಗೆ ಬೆಂಬಲ ನೀಡಲು ಅವರಿಗೆ ಸಾಧ್ಯವಿರಲಿಲ್ಲ. ಆದುದರಿಂದ ಅವರು ಉಸ್ಮಾನ್‌ರನ್ನು ಸಂಬೋಧಿಸಿ ಹೀಗೆ ಹೇಳಿದರು: "ಓ ನನ್ನ ಮೃತ ಸ್ನೇಹಿತನ ಪುತ್ರಾ, ನೀನೊಂದು ಪ್ರಬಲ ಸಂರಕ್ಷಣೆಯಲ್ಲಿದ್ದಾಗ ನಿನ್ನ ಈ ಕಣ್ಣು ಸುರಕ್ಷಿತವಾಗಿತ್ತು (ಎಂದರೆ ನೀನು ನನ್ನ ಸಂರಕ್ಷಣೆಯಲ್ಲಿದ್ದಾಗ ನೀನು ಸುರಕ್ಷಿತನಾಗಿದ್ದೆ). ಆದರೆ ನೀನು ಸ್ವತಃ ಆ ಸಂರಕ್ಷಣೆಯನ್ನು ತ್ಯಜಿಸಿದೆ ಮತ್ತು ನಿನಗೆ ಈ ರೀತಿಯ ಅವಸ್ಥೆ ಆಯಿತು." ಆಗ ಉಸ್ಮಾನ್(ರ) ಹೀಗೆ ಹೇಳಿದರು: "ನನಗೆ ಏನು ಸಂಭವಿಸಿದೆಯೋ ಅದನ್ನು ನಾನು ಆಶಿಸಿದ್ದೆನು. ನೀನು ನನ್ನ ಒಡೆದ ಕಣ್ಣಿನ ಕುರಿತು ಸಂತಾಪ ಸೂಚಿಸುತ್ತಿರುವೆ. ಆದರೆ ನನ್ನ ಸುರಕ್ಷಿತವಾದ ಕಣ್ಣು ತನ್ನ ಸಹೋದರ ಕಣ್ಣಿಗೆ ಸಂಭವಿಸಿದುದು ತನಗೇಕೆ ಸಂಭವಿಸಿಲ್ಲ ಎಂದು ಆತಂಕಗೊಂಡಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಾದರಿ ನನಗೆ ಅನುಸರಣೆಗೆ ಯೋಗ್ಯವಾಗಿದೆ. ಅವರು ಕಷ್ಟ ಅನುಭವಿಸುತ್ತಾ ಇರುವಾಗ ನಾನು ಏಕೆ ಕಷ್ಟವನ್ನನುಭವಿಸಬಾರದು. ನನಗೆ ಅಲ್ಲಾಹನ ಸಹಾಯವೇ ಸಾಕು."

## ಹಝ್ರತ್ ಉಮರ್(ರ) ಇಸ್ಲಾಮ್ ಸ್ವೀಕಾರ

ಇದೇ ಕಾಲದಲ್ಲಿ ಮಕ್ಕದಲ್ಲಿ ನಡೆದ ಇನ್ನೊಂದು ಘಟನೆ ಮಕ್ಕಕ್ಕೆ ಬೆಂಕಿ ಹಚ್ಚಿತು. ಅದು ನಡೆದುದು ಹೀಗೆ: ಹಝ್ರತ್ ಉಮರ್(ರ) ಇಸ್ಲಾಮಿನ ಕಠಿಣ ಶತ್ರುಗಳಲ್ಲಿ ಒಬ್ಬರಾಗಿದ್ದರು. (ಅವರು ಅನಂತರ ಇಸ್ಲಾಮಿನ ದ್ವಿತೀಯ ಖಲೀಫರಾದರು). ಅವರು ಒಂದು ದಿನ ಹೀಗೆ ಯೋಚಿಸಿದರು: ಇಸ್ಲಾಮ್ ಧರ್ಮವನ್ನು ನಾಶಮಾಡಲು ಇಷ್ಟರವರೆಗೆ ಅನೇಕ ಪ್ರಯತ್ನಗಳು ನಡೆದಿವೆ. ಆದರೆ ಅದರಲ್ಲಿ ಯಶಸ್ಸು ಸಿಗಲಿಲ್ಲ. ಮುಹಮ್ಮದ್‌ನನ್ನೇ ಕೊಲೆ ಮಾಡಿ ಈ ಸಮಸ್ಯೆಯನ್ನು ಎಂದೆಂದಿಗೂ ಏಕೆ ಕೊನೆಗೊಳಿಸಬಾರದು? ಈ ಯೋಚನೆ ಸ್ಫುರಿಸಿದ ಕೂಡಲೆ

ಅವರು ಖಡ್ಗವನ್ನೆತ್ತಿಕೊಂಡು ಮನೆಯಿಂದ ಹೊರಟು ಹಝ್ರತ್ ಪೈಗಂಬರರನ್ನು(ಸ) ಹುಡುಕುತ್ತಾ ಹೋದರು. ದಾರಿಯಲ್ಲಿ ಅವರ ಒಬ್ಬ ಸ್ನೇಹಿತನು ಅವರನ್ನು ಕಂಡು ಅವರ ಕೋಪಾವೇಶದಿಂದ ಕೂಡಿದ ಅವಸ್ಥೆಯನ್ನು ನೋಡಿ ಗಾಬರಿಗೊಂಡು ಅವರನ್ನು ಕೇಳಿದನು: "ಉಮರ್, ನೀವೆಲ್ಲಿಗೆ ಹೋಗುತ್ತಿರುವಿರಿ?" ಹಝ್ರತ್ ಉಮರ್(ರ) ಹೇಳಿದರು: "ನಾನು ಮುಹಮ್ಮದ್‌ನನ್ನು ಕೊಂದು ಹಾಕಲು ಹೋಗುತ್ತಿದ್ದೇನೆ". ಆಗ ಸ್ನೇಹಿತ ಹೇಳಿದನು: "ಮುಹಮ್ಮದ್‌ನನ್ನು ಕೊಂದು ಅವನ ಗೋತ್ರದವರ ಪ್ರತೀಕಾರದಿಂದ ನೀವು ಸುರಕ್ಷಿತರಾಗಬಲ್ಲಿರೋ? ನೀವು ನಿಮ್ಮ ಮನೆಯವರ ಕುರಿತು ವಿಚಾರಿಸಿ ತಿಳಿದುಕೊಳ್ಳಿರಿ. ನಿಮ್ಮ ಸಹೋದರಿ ಮತ್ತು ನಿಮ್ಮ ಭಾವ ಸಹ ಮುಸ್ಲಿಮರಾಗಿರುವರು." ಆ ಸಮಾಚಾರ ಕೇಳಿ ಹಝ್ರತ್ ಉಮರ್(ರ) ಅವರ ತಲೆಗೆ ಸಿಡಿಲು ಮಿಂಚು ಬಡಿದಂತೆ ಆಯಿತು. ಅವರು ಯೋಚಿಸಿದರು: ನಾನು ಇಸ್ಲಾಮಿನ ಕಠೋರ ವಿರೋಧಿಯಾಗಿದ್ದೇನೆ. ನಾನೀಗ ಮುಹಮ್ಮದ್‌ನನ್ನು ಕೊಲ್ಲಲು ಹೋಗುತ್ತಿದ್ದೇನೆ. ಆದರೆ ನನ್ನ ಸಹೋದರಿ ಮತ್ತು ಭಾವ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರುವರಾದರೆ ಮೊದಲು ನಾನು ಅವರಿಬ್ಬರನ್ನು ಸರಿಪಡಿಸಬೇಕಾಗಿದೆ. ಹೀಗೆ ಯೋಚಿಸುತ್ತಾ ಅವರು ತಮ್ಮ ಸಹೋದರಿಯ ಮನೆಯ ಕಡೆಗೆ ಹೋದರು. ಅವರು ಮನೆಬಾಗಿಲಿಗೆ ತಲುಪಿದಾಗ ಒಳಗಿನಿಂದ ಏನೋ ಸುಶ್ರಾವ್ಯವಾಗಿ ಪಠಿಸುತ್ತಿರುವುದನ್ನು ಆಲಿಸಿದರು. ಹೀಗೆ ಪಠಿಸುತ್ತಿದ್ದವರು ಹಝ್ರತ್ ಖಬಾಬ್(ರ) ಆಗಿದ್ದರು. ಅವರು ಹಝ್ರತ್ ಉಮರ್(ರ) ಅವರ ಸಹೋದರಿ ಮತ್ತು ಭಾವನಿಗೆ ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು. ಹಝ್ರತ್ ಉಮರ್ ವೇಗವಾಗಿ ಮನೆಯನ್ನು ಪ್ರವೇಶಿಸಿದರು. ಅವರ ಪಾದದ ಸಪ್ಪಳವನ್ನು ಕೇಳಿ ಹಝ್ರತ್ ಖಬಾಬ್ ಕಲಿಸುವಿಕೆಯನ್ನು ನಿಲ್ಲಿಸಿ ಯಾವುದೋ ಮೂಲೆಯಲ್ಲಿ ಅಡಗಿ ಕುಳಿತುಕೊಂಡರು. ಹಝ್ರತ್ ಉಮರ್‌ರವರ ಸಹೋದರಿ ಫಾತಿಮ(ರ) ಓದುತ್ತಿದ್ದ ಪವಿತ್ರ ಖುರ್‌ಆನ್ ಹಾಳೆಗಳನ್ನು ಅಡಗಿಸಿದರು. ಹಝ್ರತ್ ಉಮರ್ ಮನೆಯನ್ನು ಪ್ರವೇಶಿಸಿದ ಕೂಡಲೆ ಕೋಪದಿಂದ, "ನೀವು ನಮ್ಮ ಧರ್ಮವನ್ನು ತ್ಯಜಿಸಿರುವಿರೆಂದು ನಾನು ತಿಳಿದಿರುವೆನು" ಎಂದು ಹೇಳಿ ತಮ್ಮ ಚಿಕ್ಕಪ್ಪನ ಮಗನೂ ಆಗಿದ್ದ ತಮ್ಮ ಭಾವನನ್ನು ಆಕ್ರಮಿಸಲು ಮುಂದಾದರು. ಆಗ ಫಾತಿಮ ತನ್ನ ಸಹೋದರ ತನ್ನ ಪತಿಯನ್ನು ಆಕ್ರಮಿಸಲು ಮುಂದೆ ಬಂದುದನ್ನು ಕಂಡು ಓಡಿಬಂದು ತನ್ನ ಪತಿಗೆ ಅಡ್ಡವಾಗಿ ನಿಂತರು. ಹಝ್ರತ್ ಉಮರ್ ಕೈಯೆತ್ತಿದ್ದರು. ಅವರ ಕೈ ವೇಗವಾಗಿ ಅವರ ಭಾವನ ಮುಖದ ಕಡೆಗೆ ಬರುತ್ತಿತ್ತು. ಆ ಕೈಯ ಹೊಡೆತ ಫಾತಿಮರವರ ಮುಖಕ್ಕೆ ಆಕಸ್ಮಿಕವಾಗಿ ಬಿದ್ದಿತು. ಆಗ ಫಾತಿಮರವರ ಮೂಗಿನಿಂದ ರಕ್ತ ಸುರಿಯಲು ತೊಡಗಿತು. ಫಾತಿಮ ಪೆಟ್ಟು ತಿಂದರೂ ಧೈರ್ಯದಿಂದ ಹೇಳಿದರು: "ನಾವು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದು ಸತ್ಯವಾಗಿದೆ. ಆದರೆ ನೀವು ನೆನಪಿಟ್ಟುಕೊಳ್ಳಿರಿ, ನಾವು ಈ ಧರ್ಮವನ್ನು ಬಿಟ್ಟು ಬಿಡಲಾರೆವು. ನಿಮಗೆ ಸಾಧ್ಯವಿರುವುದನ್ನೆಲ್ಲಾ ಮಾಡಿರಿ."



ಹಝ್ರತ್ ಉಮರ್(ರ) ಒಬ್ಬ ಶೂರ ವ್ಯಕ್ತಿಯಾಗಿದ್ದರು. ದೌರ್ಜನ್ಯ ಅವರ ಶೌರ್ಯವನ್ನು ಅಳಿಸಿ ಬಿಟ್ಟಿರಲಿಲ್ಲ. ಒಬ್ಬ ಮಹಿಳೆ ಮತ್ತು ಅದರಲ್ಲೂ ತನ್ನ ಸಹೋದರಿ ತನ್ನ ಕೈಯಿಂದ ಗಾಯಗೊಂಡುದನ್ನು ನೋಡಿದಾಗ ಅವರು ಬಹಳವಾಗಿ ನಾಚಿಕೆಪಟ್ಟು ಪಶ್ಚಾತ್ತಪಿಸಿದರು. ಸಹೋದರಿಯ ಮುಖದಿಂದ ರಕ್ತ ಸುರಿಯುತ್ತಿತ್ತು. ಹಝ್ರತ್ ಉಮರ್‌ರವರ ಹೃದಯದಿಂದ ಕೋಪ ದೂರ ಸರಿದಿತ್ತು. ತಮ್ಮ ಸಹೋದರಿಯ ಕ್ಷಮೆಯನ್ನು ಯಾಚಿಸುವ ಆಶೆ ಅವರಲ್ಲಿ ಹೆಚ್ಚಾಗುತ್ತಾ ಹೋಯಿತು. ಅವರಿಗೆ ಯಾವುದೇ ನೆಪ ಹುಡುಕಲು ಸಾಧ್ಯವಾಗಲಿಲ್ಲ. ಅವರು ತಮ್ಮ ಸಹೋದರಿಯೊಡನೆ ಹೇಳಿದರು: "ನೀವು ಈಗ ತಾನೆ ಓದುತ್ತಿದ್ದ ಆ ವಚನಗಳನ್ನು ನನಗೆ ಓದಿ ಕೇಳಿಸಿರಿ." ಆಗ ಫಾತಿಮ ಹೇಳಿದರು: "ನಾನು ನಿಮಗೆ ಅದನ್ನು ತೋರಿಸಲಾರೆನು. ನೀವು ಆ ಹಾಳೆಗಳನ್ನು ಹಾಳು ಮಾಡುವಿರಿ." ಆಗ ಹಝ್ರತ್ ಉಮರ್(ರ) ಹೇಳಿದರು: "ಇಲ್ಲ ಸಹೋದರಿ, ನಾನು ಹಾಗೆ ಮಾಡಲಾರೆನು." ಆಗ ಫಾತಿಮ ಹೇಳಿದರು: "ನೀವು ಈಗ ಅಶುದ್ಧರಾಗಿರುವಿರಿ. ನೀವು ಮೊದಲು ಸ್ನಾನಮಾಡಿರಿ. ಅನಂತರ ನಾನು ನಿಮಗೆ ಅದನ್ನು ತೋರಿಸುವೆನು."

ಹಝ್ರತ್ ಉಮರ್(ರ) ಅತ್ಯಂತ ಪಶ್ಚಾತ್ತಾಪದಿಂದ ತನ್ನ ಸಹೋದರಿ ಹೇಳಿದಂತೆಲ್ಲಾ ಮಾಡಲು ಸಿದ್ಧರಾಗಿದ್ದರು. ಅವರು ಸ್ನಾನ ಮಾಡಲು ಸಹ ಸಮ್ಮತಿಸಿದರು. ಅವರು ಸ್ನಾನ ಮಾಡಿ ಬಂದ ನಂತರ ಫಾತಿಮ ಅವರ ಕೈಯಲ್ಲಿ ಪವಿತ್ರ ಖುರ್‌ಆನಿನ ಹಾಳೆಗಳನ್ನು ಕೊಟ್ಟರು. ಅದರಲ್ಲಿ ಪವಿತ್ರ ಖುರ್‌ಆನಿನ "ತಾಹಾ" ಎಂಬ ಅಧ್ಯಾಯದ ಕೆಲವು ವಚನಗಳು ಇದ್ದುವು. ಅವರು ಓದಲು ತೊಡಗಿದರು:

**"ನಿಶ್ಚಯವಾಗಿಯೂ ನಾನೇ ಅಲ್ಲಾಹನು. ನನ್ನ ಹೊರತು ಬೇರೆ ಆರಾಧ್ಯನಿಲ್ಲ. ಆದುದರಿಂದ ನೀನು ನನ್ನ ಆರಾಧನೆಯನ್ನು ಮಾಡು. ನನ್ನ ಸ್ಮರಣೆಗೋಸ್ಕರ ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸು. ಖಂಡಿತವಾಗಿಯೂ ಆ ಸಮಯ ಬರಲಿದೆ. ಪ್ರತಿಯೊಂದು ಆತ್ಮ ಅದರ ಕರ್ಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವಂತಾಗಲು ನಾನು ಅದನ್ನು ಪ್ರಕಟಿಸುವೆನು."** (ಪವಿತ್ರ ಖುರ್‌ಆನ್ 20:15,16)

ಈ ವಚನಗಳನ್ನು ಓದಿದಾಗ ಅವರು ಪಕ್ಕನೆ ಉದ್ಗರಿಸಿದರು: "ಇದೆಂತಹ ಆಶ್ಚರ್ಯಕರವಾದ ಪವಿತ್ರ ವಚನಗಳಾಗಿವೆ." ಹಝ್ರತ್ ಖಬಾಬ್ ಈ ಉದ್ಗಾರವನ್ನು ಆಲಿಸಿದಾಗ ತಾನು ಅಡಗಿದ್ದ ಸ್ಥಳದಿಂದ ಹೊರಗೆ ಬಂದು ಹೇಳಿದರು: "ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪ್ರಾರ್ಥನೆಗಳ ಪರಿಣಾಮವಾಗಿಯೇ ನಿಮ್ಮಲ್ಲಿ ಈ ಪರಿವರ್ತನೆ ಉಂಟಾಯಿತು. ಅಲ್ಲಾಹನಾಣೆ, ಹಝ್ರತ್ ಮುಹಮ್ಮದ್ ಪೈಗಂಬರ್, 'ಓ ನನ್ನ ಪ್ರಭೂ ಉಮರಿಬ್ನುಲ್ ಖತ್ತಾಬ್ ಅಥವಾ ಉಮರಿಬ್ನು ಹಿಶಾಮ್ ಇವರಿಬ್ಬರಲ್ಲಿ ಒಬ್ಬನಿಗಾದರೂ ಇಸ್ಲಾಮಿನ ಕಡೆಗೆ ಮಾರ್ಗದರ್ಶನ ನೀಡು' ಎಂದು ಪ್ರಾರ್ಥಿಸುವುದನ್ನು ನಿನ್ನೆಯೇ ನಾನು ಆಲಿಸಿದೆನು."

ಹಝ್ರತ್ ಉಮರ್(ರ) ಆಗ ಎದ್ದು ನಿಂತು, ಹಝ್ರತ್ ಮುಹಮ್ಮದ್(ಸ)

ಎಲ್ಲಿದ್ದಾರೆಂದು ವಿಚಾರಿಸಿದರು. ಹಝ್ರತ್ ಮುಹಮ್ಮದ್(ಸ) ದಾರ್ ಅರ್‌ಖಮ್‌ನಲ್ಲಿ ಇರುವುದಾಗಿ ಅವರಿಗೆ ತಿಳಿಸಿದಾಗ ಅವರು ತನ್ನ ಕೈಯಲ್ಲಿ ಒರೆಗಳಚಿದ ಖಡ್ಗವನ್ನು ಎತ್ತಿಕೊಂಡು ಅಲ್ಲಿಗೆ ಹೋಗಿ ಮನೆ ಬಾಗಿಲನ್ನು ತಟ್ಟಿದಾಗ ಶಿಷ್ಯರು ಬಾಗಿಲಿನ ಸಂಧಿಯಲ್ಲಿ ಹಝ್ರತ್ ಉಮರ್(ರ) ನಗ್ನ ಖಡ್ಗವನ್ನು ಎತ್ತಿಕೊಂಡು ನಿಂತಿರುವುದಾಗಿ ಕಂಡರು. ಬಾಗಿಲು ತೆರೆದರೆ ಒಳಗೆ ಏನಾದರೂ ಅನಾಹುತ ಸಂಭವಿಸಬಹುದೆಂದು ಅವರು ಹೆದರಿದರು. ಆದರೆ ಹಝ್ರತ್ ಪೈಗಂಬರ್(ಸ) ಬಾಗಿಲು ತೆರೆಯಲು ಹೇಳಿದರು. ಹಝ್ರತ್ ಉಮರ್(ರ) ಖಡ್ಗವನ್ನೆತ್ತಿಕೊಂಡು ಒಳಗೆ ಪ್ರವೇಶಿಸಿದರು. ಹಝ್ರತ್ ಪೈಗಂಬರ್(ಸ) ಮುಂದೆ ಹೋಗಿ ಕೇಳಿದರು: "ಓ ಉಮರ್, ನೀವು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರಿ?" ಹಝ್ರತ್ ಉಮರ್(ರ) ಹೇಳಿದರು: "ಓ ಅಲ್ಲಾಹನ ಪ್ರವಾದಿಯವರೇ, ನಾನು ಮುಸ್ಲಿಮನಾಗಲು ಬಂದಿದ್ದೇನೆ." ಹಝ್ರತ್ ಪೈಗಂಬರ್(ಸ) ಈ ಮಾತುಗಳನ್ನು ಆಲಿಸಿ ಉಚ್ಚ ಸ್ವರದಿಂದ "ಅಲ್ಲಾಹು ಅಕ್‌ಬರ್" (ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು) ಎಂದು ಹೇಳಿದರು. ಅವರ ಶಿಷ್ಯರು ಸಹ ಉಚ್ಚ ಸ್ವರದಿಂದ ಅಲ್ಲಾಹು ಅಕ್‌ಬರ್ ಎಂದು ಪುನರಾವರ್ತಿಸಿದರು. ಈ ಧ್ವನಿ ಮಕ್ಕದ ಗುಡ್ಡಗಳಿಂದ ಪ್ರತಿಧ್ವನಿಸಿತು. ಸ್ವಲ್ಪ ಹೊತ್ತಿನೊಳಗೆ ಈ ಸಮಾಚಾರ ಮಕ್ಕ ನಗರದಲ್ಲಿ ಬೆಂಕಿಯಂತೆ ಹಬ್ಬಿತು.

ಹಝ್ರತ್ ಪೈಗಂಬರರ(ಸ) ಇತರ ಶಿಷ್ಯರೊಂದಿಗೆ ವರ್ತಿಸುವ ಹಾಗೆಯೇ ಹಝ್ರತ್ ಉಮರ್‌ರೊಂದಿಗೆ(ರ) ಮಕ್ಕದ ನಿವಾಸಿಗಳು ಕಠಿಣವಾಗಿ ವರ್ತಿಸಲು ತೊಡಗಿದರು. ಆದರೆ ಹೊಡೆಯುವುದರಲ್ಲಿ ಮತ್ತು ಕೊಲ್ಲುವುದರಲ್ಲಿ ಆನಂದಿಸುತ್ತಾ ಇದ್ದ ಹಝ್ರತ್ ಉಮರ್(ರ) ಪೆಟ್ಟು ತಿನ್ನುವುದರಲ್ಲಿ ಮತ್ತು ಹೊಡೆತಕ್ಕೊಳಗಾಗುವುದರಲ್ಲಿ ಸಂತೋಷಪಡಲು ತೊಡಗಿದರು. ಹಝ್ರತ್ ಉಮರ್(ರ) ಸ್ವತಃ ಹೀಗೆ ಹೇಳಿದ್ದರು: "ನಾನು ಸತ್ಯ ವಿಶ್ವಾಸವನ್ನು ಸ್ವೀಕರಿಸಿದ ನಂತರ ಮಕ್ಕದ ರಸ್ತೆಗಳಲ್ಲಿ ಪೆಟ್ಟು ತಿನ್ನುತ್ತಾ ಇದ್ದೆನು."

## ಮುಸ್ಲಿಮರಿಗೆ ಬಹಿಷ್ಕಾರ

ಒಟ್ಟಾರೆ ಹೇಳುವುದಾದರೆ, ಸತ್ಯವಿಶ್ವಾಸಿಗಳ ವಿರುದ್ಧ ಅವಿಶ್ವಾಸಿಗಳ ದೌರ್ಜನ್ಯ ಮಿತಿಮೀರಿ ಹೋಗುತ್ತಿತ್ತು. ಕೆಲವು ಸತ್ಯವಿಶ್ವಾಸಿಗಳು ಮಕ್ಕದಿಂದ ಹೊರಗೆ ಹೋಗಿದ್ದರು. ಬೇರೆ ಕೆಲವರು ಮಕ್ಕದಲ್ಲಿ ವಾಸಿಸುತ್ತಾ ಮೊದಲಿಗಿಂತ ಹೆಚ್ಚಾಗಿ ದೌರ್ಜನ್ಯಕ್ಕೆ ಗುರಿಯಾಗುತ್ತಾ ಹೋಗುತ್ತಿದ್ದರು. ಆದರೆ ದೌರ್ಜನ್ಯಗಾರರ ಹೃದಯಗಳು ಸಮಾಧಾನಗೊಂಡಿರಲಿಲ್ಲ. ಈ ಮೊದಲು ಕೃತಿಗಿಳಿಸಿದ ದೌರ್ಜನ್ಯಗಳು ಮುಸ್ಲಿಮರ ಹೃದಯಗಳನ್ನು ಧೈರ್ಯಗುಂದಿಸಲು ಸಹಕಾರಿಯಾಗಲಿಲ್ಲ, ಅವರ ವಿಶ್ವಾಸದಲ್ಲಿ ಯಾವುದೇ ಬದಲಾವಣೆ ಉಂಟಾಗಲಿಲ್ಲ, ಅವರು ಏಕದೇವಾರಾಧನೆಯಲ್ಲಿ ಇನ್ನಷ್ಟು ಮುಂದುವರಿದಿರುವರು ಮತ್ತು ವಿಗ್ರಹಗಳ ಬಗ್ಗೆ ಅವರ ವಿರೋಧ ಇನ್ನಷ್ಟು ಹೆಚ್ಚುತ್ತಾ ಇದೆ ಎಂದು ಮನವರಿಕೆ ಮಾಡಿಕೊಂಡು ಅವಿಶ್ವಾಸಿಗಳು ಇನ್ನೊಂದು ಸಮಾಲೋಚನೆಯ ಸಭೆಯನ್ನು ಜರಗಿಸಿದರು. ಅವರು ಆ ಸಭೆಯಲ್ಲಿ ಹೀಗೆ



ತೀರ್ಮಾನಿಸಿದರು: ಮುಸ್ಲಿಮರೊಂದಿಗೆ ಸಂಪೂರ್ಣ ಸಂಬಂಧ ವಿಚ್ಛೇದಿಸಬೇಕು. ಅವರಿಗೆ ಸಾಮಗ್ರಿಗಳನ್ನು ಯಾರೂ ಮಾರಾಟಮಾಡಬಾರದು. ಅವರೊಂದಿಗೆ ಯಾರೂ ಕೊಡುಕೊಳ್ಳುವ ವ್ಯಾಪಾರ ಕೂಡ ಮಾಡಬಾರದು. ಅವರನ್ನು ಬಹಿಷ್ಕರಿಸಬೇಕು.

ಆಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ), ಅವರ ಕೆಲವು ಶಿಷ್ಯರು, ಅವರ ಪತ್ನಿಯರು, ಮಕ್ಕಳು ಮತ್ತು ಕೆಲವು ಮುಸ್ಲಿಮೇತರ ಸಂಬಂಧಿಕರು (ಅವರು ಮುಸ್ಲಿಮೇತರರಾಗಿದ್ದರೂ ಹಝ್ರತ್ ಪೈಗಂಬರರನ್ನು(ಸ) ಬಿಟ್ಟು ಬಿಡಲು ಸಿದ್ಧರಿರಲಿಲ್ಲ) ಒಂದು ಪ್ರತ್ಯೇಕ ಸ್ಥಳದಲ್ಲಿ ಆಶ್ರಯಪಡೆಯಲು ನಿರ್ಬಂಧಿಸಲ್ಪಟ್ಟರು. ಆ ಸ್ಥಳ ಅಬೂತಾಲಿಬರ ಮಾಲಿಕತ್ವಕ್ಕೆ ಸೇರಿದ್ದಿತು.[15] ಅವರಿಗೆ ಜೀವಿಸಲು ಅವರ ಬಳಿ ಹಣವಿರಲಿಲ್ಲ ಮತ್ತು ಆಹಾರದ ಉಗ್ರಾಣವೂ ಇರಲಿಲ್ಲ. ಅವರು ಕಠಿಣವಾದ ಆ ನಿರ್ಗತಿಕ ಅವಸ್ಥೆಯಲ್ಲಿ ಹೇಗೆ ಕಾಲ ಕಳೆದರೆಂಬುದು ಬೇರೆಯವರು ಮನವರಿಕೆ ಮಾಡುವುದು ಸಾಧ್ಯವಾಗಲಾರದು. ಅಂದಾಜು ಮೂರು ವರ್ಷಗಳ ಕಾಲ ಇದೇ ಪರಿಸ್ಥಿತಿ ಮುಂದುವರಿಯಿತು. ಮಕ್ಕದವರು ಬಹಿಷ್ಕಾರದ ಕುರಿತು ಮಾಡಿದ ತೀರ್ಮಾನದಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲ. ಆದರೆ ಅಂದಾಜು ಮೂರು ವರ್ಷಗಳ ನಂತರ ಮಕ್ಕದ ಐವರು ಸಜ್ಜನರ ಹೃದಯದಲ್ಲಿ ಈ ದೌರ್ಜನ್ಯದ ವಿರುದ್ಧ ಭಾವನೆಗಳು ಉಂಟಾದವು. ಅವರು ಮುಸ್ಲಿಮರು ವಾಸಿಸುತ್ತಿದ್ದ ಶಅಬ್ ಅಬೀತಾಲಿಬ್‌ಗೆ ಬಂದು ಅಲ್ಲಿಂದ ಮುಸ್ಲಿಮರನ್ನು ಹೊರಕ್ಕೆ ಬರಲು ಹೇಳಿದರು. ಬಹಿಷ್ಕಾರದ ಆಜ್ಞೆಯನ್ನು ಹಿಂತೆಗೆದುಕೊಳ್ಳುವುದಾಗಿ ಅವರು ತಿಳಿಸಿದರು.

ಅಬೂತಾಲಿಬರು ದೀರ್ಘಕಾಲದ ಬಂಧನ ಮತ್ತು ನಿರಾಹಾರದಿಂದ ಬಹಳ ಕ್ಷೀಣಿತರಾಗಿದ್ದರು. ಅವರು ತಮ್ಮ ಗೋತ್ರದ ಜನರೊಂದಿಗೆ ಹೇಳಿದರು: "ನೀವು ಮಾಡಿದ ಈ ದೀರ್ಘಕಾಲದ ದೌರ್ಜನ್ಯವನ್ನು ಸಮರ್ಥಿಸು ವುದಾದರೂ ಹೇಗೆ?"

ಐವರು ಸಜ್ಜನರು ತಮ್ಮ ಸಮಾಜದ ವಿರುದ್ಧ ವಿದ್ರೋಹ ಮಾಡಿದ ಸಮಾಚಾರ ಕೂಡಲೆ ಸಿಡಿಲು ಮಿಂಚಿನಂತೆ ನಗರದಲ್ಲೆಲ್ಲಾ ಹಬ್ಬಿತು. ಮನುಷ್ಯ ಸಹಜವಾದ ಪ್ರಕೃತಿ ಪುನಃ ತಲೆಯೆತ್ತಲು ಪ್ರಾರಂಭಿಸಿತು. ಒಳಿತಿನ ಆತ್ಮ ಇನ್ನೊಮ್ಮೆ ಶ್ವಾಸೋಚ್ಛ್ವಾಸ ಮಾಡಲು ತೊಡಗಿತು. ಮಕ್ಕದ ಜನರು ತಮ್ಮ ಪೈಶಾಚಿಕ ಒಪ್ಪಂದವನ್ನು ಮುರಿಯಲು ನಿರ್ಬಂಧಿತರಾದರು. ಬಹಿಷ್ಕಾರದ ನಿರ್ಧಾರ ಕೊನೆಗೊಂಡಿತು. ಆದರೆ ಮೂರುವರ್ಷಗಳ ಕಾಲ ಹಸಿವೆಯಿಂದ ಕಂಗೆಟ್ಟವರಿಗೆ ಅದು ತನ್ನ ಪರಿಣಾಮ ಬೀರಲು ತೊಡಗಿತು. ಕೆಲವೇ ದಿನಗಳಲ್ಲಿ ಹಝ್ರತ್ ಪೈಗಂಬರರ(ಸ) ನಿಷ್ಠಾವಂತೆಯಾದ ಪತ್ನಿ ಖದೀಜ(ರ) ಆ ಬಹಿಷ್ಕಾರದ ಕಾಲದಲ್ಲಿ ಅನುಭವಿಸಿದ ಕಷ್ಟಗಳ ಕಾರಣದಿಂದ ಮೃತರಾದರು. ಒಂದು ತಿಂಗಳ ನಂತರ ಅಬೂತಾಲಿಬರು ಸಹ ಈ ಲೋಕದಿಂದ ಅಗಲಿ ಹೋದರು.

15. ಇಬ್ನು ಹಿಶಾಮ್ ಭಾಗ–1 ಪುಟ–130, ಝುರ್‌ಖಾನಿ ಭಾಗ–2 ಪುಟ– 279

## ಧರ್ಮಪ್ರಚಾರದಲ್ಲಿ ಉಂಟಾದ ತಡೆಗಳು ಮತ್ತು ಹಝ್ರತ್ ಪೈಗಂಬರರ(ಸ) ತಾಯಿಫ್ ಪ್ರಯಾಣ

ಹಝ್ರತ್ ಪೈಗಂಬರ್(ಸ) ಮತ್ತು ಅವರ ಶಿಷ್ಯರು ಅಬೂತಾಲಿಬರ ಸೌಹಾರ್ದದ ಪ್ರಭಾವದಿಂದ ಈಗ ವಂಚಿತರಾದರು. ಹಝ್ರತ್ ಪೈಗಂಬರರ(ಸ) ಗೃಹಜೀವನದ ಸಂಗಾತಿ ಸಹ ಅವರಿಂದ ಅಗಲಿ ಹೋದರು. ಅವರಿಬ್ಬರ ಜೊತೆಗಿದ್ದ ಬಾಂಧವ್ಯದ ಕಾರಣದಿಂದ ಸಹಜವಾಗಿ ದೌರ್ಜನ್ಯಗಾರರನ್ನು ತಡೆಯುತ್ತಿದ್ದವರ ಸಹಾನುಭೂತಿಗಳೂ ಕಡಿಮೆ ಯಾದುವು. ಅಬೂತಾಲಿಬರು ನಿಧನ ಹೊಂದಿದುದರಿಂದ ಉಂಟಾದ ಶೋಕದ ಕಾರಣದಿಂದ ಮತ್ತು ಅಬೂತಾಲಿಬರ ಮರಣ ಶಾಸನದ ಕಾರಣದಿಂದ ಕೆಲವು ದಿನಗಳವರೆಗೆ ಹಝ್ರತ್ ಪೈಗಂಬರರ(ಸ) ಕಠಿಣ ಶತ್ರುವಾದ ಅಬೂತಾಲಿಬರ ಕಿರಿಯ ಸಹೋದರ ಅಬೂಲಹಬನು ಹಝ್ರತ್ ಪೈಗಂಬರ್‌ರಿಗೆ(ಸ) ಬೆಂಬಲ ನೀಡಿದ್ದನು. ಆದರೆ ಮಕ್ಕದ ಜನರು "ಮುಹಮ್ಮದ್ ಏಕದೇವನ ಏಕತ್ವದಲ್ಲಿ ನಂಬಿಕೆಯನ್ನು ಹೊಂದದವರನ್ನು ಅಪರಾಧಿಗಳೆಂದೂ ಶಿಕ್ಷಾರ್ಹರೆಂದೂ ಬಗೆದಿರುವರು" ಎಂದು ಹೇಳಿ ಅಬೂಲಹಬನನ್ನು ಉದ್ರೇಕಿಸಿದುದರಿಂದ ಆತನು ತನ್ನ ತಂದೆ ತಾತಂದಿರ ಅಭಿಮಾನದಿಂದ ಭಾವಾವೇಶಗೊಂಡು ಹಝ್ರತ್ ಪೈಗಂಬರ್‌ರಿಗೆ(ಸ) ಬೆಂಬಲ ಕೊಡುವುದನ್ನು ನಿಲ್ಲಿಸಿದನು ಮತ್ತು ಇನ್ನು ಮುಂದೆ ಮೊದಲಿಗಿಂತ ಅವರನ್ನು ಹೆಚ್ಚು ವಿರೋಧಿಸುವೆನೆಂದು ಪ್ರತಿಜ್ಞೆ ಮಾಡಿದನು.

ಬಹಿಷ್ಕೃತ ಮತ್ತು ಪ್ರತಿಬಂಧಕ ಸ್ಥಿತಿಯಲ್ಲಿ ಜೀವಿಸುತ್ತಾ ಇದ್ದುದರಿಂದ ಜನರು ತಮ್ಮ ಸಂಬಂಧಿಕರಿಂದ ದೂರವಿದ್ದ ಕಾರಣ ಬಾಂಧವ್ಯದಲ್ಲಿ (ಹೆಚ್ಚಿನ ಕಾವು ಇರದೆ) ಒಂದು ರೀತಿಯ ಶೈತ್ಯಾವಸ್ಥೆ ತಲೆದೋರಿತ್ತು. ಮಕ್ಕದ ಜನರು ಮುಸ್ಲಿಮರೊಂದಿಗೆ ಮಾತನಾಡುತ್ತಿರಲಿಲ್ಲ. ಆದುದರಿಂದ ಧರ್ಮಪ್ರಚಾರದ ಕ್ಷೇತ್ರ ಸೀಮಿತಗೊಂಡಿತ್ತು. ಹಝ್ರತ್ ಪೈಗಂಬರ್(ಸ) ಈ ಸ್ಥಿತಿಯನ್ನು ನೋಡಿ ಮಕ್ಕದ ಬದಲಿಗೆ ತಾಯಿಫ್ ನಗರಕ್ಕೆ ಹೋಗಿ ಅಲ್ಲಿನ ಜನರಿಗೆ ಇಸ್ಲಾಮಿನ ಸಂದೇಶ ನೀಡಲು ನಿರ್ಧರಿಸಿದರು. ಮಕ್ಕದವರ ವಿರೋಧ ಹೆಚ್ಚಾದಂತೆ ಅವರ ಈ ನಿರ್ಧಾರ ಬಲಯುತವಾಯಿತು. ಮಕ್ಕದ ಜನರು ಅವರ ಮಾತುಗಳನ್ನು ಆಲಿಸುತ್ತಲೇ ಇರಲಿಲ್ಲ. ಅವರು ಮಕ್ಕದ ಮಾರ್ಗಗಳಲ್ಲಿ ನಡೆಯಲು ಅವಿಶ್ವಾಸಿಗಳು ಬಿಡುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಟಾಗ ಅವರ ತಲೆಗೆ ಮಣ್ಣು ಎಸೆಯಲಾಗುತ್ತಿತ್ತು. ಜನರನ್ನು ಭೇಟಿಯಾಗುವುದು ಅವರಿಗೆ ಅಸಾಧ್ಯವಾಗುತ್ತಿತ್ತು. ಒಮ್ಮೆ ಹಝ್ರತ್ ಪೈಗಂಬರ್(ಸ) ಈ ಸ್ಥಿತಿಯಲ್ಲಿ ಮನೆಗೆ ಹಿಂದೆರಳಿದಾಗ ಅವರ ಒಬ್ಬ ಪುತ್ರಿ ಅವರ ತಲೆಯಿಂದ ಮಣ್ಣನ್ನು ಕೊಡವಿ ತೆಗೆಯುತ್ತಾ ಅಳಲು ತೊಡಗಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಓ ನನ್ನ ಪ್ರಿಯ ಪುತ್ರೀ, ನೀನು ಅಳಬೇಡ. ಅಲ್ಲಾಹನು ನಿನ್ನ ಪಿತನ ಜೊತೆಗಿದ್ದಾನೆ."[16]

---

16. ಇಬ್ನು ಹಿಶಾಮ್ ಸಂಪುಟ–1 ಪುಟ 145.



ಹಝ್ರತ್ ಪೈಗಂಬರ್(ಸ) ಸಂಕಷ್ಟಗಳಿಂದ ಗಾಬರಿಗೊಳ್ಳುತ್ತಿರಲಿಲ್ಲ. ಆದರೆ ಜನರು ಅವರ ಮಾತನ್ನು ಆಲಿಸಲು ತಯಾರಾಗದುದು ಅವರಿಗೆ ವ್ಯಸನಕರವಾಗಿತ್ತು. ಕಷ್ಟಗಳ ಬಗ್ಗೆ ಹೇಳುವುದಾದರೆ, ಅವುಗಳು ಆವಶ್ಯಕವೆಂದು ಅವರು ಭಾವಿಸುತ್ತಿದ್ದರು. ಯಾವುದೇ ವ್ಯಕ್ತಿ ಆತ ಗುಲಾಮನಾಗಿರಲಿ, ಸ್ವತಂತ್ರ ವ್ಯಕ್ತಿಯಾಗಿರಲಿ ತನಗೆ ಯಾವುದೇ ಕಷ್ಟಕೊಡದಿದ್ದರೆ ಅದು ಅವರಿಗೆ ಹೆಚ್ಚು ದುಃಖಕರವಾದ ದಿನವಾಗುತ್ತಿತ್ತು. ಅಂತಹ ದಿನಗಳಲ್ಲಿ ಅವರು ದುಃಖದಿಂದಲೂ ವ್ಯಥೆಯಿಂದಲೂ ಮೌನಾವಲಂಬಿಯಾಗಿ ಮಲಗುತ್ತಿದ್ದರು. ಕೊನೆಗೆ ಅಲ್ಲಾಹನು ಅವರನ್ನು ಸಮಾಧಾನಪಡಿಸಿ, "ನೀನು ಹೋಗಿ ಪದೇ ಪದೇ ಆವರ್ತಿಸಿ ಅವರಿಗೆ ಎಚ್ಚರಿಕೆ ನೀಡು. ಅವರ ನಿರ್ಲಕ್ಷ್ಯತೆಯ ಬಗ್ಗೆ ಯೋಚಿಸಬೇಡ" ಎಂದು ಹೇಳಿದನು. ಆದುದರಿಂದ ಜನರು ಹಝ್ರತ್ ಪೈಗಂಬರರಿಗೆ(ಸ) ಕಷ್ಟಕೊಡುವುದು ಅವರಿಗೆ ದುಃಖಕರವಾಗಿರಲಿಲ್ಲ. ಆದರೆ ಲೋಕಕ್ಕೆ ಮಾರ್ಗದರ್ಶನ ನೀಡಲು ನಿಯುಕ್ತರಾದ ಅಲ್ಲಾಹನ ಪ್ರವಾದಿ, ತನ್ನೊಂದಿಗೆ ಜನರು ಮಾತನ್ನೇ ಆಡದಿರುವುದನ್ನು ಮತ್ತು ತನ್ನ ಮಾತನ್ನು ಕೇಳಲು ತಯಾರಾಗದುದನ್ನು ಹೇಗೆ ತಾನೆ ಸಹಿಸಬಲ್ಲರು. ಇಂತಹ ನಿರುಪಯುಕ್ತ ಜೀವಿತ ಅವರಿಗೆ ಅತ್ಯಂತ ದುಃಖಕರವಾಗಿತ್ತು. ಆದುದರಿಂದ ಹಝ್ರತ್ ಪೈಗಂಬರ್(ಸ) ತಾಯಿಫ್ ನಗರಕ್ಕೆ ಹೋಗಲು ಮತ್ತು ಅಲ್ಲಿನ ಜನರಿಗೆ ಅಲ್ಲಾಹನ ಸಂದೇಶ ತಲಪಿಸಲು ನಿರ್ಧರಿಸಿದರು.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಕಡೆಗೆ ಸಂಚರಿಸುತ್ತಾ ವಿವಿಧ ಜನಾಂಗಗಳಿಗೆ ಬೋಧಿಸುತ್ತಾ ತಿರುಗುವುದು ಅಲ್ಲಾಹನ ಪ್ರವಾದಿಗಳಿಗೆ ನಿರ್ದೇಶಿಸಲಾಗಿರುತ್ತದೆ. ಹಝ್ರತ್ ಮೂಸಾ(ಅ) ಹೀಗೆಯೇ ಮಾಡಿದರು. ಅವರು ಕೆಲವೊಮ್ಮೆ ಫಿರ್‌ಔನನ ಜನಾಂಗದವರನ್ನು ಸಂಬೋಧಿಸಿ ಮಾತನಾಡುತ್ತಿದ್ದರು. ಅವರು ಹಝ್ರತ್ ಇಸ್‌ಹಾಖರ(ಅ) ಸಂತತಿಗಳನ್ನೂ ಮದ್‌ಯನ್ ನಿವಾಸಿಗಳನ್ನೂ ಬೇರೆ ಬೇರೆ ಕಾಲಗಳಲ್ಲಿ ಸಂಬೋಧಿಸಿ ಮಾತನಾಡುತ್ತಿದ್ದರು.

ಹಝ್ರತ್ ಈಸಾ(ಅ) ಧರ್ಮಪ್ರಚಾರದ ಉತ್ಸಾಹದಿಂದ ಕೆಲವೊಮ್ಮೆ ಗಲೀಲದ ಜನರನ್ನೂ ಕೆಲವೊಮ್ಮೆ ಜೋರ್ಡನ್ ನದಿಯ ಆಚೆ ದಡದವರನ್ನೂ ಕೆಲವೊಮ್ಮೆ ಜೆರುಸಲೇಮಿನ ಜನರನ್ನೂ ಸಂಬೋಧಿಸಿ ಉಪದೇಶಿಸುತ್ತಿದ್ದರು. ಕೆಲವು ಸಾರಿ ಬೇರೆಯವರಿಗೂ ಉಪದೇಶಿಸುತ್ತಿದ್ದರು.

ಮಕ್ಕದ ಜನರು ಹಝ್ರತ್ ಪೈಗಂಬರರ(ಸ) ಮಾತುಗಳನ್ನೇ ಕೇಳುವುದನ್ನು ನಿರಾಕರಿಸಿ "ಹೊಡೆಯಿರಿ, ಬಡಿಯಿರಿ. ಮುಹಮ್ಮದನ ಮಾತನ್ನು ಆಲಿಸಬೇಡಿರಿ" ಎಂದು ತೀರ್ಮಾನಿಸಿದಾಗ ಹಝ್ರತ್ ಪೈಗಂಬರರು(ಸ) ತಾಯಿಫ್ ನಗರವನ್ನು ಅಭಿಮುಖೀಕರಿಸಿದರು.

ತಾಯಿಫ್ ಮಕ್ಕದಿಂದ ಅಂದಾಜು 60 ಮೈಲು ದೂರದಲ್ಲಿ ದಕ್ಷಿಣ ಪೂರ್ವದಿಕ್ಕಿನಲ್ಲಿದೆ. ತನ್ನ ಫಲವಸ್ತುಗಳಿಗೂ ಕೃಷಿಗೂ ಪ್ರಸಿದ್ಧಿ ಪಡೆದ ಒಂದು

ನಗರ ಅದಾಗಿತ್ತು. ಆ ನಗರ ನಿವಾಸಿಗಳ ವಿಗ್ರಹಾರಾಧನೆ ಮಕ್ಕದವರಿಗಿಂತ ಕಡಿಮೆ ಪ್ರಮಾಣದಲ್ಲಿರಲಿಲ್ಲ. ಕಅ್‌ಬದಲ್ಲಿ ಇರಿಸಲಾದ ವಿಗ್ರಹಗಳ ಹೊರತಾಗಿ "ಲಾತ" ಎಂಬ ವಿಗ್ರಹ ತಾಯಿಫ್ ನಗರದ ಪ್ರಾಮುಖ್ಯಕ್ಕೆ ಕಾರಣವಾಗಿತ್ತು. ಅದರ ದರ್ಶನಕ್ಕಾಗಿ ಅರಬ್ ರಾಜ್ಯದ ಜನರು ದೂರ ದೂರ ಪ್ರದೇಶಗಳಿಂದ ಆಗಮಿಸುತ್ತಿದ್ದರು. ತಾಯಿಫ್ ನಗರದ ಜನರಿಗೆ ಮಕ್ಕದವರೊಂದಿಗೆ ಅನೇಕ ಕೌಟುಂಬಿಕ ಬಾಂಧವ್ಯಗಳೂ ಇದ್ದವು. ಅಲ್ಲದೆ ಮಕ್ಕ ಮತ್ತು ತಾಯಿಫ್‌ಗಳ ನಡುವೆ ಅನೇಕ ಫಲವತ್ತಾದ ಸ್ಥಳಗಳಲ್ಲಿ ಮಕ್ಕದವರ ಆಸ್ತಿಗಳು ಇದ್ದುವು. ಹಝ್ರತ್ ಪೈಗಂಬರ್[ಸ] ತಾಯಿಫ್‌ಗೆ ತಲಪಿದಾಗ ಅಲ್ಲಿನ ಗಣ್ಯ ವ್ಯಕ್ತಿಗಳು ಅವರನ್ನು ಕಾಣಲು ಬರತೊಡಗಿದರು. ಆದರೆ ಯಾರೂ ಸತ್ಯವನ್ನು ಸ್ವೀಕರಿಸಲು ಸಿದ್ಧರಾಗಲಿಲ್ಲ. ಜನಸಾಮಾನ್ಯರು ಸಹ ತಮ್ಮ ಮುಂದಾಳುಗಳನ್ನು ಅನುಸರಣೆ ಮಾಡಿ ಅಲ್ಲಾಹನ ಸಂದೇಶವನ್ನು ತಾತ್ಸಾರ ದೃಷ್ಟಿಯಿಂದ ನೋಡಿದರು. ಯಾವುದೇ ಸಾಧನಸಾಮಗ್ರಿಗಳಿಲ್ಲದ ಮತ್ತು ಸಹಾಯಕರಿಲ್ಲದ ಪ್ರವಾದಿ ಲೌಕಿಕ ದೃಷ್ಟಿಯಲ್ಲಿ ನಿಕೃಷ್ಟರೇ ಆಗಿರುತ್ತಾರೆ. ಜನರಿಗೆ ಆಯುಧಗಳ ಮತ್ತು ಸೇನಾಬಲದ ಶಬ್ದಗಳನ್ನು ಆಲಿಸಲು ಮಾತ್ರ ತಿಳಿದಿದೆ. (ದೈವಿಕ ಸಹಾಯ ಮತ್ತು ದೈವಿಕ ಸೇನಾಬಲದ ಅರಿವು ಅವರಿಗಿಲ್ಲ.)

ಹಝ್ರತ್ ಪೈಗಂಬರರ[ಸ] ಕುರಿತು ಸುದ್ದಿ ಈ ಮೊದಲೇ ತಾಯಿಫ್‌ಗೆ ತಲಪಿತ್ತು. ಹಝ್ರತ್ ಪೈಗಂಬರ್[ಸ] ತಾಯಿಫ್ ತಲಪಿದಾಗ ತಾಯಿಫ್ ನಿವಾಸಿಗಳು ನೋಡಿದರು. ಹಝ್ರತ್ ಪೈಗಂಬರರ[ಸ] ಜೊತೆಗೆ ಸೈನ್ಯ ಅಥವಾ ದಂಡು ಇರುವುದಕ್ಕೆ ಬದಲಾಗಿ ಕೇವಲ ಝೈದ್ ಅವರ ಜೊತೆಗಿದ್ದರು. ಅವರು ತಾಯಿಫ್ ನಗರದ ಪ್ರಸಿದ್ಧ ಸ್ಥಳಗಳಲ್ಲಿ ಧರ್ಮ ಪ್ರಚಾರ ಮಾಡುತ್ತಾ ತಿರುಗುತ್ತಿದ್ದರು. ಆದರೆ ಹೃದಯಾಂಧತೆ ಬಾಧಿಸಿದವರು ತಮ್ಮ ಮುಂದೆ ಅಲ್ಲಾಹನ ಪ್ರವಾದಿ ಬಂದಿರುವುದುದನ್ನು ನೋಡಲಿಲ್ಲ. ಅವರು ಒಬ್ಬ ನಿಕೃಷ್ಟ, ತಿರಸ್ಕೃತ ಮನುಷ್ಯನನ್ನಾಗಿ ಅವರನ್ನು ಕಂಡರು. ಪ್ರಾಯಶಃ ಈತನಿಗೆ ಕಷ್ಟಕೊಡುವುದರಿಂದ ಮತ್ತು ಹಿಂಸಿಸುವುದರಿಂದ ತಮ್ಮ ನಾಯಕರ ದೃಷ್ಟಿಯಲ್ಲಿ ತಾವು ಗೌರವಾನ್ವಿತರಾಗುವೆವು ಎಂದು ಆ ಜನರು ಭಾವಿಸಿದರು. ತಾಯಿಫ್ ನಗರದ ಅವಿಶ್ವಾಸಿಗಳು ಒಗ್ಗೂಡಿದರು. ಅವರು ನಾಯಿಗಳನ್ನು ತಮ್ಮ ಜೊತೆ ತೆಗೆದುಕೊಂಡು ಹೋದರು. ಅವರು ಹುಡುಗರಿಗೆ ಹುರಿದುಂಬಿಸಿದರು. ಅವರು ಕಲ್ಲುಗಳಿಂದ ತಮ್ಮ ಚೀಲಗಳನ್ನು ತುಂಬಿಸಿದರು ಮತ್ತು ನಿರ್ದಯವಾಗಿ ಹಝ್ರತ್ ಪೈಗಂಬರರಿಗೆ[ಸ] ಕಲ್ಲೆಸೆಯಲು ತೊಡಗಿದರು. ಅಲ್ಲಿನ ಜನರು ಅವರನ್ನು ನಗರದಿಂದ ತಳ್ಳುತ್ತಾ ನಗರದ ಹೊರಗಡೆಗೆ ನೂಕಿದರು. ಹಝ್ರತ್ ಪೈಗಂಬರರ[ಸ] ಕಾಲುಗಳು ರಕ್ತರಂಜಿತವಾಗಿದ್ದುವು. ಹಝ್ರತ್ ಝೈದ್ ಹಝ್ರತ್ ಪೈಗಂಬರರನ್ನು[ಸ] ರಕ್ಷಿಸುತ್ತಾ ತೀವ್ರವಾಗಿ ಗಾಯಗೊಂಡರು. ಆದರೆ ದೌರ್ಜನ್ಯಗಾರರ ಹೃದಯಗಳು ತಂಪಾಗಲಿಲ್ಲ. ಅವರು ಹಝ್ರತ್ ಪೈಗಂಬರರನ್ನು[ಸ] ಹಿಂಬಾಲಿಸುತ್ತಾ ಹೋದರು. ಹಝ್ರತ್ ಪೈಗಂಬರ್[ಸ] ನಗರದಿಂದ ಅನೇಕ ಮೈಲು ದೂರದಲ್ಲಿ ಗುಡ್ಡಗಳ ತನಕ ತಲಪುವವರೆಗೆ



ಆ ಜನರು ಅವರನ್ನು ಬೆಂಬತ್ತದೆ ಬಿಡಲಿಲ್ಲ. ಶತ್ರುಗಳು ಹಝ್ರತ್ ಪೈಗಂಬರರನ್ನು[ಸ] ಬೆನ್ನಟ್ಟುತ್ತಿರುವಾಗ ಅಲ್ಲಾಹನ ಕ್ರೋಧ ಅವರ ಮೇಲೆ ಎರಗುವುದೋ ಎಂಬ ಭಯದಿಂದ ಹಝ್ರತ್ ಪೈಗಂಬರ್[ಸ] ಆಕಾಶದ ಕಡೆಗೆ ದೃಷ್ಟಿಹಾಯಿಸಿ ನೋಡುತ್ತಾ ಹೀಗೆ ಪ್ರಾರ್ಥಿಸುತ್ತಿದ್ದರು: "ಓ ನನ್ನ ಪ್ರಭೂ, ನೀನು ಈ ಜನರನ್ನು ಕ್ಷಮಿಸು. ಈ ಜನರು ತಾವು ಏನು ಮಾಡುತ್ತಿದ್ದೇವೆಂದು ಅರಿತುಕೊಂಡಿಲ್ಲ."

ಗಾಯಗೊಂಡ, ಅತ್ಯಂತ ಬಳಲಿದ ಮತ್ತು ಜನರಿಂದ ಅಟ್ಟಿಯೋಡಿಸಲ್ಪಟ್ಟ ಹಝ್ರತ್ ಪೈಗಂಬರರು[ಸ] ಒಂದು ದ್ರಾಕ್ಷೆಯ ತೋಟದ ನೆರಳಿನಲ್ಲಿ ಆಶ್ರಯಪಡೆದರು. ದ್ರಾಕ್ಷೆಯ ಆ ತೋಟ ಮಕ್ಕದ ಇಬ್ಬರು ಗಣ್ಯರಿಗೆ ಸೇರಿತ್ತು. ಅವರಿಬ್ಬರೂ ಆ ದ್ರಾಕ್ಷೆ ತೋಟದಲ್ಲಿ ಆಗ ಇದ್ದರು. ಹತ್ತು ವರ್ಷಗಳಿಂದ ಹಝ್ರತ್ ಪೈಗಂಬರರನ್ನು[ಸ] ವಿರೋಧಿಸುತ್ತಿದ್ದ ಹಳೆಯ ಮತ್ತು ಕಠಿಣ ಶತ್ರುಗಳಾದ ಅವರು ಪ್ರಾಯಶಃ ಮಕ್ಕದ ಒಬ್ಬ ನಿವಾಸಿಯನ್ನು ತಾಯಿಫ್ ನಗರದ ಜನರು ಗಾಯಗೊಳಿಸಿದರಲ್ಲಾ ಎಂಬ ಭಾವನೆಯಿಂದ ಅಥವಾ ಒಳಿತಿನ ಬೀಜ ಅವರ ಹೃದಯಗಳಲ್ಲಿ ಅಂಕುರಿಸುತ್ತಿದ್ದುದರಿಂದ ಅವರು ಒಂದು ಬಟ್ಟಲನ್ನು ದ್ರಾಕ್ಷೆಯಿಂದ ತುಂಬಿಸಿ ತಮ್ಮ ಗುಲಾಮನಾದ ಸೇವಕನಿಗೆ ಹೀಗೆ ಹೇಳಿದರು: "ಹೋಗಿ ಇದನ್ನು ಆ ಪ್ರಯಾಣಿಕರಿಗೆ ನೀಡು." ಅದಾಸ್ ಎಂಬ ಆ ಸೇವಕನು ನಿನೇವದ ನಿವಾಸಿಯಾಗಿದ್ದನು. ಅವನು ಕ್ರೈಸ್ತ ಧರ್ಮಾವಲಂಬಿಯಾಗಿದ್ದನು. ಅವನು ಆ ದ್ರಾಕ್ಷೆಯನ್ನು ತೆಗೆದುಕೊಂಡು ಹಝ್ರತ್ ಪೈಗಂಬರರ[ಸ] ಮುಂದಿರಿಸಿದಾಗ ಅವರು "ಬಿಸ್ಮಿಲ್ಲಾಹಿ ರ್ರಹ್ಮಾನಿರ್ರಹೀಮ್" (ಪರಮ ಕರುಣಾಮಯನೂ ಅಪರಿಮಿತ ದಯಾಳುವೂ ಆದ ಅಲ್ಲಾಹನ ನಾಮದಿಂದ) ಎಂದು ಹೇಳಿ ತೆಗೆದುಕೊಂಡಾಗ ಕ್ರೈಸ್ತಧರ್ಮವನ್ನು ಆ ಗುಲಾಮನು ತನ್ನ ಹೃದಯದಲ್ಲಿ ನೆನಪಿಸಿದನು. ತನ್ನ ಮುಂದೆ ಅಲ್ಲಾಹನ ಒಬ್ಬ ಪ್ರವಾದಿ ಕುಳಿತಿರುವರು. ಅವರು ಇಸ್ರಾಈಲ್ ಸಂತತಿಗಳ ಪ್ರವಾದಿಗಳಂತೆ ಮಾತನಾಡುತ್ತಿರುವರೆಂದು ಅವನು ಭಾವಿಸಿದನು. ಅವನೊಂದಿಗೆ ಹಝ್ರತ್ ಪೈಗಂಬರ್[ಸ] "ನೀನು ಎಲ್ಲಿಯ ನಿವಾಸಿ?" ಎಂದು ಕೇಳಿದರು. ಅವನು "ನಾನು ನಿನೇವದ ನಿವಾಸಿ" ಎಂದು ಹೇಳಿದಾಗ, "ಒಳ್ಳೆಯ ಮನುಷ್ಯರಾಗಿದ್ದ ಯೂನುಸ್ ಪ್ರವಾದಿ ನಿನೇವದ ನಿವಾಸಿಯಾಗಿದ್ದು ನನ್ನ ಹಾಗೆ ಏಕದೇವನ ಪ್ರವಾದಿಯಾಗಿದ್ದರು" ಎಂದು ಹೇಳಿ ಅನಂತರ ಇಸ್ಲಾಮ್ ಧರ್ಮದ ಸಂದೇಶವನ್ನು ಅವನಿಗೆ ತಲಪಿಸಲು ತೊಡಗಿದರು. ಅದಾಸನ ಗಾಬರಿ ಕೆಲವೇ ಕ್ಷಣಗಳಲ್ಲಿ ಆಶ್ಚರ್ಯದಲ್ಲಿ ಪರಿವರ್ತಿತವಾಯಿತು. ಆಶ್ಚರ್ಯವು ಸತ್ಯವಿಶ್ವಾಸವಾಗಿ ಬದಲಾವಣೆಗೊಂಡಿತು. ಸ್ವಲ್ಪವೇ ಹೊತ್ತಿನಲ್ಲಿ ಆ ಅಪರಿಚಿತ ಗುಲಾಮನು ಅಶ್ರುಭರಿತ ಕಣ್ಣುಗಳಿಂದ ಹಝ್ರತ್ ಪೈಗಂಬರರನ್ನು[ಸ] ತಬ್ಬಿಕೊಂಡನು. ಅವನು ಹಝ್ರತ್ ಪೈಗಂಬರರ[ಸ] ಕೈಗಳಿಗೂ ಕಾಲುಗಳಿಗೂ ಮುತ್ತು ಕೊಡಲು ತೊಡಗಿದನು. ಅದಾಸ್‌ನೊಂದಿಗೆ ಮಾತುಕತೆ ಮುಗಿಸಿದ ನಂತರ ಹಝ್ರತ್ ಪೈಗಂಬರ್[ಸ] ಹೀಗೆ ಪ್ರಾರ್ಥಿಸಿದರು:

"ಓ ನನ್ನ ಅಲ್ಲಾಹ್, ನಾನು ನಿನ್ನ ಮುಂದೆ ನನ್ನ ಬಲಹೀನತೆ, ನನ್ನ ಸಾಧನ ಸಂಪತ್ತುಗಳ ಕೊರತೆ ಮತ್ತು ಜನರಿಂದ ಅವಮಾನಿತನಾಗುವ ಬಗ್ಗೆ ಮೊರೆಯಿಡುತ್ತೇನೆ. ಅತ್ಯಂತ ದಯೆದೋರುವವನೇ, ನೀನೇ ಬಡವರ ಮತ್ತು ಬಲಹೀನರ ಒಡೆಯನಾಗಿರುವೆ. ನೀನು ನನ್ನ ಒಡೆಯನೂ ಆಗಿರುವೆ. ನೀನು ನನ್ನನ್ನು ಯಾರ ವಶಕ್ಕೆ ನೀಡುವೆ? ನನ್ನನ್ನು ಅತ್ತಿತ್ತ ತಳ್ಳುತ್ತಾ ಹೋಗುವ ಅಪರಿಚಿತರ ವಶಕ್ಕೆ ನೀಡುವೆಯೋ ಅಥವಾ ನನ್ನ ರಾಜ್ಯದಲ್ಲಿಯೇ ನನ್ನ ಮೇಲೆ ಜಯಗಳಿಸಿರುವ ವಿರೋಧಿಗಳ ವಶಕ್ಕೆ ನೀಡುವೆಯೋ? ನನ್ನ ಮೇಲೆ ನಿನ್ನ ಕೋಪವಿಲ್ಲದಿದ್ದರೆ ನನಗೆ ಈ ವಿರೋಧಿಗಳ ಬಗ್ಗೆ ಯಾವುದೇ ಕಾಳಜಿಯಿಲ್ಲ. ನಿನ್ನ ದಯೆ ನನ್ನೊಂದಿಗಿದೆ. ನನ್ನ ಬಗ್ಗೆ ನಿನ್ನ ಹಿತಾಕಾಂಕ್ಷೆ ವಿಶಾಲವಾಗಿದೆ. ನಾನು ನಿನ್ನ ವದನದ ಕಾಂತಿಯಲ್ಲಿ ಅಭಯವನ್ನು ಕೋರುತ್ತಿದ್ದೇನೆ. ಅಂಧಕಾರವನ್ನು ಲೋಕದಿಂದ ಹೊಡೆದೋಡಿಸುವುದು ಮತ್ತು ಈ ಲೋಕದಲ್ಲೂ ಪರಲೋಕದಲ್ಲೂ ಶಾಂತಿ ನೀಡುವುದು ನಿನ್ನದೇ ಕೆಲಸವಾಗಿದೆ. ನಿನ್ನ ಕೋಪ ಮತ್ತು ಅತೃಪ್ತಿ ನನ್ನ ಮೇಲೆ ಸುರಿಯದಿರಲಿ. ನೀನು ನನ್ನ ಮೇಲೆ ಕೋಪಾವಿಷ್ಟನಾಗುವುದು ಅನಂತರ ನೀನು ನನ್ನ ಮೇಲೆ ನಿನ್ನ ಸಂಪ್ರೀತಿಯನ್ನು ಸೂಚಿಸುವುದಕ್ಕಾಗಿರಲಿ, ನಿನ್ನ ಹೊರತು ಯಾವುದೇ ನೈಜ ಶಕ್ತಿ ಮತ್ತು ನೈಜ ಆಶ್ರಯಸ್ಥಾನವಿಲ್ಲ."[17]

ಹೀಗೆ ಪ್ರಾರ್ಥನೆ ಮಾಡಿ ಹಝ್ರತ್ ಪೈಗಂಬರ್(ಸ) ಮಕ್ಕದ ಕಡೆಗೆ ಪ್ರಯಾಣಿಸಿದರು. ಅವರು ದಾರಿ ಮಧ್ಯೆ ನಖ್ಲ ಎಂಬಲ್ಲಿ ತಂಗಿದರು. ಅಲ್ಲಿ ಕೆಲವು ದಿನ ವಿಶ್ರಾಂತಿ ಪಡೆದು ಮಕ್ಕದ ಕಡೆಗೆ ಪ್ರಯಾಣ ಮುಂದುವರಿಸಿದರು. ಅರಬಿಗಳ ಸಂಪ್ರದಾಯ ಪ್ರಕಾರ ಜಗಳದ ಕಾರಣದಿಂದ ಮಕ್ಕವನ್ನು ಬಿಟ್ಟು ಹೋದ ನಂತರ ಪುನಃ ಮಕ್ಕದ ಪೌರನಾಗಲು ಸಾಧ್ಯವಿರಲಿಲ್ಲ. ಮಕ್ಕದೊಳಗೆ ಪ್ರವೇಶ ನೀಡುವುದು ಅಥವಾ ಪ್ರವೇಶಿಸಲು ಅನುಮತಿ ನೀಡದಿರುವುದು ಮಕ್ಕದವರ ಅಧಿಕಾರಕ್ಕೊಳಪಟ್ಟಿತ್ತು. ಆದುದರಿಂದ ಅವರು ಮಕ್ಕದ ಒಬ್ಬ ಗಣ್ಯ ಮಹನೀಯನಾದ ಮುತ್ಇಮ್ ಬಿನ್ ಅದೀ ಎಂಬವರಿಗೆ ಹೀಗೆ ಹೇಳಿ ಕಳುಹಿಸಿದರು: "ನಾನು ಮಕ್ಕವನ್ನು ಪ್ರವೇಶಿಸಲು ಬಯಸುತ್ತೇನೆ. ನೀವು ಅರಬ್ ಸಂಪ್ರದಾಯದ ಪ್ರಕಾರ ಮರುಪ್ರವೇಶಕ್ಕೆ ಅನುಮತಿ ನೀಡುವಿರೋ?" ಮುತ್ಇಮ್ ಕಠಿಣ ಶತ್ರುವಾಗಿದ್ದರೂ ಸೌಜನ್ಯಶೀಲ ವ್ಯಕ್ತಿಯಾಗಿದ್ದನು. ಆತನು ತನ್ನ ಮಕ್ಕಳನ್ನೂ ಸಂಬಂಧಿಕರನ್ನೂ ತನ್ನೊಂದಿಗೆ ಸೇರಿಸಿಕೊಂಡು ಆಯುಧ ಸನ್ನದ್ಧನಾಗಿ ಕಅ್‌ಬದ ಅಂಗಳದಲ್ಲಿ ಹೋಗಿನಿಂತು, ಹಝ್ರತ್ ಪೈಗಂಬರರಿಗೆ(ಸ) ಮಕ್ಕವನ್ನು ಪ್ರವೇಶಿಸಲು ತಾನು ಅನುಮತಿಸುವುದಾಗಿ ತಿಳಿಸಿದನು. ಹಝ್ರತ್ ಪೈಗಂಬರ್(ಸ) ಮಕ್ಕವನ್ನು ಪ್ರವೇಶಿದರು. ಅವರು ಕಅ್‌ಬದ ಪ್ರದಕ್ಷಿಣೆ ಮಾಡಿದರು. ಮುತ್ಇಮ್ ತನ್ನ ಮಕ್ಕಳೊಂದಿಗೆ ಮತ್ತು ಸಂಬಂಧಿಕರೊಂದಿಗೆ ತಮ್ಮ ಖಡ್ಗಗಳನ್ನು ಹಿರಿದು ಹಿಡಿದು ಹಝ್ರತ್ ಪೈಗಂಬರ್‌ರವರನ್ನು ಅವರ ಮನೆಗೆ ತಲಪಿಸಿದನು. ಇದು ಮುತ್ಇಮ್ ಹಝ್ರತ್

17. ಸೀರತ್ ಇಬ್ನು ಹಿಶಾಮ್ ಭಾಗ–1 ಪುಟ 147



ಪೈಗಂಬರರಿಗೆ(ಸ) ನೀಡಿದ ಸಂರಕ್ಷಣೆಯ ವಾಗ್ದಾನವಾಗಿರಲಿಲ್ಲ. ಅನಂತರ ಅವರ ಮೇಲೆ ದೌರ್ಜನ್ಯಗಳು ನಡೆದಾಗ ಮುತ್ಇಮ್ ಅವರಿಗೆ ಯಾವುದೇ ಸಂರಕ್ಷಣೆಯನ್ನು ಒದಗಿಸಲಿಲ್ಲ. ಮುತ್ಇಮ್ ಹಝ್ರತ್ ಪೈಗಂಬರ್‌ರವರಿಗೆ(ಸ) ಮಕ್ಕವನ್ನು ಪ್ರವೇಶಿಸುವ ನ್ಯಾಯಬದ್ಧ ಅನುಮತಿಯನ್ನು ಮಾತ್ರ ನೀಡಿದ್ದನು. ಹಝ್ರತ್ ಪೈಗಂಬರರು(ಸ) ತಾಯಿಫ್ ನಗರಕ್ಕೆ ಹೋದ ಬಗ್ಗೆ ಅವರ ಶತ್ರುಗಳು ಸಹ, "ಪೈಗಂಬರರು ಉಪಮೆಯಿಲ್ಲದ ತ್ಯಾಗ ಮತ್ತು ಸ್ಥಿರತೆಯ ಮಾದರಿಯನ್ನು ತೋರಿಸಿದರು" ಎಂದು ಪ್ರಶಂಸಿರುವರು. ಸರ್ ವಿಲ್ಯಮ್ ಮ್ಯೂರ್ ಹೀಗೆ ಹೇಳುತ್ತಾರೆ: "ಮುಹಮ್ಮದ್‌ರ ತಾಯಿಫ್ ಯಾತ್ರೆ ಬಹಳ ಮಹತ್ವಪೂರ್ಣವಾದುದೂ ಶೌರ್ಯಭರಿತವೂ ಆಗಿತ್ತು. ತನ್ನ ಕೋಮಿನ ಜನರಿಂದ ತಾತ್ಸಾರ ದೃಷ್ಟಿಯಿಂದ ವೀಕ್ಷಿಸಲ್ಪಡುವ ಮತ್ತು ಅವರಿಂದ ಧಿಕ್ಕರಿಸಲ್ಪಟ್ಟ ಒಬ್ಬ ವ್ಯಕ್ತಿ ಏಕದೇವನ ಹೆಸರಿನಲ್ಲಿ ಶೌರ್ಯದಿಂದ ಯೋನಾ(ಯೂನುಸ್) ಪ್ರವಾದಿ ನಿನೇವಾಕ್ಕೆ ಹೋದ ಹಾಗೆ ಒಂದು ವಿಗ್ರಹಾರಾಧಕ ನಗರವನ್ನು ಪಶ್ಚಾತ್ತಾಪದ ಕಡೆಗೆ ಮತ್ತು ಏಕದೇವ ವಿಶ್ವಾಸದ ಕಡೆಗೆ ಆಮಂತ್ರಿಸಲು ಯಾತ್ರೆ ಮಾಡಿದುದು ಅವರು ತನ್ನನ್ನು ಏಕದೇವನಿಂದ ನಿಯುಕ್ತನಾದವನು ಎಂದು ಸಂಪೂರ್ಣವಾಗಿ ನಂಬಿದ್ದರು ಎಂಬುದರ ಬಗ್ಗೆ ಇದು ಬಹಳ ಉಜ್ವಲ ಪ್ರಕಾಶ ಬೀರುತ್ತದೆ."[18]

ಮಕ್ಕ ಪುನಃ ಹಿಂಸೆ ಮತ್ತು ಪರಿಹಾಸದ ಬಾಗಿಲನ್ನು ತೆರೆಯಿತು. ಅಲ್ಲಾಹನ ಪ್ರವಾದಿಗೆ ಪುನಃ ತನ್ನ ಊರು ನರಕವಾಗಲು ತೊಡಗಿತು. ಆದರೆ ಹಝ್ರತ್ ಪೈಗಂಬರ್(ಸ) ಧೈರ್ಯದಿಂದ ಜನರಿಗೆ ದೈವಿಕ ಸಂದೇಶವನ್ನು ತಲಪಿಸುತ್ತಾ ಇದ್ದರು. ಮಕ್ಕ ನಗರದ ರಸ್ತೆಗಳಲ್ಲೂ ಓಣಿಗಳಲ್ಲೂ "ದೇವನೊಬ್ಬನೇ, ದೇವನೊಬ್ಬನೇ" ಎಂಬ ಶಬ್ದ ಉಚ್ಚ ಸ್ವರದಲ್ಲಿ ಕೇಳಿಸುತ್ತಿತ್ತು. ಸ್ನೇಹದಿಂದ, ಪ್ರೀತಿಯಿಂದ ಮತ್ತು ಹಿತಾಕಾಂಕ್ಷೆಯಿಂದ ಅವರು ಮಕ್ಕದ ಜನರಿಗೆ ವಿಗ್ರಹಾರಾಧನೆಯ ವಿರುದ್ಧ ಉಪದೇಶಿಸುತ್ತಾ ಇದ್ದರು. ಜನರು ಉಪದೇಶ ಕೇಳದೆ ಓಡಿದರೆ ಅವರನ್ನು ಹಿಂಬಾಲಿಸಿ ಅವರಿಗೆ ಉಪದೇಶ ನೀಡುತ್ತಿದ್ದರು. ಜನರು ಮುಖ ತಿರುಗಿಸಿದರೂ ಹಝ್ರತ್ ಪೈಗಂಬರ್(ಸ) ತನ್ನ ಮಾತನ್ನು ನಿಲ್ಲಿಸದೆ ಉಪದೇಶವನ್ನು ಮುಂದುವರಿಸುತ್ತಾ ಇದ್ದರು. ಸತ್ಯವು ಮೆಲ್ಲ ಮೆಲ್ಲಗೆ ತನ್ನ ಮನೆಯನ್ನು ಕಟ್ಟುತ್ತಿತ್ತು. ಅಬಿಸೀನಿಯಾಕ್ಕೆ ವಲಸೆ ಹೋಗದೆ ಮಕ್ಕದಲ್ಲಿಯೇ ಉಳಿದಿದ್ದ ಮುಸ್ಲಿಮರು ತಮ್ಮ ಸಂಬಂಧಿಕರು, ಸ್ನೇಹಿತರು, ಸಂಗಡಿಗರು, ನೆರೆಹೊರೆಯವರು ಮೊದಲಾದವರಿಗೆ ಧರ್ಮಸಂದೇಶವನ್ನು ತಲಪಿಸುತ್ತಾ ಇದ್ದರು. ಕೆಲವರ ಹೃದಯಗಳು ಸತ್ಯವಿಶ್ವಾಸದಿಂದ ಪ್ರಕಾಶಗೊಳ್ಳುತ್ತಾ ಇದ್ದವು. ಆಗ ಅವರು ಬಹಿರಂಗವಾಗಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದನ್ನು ಪ್ರಕಟಿಸುತ್ತಿದ್ದರು. ಅವರು ಇತರ ಮುಸ್ಲಿಮರೊಂದಿಗೆ ಪೆಟ್ಟು ತಿನ್ನುತ್ತಾ ಕಷ್ಟವನ್ನನುಭವಿಸುವುದರಲ್ಲಿ ಪಾಲುಗಾರರು ಆಗುತ್ತಿದ್ದರು. ಆದರೆ ಎಷ್ಟೋ ಜನರು ಪ್ರಕಾಶವನ್ನು ನೋಡಿದರೂ ಅವರಿಗೆ ಸತ್ಯವನ್ನು ಸ್ವೀಕರಿಸುವ ಭಾಗ್ಯ

18. Life of Muhammad by Sir W. Muir, 1923 edition p 112-113.

ಲಭಿಸಿರಲಿಲ್ಲ. ಅವರು ಅಲ್ಲಾಹನ ರಾಜ್ಯಭಾರ ಭೂಮಿಯಲ್ಲಿ ಬರಲಿಯೆಂದೂ ಆಗ ಅದರಲ್ಲಿ ಪ್ರವೇಶಿಸುವ ಎಂದೂ ಕಾಯುತ್ತಾ ಇದ್ದರು.

## ಮದೀನದ ನಿವಾಸಿಗಳ ಇಸ್ಲಾಮ್ ಧರ್ಮ ಸ್ವೀಕಾರ

ಇದೇ ಕಾಲದಲ್ಲಿ ಹಝ್ರತ್ ಪೈಗಂಬರರಿಗೆ[ಸ] ಪದೇ ಪದೇ ಅಲ್ಲಾಹನಿಂದ "ನಿಮ್ಮ ವಲಸೆಯ ಕಾಲ ಸಮೀಪಿಸುತ್ತಿದೆ" ಎಂದು ತಿಳಿಸಲಾಗುತ್ತಿತ್ತು. ಅವರ ವಲಸೆಯ ಪ್ರದೇಶ ಒಂದು ನಗರವಾಗಿರುವುದೆಂದೂ ಅಲ್ಲಿ ನೀರಿನ ಬಾವಿಗಳೂ ಖರ್ಜೂರದ ತೋಟಗಳೂ ಇರುವುವೆಂದೂ ತಿಳಿಸಲಾಗಿತ್ತು. ತಾನು ವಲಸೆ ಹೋಗುವ ನಗರ ಯಮಾಮ ಆಗಿರಬಹುದೆಂದು ಅವರು ಮೊದಲು ಯೋಚಿಸಿದ್ದರು.[19] ಆದರೆ ಬೇಗನೆ ಈ ಯೋಚನೆ ಅವರ ಹೃದಯದಿಂದ ದೂರೀಕರಿಸಲ್ಪಟ್ಟಿತು. ಅಲ್ಲಾಹನ ಭವಿಷ್ಯವಾಣಿಯ ಪ್ರಕಾರ ಯಾವ ನಗರ ತನ್ನ ವಲಸೆ ಹೋಗುವಿಕೆಗೆ ನಿಗದಿತವಾಗಿದ್ದರೂ ಆ ನಗರ ಇಸ್ಲಾಮಿನ ಕೇಂದ್ರವಾಗಲು ತನ್ನನ್ನು ಮುಂದಕ್ಕೊಡ್ಡುವುದು ಎಂದು ಅವರು ಪ್ರತೀಕ್ಷಿಸುತ್ತಾ ಇದ್ದರು. ಇದರ ಮಧ್ಯೆ ಹಜ್ಜ್ ಕಾಲ ಬಂತು. ಅರಬ್ ದೇಶದ ನಾಲ್ದೆಸೆಗಳಿಂದಲೂ ಜನರು ಹಜ್ಜ್‌ಗಾಗಿ ಮಕ್ಕದಲ್ಲಿ ಜಮಾಯಿಸಲು ತೊಡಗಿದರು. ಹಝ್ರತ್ ಪೈಗಂಬರ್[ಸ] ತಮ್ಮ ಸ್ವಭಾವದ ಪ್ರಕಾರ ಎಲ್ಲಿಯಾದರೂ ಜನರ ಗುಂಪು ನಿಂತಿರುವುದನ್ನು ಕಂಡರೆ ಅವರ ಸಮೀಪಕ್ಕೆ ಹೋಗಿ ಅವರಿಗೆ ಏಕದೇವ ವಿಶ್ವಾಸದ ಉಪದೇಶ ನೀಡುತ್ತಿದ್ದರು ಮತ್ತು ಅಲ್ಲಾಹನ ರಾಜ್ಯಭಾರದ ಶುಭವಾರ್ತೆ ನೀಡುತ್ತಿದ್ದರು. ದೌರ್ಜನ್ಯ, ದುಷ್ಕೃತ್ಯ, ಗಲಭೆ ಗೊಂದಲ ಮತ್ತು ಕಿರುಕುಳದಿಂದ ತಮ್ಮನ್ನು ತಡೆದಿಟ್ಟುಕೊಳ್ಳಲು ಉಪದೇಶಿಸುತ್ತಿದ್ದರು. ಕೆಲವರು ಅವರ ಮಾತುಗಳನ್ನು ಆಲಿಸಿ ಆಶ್ಚರ್ಯ ಸೂಚಿಸುತ್ತಾ ದೂರ ಹೋಗುತ್ತಿದ್ದರು. ಕೆಲವರು ಹಝ್ರತ್ ಪೈಗಂಬರರ[ಸ] ಮಾತಿಗೆ ಕಿವಿಗೊಡುತ್ತಿರುವಾಗ ಮಕ್ಕದ ಜನರು ಅವರನ್ನು ಅಲ್ಲಿಂದ ದೂರ ಸರಿಸುತ್ತಿದ್ದರು. ಬೇರೆ ಕೆಲವರು (ಮಕ್ಕದವರ ಮಾತನ್ನು ಮೊದಲು ಕೇಳಿದವರು) ಹಝ್ರತ್ ಪೈಗಂಬರರ[ಸ] ಮಾತುಗಳನ್ನು ಪರಿಹಾಸ ಮಾಡುತ್ತಾ ದೂರ ಸರಿಯುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಹಝ್ರತ್ ಪೈಗಂಬರ್[ಸ] ಮಿನಾ ಕಣಿವೆ ಪ್ರದೇಶದಲ್ಲಿ ತಿರುಗಾಡುತ್ತಿರುವಾಗ ಆರು–ಏಳು ಜನ ಮದೀನದ ನಿವಾಸಿಗಳನ್ನು ಅಲ್ಲಿ ಕಂಡರು. ಹಝ್ರತ್ ಪೈಗಂಬರ್[ಸ] ಅವರೊಂದಿಗೆ "ನಿಮ್ಮ ಗೋತ್ರ ಯಾವುದು?" ಎಂದು ಕೇಳಿದರು. ಅವರು "ನಾವು ಖಝ್ರಜ್ ಗೋತ್ರದವರು" ಎಂದು ಹೇಳಿದರು. "ನೀವು ಯಹೂದಿಯರೊಂದಿಗೆ ಒಪ್ಪಂದವನ್ನು ಮಾಡಿಕೊಂಡವರಲ್ಲವೇ?" ಎಂದು ಹಝ್ರತ್ ಪೈಗಂಬರ್[ಸ] ವಿಚಾರಿಸಿದಾಗ ಅವರು ಹೌದೆಂದರು. ಆಗ ಹಝ್ರತ್ ಪೈಗಂಬರ್, "ನೀವು ಸ್ವಲ್ಪ ಹೊತ್ತು ಕುಳಿತು ನನ್ನ ಮಾತನ್ನು ಕೇಳುವಿರೋ?" ಎಂದು ವಿಚಾರಿಸಿದರು. ಆ ಜನರು ಹಝ್ರತ್ ಪೈಗಂಬರರ[ಸ] ಬಗ್ಗೆ ಮೊದಲೇ ತಿಳಿದುಕೊಂಡಿದ್ದರು. ಅವರ ಹೃದಯಗಳು ಹಝ್ರತ್ ಪೈಗಂಬರರ[ಸ] ಕುರಿತು ಹೆಚ್ಚು ತಿಳಿದುಕೊಳ್ಳುವ

19. ಬುಖಾರಿ ಬಾಬ್ ಹಿಜ್‌ರತುನ್ನಬೀ.



ಆಸಕ್ತಿಯನ್ನು ಹೊಂದಿದ್ದುವು. ಆದುದರಿಂದ ಅವರು ಹಝ್ರತ್ ಪೈಗಂಬರರ[ಸ] ಮಾತಿಗೆ ಒಪ್ಪಿ ಅವರ ಮಾತುಗಳನ್ನು ಅವರ ಸಮೀಪ ಕುಳಿತುಕೊಂಡು ಕೇಳತೊಡಗಿದರು. ಹಝ್ರತ್ ಪೈಗಂಬರ್[ಸ] ಹೀಗೆ ಉಪದೇಶಿಸಿದರು:

"ಅಲ್ಲಾಹನ ರಾಜ್ಯಭಾರ ಬೇಗನೆ ಸ್ಥಾಪಿತವಾಗಲಿದೆ. ಹುಸಿದೈವಗಳು ಈ ಪ್ರಪಂಚದಿಂದ ಅಳಿಸಲ್ಪಡುವುವು. ಏಕದೇವ ಸಿದ್ಧಾಂತ ಲೋಕದಲ್ಲಿ ಸ್ಥಾಪಿಸಲ್ಪಡುವುದು. ಒಳಿತು ಮತ್ತು ಭಯ ಭಕ್ತಿ ಮತ್ತೊಮ್ಮೆ ಲೋಕದಲ್ಲಿ ಸ್ಥಾಪಿತವಾಗುವುದು. ಮದೀನದ ಜನರು ಈ ಮಹತ್ತಾದ ಕೊಡುಗೆಯನ್ನು ಸ್ವೀಕರಿಸಲು ಸಿದ್ಧರಾಗಿದ್ದಾರೆಯೇ?"

ಮದೀನದ ಜನರು ಹಝ್ರತ್ ಪೈಗಂಬರರ[ಸ] ಮಾತುಗಳನ್ನು ಆಲಿಸಿ ಪ್ರಭಾವಿತರಾದರು. ಅವರು ಹೇಳಿದರು: "ನಿಮ್ಮ ಉಪದೇಶಗಳನ್ನು ನಾವು ಸ್ವೀಕರಿಸುತ್ತೇವೆ. ಮದೀನದಲ್ಲಿ ಇಸ್ಲಾಮಿಗೆ ಆಶ್ರಯ ನೀಡುವ ಕುರಿತು ನಾವು ಮದೀನಕ್ಕೆ ಹೋದನಂತರ ನಮ್ಮ ಕೋಮಿನವರೊಂದಿಗೆ ಚರ್ಚಿಸಿ ಮುಂದಿನ ವರ್ಷ ನಿಮಗೆ ನಮ್ಮ ತೀರ್ಮಾನವನ್ನು ತಿಳಿಸುವೆವು."[20]

ಈ ಜನರು ಮದೀನಕ್ಕೆ ಹೋದನಂತರ ತಮ್ಮ ಸಂಬಂಧಿಕರಿಗೂ ಸ್ನೇಹಿತರಿಗೂ ಹಝ್ರತ್ ಪೈಗಂಬರರ[ಸ] ಉಪದೇಶಗಳ ಕುರಿತು ತಿಳಿಸಲು ತೊಡಗಿದರು. ಆ ಕಾಲದಲ್ಲಿ ಮದೀನದಲ್ಲಿ ಔಸ್ ಮತ್ತು ಖಝ್ರಜ್ ಎಂಬ ಎರಡು ಅರಬಿ ಗೋತ್ರಗಳು ವಾಸಿಸುತ್ತಿದ್ದುವು. ಅಲ್ಲಿ ಮೂರು ಯಹೂದಿ ಗೋತ್ರಗಳಾದ ಬನೂ ಖುರೈಝ, ಬನೂ ನಝೀರ್ ಮತ್ತು ಬನೂ ಖೈನ್‌ಖಾಅ್ ಸಹ ವಾಸಿಸುತ್ತಿದ್ದುವು.

ಔಸ್ ಮತ್ತು ಖಝ್ರಜ್ ಗೋತ್ರಗಳು ಪರಸ್ಪರ ಹೋರಾಡುತ್ತಿದ್ದುವು. ಬನೂ ಖುರೈಝ ಮತ್ತು ಬನೂ ನಝೀರ್, ಔಸ್ ಗೋತ್ರದೊಂದಿಗೆ ಮತ್ತು ಬನೂ ಖೈನ್‌ಖಾಅ್, ಖಝ್ರಜ್ ಗೋತ್ರದೊಂದಿಗೆ ಸೇರಿದ್ದವು. ದೀರ್ಘಕಾಲದ ಹೋರಾಟದ ನಂತರ, ತಾವೆಲ್ಲರೂ ಪರಸ್ಪರ ರಾಜಿ ಮಾಡಿಕೊಳ್ಳಬೇಕು ಎಂಬ ಭಾವನೆ ಅವರಲ್ಲಿ ಮೂಡಿಬರುತ್ತಿತ್ತು. ಕೊನೆಗೆ ಪರಸ್ಪರ ಸಮಾಲೋಚನೆಯ ನಂತರ ಖಝ್ರಜ್ ಗೋತ್ರದ ಮುಖಂಡನಾದ ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್ ಎಂಬವನನ್ನು ಸಂಪೂರ್ಣ ಮದೀನದ ದೊರೆಯೆಂದು ಅಂಗೀಕರಿಸಲು ತೀರ್ಮಾನಿಸಲಾಯಿತು. ಯಹೂದಿಯರೊಂದಿಗೆ ಬಾಂಧವ್ಯವಿದ್ದ ಕಾರಣ ಔಸ್ ಮತ್ತು ಖಝ್ರಜ್ ಗೋತ್ರಗಳ ಜನರು ಬೈಬಲಿನ ಭವಿಷ್ಯವಾಣಿಗಳನ್ನು ಆಲಿಸುತ್ತಾ ಇದ್ದರು. ಯಹೂದಿಯರು ತಮಗುಂಟಾಗುವ ಆಪತ್ತುಗಳನ್ನು ಮತ್ತು ಕಷ್ಟಗಳನ್ನು ವಿವರಿಸುತ್ತಾ ಕೊನೆಗೆ ಮೂಸಾ ಪ್ರವಾದಿಯ ಹಾಗಿರುವ ಒಬ್ಬ ಪ್ರವಾದಿ ಬರಲಿರುವ ಕುರಿತು ಹೇಳುತ್ತಿದ್ದರು. ಆ ಪ್ರವಾದಿ ಆಗಮಿಸುವ ಕಾಲ ಸಮೀಪಿಸಿದೆ ಎಂದೂ ಆ ಪ್ರವಾದಿ ಬಂದರೆ ತಾವು ಪುನಃ ಲೋಕದಲ್ಲಿ ಜಯಗಳಿಸುವೆವು ಎಂದೂ ತಮ್ಮ ವಿರೋಧಿಗಳು ನಾಶಗೊಳಿಸಲ್ಪಡುವರು ಎಂದೂ ಯಹೂದಿಯರು ಹೇಳುತ್ತಿದ್ದರು.

20. ಇಬ್ನು ಹಿಶಾಮ್ ಭಾಗ–1 ಪುಟ 150–156.

ಹಜ್ಜ್‌ಯಾತ್ರೆ ಮಾಡಿ ಬಂದವರಿಂದ ಹಝ್ರತ್ ಪೈಗಂಬರರ(ಸ) ಕುರಿತು ಮದೀನದವರು ತಿಳಿದಾಗ ಹಝ್ರತ್ ಪೈಗಂಬರರ(ಸ) ಸತ್ಯತೆಯ ಬಗ್ಗೆ ಅವರ ಹೃದಯಗಳಲ್ಲಿ ವಿಶ್ವಾಸ ಮನೆಮಾಡಿತು. ಅವರು, "ನಮಗೆ ಯಹೂದಿಯರು ವಿವರಿಸುತ್ತಿದ್ದ ಆ ಪ್ರವಾದಿ ಇವರೆಂಬುದಾಗಿ ತಿಳಿಯುತ್ತದೆ" ಎಂದು ಹೇಳಿದರು. ಅನೇಕ ಯುವಕರು ಹಝ್ರತ್ ಪೈಗಂಬರರ(ಸ) ಉಪದೇಶಗಳನ್ನು ತಿಳಿದು ಪ್ರಭಾವಿತರಾದರು. ಯಹೂದಿಯರಿಂದ ಅವರು ಆಲಿಸುತ್ತಿದ್ದ ಭವಿಷ್ಯವಾಣಿಗಳು ಅವರು ಸತ್ಯವಿಶ್ವಾಸವನ್ನು ಸ್ವೀಕರಿಸುವುದಕ್ಕೆ ಸಹಾಯಕವಾದುವು.

ಮುಂದಿನ ವರ್ಷ ಹಜ್ಜ್ ವೇಳೆಯಲ್ಲಿ ಮದೀನದವರು ಮಕ್ಕಕ್ಕೆ ಬಂದಾಗ, ಅವರಲ್ಲಿ ಹನ್ನೆರಡು ಮಂದಿ ಹಝ್ರತ್ ಪೈಗಂಬರರ(ಸ) ಧರ್ಮವನ್ನು ಸೇರಲು ಮುಂದಾದರು. ಅವರಲ್ಲಿ ಹತ್ತು ಜನ ಖಝ್ರಜ್ ಗೋತ್ರಕ್ಕೆ ಮತ್ತು ಇಬ್ಬರು ಔಸ್ ಗೋತ್ರಕ್ಕೆ ಸೇರಿದವರಾಗಿದ್ದರು. ಮಿನಾದಲ್ಲಿ ಅವರು ಹಝ್ರತ್ ಪೈಗಂಬರರನ್ನು(ಸ) ಭೇಟಿಯಾದರು. ಅವರು ಹಝ್ರತ್ ಪೈಗಂಬರರ ಕೈಯ ಮೇಲೆ ಕೈ ಇಟ್ಟು ತಮ್ಮ ನಿಷ್ಠೆಯ ಪ್ರಮಾಣ ಮಾಡುತ್ತಾ, ತಾವು ಏಕದೇವನ ಹೊರತು ಬೇರೆ ಯಾರನ್ನೂ ಆರಾಧಿಸಲಾರೆವೆಂದೂ ಕಳ್ಳತನ ಮಾಡಲಾರೆವೆಂದೂ ದುಷ್ಕೃತ್ಯಗಳನ್ನು ಮಾಡಲಾರೆವೆಂದೂ ಹೆಮ್ಮಕ್ಕಳನ್ನು ಕೊಲ್ಲಲಾರೆವೆಂದೂ ಪರಸ್ಪರ ಸುಳ್ಳು ಆರೋಪ ಮಾಡಲಾರೆವೆಂದೂ ಏಕದೇವನಿಂದ ನೇಮಿಸಲ್ಪಟ್ಟ ಪ್ರವಾದಿಯ ಇನ್ನಿತರ ಉಪದೇಶಗಳಿಗೆ ಮತ್ತು ಆಜ್ಞೆಗಳಿಗೆ ಅವಿಧೇಯರಾಗಲಾರೆವೆಂದೂ ದೃಢ ಪ್ರತಿಜ್ಞೆ ಮಾಡಿದರು. ಅವರು ತಮ್ಮ ನಗರಕ್ಕೆ ಮರಳಿ ಹೋದಾಗ ತಮ್ಮ ನಗರದ ನಿವಾಸಿಗಳಿಗೆ ಹೆಚ್ಚು ಉತ್ಸಾಹದಿಂದ ಧರ್ಮ ಸಂದೇಶವನ್ನು ತಲಪಿಸಲು ತೊಡಗಿದರು.[21] ಮದೀನದ ಮನೆಗಳಿಂದ ವಿಗ್ರಹಗಳು ಹೊರಕ್ಕೆಸೆಯಲ್ಪಡತೊಡಗಿದುವು. ವಿಗ್ರಹಗಳ ಮುಂದೆ ತಲೆಬಾಗುತ್ತಿದ್ದವರು ಈಗ ತಲೆಎತ್ತಿ ನಡೆಯತೊಡಗಿದರು. ಏಕದೇವನ ಮುಂದೆ ಹೊರತು ಬೇರೆ ಯಾರ ಮುಂದೆಯೂ ಅವರು ತಲೆಬಾಗಲು ಸಿದ್ಧರಾಗಲಿಲ್ಲ. ಯಹೂದಿಯರು ಆಶ್ಚರ್ಯ ಚಕಿತರಾದರು. ಶತಮಾನ ಕಾಲದ ಸ್ನೇಹಸಂಬಂಧ ಮತ್ತು ಶತಮಾನಗಳ ಕಾಲದ ಧಾರ್ಮಿಕ ತತ್ವಗಳ ಪ್ರಚಾರದಿಂದ ಅವರು ಮಾಡಲಾಗದ ಪರಿವರ್ತನೆಯನ್ನು ಇಸ್ಲಾಮ್ ಧರ್ಮ ಕೆಲವೇ ದಿನಗಳಲ್ಲಿ ಮಾಡಿ ತೋರಿಸಿತು. ಏಕದೇವ ವಿಶ್ವಾಸದ ಕುರಿತು ಉಪದೇಶ ಮದೀನದ ನಿವಾಸಿಗಳ ಹೃದಯಗಳಲ್ಲಿ ಮನೆಮಾಡುತ್ತಾ ಹೋಗುತ್ತಿತ್ತು. ಒಬ್ಬರ ನಂತರ ಇನ್ನೊಬ್ಬರಂತೆ ಜನರು ಬಂದು ಮುಸ್ಲಿಮರೊಂದಿಗೆ, "ನಿಮ್ಮ ಧರ್ಮವನ್ನು ನಮಗೆ ಕಲಿಸಿರಿ" ಎಂದು ಹೇಳಲುತೊಡಗಿದರು. ಆಗ ಮದೀನದ ಮುಸ್ಲಿಮರು ಇಸ್ಲಾಮ್ ಧರ್ಮದ ತತ್ವಗಳನ್ನು ಸಂಪೂರ್ಣವಾಗಿ ತಿಳಿದಿರಲಿಲ್ಲ. ನೂರಾರು ಅಥವಾ ಸಾವಿರಾರು ಜನರಿಗೆ ಇಸ್ಲಾಮ್ ಧರ್ಮದ ಕುರಿತುಸವಿಸ್ತಾರವಾಗಿ ತಿಳಿಸುವಷ್ಟು ಮದೀನದ ನವಮುಸ್ಲಿಮರ ಸಂಖ್ಯೆ ಇರಲಿಲ್ಲ.

21. ಇಬ್ನು ಹಿಶಾಮ್ ಭಾಗ–1 ಪುಟ 150–156.



ಆದುದರಿಂದ ಅವರು ಮಕ್ಕಕ್ಕೆ ಒಬ್ಬರನ್ನು ಕಳುಹಿಸಿ ಒಬ್ಬ ಧರ್ಮ ಪ್ರಚಾರಕನನ್ನು ಕಳುಹಿಸಿಕೊಡಲು ಹಝ್ರತ್ ಪೈಗಂಬರರೊಂದಿಗೆ(ಸ) ಅಪೇಕ್ಷಿಸಿದರು. ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಿ ಹಿಂದಿರುಗಿದ ಮುಸ್‌ಅಬ್ ಎಂಬ ತಮ್ಮ ಶಿಷ್ಯನನ್ನು ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಧರ್ಮಪ್ರಚಾರಕ್ಕಾಗಿ ಕಳುಹಿಸಿದರು. ಹಝ್ರತ್ ಮುಸ್‌ಅಬ್(ರ) ಮಕ್ಕದಿಂದ ಹೊರಗೆ ಕಳುಹಿಸಲ್ಪಟ್ಟ ಪ್ರಥಮ ಧರ್ಮಪ್ರಚಾರಕರಾಗಿದ್ದರು.

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಪ್ನಯಾನ (ಇಸ್ರಾ ಅಥವಾ ಮಿಅ್‌ರಾಜ್)

ಇದೇ ದಿನಗಳಲ್ಲಿ ಹಝ್ರತ್ ಪೈಗಂಬರರಿಗೆ(ಸ) ಮುಂದೆ ಬರಲಿರುವ ಸಂಭವಗಳ ಬಗ್ಗೆ ಅಲ್ಲಾಹನು ಶುಭವಾರ್ತೆಗಳನ್ನು ನೀಡಿದನು. ಅವರಿಗೆ ಒಂದು ದಿವ್ಯ ದರ್ಶನ(ಕಶ್‌ಫ್)ವನ್ನು ತೋರಿಸಿಕೊಡಲಾಯಿತು. ಅವರು ಜೆರುಸಲೇಮಿಗೆ ಹೋದುದಾಗಿಯೂ ಹಿಂದೆ ಆಗಮಿಸಿದ ಪ್ರವಾದಿಗಳು ಅವರ ನೇತೃತ್ವದಲ್ಲಿ ನಮಾಝ್ ಮಾಡಿದುದಾಗಿಯೂ ಅವರು ಆ ದಿವ್ಯದರ್ಶನದಲ್ಲಿ ಕಂಡರು.[22]

ಹಝ್ರತ್ ಪೈಗಂಬರರಿಗೆ(ಸ) ಜೆರುಸಲೇಮನ್ನು ತೋರಿಸಿದುದು ಮದೀನವನ್ನು ಉದ್ದೇಶಿಸಿಯಾಗಿತ್ತು. ಅದು ಏಕದೇವಾರಾಧನೆಯ ಕೇಂದ್ರವಾಗಲಿತ್ತು. ಅವರ ನೇತೃತ್ವದಲ್ಲಿ ಬೇರೆ ಪ್ರವಾದಿಗಳು ನಮಾಝ್ ಮಾಡಿದುದರ ವ್ಯಾಖ್ಯಾನ ವಿವಿಧ ಧರ್ಮಗಳಿಗೆ ಸೇರಿದವರು ಅವರ ಧರ್ಮದಲ್ಲಿ ಪ್ರವೇಶಿಸುವರು ಮತ್ತು ಅವರ ಧರ್ಮ ವಿಶ್ವಧರ್ಮವಾಗಲಿದೆ ಎಂಬುದನ್ನು ಸೂಚಿಸಲಿಕ್ಕಾಗಿತ್ತು. ಆ ಸಮಯದಲ್ಲಿ ಮಕ್ಕದಲ್ಲಿ ಮುಸ್ಲಿಮರು ಬಹಳ ಕಠಿಣ ಪರಿಸ್ಥಿತಿಯಲ್ಲಿದ್ದರು. ಅವರ ಕಷ್ಟಗಳು ಅತ್ಯಧಿಕವಾಗಿದ್ದುವು. ಆ ದಿವ್ಯ ದರ್ಶನವನ್ನು ಮಕ್ಕದ ನಿವಾಸಿಗಳಿಗೆ ತಿಳಿಸಿದಾಗ ಅವರಿಗೆ ನಗಲು ಮತ್ತು ಪರಿಹಾಸ ಮಾಡಲು ಹೊಸದಾದೊಂದು ಕಾರಣವನ್ನು ಒದಗಿಸಿತು. ಅವರು ಒಟ್ಟಿಗೆ ಸೇರಿದಾಗಲೆಲ್ಲಾ ಆ ದಿವ್ಯ ದರ್ಶನದ ಕುರಿತು ಪರಿಹಾಸ ಮಾಡಲು ತೊಡಗಿದರು. ಆದರೆ ಹೊಸ ಜೆರುಸಲೇಮಿನ ನಿರ್ಮಾಣವು ಆರಂಭಗೊಂಡಿತ್ತೆಂದು ಯಾರಿಗೆ ತಾನೆ ಗೊತ್ತಿದ್ದಿತು. ಪೂರ್ವ ಮತ್ತು ಪಶ್ಚಿಮದ ಜನಾಂಗಗಳು ಅಲ್ಲಾಹನ ಅಂತಿಮ ಪ್ರವಾದಿಯ ಶಬ್ದಗಳನ್ನು ಕೇಳಲು ಕಿವಿಗೊಟ್ಟು ಶ್ರದ್ಧೆಯಿಂದ ನಿಂತಿದ್ದುವು.

## ರೂಮಿನವರ[23] ವಿಜಯ

ಇದೇ ಕಾಲದಲ್ಲಿ ಖೈಸರ್ (ಕೋನ್‌ಸ್ಟೆಂಟ್‌ನೋಪಲ್‌ನ ರಾಜ) ಮತ್ತು ಕಿಸ್ರಾ (ಪರ್ಶಿಯದ ರಾಜ) ಇವರ ಮಧ್ಯೆ ಘೋರ ಯುದ್ಧ ನಡೆದು ಕಿಸ್ರಾ ಜಯಶಾಲಿಯಾದನು. ಸಿರಿಯಾದಲ್ಲಿ ಇರಾನಿನ ಸೈನ್ಯ ವ್ಯಾಪಿಸಿತು. ಜೆರುಸಲೇಮ್

22. ಇಬ್ನು ಹಿಶಾಮ್ ಭಾಗ–1 ಪುಟ 138 ಝುರ್‌ಖಾನಿ ಭಾಗ–1 ಪುಟ 306.

23. ರೂಮ್ ಎಂದರೆ ಕಾನ್‌ಸ್ಟಂಟಿನೋಪ್ಲ್ ಅಥವಾ ಇಂದಿನ ಇಸ್ತಾಂಬೂಲ್.

ನಾಶಗೊಳಿಸಲ್ಪಟ್ಟಿತು. ಪರ್ಶಿಯದ ಸೈನ್ಯ ಗ್ರೀಸನ್ನೂ ಏಶ್ಯಾ ಮೈನರನ್ನೂ ತಲಪಿತು. ಬೋಸ್ಫೋರಸ್ ಜಲಸಂಧಿಯ ಪಕ್ಕದಲ್ಲಿ ಪರ್ಶಿಯದ ಸೇನಾಪಡೆಗಳ ನಾಯಕರು ಕೋನ್ಸ್ಟೆಂಟ್ನೋಪಲ್‌ನಿಂದ ಕೇವಲ ಹತ್ತು ಮೈಲು (ಹದಿನಾರು ಕಿಲೋಮೀಟರ್) ದೂರದಲ್ಲಿ ತಮ್ಮ ಡೇರೆಗಳನ್ನು ಹಾಕಿದ್ದರು. ಆ ಸಮಯದಲ್ಲಿ ಮಕ್ಕದ ಜನರು ಆನಂದೋತ್ಸವವನ್ನು ಆಚರಿಸಲು ತೊಡಗಿದರು. ಅವರು ಹೇಳಿದರು: "ದೇವರ ತೀರ್ಮಾನ ಪ್ರಕಟವಾಗಿದೆ. ವಿಗ್ರಹಾರಾಧಕರಾದ ಪರ್ಶಿಯನರು ಗ್ರಂಥನೀಡಲ್ಪಟ್ಟ ಕ್ರೈಸ್ತರನ್ನು ಸೋಲಿಸಿರುವರು." ಆಗ ಅಲ್ಲಾಹನಿಂದ ಹಝ್ರತ್ ಪೈಗಂಬರರಿಗೆ(ಸ) ಹೀಗೆ ವಚನಗಳು ಅವತೀರ್ಣಗೊಂಡವು:

**ರೂಮಿನ (ಕಾನ್ಸ್ಟೆಂಟ್ನೋಪ್ಲ್‌ನ) ಸೈನ್ಯ (ಅರಬ್ ದೇಶದ ಸಮೀಪದಲ್ಲಿ) ಸೋಲಿಸಲ್ಪಟ್ಟಿದೆ. ಆದರೆ ಅವರಿಗೆ ಸೋಲಿನ ನಂತರ ಕೆಲವು ವರ್ಷಗಳಲ್ಲಿ ಜಯವು ಲಭಿಸುವುದು. ಅಲ್ಲಾಹನ ಅಧಿಕಾರ ಹಿಂದೆಯೂ ಜಾರಿಯಲ್ಲಿತ್ತು ಮತ್ತು ಮುಂದೆಯೂ ಜಾರಿಯಲ್ಲಿರುವುದು. ಆ ವಿಜಯದ ದಿನ ಬರುವಾಗ ಸತ್ಯವಿಶ್ವಾಸಿಗಳಿಗೂ ಅಲ್ಲಾಹನ ಸಹಾಯದಿಂದ ಸಂತೋಷ ಲಭಿಸುವುದು. ಅಲ್ಲಾಹನು ತಾನು ಇಚ್ಛಿಸುವವರಿಗೆ ಸಹಾಯ ನೀಡುತ್ತಾನೆ. ಅವನು ಬಹಳ ಪ್ರತಾಪಶಾಲಿಯೂ ಬಹಳ ದಯೆದೋರುವವನೂ ಆಗಿದ್ದಾನೆ. ಇದು ತನ್ನ ವಾಗ್ದಾನಗಳನ್ನು ಬದಲಾಯಿಸದ ಅಲ್ಲಾಹನ ವಾಗ್ದಾನವಾಗಿದೆ. ಆದರೆ ಬಹುತೇಕ ಜನರು ಅಲ್ಲಾಹನ ಶಕ್ತಿ ಸಾಮರ್ಥ್ಯಗಳನ್ನು ಅರಿತಿರದವರಾಗಿದ್ದಾರೆ.**

(ಪವಿತ್ರ ಖುರ್‌ಆನ್ 30 : 3–7)

ಕೆಲವೇ ವರ್ಷಗಳಲ್ಲಿ ಅಲ್ಲಾಹನು ಈ ಭವ್ಯ ಭವಿಷ್ಯವಾಣಿಯನ್ನು ಈಡೇರಿಸಿದನು. ಕೋನ್ಸ್ಟೆಂಟ್ನೋಪಲ್‌ನವರು ಪರ್ಶಿಯದವರನ್ನು ಸೋಲಿಸಿ ತಮ್ಮ ಪ್ರದೇಶವನ್ನು ಸ್ವತಂತ್ರಗೊಳಿಸಿದರು. ಅದೇ ಕಾಲದಲ್ಲಿ ಮುಸ್ಲಿಮರಿಗೆ ಮಕ್ಕದವರ ವಿರುದ್ಧ ಜಯಸಿಗಲು ತೊಡಗಿತು. ಮಕ್ಕದ ಜನರು, ತಾವು ಜನರನ್ನು ಮುಸ್ಲಿಮರ ಮಾತುಗಳನ್ನು ಕೇಳದಂತೆ ತಡೆದು ಮತ್ತು ಮುಸ್ಲಿಮರ ಮೇಲೆ ದೌರ್ಜನ್ಯಗೈಯಲು ಜನರಿಗೆ ಪ್ರೇರೆಪಿಸಿ ತಾವು ಇಸ್ಲಾಮನ್ನು ಕೊನೆಗಾಣಿಸಿರುವೆವು ಎಂದು ಬಗೆದಿದ್ದಾಗ ಅಲ್ಲಾಹನ ವಾಣಿ ನಿರಂತರವಾಗಿ ಇಸ್ಲಾಮಿನ ವಿಜಯದ ಶುಭವಾರ್ತೆಗಳನ್ನು ನೀಡುತ್ತಿದ್ದವು. ಮಕ್ಕದವರ ನಾಶದ ಸಮಯವು ಸಮೀಪವಾಗುತ್ತಾ ಇತ್ತೆಂದು ಸೂಚಿಸಲಾಗಿತ್ತು. ಅದೇ ಕಾಲದಲ್ಲಿ ಹಝ್ರತ್ ಪೈಗಂಬರ್(ಸ) ಬಹಳ ಉಚ್ಚಸ್ವರದಲ್ಲಿ ಅಲ್ಲಾಹನ ಈ ಸಂದೇಶವನ್ನು ಬಹಿರಂಗಪಡಿಸಿದರು:

**ಮಕ್ಕದವರು, ಮುಹಮ್ಮದ್ ತನ್ನ ಪ್ರಭುವಿನಿಂದ ತಮಗೆ ಯಾವುದಾದರೂ ದೃಷ್ಟಾಂತವನ್ನು ಏಕೆ ತರುವುದಿಲ್ಲ ಎಂದು ಕೇಳುತ್ತಾರೆ. ಏನು, ಮೊದಲಿನ ಪ್ರವಾದಿಗಳು ಆತನ ಬಗ್ಗೆ ಮಾಡಿದ ಭವಿಷ್ಯವಾಣಿಗಳು ಅವರಿಗೆ ಸಾಕಷ್ಟು ದೃಷ್ಟಾಂತಗಳಾಗಿಲ್ಲವೇ? ನಾವು ಪೂರ್ಣವಾಗಿ ಸಂದೇಶ ತಲಪಿಸುವ ಮೊದಲೇ ಮಕ್ಕದವರನ್ನು ನಾಶಗೊಳಿಸಿದ್ದರೆ ಮಕ್ಕದವರು, "ಓ ನಮ್ಮ ಪ್ರಭೂ, ನೀನು ನಮ್ಮ ಕಡೆಗೆ ಒಬ್ಬ ಪ್ರವಾದಿಯನ್ನು ಏಕೆ ಕಳುಹಿಸಲಿಲ್ಲ, ನೀನು ಹಾಗೆ ಮಾಡಿದ್ದರೆ ನಾವು ಹಿನ್ನೈಸಲ್ಪಟ್ಟವರೂ ಅಪಮಾನಿತರೂ**



**ಆಗುವ ಮೊದಲೇ ನಾವು ನಿನ್ನ ಉಪದೇಶಗಳನ್ನು ಅನುಸರಿಸುತ್ತಿದ್ದೆವು" ಎಂದು ಹೇಳಲು ಸಾಧ್ಯತೆ ಇತ್ತು. (ಓ ಪ್ರವಾದಿ) ನೀನು ಹೇಳು: ಪ್ರತಿಯೊಬ್ಬನು ತನ್ನ ನಿಗದಿತ ಸಮಯವನ್ನು ನಿರೀಕ್ಷಿಸಿಕೊಂಡಿರಬೇಕಾಗಿದೆ. ನೀವು ಸಹ ಆ ಸಮಯವನ್ನು ನಿರೀಕ್ಷಿಸುತ್ತಾ ಇರಿ. ದೈವಿಕ ಸಂದೇಶ ಸಂಪೂರ್ಣವಾಗಿ ತಲಪಿಸಲ್ಪಟ್ಟಾಗ ನೀವು ಅರಿತುಕೊಳ್ಳುವಿರಿ – ನೇರವಾದ ಮಾರ್ಗದಲ್ಲಿ ಮತ್ತು ಅಲ್ಲಾಹನ ಮಾರ್ಗದರ್ಶನದಲ್ಲಿ ಯಾರು ನಡೆಯುತ್ತಿರುವರು ಎಂದು.** (ಪವಿತ್ರ ಖುರ್‌ಆನ್ 20 : 134–136)

ಪ್ರತಿದಿನ ಅಲ್ಲಾಹನ ಹೊಸ ಸಂದೇಶವಾಣಿ ಅವತೀರ್ಣವಾಗುತ್ತಿತ್ತು. ಪ್ರತಿದಿನ ಇಸ್ಲಾಮಿನ ಅಭಿವೃದ್ಧಿ ಮತ್ತು ಅವಿಶ್ವಾಸಿಗಳ ನಾಶದ ಮುನ್ನೆಚ್ಚರಿಕೆಗಳು ನೀಡಲ್ಪಡುತ್ತಿದ್ದವು. ಮಕ್ಕದವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪರಿಗಣಿಸುವಾಗ ಹಝ್ರತ್ ಪೈಗಂಬರರಿಗೆ(ಸ) ಅವತೀರ್ಣವಾದ ದೇವವಾಣಿಗಳಲ್ಲಿ ಬಲಹೀನರಾದ ಮುಸ್ಲಿಮರಿಗೆ ದೈವಿಕ ಸಹಾಯ ಮತ್ತು ಜಯಲಭಿಸುವ ಬಗ್ಗೆ ಪ್ರಸ್ತಾಪಿಸಿರುವುದನ್ನು ತಿಳಿದಾಗ ಅವರು ಆಶ್ಚರ್ಯ ಚಕಿತರಾಗುತ್ತಿದ್ದರು. ಅವರು ಒಂದೋ ತಾವು ಹುಚ್ಚರು ಅಥವಾ ಮುಹಮ್ಮದ್ ಹುಚ್ಚ ಎಂದು ಯೋಚಿಸುತ್ತಿದ್ದರು. ತಮ್ಮ ದೌರ್ಜನ್ಯ ಮತ್ತು ಹಿಂಸಾಚಾರಗಳಿಂದ ಮುಸ್ಲಿಮರು ತಮ್ಮ ಕಡೆಗೆ ಬರಬೇಕೆಂದೂ ಮುಹಮ್ಮದರಿಗೂ ಅವರ ಸಂಗಡಿಗರಿಗೂ ಅವರ ವಾದಗಳ ಕುರಿತು ಸಂಶಯ ಉಂಟಾಗಬೇಕೆಂದೂ ಅವರು ಆಶಿಸಿದರು.

ಆದರೆ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಸಂದೇಶವನ್ನು ಹೀಗೆ ಪ್ರಕಟಿಸುತ್ತಿದ್ದರು:

**ಓ ಮಕ್ಕದ ನಿವಾಸಿಗಳೇ, ನಿಮ್ಮ ಯೋಚನೆಗಳು ತಪ್ಪಾಗಿವೆ. ನಿಮಗೆ ದೃಗ್ಗೋಚರವಾಗುತ್ತಿರುವುದರ ಮತ್ತು ನಿಮ್ಮ ದೃಷ್ಟಿಯಿಂದ ಮರೆಯಾಗಿರುವುದರ ಪ್ರಮಾಣ ಮಾಡಿ ನಾನು ಹೇಳುತ್ತೇನೆ: ಈ ಖುರ್‌ಆನ್ ಒಬ್ಬ ಗೌರವಾನ್ವಿತ ಪ್ರವಾದಿಯ ಮೂಲಕ ನಿಮಗೆ ಕೇಳಿಸಲಾಗುತ್ತಿರುವ ದೇವವಚನಗಳಾಗಿವೆ. ಇವು ಯಾವುದೇ ಕವಿಯ ವಚನಗಳಲ್ಲ. ಆದರೆ ನಿಮ್ಮ ಹೃದಯಗಳಲ್ಲಿ ಬಹಳ ಕಡಿಮೆ ವಿಶ್ವಾಸವುಂಟಾಗುತ್ತದೆ. ಇವು ಯಾವುದೇ ಕಣಿ ಹೇಳುವವನ ವಚನಗಳೂ ಅಲ್ಲ. ಆದರೆ ನೀವು ಉಪದೇಶವನ್ನು ಬಹಳ ಕಡಿಮೆ ಸ್ವೀಕರಿಸುತ್ತೀರಿ. ಇವು ಸಕಲ ಲೋಕ ಪ್ರಭುವಿನಿಂದ ಅವತೀರ್ಣಗೊಂಡವುಗಳಾಗಿವೆ. ಸರ್ವಲೋಕ ಪ್ರಭುವಾದ ನಾವು ಹೇಳುತ್ತೇವೆ: ಅವನು ಕೆಲವು ಮಾತುಗಳನ್ನು ಸೃಜಿಸಿ ನಮ್ಮಿಂದ ಅವತೀರ್ಣವಾದುದು ಎಂದು ಹೇಳಿದ್ದರೆ ನಾವು ಅವನನ್ನು ಬಲಗೈಯಿಂದ ಹಿಡಿಯುತ್ತಿದ್ದೆವು ಮತ್ತು ಅವನ ಜೀವನಾಡಿಯನ್ನು ಕತ್ತರಿಸುತ್ತಿದ್ದೆವು. ನೀವೆಲ್ಲರೂ ಸೇರಿ ಅವನನ್ನು ರಕ್ಷಿಸಲು ನೋಡಿದರೂ ನೀವು ಅವನನ್ನು ರಕ್ಷಿಸಲಾರಿರಿ. ಆದರೆ ಈ ಖುರ್‌ಆನ್ ಅಲ್ಲಾಹನಿಗೆ ಭಯಪಡುವವರಿಗೆ ಒಂದು ಉಪದೇಶವಾಗಿದೆ. ಈ ಖುರ್‌ಆನ್‌ನಲ್ಲಿ ಹೇಳಲಾದ ಸಂಗತಿಗಳನ್ನು ತಿರಸ್ಕರಿಸುವವರು ನಿಮ್ಮವರಲ್ಲಿ ಇದ್ದಾರೆಂದು ನಮಗೆ ಗೊತ್ತಿದೆ. ಈ ಉಪದೇಶಗಳು ಅವುಗಳನ್ನು ನಿರಾಕರಿಸುವವರ ಹೃದಯದಲ್ಲಿ ಖೇದವನ್ನುಂಟುಮಾಡುತ್ತದೆ. (ಅಯ್ಯೋ**

**ಈ ಉಪದೇಶಗಳು ನಮ್ಮ ಬಳಿ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಅವರು ಮನವರಿಕೆ ಮಾಡಿಕೊಳ್ಳುತ್ತಾರೆ.) ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾದ ಸಂಗತಿಗಳು ಅಕ್ಷರಶಃ ಈಡೇರುವುವು. ಆದುದರಿಂದ ಓ ಮುಹಮ್ಮದ್, (ಈ ಜನರ ವಿರೋಧವನ್ನು ನೀನು ಲಕ್ಷಿಸಬೇಡ.) ನೀನು ನಿನ್ನ ಮಹತ್ವಶಾಲಿ ಪ್ರಭುವಿನ ನಾಮ ಸಂಕೀರ್ತನೆಯನ್ನು ಮಾಡು.**

(ಪವಿತ್ರ ಖುರ್‌ಆನ್ 69:39–53)

ಮದೀನದವರನ್ನು ಹಝ್ರತ್ ಪೈಗಂಬರರು(ಸ) ಭೇಟಿಯಾದ ಮೂರನೆಯ ಹಜ್ಜ್ ಕಾಲದಲ್ಲಿ ಮದೀನದ ಮುಸ್ಲಿಮರ ಒಂದು ದೊಡ್ಡ ಗುಂಪು ಮಕ್ಕಕ್ಕೆ ಆಗಮಿಸಿತು. ಮಕ್ಕದವರ ವಿರೋಧದ ಕಾರಣದಿಂದ ಮದೀನದವರು ಹಝ್ರತ್ ಪೈಗಂಬರರನ್ನು(ಸ) ಏಕಾಂತದಲ್ಲಿ ಕಾಣುವ ಅಪೇಕ್ಷೆ ಸೂಚಿಸಿದರು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ತಮ್ಮ ವಲಸೆ ಹೋಗುವಿಕೆ ಮದೀನದ ಕಡೆಗೆಯೇ ನಿಶ್ಚಿತವಾಗಿರಬಹುದೆಂದು ಭಾವಿಸಿದ್ದರು. ಅವರು ತಮ್ಮ ನಂಬಿಕೆಗೆ ಪಾತ್ರರಾದ ಸಂಬಂಧಿಕರಿಗೆ ತಮ್ಮ ಯೋಚನೆಗಳನ್ನು ತಿಳಿಸಿದ್ದರು. ಹಝ್ರತ್ ಪೈಗಂಬರ್(ಸ) ಹಾಗೆ ಮಾಡಬಾರದೆಂದು ಸಂಬಂಧಿಕರು ಕೋರಿದರು. ಅವರು ಹೇಳಿದರು: "ಮಕ್ಕದವರು ನಿಮ್ಮ ವಿರೋಧಿಗಳಾಗಿದ್ದರೂ ದೊಡ್ಡ ದೊಡ್ಡ ಪ್ರಭಾವಶಾಲಿ ವ್ಯಕ್ತಿಗಳು ನಿಮ್ಮ ಸಂಬಂಧಿಕರಾಗಿದ್ದಾರೆ. ನಿಮಗೆ ಮದೀನದಲ್ಲಿ ಏನಾಗುವುದೆಂದು ಯಾರಿಗೇನು ತಿಳಿದಿದೆ. ನಿಮ್ಮ ಸಂಬಂಧಿಕರು ನಿಮಗೆ ಅಲ್ಲಿ ನೆರವು ತಲಪಿಸಬಲ್ಲರೋ ಇಲ್ಲವೋ ಎಂದು ಹೇಗೆ ಹೇಳುವುದು?"

ಆದರೆ ಹಝ್ರತ್ ಪೈಗಂಬರ್(ಸ) ತಾನು ವಲಸೆ ಹೋಗಬೇಕೆಂದು ಅಲ್ಲಾಹನು ತೀರ್ಮಾನಿಸಿರುವನು ಎಂದು ಮನವರಿಕೆ ಮಾಡಿಕೊಂಡಿದ್ದರು. ಆದುದರಿಂದ ಅವರು ತಮ್ಮ ಸಂಬಂಧಿಕರ ಸಲಹೆಯನ್ನು ಅಂಗೀಕರಿಸಲಿಲ್ಲ. ಅವರು ಮದೀನಕ್ಕೆ ವಲಸೆ ಹೋಗಲು ತೀರ್ಮಾನಿಸಿದರು.

## ಅಖಬದಲ್ಲಿ ಪ್ರತಿಜ್ಞೆ

ಮಧ್ಯರಾತ್ರಿಯ ನಂತರ ಅಖಬ ಕಣಿವೆ ಪ್ರದೇಶದಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಮದೀನದಿಂದ ಬಂದ ಮುಸ್ಲಿಮರು ಒಟ್ಟಿಗೆ ಸೇರಿದರು. ಹಝ್ರತ್ ಪೈಗಂಬರ್ ಜೊತೆಯಲ್ಲಿ ಅವರ ಚಿಕ್ಕಪ್ಪ ಹಝ್ರತ್ ಅಬ್ಬಾಸ್(ರ) ಸಹ ಇದ್ದರು. ಮದೀನದಿಂದ ಆಗಮಿಸಿದ ಮುಸ್ಲಿಮರ ಸಂಖ್ಯೆ 73 ಆಗಿತ್ತು.[24]

ಅವರಲ್ಲಿ 62 ಮಂದಿ ಖಝ್ರಜ್ ಗೋತ್ರಕ್ಕೆ ಸೇರಿದವರು ಮತ್ತು 11 ಜನರು ಔಸ್ ಗೋತ್ರದವರಾಗಿದ್ದರು. ಅವರ ಜೊತೆ ಇಬ್ಬರು ಮಹಿಳೆಯರೂ ಇದ್ದರು. ಅವರಲ್ಲಿ ಒಬ್ಬಾಕೆ ಬನೀನಜ್ಜಾರ್ ಗೋತ್ರಕ್ಕೆ ಸೇರಿದ ಹಝ್ರತ್ ಉಮ್ಮು ಅಮ್ಮಾರ(ರ) ಆಗಿದ್ದರು. ಅವರಿಗೆಲ್ಲಾ ಹಝ್ರತ್ ಮುಸ್‌ಅಬ್(ರ) ಮೂಲಕ ಇಸ್ಲಾಮ್ ಧರ್ಮದ ಪಾಠಗಳೆಲ್ಲಾ ತಲಪಿದ್ದುದರಿಂದ ಆ ಜನರೆಲ್ಲಾ ವಿಶ್ವಾಸ ಮತ್ತು ದೃಢತೆಯನ್ನು

24. ಇಬ್ನು ಹಿಶಾಮ್ ಭಾಗ–1 ಪುಟ 154.



ಹೊಂದಿದ್ದರು. ಅನಂತರದ ಸಂಭವಗಳು ಈ ಜನರೆಲ್ಲಾ ಇಸ್ಲಾಮಿನ ಸ್ತಂಭಗಳಾಗಲಿರುವರೆಂಬುದನ್ನು ಸ್ಪಷ್ಟಪಡಿಸಿದುವು. ಹಝ್ರತ್ ಉಮ್ಮು ಅಮ್ಮಾರ ತನ್ನ ಮಕ್ಕಳಲ್ಲಿ ಇಸ್ಲಾಮಿನ ಮೇಲಿನ ಸ್ನೇಹವನ್ನು ಬಹಳ ತುಂಬಿಸಿದ್ದರು. ಅವರ ಪುತ್ರರಾದ ಹಝ್ರತ್ ಹಬೀಬ್(ರ) ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದನಂತರ ಮುಸೈಲಿಮ ಎಂಬ ಹುಸಿ ಪ್ರವಾದಿಯ ಸೈನ್ಯದ ಸೆರೆಯಾಳಾದಾಗ ಮುಸೈಲಿಮ ಅವರನ್ನು ಕರೆಯಿಸಿ,

"ಮುಹಮ್ಮದ್ ಅಲ್ಲಾಹನ ಪ್ರವಾದಿ ಎಂದು ನೀನು ಸಾಕ್ಷ್ಯ ಹೇಳುತ್ತೀಯೋ?" ಎಂದು ಕೇಳಿದಾಗ, ಅವರು "ಹೌದು" ಎಂದರು. ಆಗ ಮುಸೈಲಿಮ ಕೇಳಿದನು: "ನಾನು ಅಲ್ಲಾಹನ ಪ್ರವಾದಿ ಎಂದು ನೀನು ಸಾಕ್ಷಿ ಹೇಳುವಿಯೋ?" ಅವರು "ಇಲ್ಲ" ಎಂದರು. ಆಗ ಮುಸೈಲಿಮ ಅವರ ದೇಹದ ಒಂದು ಅವಯವವನ್ನು ಕಡಿದು ಹಾಕಲು ಆಜ್ಞಾಪಿಸಿದನು. ಮುಸೈಲಿಯ ಪುನಃ ಕೇಳಿದನು: "ಮುಹಮ್ಮದ್ ಅಲ್ಲಾಹನ ಪ್ರವಾದಿ ಎಂದು ನೀನು ಸಾಕ್ಷ್ಯ ಹೇಳುತ್ತೀಯೋ?" ಅವರು ಹೌದೆಂದು ಉತ್ತರಿಸಿದರು. ಪುನಃ ಮುಸೈಲಿಮ, "ನಾನು ಅಲ್ಲಾಹನ ಪ್ರವಾದಿ ಎಂದು ನೀನು ಸಾಕ್ಷಿ ಹೇಳುವಿಯೋ?" ಎಂದು ಕೇಳಿದಾಗ ಇಲ್ಲವೆಂದು ಮರುನುಡಿದರು. ಆಗ ಅವರ ಇನ್ನೊಂದು ಅವಯವವನ್ನು ಕಡಿದು ಹಾಕಲು ಮುಸೈಲಿಮ ಆಜ್ಞಾಪಿಸಿದನು. ಹೀಗೆಯೇ ಮುಂದುವರಿಯಿತು. ಹಝ್ರತ್ ಹಬೀಬ್‌ರ(ರ) ದೇಹದ ಒಂದೊಂದು ಅಂಗವನ್ನು ಕಡಿದು ಹಾಕಿದ ನಂತರ ಮುಸೈಲಿಯ ಮೇಲಿನಂತೆ ಪ್ರಶ್ನಿಸುತ್ತಿದ್ದನು. ಹಝ್ರತ್ ಹಬೀಬ್ ಮೇಲೆ ವಿವರಿಸಿದಂತೆಯೇ ಉತ್ತರ ನೀಡುತ್ತಿದ್ದರು. ಈ ರೀತಿ ಹಬೀಬ್‌ರ ಪ್ರತಿಯೊಂದು ಅಂಗವೂ ಕತ್ತರಿಸಲ್ಪಟ್ಟಿತು. ಈ ರೀತಿ ತುಂಡರಿಸಲ್ಪಟ್ಟ ಅವರು ತಮ್ಮ ವಿಶ್ವಾಸವನ್ನು ಬಹಿರಂಗಪಡಿಸುತ್ತಾ ಮೃತರಾಗಿ ತಮ್ಮ ಸೃಷ್ಟಿಕರ್ತನ ಕಡೆಗೆ ಮರಳಿ ಹೋದರು. ಹಝ್ರತ್ ಉಮ್ಮು ಅಮ್ಮಾರ ಸಹ ಅನೇಕ ಯುದ್ಧಗಳಲ್ಲಿ ಹಝ್ರತ್ ಪೈಗಂಬರರ(ಸ) ಜೀವಿತಕಾಲದಲ್ಲಿ ಭಾಗವಹಿಸಿದ್ದರು.

ಒಟ್ಟಾರೆ ಹೇಳುವುದಾದರೆ, ಮದೀನದಿಂದ ಬಂದವರು ಸತ್ಯವಿಶ್ವಾಸವನ್ನು ದೃಢವಾಗಿ ಅಂಗೀಕರಿಸಿದವರಾಗಿದ್ದರು. ಅವರು ಹಝ್ರತ್ ಪೈಗಂಬರರಿಂದ(ಸ) ಐಶ್ವರ್ಯವನ್ನಾಗಲೀ ಧನವನ್ನಾಗಲೀ ಕೇಳಲು ಬಂದವರಾಗಿರಲಿಲ್ಲ. ಅವರು ಕೇವಲ ಸತ್ಯವನ್ನು ಅಪೇಕ್ಷಿಸಿ ಬಂದವರಾಗಿದ್ದರು. ಹಝ್ರತ್ ಅಬ್ಬಾಸ್(ರ) ಅವರನ್ನು ಸಂಬೋಧಿಸಿ ಹೀಗೆಂದರು: "ಓ ಜನರೇ, ಈ ನನ್ನ ಸಂಬಂಧಿಕ ತನ್ನ ಗೋತ್ರವರ್ಗದವರಲ್ಲಿ ಗೌರವಾನ್ವಿತರಾಗಿದ್ದಾರೆ. ಅವರ ಗೋತ್ರಕ್ಕೆ ಸೇರಿದ ಮುಸ್ಲಿಮರಾಗಿರುವವರೂ ಮುಸ್ಲಿಮರಾಗದೆ ಇರುವವರೂ ಅವರನ್ನು ಸಂರಕ್ಷಿಸುತ್ತಿದ್ದಾರೆ. ಆದರೆ ಅವರು ನಿಮ್ಮ ಬಳಿಗೆ ಬರಲು ತೀರ್ಮಾನಿಸಿದ್ದಾರೆ. ಅವರು ನಿಮ್ಮ ಬಳಿಗೆ ಬಂದರೆ ಅರಬ್ ದೇಶದ ನಿವಾಸಿಗಳೆಲ್ಲಾ ನಿಮ್ಮ ವಿರೋಧಿಗಳಾಗುವರು. ನೀವು ನಿಮ್ಮ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಂಡು ಮತ್ತು ಅವರ ಧರ್ಮದ ಸಂರಕ್ಷಣೆಯಲ್ಲಿ ನಿಮಗೆ

ಉಂಟಾಗಬಹುದಾದ ಅಪಾಯಗಳ ಬಗ್ಗೆ ಮನವರಿಕೆ ಮಾಡಿಕೊಂಡು ಅವರನ್ನು ನಿಮ್ಮಲ್ಲಿಗೆ ಕರೆದುಕೊಂಡು ಹೋಗುವಿರಾದರೆ ಸಂತೋಷದಿಂದ ಕರೆದುಕೊಂಡು ಹೋಗಿರಿ. ಅದು ಸಾಧ್ಯವಿಲ್ಲವಾದರೆ ನೀವು ನಿಮ್ಮ ನಿರ್ಧಾರವನ್ನು ಬದಲಾಯಿಸಿರಿ."

ಮದೀನದ ಮುಸ್ಲಿಮರ ಗುಂಪಿನ ನಾಯಕ ಅಲ್‌ಬರಾ ಎಂಬವರಾಗಿದ್ದರು. ಅವರು ಹೇಳಿದರು: "ನಾವು ನಿಮ್ಮ ಮಾತುಗಳನ್ನು ಆಲಿಸಿದೆವು. ನಾವು ಹೀಗೆ ದೃಢನಿರ್ಧಾರ ಮಾಡಿದ್ದೇವೆ. ನಮ್ಮ ಜೀವಗಳು ಅಲ್ಲಾಹನ ಪ್ರವಾದಿಯವರ ಪಾದಗಳಿಗೆ ಅರ್ಪಿತವಾಗಿವೆ. ಈಗ ತೀರ್ಮಾನ ಪ್ರವಾದಿಯವರ ಅಧಿಕಾರಕ್ಕೊಳಪಟ್ಟಿದೆ. ನಾವು ಅವರ ಪ್ರತಿಯೊಂದು ನಿರ್ಧಾರವನ್ನು ಶಿರಸಾ ಸ್ವೀಕರಿಸುವೆವು."

ಹಝ್ರತ್ ಪೈಗಂಬರ್(ಸ) ಅವರಿಗೆ ಇಸ್ಲಾಮ್ ಧರ್ಮದ ಉಪದೇಶಗಳನ್ನು ವಿವರಿಸಿ ಹೇಳಿದರು. ಅಲ್ಲಾಹನ ಏಕತ್ವವನ್ನು ಪ್ರತಿಪಾದಿಸುವ ಪ್ರವಚನ ನೀಡಿ ಕೊನೆಗೆ ಹೇಳಿದರು:

"ನೀವು ನಿಮ್ಮ ಪತ್ನಿಯರನ್ನೂ ಮಕ್ಕಳನ್ನೂ ಸಂರಕ್ಷಿಸುವ ಹಾಗೆ ಇಸ್ಲಾಮ್ ಧರ್ಮವನ್ನು ಸಂರಕ್ಷಣೆ ಮಾಡುವ ವಾಗ್ದಾನವನ್ನು ನೀಡುವಿರಾದರೆ ನಾನು ನಿಮ್ಮ ಜೊತೆಗೆ ಬರಲು ಸಿದ್ಧನಾಗಿದ್ದೇನೆ."

ಹಝ್ರತ್ ಪೈಗಂಬರ್(ಸ) ತಮ್ಮ ಮಾತುಗಳನ್ನು ಮುಕ್ತಾಯಗೊಳಿಸುವ ಮೊದಲೇ ಅಲ್ಲಿದ್ದ ಧರ್ಮರಕ್ಷಣೆಗಾಗಿ ತಮ್ಮ ಜೀವಗಳನ್ನು ಬಲಿದಾನ ಮಾಡಲು ಸಿದ್ಧರಾಗಿದ್ದ ಮದೀನದ ಆ ಎಪ್ಪತ್ತಮೂರು ಸತ್ಯವಿಶ್ವಾಸಿಗಳು ಒಂದೇ ಧ್ವನಿಯಲ್ಲಿ ಗಟ್ಟಿಯಾಗಿ ಹೇಳಿದರು: "ಹೌದು, ನಾವು ಸಿದ್ಧರಾಗಿದ್ದೇವೆ."

ಆ ಸತ್ಯವಿಶ್ವಾಸಿಗಳಿಗೆ ಮಕ್ಕದವರ ಕುತಂತ್ರಗಳ ಬಗ್ಗೆ ಯೋಚನೆ ಉಂಟಾಗಿರಲಿಲ್ಲ. ಅವರ ಏರು ಧ್ವನಿ ವಾತಾವರಣದಲ್ಲಿ ಪ್ರತಿಧ್ವನಿಸಿತು. ಹಝ್ರತ್ ಅಬ್ಬಾಸ್(ರ) ಅವರನ್ನು ಎಚ್ಚರಿಸಿದರು:

"ಮೌನವಾಗಿ ಇರಿ. ಮೌನವಾಗಿ ಇರಿ. ಮಕ್ಕದ ಜನರಿಗೆ ಈ ವಿಷಯವು ತಿಳಿಯದಿರಲಿ."

ಆದರೆ ಮದೀನದ ಆ ಸತ್ಯವಿಶ್ವಾಸಿಗಳು ಪರಿಪೂರ್ಣ ವಿಶ್ವಾಸವನ್ನು ಹೊಂದಿದವರಾಗಿದ್ದರು. ಮೃತ್ಯು ಅವರ ದೃಷ್ಟಿಯಲ್ಲಿ ನಿಕೃಷ್ಟವಾಗಿತ್ತು. ಹಝ್ರತ್ ಅಬ್ಬಾಸ್‌ರ ಮಾತುಗಳನ್ನು ಕೇಳಿದ ನಂತರ ಅವರ ಒಬ್ಬ ಮುಂದಾಳು ಹೀಗೆ ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ನಾವು ಹೆದರಲಾರೆವು. ನೀವು ನಮಗೆ ಅನುಮತಿ ನೀಡುವುದಾದರೆ ಮಕ್ಕದವರ ವಿರುದ್ಧ ಹೋರಾಡಿ ನಿಮ್ಮ ಮೇಲೆ ಅವರು ಮಾಡಿದ ದೌರ್ಜನ್ಯಗಳಿಗೆ ಪ್ರತೀಕಾರ ಮಾಡಲು ನಾವು ತಯಾರಾಗಿದ್ದೇವೆ."

ಹಝ್ರತ್ ಪೈಗಂಬರ್(ಸ) ಹೇಳಿದರು: "ಈಗ ಅವರನ್ನು ಎದುರಿಸಿ



ಹೋರಾಡಲು ಅಲ್ಲಾಹನು ನನಗೆ ಅನುಮತಿ ನೀಡಿಲ್ಲ."

ಮದೀನದಿಂದ ಆಗಮಿಸಿದವರು ತಮ್ಮ ನಿಷ್ಠೆಯ ಪ್ರತಿಜ್ಞೆಯನ್ನು ಪುನರಾವರ್ತಿಸಿದ ನಂತರ ಅಲ್ಲಿಂದ ಮರಳಿ ಹೋದರು.

ಮಕ್ಕದ ಜನರಿಗೆ ಈ ಸಂಭವದ ಬಗ್ಗೆ ವದಂತಿಗಳು ತಲಪಿದವು. ಮದೀನದಿಂದ ಹಜ್ಜ್‌ಗೋಸ್ಕರ ಬಂದಿದ್ದ ಮುಂದಾಳುಗಳಿಗೆ ಅವರು ದೂರನ್ನು ನೀಡಿದರು. ಹಜ್ಜ್ ಯಾತ್ರಿಕರಿಗೆ ನಾಯಕನಾಗಿ ಅಬ್ದುಲ್ಲಾ ಬಿನ್ ಅಬೀ ಬಿನ್ ಸುಲೂಲ್ ಆಗಮಿಸಿದ್ದನು. ಅವನಿಗೆ ಈ ಸಂಭವದ ಕುರಿತು ತಿಳಿದಿರಲಿಲ್ಲ. ಆದುದರಿಂದ ಅವನು ಮಕ್ಕದವರೊಂದಿಗೆ, "ಏನೋ ಕೆಲವು ಸುಳ್ಳು ಸುದ್ದಿಗಳನ್ನು ನೀವು ಕೇಳಿರುವಿರಿ. ಹೀಗೆ ಯಾವುದೇ ಸಂಭವ ನಡೆದಿಲ್ಲ. ಮದೀನದ ಜನರು ನನ್ನೊಂದಿಗೆ ಸಮಾಲೋಚನೆ ನಡೆಸದೆ ಏನನ್ನೂ ಮಾಡಲಿಕ್ಕಿಲ್ಲ" ಎಂದು ಹೇಳಿ ಅವರನ್ನು ಸಮಾಧಾನಪಡಿಸಿದನು.

ಆದರೆ ಮದೀನದ ಜನರ ಹೃದಯದಲ್ಲಿ ಶೈತಾನನ ಸ್ಥಾನ ಪಲ್ಲಟಗೊಂಡು ಅಲ್ಲಾಹನ ರಾಜ್ಯಭಾರ ಸ್ಥಾಪಿತವಾಗಿದೆ ಎಂದು ಅವನಿಗೇನು ಗೊತ್ತು?

ಅನಂತರ ಮದೀನದ ಯಾತ್ರಿಕರು ಮರಳಿ ಹೋದರು.

## ಹಝ್ರತ್ ಪೈಗಂಬರರ(ಸ) ಮಕ್ಕದಿಂದ ಮದೀನಕ್ಕೆ ವಲಸೆ (ಹಿಜ್‌ರತ್)

ಹಝ್ರತ್ ಪೈಗಂಬರ್(ಸ) ಮತ್ತು ಅವರ ಶಿಷ್ಯರು ವಲಸೆ ಹೋಗಲು ಸಿದ್ಧತೆಗಳನ್ನು ಮಾಡಿದರು. ಒಂದರ ನಂತರ ಇನ್ನೊಂದು ಕುಟುಂಬ ಮಕ್ಕದಿಂದ ಅಪ್ರತ್ಯಕ್ಷವಾಗಲು ತೊಡಗಿತು. ಅಲ್ಲಾಹನ ಸಾಮ್ರಾಜ್ಯ ಸ್ಥಾಪಿತವಾಗಲು ನಿರೀಕ್ಷಿಸುತ್ತಾ ಇದ್ದವರು ಧೈರ್ಯಗೊಂಡರು. ಕೆಲವು ಸಾರಿ ಒಂದೇ ರಾತ್ರಿಯಲ್ಲಿ ಮಕ್ಕದ ಒಂದು ಗಲ್ಲಿ ಪೂರ್ಣವಾಗಿ ತೆರವಾಗಿ ಮನೆಗಳಿಗೆ ಬೀಗಗಳು ಜಡಿಯಲ್ಪಡುತ್ತಿದ್ದುವು. ಬೆಳಗ್ಗೆ ಓಣಿಯಲ್ಲಿ ಮೌನವು ವ್ಯಾಪಿಸಿರುವುದನ್ನು ಗಮನಿಸಿ ವಿಚಾರಿಸಿದಾಗ ಮಾತ್ರ ಮಕ್ಕದ ಜನರಿಗೆ ಆ ಕೇರಿಯ ಎಲ್ಲಾ ಜನರು ಮದೀನಕ್ಕೆ ವಲಸೆ ಹೋದುದಾಗಿ ತಿಳಿಯುತ್ತಿತ್ತು. ಮಕ್ಕದ ಜನರೊಳಗೆ ಇಸ್ಲಾಮ್ ಧರ್ಮವು ಬೀರುತ್ತಿದ್ದ ವ್ಯಾಪಕ ಪ್ರಭಾವವನ್ನು ನೋಡಿ ಅವಿಶ್ವಾಸಿಗಳು ಗಾಬರಿಗೊಳ್ಳುತ್ತಿದ್ದರು.

ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ), ಹಝ್ರತ್ ಅಲಿ(ರ) ಮತ್ತು ಕೆಲವು ಗುಲಾಮರ ಹೊರತು ಉಳಿದ ಎಲ್ಲಾ ಮುಸ್ಲಿಮರು ಮಕ್ಕದಿಂದ ಮದೀನಕ್ಕೆ ವಲಸೆ ಹೋದರು. ತಮ್ಮ ಬೇಟೆ ತಮ್ಮಿಂದ ತಪ್ಪಿಸಿಕೊಂಡು ಹೋಗುವುದನ್ನು ನೋಡಿದಾಗ ಮಕ್ಕದ ಮುಂದಾಳುಗಳು ಸಭೆ ಸೇರಿದರು ಮತ್ತು ಸಮಾಲೋಚನೆ ನಡೆಸಿ, ಈಗ ಮುಹಮ್ಮದ್ ಪೈಗಂಬರರನ್ನು(ಸ) ಕೊಲ್ಲುವುದೇ ಸೂಕ್ತ ಎಂದು ನಿರ್ಧರಿಸಿದರು. ಆದರೆ ಅವಿಶ್ವಾಸಿಗಳು ಹಝ್ರತ್ ಪೈಗಂಬರರನ್ನು ಕೊಲ್ಲಲು ನಿರ್ಧರಿಸಿದ ದಿನ ಮತ್ತು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ

ಹೋಗಲು ನಿರ್ಧರಿಸಿದ ದಿನ ಅಲ್ಲಾಹನ ವಿಶಿಷ್ಟ ವಿಧಿಯ ಪ್ರಕಾರ ಒಂದೇ ಆಗಿತ್ತು. ಮಕ್ಕದ ಜನರು ರಾತ್ರಿಯ ಅಂಧಕಾರದಲ್ಲಿ ಹಝ್‌ರತ್ ಪೈಗಂಬರರ(ಸ) ಮನೆಯ ಸುತ್ತುಮುತ್ತು ಜಮಾಯಿಸುತ್ತಾ ಇದ್ದಾಗ, ಹಝ್‌ರತ್ ಪೈಗಂಬರ್(ಸ) ರಾತ್ರಿಯ ಕತ್ತಲೆಯಲ್ಲಿ ವಲಸೆ ಹೋಗುವ ಉದ್ದೇಶದಿಂದ ಮನೆಯಿಂದ ಹೊರಗೆ ಹೊರಟು ಹೋಗುತ್ತಿದ್ದರು. ಮಕ್ಕದ ಜನರು ಹಝ್‌ರತ್ ಪೈಗಂಬರರ(ಸ) ಕುರಿತು ನಿಶ್ಚಯವಾಗಿಯೂ ಶಂಕಿಸುತ್ತಾ ಇದ್ದಿರಬಹುದು – ಅವರ ನಿರ್ಧಾರದ ಕುರಿತು ಹಝ್‌ರತ್ ಪೈಗಂಬರ್‌ರವರಿಗೂ ತಿಳಿದಿರಲೂಬಹುದು ಎಂದು. ಆದರೆ ಹಝ್‌ರತ್ ಪೈಗಂಬರ್ ಮಕ್ಕದ ಜನರು ನೋಡುತ್ತಿರುವಾಗ ಅವರ ಮುಂದೆಯೇ ದಾಟಿ ಹೋದಾಗ, ಇದು ಬೇರೆ ಯಾರೋ ಆಗಿರಬಹುದು ಎಂದು ಭಾವಿಸಿ ಅವರನ್ನು ಆಕ್ರಮಿಸದೆ ಅವರಿಗೆ ಕಾಣಿಸಿಕೊಳ್ಳದ ಹಾಗೆ ಅವಿತುಕೊಳ್ಳಲು ಅವಿಶ್ವಾಸಿಗಳು ಪ್ರಯತ್ನಿಸಿದರು. ತಮ್ಮ ನಿರ್ಧಾರದ ಸಮಾಚಾರ ಹಝ್‌ರತ್ ಪೈಗಂಬರರಿಗೆ(ಸ) ತಿಳಿಯದಿರಲಿ ಎಂದು ಅವಿಶ್ವಾಸಿಗಳು ಜಾಗರೂಕರಾಗಿದ್ದರು. ತಮ್ಮೊಂದಿಗೆ ವಲಸೆ ಹೋಗಲು ಸಿದ್ಧರಾಗಿರಲು ಹಝ್‌ರತ್ ಅಬೂಬಕರ್‌ರಿಗೆ ಹಝ್‌ರತ್ ಪೈಗಂಬರರು ಆ ರಾತ್ರಿಗೆ ಮೊದಲಿನ ಹಗಲಲ್ಲಿ ತಿಳಿಸಿದ್ದರು. ಹಝ್‌ರತ್ ಅಬೂಬಕರ್(ರ) ಹಝ್‌ರತ್ ಪೈಗಂಬರರ(ಸ) ಬಳಿಗೆ ಬಂದು ಸೇರಿದಾಗ ಇಬ್ಬರೂ ಸ್ವಲ್ಪ ಹೊತ್ತಿನೊಳಗೆ ಮಕ್ಕದಿಂದ ಹೊರಟರು. ಅವರು ಮಕ್ಕದಿಂದ ಅಂದಾಜು 3–4 ಮೈಲು ದೂರವಿರುವ ಸೌರ್ ಎಂಬ ಪರ್ವತ ಶಿಖರದ ಗುಹೆಯಲ್ಲಿ ಆಶ್ರಯ ಪಡೆದರು.[25]

ಮಕ್ಕದ ಜನರಿಗೆ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಮಕ್ಕದಿಂದ ಹೊರಟುಹೋದರೆಂದು ತಿಳಿದಾಗ ಅವರು ಒಂದು ಸೇನಾದಳವನ್ನು ಜಮಾಯಿಸಿ ಅವರನ್ನು ಬೆನ್ನಟ್ಟಲು ಹೊರಟರು. ಒಬ್ಬ ಪತ್ತೇದಾರನನ್ನು ಅವರು ತಮ್ಮೊಂದಿಗೆ ಕರೆದುಕೊಂಡು ಹೋದರು. ಅವನು ಹಝ್‌ರತ್ ಪೈಗಂಬರ್(ಸ) ನಡೆದುಹೋದ ದಾರಿಯನ್ನು ಪತ್ತೆಹಚ್ಚುತ್ತಾ ಸೌರ್ ಪರ್ವತವನ್ನು ತಲಪಿದನು. ಹಝ್‌ರತ್ ಪೈಗಂಬರ್(ಸ) ಹಝ್‌ರತ್ ಅಬೂಬಕರ್(ರ) ಜೊತೆಯಲ್ಲಿ ಅಡಗಿಕೊಂಡಿದ್ದ ಗುಹೆಯ ಬಳಿಗೆ ಆ ಪತ್ತೇದಾರನು ಆಗಮಿಸಿ, "ಮುಹಮ್ಮದ್ ಈ ಗುಹೆಯಲ್ಲಿದ್ದಾರೆ. ಅವರು ಇಲ್ಲಿರದಿದ್ದಲ್ಲಿ ಆಕಾಶವನ್ನೇರಿರಬಹುದು" ಎಂದು ದೃಢವಾಗಿ ಹೇಳಿದನು.

ಅವನ ಮಾತನ್ನು ಆಲಿಸಿದ ಹಝ್‌ರತ್ ಅಬೂಬಕರ್‌ರ ಹೃದಯ ಧೈರ್ಯಗುಂದಿತು. ಆಗ ಅವರು ಮೆಲ್ಲನೆ ಹಝ್‌ರತ್ ಪೈಗಂಬರರೊಂದಿಗೆ(ಸ) ಹೇಳಿದರು: "ಶತ್ರು ನಮ್ಮ ಸಮೀಪಕ್ಕೆ ಬಂದಿರುವನು. ಅವನು ಯಾವುದೇ ಕ್ಷಣದಲ್ಲಿ ಗುಹೆಯನ್ನು ಪ್ರವೇಶಿಸುವನು."

ಹಝ್‌ರತ್ ಪೈಗಂಬರ್(ಸ) ಹೇಳಿದರು: "ನೀವು ವ್ಯಾಕುಲಚಿತ್ತ ರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹನು ನಮ್ಮ ಜೊತೆಗಿದ್ದಾನೆ."[26]

---

25, ಬುಖಾರಿ. 26. ಬುಖಾರಿ.



ಹಝ್‌ರತ್ ಅಬೂಬಕರ್(ರ) ಹೇಳಿದರು: "ಓ ಅಲ್ಲಾಹನ ಪೈಗಂಬರ್, ನಾನು ನನ್ನ ಜೀವದ ಬಗ್ಗೆ ಹೆದರಿಕೆ ಹೊಂದಿಲ್ಲ. ಏಕೆಂದರೆ ನಾನೊಬ್ಬ ಸಾಮಾನ್ಯ ಮನುಷ್ಯನಾಗಿದ್ದೇನೆ. ನಾನು ಕೊಲ್ಲಲ್ಪಟ್ಟರೆ ಒಬ್ಬ ಸಾಮಾನ್ಯ ವ್ಯಕ್ತಿ ಕೊಲ್ಲಲ್ಪಟ್ಟಂತೆ ಮಾತ್ರ ಆಗುವುದು. ಆದರೆ ನನಗೆ ನಿಮ್ಮ ಜೀವದ ಬಗ್ಗೆ ಮಾತ್ರ ಹೆದರಿಕೆ ಇದೆ. ನಿಮ್ಮ ಜೀವಕ್ಕೆ ಯಾವುದಾದರೂ ಅಪಾಯ ಉಂಟಾದರೆ ಲೋಕದಿಂದ ಆಧ್ಯಾತ್ಮಿಕತೆ ಮತ್ತು ಧರ್ಮ ನಾಮಾವಶೇಷವಾಗುವುದು."

ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಆ ರೀತಿ ಹೆದರಬೇಕಿಲ್ಲ. ಇಲ್ಲಿರುವುದು ನಾವಿಬ್ಬರು ಮಾತ್ರವಲ್ಲ. ನಮ್ಮೊಂದಿಗೆ ಮೂರನೆಯವನಾಗಿ ಅಲ್ಲಾಹನಿದ್ದಾನೆ."

ಇಸ್ಲಾಮ್ ಧರ್ಮಕ್ಕೆ ಅಭಿವೃದ್ಧಿನೀಡಲು ಅಲ್ಲಾಹನು ನಿರ್ಧರಿಸಿದ ಸಮಯ ಸನ್ನಿಹಿತವಾದುದರಿಂದ ಮತ್ತು ಮಕ್ಕದ ಅವಿಶ್ವಾಸಿಗಳಿಗೆ ಸತ್ಯವಿಶ್ವಾಸ ಸ್ವೀಕರಿಸಲು ನೀಡಲಾದ ಕಾಲಾವಕಾಶವು ಕೊನೆಗೊಂಡುದರಿಂದ ಅಲ್ಲಾಹನು ಮಕ್ಕದವರ ಕಣ್ಣುಗಳಿಗೆ ಪರದೆ ಹಾಕಿದನು. ಅವರು ಪತ್ತೇದಾರನನ್ನು ಪರಿಹಾಸ ಮಾಡುತ್ತಾ ಹೀಗೆಂದರು:

"ಏನು, ಮುಹಮ್ಮದ್ ಇಂತಹ ತೆರೆದಿರುವ ಪ್ರದೇಶದಲ್ಲಿ ಆಶ್ರಯಪಡೆಯಬೇಕಿತ್ತೇ. ಇದು ಅಡಗಿಕೊಳ್ಳಲು ಯೋಗ್ಯವಾದ ಸ್ಥಳವಲ್ಲ. ಇಲ್ಲಿ ಹಾವು, ಚೇಳುಗಳು ತುಂಬಿವೆ. ಇಲ್ಲಿ ಬುದ್ಧಿಯುಳ್ಳ ಯಾರಾದರೂ ಆಶ್ರಯ ಪಡೆಯುವರೇ?"

ಅವರು ಗುಹೆಯೊಳಗೆ ಬಗ್ಗಿ ನೋಡದೆ ಪತ್ತೇದಾರನನ್ನು ಪರಿಹಾಸ ಮಾಡುತ್ತಾ ಅಲ್ಲಿಂದ ಹೊರಟು ಹೋದರು. ಎರಡು ದಿನಗಳ ಕಾಲ ಹಝ್‌ರತ್ ಪೈಗಂಬರ್(ಸ) ಹಝ್‌ರತ್ ಅಬೂಬಕರ್‌ರೊಂದಿಗೆ ಆ ಗುಹೆಯಲ್ಲಿ ಅಡಗಿ ಕುಳಿತುಕೊಂಡರು. ಅನಂತರ ಮೊದಲೇ ನಿರ್ಧರಿಸಿದ ಹಾಗೆ ಗುಹೆಯ ಬಳಿಗೆ ಅವರ ಸವಾರಿಗಾಗಿ ಎರಡು ಒಂಟೆಗಳು ತಲಪಿಸಲ್ಪಟ್ಟವು. ವೇಗದಿಂದ ಸಾಗುವ ಎರಡು ಹೆಣ್ಣು ಒಂಟೆಗಳನ್ನೇರಿ ಹಝ್‌ರತ್ ಪೈಗಂಬರ್(ಸ) ಮತ್ತು ಹಝ್‌ರತ್ ಅಬೂಬಕರ್(ರ) ಹೊರಟರು. ಹಝ್‌ರತ್ ಪೈಗಂಬರ್(ಸ) ಮತ್ತು ರಸ್ತೆ ತೋರಿಸುವ ಇನ್ನೊಬ್ಬನು ಒಂದು ಒಂಟೆಯನ್ನೇರಿದ್ದರು. ಇನ್ನೊಂದು ಒಂಟೆಯ ಮೇಲೆ ಹಝ್‌ರತ್ ಅಬೂಬಕರ್(ರ) ಮತ್ತು ಅವರ ಸೇವಕ ಆಮಿರ್ ಬಿನ್ ಫಹೀರ ಸವಾರಿ ಮಾಡುತ್ತಾ ಹೊರಟರು.

ಮದೀನಕ್ಕೆ ಹೊರಡುವ ಮೊದಲು ಹಝ್‌ರತ್ ಪೈಗಂಬರ್(ಸ) ಮಕ್ಕ ನಗರದ ಕಡೆಗೆ ತನ್ನ ಮುಖವನ್ನು ತಿರುಗಿಸಿ ನೋಡಿದರು. ಅವರು ಆ ನಗರದಲ್ಲಿ ಜನಿಸಿದ್ದರು. ಆ ನಗರದಲ್ಲಿ ಅವರ ವಂಶದವರು ಹಝ್‌ರತ್ ಇಸ್ಮಾಈಲ್(ಅ) ರವರ ಕಾಲದಿಂದ ವಾಸಿಸುತ್ತಾ ಇದ್ದರು. ಅವರು ಕೊನೆಗೆ ಮಕ್ಕ ನಗರವನ್ನು ಅಭಿಮುಖೀಕರಿಸಿ ದುಃಖಾತಿರೇಕದಿಂದ ಹೇಳಿದರು: "ಓ ಮಕ್ಕ (ನಗರ), ನೀನು ನನಗೆ ಎಲ್ಲಾ ಸ್ಥಳಗಳಿಗಿಂತ ಹೆಚ್ಚು ಪ್ರಿಯಕರವಾಗಿರುವೆ. ಆದರೆ ನಿನ್ನ ಜನರು

ನನ್ನನ್ನು ಇಲ್ಲಿ ವಾಸಿಸಲು ಬಿಡುವುದಿಲ್ಲ."

ಆಗ ಹಝ್ರತ್ ಅಬೂಬಕರ್(ರ) ಹೇಳಿದರು: "ಈ ಜನರು ತಮ್ಮ ಪ್ರವಾದಿಯನ್ನು ಹೊರಗಟ್ಟಿರುವವರು. ಈ ಜನರು ನಿಶ್ಚಯವಾಗಿಯೂ ನಾಶಹೊಂದುವರು."[27]

## ಸುರಾಖ ಬೆನ್ನಟ್ಟುವಿಕೆ

ಮಕ್ಕದ ಜನರು ಹಝ್ರತ್ ಪೈಗಂಬರರನ್ನು(ಸ) ಕಂಡು ಹಿಡಿಯಲು ವಿಫಲರಾದಾಗ ಅವರು ಹೀಗೆ ಪ್ರಕಟಿಸಿದರು:

"ಯಾರು ಮುಹಮ್ಮದ್‌ನನ್ನು ಅಥವಾ ಅಬೂಬಕರ್‌ನನ್ನು ಜೀವಸಹಿತ ಅಥವಾ ಜೀವರಹಿತವಾಗಿ ನಮ್ಮ ವಶಕ್ಕೆ ತಂದೊಪ್ಪಿಸುವವರೋ ಅವರಿಗೆ ಒಂದು ನೂರು ಹೆಣ್ಣು ಒಂಟೆಗಳನ್ನು ಬಹುಮಾನವಾಗಿ ಕೊಡುವೆವು."

ಈ ಪ್ರಕಟಣೆಯನ್ನು ಮಕ್ಕ ನಗರದ ಸುತ್ತು ಮುತ್ತಲಿನ ಗೋತ್ರವರ್ಗದವರಿಗೆ ಸಹ ತಲಪಿಸಲಾಗಿತ್ತು. ಈ ಪ್ರಕಟಣೆಯನ್ನು ಆಲಿಸಿದ ಸುರಾಖ ಬಿನ್ ಮಾಲಿಕ್ ಎಂಬ ಒಬ್ಬ ಗ್ರಾಮೀಣ ಪ್ರದೇಶದ ಮುಂದಾಳು ಬಹುಮಾನ ಗಳಿಸುವ ಆಶೆಯಿಂದ ಹಝ್ರತ್ ಪೈಗಂಬರರನ್ನು(ಸ) ಹುಡುಕಲು ತೊಡಗಿದನು. ಆತನು ಹುಡುಕುತ್ತಾ ಮದೀನಕ್ಕೆ ಹೋಗುವ ಮಾರ್ಗದಲ್ಲಿ ಮುಂದೆ ಸಾಗಿದಾಗ ಎರಡು ಒಂಟೆಗಳನ್ನೂ ಅವುಗಳ ಸವಾರರನ್ನೂ ಕಂಡು ಅದು ಪೈಗಂಬರ್ ಮತ್ತು ಸಹಚರರು ಆಗಿರಬಹುದೆಂದು ಮನವರಿಕೆ ಮಾಡಿ ತನ್ನ ಕುದುರೆಯನ್ನು ಆ ಒಂಟೆಗಳನ್ನು ತಲಪಲು ಓಡಿಸಿದಾಗ ಕುದುರೆ ಮಾರ್ಗದಲ್ಲಿ ಮುಗ್ಗರಿಸಿತು. ಸುರಾಖ ಕುದುರೆಯಿಂದ ಬಿದ್ದುಬಿಟ್ಟ. ಸುರಾಖ ಮುಸ್ಲಿಮ್ ಆದ ನಂತರ ಈ ಸಂಭವವನ್ನು ಹೀಗೆ ವಿವರಿಸಿದರು:

*ನಾನು ಕುದುರೆಯಿಂದ ಬಿದ್ದಾಗ ಅರಬ್ ಸಂಪ್ರದಾಯದಂತೆ ನನ್ನ ಬಾಣಗಳ ಮೂಲಕ ಅದೃಷ್ಟ ಪರೀಕ್ಷೆ ನಡೆಸಿದೆನು. ನನ್ನ ಅದೃಷ್ಟವು ಕೆಟ್ಟದಾಗಿದೆ ಎಂದು ಆಗ ನನಗೆ ತಿಳಿಯಿತು. ಆದರೆ ಬಹುಮಾನದ ಆಸೆಯಿಂದ ಪುನಃ ಕುದುರೆಯನ್ನೇರಿ ಅದನ್ನು ಮುಂದಕ್ಕೆ ಓಡಿಸಿದೆನು. ಹಝ್ರತ್ ಪೈಗಂಬರ್(ಸ) ಒಂಟೆಯ ಮೇಲೆ ಬಹಳ ಗಂಭೀರವಾಗಿ ಕುಳಿತು ಪ್ರಯಾಣಿಸುತ್ತಾ ಇದ್ದರು. ಅವರು ಹಿಂದಿರುಗಿ ನನ್ನನ್ನು ನೋಡಲಿಲ್ಲ. ಆದರೆ ಹಝ್ರತ್ ಅಬೂಬಕರ್(ರ) (ಹಝ್ರತ್ ಪೈಗಂಬರರಿಗೆ(ಸ) ಏನಾದರೂ ಆಪತ್ತು ಉಂಟಾಗುವುದೋ ಎಂಬ ಭಯದಿಂದ) ನನ್ನ ಕಡೆಗೆ ಮುಖತಿರುಗಿಸಿ ಪದೇ ಪದೇ ನೋಡುತ್ತಿದ್ದರು. ನಾನು ಎರಡನೇ ಸಲ ಅವರ ಸಮೀಪಕ್ಕೆ ತಲಪಿದಾಗ ನನ್ನ ಕುದುರೆ ಪುನಃ ಮುಗ್ಗರಿಸಿತು. ನಾನು ಕುದುರೆಯಿಂದ ಬಿದ್ದು ಬಿಟ್ಟೆನು.*

*ಆಗ ನಾನು ಪುನಃ ಬಾಣಗಳಿಂದ ಅದೃಷ್ಟ ಪರೀಕ್ಷೆ ನಡೆಸಿದೆನು. ನನ್ನ*

27. ಝುಖ್ರ್ಖಾನಿ ಸಂಪುಟ–1 ಪುಟ 328. (ಮುಸ್ನದ್ ಅಹ್ಮದ್ ಮತ್ತು ತಿರ್ಮಝಿಯಿಂದ ಉಲ್ಲೇಖಿತ)



*ಅದೃಷ್ಟ ಕೆಟ್ಟದಾಗಿದೆ ಎಂದು ನನಗೆ ತಿಳಿಯಿತು. ನನ್ನ ಕುದುರೆಯ ಕಾಲುಗಳು ಮರಳಿನಲ್ಲಿ ಎಷ್ಟು ಹೂತು ಹೋಗಿತ್ತೆಂದರೆ ಅವುಗಳನ್ನು ಹೊರಕ್ಕೆಳೆಯಲು ಕಷ್ಟವಾಗಿತ್ತು. ಆಗ, ಈ ಜನರು ಅಲ್ಲಾಹನ ಸಂರಕ್ಷಣೆಯಲ್ಲಿ ಇದ್ದಾರೆ ಎಂದು ನನಗೆ ತಿಳಿಯಿತು. ನಾನು ಅವರನ್ನು ಕರೆದು, "ನಿಲ್ಲಿರಿ. ನನ್ನ ಮಾತನ್ನು ಆಲಿಸಿರಿ" ಎಂದು ಹೇಳಿದೆ. ಅವರು ನನ್ನ ಸಮೀಪದಲ್ಲಿದ್ದಾಗ ನಾನು ಹೇಳಿದೆ: "ನಾನು ಇಂತಹ ಉದ್ದೇಶದಿಂದ ಬಂದಿದ್ದೆನು. ಆದರೆ ಈಗ ನಾನು ನನ್ನ ಉದ್ದೇಶವನ್ನು ಬದಲಾಯಿಸಿರುವೆನು. ನಾನು ಮರಳಿ ಹೋಗುತ್ತಿದ್ದೇನೆ. ಏಕೆಂದರೆ ಅಲ್ಲಾಹನು ನಿಮ್ಮ ಜೊತೆಗಿದ್ದಾನೆ ಎಂದು ನನಗೆ ದೃಢವಾಗಿ ತಿಳಿಯಿತು."*

*ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಒಳ್ಳೆಯದು. ಮರಳಿ ಹೋಗು. ಆದರೆ ನಮ್ಮ ಬಗ್ಗೆ ಯಾರಿಗೂ ಸಮಾಚಾರ ನೀಡಬೇಡ."*

*ಆಗ ನನಗೆ ಒಂದು ಯೋಚನೆ ಹೀಗೆ ಹೊಳೆಯಿತು: ಈ ವ್ಯಕ್ತಿ ಸತ್ಯವಂತನೆಂದು ನನಗೆ ಭಾಸವಾಗುತ್ತಿದೆ. ಆದುದರಿಂದ ಈ ವ್ಯಕ್ತಿ ನಿಶ್ಚಯವಾಗಿಯೂ ಒಂದು ದಿನ ಜಯಶಾಲಿಯಾಗುವರು.*

*ಹೀಗೆ ಯೋಚಿಸಿದ ಕೂಡಲೇ ನಾನು ಹೇಳಿದೆ: "ನೀವು ಜಯಗಳಿಸಿದರೆ ನನಗೆ ಅಭಯ ಪ್ರದಾನಮಾಡುವುದಾಗಿ ಒಪ್ಪಿಗೆ ಪತ್ರ ಬರೆದು ಕೊಡಿರಿ."*

*ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರ ಸೇವಕನಾದ ಆಮಿರ್ ಬಿನ್ ಫಹೀರ್ ಮೂಲಕ ನನಗೆ ಅಭಯ ಪ್ರದಾನ ಮಾಡುವ ಪತ್ರ ಬರೆಯಿಸಿ ಕೊಟ್ಟರು.[28] ನಾನು ಅಲ್ಲಿಂದ ಹಿಂದಿರುಗಲು ಸನ್ನದ್ಧನಾದಾಗ ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ಮುಂದಿನ ಸ್ಥಿತಿಯ ಬಗ್ಗೆ ಅದೃಶ್ಯ ಜ್ಞಾನ ನೀಡಿದನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಸುರಾಖ, ನಿನ್ನ ಕೈಗಳು ಕಿಸ್ರಾದ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?"*

*ನಾನು ಗಾಬರಿಗೊಂಡು ಕೇಳಿದೆನು: "ನೀವು ಉದ್ದೇಶಿಸಿದುದು ಕಿಸ್ರಾ ಬಿನ್ ಹುರ್‌ಮಿಝ್ ಎಂಬ ಇರಾನಿನ ಚಕ್ರವರ್ತಿಯನ್ನೋ?" ಆಗ ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು.[29]*

ಹಝ್ರತ್ ಪೈಗಂಬರ್(ಸ) ನುಡಿದ ಈ ಭವಿಷ್ಯ ವಾಣಿ 16–17 ವರ್ಷಗಳು ದಾಟಿಹೋದ ನಂತರ ಅಕ್ಷರಶಃ ಈಡೇರಿತು. ಸುರಾಖ ಮುಸ್ಲಿಮ್ ಆಗಿ ಮದೀನಕ್ಕೆ ಬಂದಿದ್ದರು. ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಹಝ್ರತ್ ಅಬೂಬಕರ್(ರ) ಖಲೀಫರಾದರು. ಅವರು ನಿಧನ ಹೊಂದಿದಾಗ ಹಝ್ರತ್ ಉಮರ್(ರ) ಖಲೀಫರಾದರು. ಇಸ್ಲಾಮಿನ ಅಭಿವೃದ್ಧಿ ಹೊಂದುತ್ತಿರುವ ವೈಭವವನ್ನು ನೋಡಿ ಇರಾನಿಯರು ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಪ್ರಾರಂಭಿಸಿದರು.

28, ಬುಖಾರಿ: ಬಾಬ್ ಹಿಜ್‌ರತ್. 29. ಬುಖಾರಿ: ಬಾಬ್ ಹಿಜ್‌ರತ್

ಅವರು ಇಸ್ಲಾಮನ್ನು ಧ್ವಂಸಗೊಳಿಸಲು ಶಕ್ತರಾಗಲಿಲ್ಲ. ಅವರು ಇಸ್ಲಾಮನ್ನು ವಿರೋಧಿಸಿದುದರಿಂದ ತಾವೇ ಧ್ವಂಸಗೊಳಿಸಲ್ಪಟ್ಟರು. ಕಿಸ್ರಾ ರಾಜನ ರಾಜಧಾನಿ ಮುಸ್ಲಿಮರ ಕುದುರೆಗಳ ಗೊರಸುಗಳಿಂದ ತುಳಿಯಲ್ಪಟ್ಟಿತು. ಇರಾನಿನ ಖಜಾನೆಗಳು ಮುಸ್ಲಿಮರ ಸ್ವಾಧೀನಕ್ಕೆ ಬಂದುವು. ಮುಸ್ಲಿಮರ ಸೈನ್ಯದ ಅಧೀನಕ್ಕೆ ಬಂದ ಇರಾನ್ ಸರಕಾರದ ಸಂಪತ್ತಿನಲ್ಲಿ ಕಿಸ್ರಾ ರಾಜನು ಸಿಂಹಾಸನಾ ರೂಢನಾಗುವಾಗ ಇರಾನ್ ಸಂಪ್ರದಾಯದಂತೆ ಧರಿಸುತ್ತಿದ್ದ ಬಂಗಾರದ ಕಂಕಣಗಳು ಸಹ ಇದ್ದುವು.

ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋಗುತ್ತಿದ್ದಾಗ ನಡೆದ ಸಂಭವವನ್ನು ಸುರಾಖ ಮುಸ್ಲಿಮ್ ಆದ ನಂತರ ಬಹಳ ಅಭಿಮಾನದಿಂದ ವಿವರಿಸುತ್ತಾ ಇದ್ದರು. ಹಝ್ರತ್ ಪೈಗಂಬರ್(ಸ) ಸುರಾಖರಿಗೆ, "ಸುರಾಖ, ನಿನ್ನ ಕೈಗಳು ಇರಾನಿನ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?" ಎಂದು ಹೇಳಿದ್ದ ಮಾತು ಮುಸ್ಲಿಮರಿಗೆ ತಿಳಿದಿತ್ತು.

ಹಝ್ರತ್ ಉಮರ್‌ರ(ರ) ಮುಂದೆ ಯುದ್ಧದಲ್ಲಿ ಗಳಿಸಿದ ಇರಾನಿನ ಸಂಪತ್ತನ್ನು ತಂದಿರಿಸಿದಾಗ ಅದರಲ್ಲಿ ಕಿಸ್ರಾ ಚಕ್ರವರ್ತಿಯ ಬಂಗಾರದ ಕಂಕಣಗಳು ಸಹ ಇದ್ದುವು. ಆಗ ಹಿಂದಿನ ಕಾಲದ ಎಲ್ಲಾ ಸಂಭವಗಳು ಅವರ ಕಣ್ಣುಗಳ ಮುಂದೆ ಹಾದು ಹೋದುವು. ಹಝ್ರತ್ ಪೈಗಂಬರ್(ಸ) ಶಕ್ತಿಸಾಮರ್ಥ್ಯಗಳು ತೀರಾ ಇಲ್ಲದೆ ಇದ್ದಾಗ ಸ್ವದೇಶವನ್ನು ಬಿಟ್ಟು ಮದೀನಕ್ಕೆ ಹೊರಡಬೇಕಾಯಿತು. ಅವರನ್ನು ಜೀವಂತವಾಗಿ ಅಥವಾ ಮೃತರಾಗಿರುವ ಸ್ಥಿತಿಯಲ್ಲಿ ಹಿಡಿಗೂಡಿ ಮಕ್ಕದ ಜನರಿಗೊಪ್ಪಿಸಿದರೆ ಸಿಗಬಹುದಾದ ನೂರು ಒಂಟೆಗಳ ಬಹುಮಾನದ ಆಸೆಯಿಂದ ಸುರಾಖ ಮತ್ತು ಇತರರು ಕುದುರೆಗಳನ್ನೇರಿಕೊಂಡು ಹಝ್ರತ್ ಪೈಗಂಬರ್‌ರನ್ನು(ಸ) ಬೆನ್ನಟ್ಟಿದ್ದರು. ಅಂತಹ ದುರ್ದೆಸೆಯಲ್ಲಿರುವಾಗ ಹಝ್ರತ್ ಪೈಗಂಬರ್(ಸ) "ಸುರಾಖ, ನಿನ್ನ ಕೈಗಳು ಇರಾನಿನ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?" ಎಂದು ಹೇಳಿದ್ದರು. ಅದೆಂತಹ ಮಹತ್ತಾದ ಭವಿಷ್ಯವಾಣಿ ಆಗಿತ್ತು! ಎಂತಹ ಪರಿಶುದ್ಧ ಅಗೋಚರ ವಾರ್ತೆ? ಹಝ್ರತ್ ಉಮರ್(ರ) ಕಿಸ್ರಾ ಚಕ್ರವರ್ತಿಯ ಕಂಕಣಗಳನ್ನು ನೋಡಿದಾಗ ಅಲ್ಲಾಹನ ಶಕ್ತಿ ಸಾಮರ್ಥ್ಯಗಳು ಅವರ ಕಣ್ಣ ಮುಂದೆ ಸ್ಪಷ್ಟವಾದುವು. ಅವರು, ಸುರಾಖರನ್ನು ಕರೆಯಲು ಹೇಳಿದರು. ಸುರಾಖರನ್ನು ಕರೆಯಿಸಲಾಯಿತು. ಸುರಾಖ ಬಂದಾಗ ಹಝ್ರತ್ ಉಮರ್(ರ), "ಕಿಸ್ರಾನ ಕಂಕಣಗಳನ್ನು ನಿಮ್ಮ ಕೈಗಳಲ್ಲಿ ಧರಿಸಿರಿ" ಎಂದು ಆಜ್ಞಾಪಿಸಿದರು. ಆಗ ಸುರಾಖ ಹೇಳಿದರು: "ಓ ಖಲೀಫರೇ, ಬಂಗಾರ ಧರಿಸುವುದು ಮುಸ್ಲಿಮ್ ಪುರುಷರಿಗೆ ನಿಷಿದ್ಧವಾಗಿದೆ." ಹಝ್ರತ್ ಉಮರ್ ಹೇಳಿದರು: "ನೀವು ಹೇಳಿದುದು ಸರಿ. ಆದರೆ ಇಂತಹ ಸಂದರ್ಭಗಳಲ್ಲಿ ಅದು ನಿಷಿದ್ಧವಲ್ಲ. ನೀವು ಕೈಯಲ್ಲಿ ಕಿಸ್ರಾ ಚಕ್ರವರ್ತಿಯ ಬಂಗಾರದ ಕಂಕಣ ಧರಿಸಿದುದನ್ನು ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ತೋರಿಸಿದ್ದನು. ನೀವು ಈ ಕಂಕಣಗಳನ್ನು ಧರಿಸಬೇಕು. ಹಾಗೆ ಮಾಡದಿದ್ದರೆ ನಾನು ನಿಮಗೆ ಶಿಕ್ಷೆ ನೀಡುವೆನು."



ಸುರಾಖ ಆಕ್ಷೇಪಿಸಿದುದು ಧಾರ್ಮಿಕ ನಿಯಮಗಳಿಗೆ ಅನುಸಾರ ವಾಗಿತ್ತು. ಆದರೆ ಅವರು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಯು ಈಡೇರುವುದನ್ನು ನೋಡುವ ಆಶೆಯನ್ನು ಸಹ ಹೊಂದಿದ್ದರು. ಸುರಾಖ ಆ ಕಂಕಣಗಳನ್ನು ತಮ್ಮ ಕೈಗಳಲ್ಲಿ ಧರಿಸಿದರು. ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿ ಈಡೇರಿದುದನ್ನು ಮುಸ್ಲಿಮರು ಕಣ್ಣಾರೆ ಕಂಡರು.

ಮಕ್ಕದಿಂದ ವಲಸೆ ಹೊರಟ ಹಝ್ರತ್ ಪೈಗಂಬರ್(ಸ) ಈಗ ಲೋಕದ ಚಕ್ರವರ್ತಿಯಾಗಿದ್ದರು. ಅವರು ಸ್ವತಃ ಇಹಲೋಕದಲ್ಲಿ ಇಲ್ಲದಿದ್ದರೂ ಅವರ ದಾಸರು ಅವರ ಭವಿಷ್ಯವಾಣಿಗಳು ಈಡೇರುತ್ತಾ ಇರುವುದನ್ನು ನೋಡುತ್ತಿದ್ದರು.

## ಮದೀನಕ್ಕೆ ಹಝ್ರತ್ ಪೈಗಂಬರರ(ಸ) ಆಗಮನ

ಸುರಾಖರಿಗೆ ಸಂಬಂಧಿಸಿದ ಸಂಭವವು ಕಳೆದ ನಂತರ ಕೆಲವು ತಂಗುದಾಣಗಳನ್ನು ದಾಟಿಕೊಂಡು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ತಲಪಿದರು. ಮದೀನದ ಜನರು ಅವರನ್ನು ಕಾತರದಿಂದ ಪ್ರತೀಕ್ಷಿಸುತ್ತಾ ಇದ್ದರು. ಮಕ್ಕದ ಜನರಿಗಾಗಿ ಉದಿಸಿದ ಸೂರ್ಯ ಈಗ ಮದೀನದ ಜನರ ಮೇಲೆ ಪ್ರಕಾಶಬೀರುವುದಕ್ಕಿಂತ ಹೆಚ್ಚಿನ ಒಳ್ಳೆಯ ಅದೃಷ್ಟವು ಅವರಿಗೆ ಬೇರೆ ಏನಾಗಲು ಸಾಧ್ಯವಿದ್ದಿತು? ಹಝ್ರತ್ ಪೈಗಂಬರ್(ಸ) ಮಕ್ಕದಿಂದ ಅಪ್ರತ್ಯಕ್ಷರಾಗಿರುವರು ಎಂಬ ವಾರ್ತೆಯು ಮದೀನದ ಜನರಿಗೆ ತಲಪಿದ ದಿನದಿಂದಲೇ ಅವರು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಆಗಮಿಸಬಹುದೆಂಬ ಪ್ರತೀಕ್ಷೆ ಹೊಂದಿದ್ದರು. ಮದೀನದ ಜನರ ಕೆಲವು ಪ್ರತಿನಿಧಿಗಳು ಪ್ರತಿದಿನ ಹೊರಟು ಅನೇಕ ಮೈಲುಗಳ ತನಕ ಹಝ್ರತ್ ಪೈಗಂಬರರನ್ನು(ಸ) ಬರಮಾಡಿಕೊಳ್ಳಲು ಮುಂದೆ ಸಾಗುತ್ತಿದ್ದರು. ಅನಂತರ ಸಂಜೆ ನಿರಾಶರಾಗಿ ಮರಳಿ ಬರುತ್ತಿದ್ದರು.

ಹಝ್ರತ್ ಪೈಗಂಬರ್(ಸ) ಮದೀನದ ಸಮೀಪ ತಲಪಿದಾಗ ಅದರ ಸಮೀಪವಾಗಿರುವ ಖುಬಾ ಎಂಬ ಗ್ರಾಮದಲ್ಲಿ ತಂಗಲು ನಿರ್ಧರಿಸಿದರು.

ಒಬ್ಬ ಯಹೂದಿಯು ಹಝ್ರತ್ ಪೈಗಂಬರರ(ಸ) ಒಂಟೆಗಳು ಬರುವುದನ್ನು ನೋಡಿ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ತಲಪಿದರೆಂದು ತಿಳಿದುಕೊಂಡು ಒಂದು ಬೆಟ್ಟದ ಮೇಲೆ ಹತ್ತಿ ಉಚ್ಚ ಸ್ವರದಲ್ಲಿ ಹೀಗೆ ಕೂಗಿ ಹೇಳಿದನು: "ಓ ಖೀಲದ ಪುತ್ರರೇ, (ಖೀಲ ಮದೀನದ ಒಂದು ಕಣಿವೆ ಪ್ರದೇಶವಾಗಿದೆ) ನೀವು ಯಾರನ್ನು ಕಾಯುತ್ತಾ ಇದ್ದಿರೋ ಅವರು ಬಂದಿರುವರು."

ಈ ಧ್ವನಿ ಆಲಿಸಿದ ಕೂಡಲೇ ಮದೀನದ ಜನರು ಖುಬಾದ ಕಡೆಗೆ ಧಾವಿಸಿದರು. ಖುಬಾದ ಜನರು ಹಝ್ರತ್ ಪೈಗಂಬರ್(ಸ) ತಮ್ಮಲ್ಲಿ ತಂಗಲು ನಿರ್ಧರಿಸಿದುದನ್ನು ತಿಳಿದು ತುಂಬಾ ಹರ್ಷಿತರಾಗಿದ್ದರು.

ಆ ಸಂದರ್ಭದಲ್ಲಿ ನಡೆದ ಒಂದು ಸಂಭವ ಹಝ್ರತ್ ಪೈಗಂಬರರ(ಸ) ಅತ್ಯಂತ ಸರಳ ಸ್ವಭಾವವನ್ನು ಪ್ರತಿಬಿಂಬಿಸುತ್ತದೆ.

ಮದೀನದ ಬಹುತೇಕ ಜನರು ಹಝ್ರತ್ ಪೈಗಂಬರರ(ಸ) ದೇಹ ಸ್ವರೂಪದ ಬಗ್ಗೆ ಪರಿಚಿತರಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಖುಬಾದ ಹೊರಗೆ ಒಂದು ಮರದ ಕೆಳಗೆ ಕುಳಿತಿದ್ದರು. ಮದೀನದ ಜನರು ಅವರನ್ನು ಕಾಣಲು ಓಡುತ್ತಾ ಬರುತ್ತಿದ್ದರು. ಹಝ್ರತ್ ಪೈಗಂಬರ್(ಸ) ಬಹಳ ಸೌಮ್ಯತೆಯಿಂದ ಮರದ ಕೆಳಗೆ ಕುಳಿತಿದ್ದರು. ಅವರ ಜೊತೆಗಿದ್ದ ಹಝ್ರತ್ ಅಬೂಬಕರ್(ರ) ಪ್ರಾಯದಲ್ಲಿ ಹಝ್ರತ್ ಪೈಗಂಬರರಿಗಿಂತ(ಸ) ಚಿಕ್ಕವರಾಗಿದ್ದರೂ ಅವರ ಗಡ್ಡದಲ್ಲಿ ಕೆಲವು ಬಿಳಿಗೂದಲುಗಳು ಕಂಡು ಬರುತ್ತಿದ್ದುವು. ಅವರ ಉಡುಗೆ ತೊಡುಗೆಗಳು ಸಹ ಹಝ್ರತ್ ಪೈಗಂಬರರ(ಸ) ಉಡುಗೆ ತೊಡುಗೆಗಳಿಗಿಂತ ಉತ್ತಮವಾಗಿದ್ದುವು. ಆದುದರಿಂದ ಹಝ್ರತ್ ಪೈಗಂಬರರ(ಸ) ಪರಿಚಯವಿಲ್ಲದ ಜನರು ಹಝ್ರತ್ ಅಬೂಬಕರ್‌ರನ್ನು ಪೈಗಂಬರರೆಂದು ಭಾವಿಸಿ ಅವರ ಕಡೆಗೆ ಅಭಿಮುಖೀಕರಿಸಿ ವಿನಯದಿಂದ ಕುಳಿತುಕೊಳ್ಳಲು ತೊಡಗಿದಾಗ ಹಝ್ರತ್ ಅಬೂಬಕರ್(ರ) ಜನರ ತಪ್ಪುಗ್ರಹಿಕೆಯನ್ನು ಮನವರಿಕೆ ಮಾಡಿಕೊಂಡು, ಕೂಡಲೇ ಒಂದು ಚಾದರವನ್ನು ಎತ್ತಿಹಿಡಿದು ಹಝ್ರತ್ ಪೈಗಂಬರರೊಂದಿಗೆ(ಸ) ಹೇಳಿದರು: "ನಿಮ್ಮ ಮೇಲೆ ಬಿಸಿಲು ಬೀಳುತ್ತಿದೆ. ನಿಮ್ಮ ಮೇಲೆ ನೆರಳಾಗುವಂತೆ ನಾನು ಮಾಡುತ್ತೇನೆ."[30]

ಈ ರೀತಿ ಸೂಕ್ಷ್ಮವಾಗಿ ಜನರಿಗೆ ಅವರ ತಪ್ಪನ್ನು ಹಝ್ರತ್ ಅಬೂಬಕರ್(ರ) ಮನವರಿಕೆ ಮಾಡಿಕೊಟ್ಟರು.

ಖುಬಾದಲ್ಲಿ ಹತ್ತು ದಿನ ತಂಗಿದ ನಂತರ ಹಝ್ರತ್ ಪೈಗಂಬರರನ್ನು(ಸ) ಮದೀನದ ನಿವಾಸಿಗಳು ಮದೀನ ನಗರದೊಳಗೆ ಕರೆದುಕೊಂಡು ಹೋದರು. ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸುವಾಗ ಮುಸ್ಲಿಮ್ ಪುರುಷರೂ ಮಹಿಳೆಯರೂ ಮಕ್ಕಳೂ ಎಲ್ಲಾ ಮಾರ್ಗಗಳಲ್ಲೂ ಜಮಾಯಿಸಿ ಹಝ್ರತ್ ಪೈಗಂಬರರಿಗೆ(ಸ) ಸ್ವಾಗತ ಕೋರುತ್ತಿದ್ದರು. ಮಕ್ಕಳು ಮತ್ತು ಮಹಿಳೆಯರು ಹೀಗೆ ಹಾಡುತ್ತಿದ್ದರು:

ತಲಅಲ್‌ಬದ್‌ರು ಅಲೈನಾ ಮಿನ್ ಸನಿಯಾತಿಲ್ ವಿದಾಇ

ವಜಬಶ್ಶುಕ್‌ರು ಅಲೈನಾ ಮಾ ದಆ ಲಿಲ್ಲಾಹಿ ದಾಇ

ಅಯ್ಯುಹಲ್ ಮಬ್‌ಊಸು ಫೀನಾ ಜಿಅ್‌ತ ಬಿಲ್‌ಅಮ್ರಿಲ್ ಮುತಾಇ[31]

"ಪೂರ್ಣಿಮೆಯ ಚಂದ್ರನು ನಮ್ಮ ಮೇಲೆ ವಿದಾಅ್ ಶಿಖರದಿಂದ ಉದಿಸಿರುವನು. ಭೂಮಿಯಲ್ಲಿ ಅಲ್ಲಾಹನನ್ನು ಕರೆದು ಪ್ರಾರ್ಥಿಸುವ ಒಬ್ಬನಾದರೂ ಬಾಕಿಯಾಗಿ ಉಳಿಯುವ ತನಕ ನಮ್ಮ ಮೇಲೆ ಉಂಟಾಗಿರುವ ಅವರ ಉಪಕಾರಗಳನ್ನು ಸ್ಮರಿಸಬೇಕಾದುದು ಅವಶ್ಯಕವಾಗಿದೆ. ಓ ಅಲ್ಲಾಹನಿಂದ ನಮಗೆ ಕಳುಹಿಸಲ್ಪಟ್ಟವರೇ, ನಿಶ್ಚಯವಾಗಿಯೂ ನಿಮ್ಮ ಆಜ್ಞೆಗಳು ಅನುಸರಿಸಲ್ಪಡುವುವು."

---

30. ಬುಖಾರಿ: ಬಾಬ್ ಹಿಜ್‌ರ. 31. ಝುರ್‌ಖಾನಿ– ಸಂಪುಟ 1, ಪುಟ 359.



ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದುದು ಪೂರ್ವ ದಿಕ್ಕಿನಿಂದಾಗಿರಲಿಲ್ಲ. ಆದರೆ ಪೂರ್ಣಿಮೆಯ ಚಂದ್ರನು ಪೂರ್ವ ದಿಕ್ಕಿನಿಂದ ಉದಿಸುತ್ತಾನೆ. ನಿಜವಾದ ಚಂದ್ರ ಆಧ್ಯಾತ್ಮಿಕ ಚಂದ್ರನಾಗಿರುವನು ಎಂದು ಮದೀನದ ನಿವಾಸಿಗಳ ಉದ್ದೇಶವಾಗಿತ್ತು. ತಾವು ಇಷ್ಟರತನಕ ಅಂಧಕಾರದಲ್ಲಿದ್ದೆವು. ತಮ್ಮ ಮೇಲೆ ಈಗ ಚಂದ್ರನುದಿಸಿ ಬೆಳಕನ್ನು ನೀಡಿರುವನು. ಆ ಚಂದ್ರನು ಉದಿಸಿದುದು ಲೌಕಿಕ ಜಗತ್ತಿನ ಚಂದ್ರನುದಿಸುವ ದಿಕ್ಕಿನಿಂದಲ್ಲ ಎಂದು ಮದೀನದ ನಿವಾಸಿಗಳು ಹೇಳಬಯಸಿದ್ದರು.

ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದುದು ಸೋಮವಾರದ ದಿನವಾಗಿತ್ತು. ಅವರು ಸೌರ್ ಗುಹೆಯಿಂದ ಹೊರಕ್ಕೆ ಬಂದ ದಿನವೂ ಸೋಮವಾರವಾಗಿತ್ತು. ಆಶ್ಚರ್ಯಕರ ವಿಷಯವೇನೆಂದರೆ, ಸೋಮವಾರದ ದಿನದಂದೇ ಮಕ್ಕ ನಗರವು ಹಝ್ರತ್ ಪೈಗಂಬರರಿಂದ(ಸ) ಜಯಿಸಲ್ಪಟ್ಟಿತು.

ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದಾಗ ಮದೀನದ ಪ್ರತಿಯೊಬ್ಬ ವ್ಯಕ್ತಿ ತನ್ನ ಮನೆಯಲ್ಲಿ ಹಝ್ರತ್ ಪೈಗಂಬರ್(ಸ) ತಂಗಬೇಕೆಂದು ಬಯಸುತ್ತಿದ್ದರು. ಮದೀನದ ಮಾರ್ಗಗಳಲ್ಲಿ ಹಝ್ರತ್ ಪೈಗಂಬರರ(ಸ) ಒಂಟೆ ಹೋಗುತ್ತಿದ್ದಾಗ ಆ ಮಾರ್ಗಗಳ ಎರಡು ಬದಿಗಳಲ್ಲಿ ವಾಸವಿದ್ದ ವಿವಿಧ ಕುಟುಂಬಗಳ ಜನರು ತಮ್ಮ ಮನೆಗಳ ಮುಂದೆ ನಿಂತು ಹಝ್ರತ್ ಪೈಗಂಬರರನ್ನು(ಸ) ಸ್ವಾಗತಿಸುತ್ತಾ ಹೇಳುತ್ತಿದ್ದರು:

"ಓ ಅಲ್ಲಾಹನ ಪೈಗಂಬರರೇ, ನಮ್ಮ ಈ ಮನೆಗಳು, ನಮ್ಮ ಈ ಸಂಪತ್ತು ಮತ್ತು ನಮ್ಮ ಈ ದೇಹಗಳು ನಿಮ್ಮ ಸೇವೆಗಾಗಿ ಸಿದ್ಧವಾಗಿವೆ. ನಾವು ನಿಮ್ಮನ್ನು ರಕ್ಷಣೆ ಮಾಡಲು ಶಕ್ತರಾಗಿದ್ದೇವೆ. ನೀವು ನಮ್ಮ ಸಮೀಪವೇ ತಂಗಿರಿ."

ಕೆಲವರು ಉತ್ಸಾಹದಿಂದ ಮುಂದೆ ಬಂದು ಹಝ್ರತ್ ಪೈಗಂಬರರ(ಸ) ಒಂಟೆಯ ಹಗ್ಗ ಹಿಡಿದು ಅವರನ್ನು ತಮ್ಮ ಮನೆಯಲ್ಲಿ ಇಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಪ್ರತಿಯೊಬ್ಬರಿಗೆ ಹೀಗೆ ಹೇಳುತ್ತಿದ್ದರು:

"ನೀವು ಒಂಟೆಯನ್ನು ತಡೆದು ನಿಲ್ಲಿಸಬೇಡಿರಿ. ಸ್ವತಂತ್ರವಾಗಿ ಚಲಿಸಲು ಅದನ್ನು ಬಿಟ್ಟುಬಿಡಿರಿ. ಈ ದಿನ ಅದು ಅಲ್ಲಾಹನ ಆಜ್ಞೆ ಪ್ರಕಾರ ಅಲ್ಲಾಹನು ಇಚ್ಛಿಸುವ ಸ್ಥಳದಲ್ಲಿ ನಿಲ್ಲುವುದು."

ಒಂಟೆ ಮುಂದೆ ಸಾಗುತ್ತಾ ಮದೀನದ ಒಂದು ಅಂಚಿನಲ್ಲಿದ್ದ ಬನೂ ನಜ್ಜಾರ್ ಗೋತ್ರದ ಅನಾಥರಿಗೆ ಸೇರಿದ್ದ ಸ್ಥಳದ ಸಮೀಪಕ್ಕೆ ಹೋಗಿ ನಿಂತಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು:

"ನಾವು ಇಲ್ಲೇ ನಿಲ್ಲಬೇಕೆಂದು ಅಲ್ಲಾಹನ ಇಚ್ಛೆ ಎಂದು ತಿಳಿಯುತ್ತದೆ." ಅನಂತರ ಕೇಳಿದರು:

"ಈ ಸ್ಥಳ ಯಾರಿಗೆ ಸೇರಿದೆ?"

ಆ ಜಮೀನು ಕೆಲವು ಅನಾಥರ ಸ್ವತ್ತಾಗಿತ್ತು. ಅನಾಥರ ಸಂರಕ್ಷಕನು ಬಂದು, ಅದು ಇಂತಿಂತಹ ಅನಾಥರ ಸ್ವತ್ತಾಗಿದೆ ಎಂದೂ ಅದನ್ನು ಪೈಗಂಬರರ ಸೇವೆಗಾಗಿ ಅರ್ಪಿಸಬಹುದಾಗಿದೆ ಎಂದೂ ಹೇಳಿದನು.

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ಯಾರ ಸ್ವತ್ತನ್ನೂ ಪುಕ್ಕಟೆಯಾಗಿ ತೆಗೆದುಕೊಳ್ಳಲಾರೆವು."

ಅನಂತರ ಅದರ ಬೆಲೆಯನ್ನು ನಿರ್ಧರಿಸಲಾಯಿತು. ಆ ಸ್ವತ್ತನ್ನು ಖರೀದಿಸಿದ ನಂತರ ಅಲ್ಲಿ ಮಸ್ಜಿದ್ ಮತ್ತು ಮನೆಗಳನ್ನು ನಿರ್ಮಿಸಲು ಹಝ್ರತ್ ಪೈಗಂಬರ್(ಸ) ತೀರ್ಮಾನಿಸಿದರು.

## ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯವರ ಮನೆಯಲ್ಲಿ ಹಝ್ರತ್ ಪೈಗಂಬರರ(ಸ) ವಾಸ

ಹಝ್ರತ್ ಪೈಗಂಬರ್(ಸ) ಕೇಳಿದರು: "ಇಲ್ಲಿಗೆ ಅತಿ ಸಮೀಪವಾಗಿ ಯಾರ ಮನೆ ಇದೆ?"

ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಮುಂದೆ ಬಂದು ಹೇಳಿದರು: "ಓ ಪೈಗಂಬರರೇ, ನನ್ನ ಮನೆ ಇಲ್ಲಿಗೆ ಅತಿ ಸಮೀಪವಾಗಿದೆ ಮತ್ತು ನಿಮ್ಮ ಸೇವೆಗಾಗಿ ಸಿದ್ಧವಾಗಿದೆ."

ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಮನೆಗೆ ಹೋಗಿ ನಮಗೆ ಒಂದು ಕೋಣೆಯನ್ನು ಸಿದ್ಧಪಡಿಸಿರಿ." ಹಝ್ರತ್ ಅಬೂ ಅಯ್ಯೂಬ್‌ರವರ ಮನೆ ಮಾಳಿಗೆಯನ್ನು ಹೊಂದಿತ್ತು. ಅವರು ಮಾಳಿಗೆಯನ್ನು ಹಝ್ರತ್ ಪೈಗಂಬರರಿಗೆ(ಸ) ನೀಡಲು ಬಯಸಿದ್ದರು. ಆದರೆ ಸಂದರ್ಶಕರಿಗೆ ತೊಂದರೆಯಾಗದಿರಲಿ ಎಂದು ಹಝ್ರತ್ ಪೈಗಂಬರ್(ಸ) ಮನೆಯ ಕೆಳ ಅಂತಸ್ತನ್ನು ವಾಸಿಸಲು ಆಯ್ಕೆ ಮಾಡಿದರು.

ಅನ್ಸಾರ್‌ಗಳಿಗೆ (ಎಂದರೆ ಮದೀನದ ನಿವಾಸಿಗಳಾದ ಮುಸ್ಲಿಮರಿಗೆ) ಹಝ್ರತ್ ಪೈಗಂಬರ್‌ರೊಂದಿಗೆ(ಸ) ಇದ್ದ ಅತ್ಯಧಿಕ ಪ್ರೇಮಾಭಿಮಾನಗಳ ಪ್ರಕಟಣೆ ಈ ಸಂದರ್ಭದಲ್ಲೂ ಆಯಿತು.

ಹಝ್ರತ್ ಪೈಗಂಬರರು(ಸ) ಮನೆಯ ಕೆಳ ಅಂತಸ್ತಿನಲ್ಲಿ ವಾಸಿಸಲು ಹಝ್ರತ್ ಅಬೂ ಅಯ್ಯೂಬ್ ಒಪ್ಪಿಗೆ ಸೂಚಿಸಿದ್ದರೂ ಮನೆಯ ಮೇಲಂತಸ್ತಿನಲ್ಲಿ ವಾಸವಿದ್ದ ಅವರು ಮತ್ತು ಅವರ ಪತ್ನಿ ತಾವು ಮನೆಯ ಮೇಲಂತಸ್ತಿನಲ್ಲಿ ವಾಸಿಸಿ ಹಝ್ರತ್ ಪೈಗಂಬರರ(ಸ) ಗೌರವಕ್ಕೆ ಕುಂದು ಬರಿಸಿದಂತಾಗಲಿಲ್ಲವೋ ಎಂಬ ಯೋಚನೆಯಲ್ಲಿ ಮಗ್ನರಾಗಿ ನಿದ್ರಿಸದೆ ಎಚ್ಚರದಿಂದಿದ್ದರು. ರಾತ್ರಿ ನೀರಿನ ಒಂದು ಪಾತ್ರೆ ಉರುಳಿ ಬಿದ್ದು ನೀರು ಚೆಲ್ಲಿತು. ಆ ನೀರು ಕೆಳ ಅಂತಸ್ತಿಗೆ ತೊಟ್ಟಿಕ್ಕದಿರಲಿ ಎಂದು ತನ್ನ ಹೊದಿಕೆಯನ್ನು ಆ ನೀರಿನ ಮೇಲೆ ಹಾಕಿ ನೀರಿನ ಪಸೆ ನೆಲದಿಂದ ಆರಿಹೋಗುವಂತೆ ಮಾಡಿದರು. ಬೆಳಗ್ಗೆ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿಯವರು ಹಝ್ರತ್



ಪೈಗಂಬರರನ್ನು(ಸ) ಭೇಟಿಯಾಗಿ ರಾತ್ರಿಯ ಸಂಗತಿಗಳನ್ನು ನಿವೇದಿಸಿದರು. ಆಗ ಹಝ್ರತ್ ಪೈಗಂಬರ್(ಸ) ಆ ಮನೆಯ ಮೇಲಂತಸ್ತಿಗೆ ಹೋಗಿ ವಾಸಿಸಲು ಸಮ್ಮತಿಸಿದರು.

ಹಝ್ರತ್ ಅಬೂ ಅಯ್ಯೂಬ್ ಪ್ರತಿದಿನ ಆಹಾರ ಸಿದ್ಧಪಡಿಸಿ ಹಝ್ರತ್ ಪೈಗಂಬರರಿಗೆ(ಸ) ಕಳುಹಿಸಿ ಕೊಡುತ್ತಿದ್ದರು. ಅವರು ತಿಂದು ಉಳಿಕೆಯಾದ ಆಹಾರವನ್ನು ಮನೆಯವರೆಲ್ಲರೂ ತಿನ್ನುತ್ತಿದ್ದರು. ಕೆಲವು ದಿನಗಳ ನಂತರ ಮದೀನದ ಇತರ ಮುಸ್ಲಿಮರು ಅತಿಥಿ ಸತ್ಕಾರ ಮಾಡಲು ತಮಗಿರುವ ಹಕ್ಕುಗಳನ್ನು ಕೇಳಿ ಪಡೆದರು. ಹಝ್ರತ್ ಪೈಗಂಬರ್(ಸ) ತನ್ನ ಮನೆಯಲ್ಲಿ ಆಹಾರದ ಏರ್ಪಾಡು ಮಾಡಿಕೊಳ್ಳುವ ತನಕ ಮದೀನದ ಮುಸ್ಲಿಮರು ಸರದಿಯ ಪ್ರಕಾರ ತಮ್ಮ ಮನೆಗಳಿಂದ ಹಝ್ರತ್ ಪೈಗಂಬರರಿಗೆ(ಸ) ಆಹಾರ ಪೂರೈಕೆ ಮಾಡುತ್ತಾ ಇದ್ದರು.[32]

## ಹಝ್ರತ್ ಪೈಗಂಬರರ(ಸ) ಸೇವಕನಾದ ಹಝ್ರತ್ ಅನಸ್‌ರ ಸಾಕ್ಷ್ಯ

ಮದೀನದ ಒಬ್ಬ ವಿಧವೆ ಮಹಿಳೆಗೆ ಅನಸ್ ಎಂಬ ಒಬ್ಬನೇ ಮಗನಿದ್ದನು. ಆ ಹುಡುಗನಿಗೆ 8–9 ವರ್ಷ ಪ್ರಾಯವಾಗಿತ್ತು. ಆ ಮಹಿಳೆ ತನ್ನ ಮಗನನ್ನು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಕರೆದುಕೊಂಡು ಬಂದು ಹೀಗೆಂದರು: "ಓ ಪೈಗಂಬರರೇ, ನನ್ನ ಈ ಪುತ್ರನನ್ನು ನಿಮ್ಮ ಸೇವೆಗಾಗಿ ಇರಿಸಿಕೊಳ್ಳಿರಿ."

ಆ ಮಹಿಳೆಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಆದರದ ಕಾರಣದಿಂದ ತನ್ನ ಮಗನನ್ನು ಬಲಿದಾನವಾಗಿ ಅರ್ಪಿಸಿದ್ದರು. ಆದರೆ ಆ ಹುಡುಗ ಬಲಿದಾನವಾಗಿ ಅಲ್ಲ, ಶಾಶ್ವತ ಜೀವಿತಕ್ಕಾಗಿ ಅಂಗೀಕರಿಸಲ್ಪಟ್ಟನೆಂದು ಆ ಮಹಿಳೆಗೆ ಏನು ತಿಳಿದಿತ್ತು?

ಹಝ್ರತ್ ಪೈಗಂಬರರ(ಸ) ಸಹವಾಸದಲ್ಲಿ ಹಝ್ರತ್ ಅನಸ್(ರ) ಇಸ್ಲಾಮ್ ಧರ್ಮದ ಬಹಳ ದೊಡ್ಡ ವಿದ್ವಾಂಸರಾದರು. ಅವರು ಕ್ರಮೇಣ ಐಶ್ವರ್ಯವಂತರೂ ಆದರು. ಅವರು ಒಂದು ನೂರಕ್ಕಿಂತಲೂ ಹೆಚ್ಚು ವರ್ಷ ಆಯುಸ್ಸನ್ನು ಪಡೆದರು. ಅವರು ಮುಸ್ಲಿಮ್ ರಾಜ್ಯಭಾರದಲ್ಲಿ ಬಹಳ ಗೌರವಿಸಲ್ಪಡುತ್ತಿದ್ದರು. ಹಝ್ರತ್ ಅನಸ್(ರ) ಹೀಗೆ ಹೇಳಿರುವರು:

"ಬಹಳ ಚಿಕ್ಕಪ್ರಾಯದಲ್ಲಿಯೇ ನನಗೆ ಹಝ್ರತ್ ಪೈಗಂಬರರ(ಸ) ಸೇವೆ ಮಾಡುವ ಭಾಗ್ಯ ಲಭಿಸಿತು. ಅವರು ಮೃತರಾಗುವ ತನಕ ನಾನು ಅವರ ಜೊತೆಗಿದ್ದೆನು. ಅವರು ನನ್ನೊಂದಿಗೆ ಎಂದೂ ಒರಟಾಗಿ ಮಾತನಾಡಿರಲಿಲ್ಲ. ಅವರು ಎಂದೂ ನನ್ನೊಂದಿಗೆ ಸಿಡುಕಿನೊಂದಿಗೆ ವರ್ತಿಸಿರಲಿಲ್ಲ. ನನ್ನ ಕೈಯಲ್ಲಾಗದ ಕೆಲಸವನ್ನು ಮಾಡಲು ಅವರು ನನ್ನೊಂದಿಗೆ ಎಂದೂ ಹೇಳಿರಲೂ ಇಲ್ಲ."[33]

ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ವಾಸಿಸುತ್ತಾ ಇದ್ದಾಗ ಹಝ್ರತ್ ಅನಸ್(ರ) ಮಾತ್ರ ಅವರ ಸೇವಕರಾಗಿದ್ದರು. ಹಝ್ರತ್ ಅನಸ್‌ರವರ ಸಾಕ್ಷ್ಯ

32. ಬುಖಾರಿ ಮತ್ತು ಝುರ್‌ಖಾನಿ. 33. ಮುಸ್ಲಿಮ್ ಸಂಪುಟ 2 – ಕಿತಾಬುಲ್ ಫಝಾಯಿಲ್.

ಹಝ್ರತ್ ಪೈಗಂಬರರ(ಸ) ಉತ್ಕೃಷ್ಟ ಸ್ವಭಾವಗುಣಗಳ ಮೇಲೆ ಉಜ್ವಲ ಬೆಳಕನ್ನು ಹಾಯಿಸುತ್ತದೆ.

## ಮಕ್ಕದಿಂದ ತನ್ನ ಕುಟುಂಬದವರನ್ನು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಕರೆಸಿಕೊಂಡದ್ದು ಮತ್ತು ಮಸ್‌ಜಿದ್ ನಬವೀಗೆ ಅಸ್ತಿಭಾರ ಹಾಕಿದ್ದು

ಮದೀನಕ್ಕೆ ಆಗಮಿಸಿ ಸ್ವಲ್ಪಕಾಲ ಕಳೆದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಕುಟುಂಬದವರನ್ನು ಕರೆತರಲು ಹಝ್ರತ್ ಝೈದ್‌ರನ್ನು ಮಕ್ಕನಗರಕ್ಕೆ ಕಳುಹಿಸಿದರು. ಮಕ್ಕದ ಜನರು ಹಠಾತ್ತಾಗಿ ಸಂಭವಿಸಿದ ಹಝ್ರತ್ ಪೈಗಂಬರರ(ಸ) ವಲಸೆಯಿಂದ ಮಾನಸಿಕವಾಗಿ ಯಾತನೆ ಗೊಂಡಿದ್ದರು. ಅವರ ದೌರ್ಜನ್ಯ ಸ್ವಲ್ಪಕಾಲ ನಿಂತಿತ್ತು. ಇದೇ ಗಾಬರಿಯ ಕಾರಣದಿಂದ ಅವರು ಹಝ್ರತ್ ಪೈಗಂಬರರ(ಸ) ಮತ್ತು ಹಝ್ರತ್ ಅಬೂಬಕರ್‌ರವರ ಕುಟುಂಬಗಳು ಮಕ್ಕನಗರವನ್ನು ಬಿಟ್ಟು ಹೋಗುವುದಕ್ಕೆ ಅಡ್ಡಿಪಡಿಸಲಿಲ್ಲ. ಅವರು ಸುಖವಾಗಿ ಮದೀನಕ್ಕೆ ತಲಪಿದರು. ಅದೇ ಕಾಲದಲ್ಲಿ ಹಝ್ರತ್ ಪೈಗಂಬರ್(ಸ) ತಾನು ಖರೀದಿಸಿದ ಜಮೀನಿನಲ್ಲಿ ಮೊತ್ತಮೊದಲು ಮಸ್‌ಜಿದ್‌ಗೆ ಅಸ್ತಿಭಾರ ಹಾಕಿದರು. ಅನಂತರ ಅವರು ತನಗಾಗಿ ಮತ್ತು ತನ್ನ ಶಿಷ್ಯರಿಗೆ ಮನೆಗಳನ್ನು ನಿರ್ಮಾಣ ಮಾಡಿದರು. ಈ ಕೆಲಸ ಪೂರ್ಣವಾಗಲು ಏಳು ತಿಂಗಳುಗಳ ಕಾಲವು ಬೇಕಾಯಿತು.[34]

## ಮದೀನದ ಬಹುದೈವಾರಾಧಕ ಗೋತ್ರಗಳು ಇಸ್ಲಾಮ್ ಧರ್ಮಕ್ಕೆ ಸೇರ್ಪಡೆ

ಹಝ್ರತ್ ಪೈಗಂಬರ್(ಸ) ಮದೀನವನ್ನು ಪ್ರವೇಶಿಸಿದ ನಂತರ ಸ್ವಲ್ಪ ಕಾಲದೊಳಗೆ ಮದೀನದ ಬಹುದೈವಾರಾಧಕ ಗೋತ್ರಗಳಲ್ಲಿ ಬಹುತೇಕ ಗೋತ್ರಗಳ ಜನರು ಮುಸ್ಲಿಮರಾದರು. ಕೆಲವರು ಹೃದಯದಲ್ಲಿ ಮುಸ್ಲಿಮರಾಗಿಲ್ಲವಾದರೂ ಬಾಹ್ಯವಾಗಿ ಮುಸ್ಲಿಮರೊಂದಿಗೆ ಸೇರಿದರು. ಹೀಗೆ ಮೊದಲನೆಯ ಬಾರಿ ಮುಸ್ಲಿಮರಲ್ಲಿ ಕಪಟವಿಶ್ವಾಸಿಗಳ ಒಂದು ಗುಂಪು ಉಂಟಾಯಿತು. ಇವರಲ್ಲಿ ಕೆಲವರು ಅನಂತರ ನಿಷ್ಠಾವಂತರಾದ ಮುಸ್ಲಿಮರಾದರು. ಆದರೆ ಅವರಲ್ಲಿ ಬೇರೆ ಕೆಲವರು ಯಾವಾಗಲೂ ಮುಸ್ಲಿಮರ ವಿರುದ್ಧ ಷಡ್ಯಂತರಗಳನ್ನು ಮತ್ತು ಒಳಸಂಚುಗಳನ್ನು ಹೂಡುತ್ತಿದ್ದರು. ಮದೀನದಲ್ಲಿ ಕೆಲವರು ಬಾಹ್ಯವಾಗಿ ಸಹ ಮುಸ್ಲಿಮರಾಗದೆ ಇದ್ದರು. ಮದೀನದಲ್ಲಿ ಇಸ್ಲಾಮಿಗುಂಟಾದ ಉನ್ನತಿಯನ್ನು ಸೈರಿಸಲಾಗದೆ ಅಂತಹ ಜನರು ಮಕ್ಕದ ಕಡೆಗೆ ವಲಸೆ ಹೋದರು. ಈ ರೀತಿ, ಏಕದೇವನಿಗೆ ಮಾತ್ರ ಆರಾಧನೆ ಎಂಬ ತತ್ವವನ್ನು ಸುಸ್ಥಾಪಿತಗೊಳಿಸಲಾದ ಪ್ರಥಮ ನಗರವು ಮದೀನವಾಗಿತ್ತು. ಆ ಕಾಲದಲ್ಲಿ ಲೋಕದಲ್ಲಿ ಈ ನಗರದ ಹೊರತು ಬೇರೆ ಯಾವುದೇ ನಗರದಲ್ಲಾಗಲಿ, ಗ್ರಾಮದಲ್ಲಾಗಲಿ, "ಇಲ್ಲಿ ಏಕದೇವಾರಾಧನೆ ಮಾತ್ರ ಮಾಡಲ್ಪಡುವುದು" ಎಂದು ಘೋಷಿಸಬಹುದಾದ

---

34. ಬುಖಾರಿ ಮತ್ತು ಝುರ್‌ಖಾನಿ.



ಸ್ಥಿತಿಯು ನಿಶ್ಚಯವಾಗಿಯೂ ಇರಲಿಲ್ಲ. ಮದೀನ ನಗರದ ಈ ಸ್ಥಿತಿ ವಿಶೇಷವು ಹಝ್ರತ್ ಪೈಗಂಬರರಿಗೆ(ಸ) ಎಷ್ಟು ಹರ್ಷದಾಯಕವಾಗಿತ್ತು ಮತ್ತು ಅವರ ಸಂಗಡಿಗರ ದೃಷ್ಟಿಯಲ್ಲಿ ಎಷ್ಟು ಮಹತ್ವಪೂರ್ಣವಾದ ವಿಜಯವಾಗಿತ್ತು ಎಂಬುದು ಚಿಂತಾರ್ಹವಾಗಿದೆ.

ಹಝ್ರತ್ ಪೈಗಂಬರ್(ಸ) ಮಕ್ಕದಿಂದ ವಲಸೆ ಬಂದ ನಂತರ ಸ್ವಲ್ಪ ಕಾಲಾವಧಿಯೊಳಗೆ ಅಲ್ಲಾಹನು ಅವರ ಮೂಲಕ ಒಂದು ನಗರವನ್ನು, ತನ್ನನ್ನು ಮಾತ್ರ ಆರಾಧಿಸುವ ಜನರನ್ನು ಹೊಂದಿದ ನಗರವನ್ನಾಗಿ ಪರಿವರ್ತಿಸಿದನು. ಅಲ್ಲಿ ಯಾವುದೇ ವಿಗ್ರಹದ ಆರಾಧನೆ ಮಾಡಲ್ಪಡುತ್ತಿರಲಿಲ್ಲ. ಬಾಹ್ಯ ವಿಗ್ರಹದ ಪೂಜೆಯಾಗಲಿ, ಆಂತರಿಕ ವಿಗ್ರಹದ ಪೂಜೆಯಾಗಲಿ ಅಲ್ಲಿ ನಡೆಯುತ್ತಿರಲಿಲ್ಲ, ಆದರೆ ಈ ಪರಿವರ್ತನೆಯ ಕಾರಣದಿಂದ ಮುಸ್ಲಿಮರಿಗೆ ಶಾಂತಮಯ ಜೀವಿತ ಲಭಿಸಿತು ಎಂದು ಗ್ರಹಿಸಬಾರದು. ಮದೀನದ ಅರಬಿಗಳಲ್ಲಿ ಕಪಟವಿಶ್ವಾಸಿಗಳ ಒಂದು ಗುಂಪು ಇತ್ತು. ಅವರು ಪೈಗಂಬರರ(ಸ) ಕಠಿಣ ಶತ್ರುಗಳಾಗಿದ್ದರು. ಅಲ್ಲಿದ್ದ ಯಹೂದಿಯರೂ ಕಪಟ ತಂತ್ರಗಳನ್ನು ಹೂಡುತ್ತಿದ್ದರು. ಈ ಅಪಾಯಗಳನ್ನು ಗಮನಿಸಿಕೊಂಡು ಹಝ್ರತ್ ಪೈಗಂಬರ್(ಸ) ಬಹಳ ಎಚ್ಚರಿಕೆಯಿಂದ ವರ್ತಿಸುತ್ತಿದ್ದರು ಮತ್ತು ತನ್ನ ಶಿಷ್ಯರಿಗೆ ಸದಾ ಜಾಗೃತರಾಗಿರಲು ಉಪದೇಶಿಸುತ್ತಾ ಇದ್ದರು. ಆರಂಭದಲ್ಲಿ ಕೆಲವು ದಿನ ಹಝ್ರತ್ ಪೈಗಂಬರ್(ಸ) ನಿದ್ರೆ ಮಾಡದೆ ಎಚ್ಚರಿಕೆಯಿಂದ ಇರಬೇಕಾದ ಪರಿಸ್ಥಿತಿಯೂ ಇತ್ತು. ಒಮ್ಮೆ ಹಝ್ರತ್ ಪೈಗಂಬರ್(ಸ) ನಿದ್ರೆ ಮಾಡದೆ ಎಚ್ಚರಿಕೆಯಿಂದ ಇರಬೇಕಾದ ಸಂದರ್ಭ ಬಂದಾಗ ಅವರು ಆಯಾಸದಿಂದ ಬಳಲಿ, "ಈ ಸಂದರ್ಭದಲ್ಲಿ ಯಾರಾದರೂ ನಿಷ್ಠ ವ್ಯಕ್ತಿ ಪಹರೆ ನೀಡುವುದಾದರೆ ನಾನು ಮಲಗುತ್ತಿದ್ದೆನು" ಎಂದರು.

ಸ್ವಲ್ಪ ಹೊತ್ತಿನೊಳಗೆ ಆಯುಧಗಳ ಝೇಂಕಾರ ಕೇಳಿಸಿತು. ಹಝ್ರತ್ ಪೈಗಂಬರ್(ಸ), "ಅಲ್ಲಿ ಯಾರು?" ಎಂದು ಕೇಳಿದಾಗ, ಒಂದು ಸ್ವರ ಕೇಳಿಸಿತು: "ಓ ಪೈಗಂಬರರೇ, ನಾನು ಸಅದ್ ಬಿನ್ ವಖಾಸ್. ನಾನು ನಿಮಗೆ ಪಹರೆ ನೀಡಲು ಬಂದಿರುವೆನು." ಆಗ ಹಝ್ರತ್ ಪೈಗಂಬರ್(ಸ) ವಿಶ್ರಾಂತಿ ಪಡೆದರು.

ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ವಾಸಿಸಲು ತೊಡಗಿ ದುದರಿಂದ ತಮ್ಮ ಮೇಲೆ ಗುರುತರವಾದ ಜವಾಬ್ದಾರಿಯನ್ನು ಹೊರಿಸಲಾಗಿದೆ ಎಂದೂ ಹಝ್ರತ್ ಪೈಗಂಬರ್(ಸ) ಶತ್ರುಗಳ ಆಕ್ರಮಣದಿಂದ ಸುರಕ್ಷಿತರಲ್ಲ ಎಂದೂ ಮದೀನದ ಮುಸ್ಲಿಮರಿಗೆ ಚೆನ್ನಾಗಿ ಮನವರಿಕೆ ಆಗಿತ್ತು. ಆದುದರಿಂದ ಅವರು ಪರಸ್ಪರ ಸಮಾಲೋಚನೆ ನಡೆಸಿ ವಿವಿಧ ಗೋತ್ರಗಳು ಸರದಿಯ ಪ್ರಕಾರ ಮದೀನದಲ್ಲಿ ಕಾವಲು ಕಾಯುವಂತೆ ನಿಗದಿಪಡಿಸಿದರು. ಪ್ರತಿ ಗೋತ್ರದ ಕೆಲವು ಜನರು ಸರದಿ ಪ್ರಕಾರ ಹಝ್ರತ್ ಪೈಗಂಬರರ(ಸ) ಮನೆಯ ಕಾವಲು ಕಾಯುತ್ತಿದ್ದರು.

ಹಝ್ರತ್ ಪೈಗಂಬರರ(ಸ) ಮಕ್ಕ ನಗರದ ಜೀವಿತಕ್ಕೂ ಮದೀನದ ಜೀವಿತಕ್ಕೂ

ಮಧ್ಯೆ ಯಾವುದಾದರೂ ವ್ಯತ್ಯಾಸವಿರುವುದಾದರೆ ಅದು, ಮುಸ್ಲಿಮರು ಅಲ್ಲಾಹನ ಹೆಸರಿನಲ್ಲಿ ಸ್ಥಾಪಿತವಾದ ಮಸ್‌ಜಿದ್‌ನಲ್ಲಿ ಬೇರೆ ಜನರ ಅಡ್ಡಿ ಆತಂಕಗಳಿಗೆ ಗುರಿಯಾಗದೆ ಐದು ಹೊತ್ತು ನಮಾಝ್ ಮಾಡಬಹುದೆಂಬುದಾಗಿತ್ತು.

## ಮುಸ್ಲಿಮರನ್ನು ಪುನಃ ಪೀಡಿಸಲು ಮಕ್ಕದ ಜನರ ಸಿದ್ಧತೆಗಳು

ಎರಡು ಮೂರು ತಿಂಗಳು ಕಳೆದ ನಂತರ ಮಕ್ಕದವರ ಮಾನಸಿಕ ಯಾತನೆಗಳು ಕೊನೆಗೊಂಡುವು. ಅವರು ಮುಸ್ಲಿಮರನ್ನು ಕಷ್ಟಕ್ಕೊಳಪಡಿಸಲು ಹೊಸ ಕ್ರಿಯಾ ವಿಧಾನಗಳನ್ನು ರೂಪಿಸತೊಡಗಿದರು. ಅವರು ಪರಸ್ಪರ ಸಮಾಲೋಚನೆ ನಡೆಸಿ, ಮಕ್ಕದ ಮತ್ತು ಸುತ್ತುಮುತ್ತಲಿನ ಪ್ರದೇಶದ ಮುಸ್ಲಿಮರಿಗೆ ಮಾತ್ರ ತೊಂದರೆ ಉಂಟು ಮಾಡಿದರೆ ತಮಗೆ ಉದ್ದೇಶದಲ್ಲಿ ಸಾಫಲ್ಯ ಲಭಿಸದು. ಮದೀನದಿಂದ ಮುಹಮ್ಮದರನ್ನು ಹೊರದಬ್ಬುವಂತೆ ಮಾಡಿದರೆ ಮಾತ್ರ ಇಸ್ಲಾಮನ್ನು ನಾಶಪಡಿಸಲು ತಮಗೆ ಸಾಧ್ಯವಾಗುವುದು ಎಂದು ನಿರ್ಧರಿಸಿದರು.

ಹೀಗೆ ನಿರ್ಧರಿಸಿ ಅವರು ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್‌ನಿಗೆ ಪತ್ರ ಬರೆದರು. ಇವನ ಕುರಿತು ನಾವು ಇದರ ಮೊದಲು ಸಹ ಪ್ರಸ್ತಾಪಿಸಿದ್ದೇವೆ. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಹೋಗುವುದಕ್ಕೆ ಮೊದಲು ಮದೀನದ ನಿವಾಸಿಗಳು ಇವನನ್ನು ತಮ್ಮ ದೊರೆಯಾಗಿ ಮಾಡಲು ತೀರ್ಮಾನಿಸಿದ್ದರು.

ಮಕ್ಕದ ಜನರು ಬರೆದ ಪತ್ರದಲ್ಲಿ ಹೀಗೆ ಬರೆಯಲಾಗಿತ್ತು: ಮುಹಮ್ಮದ್ ಮದೀನಕ್ಕೆ ಹೋದ ಕಾರಣ ಮಕ್ಕದ ಜನರಿಗೆ ದುಃಖವಾಗಿದೆ. ಮದೀನದ ಜನರು ಮುಹಮ್ಮದರಿಗೂ ಅವರ ಸಂಗಡಿಗರಿಗೂ ಆಶ್ರಯ ನೀಡಬಾರದಿತ್ತು.

ಪತ್ರದಲ್ಲಿ ಕೊನೆಗೆ ಹೀಗೆ ಬರೆಯಲಾಗಿತ್ತು: ನೀವು ನಮ್ಮವರಲ್ಲಿ ಒಬ್ಬನಿಗೆ (ಎಂದರೆ ಮುಹಮ್ಮದ್‌ರಿಗೆ) ನಿಮ್ಮ ಮನೆಗಳಲ್ಲಿ ಆಶ್ರಯ ನೀಡಿರುವಿರಿ. ನಾವು ಅಲ್ಲಾಹನ ಪ್ರಮಾಣ ಮಾಡಿ ಹೇಳುತ್ತೇವೆ: ನೀವು ಆತನ ವಿರುದ್ಧ ಯುದ್ಧ ಮಾಡಿರಿ ಅಥವಾ ಆತನನ್ನು ನಗರದಿಂದ ಹೊರಹಾಕಿರಿ. ನೀವು ಹಾಗೆ ಮಾಡದಿದ್ದರೆ ನಾವೆಲ್ಲರೂ ಸೇರಿ ಮದೀನದ ಮೇಲೆ ಆಕ್ರಮಣ ಮಾಡುವೆವು. ನಮ್ಮ ವಿರುದ್ಧ ಹೋರಾಡುವ ಮದೀನದವರನ್ನು ಕೊಲ್ಲುವೆವು ಮತ್ತು ಮಹಿಳೆಯರನ್ನು ದಾಸಿಯರನ್ನಾಗಿ ಮಾಡಿಕೊಳ್ಳುವೆವು.

ಈ ಪತ್ರ ತಲುಪಿದಾಗ ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್‌ನಿಗೆ ಕೆಟ್ಟ ಯೋಚನೆಗಳು ಉಂಟಾದುವು. ಅವನು ಇತರ ಕಪಟ ವಿಶ್ವಾಸಿಗಳೊಂದಿಗೆ ಸಮಾಲೋಚನೆ ನಡೆಸಿದನು.

"ಮುಹಮ್ಮದರನ್ನು ನಾವು ಇಲ್ಲಿ ಇರಲು ಬಿಟ್ಟರೆ ನಮಗೆ ಅಪಾಯದ ಬಾಗಿಲು ತೆರೆದಿಟ್ಟಂತೆ ಆಗುವುದು. ನಾವು ಮುಹಮ್ಮದರ ವಿರುದ್ಧ ಹೋರಾಡಿ ಮಕ್ಕದವರನ್ನು ಸಂತೋಷಪಡಿಸಬೇಕು." ಇದು ಅವನ ಸಲಹೆಯಾಗಿತ್ತು.



ಹಝ್ರತ್ ಪೈಗಂಬರರಿಗೆ(ಸ) ಈ ವಿಷಯ ತಿಳಿದಾಗ ಅವರು ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲನ ಬಳಿಗೆ ಹೋಗಿ ಅವನಿಗೆ ಹೀಗೆ ಮನದಟ್ಟು ಮಾಡಿಕೊಟ್ಟರು:

"ನಿಮ್ಮ ಈ ಕಾರ್ಯಯೋಜನೆ ನಿಮಗೆಯೇ ಹಾನಿಕರವಾಗಿದೆ. ಮದೀನದ ಬಹುಸಂಖ್ಯಾತರು ಮುಸ್ಲಿಮರಾಗಿದ್ದಾರೆಂದು ನಿಮಗೆ ತಿಳಿದಿದೆ. ಅವರು ಇಸ್ಲಾಮ್‌ಗಾಗಿ ತಮ್ಮ ಜೀವಗಳನ್ನು ಅರ್ಪಿಸಲು ಸಹ ಸಿದ್ಧರಾಗಿದ್ದಾರೆ. ನೀವು ನಿಮ್ಮ ಯೋಚನೆಗಳ ಪ್ರಕಾರ ಕಾರ್ಯಪ್ರವೃತ್ತರಾಗುವುದಾದರೆ ಮದೀನದ ನವ ಮುಸ್ಲಿಮರು ಮಕ್ಕದಿಂದ ವಲಸೆ ಬಂದ ಮುಸ್ಲಿಮರ ಜೊತೆಗೂಡುವರು. ನೀವು ನಿಮ್ಮ ಉದ್ದೇಶಿಸಲಾದ ಯುದ್ಧವನ್ನು ಪ್ರಾರಂಭಿಸಿದರೆ ಸಂಪೂರ್ಣ ನಾಶವಾಗುವಿರಿ."

ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲನಿಗೆ ಹಝ್ರತ್ ಪೈಗಂಬರರ(ಸ) ಉಪದೇಶವನ್ನು ಆಲಿಸಿದ ನಂತರ ತನ್ನ ತಪ್ಪಿನ ಅರಿವುಂಟಾಯಿತು. ಅವನು ತನ್ನ ಮೊದಲಿನ ನಿರ್ಧಾರವನ್ನು ಬದಲಾಯಿಸಿದನು.

## ಮದೀನದ ಮುಸ್ಲಿಮರ (ಅನ್‌ಸಾರ್‌ಗಳ) ಮತ್ತು ಮಕ್ಕದಿಂದ ವಲಸೆ ಬಂದ ಮುಸ್ಲಿಮರ (ಮುಹಾಜಿರ್‌ಗಳ) ಭ್ರಾತೃ ಪ್ರೇಮ[35]

ಹಝ್ರತ್ ಪೈಗಂಬರ್(ಸ) ಇಸ್ಲಾಮ್ ಧರ್ಮದ ಭದ್ರತೆಗಾಗಿ ಒಂದು ಕಾರ್ಯಕ್ರಮವನ್ನು ಇದೇ ಕಾಲದಲ್ಲಿ ಕೈಗೊಂಡರು. ಅವರು ಎಲ್ಲಾ ಮುಸ್ಲಿಮರನ್ನು ಜಮಾಯಿಸಿದರು ಮತ್ತು ಮಕ್ಕದ ಒಬ್ಬ ಮತ್ತು ಮದೀನದ ಒಬ್ಬ ಹೀಗೆ ಇಬ್ಬರು ಇಬ್ಬರು ಮುಸ್ಲಿಮರನ್ನು ಪರಸ್ಪರ ಸಹೋದರರೆಂದು ಘೋಷಿಸಿದರು. ಈ ಭ್ರಾತೃಬಂಧವನ್ನು ಮದೀನದ ಮುಸ್ಲಿಮರು ಬಹಳ ಹೃತ್ಪೂರ್ವಕವಾಗಿ ಕೃತಿಗಿಳಿಸಿದರು. ಮದೀನದ ಪ್ರತಿಯೊಬ್ಬ ಮುಸ್ಲಿಮ್ ತನ್ನ ಸಹೋದರನೆಂದು ಘೋಷಿಸಲಾದ ಮಕ್ಕದ ಮುಸ್ಲಿಮನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ಸ್ವತ್ತನ್ನು ಅವರ ಮುಂದಿರಿಸಿ ಅರ್ಧ ಅರ್ಧ ಪಾಲು ಮಾಡುವ ಪ್ರಸ್ತಾಪ ಮಾಡಿದರು. ಮದೀನದ ಒಬ್ಬ ಮುಸ್ಲಿಮ್ ತನ್ನ ಭ್ರಾತೃ ಪ್ರೇಮವನ್ನು ಎಲ್ಲಿಯವರೆಗೆ ತೋರಿಸಿದರೆಂದರೆ ಅವರು ತಮ್ಮ ಇಬ್ಬರು ಪತ್ನಿಯರಲ್ಲಿ ಒಬ್ಬಾಕೆಯನ್ನು ವಿವಾಹ ವಿಚ್ಛೇದನೆಗೈದು ತನ್ನ ಸಹೋದರನಿಗೆ ವಿವಾಹ ಮಾಡಿಕೊಡಲು ಸಹ ಸಿದ್ಧರಾದರು. ಆದರೆ ವಲಸೆ ಬಂದ ಮುಸ್ಲಿಮರು ಮದೀನದ ತಮ್ಮ ಸಹೋದರರ ನಿಸ್ವಾರ್ಥ ಮನೋಭಾವನೆಯನ್ನು ಕಂಡು ಅವರಿಗೆ ಕೃತಜ್ಞತೆ ಸೂಚಿಸಿದರೇ ಹೊರತು ಅವರು ನೀಡಬಯಸಿದುದನ್ನು ಪಡೆದುಕೊಳ್ಳಲು ಒಪ್ಪಲಿಲ್ಲ. ಆದರೂ ಮದೀನದ ಮುಸ್ಲಿಮರು ತಮ್ಮ ಕೊಡುಗೆಗಳನ್ನು ಪಡೆದುಕೊಳ್ಳಲು ಮಕ್ಕದಿಂದ ವಲಸೆ ಬಂದ ಮುಸ್ಲಿಮರಿಗೆ ಒತ್ತಾಯ ಮಾಡುತ್ತಿದ್ದರು. ಅವರು ಹಝ್ರತ್ ಪೈಗಂಬರರಿಗೆ(ಸ) ಹೀಗೆಂದು ನಿವೇದಿಸಿದರು:

---

35. ಇಬ್ನು ಹಿಶಾಮ್ ಸಂಪುಟ–1 ಪುಟ 179.

"ಓ ಅಲ್ಲಾಹನ ಪೈಗಂಬರರೇ, ಈ ಮುಹಾಜಿರ್‌ಗಳು (ವಲಸೆಬಂದ ಮುಸ್ಲಿಮರು) ನಮ್ಮ ಸಹೋದರರಾಗಿರುವಾಗ ಅವರು ನಮ್ಮ ಸಂಪತ್ತಿನಲ್ಲಿ ಪಾಲುಗಾರರಾಗದಿರುವುದು ಹೇಗೆ? ಅವರು ವ್ಯಾಪಾರದ ಕಸಬನ್ನು ಮಾಡುವವರಾದ ಕಾರಣ ಕೃಷಿ ಮಾಡಲು ತಿಳಿಯದವರಾಗಿದ್ದರೆ ಮತ್ತು ನಮ್ಮ ಜಮೀನುಗಳ ಪಾಲನ್ನು ಪಡೆದುಕೊಳ್ಳಲು ಬಯಸುವುದಿಲ್ಲವಾದರೆ ನಮ್ಮ ಜಮೀನುಗಳಿಂದ ದೊರಕುವ ಆದಾಯಕ್ಕೆ ಪಾಲುಗಾರರನ್ನಾಗಿಯಾದರೂ ಅವರನ್ನು ಅಗತ್ಯವಾಗಿ ಮಾಡಲೇಬೇಕು."

ಅವರು ಹೀಗೆ ಒತ್ತಾಯಿಸಿದರೂ ಮದೀನದ ಮುಸ್ಲಿಮರ ಸ್ವತ್ತಿನ ಪಾಲನ್ನು ಸ್ವೀಕರಿಸಲು ವಲಸೆಗಾರ ಮುಸ್ಲಿಮರು ಇಷ್ಟಪಡಲಿಲ್ಲ. ಅವರು ತಮ್ಮ ವಂಶಪಾರಂಪರ್ಯದ ಉದ್ಯೋಗವಾದ ವ್ಯಾಪಾರವನ್ನು ಮಾಡಲು ತೊಡಗಿದರು ಮತ್ತು ಸ್ವಲ್ಪ ಕಾಲದೊಳಗೆ ಅವರಲ್ಲಿ ಅನೇಕರು ಧನಿಕರಾದರು. ಆದರೆ ಮದೀನದ ಮುಸ್ಲಿಮರು ಪಾಲು ನೀಡುವಿಕೆಯ ಬಗ್ಗೆ ಎಷ್ಟು ಒತ್ತಾಯದ ಮನೋಭಾವವನ್ನು ಹೊಂದಿದ್ದರೆಂದರೆ ಅವರಲ್ಲಿ ಕೆಲವರು ಮೃತರಾದಾಗ ಅವರ ಮಕ್ಕಳು ಅರಬ್ ಸಂಪ್ರದಾಯದಂತೆ ತಮ್ಮ ತಂದೆಯ ವಲಸೆಗಾರ ಸಹೋದರನಿಗೆ ಸ್ವತ್ತಿನಲ್ಲಿ ಪಾಲನ್ನು ಕೊಡುತ್ತಿದ್ದರು. ಎಷ್ಟೋ ವರ್ಷಗಳ ತನಕ ಈ ಸಂಪ್ರದಾಯ ಜಾರಿಯಲ್ಲಿತ್ತು. ಕೊನೆಗೆ ಈ ಸಂಪ್ರದಾಯ ಪವಿತ್ರ ಖುರ್‌ಆನಿನ ಆಜ್ಞೆಯೊಂದಿಗೆ ರದ್ದಾಯಿತು.

## ಮುಹಾಜಿರ್, ಅನ್‌ಸಾರ್ ಮತ್ತು ಯಹೂದಿಯರ ಒಮ್ಮತದ ಒಪ್ಪಂದ

ಮುಸ್ಲಿಮರನ್ನು ಪರಸ್ಪರ ಸಹೋದರ ಬಾಂಧವ್ಯದೊಂದಿಗೆ ಜೋಡಿಸಿದ ಹಾಗೆ ಮದೀನದ ಎಲ್ಲಾ ನಿವಾಸಿಗಳ ಮಧ್ಯೆ ಸಹ ಹಝ್ರತ್ ಪೈಗಂಬರ್(ಸ) ಒಂದು ಒಪ್ಪಂದವನ್ನು ಏರ್ಪಡಿಸಿದರು. ಅವರು ಯಹೂದಿಯರ ಮತ್ತು ಅರಬಿಗಳ ಮುಂದಾಳುಗಳನ್ನು ಜಮಾಯಿಸಿ ಅವರೊಂದಿಗೆ ಹೀಗೆ ಹೇಳಿದರು:

"ಇಲ್ಲಿ ಇಷ್ಟರತನಕ ಎರಡು ಗುಂಪುಗಳಿದ್ದುವು. ಈಗ ಇಲ್ಲಿ ಮೂರು ಗುಂಪುಗಳಿವೆ. ಮೊದಲು ಇಲ್ಲಿ ಯಹೂದಿಯರೂ ಮದೀನದ ಅರಬಿಗಳೂ ವಾಸಿಸುತ್ತಿದ್ದರು. ಈಗ ಇಲ್ಲಿ ಯಹೂದಿಯರು, ಮದೀನದ ಅರಬಿಗಳು ಮತ್ತು ಮಕ್ಕದಿಂದ ವಲಸೆ ಬಂದ ಅರಬಿಗಳು ಹೀಗೆ ಮೂರು ಗುಂಪುಗಳಿವೆ. ಆದುದರಿಂದ ಪರಸ್ಪರ ಶಾಂತಿಪಾಲನಾ ಒಪ್ಪಂದವಾಗಬೇಕಾಗಿದೆ." ಪರಸ್ಪರ ಸಮ್ಮತಿಯಿಂದ ಒಂದು ಒಪ್ಪಂದ ರೂಪಿಸಲಾಯಿತು. ಆ ಒಪ್ಪಂದದಲ್ಲಿ ಹೀಗೆ ಬರೆಯಲಾಗಿತ್ತು:

*"ಮುಹಮ್ಮದ್ ಪೈಗಂಬರ್, ಸತ್ಯ ವಿಶ್ವಾಸಿಗಳು ಮತ್ತು ಅವರೊಂದಿಗೆ ಸ್ವಸಂತೋಷದಿಂದ ಒಪ್ಪಂದಕ್ಕೆ ಸೇರುವವರ ಮಧ್ಯೆ ಮಾಡಲಾದ ಒಡಂಬಡಿಕೆ.*

*ವಲಸೆಗಾರರಲ್ಲಿ ಯಾರಾದರೂ ಕೊಲ್ಲಲ್ಪಟ್ಟರೆ ಆತನ ರಕ್ತಕ್ಕೆ ಹೊಣೆಗಾರರು ಅವರೇ (ಎಂದರೆ ವಲಸೆಗಾರರೇ) ಆಗುವರು. ಅವರು ತಮ್ಮ ಕೈದಿಗಳನ್ನು*



*ತಾವೇ ಸ್ವತಃ ಬಿಡಿಸಿಕೊಳ್ಳುವರು. ಇದೇ ರೀತಿ ಮದೀನದ ವಿವಿಧ ಗೋತ್ರಗಳಿಗೆ ಸೇರಿದ ಮುಸ್ಲಿಮರು ಇಂತಹ ಸಂದರ್ಭಗಳಲ್ಲಿ ತಾವೇ ಹೊಣೆಗಾರರಾಗುವರು. ಯಾವ ವ್ಯಕ್ತಿ ವಿದ್ರೋಹದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾನೋ ಪರಸ್ಪರ ವಿರೋಧ ಉಂಟಾಗುವಂತೆ ಮಾಡುತ್ತಾನೋ ಅಥವಾ ಒಪ್ಪಂದ ವ್ಯವಸ್ಥೆಯಲ್ಲಿ ಕೇಡುಂಟಾಗುವಂತೆ ಮಾಡುತ್ತಾನೋ ಅಂತಹ ವ್ಯಕ್ತಿಯ ವಿರುದ್ಧ ಒಪ್ಪಂದಕ್ಕೆ ಸೇರಿದ ಎಲ್ಲರೂ ಎದ್ದು ನಿಲ್ಲುವರು. ಅಂತಹ ವ್ಯಕ್ತಿ ಒಪ್ಪಂದಕ್ಕೆ ಸೇರಿರುವ ಯಾರ ಮಗನಾದರೂ ಸರಿ, ಅವನನ್ನು ಹೀಗೆಯೇ ಎದುರಿಸಬೇಕು. ಯಾವುದಾದರೂ ಅವಿಶ್ವಾಸಿ, ಯುದ್ಧದಲ್ಲಿ ಒಬ್ಬ ಮುಸ್ಲಿಮನಿಂದ ಹತನಾದರೆ, ಆ ಅವಿಶ್ವಾಸಿಯ ಮುಸ್ಲಿಮ್ ಬಂಧುಗಳು ಆ ಕೊಂದ ಮುಸ್ಲಿಮನಿಗೆ ಪ್ರತೀಕಾರ ಮಾಡಬಾರದು. ಯಾವುದೇ ಮುಸ್ಲಿಮನ ವಿರುದ್ಧ ಅವಿಶ್ವಾಸಿಗೆ ಸಹಾಯ ಮಾಡಬಾರದು.*

*ಈ ಒಪ್ಪಂದದಲ್ಲಿ ಸೇರುವ ಯಹೂದಿಯರಿಗೆ ಮುಸ್ಲಿಮರು ಎಲ್ಲಾ ವಿಧಗಳ ಸಹಾಯ ಮಾಡುವರು. ಅವರಿಗೆ ಯಾವುದೇ ರೀತಿಯ ಕಷ್ಟ ನೀಡಬಾರದು. ಯಾವುದೇ ಶತ್ರುವಿಗೆ ಯಹೂದಿಯರ ವಿರುದ್ಧ ಸಹಾಯ ನೀಡಬಾರದು. ಮದೀನದ ಅವಿಶ್ವಾಸಿಗಳು ಮಕ್ಕದ ಅವಿಶ್ವಾಸಿಗಳಿಗೆ ತಮ್ಮ ಮನೆಗಳಲ್ಲಿ ಆಶ್ರಯ ಕೊಡಬಾರದು. ಮಕ್ಕದ ಅವಿಶ್ವಾಸಿಗಳ ಸಂಪತ್ತನ್ನು ತಮ್ಮ ಬಳಿ ವಿಶ್ವಸ್ತ ನಿಧಿಯಾಗಿ ಮದೀನದ ಅವಿಶ್ವಾಸಿಗಳು ಇರಿಸಿಕೊಳ್ಳಬಾರದು. ಅವರು ಅವಿಶ್ವಾಸಿಗಳ ಮತ್ತು ವಿಶ್ವಾಸಿಗಳ ಯುದ್ಧದಲ್ಲಿ ಮಧ್ಯ ಪ್ರವೇಶಮಾಡಬಾರದು. ಯಾವುದಾದರೂ ವ್ಯಕ್ತಿ ಯಾವುದೇ ಮುಸ್ಲಿಮನನ್ನು ಅನ್ಯಾಯದಿಂದ ಕೊಂದರೆ ಎಲ್ಲಾ ಮುಸ್ಲಿಮರು ಆ ಹಂತಕನನ್ನು ಒಟ್ಟಾಗಿ ಎದುರಿಸಬೇಕು. ಬಹುದೈವಾರಾಧಕನಾದ ಶತ್ರು ಮದೀನದ ಮೇಲೆ ಆಕ್ರಮಣ ಮಾಡಿದರೆ ಯಹೂದಿಯರು ಮುಸ್ಲಿಮರಿಗೆ ಸಹಾಯ ಮಾಡುವರು ಮತ್ತು ಆನುಪಾತಿಕ ಖರ್ಚನ್ನು ನಿರ್ವಹಿಸುವರು. ಮದೀನದ ವಿವಿಧ ಗೋತ್ರಗಳೊಂದಿಗೆ ಒಪ್ಪಂದ ಮಾಡಿದ ಯಹೂದಿ ಗೋತ್ರಗಳು ಮುಸ್ಲಿಮರ ಹಕ್ಕುಗಳ ಹಾಗೆ ಇರುವ ಹಕ್ಕುಗಳನ್ನು ಪಡೆಯುವರು. ಯಹೂದಿಯರು ತಮ್ಮ ಧರ್ಮದಲ್ಲಿ ನೆಲೆಗೊಳ್ಳುವರು. ಮುಸ್ಲಿಮರು ತಮ್ಮ ಧರ್ಮದಲ್ಲಿ ನೆಲೆಗೊಳ್ಳುವರು. ಯಹೂದಿಯರಿಗೆ ದೊರಕುವ ಹಕ್ಕುಗಳು ಅವರ ಹಿಂಬಾಲಕರಿಗೂ ದೊರಕುವುವು. ಮದೀನದಲ್ಲಿರುವ ಜನರಲ್ಲಿ ಯಾರೂ ಹಝ್ರತ್ ಮುಹಮ್ಮದ್ ಪೈಗಂಬರರ ಅನುಮತಿ ಇಲ್ಲದೆ ಯಾವುದೇ ಯುದ್ಧ ಪ್ರಾರಂಭಿಸಬಾರದು. ಆದರೆ ಈ ಶರ್ತದ ಕಾರಣದಿಂದ ಯಾವುದೇ ವ್ಯಕ್ತಿ ತನ್ನ ನ್ಯಾಯಬದ್ಧವಾದ ಪ್ರತೀಕಾರದ ಹಕ್ಕಿನಿಂದ ವಂಚಿತನಾಗಲಾರನು. ಯಹೂದಿಯರು ತಮ್ಮ ವ್ಯವಸ್ಥೆಯಲ್ಲಿ ತಮ್ಮ ಖರ್ಚು ವೆಚ್ಚಗಳನ್ನು ಸ್ವತಃ ಭರಿಸುವರು. ಮುಸ್ಲಿಮರು ತಮ್ಮ ಖರ್ಚುವೆಚ್ಚಗಳನ್ನು ಸ್ವತಃ ನಿರ್ವಹಿಸುವರು. ಆದರೆ ಯುದ್ಧಕಾಲದಲ್ಲಿ ಎರಡು ಗುಂಪಿನವರೂ ಒಟ್ಟಿಗೆ ಸೇರಿ ಕೆಲಸಮಾಡುವರು. ಈ ಒಪ್ಪಂದದಲ್ಲಿ ಸೇರುವ ಎಲ್ಲರಿಗೂ ಮದೀನ ನಗರ ಆದರಣೀಯ ಸ್ಥಳವಾಗುವುದು. ನಗರದ ಜನರ ಆಶ್ರಯದಲ್ಲಿ ಬರುವ ಹೊರಗಿನ ಜನರೊಂದಿಗೆ ನಗರದ ಪೌರರೊಂದಿಗೆ ವರ್ತಿಸುವ ಹಾಗೆಯೇ ವರ್ತಿಸಲಾಗುವುದು. ಆದರೆ ಮದೀನದ*

*ಜನರು ಯಾವುದೇ ಮಹಿಳೆಯನ್ನು ಆಕೆಯ ಸಂಬಂಧಿಕರ ಸಮ್ಮತಿ ಇಲ್ಲದೆ ತಮ್ಮ ಮನೆಗಳಲ್ಲಿ ಇರಿಸಬಾರದು. ಜಗಳ ಮತ್ತು ಕಲಹಗಳನ್ನು ಅಲ್ಲಾಹನ ಮತ್ತು ಅಲ್ಲಾಹನ ಪ್ರವಾದಿಯ ಸಮಕ್ಷಮದಲ್ಲಿ ತೀರ್ಮಾನಕ್ಕೆ ಇರಿಸಲಾಗುವುದು. ಮಕ್ಕದವರೊಂದಿಗೆ ಮತ್ತು ಅವರೊಂದಿಗೆ ಸಂಬಂಧವೇರ್ಪಡಿಸಿರುವ ಗೋತ್ರಗಳೊಂದಿಗೆ ಈ ಒಪ್ಪಂದದಲ್ಲಿ ಸೇರಿರುವವರು ಯಾವುದೇ ಒಪ್ಪಂದ ಮಾಡಬಾರದು. ಈ ಒಪ್ಪಂದದಲ್ಲಿ ಸೇರಿರುವವರು ಮದೀನದ ಶತ್ರುಗಳ ವಿರುದ್ಧ ಈ ಒಪ್ಪಂದದ ಮೂಲಕ ಐಕ್ಯಮತ್ಯವನ್ನು ಹೊಂದಿದ್ದಾರೆ. ಯಾವ ಪ್ರಕಾರ ಈ ಒಪ್ಪಂದಕ್ಕೆ ಸೇರಿದವರು ಪ್ರತ್ಯೇಕವಾಗಿ ಯುದ್ಧ ಮಾಡಬಾರದೋ ಅದೇ ರೀತಿ ಶಾಂತಿ ಸಂಧಾನ ಸಹ ಮಾಡಬಾರದು. ಆದರೆ ಯುದ್ಧದಲ್ಲಿ ಸೇರಲು ಯಾರೂ ನಿರ್ಬಂಧಿಸಲ್ಪಡಲಾರರು. ಯಾವುದೇ ವ್ಯಕ್ತಿ ದೌರ್ಜನ್ಯಕಾರಕ ಕೃತ್ಯ ಮಾಡಿದರೆ ಅವನು ಶಿಕ್ಷಾರ್ಹನಾಗುವನು. ನಿಶ್ಚಯವಾಗಿಯೂ ಅಲ್ಲಾಹನು ಸಾತ್ವಿಕರ ಮತ್ತು ಧರ್ಮನಿಷ್ಠರ ಸಂರಕ್ಷಕನಾಗಿದ್ದಾನೆ. ಮುಹಮ್ಮದ್ ಅಲ್ಲಾಹನ ಪ್ರವಾದಿ ಆಗಿದ್ದಾರೆ."*[36]

ಇದು ಒಪ್ಪಂದದ ಸಾರಾಂಶವಾಗಿದೆ. ವಿಶ್ವಾಸಪಾಲನೆ ಮತ್ತು ನಿಷ್ಕಳಂಕತೆಯನ್ನು ಬಿಟ್ಟು ಬಿಡಬಾರದೆಂದು ಈ ಒಪ್ಪಂದ ಪತ್ರದಲ್ಲಿ ಪದೇ ಪದೇ ಒತ್ತಿ ಹೇಳಲಾಗಿತ್ತು. ದೌರ್ಜನ್ಯಗಾರನು ತನ್ನ ದೌರ್ಜನ್ಯಕ್ಕೆ ಹೊಣೆಗಾರ ನಾಗುವನೆಂದು ಸ್ಪಷ್ಟಪಡಿಸಲಾಗಿತ್ತು. ಯಹೂದಿಯರೊಂದಿಗೆ ಮತ್ತು ಇಸ್ಲಾಮ್ ಧರ್ಮ ಸ್ವೀಕರಿಸದ ಮದೀನ ನಿವಾಸಿಗಳೊಂದಿಗೆ ಸ್ನೇಹ, ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸಲಾಗುವುದೆಂದೂ ಅವರನ್ನು ಸಹೋದರ ರಂತೆ ನೋಡಲಾಗುವುದೆಂದೂ ಹಝ್ರತ್ ಪೈಗಂಬರರು(ಸ) ತೀರ್ಮಾನಿಸಿದ್ದ ರೆಂದು ಈ ಒಪ್ಪಂದವು ಸ್ಪಷ್ಟಪಡಿಸುತ್ತದೆ. ಅನಂತರ ಯಹೂದಿಯರೊಂದಿಗೆ ಉಂಟಾದ ಜಗಳಗಳಿಗೆ ಸಂಪೂರ್ಣವಾಗಿ ಯಹೂದಿಯರೇ ಹೊಣೆಗಾರರಾಗಿದ್ದರು.

## ಮಕ್ಕ ನಗರದ ಅವಿಶ್ವಾಸಿಗಳ ವಿರೋಧ ವರ್ತನೆಗಳು ಹೊಸದಾಗಿ ಆರಂಭಗೊಂಡದ್ದು

ಇದರ ಮೊದಲೇ ನಾವು ಬರೆದ ಹಾಗೆ ಮಕ್ಕ ನಗರದ ಜನರ ಮಾನಸಿಕ ಗೊಂದಲಗಳು ನಿವಾರಣೆಗೊಂಡ ನಂತರ ಅವರು ಇಸ್ಲಾಮಿನ ವಿರುದ್ಧ ಹೊಸದಾಗಿ ಕಾರ್ಯನಿರತರಾದರು. ಇದೇ ಕಾಲದಲ್ಲಿ ಮದೀನದ ಒಬ್ಬ ಮುಂದಾಳು ಔಸ್ ಗೋತ್ರದ ನೇತಾರರಾದ ಹಝ್ರತ್ ಸಅದ್ ಬಿನ್ ಮುಆಝ್ ಕಅ್‌ಬದ ಪ್ರದಕ್ಷಿಣೆ ಮಾಡಲು ಮಕ್ಕ ನಗರಕ್ಕೆ ಹೋಗಿದ್ದರು. ಅಬೂಜಹಲನು ಅವರನ್ನು ನೋಡಿ ಕೋಪದಿಂದ ಹೀಗೆಂದನು:

"ಆ ಧರ್ಮತ್ಯಾಗಿ ಮುಹಮ್ಮದನಿಗೆ ಆಶ್ರಯ ನೀಡಿದ ಬಳಿಕ ಕೂಡ ಏನೂ ತೊಂದರೆ ಇಲ್ಲದೆ ಕಅ್‌ಬದ ಪ್ರದಕ್ಷಿಣೆಯನ್ನು ಮದೀನದ ನಿವಾಸಿಗಳಾದ ನೀವು

36. ಇಬ್ನು ಹಿಶಾಮ್ ಸಂಪುಟ–1 ಪುಟ 178.



ಮಾಡಬಲ್ಲಿರೆಂದು ಗ್ರಹಿಸಿರುವಿರೇನು? ನೀವು ಅವನಿಗೆ ಸಂರಕ್ಷಣೆಯನ್ನೂ ಸಹಾಯವನ್ನೂ ನೀಡಬಲ್ಲಿರೆಂದು ಭಾವಿಸಿರುವಿರೇನು? ದೇವರಾಣೆ, ಈಗ ನಿನ್ನ ಜೊತೆಗೆ ಅಬೂ ಸುಫ್‌ಯಾನ್ ಇಲ್ಲದಿರುತ್ತಿದ್ದರೆ ನೀನು ನಿನ್ನ ಮನೆಯವರ ಬಳಿಗೆ ಸುರಕ್ಷಿತನಾಗಿ ಮರಳಿ ಹೋಗುತ್ತಿರಲಿಲ್ಲ." ಆಗ ಹಝ್ರತ್ ಸಅದ್ ಬಿನ್ ಮುಆಝ್ ಹೀಗೆ ಉತ್ತರ ನೀಡಿದರು:

"ಅಲ್ಲಾಹನಾಣೆ, ನೀವು ನಮ್ಮನ್ನು ಕಅ್‌ಬದ ಪ್ರದಕ್ಷಿಣೆ ಮಾಡುವುದರಿಂದ ತಡೆದರೆ ನೀವು ನೆನಪಿಟ್ಟುಕೊಳ್ಳಿರಿ, ನಿಮಗೆ ನಿಮ್ಮ ಸಿರಿಯಾದ ಯಾತ್ರೆಯ ಮಾರ್ಗದಲ್ಲಿ ಶಾಂತಿ ಸಿಗಲಾರದು."

ಇದೇ ಕಾಲದಲ್ಲಿ ಮಕ್ಕ ನಗರದ ಒಬ್ಬ ದೊಡ್ಡ ಮುಂದಾಳು ವಲೀದ್ ಬಿನ್ ಮುಘೀರ ರೋಗಪೀಡಿತನಾದನು. ತನಗೆ ಮರಣವು ಆಸನ್ನವಾಗಿದೆ ಎಂದು ಅವನು ಗ್ರಹಿಸಿದನು. ಒಂದು ದಿನ ಮಕ್ಕದ ದೊಡ್ಡ ದೊಡ್ಡ ಮುಂದಾಳುಗಳು ಅವನ ಸನಿಹದಲ್ಲಿ ಕುಳಿತಿದ್ದಾಗ ಆತನು ಫಕ್ಕನೆ ಅಳತೊಡಗಿದನು. ಮಕ್ಕದ ಮುಂದಾಳುಗಳು ಗಾಬರಿಗೊಂಡು ಕೇಳಿದರು:

"ನೀವು ಅಳುತ್ತಿರುವುದಾದರೂ ಏಕೆ?" ಆಗ ವಲೀದ್ ಹೇಳಿದನು: "ನಾನು ಮರಣ ಭಯದಿಂದ ಅಳುತ್ತಿದ್ದೇನೆಂದು ನೀವು ಭಾವಿಸು ತ್ತಿರುವಿರೇನು? ದೇವರಾಣೆ, ಹಾಗೇನೂ ಅಲ್ಲ. ಮುಹಮ್ಮದನ ಧರ್ಮವು ವ್ಯಾಪಿಸುವ ಬಗ್ಗೆ ಮತ್ತು ಮಕ್ಕ ನಗರ ಸಹ ಅವನ ಸ್ವಾಧೀನಕ್ಕೊಳಪಡುವುದೋ ಎಂಬುದರ ಬಗ್ಗೆ ನಾನು ವ್ಯಾಕುಲ ಚಿತ್ತನಾಗಿದ್ದೇನೆ." ಆಗ ಅಬೂ ಸುಫ್‌ಯಾನ್ (ಅವರು ಆಗ ಅವಿಶ್ವಾಸಿ ಯಾಗಿದ್ದು ಅನಂತರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು) ಹೇಳಿದರು:

"ನೀವು ಅದರ ಬಗ್ಗೆ ಭಯಪಡಬೇಡಿರಿ. ನಾವು ಜೀವದಿಂದಿರುವ ತನಕ ಹಾಗಾಗಲಾರದು. ನಾವು ಆ ಬಗ್ಗೆ ನಿಮಗೆ ಆಶ್ವಾಸನೆ ನೀಡುತ್ತೇವೆ."

ಈ ಎಲ್ಲಾ ಸಂಗತಿಗಳಿಂದ ಮಕ್ಕದ ಜನರು ದೌರ್ಜನ್ಯವನ್ನು ನಿಲ್ಲಿಸಿದುದು ತಾತ್ಕಾಲಿಕವಾಗಿತ್ತು ಎಂದೂ ಪುನಃ ಜನರನ್ನು ದೌರ್ಜನ್ಯಕ್ಕೆ ಪ್ರಚೋದಿಸಲಾಗುತ್ತಿತ್ತು ಎಂದೂ ಸಾಬೀತಾಗುತ್ತದೆ.

ಮರಣಾಸನ್ನರಾದ ಮಕ್ಕದ ಮುಂದಾಳುಗಳು ತಮ್ಮ ಮರಣ ಶಯ್ಯೆಯಲ್ಲಿ ಹಝ್ರತ್ ಪೈಗಂಬರರನ್ನು(ಸ) ವಿರೋಧಿಸುವ ಶಪಥಗಳನ್ನು ಮಾಡಿಸುತ್ತಿದ್ದರು.

ಮದೀನದ ಜನರನ್ನು ಹಝ್ರತ್ ಪೈಗಂಬರರ(ಸ) ವಿರುದ್ಧ ಯುದ್ಧ ಮಾಡಲು ಮಕ್ಕದ ಜನರು ಪ್ರೇರೇಪಿಸುತ್ತಾ ಇದ್ದರು. ಮದೀನದವರು ಅವರ ಅಪೇಕ್ಷೆಯನ್ನು ನಿರಾಕರಿಸಿದಾಗ ಮಕ್ಕದವರು ಬೆದರಿಕೆ ಹಾಕುತ್ತಿದ್ದರು–

"ನಮ್ಮ ಜೊತೆ ಒಪ್ಪಂದ ಮಾಡಿಕೊಂಡಿರುವ ಗೋತ್ರಗಳೊಂದಿಗೆ ಸೇರಿ ಮದೀನವನ್ನು ಆಕ್ರಮಿಸಿ ಪುರುಷರನ್ನು ಕೊಂದು ಮಹಿಳೆಯರನ್ನು ದಾಸಿಯರನ್ನಾಗಿ ಮಾಡಿಕೊಳ್ಳುವೆವು" ಎಂದು.

## ಮಕ್ಕದ ಅವಿಶ್ವಾಸಿಗಳ ಆಕ್ರಮಣಗಳನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಕೈಗೊಂಡ ಕ್ರಮಗಳು

ಈ ಪರಿಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಸುಮ್ಮನೆ ಕುಳಿತಿದ್ದರೆ ಮತ್ತು ಮದೀನದ ಭದ್ರತೆಗೆ ಯಾವುದೇ ವ್ಯವಸ್ಥೆ ಮಾಡದಿರುತ್ತಿದ್ದರೆ ಅನಂತರ ಅವರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಬಂದು ಬೀಳುತ್ತಿತ್ತು. ಅವರು ಚಿಕ್ಕ ಚಿಕ್ಕ ಗುಂಪುಗಳನ್ನಾಗಿ ಮಾಡಿ ತನ್ನ ಶಿಷ್ಯರನ್ನು ಆಗಾಗ ಮಕ್ಕ ನಗರದ ಸುತ್ತುಮುತ್ತಲೂ ಕಳುಹಿಸಲು ತೊಡಗಿ ಮಕ್ಕದವರ ಕಾರ್ಯಕ್ರಮಗಳು ಏನೆಂದು ತಿಳಿಯಲು ಪ್ರಯತ್ನಿಸುತ್ತಾ ಇದ್ದರು. ಕೆಲವೊಮ್ಮೆ ಇಂತಹ ತಂಡದವರೊಂದಿಗೆ ಮತ್ತು ಮಕ್ಕದ ಸಂಚಾರಿ ವ್ಯಾಪಾರ ಸಂಘಗಳೊಂದಿಗೆ ಅಥವಾ ಬೇರೆ ಗುಂಪುಗಳೊಂದಿಗೆ ಘರ್ಷಣೆ ಉಂಟಾಗುತ್ತಿತ್ತು. ಕೆಲವೊಮ್ಮೆ ಯುದ್ಧದ ಪರಿಸ್ಥಿತಿಯೂ ಉಂಟಾಗುತ್ತಿತ್ತು. ಕ್ರೈಸ್ತ ಲೇಖಕರು ಈ ಘಟನೆಗಳ ಕುರಿತು, ಅವು ಹಝ್ರತ್ ಪೈಗಂಬರರ(ಸ) ಪ್ರಚೋದನಾತ್ಮಕ ಕೃತ್ಯಗಳಾಗಿವೆ ಎಂದು ಬರೆದಿದ್ದಾರೆ.

ಮಕ್ಕದಲ್ಲಿ ಹದಿಮೂರು ವರ್ಷಗಳ ಕಾಲ ಮುಸ್ಲಿಮರ ಮೇಲೆ ಅಲ್ಲಿನ ಅವಿಶ್ವಾಸಿಗಳು ಹಿಂಸಾಚಾರ ನಡೆಸಿದರು. ಮದೀನಕ್ಕೆ ಮುಸ್ಲಿಮರು ವಲಸೆ ಹೋದ ನಂತರ ಮದೀನದವರನ್ನು ಮುಸ್ಲಿಮರ ವಿರುದ್ಧ ವರ್ತಿಸಲಿಕ್ಕೆ ಇದೇ ಮಕ್ಕ ನಿವಾಸಿಗಳು ಪ್ರಚೋದಿಸಲು ಪ್ರಯತ್ನಿಸಿದರು. ಮುಸ್ಲಿಮರಿಗೆ ಸಹಾಯ ಮಾಡುವುದಾದರೆ ಮದೀನವನ್ನು ಆಕ್ರಮಣ ಮಾಡುವೆವು ಎಂದು ಬೆದರಿಕೆಯನ್ನೂ ಮಕ್ಕದ ನಿವಾಸಿಗಳು ಒಡ್ಡಿದ್ದರು. ಇವೆಲ್ಲಾ ಘಟನೆಗಳು ನಡೆದ ನಂತರ ಹಝ್ರತ್ ಪೈಗಂಬರ್(ಸ) ಶತ್ರುಗಳ ಚಲನವಲನಗಳನ್ನು ವೀಕ್ಷಿಸಲು ಮತ್ತು ಅವರ ಬಗ್ಗೆ ಜಾಗರೂಕರಾಗಿರಲು ಮುಸ್ಲಿಮರ ಚಿಕ್ಕ ಚಿಕ್ಕ ಗುಂಪುಗಳನ್ನು ಅನ್ವೇಷಣೆಗಾಗಿ ಕಳುಹಿಸುವುದು ಪ್ರಚೋದನಾತ್ಮಕ ಕಾರ್ಯವಾಗುವುದಾದರೂ ಹೇಗೆ?

ಮಕ್ಕದ ಜನರು ಹದಿಮೂರು ವರ್ಷಗಳ ಕಾಲ ದೌರ್ಜನ್ಯ ನಡೆಸಿದ ನಂತರ ಮುಸ್ಲಿಮರ ಮತ್ತು ಮಕ್ಕದ ಜನರ ಮಧ್ಯೆ ಯುದ್ಧವು ಪ್ರಾರಂಭವಾಗಲು ಈ ಕಾರಣ ಸಾಲದು. ಇದಕ್ಕೆ ಇನ್ನಷ್ಟು ಹೆಚ್ಚು ಕಾರಣಗಳು ಬೇಕೆಂದು ಸಾರುವ ಪ್ರಾಪಂಚಿಕ ಕಾನೂನುಗಳಾದರೂ ಯಾವುವು? ಈಗ ಪಾಶ್ಚಿಮಾತ್ಯ ದೇಶಗಳು ತಮ್ಮನ್ನು ಬಹಳ ಸುಸಂಸ್ಕೃತರೆಂದು ಬಗೆಯುತ್ತಿವೆ. ಆದರೆ ಮಕ್ಕದಲ್ಲಿ ಮುಸ್ಲಿಮರ ಮೇಲೆ ನಡೆಸಲಾದ ದೌರ್ಜನ್ಯಗಳಲ್ಲಿ ಅರ್ಧ ಭಾಗದಷ್ಟಾದರೂ ಅನುಭವಿಸಿದ ಯಾವುದಾದರೂ ಜನಾಂಗ ಯುದ್ಧಕ್ಕೆ ಹೊರಟರೆ ಅದು ಅಪರಾಧವೆಂದು ತೀರ್ಮಾನಿಸಲು ಸಾಧ್ಯವೇ? ಒಂದು ಸರಕಾರ ಇನ್ನೊಂದು ದೇಶದ ಜನರೊಂದಿಗೆ ಆ ದೇಶದಲ್ಲಿರುವ ಒಂದು ಗುಂಪಿನ ಜನರನ್ನು ಕೊಲ್ಲಲು ಅಥವಾ ಅವರನ್ನು ದೇಶದಿಂದ ಹೊರದಬ್ಬಲು ನಿರ್ಬಂಧಿಸಿದರೆ ಆ ನಿರ್ದಿಷ್ಟ ಗುಂಪಿನ ಜನರು ಹೀಗೆ ನಿರ್ಬಂಧಿಸುವವರ ವಿರುದ್ಧ ಯುದ್ಧ ಘೋಷಣೆ ಮಾಡಲು ಅವರಿಗೆ ಹಕ್ಕಿಲ್ಲವೇ?

ಮದೀನದಲ್ಲಿ ಇಸ್ಲಾಮೀ ಆಡಳಿತ ಸ್ಥಾಪಿತವಾದ ನಂತರ ಮಕ್ಕದ ಜನರ



ವಿರುದ್ಧ ಯುದ್ಧ ಮಾಡಲು ಹೊಸ ಕಾರಣಗಳು ಉದ್ಭವಿಸುವ ಆವಶ್ಯಕತೆ ಇರಲಿಲ್ಲ. ಮಕ್ಕದ ಜೀವಿತದ ಕಾಲದಲ್ಲಿ ಮುಸ್ಲಿಮರು ಅನುಭವಿಸಿದ ಹಿಂಸಾಚಾರ ಅವರಿಗೆ ಮಕ್ಕದ ಜನರ ವಿರುದ್ಧ ಯುದ್ಧ ಘೋಷಣೆ ಮಾಡಲು ಪೂರ್ಣ ಹಕ್ಕು ನೀಡುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಹಾಗೆ ಮಾಡಲಿಲ್ಲ. ಅವರು ಸಹನೆದೋರಿದರು. ಅವರು ಶತ್ರುಗಳ ಚಲನವಲನಗಳನ್ನು ಪತ್ತೆಹಚ್ಚುವುದರಷ್ಟು ಮಟ್ಟಿಗೆ ತಮ್ಮ ಪ್ರಯತ್ನಗಳನ್ನು ಸೀಮಿತಗೊಳಿಸಿದ್ದರು. ಆದರೆ ಮಕ್ಕದ ಜನರು ಸ್ವತಃ ಮದೀನದ ಜನರನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಿದಾಗ, ಮುಸ್ಲಿಮರನ್ನು ಹಜ್ಜ್ ಮಾಡುವುದರಿಂದ ತಡೆದಾಗ, ಸಿರಿಯಕ್ಕೆ ವ್ಯಾಪಾರಕ್ಕಾಗಿ ಹೋಗುತ್ತಿದ್ದ ಸಂಚಾರಿ ವ್ಯಾಪಾರ ತಂಡಗಳು ತಾವು ಯಾವಾಗಲೂ ಹೋಗುತ್ತಿದ್ದ ಸರಿಯಾದ ಮಾರ್ಗವನ್ನು ಬಿಟ್ಟು ಮದೀನದ ಸುತ್ತುಮುತ್ತು ಇರುವ ಬುಡಕಟ್ಟು ವರ್ಗದವರ ಮಧ್ಯದಲ್ಲಿ ಹಾದು ಹೋಗಲು ತೊಡಗಿ ಆ ಬುಡಕಟ್ಟು ಜನರನ್ನು ಮದೀನದವರ ವಿರುದ್ಧ ಪ್ರಚೋದಿಸಲು ಆರಂಭಿಸಿದಾಗ ಮದೀನದ ರಕ್ಷಣೆಗಾಗಿ ಮುಂದಾಗುವುದು ಮತ್ತು ಮಕ್ಕದವರು ಹದಿನಾಲ್ಕು ವರ್ಷಗಳಿಂದ ನಿರಂತರವಾಗಿ ನೀಡುತ್ತಿದ್ದ ಯುದ್ಧಾಹ್ವಾನವನ್ನು ಅಂಗೀಕರಿಸುವುದು ಮುಸ್ಲಿಮರ ಕರ್ತವ್ಯವಾಗಿತ್ತು. ಆದರೆ ಮುಸ್ಲಿಮರು ಈ ಆಹ್ವಾನವನ್ನು ಸ್ವೀಕರಿಸಿದುದನ್ನು ಆಕ್ಷೇಪಿಸಲು ಪ್ರಂಪಚದಲ್ಲಿ ಯಾರಿಗೂ ನ್ಯಾಯಬದ್ಧ ಕಾರಣಗಳಿರುವುದಿಲ್ಲ.

## ಮದೀನದಲ್ಲಿ ಇಸ್ಲಾಮೀ ಸರಕಾರದ ಸ್ಥಾಪನೆ

ಹಝ್ರತ್ ಪೈಗಂಬರ್(ಸ) ಹೊರಗಿನ ಆಗುಹೋಗುಗಳ ಬಗ್ಗೆ ತಿಳಿಯುತ್ತಿದ್ದಾಗ ಮದೀನದ ಸುಧಾರಣೆಯ ಬಗ್ಗೆ ನಿರ್ಲಕ್ಷ್ಯದಿಂದ ಇರಲಿಲ್ಲ. ಮದೀನದ ಬಹುತೇಕ ಬಹುದೇವಾರಾಧಕ ಜನರು ನಿಷ್ಠೆಯಿಂದಲೂ ಕೆಲವರು ಕಾಪಟ್ಯದಿಂದಲೂ ಮುಸ್ಲಿಮರಾಗಿದ್ದರೆಂದು ಇದರ ಮೊದಲು ಪ್ರಸ್ತಾಪಿಸಲಾಗಿದೆ. ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಇಸ್ಲಾಮೀ ಸರಕಾರ ಸ್ಥಾಪಿಸಲು ಪ್ರಾರಂಭ ಮಾಡಿದರು. ಮೊದಲು ಜನರು ಜಗಳ ಮಾಡಿದಾಗ ಅರಬಿ ಸಂಪ್ರದಾಯ ಪ್ರಕಾರ ತಮ್ಮ ಹಕ್ಕುಗಳನ್ನು ತೀರ್ಮಾನ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ನ್ಯಾಯಾಧೀಶರನ್ನು ನೇಮಿಸಿದರು. ನ್ಯಾಯಾಧೀಶರ ತೀರ್ಪು ಪ್ರಕಾರವಲ್ಲದೆ ಯಾವುದೇ ವ್ಯಕ್ತಿ ತನ್ನ ಹಕ್ಕುಗಳನ್ನು ಇನ್ನೊಬ್ಬನಿಂದ ಪಡೆಯಲು ಸಾಧ್ಯವಿರಲಿಲ್ಲ.

ಮದೀನದ ಜನರಿಗೆ ಹಿಂದೆ ವಿದ್ಯಾಭ್ಯಾಸದ ಕುರಿತು ಹೆಚ್ಚಿನ ಆಸಕ್ತಿ ಇರಲಿಲ್ಲ. ಹಝ್ರತ್ ಪೈಗಂಬರ್(ಸ) ವಿದ್ಯಾವಂತರನ್ನು ಓದು ಬರಹ ಕಲಿಸಲು ನಿಶ್ಚಯಿಸಿದರು. ದೌರ್ಜನ್ಯ, ಅತ್ಯಾಚಾರ ಮತ್ತು ಅನ್ಯಾಯವನ್ನು ತಡೆಗಟ್ಟಲಾಯಿತು. ಮಹಿಳೆಯರ ಹಕ್ಕುಗಳು ಸ್ಥಾಪಿಸಲ್ಪಟ್ಟುವು. ಇಸ್ಲಾಮೀ ಶರೀಅತ್ ಪ್ರಕಾರ ಐಶ್ವರ್ಯವಂತರ ಮೇಲೆ ತೆರಿಗೆ ವಿಧಿಸಿ ಬಡವರಿಗೆ ಮತ್ತು ನಗರದ ಸಾರ್ವಜನಿಕರಿಗೆ ಪ್ರಯೋಜನಕರವಾದ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸಲಾಗುತ್ತಿತ್ತು. ನೌಕರರ ಹಕ್ಕುಗಳು ಸಂರಕ್ಷಿಸಲ್ಪಟ್ಟವು. ಅನಾಥರ ಸಂರಕ್ಷಣೆಗಾಗಿ ಮತ್ತು ವಿದ್ಯಾಭ್ಯಾಸಕ್ಕಾಗಿ

ಏರ್ಪಾಡು ಮಾಡಲಾಯಿತು. ಕೊಡು–ಕೊಳ್ಳುವ ವ್ಯವಹಾರದಲ್ಲಿ ಬರವಣಿಗೆ ಮತ್ತು ಒಪ್ಪಂದಗಳ ಶರ್ತಗಳನ್ನು ನಿಶ್ಚಯಿಸಲಾಯಿತು. ಗುಲಾಮರೊಂದಿಗೆ ಕ್ರೂರವಾಗಿ ವರ್ತಿಸುವುದನ್ನು ಕಠಿಣವಾಗಿ ತಡೆಯಲಾಯಿತು. ಶುಚಿತ್ವ, ಆರೋಗ್ಯ ಸಂರಕ್ಷಣೆ ಮೊದಲಾದವುಗಳ ಬಗ್ಗೆ ಒತ್ತಿ ಹೇಳಲಾಯಿತು. ಜನಗಣತಿಯನ್ನು ಪ್ರಾರಂಭಿಸಲಾಯಿತು. ಮಾರ್ಗಗಳನ್ನೂ ಓಣಿಗಳನ್ನೂ ಅಗಲಗೊಳಿಸುವ ಆಜ್ಞೆಗಳು ಜಾರಿಗೊಂಡುವು. ಮಾರ್ಗಗಳನ್ನು ಸ್ವಚ್ಛವಾಗಿರಿಸುವ ಬಗ್ಗೆ ನಿರ್ದೇಶಗಳನ್ನು ಜಾರಿಮಾಡಲಾಯಿತು. ಒಟ್ಟಾರೆ ಹೇಳುವುದಾದರೆ, ಗೃಹ ಸಂಬಂಧವಾದ ಮತ್ತು ಪೌರತ್ವಕ್ಕೆ ಸಂಬಂಧಿಸಿದ ಎಲ್ಲಾ ನಿಯಮಗಳು ರೂಪಿಸಲ್ಪಟ್ಟವು. ಅವುಗಳನ್ನು ಸರಿಯಾಗಿ ಅನುಷ್ಠಾನಕ್ಕೆ ತರಲು ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಅರಬ್ ದೇಶ ಪ್ರಥಮ ಬಾರಿ ಸುಸಂಘಟಿತ ಮತ್ತು ಸುಸಂಸ್ಕೃತ ಸಮಾಜ ತತ್ವಗಳನ್ನು ಅರಿತುಕೊಂಡಿತು.

ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಅರಬ್ ಜನತೆಯ ಮುಂದಿರಿಸಿದ ನಿಯಮಗಳು ಆ ಕಾಲಕ್ಕೆ ಮಾತ್ರವಲ್ಲ, ಎಲ್ಲಾ ಕಾಲಗಳಿಗೂ ಅರಬ್ ಜನತೆಗೆ ಮಾತ್ರವಲ್ಲ, ಲೋಕದ ಎಲ್ಲಾ ಜನಾಂಗಗಳಿಗೂ ಗೌರವ, ಅಂತಸ್ತು, ಶಾಂತಿ ಮತ್ತು ಅಭಿವೃದ್ಧಿದಾಯಕವಾಗಲಿರುವಾಗ ಅಲ್ಲಿ ಮಕ್ಕದ ಜನರು ಇಸ್ಲಾಮಿನ ವಿರುದ್ಧ ಸುಸಂಘಟಿತರಾಗಿ ಯುದ್ಧದ ಸಿದ್ಧತೆಯಲ್ಲಿ ಮಗ್ನರಾಗಿದ್ದರು. ಅದರ ಪರಿಣಾಮ ಬದ್‌ರ್ ಯುದ್ಧದ ರೂಪದಲ್ಲಿ ಪ್ರಕಟವಾಯಿತು.

## ಖುರೈಶ್ ವ್ಯಾಪಾರಿ ತಂಡದ ಆಗಮನ ಮತ್ತು ಬದ್ರ್ ಯುದ್ಧ[37]

ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋದ ನಂತರ ಹದಿಮೂರನೆಯ ತಿಂಗಳಲ್ಲಿ ಸಿರಿಯದಿಂದ ಮಕ್ಕದ ಜನರ ಒಂದು ವ್ಯಾಪಾರಿ ತಂಡ ಅಬೂ ಸುಫ್‌ಯಾನ್‌ರ ನಾಯಕತ್ವದಲ್ಲಿ ಮಕ್ಕದ ಕಡೆಗೆ ಪ್ರಯಾಣ ಮಾಡುತ್ತಾ ಇತ್ತು. ಅದರ ರಕ್ಷಣೆಯ ನೆವನದಿಂದ ಒಂದು ಬಲಿಷ್ಠ ಸೈನ್ಯವನ್ನು ಮದೀನದ ಕಡೆಗೆ ಕೊಂಡೊಯ್ಯಲು ಮಕ್ಕದ ಜನರು ನಿರ್ಧರಿಸಿದರು. ಹಝ್ರತ್ ಪೈಗಂಬರರಿಗೆ(ಸ) ಈ ಸಮಾಚಾರ ತಲಪಿತು. ಅಲ್ಲಾಹನಿಂದ ಆಗ ಹಝ್ರತ್ ಪೈಗಂಬರರಿಗೆ(ಸ) ಸಂದೇಶ ಲಭಿಸಿತು – ಶತ್ರುವಿನ ದೌರ್ಜನ್ಯವನ್ನು ಅವನ ಆಯುಧಗಳ ಮೂಲಕವೇ ಎದುರಿಸಬೇಕು ಎಂದು. ಆದುದರಿಂದ ಹಝ್ರತ್ ಪೈಗಂಬರ್(ಸ) ಮದೀನದಿಂದ ತನ್ನ ಕೆಲವು ಸಂಗಡಿಗರೊಂದಿಗೆ ಹೊರಟರು. ಅವರಿಗೆ ಮದೀನದಿಂದ ಹೊರಡುವಾಗ ತಾವು ಎದುರಿಸಬೇಕಾದುದು ವ್ಯಾಪಾರದ ತಂಡದವರನ್ನೋ ಅಥವಾ ಮಕ್ಕದ ಸುಸಂಘಟಿತ ಸೈನ್ಯವನ್ನೋ ಎಂಬುದರ ಬಗ್ಗೆ ನಿಖರವಾಗಿ ತಿಳಿದಿರಲಿಲ್ಲ. ಮೂರು ನೂರು ಮಂದಿ ಹಝ್ರತ್ ಪೈಗಂಬರರ(ಸ) ನೇತೃತ್ವದಲ್ಲಿ ಮದೀನದಿಂದ ಹೊರಟರು. ವ್ಯಾಪಾರದ ಸಂಚಾರಿ ತಂಡ ಎಂದರೆ ಸರಕುಗಳನ್ನು ಹೊತ್ತ ಒಂಟೆಗಳು ಮತ್ತು

37. ಇಬ್ನು ಹಿಶಾಮ್ ಭಾಗ–2 ಪುಟ9, ಸೀರತುಲ್‌ಹಲ್‌ಬಿಯ, ತಾರೀಖೆ ಕಾಮಿಲ್ ಮತ್ತು ತಬರೀ ನೋಡಿರಿ.



ಕೆಲವು ವ್ಯಾಪಾರಿಗಳು ಎಂದು ಗ್ರಹಿಸಬಾರದು. ಮಕ್ಕದವರು ತಮ್ಮ ವ್ಯಾಪಾರದ ತಂಡದೊಂದಿಗೆ ಬಲಿಷ್ಠವಾದೊಂದು ಸೈನ್ಯದ ತುಕಡಿಯನ್ನು ಕಳುಹಿಸುತ್ತಿದ್ದರು. ಈ ತಂಡಗಳ ಮೂಲಕ ಮುಸ್ಲಿಮರನ್ನು ಹೆದರಿಸುವುದು ಸಹ ಅವರ ಉದ್ದೇಶವಾಗಿತ್ತು. ಈ ವ್ಯಾಪಾರಿ ತಂಡದ ಮೊದಲು ಬೇರೆ ಎರಡು ವ್ಯಾಪಾರಿ ತಂಡಗಳ ಕುರಿತು ಚರಿತ್ರೆಯಲ್ಲಿ ಬರೆಯಲಾಗಿದೆ. ಅವುಗಳಲ್ಲಿ ಒಂದರ ರಕ್ಷಣೆಗಾಗಿ 200 ಯೋಧರೂ ಇನ್ನೊಂದರ ರಕ್ಷಣೆಗಾಗಿ 300 ಯೋಧರೂ ನೇಮಿಸಲ್ಪಟ್ಟಿದ್ದರು.

ಮುನ್ನೂರು ಸೈನಿಕರನ್ನು ಕರೆದುಕೊಂಡು ಮಕ್ಕದ ನಿರಾಯುಧರಾದ ವ್ಯಾಪಾರಿಗಳನ್ನು ಲೂಟಿಮಾಡಲು ಹಝ್ರತ್ ಪೈಗಂಬರ್ ಹೊರಟಿದ್ದರೆಂದು ಕ್ರೈಸ್ತರಾದ ಕೆಲವು ಲೇಖಕರು ಬರೆದುದು ಕೇವಲ ತಪ್ಪುಗ್ರಹಿಕೆಯಿಂದಾಗಿದೆ. ಈ ವ್ಯಾಪಾರಿ ತಂಡ ಬಹಳ ದೊಡ್ಡದಾಗಿದ್ದ ಕಾರಣ ಇದರ ಮೊದಲ ವ್ಯಾಪಾರಿ ತಂಡಗಳ ಭದ್ರತಾ ಸೈನಿಕರ ಸಂಖ್ಯೆಯನ್ನು ಗಮನಿಸಿದರೆ ಈ ತಂಡದೊಂದಿಗೆ ನಾಲ್ಕು ನೂರು–ಐದು ನೂರು ಭದ್ರತಾ ಸೈನಿಕರು ಇದ್ದಿರಬಹುದಾಗಿದೆ ಎಂದು ಸುಲಭವಾಗಿ ತಿಳಿಯಬಹುದು. ಇಷ್ಟು ದೊಡ್ಡ ಸಂಖ್ಯೆಯ ಭದ್ರತಾ ಸೈನಿಕರೊಂದಿಗೆ ಹೋರಾಡಲು ಮುನ್ನೂರು ಮಂದಿ ಮುಸ್ಲಿಮ್ ಸೈನಿಕರು ಪೂರ್ಣವಾಗಿ ಆಯುಧ ಸನ್ನದ್ಧರಾಗದೆ ಹೊರಟರೆ ಅವರನ್ನು ಲೂಟಿಗಾರರ ತಂಡ ಎಂದು ಕರೆಯುವುದು ಕೇವಲ ದ್ವೇಷ, ಪಕ್ಷಪಾತ ಮತ್ತು ಅನ್ಯಾಯ ಎಂದೇ ಹೇಳಬೇಕಾಗಿದೆ. ಮದೀನದ ದಂಡು ಹೊರಟದ್ದು ಈ ವ್ಯಾಪಾರಿ ತಂಡವನ್ನು ಮಾತ್ರ ಉದ್ದೇಶಿಸಿಯಾಗಿತ್ತು ಎಂದಾಗಿದ್ದರೂ ಮತ್ತು ಅವರು ವ್ಯಾಪಾರಿ ತಂಡದವರೊಂದಿಗೆ ಮಾತ್ರ ಯುದ್ಧ ಮಾಡಿದ್ದರೂ ಅದು ಆತ್ಮರಕ್ಷಣೆಗಾಗಿ ಮಾಡಿದ ಪ್ರತಿರೋಧಕ ಯುದ್ಧವೇ ಆಗುತ್ತಿತ್ತು. ಮದೀನದ ಸೈನ್ಯ ಬಲಹೀನವಾಗಿದ್ದು ಮಕ್ಕದ ವ್ಯಾಪಾರಿ ತಂಡದವರು ಮದೀನದ ಸುತ್ತುಮುತ್ತಲಿನ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ದುಷ್ಕರ್ಮಗಳನ್ನು ಮಾಡಲು ಪ್ರೇರೇಪಿಸುವುದನ್ನು ತಡೆಗಟ್ಟುವುದೇ ಅವರ ಉದ್ದೇಶವಾಗಿತ್ತು.

ಪವಿತ್ರ ಖುರ್‌ಆನ್‌ನಿಂದ ನಮಗೆ ತಿಳಿಯುವುದೇನೆಂದರೆ, ಮುಸ್ಲಿಮರು ಮಕ್ಕದ ವ್ಯಾಪಾರಿ ತಂಡದೊಂದಿಗೆ ಎದುರುಬದುರಾಗುವುದನ್ನಲ್ಲ, ಮಕ್ಕದ ಸುಸಜ್ಜಿತ ಸೈನ್ಯವನ್ನು ಎದುರಿಸುವುದನ್ನು ಅಲ್ಲಾಹನು ಇಷ್ಟಪಟ್ಟಿದ್ದನು. ಆದರೆ ಮುಸ್ಲಿಮರ ನಿಷ್ಠೆಯನ್ನೂ ಅವರ ವಿಶ್ವಾಸದ ದಾರ್ಢ್ಯತೆಯನ್ನೂ ಪ್ರಕಟಗೊಳಿಸಲಿಕ್ಕೋಸ್ಕರ ಅಲ್ಲಾಹನು ಈ ಸಂಗತಿಯನ್ನು ಮೊದಲೇ ಬಹಿರಂಗಪಡಿಸಿರಲಿಲ್ಲ. ಮುಸ್ಲಿಮರು ಮದೀನದಿಂದ ಪೂರ್ಣವಾಗಿ ಸಿದ್ಧರಾಗದೆ ಹೊರಟು ಮುಂದುವರಿಯುತ್ತಿದ್ದಾಗ ಸ್ವಲ್ಪ ದೂರ ಹೋದನಂತರ ಹಝ್ರತ್ ಪೈಗಂಬರ್(ಸ) ಶಿಷ್ಯರೊಂದಿಗೆ, “ಮಕ್ಕದ ಸೈನ್ಯದೊಂದಿಗೆ ಹೋರಾಡುವುದು ಅಲ್ಲಾಹನ ನಿರ್ಧಾರವಾಗಿದೆ” ಎಂದು ಹೇಳಿದರು.

ಮಕ್ಕದ ಸೈನ್ಯದ ಕುರಿತು ಲಭಿಸಿದ ವರದಿಗಳಿಂದ ಅವರ ಸಂಖ್ಯೆ ಒಂದು ಸಾವಿರಕ್ಕಿಂತ ಹೆಚ್ಚಿಗೆ ಇದೆ ಎಂದೂ ಅವರೆಲ್ಲರೂ ಪರಿಣಿತ ಯೋಧರೆಂದೂ ತಿಳಿಯಿತು. ಹಝ್ರತ್ ಪೈಗಂಬರರ(ಸ) ಜೊತೆಗೆ ಇದ್ದುದು 313 ಮಂದಿ ಮಾತ್ರ.

ಅವರಲ್ಲಿ ಬಹುತೇಕ ಜನರಿಗೆ ಯುದ್ಧವಿದ್ಯೆ ತಿಳಿದಿರಲಿಲ್ಲ. ಅವರ ಬಳಿ ಆಯುಧಗಳೂ ಸಾಕಷ್ಟು ಇರಲಿಲ್ಲ. ಬಹುತೇಕ ಮಂದಿ ಪಾದಚಾರಿಗಳಾಗಿದ್ದರು ಅಥವಾ ಒಂಟೆಸವಾರಿ ಮಾಡಿ ಬಂದಿದ್ದರು. ಕುದುರೆ ಇದ್ದುದು ಕೇವಲ ಒಂದು. ಇಂತಹ ಚಿಕ್ಕ ಮತ್ತು ಸಾಕಷ್ಟು ಸಾಮಾನು ಸರಂಜಾಮುಗಳಿಲ್ಲದ ಸೈನ್ಯದೊಂದಿಗೆ ಅದರ ಮೂರುಪಟ್ಟು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಸೈನ್ಯವನ್ನು ಎದುರಿಸುವುದು ಬಹಳ ಅಪಾಯಕರವಾದ ಸಂಗತಿಯಾಗಿತ್ತು. ಆದ ಕಾರಣ, ಯಾವುದೇ ವ್ಯಕ್ತಿಯನ್ನು ಆತನ ಇಷ್ಟಕ್ಕೆ ವಿರುದ್ಧವಾಗಿ ಯುದ್ಧದಲ್ಲಿ ಭಾಗವಹಿಸಲು ನಿರ್ಬಂಧಿಸಲು ಹಝ್ರತ್ ಪೈಗಂಬರ್(ಸ) ಬಯಸಲಿಲ್ಲ. ಆದುದರಿಂದ ಅವರು ತಮ್ಮ ಶಿಷ್ಯರೊಂದಿಗೆ ಹೇಳಿದರು:

"ಈಗ ವ್ಯಾಪಾರಿ ತಂಡವನ್ನು ಎದುರಿಸುವ ಪ್ರಶ್ನೆ ಇಲ್ಲ. ಈಗ ನಾವು ಸುಸಜ್ಜಿತ ಸೈನ್ಯವನ್ನು ಎದುರಿಸಬೇಕಾಗಿದೆ. ಈ ಬಗ್ಗೆ ನೀವು ನನಗೆ ಸಲಹೆ ನೀಡಿರಿ."

ಮಕ್ಕದಿಂದ ವಲಸೆ ಬಂದವರು (ಮುಹಾಜಿರ್‌ಗಳು) ಒಬ್ಬರ ನಂತರ ಇನ್ನೊಬ್ಬರಂತೆ ಎದ್ದು ನಿಂತು ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ಶತ್ರು ನಮ್ಮ ಮನೆಯನ್ನು ಆಕ್ರಮಿಸಲು ಬಂದಿರುವನಾದರೆ ನಾವು ಆವನಿಗೆ ಹೆದರಲಾರೆವು. ನಾವು ಅವನನ್ನು ಎದುರಿಸಲು ಸನ್ನದ್ಧರಾಗಿದ್ದೇವೆ."

ಪ್ರತಿಯೊಬ್ಬರ ಮಾತು ಕೇಳಿದ ನಂತರ ಸಹ ಹಝ್ರತ್ ಪೈಗಂಬರ್(ಸ) ಹೇಳುತ್ತಾ ಇದ್ದರು:

"ನನಗೆ ಇನ್ನೂ ಸಲಹೆ ನೀಡಿರಿ. ಇನ್ನೂ ಸಲಹೆ ನೀಡಿರಿ."

ಮದೀನದ ಮುಸ್ಲಿಮರು (ಅನ್‌ಸಾರ್‌ಗಳು) ಅಲ್ಲಿಯ ತನಕ ಮೌನವಾಗಿದ್ದರು. ಮಕ್ಕದ ಸೈನಿಕರು ವಲಸೆಗಾರರಾದ ಮುಸ್ಲಿಮರ ಸಂಬಂಧಿಕರಾಗಿದ್ದರು. ಆದುದರಿಂದ ತಮ್ಮ ಮಾತಿನಿಂದ ವಲಸೆಗಾರರಾದ ಮುಸ್ಲಿಮರಿಗೆ ಮಾನಸಿಕ ನೋವು ಉಂಟಾಗುವುದೆಂದು ಅವರು ಹೆದರಿಕೆಯಿಂದ ಇದ್ದರು. ಹಝ್ರತ್ ಪೈಗಂಬರ್(ಸ) ಪದೇ ಪದೇ "ನನಗೆ ಸಲಹೆ ನೀಡಿರಿ. ನನಗೆ ಸಲಹೆ ನೀಡಿರಿ" ಎಂದು ಹೇಳುವಾಗ ಅನ್‌ಸಾರ್‌ಗಳ (ಮದೀನದ ಮುಸ್ಲಿಮರ) ಒಬ್ಬ ಮುಂದಾಳು ಎದ್ದು ನಿಂತು ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ತಮಗೆ ಸಲಹೆಗಳು ದೊರೆಯುತ್ತಾ ಇವೆ. ಆದರೆ ಸಲಹೆ ನೀಡಬೇಕೆಂದು ಪದೇ ಪದೇ ತಾವು ಕೇಳುತ್ತಿದ್ದೀರಿ. ಪ್ರಾಯಶಃ ತಾವು ಉದ್ದೇಶಿಸುವುದು ಮದೀನದ ಮೂಲ ನಿವಾಸಿಗಳಾದ ನಮ್ಮನ್ನಾಗಿದೆ." ಹಝ್ರತ್ ಪೈಗಂಬರ್(ಸ) ಹೇಳಿದರು: "ಹೌದು, ನಾನು ಉದ್ದೇಶಿಸುವುದು ನಿಮ್ಮನ್ನೇ."

ಆಗ ಆ ಮುಂದಾಳು ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ತಾವು ಮದೀನಕ್ಕೆ ಬರುವ ಮೊದಲು ತಮಗೂ ನಮಗೂ ಮಧ್ಯೆ ಒಂದು ಒಪ್ಪಂದವಾಗಿತ್ತು. ತಮ್ಮ ಮೇಲೆ ಮತ್ತು



ವಲಸೆಗಾರರ ಮೇಲೆ ಯಾರಾದರೂ ಆಕ್ರಮಣ ಮಾಡಿದರೆ ನಾವು ನಿಮ್ಮ ರಕ್ಷಣೆಯನ್ನು ಮಾಡುವೆವು ಎಂದು. ಆದರೆ ಈಗ ಮದೀನದ ಹೊರಗೆ ತಾವು ಬಂದಿರುವ ಕಾರಣ ಈ ಪರಿಸ್ಥಿತಿಯಲ್ಲಿ ಒಪ್ಪಂದವು ಪ್ರಾಯಶಃ ಪಾಲಿಸಲ್ಪಡುವುದೋ ಇಲ್ಲವೋ ಎಂದು ತಿಳಿದುಕೊಳ್ಳಲು ಇಚ್ಛಿಸಿ ತಾವು ನಮ್ಮೊಂದಿಗೆ ಸಲಹೆ ಕೇಳಿದುದಾಗಿದೆ. ಓ ಪೈಗಂಬರರೇ, ತಮ್ಮೊಂದಿಗೆ ಒಪ್ಪಂದ ಮಾಡಿದ ಸಂದರ್ಭದಲ್ಲಿ ತಮ್ಮ ನಿಜಸ್ಥಿತಿ ನಮಗೆ ಚೆನ್ನಾಗಿ ತಿಳಿದಿರಲಿಲ್ಲ. ಆದರೆ ಈಗ ತಮ್ಮ ಸ್ಥಾನ ಮತ್ತು ಮಹಿಮೆಗಳು ನಮಗೆ ಚೆನ್ನಾಗಿ ಸ್ಪಷ್ಟವಾಗಿರುವಾಗ, ಓ ಪೈಗಂಬರರೇ, ಈಗ ಆ ಒಪ್ಪಂದದ ಪ್ರಶ್ನೆಯೇ ಉದಿಸುವುದಿಲ್ಲ. ನಾವು ಹಝ್ರತ್ ಮೂಸಾ ಪ್ರವಾದಿಯ ಶಿಷ್ಯರ ಹಾಗೆ 'ನೀವು ಮತ್ತು ನಿಮ್ಮ ಸೃಷ್ಟಿಕರ್ತ ಇಬ್ಬರೂ ಹೋಗಿ ಯುದ್ಧ ಮಾಡಿರಿ. ನಾವು ಇಲ್ಲೇ ಕುಳಿತಿರುವೆವು' ಎಂದು ಹೇಳಲಾರೆವು. ನಾವು ತಮ್ಮ ಬಲಭಾಗದಲ್ಲೂ ಹೋರಾಡುವೆವು, ಎಡಭಾಗದಲ್ಲೂ ಹೋರಾಡುವೆವು. ತಮ್ಮ ಮುಂದುಗಡೆಯೂ ಹೋರಾಡುವೆವು, ತಮ್ಮ ಹಿಂದೆ ನಿಂತೂ ಹೋರಾಡುವೆವು. ಓ ಪೈಗಂಬರರೇ, ನಿಮಗೆ ಹಾನಿಯನ್ನುಂಟು ಮಾಡಲು ಬಂದಿರುವ ಶತ್ರು ನಮ್ಮ ಮೃತಶರೀರಗಳ ಮೇಲೆ ದಾಟಿ ಹೋಗದೆ ನಿಮ್ಮ ಸನಿಹಕ್ಕೆ ತಲಪಲಾರನು. ಓ ಪೈಗಂಬರರೇ, ಯುದ್ಧ ಒಂದು ಸಾಮಾನ್ಯ ಸಂಗತಿಯಾಗಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿಯೇ ಸಮುದ್ರವಿದೆ. ತಾವು ನಮಗೆ 'ನಿಮ್ಮ ಕುದುರೆಗಳೊಂದಿಗೆ ಸಮುದ್ರಕ್ಕೆ ನುಗ್ಗಿರಿ' ಎಂದು ಆಜ್ಞಾಪಿಸಿದರೂ ನಾವು ತಕ್ಷಣ ನಮ್ಮ ಕುದುರೆಗಳನ್ನು ಸಮುದ್ರದೊಳಗೆ ನುಗ್ಗಿಸುವೆವು."[38]

ಇದು ಮದೀನದ ಮುಸ್ಲಿಮರಿಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಸ್ನೇಹ ಮತ್ತು ನಿಷ್ಠೆಯ ಮಾದರಿಯಾಗಿತ್ತು. ಇದಕ್ಕೆ ಸಮನಾದ ಉದಾಹರಣೆ ಹಿಂದಿನ ಯಾವುದೇ ಪ್ರವಾದಿಯಲ್ಲಿ ಕಾಣಲು ಸಾಧ್ಯವಿಲ್ಲ. ಪ್ರವಾದಿ ಹಝ್ರತ್ ಮೂಸಾರ(ಅ) ಶಿಷ್ಯರ ಸ್ಥಿತಿ ಹೇಗಿತ್ತೆಂದು ಮದೀನದ ಮುಸ್ಲಿಮರು ಮೇಲಿನ ಮಾತುಗಳಲ್ಲಿ ಸ್ಪಷ್ಟಪಡಿಸಿರುವರು. ಹಝ್ರತ್ ಪ್ರವಾದಿ ಈಸಾರ(ಅ) ಶಿಷ್ಯರು ವಿರೋಧಿಗಳನ್ನು ಎದುರಿಸಬೇಕಾಗಿ ಬಂದಾಗ ಹೇಗೆ ವರ್ತಿಸಿದರೆಂದು ಬೈಬಲಿನ ಹೊಸ ಒಡಂಬಡಿಕೆಯ ಸುವಾರ್ತೆಗಳು ಸಾಕ್ಷ್ಯ ನೀಡುತ್ತವೆ. ಒಬ್ಬ ಶಿಷ್ಯ ಕೆಲವು ನಾಣ್ಯಗಳಿಗೆ ತನ್ನ ಗುರುವನ್ನು ಮಾರಿಬಿಟ್ಟನು. ಇನ್ನೊಬ್ಬ ತನ್ನ ಗುರುವಿಗೆ ಶಾಪವಿತ್ತನು. ಉಳಿದ ಹತ್ತು ಮಂದಿ ತಮ್ಮ ಗುರುವನ್ನು ಬಿಟ್ಟು ಅತ್ತಿತ್ತ ಓಡಿಹೋದರು. ಆದರೆ ಹಝ್ರತ್ ಪೈಗಂಬರರ(ಸ) ಶಿಷ್ಯರು ಕೇವಲ ಎರಡೂವರೆ ವರ್ಷಗಳ ಸಹವಾಸದಿಂದ ತಮ್ಮ ವಿಶ್ವಾಸ ದಾರ್ಢ್ಯತೆಯಲ್ಲಿ ಎಷ್ಟು ಅಭಿವೃದ್ಧಿ ಪಡೆದರೆಂದರೆ ತಮಗೆ ಹಝ್ರತ್ ಪೈಗಂಬರರು(ಸ) ಆಜ್ಞಾಪಿಸುವುದಾದರೆ ಸಮುದ್ರಕ್ಕೆ ಹಾರಲು ಸಹ ಸಿದ್ಧರಾದರು.

ಹಝ್ರತ್ ಪೈಗಂಬರರು(ಸ) ಈ ರೀತಿ ಸಲಹೆ ಕೇಳಿದುದು ಬಲಹೀನ ವಿಶ್ವಾಸ ಹೊಂದಿದವರು ಹಿಂತಿರುಗಲು ಅನುಮತಿ ನೀಡಲಿಕ್ಕಾಗಿತ್ತು. ಆದರೆ

38. ಇಬ್ನು ಹಿಶಾಮ್ ಸಂಪುಟ 2 ಪುಟ 12.

ವಲಸೆಗಾರರಾದ ಮುಸ್ಲಿಮರು (ಮುಹಾಜಿರ್) ಮತ್ತು ಮದೀನದ ಮೂಲನಿವಾಸಿಗಳಾದ ಮುಸ್ಲಿಮರು (ಅನ್‌ಸಾರ್) ತಮ್ಮ ನಿಷ್ಠೆ ಮತ್ತು ವಿಶ್ವಾಸ ದಾರ್ಢ್ಯತೆಯನ್ನು ಪ್ರಕಟಿಸುವುದರಲ್ಲಿ ಸ್ಪರ್ಧಿಸಿದಾಗ ಮತ್ತು ಎರಡು ಪಕ್ಷಗಳಿಗೆ ಸೇರಿದವರು ಅಲ್ಲಾಹನ ವಾಗ್ದಾನಗಳ ಪ್ರಕಾರ ಹೋರಾಡಲು ಸನ್ನದ್ಧರಾದಾಗ ಅವರ ಸಂಖ್ಯೆ ಶತ್ರುಗಳ ಸಂಖ್ಯೆಗಿಂತ ಮೂರರಲ್ಲೊಂದು ಆಗಿದ್ದರೂ ಅವರ ಸಾಧನ ಸಾಮಗ್ರಿಗಳು ಶತ್ರುಗಳ ಸಾಮಾನು ಸರಂಜಾಮುಗಳಿಗಿಂತ ಎಷ್ಟೋಪಟ್ಟು ಕಡಿಮೆಯಾಗಿದ್ದರೂ ಅವರು ನಿರ್ಭಯವಾಗಿ ಯುದ್ಧ ಮಾಡಲು ಸಿದ್ಧರಾದರು. ಅವರು ಗೌರವ ಹೀನರಾಗಿ ಯುದ್ಧದಿಂದ ಬೆನ್ನು ತಿರುಗಿಸಿ ಹೋಗದಿರಲಿಕ್ಕೂ ಅಲ್ಲಾಹನ ಧರ್ಮದ ಬಗ್ಗೆ ಅಭಿಮಾನವನ್ನು ಪ್ರದರ್ಶಿಸುತ್ತಾ ಯುದ್ಧರಂಗದಲ್ಲಿ ಸಂತೋಷದಿಂದ ಜೀವವನ್ನು ಬಲಿಗೊಡಲಿಕ್ಕೂ ಅಣಿಯಾದರು.

ಹಝ್ರತ್ ಪೈಗಂಬರ್(ಸ) ತನ್ನ ಶಿಷ್ಯರ ಆವೇಶಭರಿತ ಮಾತುಗಳನ್ನು ಆಲಿಸಿದ ನಂತರ ಅವರೊಂದಿಗೆ ಮುಂದೆ ಸಾಗಿದರು. ಅವರು ಬದ್ರ್ ಎಂಬ ಪ್ರದೇಶ ತಲಪಿದಾಗ ತನ್ನ ಒಬ್ಬ ಶಿಷ್ಯನ ಸಲಹೆಯ ಪ್ರಕಾರ ಶತ್ರುಗಳ ಸಮೀಪದಲ್ಲೇ, ಬದ್ರ್‌ನ ನೀರ ಝರಿಯ ಸನಿಹದಲ್ಲಿ ಸೈನ್ಯದ ತಂಗುದಾಣವನ್ನು ಮಾಡಿದರು. ಮುಸ್ಲಿಮರಿಗೆ ನೀರಿನಾಶ್ರಯ ಸ್ವಾಧೀನವಾಗಿದ್ದರೂ ಅವರಿದ್ದ ಮೈದಾನ ಪ್ರದೇಶ ಮರಳಿನಿಂದ ಕೂಡಿದ್ದು ಸೈನ್ಯದ ಚಲನೆಗೆ ಬಹಳ ತ್ರಾಸದಾಯಕವಾಗಿತ್ತು. ಹಝ್ರತ್ ಪೈಗಂಬರರ(ಸ) ಶಿಷ್ಯರು ಈ ಕಾರಣದಿಂದ ಗಾಬರಿಗೊಂಡರು. ಹಝ್ರತ್ ಪೈಗಂಬರ್(ಸ) ರಾತ್ರಿಯಿಡೀ ಪ್ರಾರ್ಥಿಸುತ್ತಾ ಕಳೆದರು. ಅವರು ಅಲ್ಲಾಹನೊಂದಿಗೆ ಪದೇ ಪದೇ ಹೀಗೆ ಪ್ರಾರ್ಥಿಸುತ್ತಿದ್ದರು:

"ಓ ನನ್ನ ಸೃಷ್ಟಿಕರ್ತನೇ, ಭೂಲೋಕದಲ್ಲಿ ನಿನ್ನನ್ನು ಮಾತ್ರ ಆರಾಧಿಸುವವರು ಇವರು ಮಾತ್ರವಾಗಿದ್ದಾರೆ. ಈ ಜನರು ಈ ದಿನ ಯುದ್ಧದಲ್ಲಿ ಮೃತರಾದರೆ ನಿನ್ನ ಹೆಸರು ಹೇಳಿ ಕರೆಯುವವರು ಲೋಕದಲ್ಲಿ ಯಾರು ತಾನೆ ಬಾಕಿಯಾಗಿ ಉಳಿಯುವರು."[39]

ಅಲ್ಲಾಹನು ಹಝ್ರತ್ ಪೈಗಂಬರರ ಪ್ರಾರ್ಥನೆಗಳನ್ನು ಆಲಿಸಿದನು. ರಾತ್ರಿ ಮಳೆ ಬಂತು. ಅದರ ಫಲಸ್ವರೂಪವಾಗಿ ಮುಸ್ಲಿಮರಿದ್ದ ಮರಳು ತುಂಬಿದ ಭೂಮಿ ಗಟ್ಟಿಯಾಯಿತು. ಅವಿಶ್ವಾಸಿ ಶತ್ರುಗಳು ಇದ್ದ ಮಣ್ಣಿನ ನೆಲ ಮಳೆನೀರಿನಿಂದ ನೆನೆದು ಬಹಳ ಜಾರುವಂತಾಯಿತು. ಪ್ರಾಯಶಃ ಅವಿಶ್ವಾಸಿಗಳು ಆ ಸ್ಥಳಕ್ಕೆ ಮುಸ್ಲಿಮರು ತಲಪುವ ಮೊದಲೇ ತಲಪಿದ್ದರೂ ಅವರು ಮಣ್ಣಿನ ನೆಲವನ್ನು ಅದರಲ್ಲಿ ಯುದ್ಧದ ಹೋರಾಟ ಸುಲಭವಾಗಿ ನಡೆಸಬಹುದಾದ ಕಾರಣದಿಂದ ಆಯ್ಕೆ ಮಾಡಿ ಅಲ್ಲಿ ತಮ್ಮ ಸೇನೆಯ ಡೇರೆ ಹಾಕಿದ್ದರು. ಎದುರುಗಡೆ ಇದ್ದ ಮರಳಿನ ಮೈದಾನವನ್ನು

39. ಝುರ್‌ಖಾನಿ ಸಂಪುಟ 1 ಪುಟ 419. ಇಬ್ನು ಹಿಶಾಮ್ ಸಂಪುಟ 2 ಪುಟ 17.



ಅವರು ಮುಸ್ಲಿಮರಿಗೆ ಉದ್ದೇಶಪೂರ್ವಕವಾಗಿ ಬಿಟ್ಟು ಬಿಟ್ಟಿದ್ದರು. ಅಲ್ಲಿ ಮುಸ್ಲಿಮರ ಸೈನ್ಯ ಡೇರೆ ಹಾಕಿ ಯುದ್ಧ ಮಾಡಲು ತೊಡಗಿದರೆ ಸೈನಿಕರ ಕಾಲುಗಳು ಮರಳಿನಲ್ಲಿ ಹೂತು ಹೋಗಿ ಚಲಿಸಲು ಕಷ್ಟವಾಗಲಿ ಎಂದು ಅವರ ಉದ್ದೇಶವಾಗಿತ್ತು. ಆದರೆ ಅಲ್ಲಾಹನು ರಾತ್ರಿ ಬೆಳಗಾಗುವುದರೊಳಗೆ ಪರಿಸ್ಥಿತಿಯನ್ನು ಪಲ್ಲಟಗೊಳಿಸಿದನು. ಮರಳಿನ ಮೈದಾನವು ಗಟ್ಟಿ ಮೈದಾನವಾಯಿತು. ಗಟ್ಟಿಯಾಗಿದ್ದ ಸ್ಥಳ ಜಾರುವ ಸ್ಥಳವಾಯಿತು. ಅಲ್ಲಾಹನು ರಾತ್ರಿಯಲ್ಲಿ ಹಝ್ರತ್ ಪೈಗಂಬರರಿಗೆ(ಸ), ಹತರಾಗುವ ಶತ್ರುಗಳ ಹೆಸರುಗಳನ್ನು ತಿಳಿಸಿದ್ದನು. ಅವರು ಹತರಾಗುವ ಸ್ಥಳವನ್ನೂ ತಿಳಿಸಿದ್ದನು. ಯುದ್ಧದಲ್ಲಿ ಅಲ್ಲಾಹನು ತಿಳಿಸಿದಂತೆಯೇ ಸಂಭವಿಸಿತು. ಶತ್ರುಗಳು ಮೊದಲೇ ತಿಳಿಸಲಾದ ಪ್ರಕಾರ ಹತರಾದರು. ಎರಡು ಸೈನ್ಯಗಳು ಯುದ್ಧ ಮಾಡಲು ಎದುರು ಬದುರಾಗಿ ನಿಂತಾಗ ಹಝ್ರತ್ ಪೈಗಂಬರರ(ಸ) ಶಿಷ್ಯರು ತೋರಿಸಿದ ನಿಷ್ಠೆ ಈ ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

ಮುಸ್ಲಿಮ್ ಸೈನ್ಯದಲ್ಲಿದ್ದ ಕೆಲವು ಅನುಭವಿ ದಂಡನಾಯಕರಲ್ಲಿ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಸಹ ಒಬ್ಬರಾಗಿದ್ದರು. ಅವರು ಹೀಗೆಂದು ವರದಿ ಮಾಡುತ್ತಾರೆ:

"ನನ್ನ ಮೇಲೆ ಬಹಳ ದೊಡ್ಡ ಜವಾಬ್ದಾರಿ ಬಂದು ಬೀಳುವುದೆಂದು ನಾನು ಭಾವಿಸಿದ್ದೆನು. ಆ ಭಾವನೆಯಿಂದ ನಾನು ನನ್ನ ಎಡಬಲ ಭಾಗಗಳನ್ನು ನೋಡಿದಾಗ ನನ್ನ ಎಡಬಲ ಭಾಗಗಳಲ್ಲಿ ಮದೀನದ ಇಬ್ಬರು ಹುಡುಗರು ನಿಂತಿದ್ದರು. ಆಗ ನನ್ನ ಧೃತಿಗೆಟ್ಟಿತು. ನಾನು ಯೋಚಿಸಿದೆ: ಒಬ್ಬ ಶೂರನಾದ ಸೇನಾನಾಯಕನಿಗೆ ಹೋರಾಡಲು ಆತನ ಎಡಬಲ ಭಾಗಗಳಲ್ಲಿ ಬಲಿಷ್ಠರಾದ ಸೈನಿಕರಿರಬೇಕಾದುದು ಅತ್ಯಾವಶ್ಯಕವಾಗಿದೆ. ಹೀಗಾದರೆ ಶತ್ರುಗಳ ಸೈನ್ಯದ ಮಧ್ಯೆ ಧೈರ್ಯದಿಂದ ನುಗ್ಗಬಹುದು. ಆದರೆ ನನ್ನ ಎಡಬಲ ಬದಿಗಳಲ್ಲಿ ಅನುಭವಹೀನರಾದ ಮದೀನದ ಹುಡುಗರು ಇದ್ದಾರೆ. ನಾನು ಈ ದಿನ ನನ್ನ ಪರಿಣತಿಯನ್ನು ಹೇಗೆ ತಾನೆ ಪ್ರದರ್ಶಿಸಬಲ್ಲೆನು? ಈ ಯೋಚನೆ ನನ್ನ ಮನಸ್ಸಿನಲ್ಲಿ ಹೊಳೆಯುತ್ತಾ ಇದ್ದಾಗ ನನ್ನ ಒಂದು ಬದಿಯಲ್ಲಿದ್ದ ಹುಡುಗ ತನ್ನ ಮೊಣಕೈಯಿಂದ ನನ್ನ ಪಕ್ಕಕ್ಕೆ ಗುದ್ದಿದನು. ನಾನು ಆತನ ಕಡೆಗೆ ಗಮನಹರಿಸಿದಾಗ ಆತನು ನನ್ನ ಕಿವಿಯಲ್ಲಿ ಹೀಗೆಂದನು: 'ಚಾಚಾಜಿ, ಅಲ್ಲಾಹನ ಪೈಗಂಬರ್‌ರಿಗೆ ಅಬೂಜಹಲ್ ಬಹಳ ಕಷ್ಟ ಕೊಡುತ್ತಿದ್ದನೆಂದು ನಾವು ತಿಳಿದಿರುವೆವು. ಈ ದಿನ ಅವನನ್ನು ಎದುರಿಸಿ ಹೋರಾಡಬೇಕೆಂದು ನಾನು ಬಯಸುತ್ತೇನೆ. ಅವನು ಯಾರೆಂದು ನನಗೆ ತೋರಿಸಿಕೊಡಿರಿ.' ನಾನು ಅವನಿಗೆ ಉತ್ತರ ನೀಡುವ ಮೊದಲೇ ನನ್ನ ಇನ್ನೊಂದು ಬದಿಗಿದ್ದವನು ಮೊಣಕೈಯಿಂದ ನನ್ನ ಪಕ್ಕಕ್ಕೆ ಗುದ್ದಿದನು. ನಾನು ಆತನ ಕಡೆಗೆ ಗಮನಹರಿಸಿದಾಗ ಆತನು ಸಹ ಇನ್ನೊಂದು ಬದಿಗಿದ್ದವನು ಕೇಳಿದ ಪ್ರಶ್ನೆಯನ್ನೇ ಮೆಲ್ಲಗೆ ಕೇಳಿದನು. ನಾನು ಅವರ ಧೈರ್ಯದಿಂದ ಆಶ್ಚರ್ಯಚಕಿತನಾದೆನು. ನಾನು ನುರಿತ ಸೈನಿಕನಾಗಿದ್ದರೂ ವಿರೋಧಿ ಸೈನ್ಯದ ಸೇನಾಧಿಪತಿಯನ್ನು ಒಬ್ಬಂಟಿಗನಾಗಿ ಆಕ್ರಮಿಸಬಲ್ಲೆನೆಂದು ನಾನು ಗ್ರಹಿಸಿಯೇ

ಇರಲಿಲ್ಲ. ನಾನು ಅವರ ಪ್ರಶ್ನೆಗೆ ಉತ್ತರಿಸಲು ನನ್ನ ಬೆರಳನ್ನು ಬೊಟ್ಟು ಮಾಡಿ ಹೇಳಿದೆ: 'ಶತ್ರು ಸೈನ್ಯದ ಹಿಂಭಾಗದಲ್ಲಿ ಮುಡಿಯಿಂದ ಅಡಿಯ ತನಕ ಆಯುಧಧಾರಿಯಾಗಿ ನಿಂತಿರುವವನೇ ಅಬೂಜಹಲ್, ಅವನ ಮುಂದೆ ಹಿರಿದು ಹಿಡಿದ ಖಡ್ಗಧಾರಿಗಳಾದ ಇಬ್ಬರು ನುರಿತ ಸೈನ್ಯಾಧಿಕಾರಿಗಳು ನಿಂತಿರುವರು.' ಹೀಗೆ ಹೇಳುತ್ತಾ ನಾನು ನನ್ನ ಬೆರಳನ್ನು ತಗ್ಗಿಸಿರಲಿಲ್ಲ. ಅಷ್ಟರಲ್ಲಿಯೇ ಗುಬ್ಬಿಯ ಮೇಲೆ ಆಕ್ರಮಣ ಮಾಡುವ ಗಿಡುಗನ ಹಾಗೆ ಅವರು ಚೀತ್ಕಾರ ಮಾಡುತ್ತಾ ಶತ್ರು ಸೈನ್ಯದೊಳಗೆ ನುಗ್ಗಿದರು. ಅವರ ಆಕ್ರಮಣ ಹಠಾತ್ತಾಗಿ ಯಾರೂ ಊಹಿಸದ ರೀತಿಯಲ್ಲಿ ಸಂಭವಿಸಿತು. ಯಾರ ಖಡ್ಗವೂ ಅವರ ಮೇಲೆತ್ತಲು ಸಾಧ್ಯವಾಗಲಿಲ್ಲ. ಅವರು ಬಾಣದಂತೆ ವೇಗವಾಗಿ ಅಬೂಜಹಲನನ್ನು ತಲಪಿದರು. ಅಬೂಜಹಲನ ಕಾವಲುಗಾರರು ಅವರ ಮೇಲೆ ಖಡ್ಗ ಪ್ರಹಾರ ಮಾಡಿದರು. ಕಾವಲುಗಾರರಲ್ಲಿ ಒಬ್ಬನ ಪ್ರಹಾರ ವ್ಯರ್ಥವಾಯಿತು. ಇನ್ನೊಬ್ಬನ ಪ್ರಹಾರದಿಂದ ಒಬ್ಬ ಯುವಕನ ಕೈ ತುಂಡರಿಸಲ್ಪಟ್ಟಿತು. ಆದರೆ ಅವರಿಬ್ಬರೂ ಅಬೂಜಹಲನ ಕಡೆಗೆ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಇನ್ನುಳಿದ ಸಂಗತಿಗಳ ಕಡೆಗೆ ನಿರ್ಲಕ್ಷ್ಯದಿಂದಿದ್ದರು. ಅವರು ಅಬೂಜಹಲನನ್ನು ಎಷ್ಟು ಕಠಿಣವಾಗಿ ಆಕ್ರಮಿಸಿದರೆಂದರೆ ಅವನು ನೆಲಕ್ಕೆ ಬಿದ್ದನು. ಅವರು ಅವನನ್ನು ಬಹಳ ತೀವ್ರವಾಗಿ ಗಾಯಗೊಳಿಸಿದರು. ಆದರೆ ಅವರು ಖಡ್ಗ ಚಲಾಯಿಸುವ ವಿದ್ಯೆಯಲ್ಲಿ ಪಾರಂಗತರಾಗದ ಕಾರಣ ಆತನನ್ನು ಕೊಲ್ಲಲು ಸಾಧ್ಯವಾಗಲಿಲ್ಲ."

ಮಕ್ಕದ ಜನರು ಹಝ್ರತ್ ಪೈಗಂಬರರ(ಸ) ಮೇಲೆ ಮತ್ತು ಶಿಷ್ಯರ ಮೇಲೆ ಮಾಡುತ್ತಿದ್ದ ಹಿಂಸಾಚಾರಗಳು ಹತ್ತಿರದಿಂದ ನೋಡುವವರಿಗೆ ಎಷ್ಟು ಭಯಾನಕವಾಗಿದ್ದುವು ಎಂದು ಮೇಲಿನ ಸಂಭವದಿಂದ ಸ್ಪಷ್ಟವಾಗುತ್ತದೆ. ಮಕ್ಕದ ಜನರು ಮಾಡುತ್ತಿದ್ದ ದೌರ್ಜನ್ಯಗಳನ್ನು ಚರಿತ್ರೆಯಲ್ಲಿ ಓದಿ ಇಂದು ಸಹ ಒಬ್ಬ ಸಜ್ಜನನ ಹೃದಯವು ವೇದನೆಯಿಂದ ಭರಿತವಾಗುತ್ತದೆ ಮತ್ತು ಖೇದದಿಂದ ಆತನಿಗೆ ರೋಮಾಂಚನವಾಗುತ್ತದೆ. ಆದರೆ ಆ ದೌರ್ಜನ್ಯಗಳನ್ನು ಕಣ್ಣಾರೆ ಕಂಡವರಿಂದ ಮದೀನದ ಜನರು ಕೇಳಿ ತಿಳಿದಿದ್ದರು. ಒಂದು ಕಡೆ ಹಝ್ರತ್ ಪೈಗಂಬರರ(ಸ) ಪವಿತ್ರ ಮತ್ತು ಶಾಂತಿ ಬಯಸುವ ಜೀವಿತವನ್ನು ಅವರು ನೋಡುತ್ತಿದ್ದರು. ಇನ್ನೊಂದು ಕಡೆ ಮಕ್ಕದ ಜನರ ಮನುಷ್ಯತ್ವ ವಿಹೀನ ದೌರ್ಜನ್ಯಗಳ ಬಗ್ಗೆ ಅವರು ಆಲಿಸುತ್ತಿದ್ದರು. ಆಗ ಅವರು ಪರಿತಾಪ ಹೃದಯರಾಗುತ್ತಾ ಹೀಗೆ ಯೋಚಿಸುತ್ತಿದ್ದರು:

ಹಝ್ರತ್ ಪೈಗಂಬರರು(ಸ) ತಮ್ಮ ಸಜ್ಜನಿಕೆಯ ಕಾರಣದಿಂದ ಮತ್ತು ಪರಹಿತ ಭಾವನೆಯ ಮನೋಭಾವದಿಂದ ಶತ್ರುಗಳಿಗೆ ತಕ್ಕುದಾದ ಪ್ರತ್ಯುತ್ತರ ನೀಡಲಿಲ್ಲ. ಆದರೆ ಮಕ್ಕದವರು ನಮ್ಮ ಮುಂದೆ ಬಂದಿದ್ದರೆ ಚೆನ್ನಾಗಿತ್ತು. ನಾವು ಅವರಿಗೆ ಮನವರಿಕೆ ಮಾಡಿ ಕೊಡುತ್ತಿದ್ದೆವು. ಏನೆಂದರೆ, ಅವರ ದೌರ್ಜನ್ಯಗಳಿಗೆ ಪ್ರತೀಕಾರ ಮಾಡದೆ ಇದ್ದುದು ಮುಸ್ಲಿಮರು ಬಲಹೀನರಾದುದರಿಂದ ಅಲ್ಲ, ಮುಸ್ಲಿಮರಿಗೆ ಅಲ್ಲಾಹನು ಅವುಗಳಿಗೆ ಪ್ರತೀಕಾರ ಮಾಡಲು ಅನುಮತಿ ನೀಡದುದರಿಂದಲೇ ಅವರು ಹಾಗೆ ವರ್ತಿಸಿದರು.



ಮುಸ್ಲಿಮರ ಮಾನಸಿಕ ಸ್ಥಿತಿ ಹೇಗಿತ್ತೆಂದು ಮತ್ತೊಂದು ಸಂಭವದಿಂದಲೂ ಸ್ಪಷ್ಟವಾಗುತ್ತದೆ.

ಅಬೂಜಹಲನು ಗ್ರಾಮೀಣ ಅರಬಿಗಳ ಒಬ್ಬ ನಾಯಕನನ್ನು ಮುಸ್ಲಿಮರ ಸೈನ್ಯದ ಸಂಖ್ಯೆಯನ್ನು ಅಂದಾಜು ಮಾಡಲು ಕಳುಹಿಸಿದ್ದನು. ಆತನು ಮರಳಿ ಬಂದು ಮುಸ್ಲಿಮರು 300–325 ಇರಬಹುದೆಂದು ಹೇಳಿದನು. ಆಗ ಅಬೂಜಹಲನೂ ಅವನ ಸಂಗಡಿಗರೂ ಹರ್ಷಗೊಂಡು ಹೇಳಿದರು:

"ಈಗ ಮುಸ್ಲಿಮರು ಸುರಕ್ಷಿತರಾಗಿ ಇಲ್ಲಿಂದ ಎಲ್ಲಿಗೆ ತಾನೆ ಹೋಗಬಲ್ಲರು?"

ಆದರೆ ಆ ಗುಪ್ತಚಾರ ಅವರಿಗೆ ಹೀಗೆ ಹೇಳಿದನು: "ಓ ಮಕ್ಕದವರೇ, ನೀವು ಅವರ ವಿರುದ್ಧ ಯುದ್ಧ ಮಾಡಬಾರದೆಂದೇ ನನ್ನ ಉಪದೇಶವಾಗಿದೆ. ನಾನು ಎಷ್ಟೆಲ್ಲಾ ಮುಸ್ಲಿಮರನ್ನು ನೋಡಿದೆನೋ ಅವರನ್ನೆಲ್ಲಾ ನೋಡಿ ನನಗುಂಟಾದ ಭಾವನೆ ಏನೆಂದರೆ, ಒಂಟೆಗಳ ಮೇಲೇರಿ ಕುಳಿತಿರುವುದು ಮನುಷ್ಯರಲ್ಲ; ಮರಣವೇ ಆಗಿದೆ. ಎಂದರೆ ಅವರಲ್ಲಿ ಪ್ರತಿಯೊಬ್ಬನು ಮೃತನಾಗಲು ಈ ರಣಾಂಗಣಕ್ಕೆ ಬಂದಿದ್ದಾನೆ; ಜೀವಸಹಿತವಾಗಿ ಮರಳಿ ಹೋಗಲಿಕ್ಕೋಸ್ಕರವಲ್ಲ. ಯಾರು ಮರಣವನ್ನು ತನಗೆ ಸುಲಭ ಗೊಳಿಸುತ್ತಾನೋ ಮತ್ತು ಮರಣವನ್ನು ಎದುರುಗೊಳ್ಳಲು ಸಿದ್ಧನಾಗುತ್ತಾನೋ ಅಂತಹವನನ್ನು ಎದುರಿಸುವುದು ಸುಲಭವಲ್ಲ.

## ಒಂದು ಮಹತ್ತಾದ ಭವಿಷ್ಯವಾಣಿಯ ಈಡೇರಿಕೆ

ಯುದ್ಧ ಪ್ರಾರಂಭವಾಗುವ ಸಮಯವು ಸಮೀಪಿಸಿದಾಗ ಹಝ್ರತ್ ಪೈಗಂಬರ್(ಸ) ತಾವು ಕುಳಿತು ಪ್ರಾರ್ಥಿಸುತ್ತಿದ್ದ ಸ್ಥಳದಿಂದ ಹೊರಗೆ ಬಂದು ಹೀಗೆಂದರು:

"ಸಯುಹ್‌ಝುಮುಲ್ ಜಮ್‌ಉ ವ ಯುವಲ್ಲೂನದ್ದುಬುರ್." ಅಂದರೆ, ವಿರೋಧಿಗಳ ಸೈನ್ಯವು ಸೋಲಿಸಲ್ಪಡುವುದು ಮತ್ತು ಬೆನ್ನು ತಿರುಗಿಸಿ ಅದು ರಣಾಂಗಣದಿಂದ ಓಡಿಹೋಗುವುದು.

ಹಝ್ರತ್ ಪೈಗಂಬರ್(ಸ) ಹೇಳಿದ ಮೇಲಿನ ವಾಕ್ಯವು ಪವಿತ್ರ ಖುರ್‌ಆನಿನ ಒಂದು ಭವಿಷ್ಯವಾಣಿಯಾಗಿದ್ದು ಮಕ್ಕದಲ್ಲಿಯೇ ಅವರಿಗೆ ಈ ಯುದ್ಧದ ಬಗ್ಗೆ ಅವತೀರ್ಣವಾದ ವಚನವಾಗಿತ್ತು.

ಮಕ್ಕದಲ್ಲಿ ಮುಸ್ಲಿಮರು ಅವಿಶ್ವಾಸಿಗಳ ದೌರ್ಜನ್ಯಗಳಿಗೆ ಗುರಿಯಾಗುತ್ತಿದ್ದಾಗ ಮತ್ತು ಅವರು ವಿವಿಧ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾಗ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಈ ಕೆಳಗಿನ ವಚನಗಳನ್ನು ಅವತೀರ್ಣಗೊಳಿಸಿದ್ದನು:

**"(ಓ ಮಕ್ಕದ ಜನರೇ,) ಫಿರ್‌ಔನನ ಜನರ ಬಳಿಗೆ ಸಹ ಮುನ್ನೆಚ್ಚರಿಕೆಗಾರರು ಬಂದಿದ್ದರು. ಅವರು ನಮ್ಮ ಎಲ್ಲ ದೃಷ್ಟಾಂತಗಳನ್ನೂ ಸುಳ್ಳಾಗಿಸಿದರು. ಆದ್ದರಿಂದ ಒಬ್ಬ ಪ್ರತಾಪವಂತ ಹಾಗೂ ಸರ್ವಶಕ್ತನು ಹಿಡಿಯುವಂತೆ ನಾವು ಅವರನ್ನು ಹಿಡಿದು**

**ಶಿಕ್ಷಿಸಿದೆವು. (ಓ ಮಕ್ಕದ ಜನರೇ,) ನಿಮ್ಮಲ್ಲಿರುವ ಅವಿಶ್ವಾಸಿಗಳು ಅವರಿಗಿಂತ (ಫಿರ್‌ಔನನ ಕಾಲದ ಅವಿಶ್ವಾಸಿಗಳಿಗಿಂತ) ಉತ್ತಮರೇನು? ಅಥವಾ ನಿಮಗೆ (ಹಿಂದಿನ) ದಿವ್ಯಗ್ರಂಥಗಳಲ್ಲಿ (ಶಿಕ್ಷೆಯಿಂದ) ವಿನಾಯಿತಿಯೇನಾದರೂ ಇದೆಯೇ? ಅಥವಾ 'ನಾವು ಜಯಶಾಲಿಯಾಗುವ ಪಂಗಡ' ಎಂದು ಅವರು ಹೇಳುತ್ತಾರೇನು? ಆದರೆ ಆ ಪಂಗಡದವರು ಶೀಘ್ರದಲ್ಲೇ ಪರಾಜಯಗೊಳ್ಳುವರು; ಅವರು ಬೆನ್ನು ಹಾಕಿ ಓಡುವರು. ಅದು ಅವರಿಗೆ ನಿರ್ದಿಷ್ಟಪಡಿಸಿದ ಸಮಯವಾಗಿದೆ. ಆ ಘಳಿಗೆ ಅತ್ಯಂತ ಆಪತ್ಕರ ಹಾಗೂ ಅತಿ ಕಹಿಯಾಗಿ ಇರುವುದು. ಖಂಡಿತವಾಗಿಯೂ ಪಾಪಿಗಳು ಮಾರ್ಗಭ್ರಂಶತೆ ಮತ್ತು ಹುಚ್ಚುತನದಲ್ಲಿರುತ್ತಾರೆ. ಆ ದಿನದಂದು ಅವರನ್ನು ತಮ್ಮ ಮುಖಂಡರ ಜೊತೆಗೆ ನರಕಕ್ಕೆ ಎಳೆದೊಯ್ಯಲಾಗುವುದು. 'ನರಕದ ಸ್ಪರ್ಶವನ್ನು ಸವಿಯಿರಿ' (ಎಂದು ಅವರೊಡನೆ ಹೇಳಲಾಗುವುದು)."** (54 : 42–49)

ಇವು ಪವಿತ್ರ ಖುರ್‌ಆನಿನ ಸೂರತುಲ್ ಖಮರ್ ಎಂಬ ಅಧ್ಯಾಯದ ವಚನಗಳಾಗಿವೆ. ಎಲ್ಲಾ ಮುಸ್ಲಿಮ್ ವರದಿಗಾರರು ಈ ವಚನಗಳು ಮಕ್ಕದಲ್ಲಿ ಅವತೀರ್ಣವಾದುವು ಎಂದು ದಾಖಲಿಸಿದ್ದಾರೆ. ಈ ವಚನಗಳು ಹಝ್ರತ್ ಪೈಗಂಬರ್(ಸ) ತಾನು ಪ್ರವಾದಿ ಎಂದು ವಾದಿಸಿದ ನಂತರ 5ನೇ ವರ್ಷದಿಂದ 10ನೇ ವರ್ಷದ ಕಾಲಾವಧಿಯೊಳಗೆ ಅವತೀರ್ಣಗೊಂಡಿವೆ ಎಂದು ಮುಸ್ಲಿಮ್ ವಿದ್ವಾಂಸರು ತೀರ್ಮಾನಿಸಿದ್ದಾರೆ. ಅಂದರೆ, ಈ ವಚನಗಳು ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋಗುವುದಕ್ಕೆ ಕನಿಷ್ಠ ಪಕ್ಷ 3 ವರ್ಷ ಮೊದಲು ಅವತೀರ್ಣಗೊಂಡವು. ಆದರೆ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆಹೋಗುವುದಕ್ಕೆ 8 ವರ್ಷ ಮೊದಲು ಇವು ಅವತೀರ್ಣ ಗೊಂಡಿರುವ ಸಾಧ್ಯತೆ ಇದೆ. ಯುರೋಪಿನ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಸಹ ಇದನ್ನು ಒಪ್ಪಿಕೊಂಡಿದ್ದಾರೆ. ನೋಲ್‌ಡೀಕ್(Noldeke) ಎಂಬವರು ಈ ವಚನಗಳು ಪ್ರವಾದಿತ್ವ ವಾದದ ಐದನೆಯ ವರ್ಷದ ನಂತರದವು ಎಂದು ಕಾಲನಿರ್ಣಯ ಮಾಡಿದ್ದಾರೆ. ರೆವರೆಂಡ್ ವ್ಹೇರಿ(Wherry) ಹೀಗೆ ಹೇಳುತ್ತಾರೆ: "ನೋಲ್‌ಡೀಕ್ ಈ ಅಧ್ಯಾಯದ ಕಾಲವನ್ನು ಸ್ವಲ್ಪ ಹಿಂದೆ ಸರಿಸಿ ಹೇಳಿದ್ದಾರೆ." ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಸೂಚಿಸಿದ್ದಾರೆ: "ಈ ಅಧ್ಯಾಯ ಪೈಗಂಬರರು ವಲಸೆ ಹೋಗುವುದಕ್ಕೆ 6 ಅಥವಾ 7 ವರ್ಷ ಮೊದಲಿನದು."

ಅವರ ಅಭಿಪ್ರಾಯವನ್ನು ಬೇರೆ ರೀತಿ ಹೇಳುವುದಾದರೆ, ಅವರು ಈ ಅಧ್ಯಾಯದ ಕಾಲವನ್ನು ಪ್ರವಾದಿತ್ವ ವಾದದ ಆರನೆಯ ಅಥವಾ ಏಳನೆಯ ವರ್ಷವೆಂದು ನಿರ್ಧರಿಸಿದ್ದಾರೆ.

ಒಟ್ಟಾರೆ ಹೇಳುವುದಾದರೆ, ಮುಸ್ಲಿಮ್ ವಿರೋಧಿಗಳು ಸಹ ಪವಿತ್ರ ಖುರ್‌ಆನಿನ ಈ ಅಧ್ಯಾಯವು ಹಝ್ರತ್ ಪೈಗಂಬರರ(ಸ) ವಲಸೆಗೆ ಹಲವು ವರ್ಷ ಹಿಂದಿನದೆಂದು ಹೇಳುತ್ತಾರೆ.

ನೀವು ಚಿಂತಿಸಿರಿ, ಅಷ್ಟು ಹಿಂದೆ, ಈ ಯುದ್ಧದ ಬಗ್ಗೆ ಎಷ್ಟು ಸ್ಪಷ್ಟವಾದ



ಸಮಾಚಾರ ನೀಡಲಾಗಿತ್ತು ಮತ್ತು ಅವಿಶ್ವಾಸಿಗಳ ಗತಿ ತಿಳಿಸಲಾಗಿತ್ತು!

ಹಝ್ರತ್ ಪೈಗಂಬರ್(ಸ) ಬದ್ರ್ ಯುದ್ಧ ಪ್ರಾರಂಭವಾಗುವ ಮೊದಲು ಈ ವಚನಗಳನ್ನು ಪಠಿಸಿ ಅಲ್ಲಾಹನ ವಾಗ್ದಾನ ಈಡೇರುವ ಸಮಯ ಸನ್ನಿಹಿತವಾಯಿತೆಂದು ಹೇಳಿದರು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯೆಶಾಯ ಪ್ರವಾದಿ ಮೊದಲೇ ನುಡಿದ ಭವಿಷ್ಯ[40] ಮತ್ತು ಪವಿತ್ರ ಖುರ್‌ಆನ್ ಯುದ್ಧ ಪ್ರಾರಂಭವಾಗುವುದಕ್ಕೆ ಆರು ಅಥವಾ ಎಂಟು ವರ್ಷಗಳ ಮೊದಲು ನುಡಿದ ಭವಿಷ್ಯ ಈಡೇರುವ ಕಾಲವು ಸನ್ನಿಹಿತವಾಯಿತು. ಮುಸ್ಲಿಮರು ಈ ಯುದ್ಧಕ್ಕಾಗಿ ಸಾಕಷ್ಟು ಸಿದ್ಧತೆಗಳನ್ನು ಮಾಡಿರದಿದ್ದರೂ ಅವಿಶ್ವಾಸಿಗಳಿಗೆ ಅವರ ಕೆಲವು ಸಂಗಡಿಗರು ಯುದ್ಧಮಾಡಬಾರದೆಂದು ಸಲಹೆ ನೀಡಿದ್ದರೂ ಮೇಲಿನ ಕಾರಣದಿಂದ ಈ ಯುದ್ಧವು ನಡೆಯಿತು. ಮುಸ್ಲಿಮರ 313 ಮಂದಿಯಲ್ಲಿ ಬಹುತೇಕ ಜನರು ಅನನುಭವಿಗಳಾಗಿದ್ದರೂ ಎಲ್ಲರೂ ಸಾಕಷ್ಟು ಶಸ್ತ್ರಗಳಿಂದ ಸಜ್ಜಿತರಾಗಿರಲಿಲ್ಲವಾದರೂ ಅವಿಶ್ವಾಸಿಗಳ ಶಸ್ತ್ರಸಜ್ಜಿತರೂ ಯುದ್ಧಾನುಭವ ಗಳಿಸಿದವರೂ ಆದ ಒಂದು ಸಾವಿರ ಸೈನಿಕರನ್ನು ಎದುರಿಸಿ ಹೋರಾಡಲು ಸನ್ನದ್ಧರಾದರು.

ಯುದ್ಧ ಪ್ರಾರಂಭವಾಯಿತು. ಕೆಲವೇ ತಾಸುಗಳಲ್ಲಿ ಅರಬಿಗಳ ದೊಡ್ಡ ದೊಡ್ಡ ಮುಖಂಡರು ಕೊಲ್ಲಲ್ಪಟ್ಟರು. ಯೆಶಾಯ ಪ್ರವಾದಿಯ ಭವಿಷ್ಯವಾಣಿಯ ಪ್ರಕಾರ "ಕೇದಾರಿನ ಸಕಲ ವೈಭವ ಇಲ್ಲವಾಯಿತು." ಮಕ್ಕದ ಸೈನ್ಯವು ಕೆಲವು ಶವಗಳನ್ನು ಮತ್ತು ಮುಸ್ಲಿಮರಿಂದ ಸೆರೆಹಿಡಿಯಲ್ಪಟ್ಟ ಕೆಲವರನ್ನು ಹಿಂದೆ ಬಿಟ್ಟು ಕಂಗಾಲಾಗಿ ಮಕ್ಕದ ಕಡೆಗೆ ಓಡಿಹೋಯಿತು. ಸೆರೆಹಿಡಿಯಲ್ಪಟ್ಟವರಲ್ಲಿ ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪ ಹಝ್ರತ್ ಅಬ್ಬಾಸ್ ಸಹ ಇದ್ದರು. ಅವರು ಹಝ್ರತ್ ಪೈಗಂಬರರಿಗೆ(ಸ) ಮಕ್ಕದಲ್ಲಿ ಬೆಂಬಲ ನೀಡುತ್ತಿದ್ದರು. ಅವರನ್ನು ಮಕ್ಕದ ಜನರು ಬಲವಂತಪಡಿಸಿ ಯುದ್ಧಕ್ಕೆ ಕರೆತಂದಿದ್ದರು. ಇದೇ ರೀತಿ ಸೆರೆಯಾಳುಗಳಲ್ಲಿ ಹಝ್ರತ್ ಪೈಗಂಬರರ(ಸ) ಹಿರಿಯ ಮಗಳ ಪತಿ ಅಬುಲ್ ಆಸ್ ಸಹ ಇದ್ದರು. ಕೊಲ್ಲಲ್ಪಟ್ಟವರಲ್ಲಿ ಮಕ್ಕದ ಜನರ ಸೈನ್ಯದ ಸೇನಾಧಿಪತಿಯೂ ಇಸ್ಲಾಮ್ ಧರ್ಮದ ಅತ್ಯಂತ ದೊಡ್ಡ ಶತ್ರುವೂ ಆಗಿದ್ದ ಅಬೂಜಹಲನಿದ್ದನು.

## ಬದ್ರ್ ಯುದ್ಧದ ಸೆರೆಯಾಳುಗಳು[41]

ಹದಿನಾಲ್ಕು ವರ್ಷಗಳಿಂದ ತಾನು ಪ್ರಕಟಿಸುತ್ತಾ ಇದ್ದ ಭವಿಷ್ಯವಾಣಿಗಳು ಮತ್ತು ಹಿಂದಿನ ಪ್ರವಾದಿಗಳು ಈ ದಿನದ ಬಗ್ಗೆ ಹೇಳಿದ ಭವಿಷ್ಯವಾಣಿಗಳು ಈಡೇರಿದುದರಿಂದ ಹಝ್ರತ್ ಪೈಗಂಬರ್(ಸ) ಬದ್ರ್ ಯುದ್ಧದ ಜಯದಲ್ಲಿ

40. ಯೆಶಾಯ 21:13–17 ನೋಡಿರಿ.

41. ಅಸ್ಸೀರತುಲ್ ಹಲ್‌ಬಿಯ್ಯ ಸಂಪುಟ 2 ಪುಟ 219. ರಝುರ್‌ಖಾನಿ ಸಂಪುಟ 1 ಪುಟ 440–441.

ಸಂತೋಷಭರಿತರಾಗಿದ್ದರು. ಆದರೆ ಮಕ್ಕದ ಶತ್ರು ನಾಯಕರ ದಯನೀಯವಾದ ಅಂತ್ಯ ಸಹ ಅವರ ದೃಷ್ಟಿಯಲ್ಲಿದ್ದಿತು. ಅವರ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಸಂತೋಷದಿಂದ ಕುಣಿದಾಡುತ್ತಿದ್ದರು. ಆದರೆ ಮಕ್ಕದ ಸೆರೆಯಾಳುಗಳು ಹಗ್ಗದಿಂದ ಬಂಧಿಸಲ್ಪಟ್ಟು ಒಯ್ಯಲ್ಪಡುವುದನ್ನು ಹಝ್‌ರತ್ ಪೈಗಂಬರ್(ಸ) ಕಂಡಾಗ ಅವರ ಮತ್ತು ಅವರ ಆತ್ಮೀಯ ಸ್ನೇಹಿತ ಹಝ್‌ರತ್ ಅಬೂಬಕರ್‌ರ(ರ) ಕಣ್ಣುಗಳಿಂದ ತನ್ನಿಂದ ತಾನೆ ಅಶ್ರುಧಾರೆ ಹರಿಯಿತು. ಅವರಿಬ್ಬರ ಮುಂದೆ ಹಝ್‌ರತ್ ಉಮರ್ (ಅವರು ಅನಂತರ ದ್ವಿತೀಯ ಖಲೀಫರಾದರು) ಬಂದಾಗ ವಿಜಯ ಮತ್ತು ಸಂತೋಷದ ಸಂದರ್ಭದಲ್ಲಿ ಕಣ್ಣೀರು ಸುರಿಸುವುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ಅವರು ಕೇಳಿದರು: "ಓ ಅಲ್ಲಾಹನ ಪೈಗಂಬರರೇ, ಈಗ ತಾವು ಅಳುವುದೇಕೆಂದು ತಿಳಿಸಿರಿ. ಅಳಬಹುದಾದ ಕಾರಣವಿದ್ದರೆ ನಾನು ಸಹ ಅಳುವೆನು ಅಥವಾ ನಾನು ನಿಮ್ಮೊಂದಿಗೆ ರೋದಿಸುತ್ತಿರುವ ಹಾಗೆ ನನ್ನ ಮುಖಚರ್ಯೆಯನ್ನು ಮಾಡಿಕೊಳ್ಳುವೆನು." ಹಝ್‌ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನ ಆಜ್ಞೆಗಳನ್ನು ಪಾಲಿಸದ ಕಾರಣದಿಂದ ಮಕ್ಕದವರ ಗತಿ ಏನಾಗಿದೆ ಎಂದು ನೀವು ನೋಡುತ್ತಾ ಇಲ್ಲವೇ?"

ಹಝ್‌ರತ್ ಪೈಗಂಬರರ(ಸ) ನ್ಯಾಯತತ್ಪರತೆ ಮತ್ತು ನ್ಯಾಯದಾನದ ಬಗ್ಗೆ ಯೆಶಾಯ ಪ್ರವಾದಿ ಪದೇ ಪದೇ ತನ್ನ ಭವಿಷ್ಯವಾಣಿಗಳಲ್ಲಿ ಸೂಚಿಸಿರುವರು. ಅದು ಈ ಸಂದರ್ಭದಲ್ಲಿಯೂ ಒಂದು ಸಂಭವದ ಮೂಲಕ ಸಾಬೀತು ಆಯಿತು. ಮದೀನದ ಕಡೆಗೆ ಮರಳಿ ಹೋಗುತ್ತಿದ್ದಾಗ ರಾತ್ರಿ ಒಂದು ಕಡೆ ತಂಗಿದ್ದಾಗ ಹಝ್‌ರತ್ ಪೈಗಂಬರರಿಗೆ(ಸ) ನಿದ್ರೆ ಬರುತ್ತಾ ಇಲ್ಲವೆಂದು ಶಿಷ್ಯರು ಕಂಡರು. ಆಗ ಶಿಷ್ಯರು ಪರಸ್ಪರ ಆಲೋಚಿಸಿ ಹೀಗೆಂದು ತೀರ್ಮಾನಿಸಿದರು: ಹಝ್‌ರತ್ ಅಬ್ಬಾಸ್ ಹಗ್ಗಗಳಿಂದ ಕಟ್ಟಲ್ಪಟ್ಟ ಕಾರಣ ನಿದ್ರಿಸಲು ಸಾಧ್ಯವಾಗದೆ ನರಳುತ್ತಿದ್ದರು. ಆದುದರಿಂದ ಅವರ ನರಳಾಟದ ಕಾರಣ ಮನನೊಂದುದರಿಂದ ಹಝ್‌ರತ್ ಪೈಗಂಬರರಿಗೆ(ಸ) ನಿದ್ರೆ ಬರುತ್ತಾ ಇಲ್ಲ. ಶಿಷ್ಯರು ಪರಸ್ಪರ ಸಮಾಲೋಚನೆ ನಡೆಸಿ ಹಝ್‌ರತ್ ಅಬ್ಬಾಸ್‌ರನ್ನು ಬಂಧಿಸಿದ ಹಗ್ಗದ ಕಟ್ಟುಗಳನ್ನು ಸಡಿಲಿಸಿದರು. ಹಝ್‌ರತ್ ಅಬ್ಬಾಸ್ ನಿದ್ರಿಸಲು ತೊಡಗಿದರು. ಹಝ್‌ರತ್ ಪೈಗಂಬರ್‌ರಿಗೂ ನಿದ್ರೆ ಬಂತು. ಆದರೆ ಸ್ವಲ್ಪ ಹೊತ್ತಿನ ನಂತರ ಗಾಬರಿಯಿಂದ ಕಣ್ಣು ತೆರೆದು, ಹಝ್‌ರತ್ ಅಬ್ಬಾಸ್ ಮೌನದಿಂದಿರಲು ಕಾರಣವೇನು. ಅವರ ನರಳಾಟ ಏಕೆ ಕೇಳಿಸುವುದಿಲ್ಲ? ಎಂದು ವಿಚಾರಿಸಿದರು. ಹಝ್‌ರತ್ ಅಬ್ಬಾಸ್ ಪ್ರಾಯಶಃ ತನಗುಂಟಾದ ನೋವಿನಿಂದ ಪ್ರಜ್ಞಾಶೂನ್ಯರಾಗಿರಬಹುದೆಂದು ಹಝ್‌ರತ್ ಪೈಗಂಬರ್ ಭಾವಿಸಿದ್ದರು. ಆಗ ಶಿಷ್ಯರು ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ನಿಮ್ಮ ಕಷ್ಟವನ್ನು ನೋಡಿ ನಾವು ಅಬ್ಬಾಸ್‌ರ ಬಂಧನಗಳನ್ನು ಸಡಿಲುಗೊಳಿಸಿದೆವು."

ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ನೀವು ಹಾಗೆ ಮಾಡಿದುದು



ಸರಿಯಲ್ಲ. ಅಬ್ಬಾಸ್‌ರು ನನ್ನ ಸಂಬಂಧಿಕರಾಗಿರುವ ಹಾಗೆ ಬೇರೆ ಸೆರೆಯಾಳುಗಳು ಇನ್ನಿತರರ ಸಂಬಂಧಿಕರಾಗಿದ್ದಾರೆ. ಆದುದರಿಂದ ನೀವು ಎಲ್ಲಾ ಕೈದಿಗಳ ಬಂಧನಗಳನ್ನು ಅವರು ಸುಖವಾಗಿ ನಿದ್ರಿಸುವಂತೆ ಸಡಿಲಿಸಬೇಕು ಅಥವಾ ಅಬ್ಬಾಸ್‌ರ ಬಂಧನಗಳನ್ನು ಬಿಗಿಪಡಿಸಬೇಕು."

ಶಿಷ್ಯರು ಎಲ್ಲಾ ಕೈದಿಗಳ ಬಂಧನಗಳನ್ನು ಸಡಿಲಗೊಳಿಸಿದರು ಮತ್ತು ಅವರನ್ನು ಕಾಯುವ ಹೊಣೆಯನ್ನು ತಾವೇ ವಹಿಸಿಕೊಂಡರು.

ಅನಂತರ ಮದೀನದಲ್ಲಿ ಪ್ರತಿಯೊಬ್ಬ ವಿದ್ಯಾವಂತ ಕೈದಿ ಕನಿಷ್ಠ ಹತ್ತು ಹುಡುಗರಿಗೆ ಓದುಬರಹ ಕಲಿಸಬೇಕೆಂದು ಬಿಡುಗಡೆಗೆ ಪರಿಹಾರವಾಗಿ ಹಝ್‌ರತ್ ಪೈಗಂಬರ್(ಸ) ವಿಧಿಸಿದರು. ಪರಿಹಾರ ನೀಡಲು ಯಾರೂ ಮುಂದೆ ಬರದ ಕೈದಿಗಳನ್ನು ಪರಿಹಾರ ಪಡೆಯದೆ ಹಝ್‌ರತ್ ಪೈಗಂಬರ್(ಸ) ಸ್ವತಂತ್ರಗೊಳಿಸಿದರು. ಪರಿಹಾರ ಧನ ನೀಡಲು ಸಮರ್ಥರಾದ ಧನಿಕರಿಂದ ಪರಿಹಾರ ಧನವನ್ನು ಪಡೆದು ಸ್ವತಂತ್ರ ಗೊಳಿಸಿದರು. ಈ ರೀತಿ ಯುದ್ಧದಲ್ಲಿ ಸೆರೆಸಿಕ್ಕವರನ್ನು ಗುಲಾಮರನ್ನಾಗಿ ಮಾಡುವ ಹಳೆಯ ಸಂಪ್ರದಾಯವನ್ನು ಹಝ್‌ರತ್ ಪೈಗಂಬರ್(ಸ) ಕೊನೆಗೊಳಿಸಿದರು.

## ಉಹುದ್ ಯುದ್ಧ

ಅವಿಶ್ವಾಸಿಗಳ ಸೈನ್ಯವು ಬದ್ರ್ ಯುದ್ಧದ ರಣಾಂಗಣದಿಂದ ಓಡುತ್ತಾ ಇರುವಾಗ, "ನಾವು ಮುಂದಿನ ವರ್ಷ ಪುನಃ ಆಕ್ರಮಣ ಮಾಡುವೆವು ಮತ್ತು ನಮ್ಮ ಸೋಲಿಗೆ ಪ್ರತೀಕಾರ ಮಾಡುವೆವು" ಎಂದು ಘೋಷಿಸಿದ್ದರು. ಅವರು ಒಂದು ವರ್ಷದ ನಂತರ ಪೂರ್ಣ ಸಿದ್ಧತೆಗಳೊಂದಿಗೆ ಮದೀನವನ್ನು ಆಕ್ರಮಣ ಮಾಡಲು ಮಕ್ಕದಿಂದ ಹೊರಟರು. ಮಕ್ಕದವರು ಬದ್ರ್ ಯುದ್ಧದ ಸೋಲಿನ ನಂತರ ಎಷ್ಟು ಕೋಪಾವಿಷ್ಟರಾಗಿದ್ದರೆಂದರೆ ಅವರು, "ಮೃತರಾದವರ ಬಗ್ಗೆ ರೋದಿಸುವ ಅನುಮತಿ ಯಾರಿಗೂ ಇರುವುದಿಲ್ಲ" ಎಂದು ಪ್ರಕಟಿಸಿದ್ದರು. ವ್ಯಾಪಾರ ಮುಗಿಸಿ ಬಂದ ಸಂಚಾರಿ ವ್ಯಾಪಾರಿ ತಂಡಗಳ ಲಾಭಾಂಶವನ್ನು ಮುಂದಿನ ಯುದ್ಧಕ್ಕಾಗಿ ಮೀಸಲಾಗಿಡಬೇಕೆಂದು ಅವರು ಆಜ್ಞಾಪಿಸಿದ್ದರು. ಆದುದರಿಂದ ಬಹಳಷ್ಟು ದೊಡ್ಡ ಸಿದ್ಧತೆಗಳೊಂದಿಗೆ ಮೂರು ಸಾವಿರಕ್ಕಿಂತಲೂ ಹೆಚ್ಚು ಸೈನಿಕರನ್ನೊಳಗೊಂಡ ಒಂದು ಸೈನ್ಯ ಅಬೂ ಸುಫ್‌ಯಾನ್‌ರ ನೇತೃತ್ವದಲ್ಲಿ ಮದೀನವನ್ನು ಆಕ್ರಮಿಸಲು ಹೊರಟಿತು.

ಹಝ್‌ರತ್ ಪೈಗಂಬರ್(ಸ) ಶಿಷ್ಯರೊಂದಿಗೆ, "ನಗರದೊಳಗೆ ಇದ್ದುಕೊಂಡು ಶತ್ರುಗಳನ್ನು ಎದುರಿಸಬೇಕೋ ನಗರದ ಹೊರಗೆ ಹೋಗಿ ಶತ್ರುಗಳನ್ನು ಎದುರಿಸಬೇಕೋ?" ಎಂದು ಸಲಹೆ ಕೇಳಿದರು.

ಹಝ್‌ರತ್ ಪೈಗಂಬರರ(ಸ) ಸ್ವಂತ ಅಭಿಪ್ರಾಯ, ನಗರದೊಳಗಿದ್ದು ಯುದ್ಧ ಮಾಡುವುದಾಗಿತ್ತು. ಶತ್ರುಗಳನ್ನು ಆಕ್ರಮಿಸಲು ಬಿಟ್ಟು ಅವರನ್ನೇ ಆಕ್ರಮಣಕ್ಕೆ ಹೊಣೆಗಾರರನ್ನಾಗಿ ಮಾಡುವುದು ಮತ್ತು ಮುಸ್ಲಿಮರು ನಗರದಲ್ಲಿ ಇದ್ದುಕೊಂಡು

ಸುಲಭವಾಗಿ ಶತ್ರುಗಳನ್ನು ಎದುರಿಸುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. ಆದರೆ ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗದ ಯುವಕರಿಗೆ, "ನಮಗೆ ಅಲ್ಲಾಹನ ಮಾರ್ಗದಲ್ಲಿ ಹುತಾತ್ಮರಾಗಲು ಸಾಧ್ಯವಾಗಲಿಲ್ಲವಲ್ಲ" ಎಂಬ ಖೇದ ಯಾವಾಗಲೂ ಅವರ ಹೃದಯಗಳಲ್ಲಿತ್ತು. ಅವರು "ನಮ್ಮನ್ನು ಹುತಾತ್ಮರಾಗಲು ಏಕೆ ತಡೆಯಲಾಗುತ್ತದೆ?" ಎಂದು ಹೇಳಿ ಯುದ್ಧವನ್ನು ಮದೀನದ ಹೊರಗೆ ಮಾಡುವ ಬಗ್ಗೆ ಒತ್ತಾಯಪಡಿಸಿದರು.

ಹಝ್ರತ್ ಪೈಗಂಬರ್(ಸ) ಶಿಷ್ಯರಿಂದ ಸಲಹೆ ಕೇಳುತ್ತಾ ಇದ್ದಾಗ ತಾನು ಕಂಡ ಒಂದು ಸ್ವಪ್ನವನ್ನು ಹೀಗೆ ವಿವರಿಸಿದರು: "ನಾನು ಕೆಲವು ಗೋವುಗಳನ್ನು ಕಂಡೆನು. ಆ ಗೋವುಗಳು ವಧಿಸಲ್ಪಟ್ಟುದಾಗಿ ಸಹ ನಾನು ಕಂಡೆನು. ನನ್ನ ಖಡ್ಗದ ತುದಿ ತುಂಡಾದುದನ್ನು ಮತ್ತು ನನ್ನ ಕೈ ಒಂದು ಬಲಿಷ್ಠ ಸುರಕ್ಷಿತ ಕವಚದೊಳಗೆ ತೂರಿಸಿದಂತೆಯೂ ನಾನು ಕಂಡೆನು.[42] ಒಂದು ಟಗರಿನ ಮೇಲೆ ಸವಾರಿಮಾಡಿದುದಾಗಿಯೂ ನಾನು ಕಂಡೆನು."[43]

ಶಿಷ್ಯರು ಕೇಳಿದರು: "ತಾವು ಈ ಸ್ವಪ್ನಗಳಿಗೆ ಹೇಗೆ ವ್ಯಾಖ್ಯಾನವನ್ನು ನೀಡುತ್ತೀರಿ?"

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಗೋವುಗಳು ವಧಿಸಲ್ಪಡುವುದರ ಅರ್ಥ ನನ್ನ ಕೆಲವು ಶಿಷ್ಯರು ಹುತಾತ್ಮರಾಗುವರು. ಖಡ್ಗದ ತುದಿಯು ತುಂಡಾದುದರ ಅರ್ಥ ನನ್ನ ಸಂಬಂಧಿಕರಲ್ಲಿ ಒಬ್ಬ ಪ್ರಮುಖ ವ್ಯಕ್ತಿ ಹುತಾತ್ಮರಾಗುವರು ಅಥವಾ ನನಗೆಯೇ ಈ ಯುದ್ಧದಲ್ಲಿ ಯಾವುದಾದರೂ ಹಾನಿ ಸಂಭವಿಸಬಹುದು. ಕವಚದೊಳಗೆ ಕೈ ತೂರಿಸುವುದರ ಅರ್ಥ ನಾವು ಮದೀನದಲ್ಲಿಯೇ ನಿಲ್ಲುವುದು ಹೆಚ್ಚು ಒಳ್ಳೆಯದು ಎಂದಾಗಿದೆ. ಟಗರಿನ ಮೇಲೆ ಸವಾರಿ ಮಾಡಿದುದರ ಅರ್ಥ ಅವಿಶ್ವಾಸಿಗಳ ಸೈನ್ಯದ ನೇತಾರನ ಮೇಲೆ ನಾವು ಜಯಗಳಿಸುವೆವು; ಎಂದರೆ ಆತನು ಮುಸ್ಲಿಮರ ಕೈಯಲ್ಲಿ ಕೊಲ್ಲಲ್ಪಡುವವನು."

ಈ ಸ್ವಪ್ನದ ಪ್ರಕಾರ ಮುಸ್ಲಿಮರು ಮದೀನದಲ್ಲಿ ಇದ್ದುಕೊಂಡು ಯುದ್ಧಮಾಡುವುದು ಉತ್ತಮವೆಂದು ಸೂಚಿಸಲಾಗಿದ್ದರೂ ಈ ಸ್ವಪ್ನದ ವ್ಯಾಖ್ಯಾನ ಹಝ್ರತ್ ಪೈಗಂಬರ್(ಸ) ತನ್ನ ಸ್ವಂತ ಯೋಚನೆಗಳಿಗನುಸಾರವಾಗಿ ಮಾಡಿದುದರಿಂದ ಮತ್ತು ಆ ವ್ಯಾಖ್ಯಾನವು ಅಲ್ಲಾಹನು ಸ್ವತಃ ಅವತೀರ್ಣಗೊಳಿಸಿದ ಸಂದೇಶಗಳ ಮೂಲಕ ತಿಳಿಸಿದವುಗಳಾಗಿರಲಿಲ್ಲವಾದುದರಿಂದ ಹಝ್ರತ್ ಪೈಗಂಬರ್(ಸ) ಬಹು ಪಕ್ಷದವರ ಅಭಿಪ್ರಾಯದ ಪ್ರಕಾರ ಯುದ್ಧಮಾಡಲು ಮದೀನದಿಂದ ಹೊರಗೆ ಹೋಗಲು ತೀರ್ಮಾನಿಸಿದರು.

ಹಝ್ರತ್ ಪೈಗಂಬರ್(ಸ) ಮದೀನದಿಂದ ಹೊರಟಾಗ ಯುವಕರಿಗೆ ಹೃದಯಗಳಲ್ಲಿ ಕಳವಳ ಉಂಟಾಯಿತು. ಅವರು ಹೇಳಿದರು: "ಓ ಅಲ್ಲಾಹನ

42. ಇಬ್ನು ಹಿಶಾಮ್ ಸಂಪುಟ 2 ಪುಟ 77. 43. ತಬಖಾತ್ ಇಬ್ನು ಸಅದ್ ಖಿಸಮ್ ಅವ್ವಲ್.



ಪೈಗಂಬರರೇ, ನಿಮ್ಮ ಸಲಹೆಯೇ ಸರಿಯಾಗಿದೆ. ನಾವು ಮದೀನದಲ್ಲಿ ನಿಂತು ಶತ್ರುಗಳನ್ನು ಎದುರಿಸಬೇಕು." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನ ಪ್ರವಾದಿ ರಕ್ಷಾ ಕವಚ ಧರಿಸಿದ ನಂತರ ಅದನ್ನು ತೆಗೆದಿಡುವುದಿಲ್ಲ. ಈಗ ಏನು ಆಗುವುದಾದರೂ ನಾವು ಮುಂದಕ್ಕೆ ಹೋಗುವೆವು. ನೀವು ಸಹನೆಯಿಂದ ಹೋರಾಡಿದರೆ ಅಲ್ಲಾಹನ ಸಹಾಯವು ಸಿಗುವುದು." ಹೀಗೆ ಹೇಳಿ ಹಝ್ರತ್ ಪೈಗಂಬರ್(ಸ) 1000 ಸೈನಿಕರೊಂದಿಗೆ ಮದೀನದಿಂದ ಹೊರಟು ಸ್ವಲ್ಪ ದೂರ ಹೋಗಿ ಡೇರೆ ಹಾಕಿದರು.

ಹಝ್ರತ್ ಪೈಗಂಬರ್(ಸ) ಶತ್ರಗಳೊಂದಿಗೆ ಹೋರಾಟ ಪ್ರಾರಂಭಿಸುವ ಮೊದಲು ತಮ್ಮ ಸೈನಿಕರಿಗೆ ಸ್ವಲ್ಪ ವಿಶ್ರಾಂತಿ ಕೊಡುತ್ತಿದ್ದರು. ಸೈನಿಕರು ತಮ್ಮ ಸಾಮಾನು ಸರಂಜಾಮುಗಳನ್ನು ಸರಿಪಡಿಸಿಕೊಳ್ಳಲಿ ಎಂದು ಅವರ ಉದ್ದೇಶವಾಗಿತ್ತು. ಬೆಳಗಿನ ಜಾವದ ಪ್ರಾರ್ಥನೆಯ ನಂತರ ಹಝ್ರತ್ ಪೈಗಂಬರರಿಗೆ(ಸ) ತಮ್ಮ ಸೈನ್ಯದಲ್ಲಿ ಕೆಲವು ಯಹೂದಿಯರು ಇರುವುದು ತಿಳಿಯಿತು. ಯಹೂದಿಯರ ಕೆಲವು ಗೋತ್ರಗಳೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳ ನೆಪದಿಂದ ಸೈನ್ಯದೊಂದಿಗೆ ಅವರು ಸೇರಿದ್ದರು. ಆದರೆ ಯಹೂದಿಯರ ಪಿತೂರಿಗಳ ಕುರಿತು ಹಝ್ರತ್ ಪೈಗಂಬರರಿಗೆ(ಸ) ಮೊದಲೇ ತಿಳಿದಿದ್ದ ಕಾರಣ ಅವರನ್ನು ಹಿಂದಕ್ಕೆ ಕಳುಹಿಸಲು ಅವರು ಹೇಳಿದರು.

ಆಗ ಕಪಟವಿಶ್ವಾಸಿಗಳ ನಾಯಕನಾದ ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್ ತನ್ನ ಮುನ್ನೂರು ಸಂಗಡಿಗರೊಂದಿಗೆ ಹಿಂದಕ್ಕೆ ಹೊರಟು ಹೋಗುತ್ತಾ ಹೀಗೆ ಹೇಳಿದನು: "ಈಗ ಇದು ಯುದ್ಧವಲ್ಲ. ವಿನಾಶದ ಬಾಯಿಯೊಳಗೆ ನುಗ್ಗುವುದೇ ಇದಾಗಿದೆ. ಏಕೆಂದರೆ ಸಹಾಯ ಮಾಡುವವರನ್ನು ಸಹ ಯುದ್ಧದಲ್ಲಿ ಭಾಗವಹಿಸುವುದರಿಂದ ತಡೆಯಲಾಗುತ್ತಿದೆ."

ಆಗ ಉಳಿಕೆಯಾದ ಮುಸ್ಲಿಮರ ಸಂಖ್ಯೆ ಏಳುನೂರಾಗಿತ್ತು. ಅವಿಶ್ವಾಸಿ ಸೈನಿಕರ ನಾಲ್ಕರಲ್ಲೊಂದು ಪಾಲಿಗಿಂತ ಅವರು ಕಡಿಮೆ ಸಂಖ್ಯೆಯಲ್ಲಿದ್ದರು. ಶತ್ರುಗಳು ಹೊಂದಿದ್ದ ಸಾಮಾನು ಸರಂಜಾಮುಗಳೊಂದಿಗೆ ಹೋಲಿಸಿ ನೋಡಿದರೂ ಮುಸ್ಲಿಮರು ಬಲಹೀನರಾಗಿದ್ದರು. ಅವಿಶ್ವಾಸಿಗಳಲ್ಲಿ ಏಳುನೂರು ಕವಚಧಾರಿಗಳಾದ ಸೈನಿಕರಿದ್ದರು. ಮುಸ್ಲಿಮರಲ್ಲಿ ಇದ್ದುದು ಒಂದು ನೂರು ಕವಚಧಾರಿಗಳಾದ ಸೈನಿಕರು. ಶತ್ರುಗಳು ಶೀಘ್ರವಾಗಿ ಚಲಿಸುವ ಇನ್ನೂರು ಸವಾರಿ ಮೃಗಗಳನ್ನು ಹೊಂದಿದ್ದರು. ಆದರೆ ಮುಸ್ಲಿಮರಲ್ಲಿ ಕೇವಲ ಎರಡು ಕುದುರೆಗಳಿದ್ದುವು. ಕೊನೆಗೆ ಮುಸ್ಲಿಮರ ಸೈನ್ಯ ಉಹುದ್ ಎಂಬಲ್ಲಿಗೆ ತಲಪಿತು. ಅಲ್ಲಿ ಒಂದು ಎತ್ತರವಾದ ಬೆಟ್ಟವನ್ನು ಸಂರಕ್ಷಿಸಲು ಐವತ್ತು ಸೈನಿಕರನ್ನು ಹಝ್ರತ್ ಪೈಗಂಬರ್(ಸ) ನೇಮಿಸಿದರು. ಆ ಸೈನಿಕರ ಮುಖ್ಯಸ್ಥನಿಗೆ ಹೀಗೆ ಆಜ್ಞಾಪಿಸಲಾಗಿತ್ತು: "ಇದು ಯುದ್ಧ ತಂತ್ರಕ್ಕೆ ಬಹಳ ಮುಖ್ಯವಾದ ಪ್ರದೇಶವಾದುದರಿಂದ ನಾವು ಸೋತರೂ ಗೆದ್ದರೂ ನೀವು ಈ

ಸ್ಥಳದಿಂದ ಅಲ್ಲಾಡಬಾರದು."[44]

ಅನಂತರ ಹಝ್ರತ್ ಪೈಗಂಬರ್(ಸ) ತನ್ನ ಆರುನೂರ ಐವತ್ತು ಸಂಗಡಿಗರೊಂದಿಗೆ ಶತ್ರುವನ್ನು ಎದುರಿಸಲು ಹೊರಟರು. ಈಗ ಅವರ ಸಂಖ್ಯೆ ಶತ್ರು ಸೈನ್ಯದ ಅಂದಾಜು ಐದರಲ್ಲೊಂದು ಅಂಶದಷ್ಟಾಗಿತ್ತು. ಯುದ್ಧ ಪ್ರಾರಂಭವಾಯಿತು. ಅಲ್ಲಾಹನ ಸಹಾಯದ ಕಾರಣದಿಂದ ಸ್ವಲ್ಪವೇ ಹೊತ್ತಿನಲ್ಲಿ ಆರುನೂರ ಐವತ್ತು ಮುಸ್ಲಿಮರಿಗೆ ಎದುರಾದ ಮೂರು ಸಾವಿರ ನುರಿತ ಶತ್ರು ಸೈನಿಕರು ಸೋತು ಓಡತೊಡಗಿದರು.

## ವಿಜಯ ಅಪಜಯವಾದುದು

ಮುಸ್ಲಿಮರು ಶತ್ರು ಸೈನಿಕರನ್ನು ಬೆನ್ನಟ್ಟಲು ತೊಡಗಿದಾಗ, ಹಿಂಭಾಗದ ಬೆಟ್ಟದಲ್ಲಿ ಕಾವಲು ಕಾಯುತ್ತಿದ್ದವರು ತಮ್ಮ ಮುಖ್ಯಸ್ಥನೊಂದಿಗೆ ಹೀಗೆಂದರು: "ಶತ್ರುಗಳು ಸೋಲಿಸಲ್ಪಟ್ಟಿದ್ದಾರೆ. ಜಿಹಾದ್‌ನಲ್ಲಿ ಭಾಗವಹಿಸಿ ಪುಣ್ಯ ಗಳಿಸಲು ನಮ್ಮನ್ನು ಬಿಡಿರಿ." ಅವರ ಮುಖ್ಯಸ್ಥನು ಅವರನ್ನು ತಡೆದು ಹಝ್ರತ್ ಪೈಗಂಬರರ ಎಚ್ಚರಿಕೆಯನ್ನು ನೆನಪಿಸಿಕೊಟ್ಟರು. ಆದರೆ ಸೈನಿಕರು ಹೀಗೆಂದರು: "ಹಝ್ರತ್ ಪೈಗಂಬರ್(ಸ) ಹಾಗೆ ಹೇಳಿದುದು ತಮ್ಮ ಮಾತಿಗೆ ಒತ್ತು ಕೊಡಲಿಕ್ಕಾಗಿ ಮಾತ್ರವಾಗಿದೆ. ಶತ್ರುಗಳು ಓಡಲು ತೊಡಗಿದಾಗ ನಾವು ಇಲ್ಲಿಯೇ ಸುಮ್ಮನೆ ನಿಲ್ಲಬೇಕೆಂದು ಅವರ ಉದ್ದೇಶವಾಗಿರಲಾರದು." ಹೀಗೆ ಹೇಳಿ ಅವರು ಬೆಟ್ಟದಿಂದ ಇಳಿದು ರಣಾಂಗಣವನ್ನು ನುಗ್ಗಿದರು. ಓಡುತ್ತಿದ್ದ ಶತ್ರು ಸೈನಿಕರ ಒಬ್ಬ ಸೈನ್ಯಾಧಿಕಾರಿಯಾಗಿದ್ದ ಖಾಲಿದ್ ಬಿನ್ ವಲೀದ್[45] ತೆರವಾದ ಬೆಟ್ಟವನ್ನು ನೋಡಿದರು. ಅಲ್ಲಿ ಕೆಲವೇ ಸೈನಿಕರು ತಮ್ಮ ಮುಖ್ಯಸ್ಥನೊಂದಿಗೆ ನಿಂತಿದ್ದರು. ಖಾಲಿದ್ ಕೂಡಲೆ ಅವಿಶ್ವಾಸಿಗಳ ಇನ್ನೊಬ್ಬ ಸೈನ್ಯಾಧಿಕಾರಿಯಾಗಿದ್ದ ಅಮರಿಬ್ನುಲ್ ಆಸ್‌ರನ್ನು ಕೂಗಿ ಕರೆದು ಹೇಳಿದರು: "ನೀವು ಆ ಬೆಟ್ಟದ ಕಡೆಗೆ ನೋಡಿರಿ." ಅಮರಿಬ್ನು ಆಸ್ ಆ ಬೆಟ್ಟವನ್ನು ನೋಡಿದಾಗ: "ನನಗೆ ನನ್ನ ಜೀವಿತದ ಅತ್ಯುತ್ತಮ ಅವಕಾಶ ದೊರಕಿದೆ" ಎಂದು ಗ್ರಹಿಸಿದರು. ಇಬ್ಬರು ಸೈನ್ಯಾಧಿಕಾರಿಗಳೂ ಓಡುತ್ತಿದ್ದ ತಮ್ಮ ಸೈನಿಕರ ತುಕಡಿಗಳನ್ನು ತಡೆಯುತ್ತಾ ಮುಸ್ಲಿಮರ ಸೈನ್ಯದಿಂದ ತಪ್ಪಿಸಿಕೊಂಡು ಆ ಬೆಟ್ಟವನ್ನೇರಿದರು. ಅಲ್ಲಿ ಕಾವಲು ಕಾಯುತ್ತಿದ್ದ ಕೆಲವೇ ಸೈನಿಕರನ್ನು ಕೊಂದು ಹಾಕಿ ಮುಸ್ಲಿಮರ ಸೈನಿಕರನ್ನು ಹಿಂಭಾಗದಿಂದ ಆಕ್ರಮಿಸಿದರು. ಅವರ ವಿಜಯ ಧ್ವನಿಯನ್ನು ಆಲಿಸಿ ಮುಂದಿನಿಂದ ಓಡುತ್ತಿದ್ದ ಅವಿಶ್ವಾಸಿಗಳ ಉಳಿದ ಸೈನಿಕರೂ ಯುದ್ಧರಂಗಕ್ಕೆ ಮರಳಿ ಬರತೊಡಗಿದರು.

ಶತ್ರು ಸೈನಿಕರ ಆಕ್ರಮಣವು ಹಠಾತ್ತಾಗಿ ಪುನರಾರಂಭಿಸಿದುದರಿಂದಲೂ ಅವಿಶ್ವಾಸಿಗಳನ್ನು ಬೆನ್ನಟ್ಟುತ್ತಾ ಇದ್ದ ಮುಸ್ಲಿಮರು ಚದುರಿ ಹೋಗಿದ್ದುದ ರಿಂದಲೂ ಶತ್ರುಗಳನ್ನು ಸುಸಂಘಟಿತರಾಗಿ ಎದುರಿಸಲು ಮುಸ್ಲಿಮರಿಗೆ ಸಾಧ್ಯವಾಗಲಿಲ್ಲ. ಮುಸ್ಲಿಮ್ ಸೈನಿಕರು ಸಂಭವಿಸಿದುದಾದರೂ ಏನೆಂದು ತಿಳಿಯದೆ ಆಶ್ಚರ್ಯಗೊಂಡು

44. ಇಬ್ನು ಹಿಶಾಮ್. 45. ಇವರು ಅನಂತರ ಮುಸ್ಲಿಮರ ಬಹಳ ದೊಡ್ಡ ಸೇನಾಧಿಪತಿಯಾದರು.



ಹಿಂದಕ್ಕೆ ಓಡಿದರು. ಕೆಲವು ಶಿಷ್ಯರು ಹಝ್ರತ್ ಪೈಗಂಬರರ(ಸ) ಸುತ್ತುಮುತ್ತು ನೆರೆದರು. ಅವರ ಸಂಖ್ಯೆ ಅತಿ ಹೆಚ್ಚೆಂದರೆ ಮೂವತ್ತು[46] ಇದ್ದಿತು.

ಹಝ್ರತ್ ಪೈಗಂಬರ್(ಸ) ನಿಂತಿದ್ದ ಸ್ಥಳವನ್ನು ಅವಿಶ್ವಾಸಿಗಳು ತೀವ್ರವಾಗಿ ಆಕ್ರಮಿಸಲು ತೊಡಗಿದ್ದರು. ಒಬ್ಬರ ನಂತರ ಇನ್ನೊಬ್ಬರಂತೆ ಶಿಷ್ಯರು ಹಝ್ರತ್ ಪೈಗಂಬರರನ್ನು(ಸ) ರಕ್ಷಿಸುತ್ತಾ ಮೃತರಾಗಲು ತೊಡಗಿದರು. ಖಡ್ಗಧಾರಿಗಳಲ್ಲದೆ ಬಿಲ್ಲುಗಾರರು ಎತ್ತರವಾದ ಸ್ಥಳಗಳಿಂದ ಹಝ್ರತ್ ಪೈಗಂಬರರ(ಸ) ಕಡೆಗೆ ಬಾಣಗಳನ್ನು ಹೂಡುತ್ತಾ ಇದ್ದರು. ಆ ಸಮಯದಲ್ಲಿ ಖುರೈಶ್ ವಂಶದ ತಲ್‌ಹ(ರ) ಎಂಬವರು ಬಿಲ್ಲುಗಾರರು ಹಝ್ರತ್ ಪೈಗಂಬರರ(ಸ) ಕಡೆಗೆ ಬಾಣ ಎಸೆಯುವುದನ್ನು ಗಮನಿಸಿ ತನ್ನ ಕೈ ಹಝ್ರತ್ ಪೈಗಂಬರರ(ಸ) ಮುಖದ ಮುಂದೆ ಇರಿಸಿದರು. ಒಂದರ ನಂತರ ಇನ್ನೊಂದರಂತೆ ಹಝ್ರತ್ ಪೈಗಂಬರರ(ಸ) ಮುಖದ ಕಡೆಗೆ ಹೂಡಿದ ಬಾಣಗಳು ಹಝ್ರತ್ ತಲ್‌ಹರ ಕೈಗೆ ಬಂದು ಚುಚ್ಚುತ್ತಿದ್ದುವು. ಆದರೆ ತನ್ನ ಜೀವವನ್ನೇ ಪಣವಾಗಿಟ್ಟ ನಿಷ್ಠಾವಂತನಾದ ಆ ಶಿಷ್ಯ ತನ್ನ ಕೈಯನ್ನು ಅಲುಗಾಡಿಸಲಿಲ್ಲ. ಬಾಣಗಳು ಬಂದು ಚುಚ್ಚುತ್ತಿದ್ದುವು. ತಲ್‌ಹರ ಕೈಯ ಗಾಯಗಳು ಅಧಿಕವಾದುದರಿಂದ ಅದು ಸಂಪೂರ್ಣ ಉಪಯೋಗ ಶೂನ್ಯವಾಯಿತು. ಅವರ ಒಂದು ಕೈ ಮಾತ್ರ ಉಳಿಯಿತು. ಎಷ್ಟೋ ವರ್ಷಗಳ ನಂತರ ನಾಲ್ಕನೆಯ ಖಲೀಫರ ಕಾಲದಲ್ಲಿ ಮುಸ್ಲಿಮರೊಳಗೆ ಅಂತಃಕಲಹಗಳು ತಲೆದೋರಿದಾಗ ಯಾವುದೋ ಒಬ್ಬ ವಿರೋಧಿ ತಲ್‌ಹರನ್ನು ನಿಂದಾತ್ಮಕವಾಗಿ "ಒಂಟಿಗೈಯವ" ಎಂದು ಕರೆದಾಗ ಹಝ್ರತ್ ಪೈಗಂಬರರ(ಸ) ಒಬ್ಬ ಶಿಷ್ಯರು ಹೀಗೆಂದರು: "ಅವರು ಒಂಟಿಗೈಯವರೇ ಸರಿ. ಆದರೆ ಅವರು ಬಹಳ ಅದೃಷ್ಟಶಾಲಿಗಳಾಗಿದ್ದಾರೆ. ಅವರು ಒಂಟಿಗೈಯವನಾದುದು ಹಝ್ರತ್ ಪೈಗಂಬರರ ಮುಖವನ್ನು ಶತ್ರುಗಳ ಬಾಣದಿಂದ ಸಂರಕ್ಷಿಸುವಾಗ ಎಂದು ನಿನಗೆ ತಿಳಿದಿದೆಯೋ?"

ಉಹುದ್ ಯುದ್ಧದ ನಂತರ ಒಬ್ಬರು ಹಝ್ರತ್ ತಲ್‌ಹರೊಂದಿಗೆ ಕೇಳಿದರು: "ನಿಮ್ಮ ಕೈಗಳಿಗೆ ಬಾಣ ತಗಲುತ್ತಿದ್ದಾಗ ನಿಮಗೆ ನೋವಾಗುತ್ತಿರಲಿಲ್ಲವೇ? ನಿಮ್ಮ ಬಾಯಿಂದ ನೋವನ್ನು ಸೂಚಿಸುವ ಶಬ್ದ ಹೊರಡುತ್ತಿರಲಿಲ್ಲವೆ?" ಹಝ್ರತ್ ತಲ್‌ಹ ಹೇಳಿದರು: "ನನಗೆ ನೋವು ಆಗುತ್ತಿತ್ತು. ನಾನು ನೋವನ್ನು ಸೂಚಿಸಲೂ ಬಯಸುತ್ತಿದ್ದೆ. ಆದರೆ ನಾನು ಹಾಗೆ ಮಾಡುತ್ತಿರಲಿಲ್ಲ. ಏಕೆಂದರೆ ಹಾಗೆ ಸ್ವರ ಹೊರಡಿಸುವಾಗ ನನ್ನ ಕೈ ಅಲುಗಾಡಿ ಬಾಣ ಹಝ್ರತ್ ಪೈಗಂಬರರ(ಸ) ಮುಖಕ್ಕೆ ನಾಟುವುದು ಸಂಭಾವ್ಯವಾಗಿತ್ತು."

ಆದರೆ ಕೆಲವು ಜನರು ಅಷ್ಟು ದೊಡ್ಡ ಸೈನ್ಯವನ್ನು ಎಷ್ಟರತನಕ ಎದುರಿಸಲು ಸಾಧ್ಯ? ಅವಿಶ್ವಾಸಿಗಳ ಸೈನ್ಯದ ಒಂದು ಗುಂಪು ಹೋಗಿ ಹಝ್ರತ್ ಪೈಗಂಬರರ(ಸ) ಸುತ್ತಲೂ ಇದ್ದ ಸೈನಿಕರನ್ನು ನೂಕಿ ಹಿಂದಕ್ಕಟ್ಟಿತು. ಹಝ್ರತ್ ಪೈಗಂಬರ್(ಸ)

46. ಝುರ್‌ಖಾನಿ ಸಂಪುಟ 2 ಪುಟ 65.

ಒಬ್ಬಂಟಿಗರಾಗಿ ಪರ್ವತ ಶಿಖರದ ಹಾಗೆ ನಿಂತಿದ್ದರು. ಒಂದು ಕಲ್ಲು ವೇಗವಾಗಿ ಬಂದು ಅವರ ಶಿರಸ್ತ್ರಾಣಕ್ಕೆ ಬಡಿಯಿತು.

ಶಿರಸ್ತ್ರಾಣದ ಒಂದು ಮೊಳೆಯು ಹಝ್ರತ್ ಪೈಗಂಬರರ(ಸ) ತಲೆಯನ್ನು ಚುಚ್ಚಿತು. ಹಝ್ರತ್ ಪೈಗಂಬರ್(ಸ) ಪ್ರಜ್ಞಾಶೂನ್ಯರಾಗಿ ತಮ್ಮ ಸುತ್ತಲೂ ಯುದ್ಧ ಮಾಡುತ್ತಾ ಹುತಾತ್ಮರಾಗಿದ್ದ ಶಿಷ್ಯರ ಮೃತದೇಹಗಳ ಮೇಲೆ ಬಿದ್ದು ಬಿಟ್ಟರು.[47]

ಅನಂತರ ಕೆಲವು ಶಿಷ್ಯರು ಹಝ್ರತ್ ಪೈಗಂಬರರ(ಸ) ಪ್ರಜ್ಞಾಶೂನ್ಯ ದೇಹವನ್ನು ರಕ್ಷಿಸುತ್ತಾ ಇರುವಾಗ ಹುತಾತ್ಮರಾದರು. ಅವರ ಮೃತ ಶರೀರಗಳು ಹಝ್ರತ್ ಪೈಗಂಬರರ(ಸ) ಪ್ರಜ್ಞಾಶೂನ್ಯ ದೇಹದ ಮೇಲೆ ಬಿದ್ದುವು. ಅವಿಶ್ವಾಸಿಗಳು ಹಝ್ರತ್ ಪೈಗಂಬರರ(ಸ) ಪ್ರಜ್ಞಾಶೂನ್ಯ ದೇಹವನ್ನು ಮೃತಶರೀರಗಳ ಅಡಿಯಲ್ಲಿ ಬಿದ್ದಿರುವುದಾಗಿ ಕಂಡು, ಅವರು ಸಹ ಕೊಲ್ಲಲ್ಪಟ್ಟರೆಂದು ಭಾವಿಸಿದರು.

ಆಮೇಲೆ ಮಕ್ಕದ ಸೈನ್ಯ ತಮ್ಮ ಸಾಲುಗಳನ್ನು ಸರಿಪಡಿಸಲು ಹಿಂದಕ್ಕೆ ಹೋಯಿತು. ಹಝ್ರತ್ ಪೈಗಂಬರರ(ಸ) ಸುತ್ತುಮುತ್ತ ನೆರೆದಿದ್ದ ಶಿಷ್ಯರನ್ನು ಅವಿಶ್ವಾಸಿಗಳ ಸೈನ್ಯ ನೂಕಿ ಹಿಂದಕ್ಕಟ್ಟಿತ್ತಲ್ಲವೇ? ಅವರಲ್ಲಿ ಹಝ್ರತ್ ಉಮರ್‌ರವರೂ ಇದ್ದರು. ಹೋರಾಟಗಾರರು ಯಾರೂ ಇಲ್ಲದೆ ರಣಾಂಗಣ ತೆರವಾಗಿರುವುದನ್ನು ಅವರು ಕಂಡಾಗ ಹಝ್ರತ್ ಪೈಗಂಬರ್(ಸ) ಹುತಾತ್ಮರಾದರೆಂದು ಅವರು ಸಹ ದೃಢವಾಗಿ ಗ್ರಹಿಸಿದರು. ಅವರ ಜೀವಿತದ ಮುಂದಿನ ಕಾಲದಲ್ಲಿ ಖೈಸರ್ ಮತ್ತು ಕಿಸ್ರಾರನ್ನು ಬಹಳ ಧೈರ್ಯದಿಂದ ಒಂದೇ ಸಮಯದಲ್ಲಿ ಎದುರಿಸಿದ, ಎಂದೂ ಗಾಬರಿಗೊಳ್ಳದ ಮತ್ತು ಹೆದರದ ಆ ಮಹಾನುಭಾವರು (ಹಝ್ರತ್ ಉಮರ್) ಒಂದು ಕಲ್ಲಿನ ಮೇಲೆ ಕುಳಿತು ಮಕ್ಕಳ ಹಾಗೆ ರೋಧಿಸಲು ತೊಡಗಿದರು. ಆಗ ಹಝ್ರತ್ ಮಾಲಿಕ್(ರ) ಅಲ್ಲಿಗೆ ಬಂದರು. ಮುಸ್ಲಿಮ್ ಸೈನ್ಯದ ಯುದ್ಧದ ಆರಂಭ ಘಟ್ಟದಲ್ಲಿ ಜಯ ಪಡೆದಾಗ ಅವರು ಹಿಂದಕ್ಕೆ ಹೋಗಿದ್ದರು. ಅವರು ರಾತ್ರಿಯ ನಂತರ ಏನನ್ನೂ ತಿನ್ನದುದರಿಂದ ಬಹಳ ಹಸಿದಿದ್ದುದರಿಂದ ಸ್ವಲ್ಪ ಖರ್ಜೂರವನ್ನು ತೆಗೆದುಕೊಂಡು ಹಸಿವು ನೀಗಿಸಲು ಹಿಂದೆ ಸರಿದಿದ್ದರು. ಅವರು ವಿಜಯದ ಸಂತೋಷದಿಂದ ಬೀಗಿ ತಿರುಗಾಡುತ್ತಿದ್ದರು. ಅವರು ತಿರುಗಾಡುತ್ತಾ ಹಝ್ರತ್ ಉಮರ್‌ರವರ ಸನಿಹಕ್ಕೆ ಬಂದರು. ಹಝ್ರತ್ ಉಮರ್(ರ) ಅಳುತ್ತಾ ಇರುವುದನ್ನು ಕಂಡು ಅವರಿಗೆ ಗಾಬರಿಯಾಯಿತು. ಅವರು ಗಾಬರಿಗೊಂಡು ಕೇಳಿದರು: "ಉಮರ್ ನಿಮಗೆ ಏನಾಗಿದೆ? ಮುಸ್ಲಿಮರು ಜಯಗಳಿಸಿದ ಕಾರಣ ನೀವು ಸಂತೋಷಪಡಬೇಕೋ ಅಥವಾ ಅಳಬೇಕೋ?" ಆಗ ಉಮರ್ ಹೇಳಿದರು: "ಮಾಲಿಕ್, ಪ್ರಾಯಶಃ ನೀವು ಮುಸ್ಲಿಮರಿಗೆ ಜಯ ಲಭಿಸಿದ ನಂತರ ಹಿಂದಕ್ಕೆ ಬಂದಿರಬೇಕೆಂದು ತೋರುತ್ತದೆ. ಅವಿಶ್ವಾಸಿಗಳ ಸೈನ್ಯ ಬೆಟ್ಟವನ್ನು ಸುತ್ತಿ ಹಿಂಭಾಗದಿಂದ ಮುಸ್ಲಿಮರನ್ನು ಪುನಃ ಆಕ್ರಮಣ ಮಾಡಿದುದು ನಿಮಗೆ ತಿಳಿದಿಲ್ಲ. ಮುಸ್ಲಿಮರ

---

47. ಇಬ್ನು ಹಿಶಾಮ್ ಸಂಪುಟ 2 ಪುಟ 84.ಭತ



ಸೈನ್ಯ ಚದುರಿ ಹೋದ ಕಾರಣ ಅವಿಶ್ವಾಸಿಗಳ ಸೈನ್ಯವನ್ನು ಅವರಲ್ಲಿ ಯಾರಿಗೂ ಎದುರಿಸಲು ಸಾಧ್ಯವಾಗಲಿಲ್ಲ, ಹಝ್ರತ್ ಪೈಗಂಬರ್(ಸ) ತನ್ನ ಕೆಲವು ಶಿಷ್ಯರೊಂದಿಗೆ ಅವರನ್ನು ಎದುರಿಸಲು ಸನ್ನದ್ಧರಾದರು ಮತ್ತು ಹೋರಾಡುತ್ತಾ ಹುತಾತ್ಮರಾದರು." ಹಝ್ರತ್ ಮಾಲಿಕ್ ಹೇಳಿದರು: "ನೀವು ಹೇಳಿದ ಹಾಗೆ ಸಂಭವಿಸಿದ್ದರೆ ನೀವು ಇಲ್ಲಿ ಏಕೆ ರೋಧಿಸುತ್ತಾ ಕುಳಿತಿರುವಿರಿ? ನಮ್ಮ ಪ್ರೀತಿಗೆ ಪಾತ್ರರಾದವರು ಹೋದಲ್ಲಿಗೆ ನಾವು ಸಹ ಹೋಗಬೇಕಾಗಿದೆ."

ಅನಂತರ ಅವರು ತಮ್ಮ ಕೈಯ್ಯಲ್ಲಿದ್ದ ಮತ್ತು ಬಾಯಿಗೆ ಆಗತಾನೆ ಹಾಕಲಿದ್ದ ಖರ್ಜೂರವನ್ನು ಉದ್ದೇಶಿಸಿ, "ಓ ಖರ್ಜೂರ, ಮಾಲಿಕ್ ಮತ್ತು ಸ್ವರ್ಗದ ಮಧ್ಯೆ ನಿನ್ನ ಹೊರತು ಬೇರೆ ಯಾವ ವಸ್ತುವಿನ ತಡೆ ಇದೆ?" ಎಂದು ಹೇಳಿ ಖರ್ಜೂರವನ್ನು ಎಸೆದುಬಿಟ್ಟರು ಮತ್ತು ಖಡ್ಗವನ್ನು ಎತ್ತಿಕೊಂಡು ಶತ್ರು ಸೈನ್ಯದ ಮಧ್ಯೆ ನುಗ್ಗಿದರು. ಮೂರು ಸಾವಿರದಷ್ಟು ಸೈನಿಕರ ವಿರುದ್ಧ ಒಬ್ಬ ಏನು ತಾನೆ ಮಾಡಲು ಸಾಧ್ಯ? ಆದರೆ ಏಕದೇವನ ಆರಾಧಕನಾದ ಒಬ್ಬ ಸಹ ಅವಿಶ್ವಾಸಿಗಳ ಅನೇಕರಿಗೆ ಎದುರಿಸಲು ಅಸಾಧ್ಯವಾದ ವ್ಯಕ್ತಿಯಾಗಿರುತ್ತಾನೆ. ಹಝ್ರತ್ ಮಾಲಿಕ್(ರ) ಎಂತಹ ಧೈರ್ಯದಿಂದ ಹೋರಾಡಿದರೆಂದರೆ ಶತ್ರುಗಳು ಗಾಬರಿಗೊಂಡರು. ಕೊನೆಗೆ ಹಝ್ರತ್ ಮಾಲಿಕ್ ಗಾಯಗೊಂಡು ಬಿದ್ದರು. ಆದರೆ ಕೆಳಗೆ ಬಿದ್ದ ನಂತರ ಸಹ ಅವರು ಶತ್ರು ಸೈನಿಕರನ್ನು ಆಕ್ರಮಿಸುತ್ತಿದ್ದರು. ಈ ಕಾರಣದಿಂದ ಮಕ್ಕದ ಅವಿಶ್ವಾಸಿಗಳ ಸೈನಿಕರು ಅವರೊಂದಿಗೆ ಎಷ್ಟು ಮೃಗೀಯವಾಗಿ ವರ್ತಿಸಿದರೆಂದರೆ ಯುದ್ಧ ಕೊನೆಗೊಂಡ ಬಳಿಕ ಅವರ ಶರೀರದ ಎಂಬತ್ತು ತುಂಡುಗಳು ದೊರಕಿದವು. ಅವರ ಶರೀರದ ಗುರುತು ಹಚ್ಚಲು ಕಷ್ಟವಾಗುತ್ತಿತ್ತು. ಕೊನೆಗೆ ಅವರ ಸಹೋದರಿ ಒಂದು ಬೆರಳಿನ ಗುರುತು ಹಿಡಿದು "ಇದು ನನ್ನ ಸಹೋದರನ ಮೃತದೇಹ" ಎಂದು ಹೇಳಿದರು.

ಅವಿಶ್ವಾಸಿಗಳ ಸೈನಿಕರ ಪುನರಾಕ್ರಮಣದಿಂದ ಹಿಂದಕ್ಕಲ್ಪಟ್ಟಿದ್ದ ಮುಸ್ಲಿಮ್ ಸೈನಿಕರು, ಶತ್ರುಗಳು ದೂರ ಸರಿದ ಕೂಡಲೆ ಪುನಃ ಹಝ್ರತ್ ಪೈಗಂಬರರ(ಸ) ಸುತ್ತುಮುತ್ತ ಜಮಾಯಿಸಿದರು ಮತ್ತು ಅವರು ಹಝ್ರತ್ ಪೈಗಂಬರರ(ಸ) ಪ್ರಜ್ಞೆ ರಹಿತ ದೇಹವನ್ನು ಶುಶ್ರೂಷಿಸಿದರು. ಹಝ್ರತ್ ಉಬೈದ ಬಿನ್ ಜರ್‍ರಾಹ್ ಹಝ್ರತ್ ಪೈಗಂಬರರ ತಲೆಗೆ ತಗಲಿದ್ದ ಶಿರಸ್ತ್ರಾಣದ ಮೊಳೆಯನ್ನು ಎಷ್ಟು ಜೋರಾಗಿ ಹಲ್ಲಿನಿಂದ ಕಚ್ಚಿ ಎಳೆದರೆಂದರೆ ಅವರ ಎರಡು ಹಲ್ಲುಗಳು ಬಿದ್ದು ಹೋದುವು. ಸ್ವಲ್ಪ ಹೊತ್ತಿನಲ್ಲಿ ಹಝ್ರತ್ ಪೈಗಂಬರರಿಗೆ(ಸ) ಪ್ರಜ್ಞೆಯು ಮರುಕಳಿಸಿತು. ಶಿಷ್ಯರು ನಾಲ್ಕು ದಿಕ್ಕುಗಳಿಗೂ ಜನರನ್ನು ಕಳುಹಿಸಿ ಮುಸ್ಲಿಮರು ಪುನಃ ಒಟ್ಟಿಗೆ ಜಮಾಯಿಸಬೇಕೆಂದು ನಿರ್ದೇಶಿಸಿದರು. ಓಡಿದ ಮುಸ್ಲಿಮ್ ಸೈನ್ಯ ಪುನಃ ಒಗ್ಗೂಡಲು ಪ್ರಾರಂಭಿಸಿತು. ಹಝ್ರತ್ ಪೈಗಂಬರ್(ಸ) ಅವರನ್ನು ಬೆಟ್ಟದ ತಪ್ಪಲಿನ ಕಡೆಗೆ ಕರೆದುಕೊಂಡು ಹೋದರು. ಬೆಟ್ಟದ ತಪ್ಪಲಿನಲ್ಲಿ ಅಳಿದುಳಿದ ಮುಸ್ಲಿಮ್ ಸೈನ್ಯ ಜಮಾಯಿಸಿ ನಿಂತಾಗ ಶತ್ರು ಸೈನಿಕರ ನೇತಾರರಾದ ಅಬೂ ಸುಫ್‌ಯಾನ್ ಉಚ್ಚ ಸ್ವರದಿಂದ ಕರೆದು ಹೇಳಿದರು: "ನಾವು ಮುಹಮ್ಮದನನ್ನು ಕೊಂದಿದ್ದೇವೆ."

ಹಝ್ರತ್ ಪೈಗಂಬರ್(ಸ) ಇದಕ್ಕೆ ಉತ್ತರ ಹೇಳಲಿಲ್ಲ. ಶತ್ರುವಿಗೆ ವಾಸ್ತವ ಸಂಗತಿ ತಿಳಿದರೆ ಅವನು ಪುನಃ ಆಕ್ರಮಣ ಮಾಡುವನು ಮತ್ತು ಘಾಸಿಗೊಂಡ ಮುಸ್ಲಿಮರು ಪುನಃ ಶತ್ರುಗಳಿಗೆ ಬಲಿಯಾಗುವರು. ಆದುದರಿಂದ ಇದನ್ನು ತಡೆಯಲು ಹಝ್ರತ್ ಪೈಗಂಬರ್(ಸ) ಶತ್ರು ನಾಯಕನ ಹೇಳಿಕೆಗೆ ಯಾವುದೇ ಪ್ರತಿಕ್ರಿಯೆ ನೀಡದಿರಲು ತೀರ್ಮಾನಿಸಿದರು.

ಮುಸ್ಲಿಮ್ ಸೈನಿಕರಿಂದ ತನ್ನ ಮಾತಿಗೆ ಯಾವುದೇ ಪ್ರತಿಕ್ರಿಯೆ ದೊರಕದೆ ಇದ್ದಾಗ ಅಬೂ ಸುಫ್ಯಾನ್ ತಾನು ಭಾವಿಸಿದುದು (ಎಂದರೆ ಹಝ್ರತ್ ಪೈಗಂಬರ್(ಸ) ಮೃತರಾದರೆಂದು ಭಾವಿಸಿದುದು) ಸರಿಯಾಗಿದೆ ಎಂದು ಗ್ರಹಿಸಿದರು. ಆಗ ಅಬೂ ಸುಫ್ಯಾನ್ ಬೊಬ್ಬಿಟ್ಟು ಹೇಳಿದರು: "ನಾವು ಅಬೂಬಕರ್‌ರನ್ನೂ ಕೊಂದಿದ್ದೇವೆ."

ಆಗ ಹಝ್ರತ್ ಪೈಗಂಬರ್(ಸ) ಅದಕ್ಕೂ ಉತ್ತರ ನೀಡಬೇಡಿರೆಂದು ಹಝ್ರತ್ ಅಬೂಬಕರ್‌ರೊಂದಿಗೆ ಹೇಳಿದರು.

ಅನಂತರ ಅಬೂಸುಫ್ಯಾನ್ ಹೇಳಿದರು: "ನಾವು ಉಮರ್‌ರನ್ನು ಸಹ ಕೊಂದಿದ್ದೇವೆ" ಆಗ ಭಾವಾವೇಶದಿಂದ ಹಝ್ರತ್ ಉಮರ್, "ನಾವೆಲ್ಲರೂ ದೇವರ ದಯದಿಂದ ಜೀವಂತರಾಗಿದ್ದೇವೆ. ನಿಮ್ಮ ವಿರುದ್ಧ ಹೋರಾಡಲು ಸಿದ್ಧರಾಗಿದ್ದೇವೆ" ಎಂದು ಹೇಳಲು ಉತ್ಸುಕರಾಗಿದ್ದರು. ಆದರೆ ಹಝ್ರತ್ ಪೈಗಂಬರ್(ಸ) ಅವರನ್ನು ತಡೆದರು. "ಮುಸ್ಲಿಮರನ್ನು ಕಷ್ಟಕ್ಕೆ ಗುರಿಪಡಿಸದಿರಿ. ನೀವು ಮೌನವನ್ನು ಅವಲಂಬಿಸಿರಿ" ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.

ಮುಸ್ಲಿಮರಿಂದ ಯಾವುದೇ ಪ್ರತಿಕ್ರಿಯೆ ದೊರಕದುದರಿಂದ ಅವಿಶ್ವಾಸಿಗಳು, ತಾವು ಮುಹಮ್ಮದರನ್ನೂ ಅವರ ಬಲಗೈ ಎಡಗೈ ಹಾಗೆ ಇದ್ದವರನ್ನೂ ಕೊಂದಿರುವೆವು ಎಂದು ದೃಢವಾಗಿ ನಂಬಿದರು. ಆಗ ಅಬೂ ಸುಫ್ಯಾನ್ ಮತ್ತು ಸಂಗಡಿಗರು, "ಹುಬುಲ್‌ಗೆ ಜಯವಾಗಲಿ, ಹುಬುಲ್‌ಗೆ ಜಯವಾಗಲಿ" ಎಂದು ತಮ್ಮ ಆರಾಧ್ಯ ದೇವತೆಗೆ ಜಯಕಾರ ಮಾಡಲು ತೊಡಗಿದರು.

ಹಝ್ರತ್ ಪೈಗಂಬರ್(ಸ) ತಾನು, ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಕೊಲ್ಲಲ್ಪಟ್ಟರೆಂದು ಶತ್ರುಗಳು ಘೋಷಣೆ ಮಾಡಿದಾಗ ಶಿಷ್ಯರಿಗೆ ಸುಮ್ಮನೆ ಇರಲು ಉಪದೇಶಿಸಿದುದು ಗಾಯಗೊಂಡ ಅಲ್ಪಸಂಖ್ಯೆಯಲ್ಲಿದ್ದ ಮುಸ್ಲಿಮರನ್ನು ಶತ್ರುಗಳು ಪುನರಾಕ್ರಮಣ ಮಾಡಿ ಹುತಾತ್ಮರನ್ನಾಗಿ ಮಾಡದಿರಲಿ ಎಂಬ ಉದ್ದೇಶದಿಂದಾಗಿತ್ತು. ಆದರೆ ಶತ್ರುಗಳು ತಮ್ಮ ದೇವತೆಗೆ ಜಯಕಾರ ಮಾಡಿದುದರಿಂದ ಏಕದೇವನ ಗೌರವದ ಪ್ರಶ್ನೆ ಉದಿಸಿತು. ಬಹುದೇವಾರಾಧನೆಯ ಘೋಷಣೆ ಕೇಳಿದಾಗ ಅವರ ಆತ್ಮ ಕಳವಳಗೊಂಡಿತು. ಅವರು ಬಹಳ ಅವೇಶದಿಂದ ಶಿಷ್ಯರ ಕಡೆಗೆ ನೋಡುತ್ತಾ ಕೇಳಿದರು: "ನೀವೇಕೆ ಶತ್ರುಗಳಿಗೆ ಉತ್ತರ ನೀಡುವುದಿಲ್ಲ?" ಶಿಷ್ಯರು ಹೇಳಿದರು: "ನಾವು ಹೇಗೆ ಅವರಿಗೆ ಉತ್ತರ ನೀಡಬೇಕು." ಆಗ ಹಝ್ರತ್



ಪೈಗಂಬರ್(ಸ) ಹೇಳಿದರು:

"ಅಲ್ಲಾಹು ಅಅ್‌ಲಾ ವ ಅಜಲ್ಲು
ಅಲ್ಲಾಹು ಅಅ್‌ಲಾ ವ ಅಜಲ್ಲು"[48]

"ಅಲ್ಲಾಹನೇ ಸರ್ವೋನ್ನತ ಮತ್ತು ವೈಭವಶಾಲಿ
ಅಲ್ಲಾಹನೇ ಸರ್ವೋನ್ನತ ಮತ್ತು ವೈಭವಶಾಲಿ" ಎಂದು ಹೇಳಿರಿ.

ಈ ರೀತಿ ಹಝ್ರತ್ ಪೈಗಂಬರ್(ಸ) ತಾನು ಜೀವಂತವಾಗಿರುವ ವಿಷಯವನ್ನು ಶತ್ರುಗಳಿಗೆ ತಿಳಿಸಿದಂತಾಯಿತು. ಆದರೆ ಹಝ್ರತ್ ಪೈಗಂಬರರ(ಸ) ಘೋಷಣೆಯ ಪ್ರಭಾವ ಎಷ್ಟಾಯಿತೆಂದರೆ ಶತ್ರುಗಳು ನಿರುತ್ಸಾಹಗೊಂಡರು. ಅವರ ಮುಂದೆ ಇದ್ದುದು ಗಾಯಗೊಂಡವರಾದ ಅಲ್ಪಸಂಖ್ಯಾತರಾದ ಮುಸ್ಲಿಮರಾಗಿದ್ದರೂ ಮತ್ತು ಲೌಕಿಕ ದೃಷ್ಟಿಯಲ್ಲಿ ನೋಡಿದರೆ ಅವರನ್ನು ಕೊಂದು ಹಾಕುವುದು ಸಂಭಾವ್ಯವಾಗಿದ್ದರೂ ಶತ್ರುಗಳು ಅದಕ್ಕೆ ಮುಂದಾಗಲಿಲ್ಲ. ಅವರಿಗೆ ಲಭಿಸಿದ ವಿಜಯದ ಕುರಿತು ಆನಂದೋತ್ಸವಗಳನ್ನಾಚರಿಸುತ್ತಾ ಅವರು ಮಕ್ಕ ನಗರಕ್ಕೆ ಮರಳಿ ಹೋದರು.

ಉಹುದ್ ಯುದ್ಧದಲ್ಲಿ ಮುಸ್ಲಿಮರಿಗೆ ಜಯದ ನಂತರ ಹೀಗೆ ಅಪಜಯದ ಒಂದು ಅವಸ್ಥೆ ಉಂಟಾಯಿತು. ಆದರೆ ಈ ಯುದ್ಧ ಹಝ್ರತ್ ಪೈಗಂಬರರ(ಸ) ಸತ್ಯತೆಗೆ ಮಹತ್ತಾದ ಒಂದು ದೃಷ್ಟಾಂತವೂ ಆಗಿತ್ತು. ಈ ಯುದ್ಧದಲ್ಲಿ ಹಝ್ರತ್ ಪೈಗಂಬರರು(ಸ) ಮೊದಲೇ ಭವಿಷ್ಯ ನುಡಿದಂತೆ ಆರಂಭದಲ್ಲಿ ಜಯಲಭಿಸಿತು. ಅವರು ಮುಂಚಿತವಾಗಿ ನುಡಿದಂತೆ ಅವರ ಪ್ರಿಯ ಚಿಕ್ಕಪ್ಪ ಹಝ್ರತ್ ಹಮ್ಝು(ರ) ಯುದ್ಧದಲ್ಲಿ ಮೃತರಾದರು. ಶತ್ರುಗಳ ಸೈನ್ಯದ ಪತಾಕೆ ಎತ್ತಿಕೊಂಡು ಹಿಡಿದವನು ಕೊಲ್ಲಲ್ಪಟ್ಟನು. ಹಝ್ರತ್ ಪೈಗಂಬರ್(ಸ) ಗಾಯಗೊಂಡರು ಮತ್ತು ಅನೇಕ ಶಿಷ್ಯರು ಹುತಾತ್ಮರಾದರು. ಇವೆಲ್ಲಾ ಹಝ್ರತ್ ಪೈಗಂಬರರ(ಸ) ಭವಿಷ್ಯ ನುಡಿಗಳ ಪ್ರಕಾರ ಸಂಭವಿಸಿದುವು.

ಈ ಸಂದರ್ಭದಲ್ಲಿ ಮುಸ್ಲಿಮರು ತೋರಿಸಿದ ನಿಷ್ಠೆ ಮತ್ತು ವಿಶ್ವಾಸಕ್ಕೆ ಸಮಾನವಾದ ಉದಾಹರಣೆಗಳು ಚರಿತ್ರೆಯಲ್ಲಿ ಬೇರೆಲ್ಲಿಯೂ ಕಾಣಿಸುವುದಿಲ್ಲ. ಅವರು ಪ್ರಕಟಿಸಿದ ನಿಷ್ಠೆ ಮತ್ತು ವಿಶ್ವಾಸಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ಇದರ ಮೊದಲೇ ವಿವರಿಸಲಾಗಿದೆ. ಇನ್ನೊಂದು ಸಂಭವ ಸಹ ವಿವರಿಸಲು ಅರ್ಹವಾಗಿದೆ. ಹಝ್ರತ್ ಪೈಗಂಬರರೊಂದಿಗೆ(ಸ) ಸಹವಾಸ ಅವರ ಶಿಷ್ಯರ ಹೃದಯಗಳಲ್ಲಿ ಎಂತಹ ದೃಢವಿಶ್ವಾಸವನ್ನು ಉಂಟುಮಾಡಿತ್ತೆಂದು ಇದರಿಂದ ತಿಳಿಯಬಹುದು.

ಹಝ್ರತ್ ಪೈಗಂಬರ್(ಸ) ತನ್ನ ಕೆಲವು ಶಿಷ್ಯರೊಂದಿಗೆ ಬೆಟ್ಟದ ಕೆಳಗಿನ

48. ಸೀರತುಲ್ ಹಲ್‌ಬಿಯ್ಯ ಸಂಪುಟ 2 ಪುಟ 270

ಮೈದಾನ ಪ್ರದೇಶಕ್ಕೆ ಹೋದಾಗ ಮತ್ತು ಶತ್ರುಗಳು ಹಿಂದೆ ಸರಿದಾಗ ರಣಾಂಗಣದಲ್ಲಿ ಬಿದ್ದಿರುವ ಗಾಯಾಳುಗಳನ್ನು ಹುಡುಕಲು ತನ್ನ ಕೆಲವು ಶಿಷ್ಯರನ್ನು ಕಳುಹಿಸಿದರು. ಹುಡುಕುವವರಲ್ಲಿ ಒಬ್ಬರು ಗಾಯಾಳುವಾಗಿ ಬಿದ್ದಿದ್ದ ಮದೀನದ ಒಬ್ಬ ಮುಸ್ಲಿಮರ ಸಮೀಪಕ್ಕೆ ತಲಪಿದಾಗ ಆ ಗಾಯಾಳುವಿನ ಸ್ಥಿತಿ ಬಹಳ ಕಳವಳಕರವಾಗಿತ್ತು. ಅವರು ಪ್ರಾಣಬಿಡುವ ಅವಸ್ಥೆಯಲ್ಲಿದ್ದರು. ಹುಡುಕಲು ಹೋದವರು ಆ ಗಾಯಾಳುವಿಗೆ ಸಲಾಮ್ ಹೇಳಿದರು. ಆಗ ಆ ಗಾಯಾಳು ನಡುಗುತ್ತಿರುವ ಹಸ್ತವನ್ನು ಹಸ್ತಲಾಘವಕ್ಕಾಗಿ ಎತ್ತಿ ಅವರ ಕೈ ಹಿಡಿದು ಹೇಳಿದರು: “ಯಾರಾದರೊಬ್ಬ ಸಹೋದರ ನನಗೆ ಕಾಣಲು ಸಿಗಲಿ ಎಂಬ ಪ್ರತೀಕ್ಷೆಯಲ್ಲಿ ನಾನಿದ್ದೆ.” ಹುಡುಕಲು ಹೋದ ಆ ವ್ಯಕ್ತಿ ಗಾಯಾಳುವಿನೊಂದಿಗೆ ಹೇಳಿದರು: “ನಿಮ್ಮ ಸ್ಥಿತಿ ಬಹಳ ಆತಂಕಕರವಾಗಿದೆ ಎಂದು ನನಗೆ ತೋರುತ್ತದೆ. ನಿಮ್ಮ ಸಂಬಂಧಿಕರಿಗೆ ತಲಪಿಸಬೇಕಾದ ಸಂದೇಶವೇನಾದರೂ ಇದೆಯೇ?” ಆಗ ಆ ಮರಣಾಸನ್ನರಾದ ನಿಷ್ಠಾವಂತ ಭಕ್ತ ಹೇಳಿದರು: “ಹೌದು, ಹೌದು, ನನ್ನ ಸಂಬಂಧಿಕರಿಗೆ ನನ್ನ ಸಲಾಮ್ ತಿಳಿಸಿರಿ. ನಾನು ಸಾಯುತ್ತಿರುವೆನಾದರೂ ನನ್ನ ಹಿಂದೆ ಒಂದು ಪರಿಶುದ್ಧ ನಿಧಿಯನ್ನು ಎಂದರೆ ಹಝ್ರತ್ ಪೈಗಂಬರರನ್ನು(ಸ) ನಿಮ್ಮ ವಶಕ್ಕೆ ಬಿಟ್ಟು ನಾನು ಹೋಗುತ್ತಿದ್ದೇನೆ. ಅವರು ಅಲ್ಲಾಹನ ಸತ್ಯವಂತ ಪ್ರವಾದಿಯಾಗಿದ್ದಾರೆ. ನೀವು ಅವರನ್ನು ರಕ್ಷಿಸಲು ನಿಮ್ಮ ಜೀವವನ್ನೇ ಕೊಡಲು ಸಹ ಹಿಂಜರಿಯಬಾರದು ಎಂದು ನಾನು ಆಶಿಸುತ್ತೇನೆ. ನೀವು ನನ್ನ ಅಂತಿಮ ಅಭಿಲಾಷೆಯನ್ನು ನೆನಪಿಟ್ಟುಕೊಳ್ಳಿರಿ.”[49]

ಮೃತನಾಗುವ ಮನುಷ್ಯನ ಹೃದಯದಲ್ಲಿ ಅನೇಕ ಸಂದೇಶಗಳು ತನ್ನ ಸಂಬಂಧಿಕರಿಗೆ ತಲಪಿಸಲು ಇರುತ್ತವೆ. ಆದರೆ ಶಿಷ್ಯರು ಹಝ್ರತ್ ಪೈಗಂಬರರ(ಸ) ಒಡನಾಟದಲ್ಲಿ ಎಷ್ಟು ನಿಸ್ವಾರ್ಥಿಗಳಾಗಿದ್ದರೆಂದರೆ ಅವರಿಗೆ ಅವರ ಮಕ್ಕಳಾಗಲಿ, ಪತ್ನಿಯರಾಗಲಿ, ಸಂಪತ್ತಾಗಲಿ, ಆಸ್ತಿಪಾಸ್ತಿಗಳಾಗಲಿ ನೆನಪಿನಲ್ಲಿ ಉಳಿದಿರಲಿಲ್ಲ. ಅವರಿಗೆ ಹಝ್ರತ್ ಪೈಗಂಬರರ(ಸ) ಬಗ್ಗೆ ಮಾತ್ರ ಕಾಳಜಿ ಇದ್ದು ಅವರ ಬಗ್ಗೆ ಮಾತ್ರ ಚಿಂತಿಸುತ್ತಾ ಇದ್ದರು. ಆ ಮಹಾನ್ ವ್ಯಕ್ತಿಯ ಮೂಲಕವೇ ಲೋಕದ ಜನರಿಗೆ ಮೋಕ್ಷ ಲಭಿಸುವುದೆಂದು ಅವರು ಗ್ರಹಿಸಿದ್ದರು.

“ನಮ್ಮ ಅನಂತರ ನಮ್ಮ ಮಕ್ಕಳು ಜೀವಿಸಿದರೆ ಅವರು ಮಹತ್ವಪೂರ್ಣವಾದ ಕೆಲಸವೇನಾದರೂ ಮಾಡಲಾರರು. ಆದರೆ ಲೋಕಕ್ಕೆ ಮೋಕ್ಷವನ್ನು ದಯಪಾಲಿಸುವ ಉಪದೇಶವನ್ನು ನೀಡುವ ಆ ಮಹಾನ್ ವ್ಯಕ್ತಿಯ ರಕ್ಷಣೆ ಮಾಡುತ್ತಾ ನಮ್ಮ ಜೀವವನ್ನೇ ಕೊಟ್ಟರೆ ನಮ್ಮ ಕುಟುಂಬ ಅಳಿದು ಹೋದರೂ ಲೋಕವು ನವಜೀವನವನ್ನು ಪಡೆಯುವುದು. ಪೈಶಾಚಿಕ ಹಿಡಿತದಲ್ಲಿ ಸಿಲುಕಿಕೊಂಡಿರುವ ಮನುಷ್ಯನು ಪುನಃ ಬಿಡುಗಡೆ ಪಡೆಯುವನು ಮತ್ತು ನಮ್ಮ ಕುಟುಂಬಗಳ ಜೀವಿತಕ್ಕಿಂತ

49 ಮುಅತ್ತ ಇಮಾಮ್ ಮಾಲಿಕ್ ಮತ್ತು ಝುರ್‌ಖಾನಿ.



ಸಾವಿರಪಟ್ಟು ಹೆಚ್ಚು ಬೆಲೆಬಾಳುವಂತಹದು ಮಾನವರೆಲ್ಲರ ಜೀವಿತ ಮತ್ತು ಮೋಕ್ಷವಾಗಿದೆ.”– ಇದು ಅವರ ಯೋಚನೆಯಾಗಿತ್ತು.

ಹಝ್ರತ್ ಪೈಗಂಬರ್(ಸ) ರಣರಂಗದಲ್ಲಿ ಗಾಯಗೊಂಡವರನ್ನು ಒಂದು ಕಡೆ ಮಲಗಿಸಿ ಅವರಿಗೆ ಚಿಕಿತ್ಸೆಯ ಏರ್ಪಾಡು ಮಾಡಿದರು. ಹುತಾತ್ಮರ ದೇಹಗಳನ್ನು ದಫನು ಮಾಡಲಿಕ್ಕಾಗಿ ವ್ಯವಸ್ಥೆ ಮಾಡುವಾಗ ಕೆಲವರ ಕಿವಿ ಮತ್ತು ಮೂಗುಗಳನ್ನು ಅವಿಶ್ವಾಸಿಗಳು ತುಂಡರಿಸಿದುದಾಗಿ ಕಂಡು ಬಂದಿತು. ಹೀಗೆ ಕಿವಿ ಮತ್ತು ಮೂಗು ಕತ್ತರಿಸಲ್ಪಟ್ಟ ಮೃತದೇಹಗಳಲ್ಲಿ ಹಝ್ರತ್ ಪೈಗಂಬರರ(ಸ) ಚಿಕ್ಕಪ್ಪ ಹಝ್ರತ್ ಹಮ್ಝರ ಮೃತದೇಹವೂ ಇತ್ತು. ಮೃತದೇಹಗಳ ಈ ಅವಸ್ಥೆ ನೋಡಿ ಹಝ್ರತ್ ಪೈಗಂಬರರಿಗೆ(ಸ) ಬಹಳ ಸಂತಾಪವಾಯಿತು. ಅವರು ಹೇಳಿದರು: “ನಾವು ನ್ಯಾಯಬದ್ಧವಲ್ಲವೆಂದು ವಿಧಿಸಿದುದನ್ನು ಅವಿಶ್ವಾಸಿಗಳು, ನಾವು ಅವರಿಗೆ ಪ್ರತೀಕಾರ ಮಾಡಲು ನ್ಯಾಯಬದ್ಧಗೊಳಿಸಿರುತ್ತಾರೆ.” ಆದರೆ ಆಗ ಅಲ್ಲಾಹನ ಸಂದೇಶ ದೊರಕಿತು: “ಅವಿಶ್ವಾಸಿಗಳು ಹಾಗೆ ಮಾಡಲಿ. ಆದರೆ ನೀವು ದಯೆ ಮತ್ತು ನ್ಯಾಯವನ್ನು ಬಿಟ್ಟು ಎಂದೂ ವರ್ತಿಸಬಾರದು.”

## ಉಹುದ್ ಯುದ್ಧದಿಂದ ಮರಳಿಕೆ ಮತ್ತು ಮದೀನದವರಿಂದ ಸ್ನೇಹ ಮತ್ತು ನಿಷ್ಠೆಯ ಪ್ರಕಟಣೆ

ಮುಸ್ಲಿಮ್ ಸೈನ್ಯ ಮದೀನದ ಕಡೆಗೆ ಹೊರಡುವಷ್ಟರಲ್ಲಿಯೇ ಹಝ್ರತ್ ಪೈಗಂಬರ್(ಸ) ಹುತಾತ್ಮರಾದರೆಂದೂ ಮುಸ್ಲಿಮ್ ಸೈನ್ಯ ಚಲ್ಲಾಪಿಲ್ಲಿಯಾಗಿದೆ ಎಂದೂ ಮದೀನಕ್ಕೆ ವದಂತಿಗಳು ತಲಪಿದ್ದುವು. ಮದೀನದ ಮಹಿಳೆಯರೂ ಮಕ್ಕಳೂ ಉನ್ಮಾದ ಪೀಡಿತರ ಹಾಗೆ ಉಹುದ್ ಕಡೆಗೆ ಓಡಿಬರುತ್ತಿದ್ದರು. ಬಹುತೇಕ ಜನರಿಗೆ ಮಾರ್ಗ ಮಧ್ಯೆ ಸರಿಯಾದ ಸಮಾಚಾರ ತಲಪಿದಾಗ ಅವರು ನಿಂತರು. ಆದರೆ ಬನೂ ದೀನಾರ್ ಗೋತ್ರದ ಒಬ್ಬ ಮಹಿಳೆ ಅತ್ಯಂತ ಭಾವಾವೇಶದಿಂದ ಮುಂದಕ್ಕೆ ಓಡುತ್ತಾ ಉಹುದ್‌ಗೆ ತಲಪಿದಳು. ಆ ಮಹಿಳೆ ಉಹುದ್ ಕಡೆಗೆ ಹೋಗುತ್ತಿರುವಷ್ಟರಲ್ಲಿಯೇ ಆಕೆಯ ಪತಿ, ಸಹೋದರ ಮತ್ತು ಪಿತ ಯುದ್ಧದಲ್ಲಿ ಮೃತರಾಗಿದ್ದರು. ಕೆಲವು ವರದಿಗಳಲ್ಲಿ ಆಕೆಯ ಪುತ್ರನೂ ಕೊಲ್ಲಲ್ಪಟ್ಟಿದ್ದ ಎಂದು ಹೇಳಲಾಗಿದೆ. ಆ ಮಹಿಳೆಗೆ ಆಕೆಯ ಪಿತ ಕೊಲ್ಲಲ್ಪಟ್ಟ ವಾರ್ತೆ ತಿಳಿಸಿದಾಗ ಆಕೆ, “ಹಝ್ರತ್ ಪೈಗಂಬರರಿಗೆ(ಸ) ಏನಾಗಿದೆ ಎಂದು ನನಗೆ ತಿಳಿಸಿರಿ” ಎಂದು ಹೇಳಿದಳು. ಆಕೆಗೆ ಸಮಾಚಾರ ನೀಡುವ ವ್ಯಕ್ತಿಗೆ ಹಝ್ರತ್ ಪೈಗಂಬರ್(ಸ) ಜೀವಂತವಾಗಿರುವುದು ತಿಳಿದುದರಿಂದ ಸಮಾಧಾನಚಿತ್ತರಾಗಿ ಆಕೆಯ ಸಹೋದರ, ಪತಿ, ಮತ್ತು ಪುತ್ರನ ಮರಣವಾರ್ತೆಯನ್ನು ಒಂದಾದನಂತರ ಒಂದರಂತೆ ತಿಳಿಸುತ್ತಾ ಮುಂದುವರಿದರು. ಆದರೆ ಆ ಮಹಿಳೆ, “ಮಾ ಫಅಲ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್.” “ಅಯ್ಯೋ, ಹಝ್ರತ್ ಪೈಗಂಬರರು ಇದೇನು ಮಾಡಿದರು?” ಎಂದು ಕೇಳುತ್ತಾ ಹೋದಳು. ಈ ವಾಕ್ಯವನ್ನು ಮೇಲಿಂದ ಮೇಲೆ ನೋಡಿದರೆ ತಪ್ಪಾಗಿ ಕಾಣುತ್ತದೆ. ಆದುದರಿಂದ ಚರಿತ್ರೆಗಾರರು ಇದರ ಅರ್ಥವನ್ನು “ಹಝ್ರತ್

ಪೈಗಂಬರರಿಗೆ(ಸ) ಏನು ಸಂಭವಿಸಿತು?" ಎಂದು ಹೇಳಿದ್ದಾರೆ. ಆದರೆ ಆ ಮಹಿಳೆ ತಪ್ಪಾಗಿ ಏನನ್ನೂ ಹೇಳಲಿಲ್ಲ. ಆಕೆ ತನ್ನ ಭಾವಾವೇಶವನ್ನು ಸ್ತ್ರೀ ಸಹಜವಾದ ನುಡಿಗಟ್ಟಿನ ಮೂಲಕ ಸಷ್ಟಪಡಿಸಿದ್ದರು.

ಮಹಿಳೆಯರ ಭಾವೋದ್ವೇಗಗಳು ಬಹಳ ತೀವ್ರವಾಗಿರುತ್ತವೆ. ಅವರು ಮೃತರಾದವರನ್ನು ಜೀವಂತವಾಗಿ ಇರುವವರ ಹಾಗೆ ಭಾವಿಸಿ ಮಾತನಾಡುತ್ತಾರೆ. ಕೆಲವು ಮಹಿಳೆಯರ ಪತಿ ಅಥವಾ ಪುತ್ರ ಮೃತಪಟ್ಟರೆ ಆ ಮೃತ ವ್ಯಕ್ತಿಯನ್ನು ಜೀವಂತವಾಗಿರುವ ವ್ಯಕ್ತಿಯನ್ನು ಸಂಬೋಧಿಸುವಂತೆ "ನೀವು ನನ್ನನ್ನು ಯಾರ ವಶಕ್ಕೆ ಬಿಟ್ಟು ಹೋಗಿದ್ದೀರಿ?" ಅಥವಾ "ಮಗನೇ, ನನ್ನ ಈ ವೃದ್ಧಾಪ್ಯದಲ್ಲಿ ನನ್ನಿಂದ ನೀನೇಕೆ ಮುಖತಿರುಗಿಸಿ ಹೋದೆ?" ಎಂದೆಲ್ಲಾ ಹೇಳಿ ಪ್ರಲಾಪಿಸುತ್ತಾರೆ. ಇದು ದುಃಖವು ಅತಿರೇಕಗೊಂಡಾಗ ಮನುಷ್ಯ ಪ್ರಕೃತಿಯ ಒಂದು ಸೂಕ್ಷ್ಮ ಪ್ರದರ್ಶನವಾಗಿರುತ್ತದೆ. ಇದೇ ರೀತಿ ಹಝ್ರತ್ ಪೈಗಂಬರರ(ಸ) ಮರಣ ವದಂತಿ ಕೇಳಿ ಆ ಮಹಿಳೆಯ ಅವಸ್ಥೆಯಾಯಿತು. ಆಕೆ ಅವರನ್ನು ಮೃತರೆಂದು ಭಾವಿಸಲು ಸಿದ್ಧಳಾಗಿರಲಿಲ್ಲ. ಆದರೆ ಆಕೆಗೆ ಆ ಸುದ್ದಿಯನ್ನು ಅಲ್ಲಗಳೆಯಲು ಸಹ ಸಾಧ್ಯವಿರಲಿಲ್ಲ. ಆದುದರಿಂದ ದುಃಖಾತಿರೇಕದಿಂದ ಹೀಗೆ ಹೇಳುತ್ತಾ ಹೋದಳು: "ಅಯ್ಯೋ ಹಝ್ರತ್ ಪೈಗಂಬರರು(ಸ) ಇದೇನು ಮಾಡಿದರು?" ಆಕೆ ಉದ್ದೇಶಿಸಿದುದು, ಅಂತಹ ಸ್ನೇಹಭರಿತ ಮಹಾನುಭಾವರು ನಮಗೆ ದುಃಖವನ್ನುಂಟುಮಾಡಲು ಹೇಗೆ ತಾನೆ ಸಮ್ಮತಿಸಿದರು? ಎಂದಾಗಿತ್ತು. ಆ ಮಹಿಳೆಗೆ ತನ್ನ ಪಿತ, ಸಹೋದರ ಮತ್ತು ಪತಿಯ ಬಗ್ಗೆ ಕಾಳಜಿ ಇಲ್ಲ ಎಂದು ಜನರು ಅರಿತಾಗ ಆಕೆಯ ನೈಜ ಆಸಕ್ತಿ ಯಾವ ವಿಷಯವನ್ನು ತಿಳಿಯುವುದರಲ್ಲಿದೆ ಎಂದು ಅವರು ಅರಿತುಕೊಂಡರು. ಅವರು ಹೇಳಿದರು: "ಅಮ್ಮಾ! ಹಝ್ರತ್ ಪೈಗಂಬರ್(ಸ) ನೀವು ಆಶಿಸಿದ ಹಾಗೆಯೇ ಅಲ್ಲಾಹನ ಕೃಪೆಯಿಂದ ಜೀವಂತವಾಗಿಯೇ ಇದ್ದಾರೆ." ಆಗ ಆ ಮಹಿಳೆ ಹೇಳಿದರು: "ನನಗೆ ಹಝ್ರತ್ ಪೈಗಂಬರರನ್ನು ತೋರಿಸಿರಿ. ಅವರೆಲ್ಲಿದ್ದಾರೆ?" ಜನರು ಹೇಳಿದರು: "ನೀವು ಮುಂದಕ್ಕೆ ಹೋಗಿರಿ. ಹಝ್ರತ್ ಪೈಗಂಬರ್(ಸ) ಅಗೋ ಅಲ್ಲಿ ನಿಂತಿದ್ದಾರೆ."

ಆ ಮಹಿಳೆ ಓಡುತ್ತಾ ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಹೋದರು. ಆಕೆ ಅವರ ಅಂಗಿಯ ತುದಿಯನ್ನು ಹಿಡಿದು ಹೀಗೆಂದರು: "ನನ್ನ ತಂದೆ ತಾಯಿ ತಮಗಾಗಿ ಬಲಿಯಾಗಲಿ. ನೀವು ಸುರಕ್ಷಿತರಾಗಿರುವಾಗ ಬೇರೆ ಯಾರು ಮೃತರಾದರೂ ನನಗೆ ಪರಿವೆ ಇಲ್ಲ."

ಪುರುಷರು ಯುದ್ಧದಲ್ಲಿ ಭಾಗವಹಿಸುವಾಗ ತಮ್ಮ ವಿಶ್ವಾಸದ ಮಹತ್ತಾದ ಮಾದರಿ ತೋರಿಸಿದರು. ಮಹಿಳೆಯರು ನಾನು ವಿವರಿಸಿದಂತಹ ನಿಷ್ಠೆಯ ಮಾದರಿ ತೋರಿಸಿದರು.

ಮಗ್ದಲದ ಮರಿಯ ಮತ್ತು ಆಕೆಯ ಜೊತೆಗಾರ್ತಿಯರಾದ ಮಹಿಳೆಯರು ಯೇಸು ಮಸೀಹರ ಶವಕುಟೀರವನ್ನು ತಲಪಲು ತೋರಿಸಿದ ಧೈರ್ಯದ ಕುರಿತು



ಕ್ರೈಸ್ತರು ಬಹಳ ಮೆಚ್ಚುಗೆ ಸೂಚಿಸಿರುವರು. ನಾನು ಅವರೊಂದಿಗೆ ಹೀಗೆ ಹೇಳಲು ಬಯಸುತ್ತೇನೆ:

"ನಾನು ಪ್ರೀತಿಸುವ ಆ ಮಹಾನ್ ಪ್ರವಾದಿಯ ನಿಷ್ಠಾವಂತರಾದ ಮತ್ತು ಪ್ರತಿಜ್ಞಾಬದ್ಧರಾದ ಶಿಷ್ಯರನ್ನು ನೀವು ನೋಡಿರಿ. ಅವರು ಎಂತಹ ವಿಷಮ ಪರಿಸ್ಥಿತಿಯಲ್ಲಿ ಹಝ್ರತ್ ಪೈಗಂಬರರಿಗೆ(ಸ) ಬೆಂಬಲವಾಗಿ ನಿಂತರು. ಅವರು ಎಂತಹ ಕಠಿಣ ಪರಿಸ್ಥಿತಿಯಲ್ಲಿ ಏಕದೇವಾರಾಧನೆಯ ಪತಾಕೆಯನ್ನು ಎತ್ತಿಹಿಡಿದರು."

ಇಂತಹ ಪ್ರೀತಿ ಮತ್ತು ನಿಷ್ಠೆಯ ಇನ್ನೊಂದು ಉದಾಹರಣೆ ಚರಿತ್ರೆಯಲ್ಲಿ ಸಿಗುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯುದ್ಧದಲ್ಲಿ ಮಡಿದ ಹುತಾತ್ಮರ ಮೃತಶರೀರಗಳನ್ನು ದಫನು ಮಾಡಿ ಮದೀನಕ್ಕೆ ಮರಳಿದಾಗ ಮಹಿಳೆಯರೂ ಮಕ್ಕಳೂ ಅವರನ್ನು ಸ್ವಾಗತಿಸಲು ನಗರದ ಹೊರಗೆ ಬಂದು ಪ್ರತೀಕ್ಷಿಸುತ್ತಿದ್ದರು.

ಹಝ್ರತ್ ಪೈಗಂಬರರ(ಸ) ಒಂಟೆಯ ಹಗ್ಗವನ್ನು ಮದೀನದ ಮುಖ್ಯ ವ್ಯಕ್ತಿಯಾಗಿದ್ದ ಸಅದ್ ಬಿನ್ ಮುಆಝ್(ರ) ಹಿಡಿದಿದ್ದರು. ಅವರು ಬಹಳ ಹೆಮ್ಮೆಯಿಂದ ಮುಂದೆ ಮುಂದಕ್ಕೆ ಓಡುತ್ತಾ ಹೋಗುತ್ತಿದ್ದರು. ಅವರು ಪ್ರಾಯಶಃ ಲೋಕದ ಜನರೊಂದಿಗೆ, "ನೋಡಿದಿರಾ, ನಾವು ಹಝ್ರತ್ ಪೈಗಂಬರರನ್ನು ಸುರಕ್ಷಿತವಾಗಿ ಮನೆಗೆ ಕರೆದುಕೊಂಡು ಬಂದಿದ್ದೇವೆ" ಎಂದು ಘೋಷಿಸಲು ಬಯಸಿದಂತೆ ವರ್ತಿಸುತ್ತಿದ್ದರು.

ನಗರವನ್ನು ಸಮೀಪಿಸಿದಾಗ ಸಅದ್ ಬಿನ್ ಮುಆಝ್‌ರ ವೃದ್ಧೆ ಮಾತೆ ತಮ್ಮ ಕಡೆಗೆ ಬರುತ್ತಿರುವುದಾಗಿ ಕಾಣಿಸಿತು. ಆ ಮಹಿಳೆಯ ಕಣ್ಣಿನ ದೃಷ್ಟಿ ಮಂದವಾಗಿತ್ತು. ಉಹುದ್‌ನಲ್ಲಿ ಅವರ ಒಬ್ಬ ಪುತ್ರನಾದ ಅಮ್‌ರ್ ಬಿನ್ ಮುಆಝ್(ರ) ಸಹ ಕೊಲ್ಲಲ್ಪಟ್ಟಿದ್ದರು. ತಮ್ಮ ತಾಯಿಯನ್ನು ನೋಡಿ ಸಅದ್ ಬಿನ್ ಮುಆಝ್ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನನ್ನ ತಾಯಿ ಬರುತ್ತಾ ಇದ್ದಾರೆ." ಹಝ್ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನ ಅನುಗ್ರಹದೊಂದಿಗೆ ಅವರು ನನ್ನ ಮುಂದೆ ಬರಲಿ."

ಆಗ ಆ ವೃದ್ಧೆ ಮುಂದೆ ಬಂದು ತನ್ನ ದೃಷ್ಟಿಗುಂದಿದ ಕಣ್ಣುಗಳಿಂದ ಅತ್ತಿತ್ತ ನೋಡಿದರು. ಹಝ್ರತ್ ಪೈಗಂಬರರನ್ನು(ಸ) ನೋಡಲು ಅವರು ಬಯಸಿದ್ದರು. ಕೊನೆಗೆ ಅವರು ಹಝ್ರತ್ ಪೈಗಂಬರರ(ಸ) ಮುಖದ ಗುರುತು ಹಿಡಿದು ಸಂತೋಷಭರಿತರಾದರು.

ಹಝ್ರತ್ ಪೈಗಂಬರ್(ಸ) ಹೇಳಿದರು: "ತಾಯೀ, ನಿಮ್ಮ ಪುತ್ರನು ಯುದ್ಧದಲ್ಲಿ ಹುತಾತ್ಮನಾದ ಬಗ್ಗೆ ನಾನು ನಿಮ್ಮೊಂದಿಗೆ ಸಹಾನುಭೂತಿ ಹೊಂದಿದ್ದೇನೆ." ಆಗ ಆ ಮಹಿಳೆ ಹೇಳಿದರು: "ಹುಝೂರ್, ನೀವು ಸುರಕ್ಷಿತರಾಗಿರುವುದನ್ನು ನಾನು ಕಂಡಾಗ ನಾನು ನನ್ನ ಕಷ್ಟಗಳನ್ನು ಸುಟ್ಟು ತಿಂದುಬಿಟ್ಟಿದ್ದೇನೆ."

"ಕಷ್ಟಗಳನ್ನು ಸುಟ್ಟು ತಿಂದುಬಿಟ್ಟಿದ್ದೇನೆ" ಎಂಬುದು ಎಂತಹ ವಿಚಿತ್ರ

ನುಡಿಗಟ್ಟಾಗಿದೆ. ಅದು ಅವರಿಗೆ ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಪ್ರೀತಿ ಎಷ್ಟು ಗಾಢವಾಗಿತ್ತು ಎಂಬುದನ್ನು ಸೂಚಿಸುತ್ತದೆ. ದುಃಖವು ಮನುಷ್ಯನನ್ನು ತಿಂದು ಹಾಕುತ್ತದೆ. ಆ ಮಹಿಳೆಯ ವೃದ್ಧಾಪ್ಯದ ಊರುಗೋಲು ತುಂಡಾಗಿ ಹೋಗಿತ್ತು. ಆದರೆ ಆಕೆ ಹೇಳಿದುದನ್ನು ಗಮನಿಸಿರಿ:

"ನನ್ನ ಪುತ್ರನ ಮರಣದ ದುಃಖ ನನ್ನನ್ನು ಹೇಗೆ ತಾನೆ ತಿನ್ನಬಹುದು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಜೀವಂತವಾಗಿದ್ದರೆ ನಾನು ಆ ದುಃಖವನ್ನು ತಿಂದು ಹಾಕಬಲ್ಲೆನು. ನನ್ನ ಪುತ್ರನ ಮೃತ್ಯು ನನ್ನನ್ನು ಸಾಯುವಂತೆ ಮಾಡಲಾರದು. ಅವನು ಹಝ್ರತ್ ಪೈಗಂಬರರಿಗಾಗಿ(ಸ) ತನ್ನ ಜೀವ ತೆತ್ತುದುದು ನನ್ನ ಶಕ್ತಿಯನ್ನು ವರ್ಧಿಸುವಂತಹದ್ದಾಗಿದೆ. ಓ ಮದೀನದ ಹುತಾತ್ಮರೇ, ನನ್ನ ಪ್ರಾಣ ನಿಮ್ಮ ಮೇಲಿನ ಪ್ರೀತಿಯಲ್ಲಿ ಲೀನವಾಗಿದೆ. ನೀವು ಎಂತಹ ಪುಣ್ಯವನ್ನು ಗಳಿಸಿಕೊಂಡು ಹೋಗಿರುವಿರಿ." ಇದು ಆ ವೃದ್ಧ ಮಹಿಳೆಯ ನಿಲುವಾಗಿತ್ತು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸುರಕ್ಷಿತವಾಗಿ ಮದೀನವನ್ನು ತಲಪಿದರು. ಈ ಯುದ್ಧದಲ್ಲಿ ಬಹಳ ಮುಸ್ಲಿಮರು ಕೊಲ್ಲಲ್ಪಟ್ಟಿದ್ದರು ಮತ್ತು ಬಹಳ ಮಂದಿ ಗಾಯಗೊಂಡಿದ್ದರು. ಆದರೆ ಉಹುದ್ ಯುದ್ಧವನ್ನು ಸೋಲೆಂದು ಹೇಳಲು ಆಗದು. ನಾನು ಮೇಲೆ ವಿವರಿಸಿದ ಸಂಗತಿಗಳಿಂದ ಅದು ಬಹಳ ದೊಡ್ಡ ವಿಜಯವಾಗಿತ್ತೆಂದು ಗ್ರಹಿಸಬಹುದು. ಲೋಕದ ಅಂತ್ಯದವರೆಗೆ ಮುಸ್ಲಿಮರು ಅದನ್ನು ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ವಿಶ್ವಾಸವನ್ನು ವರ್ಧಿಸಬಹುದಾದ ವಿಜಯ ಅದಾಗಿತ್ತು. ಅವರು ತಮ್ಮ ವಿಶ್ವಾಸದಲ್ಲಿ ವರ್ಧಿಸುತ್ತಾ ಹೋಗುವರು.

ಮದೀನಕ್ಕೆ ಮರಳಿದ ನಂತರ ಹಝ್ರತ್ ಪೈಗಂಬರ್(ಸ) ತಮ್ಮ ಆದ್ಯ ಕರ್ತವ್ಯಗಳಾದ ಜನರಿಗೆ ತರಬೇತಿ ನೀಡುವುದು, ಜ್ಞಾನ ಕಲಿಸುವುದು ಮತ್ತು ಆತ್ಮಶುದ್ಧಿಗೊಳಿಸುವುದು ಮೊದಲಾದ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಆದರೆ ಅವರಿಗೆ ತಮ್ಮ ಕೆಲಸವನ್ನು ಸಮಾಧಾನದಿಂದ ಮತ್ತು ಸುಲಭವಾಗಿ ಮುಂದುವರಿಸಲು ಸಾಧ್ಯವಾಗಲಿಲ್ಲ. ಉಹುದ್ ಯುದ್ಧದ ನಂತರ ಯಹೂದಿಯರಲ್ಲಿ ಇನ್ನಷ್ಟು ಧೈರ್ಯ ಉಂಟಾಗಿತ್ತು. ಕಪಟವಿಶ್ವಾಸಿಗಳು ಪುನಃ ತಲೆಯೆತ್ತಲು ಪ್ರಾರಂಭಿಸಿದರು. ಇಸ್ಲಾಮನ್ನು ಅಳಿಸಿಬಿಡುವುದು ಪ್ರಾಯಶಃ ಮಾನವನ ಶಕ್ತಿಗೆ ಸಾಧ್ಯವಾದ ಸಂಗತಿಯಾಗಿದೆ ಎಂದು ಅವರು ಭಾವಿಸಿದರು. ಯಹೂದಿಯರು ಹಝ್ರತ್ ಪೈಗಂಬರರಿಗೆ(ಸ) ನಾನಾ ವಿಧ ಕಷ್ಟಗಳನ್ನು ನೀಡಲು ತೊಡಗಿದರು. ಅವರು ಅಶ್ಲೀಲ ಪದ್ಯಗಳನ್ನು ರಚಿಸಿ ಹಝ್ರತ್ ಪೈಗಂಬರರ(ಸ) ಮತ್ತು ಅವರ ವಂಶದವರ ನಿಂದೆ ಮಾಡುತ್ತಿದ್ದರು.

ಒಮ್ಮೆ ಹಝ್ರತ್ ಪೈಗಂಬರರಿಗೆ(ಸ) ಯಾವುದೋ ವ್ಯಾಜ್ಯದ ತೀರ್ಮಾನಕ್ಕಾಗಿ ಯಹೂದಿಯರ ಕೋಟೆಯೊಳಗೆ ಹೋಗಬೇಕಾಯಿತು. ಅವರು ಅಲ್ಲಿ ಕುಳಿತಿದ್ದಾಗ ಅವರ ಮೇಲೆ ಒಂದು ದೊಡ್ಡ ಬಂಡೆಕಲ್ಲನ್ನು ಬೀಳಿಸಿ ಅವರನ್ನು ಕೊಲ್ಲಲು ಯಹೂದಿಯರು ಗೂಢಾಲೋಚನೆ ನಡೆಸಿದ್ದರು. ಆದರೆ ಅದು ಸಂಭವಿಸುವ ಮೊದಲೇ ಅಲ್ಲಾಹನು ಆ ಸಂಗತಿಯನ್ನು ತಿಳಿಸಿದುದರಿಂದ ಹಝ್ರತ್ ಪೈಗಂಬರ್(ಸ)



ಏನೂ ಹೇಳದೆ ಅಲ್ಲಿಂದ ಹೊರಟು ಬಂದರು. ಅನಂತರ ಯಹೂದಿಯರು ತಮ್ಮ ತಪ್ಪನ್ನು ಒಪ್ಪಿಕೊಂಡರು.

ಮುಸ್ಲಿಮ್ ಮಹಿಳೆಯರನ್ನು ಪೇಟೆಯಲ್ಲಿ ಅಪಮಾನ ಮಾಡಲಾಗುತ್ತಿತ್ತು. ಒಮ್ಮೆ ಒಂದು ಜಗಳದಲ್ಲಿ ಒಬ್ಬ ಮುಸ್ಲಿಮನು ಕೊಲ್ಲಲ್ಪಟ್ಟನು. ಒಮ್ಮೆ ಒಬ್ಬ ಮುಸ್ಲಿಮ್ ಹುಡುಗಿಯ ತಲೆಯನ್ನು ಯಹೂದಿಯರು ಕಲ್ಲಿನಿಂದ ಹೊಡೆದು ಘಾಸಿಗೊಳಿಸಿದರು. ಆ ಹುಡುಗಿ ನರಳಿ ನರಳಿ ಮೃತಳಾದಳು. ಈ ಕಾರಣಗಳಿಂದ ಯಹೂದಿಯರ ವಿರುದ್ಧ ಸಹ ಮುಸ್ಲಿಮರು ಹೋರಾಡಬೇಕಾಯಿತು. ಆದರೆ ಅರಬಿಯರ ಮತ್ತು ಯಹೂದಿಯರ ಸಂಪ್ರದಾಯ ಪ್ರಕಾರ ಅವರನ್ನು ಮುಸ್ಲಿಮರು ಕೊಲ್ಲಲಿಲ್ಲ. ಅವರು ಮದೀನ ಬಿಟ್ಟು ಹೋಗಬೇಕೆಂದು ಶರ್ತ ವಿಧಿಸಿ ಅವರನ್ನು ಬಿಟ್ಟು ಬಿಟ್ಟರು. ಯಹೂದಿಯರ ಎರಡು ಪಂಗಡಗಳಲ್ಲಿ ಒಂದು ಸಿರಿಯಕ್ಕೆ ವಲಸೆ ಹೋಯಿತು. ಇನ್ನೊಂದು ಪಂಗಡದ ಕೆಲವರು ಸಿರಿಯಕ್ಕೆ ಮತ್ತು ಉಳಿದವರು ಮದೀನಕ್ಕೆ ಉತ್ತರದಲ್ಲಿರುವ ಖೈಬರ್ ಎಂಬಲ್ಲಿಗೆ ಹೋದರು. ಆ ಪಟ್ಟಣ ಅರಬ್ ದೇಶದಲ್ಲಿ ಯಹೂದಿಯರ ಕೇಂದ್ರವಾಗಿತ್ತು ಮತ್ತು ಬಲಿಷ್ಠ ಕೋಟೆಗಳಿಂದ ಕೂಡಿತ್ತು.

## ಮದ್ಯಪಾನ ನಿಷೇಧದ ಆಜ್ಞೆ ಮತ್ತು ಅದರ ಅಪ್ರತಿಮ ಪ್ರಭಾವ

ಇಸ್ಲಾಮ್ ಧರ್ಮವು ಅದರ ಅನುಯಾಯಿಗಳಲ್ಲಿ ಬೀರುವ ಪ್ರಭಾವದ ಸ್ಪಷ್ಟವಾದ ಉದಾಹರಣೆಯನ್ನು ಉಹುದ್ ಯುದ್ಧ ಮತ್ತು ಅನಂತರ ಉಂಟಾದ ಯುದ್ಧದ ಮಧ್ಯಾವಧಿಯಲ್ಲಿ ಲೋಕದ ಜನರು ಕಂಡರು. ನಾವು ಉದ್ದೇಶಿಸುವುದು ಮದ್ಯಪಾನ ನಿಷೇಧವನ್ನು ಜಾರಿಗೊಳಿಸಿದ ಬಗ್ಗೆಯಾಗಿದೆ.

ಇಸ್ಲಾಮ್ ಧರ್ಮವು ಸ್ಥಾಪನೆಯಾಗುವ ಕಾಲದ ಮೊದಲಿನ ಸ್ಥಿತಿಯನ್ನು ವಿವರಿಸುತ್ತಾ ನಾವು ಅರಬಿಯರ ಕುರಿತು ಅವರು ನಿತ್ಯವೂ ಮದ್ಯಪಾನ ಮಾಡುವ ಅಭ್ಯಾಸವನ್ನು ಹೊಂದಿದ್ದರೆಂದು ವಿವರಿಸಿರುವೆವು. ಪ್ರತಿಯೊಂದು ಪ್ರತಿಷ್ಠಿತ ಅರಬ್ ಮನೆತನದಲ್ಲಿ ಪ್ರತಿದಿನ ಐದು ಬಾರಿ ಮದ್ಯಪಾನ ಮಾಡಲಾಗುತ್ತಿತ್ತು. ಮದ್ಯಪಾನದಿಂದ ಮತ್ತರಾಗುವುದು ಅವರಿಗೆ ಸಾಮಾನ್ಯ ವಿಷಯವಾಗಿತ್ತು. ಅವರು ಆ ಬಗ್ಗೆ ಸ್ವಲ್ಪ ಮಾತ್ರವೂ ಲಜ್ಜೆಯನ್ನು ಹೊಂದಿರಲಿಲ್ಲ. ಅವರು ಅದನ್ನು ಒಳ್ಳೆಯದಾದ ಅಭಿಮಾನಾರ್ಹ ಸಂಗತಿ ಎಂದು ಭಾವಿಸುತ್ತಿದ್ದರು. ಯಾರಾದರೂ ಅತಿಥಿ ಬಂದರೆ ಮದ್ಯವನ್ನು ಹಂಚುವುದು ಮನೆಯೊಡತಿಯ ಕರ್ತವ್ಯವಾಗಿತ್ತು. ಇಂತಹ ಜನರಿಂದ ಮದ್ಯಪಾನದಂತಹ ವಿನಾಶಕರ ದುರಭ್ಯಾಸವನ್ನು ಬಿಡಿಸುವುದು ಸುಲಭದ ಕೆಲಸವೇನೂ ಆಗಿರಲಿಲ್ಲ.

ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಬಂದ ನಂತರ ನಾಲ್ಕನೆಯ ವರ್ಷದಲ್ಲಿ ಮದ್ಯಪಾನ ನಿಷೇಧದ ಆಜ್ಞೆಯನ್ನು ಅಲ್ಲಾಹನು ಅವರಿಗೆ ಅವತೀರ್ಣಗೊಳಿಸಿದನು. ಈ ಆಜ್ಞೆಯು ಅವತೀರ್ಣಗೊಂಡ ಕೂಡಲೇ ಮುಸ್ಲಿಮರು ಮದ್ಯಪಾನ ಮಾಡುವುದನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟರು.

ಹಝ್ರತ್ ಪೈಗಂಬರರ(ಸ) ವಚನಗಳ ಸಂಗ್ರಹವಾದ ಹದೀಸು ಗ್ರಂಥದಲ್ಲಿ ಹೀಗೆ ವರದಿಯಾಗಿದೆ: ಮದ್ಯಪಾನವನ್ನು ನಿಷಿದ್ಧಗೊಳಿಸಿದ ಆಜ್ಞೆಯನ್ನು ಅಲ್ಲಾಹನು ಅವತೀರ್ಣಗೊಳಿಸಿದಾಗ ಹಝ್ರತ್ ಪೈಗಂಬರ್(ಸ) ತನ್ನ ಒಬ್ಬ ಶಿಷ್ಯರನ್ನು ಕರೆದು, "ಮದ್ಯಪಾನ ನಿಷೇಧದ ಈ ಹೊಸ ಆಜ್ಞೆಯನ್ನು ಮದೀನದಲ್ಲೆಲ್ಲಾ ಪ್ರಕಟಿಸಿರಿ" ಎಂದು ಹೇಳಿದರು. ಆ ಸಮಯದಲ್ಲಿ ಮದೀನದ ಒಬ್ಬ ಮುಸ್ಲಿಮರ ಮನೆಯಲ್ಲಿ ಮದ್ಯಪಾನದ ಔತಣಕೂಟ ಜರಗುತ್ತಾ ಇತ್ತು. ಬಹಳ ಜನ ಆಮಂತ್ರಿತರು ನೆರೆದಿದ್ದರು. ಮದ್ಯಪಾನ ಮುಂದುವರಿಯುತ್ತಾ ಇತ್ತು. ಮದ್ಯದ ದೊಡ್ಡದಾದೊಂದು ಮಡಕೆ ಬರಿದಾಗಿತ್ತು. ಇನ್ನೊಂದು ದೊಡ್ಡ ಮಡಕೆಯಿಂದ ಪಾನವು ಪ್ರಾರಂಭವಾಗುವುದರಲ್ಲಿತ್ತು. ಹಲವು ಜನರು ಪಾನಮತ್ತರಾಗಿದ್ದರು. ಬೇರೆ ಹಲವು ಮಂದಿ ಪಾನಮತ್ತರಾಗಲಿದ್ದರು. ಇಂತಹ ಪರಿಸ್ಥಿತಿಯಲ್ಲಿ ಅವರು, "ಹಝ್ರತ್ ಪೈಗಂಬರ್(ಸ) ಅಲ್ಲಾಹನ ಆಜ್ಞೆ ಪ್ರಕಾರ ಮದ್ಯಪಾನ ನಿಷಿದ್ಧಗೊಳಿಸಿ ಆದೇಶವನ್ನು ಜಾರಿಗೊಳಿಸಿರುವರು" ಎಂದು ಒಬ್ಬ ವ್ಯಕ್ತಿ ಘೋಷಿಸುತ್ತಾ ಇರುವುದನ್ನು ಆಲಿಸಿದರು. ಆಗ ಪಾನಕೂಟದಿಂದ ಒಬ್ಬ ವ್ಯಕ್ತಿ ಎದ್ದು ನಿಂತು, "ಇದು ಮದ್ಯಪಾನ ನಿಷಿದ್ಧಗೊಳಿಸಿದುದರ ಆಜ್ಞೆ ಎಂದು ಕಾಣುತ್ತದೆ. ಆದರೆ ನಾವು ಆ ಬಗ್ಗೆ ಸರಿಯಾಗಿ ತಿಳಿದುಕೊಳ್ಳುವ" ಎಂದು ಹೇಳಿದರು. ಆಗ ಇನ್ನೊಬ್ಬರು ಎದ್ದು ನಿಂತು ಮದ್ಯದಿಂದ ತುಂಬಿದ ಮಡಕೆಯನ್ನು ತನ್ನ ಬಡಿಗೆಯಿಂದ ಹೊಡೆದು ತುಂಡು ತುಂಡಾಗಿ ಒಡೆದು ಹಾಕಿ ಹೀಗೆ ಹೇಳಿದರು: "ನೀವೆಲ್ಲರೂ ಮೊದಲು ಆಜ್ಞೆಯನ್ನು ಪಾಲಿಸಿರಿ. ಅನಂತರ ಅದರ ಬಗ್ಗೆ ವಿಚಾರಿಸಿ ತಿಳಿದುಕೊಳ್ಳಿರಿ. ಇಂತಹ ಪ್ರಕಟಣೆ ಆಲಿಸಿದುದೇ ನಾವು ಅದನ್ನು ಪಾಲಿಸಲು ನಮಗೆ ಸಾಕು. ನಾವು ಮದ್ಯಪಾನ ಮಾಡುತ್ತಾ ಅದರ ಬಗ್ಗೆ ವಾಸ್ತವಿಕ ಸಂಗತಿಯನ್ನು ತಿಳಿಯಲೆತ್ನಿಸುವುದು ಸರಿಯಲ್ಲ. ಮೊದಲು ಮದ್ಯವನ್ನು ರಸ್ತೆಗಳಲ್ಲಿ ಹರಿಯಲು ಬಿಡೋಣ. ಅನಂತರ ಈ ಘೋಷಣೆಯ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆಯಲು ಪ್ರಯತ್ನಿಸೋಣ.[49a]

ಆ ಮುಸ್ಲಿಮ್ ಸಹೋದರನ ಈ ಯೋಚನೆ ಸರಿಯಾಗಿತ್ತು. ಮದ್ಯಪಾನ ಮಾಡುವುದು ನಿಷಿದ್ಧವೆಂದು ಘೋಷಿಸಲ್ಪಟ್ಟ ನಂತರ ಮದ್ಯಪಾನವನ್ನು ಮುಂದುವರಿಸುತ್ತಿದ್ದರೆ ಹಾಗೆ ಮಾಡುವವರು ಒಂದು ಅಪರಾಧ ಮಾಡಿದಂತೆ ಆಗುತ್ತಿತ್ತು. ಆದರೆ ಮದ್ಯಪಾನ ಮಾಡುವುದು ನಿಷಿದ್ಧ ಗೊಳಿಸಲ್ಪಟ್ಟಿರಲಿಲ್ಲವಾದರೆ ಮದ್ಯವನ್ನು ಚೆಲ್ಲಿ ಹರಿಯಲು ಬಿಟ್ಟುದರಿಂದ ಸಹಿಸ ಲಾಗದ ನಷ್ಟವೇನೂ ಆಗುತ್ತಿರಲಿಲ್ಲ.

ಮದ್ಯಪಾನ ನಿಷಿದ್ಧಗೊಳಿಸಲಾದ ಈ ಘೋಷಣೆಯ ನಂತರ ಮದ್ಯಪಾನವು ಮುಸ್ಲಿಮರಿಂದ ಸಂಪೂರ್ಣವಾಗಿ ದೂರ ಸರಿಯಿತು. ಈ ಮಹತ್ತಾದ ಪರಿವರ್ತನೆಯನ್ನುಂಟುಮಾಡಲು ವಿಶೇಷ ಪ್ರಯತ್ನ ಮತ್ತು ಕಠಿಣ ಪರಿಶ್ರಮದ

49a. ಬುಖಾರಿ.



ಅಗತ್ಯ ಬರಲಿಲ್ಲ. ಈ ಆಜ್ಞೆಯನ್ನು ಆಲಿಸಿದ ಕೂಡಲೆ ಕೃತಿಗಿಳಿಸಿದ ಮುಸ್ಲಿಮರಲ್ಲಿ ಕೆಲವರು ಅನಂತರ ಎಪ್ಪತ್ತು ಎಂಬತ್ತು ವರ್ಷಗಳವರೆಗೆ ಜೀವಿಸಿದ್ದರೂ ಅವರಲ್ಲಿ ಒಬ್ಬನೂ ಈ ಆಜ್ಞೆಯ ನಂತರ ಅದರ ವಿರುದ್ಧವಾಗಿ ನಡೆದಿರಲಿಲ್ಲ. ಹಾಗೆ ಯಾರಾದರೂ ಮಾಡಿದ್ದರೆ ಅಂತಹ ವ್ಯಕ್ತಿ ಹಝ್ರತ್ ಪೈಗಂಬರ್‌ರವರೊಂದಿಗೆ(ಸ) ನೇರವಾದ ಸಂಬಂಧವನ್ನು ಹೊಂದದವ ನಾಗಿರಬೇಕು. ನಾವು ಈ ಘಟನೆಯನ್ನು ಅಮೇರಿಕದ ಪಾನ ನಿಷೇಧ ಆಂದೋಲನದೊಂದಿಗೆ ಮತ್ತು ಪಾನ ನಿಷೇಧವನ್ನು ಜಾರಿಗೊಳಿಸಲು ಮಾಡಿದ ಅವರ ಪ್ರಯತ್ನಗಳೊಂದಿಗೆ ಹೋಲಿಸಿ ನೋಡಿದಾಗ ಹಾಗೂ ವರ್ಷಗಟ್ಟಲೆ ಕಾಲ ಯುರೋಪಿನಲ್ಲಿ ಪಾನ ನಿಷೇಧ ಜಾರಿಗೊಳಿಸಲು ಮಾಡಲಾದ ಪ್ರಯತ್ನಗಳೊಂದಿಗೆ ಹೋಲಿಸಿ ನೋಡುವುದಾದರೆ, ಒಂದು ಕಡೆ, ಪಾನ ನಿಷೇಧ ಜಾರಿಗೊಳಿಸಲು ಹಝ್ರತ್ ಪೈಗಂಬರರ(ಸ) ಒಂದು ಪ್ರಕಟಣೆ ಮಾತ್ರ ನಾಗರಿಕತೆಯ ಈ ದೋಷವನ್ನು ಅರಬಿಗಳಿಂದ ಅಳಿಸಿ ಬಿಡಲು ಸಾಕಾಯಿತೆಂದು ತಿಳಿಯುತ್ತದೆ. ಇನ್ನೊಂದು ಕಡೆ, ಮದ್ಯಪಾನ ನಿಷೇಧ ಜಾರಿಗೊಳಿಸಲು ಕಾಯಿದೆಗಳು ರಚಿಸಲ್ಪಟ್ಟವು. ಪೋಲೀಸರು, ಸೈನ್ಯ ಮತ್ತು ಅಬಕಾರಿ ವಿಭಾಗದ ಅಧಿಕಾರಿಗಳು ಒಗ್ಗೂಡಿ ಮದ್ಯಪಾನದ ಶಾಪವನ್ನು ದೂರೀಕರಿಸಲು ಐಕ್ಯದಿಂದ ಪ್ರಯತ್ನಿಸಿದರೂ ಅವರು ಜಯಗಳಿಸಲಿಲ್ಲ. ಅವರು ತಮ್ಮ ಪರಾಜಯವನ್ನು ಸಮ್ಮತಿಸಬೇಕಾಯಿತು. ಮದ್ಯಪಾನಕ್ಕೆ ಜಯವಾಯಿತು. ಮದ್ಯಪಾನವನ್ನು ಸಮಾಜದಿಂದ ದೂರೀಕರಿಸಲು ಸಾಧ್ಯವಾಗಲಿಲ್ಲ.

ನಮ್ಮ ಈ ಕಾಲಘಟ್ಟವನ್ನು ನಾವು ಪ್ರಗತಿಯ ಕಾಲಘಟ್ಟವೆಂದು ಕರೆಯುತ್ತೇವೆ. ಆದರೆ ನಾವು ಈ ಕಾಲವನ್ನು ಇಸ್ಲಾಮಿನ ಆರಂಭದ ಆ ಕಾಲಘಟ್ಟದೊಂದಿಗೆ ಹೋಲಿಸಿ ನೋಡಿದರೆ ನಮ್ಮ ಈಗಿನ ಕಾಲಘಟ್ಟವೋ ಅಥವಾ ನಾಗರಿಕ ಜೀವನದಲ್ಲಿ ಅಂತಹ ಕ್ರಾಂತಿಕಾರಕ ಪರಿವರ್ತನೆ ಉಂಟುಮಾಡಿದ ಆ ಕಾಲಘಟ್ಟವೋ ನಿಜವಾಗಿ ಪ್ರಗತಿಪರವಾದುದು ಎಂಬುದನ್ನು ನಿರ್ಧರಿಸಲು ನಾವು ಗೊಂದಲಕ್ಕೊಳಗಾಗುತ್ತೇವೆ.

## ಉಹುದ್ ಯುದ್ಧದ ನಂತರ ಅವಿಶ್ವಾಸಿ ಗೋತ್ರಗಳ ಗೂಢ ಕಾರ್ಯಯೋಜನೆಗಳು

ಉಹುದ್ ಸಂಭವ ಸುಲಭವಾಗಿ ಮರೆತುಬಿಡುವಂತಹದು ಆಗಿರಲಿಲ್ಲ. ಅದು ಇಸ್ಲಾಮ್ ಧರ್ಮದ ವಿರುದ್ಧ ತಮ್ಮ ಪ್ರಥಮ ವಿಜಯವೆಂದು ಮಕ್ಕದವರು ಭಾವಿಸಿದ್ದರು. ಅವರು ಈ ಸಮಾಚಾರವನ್ನು ಸಂಪೂರ್ಣವಾಗಿ ಅರಬ್ ದೇಶದಲ್ಲಿ ಪ್ರಚಾರಗೊಳಿಸಿದರು. ಅದರ ಮೂಲಕ ಅರಬ್ ಗೋತ್ರಗಳನ್ನು ಇಸ್ಲಾಮಿನ ವಿರುದ್ಧ ಪ್ರಚೋದಿಸಲು ಮತ್ತು ಮುಸ್ಲಿಮರು ಅಜೇಯರಲ್ಲ ಎಂಬ ದೃಢ ನಂಬಿಕೆ ಅವರಲ್ಲಿ ಉಂಟುಮಾಡಲು ಪ್ರಯತ್ನಿಸುತ್ತಾ ಇದ್ದರು. ಮುಸ್ಲಿಮರು ಅಭಿವೃದ್ಧಿ ಹೊಂದುತ್ತಿರುವುದು ಅವರ ಶಕ್ತಿಯ ಕಾರಣದಿಂದಲ್ಲ ಎಂದೂ ಅರಬ್ ಗೋತ್ರಗಳು ಅವರ ಬಗ್ಗೆ ನಿರ್ಲಕ್ಷ್ಯದಿಂದಿರುವುದೇ ಇದಕ್ಕೆ ಕಾರಣವೆಂದೂ ಅರಬಿ ಗೋತ್ರಗಳು ಒಗ್ಗೂಡಿ ಪ್ರಯತ್ನಿಸಿದರೆ ಮುಸ್ಲಿಮರನ್ನು ಪರಾಜಯಗೊಳಿಸುವುದು ಕಷ್ಟದ

ಕೆಲಸವೇನೂ ಅಲ್ಲವೆಂದೂ ಅವರು ಪ್ರಚಾರ ಮಾಡುತ್ತಿದ್ದರು. ಈ ಪ್ರಚಾರಗಳ ಫಲ ಸ್ವರೂಪವಾಗಿ ಮುಸ್ಲಿಮರ ವಿರುದ್ಧ ಅವಿಶ್ವಾಸಿಗಳ ವಿರೋಧ ತೀವ್ರವಾಗುತ್ತಾ ಹೋಯಿತು. ಮುಸ್ಲಿಮರಿಗೆ ತೊಂದರೆ ಕೊಡಲು ಮಕ್ಕದವರಿಗಿಂತ ಮಕ್ಕದ ಹೊರಗಿನ ಅರಬಿ ಗೋತ್ರಗಳು ಹೆಚ್ಚು ಹೆಚ್ಚಾಗಿ ಕಾರ್ಯಶೀಲವಾಗಲು ತೊಡಗಿದುವು. ಕೆಲವರು ಬಹಿರಂಗವಾಗಿ ಮುಸ್ಲಿಮರನ್ನು ಆಕ್ರಮಿಸಲು ತೊಡಗಿದರು. ಬೇರೆ ಕೆಲವರು ಗುಪ್ತವಾಗಿ ನಷ್ಟವನ್ನು ಉಂಟುಮಾಡಲು ಪ್ರಾರಂಭಿಸಿದರು.

ಹಝ್‌ರತ್ ಪೈಗಂಬರ್[ಸ] ಮದೀನಕ್ಕೆ ವಲಸೆ ಬಂದನಂತರ ನಾಲ್ಕನೆಯ ವರ್ಷದಲ್ಲಿ ಅರಬ್ ದೇಶದ ಎರಡು ಅರಬ್ ಗೋತ್ರಗಳಾದ ಅಝ್‌ಲ್ ಮತ್ತು ಖಾರಃ[49b] ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ, "ನಮ್ಮ ಗೋತ್ರಗಳಲ್ಲಿ ಹಲವರು ಇಸ್ಲಾಮಿನ ಬಗ್ಗೆ ತಿಳಿಯಲು ಆಸಕ್ತರಾಗಿದ್ದಾರೆ. ಇಸ್ಲಾಮಿನ ಕುರಿತು ಚೆನ್ನಾಗಿ ತಿಳಿದಿರುವ ಕೆಲವರನ್ನು ನಮ್ಮ ಬಳಿಗೆ ಕಳುಹಿಸಿಕೊಡಿರಿ. ಅವರು ನಮಗೆ ಹೊಸ ಧರ್ಮದ ತತ್ವಗಳನ್ನು ಕಲಿಸಿಕೊಡಲಿ" ಎಂದು ಕೋರಿದರು.

ಆದರೆ ವಾಸ್ತವಿಕವಾಗಿ ಅವರ ಕೋರಿಕೆ ಒಂದು ಒಳಸಂಚಿನ ಭಾಗವಾಗಿತ್ತು. ಇಸ್ಲಾಮಿನ ಕಠಿಣ ಶತ್ರುಗಳಾದ ಬನೂ ಲಹ್‌ಯಾನ್ ಗೋತ್ರದವರು ಇದರ ಸೂತ್ರಧಾರಕರಾಗಿದ್ದರು. ತಮ್ಮ ಪ್ರತಿನಿಧಿಗಳು ಮುಸ್ಲಿಮರನ್ನು ಕರೆದುಕೊಂಡು ಬಂದರೆ ಆ ಮುಸ್ಲಿಮರನ್ನು ಕೊಂದು ಹಾಕಿ ತಮ್ಮ ನಾಯಕನಾಗಿದ್ದ ಸುಫ್‌ಯಾನ್ ಬಿನ್ ಖಾಲಿದನ ಕೊಲೆಗೆ ಪ್ರತೀಕಾರ ಮಾಡುವುದು ಅವರ ಉದ್ದೇಶವಾಗಿತ್ತು. ಈ ಉದ್ದೇಶವನ್ನು ಈಡೇರಿಸಲು ಮೇಲೆ ವಿವರಿಸಿದ ಪ್ರತಿನಿಧಿಗಳಿಗೆ ದೊಡ್ಡ ದೊಡ್ಡ ಬಹುಮಾನಗಳ ವಾಗ್ದಾನ ನೀಡಿ ಹಝ್‌ರತ್ ಪೈಗಂಬರರ[ಸ] ಬಳಿಗೆ ಕಳುಹಿಸಿದ್ದರು.

ಮೇಲೆ ವಿವರಿಸಿದ ಪ್ರತಿನಿಧಿಗಳು ಹಝ್‌ರತ್ ಪೈಗಂಬರರನ್ನು[ಸ] ಸಮೀಪಿಸಿ ತಮ್ಮ ಬೇಡಿಕೆಯನ್ನು ಸಮರ್ಪಿಸಿದಾಗ ಹಝ್‌ರತ್ ಪೈಗಂಬರ್[ಸ] ಅವರ ಮಾತನ್ನು ನಂಬಿ ಹತ್ತು ಮುಸ್ಲಿರನ್ನು ಇಸ್ಲಾಮಿನ ಪಾಠಗಳನ್ನು ಮತ್ತು ತತ್ವಗಳನ್ನು ಜನರಿಗೆ ಕಲಿಸಲು ಅವರ ಜೊತೆಗೆ ಕಳುಹಿಸಿಕೊಟ್ಟರು. ಈ ಗುಂಪು ಬನೂ ಲಹ್‌ಯಾನ್ ಗೋತ್ರದ ಪ್ರದೇಶವನ್ನು ಹಾದು ಹೋಗುವಾಗ ಆ ಪ್ರತಿನಿಧಿಗಳು ಅಬೂ ಲಹ್‌ಯಾನ್ ಗೋತ್ರದವರಿಗೆ, "ಈ ಮುಸ್ಲಿಮರನ್ನು ಸೆರೆಹಿಡಿಯಿರಿ ಅಥವಾ ಕೊಂದು ಹಾಕಿ" ಎಂದು ಹೇಳಿ ಕಳುಹಿಸಿದರು. ಈ ಕೆಟ್ಟ ಒಳಸಂಚಿನ ಪರಿಣಾಮವಾಗಿ ಬನೂ ಲಹ್‌ಯಾನ್ ಗೋತ್ರದ ಇನ್ನೂರು ಮಂದಿ, ಮುಸ್ಲಿಮರನ್ನು ಬೆನ್ನಟ್ಟಲು ಹೊರಟರು. ಕೊನೆಗೆ ರಜೀಅ್ ಎಂಬ ಸ್ಥಳದಲ್ಲಿ ಅವರ ಬಳಿಗೆ ಬಂದು ಸುತ್ತುವರಿದರು. ಹತ್ತು ಮುಸ್ಲಿಮರ ಮತ್ತು ಇನ್ನೂರು ಅವಿಶ್ವಾಸಿಗಳ ಮಧ್ಯೆ ಹೋರಾಟ ನಡೆಯಿತು. ಮುಸ್ಲಿಮರ ಹೃದಯಗಳು ವಿಶ್ವಾಸದ ಪ್ರಕಾಶದಿಂದ ತುಂಬಿದ್ದುವು. ವಿರೋಧಿಗಳ ಹೃದಯಗಳು ಅದರಿಂದ ಬರಿದಾಗಿದ್ದುವು. ಹತ್ತು ಮುಸ್ಲಿಮರು ಒಂದು ಎತ್ತರವಾದ

49b. ಬುಖಾರಿ; ಝುರ್‌ಖಾನಿ.



ಬೆಟ್ಟವನ್ನೇರಿದರು ಮತ್ತು ಇನ್ನೂರು ಜನರಿಗೆ ಯುದ್ಧಾಹ್ವಾನ ನೀಡಿದರು. ಶತ್ರುಗಳು ಅವರೊಂದಿಗೆ, "ನೀವು ಕೆಳಗಿಳಿದು ಬಂದರೆ ನಿಮ್ಮನ್ನು ನಾವು ಏನೂ ಮಾಡುವುದಿಲ್ಲ" ಎಂದು ಹೇಳಿ ಮೋಸಕ್ಕೊಳಪಡಿಸಿ ಬಂಧಿಸಲು ಪ್ರಯತ್ನಿಸಿದರು. ಆದರೆ ಮುಸ್ಲಿಮರ ನಾಯಕ, "ಅವಿಶ್ವಾಸಿಗಳ ಪ್ರತಿಜ್ಞೆ ಮತ್ತು ಅದರ ಮೌಲ್ಯಗಳನ್ನು ನಾವು ಚೆನ್ನಾಗಿ ನೋಡಿದ್ದೇವೆ" ಎಂದು ಹೇಳಿ ಆಕಾಶವನ್ನು ಅಭಿಮುಖೀಕರಿಸಿ ಪ್ರಾರ್ಥಿಸಿದರು:

"ಓ ಅಲ್ಲಾಹ್, ನೀನು ನಮ್ಮ ಸ್ಥಿತಿಯನ್ನು ನೋಡುತ್ತಿರುವೆ. ನೀನು ಈ ಘಟನೆಯ ಸಮಾಚಾರ ಹಝ್‌ರತ್ ಪೈಗಂಬರರಿಗೆ[ಸ] ತಿಳಿಸು."

ಮುಸ್ಲಿಮರ ಈ ಚಿಕ್ಕ ಗುಂಪಿನ ಮೇಲೆ ತಮ್ಮ ಮಾತಿನ ಪ್ರಭಾವ ಉಂಟಾಗುವುದಿಲ್ಲವೆಂದು ಅವಿಶ್ವಾಸಿಗಳು ಅರಿತಾಗ ಅವರು ಮುಸ್ಲಿಮರನ್ನು ಆಕ್ರಮಿಸಿದರು. ಮುಸ್ಲಿಮರು ಸೋಲಿನ ಭಯವಿಲ್ಲದೆ ಹೋರಾಡಲು ತೊಡಗಿದರು. ಅವರಲ್ಲಿ ಏಳು ಮಂದಿ ಹುತಾತ್ಮರಾದರು. ಉಳಿದ ಮೂವರೊಂದಿಗೆ ಅವಿಶ್ವಾಸಿಗಳು ಹೇಳಿದರು: "ನೀವು ಬೆಟ್ಟದಿಂದ ಇಳಿದು ಬಂದರೆ ನಿಮ್ಮ ಜೀವಗಳನ್ನು ರಕ್ಷಿಸುವೆವು."

ಆ ಮೂವರು ಮುಸ್ಲಿಮರು ಅವಿಶ್ವಾಸಿಗಳ ವಾಗ್ದಾನವನ್ನು ನಂಬಿ ಬೆಟ್ಟದಿಂದ ಕೆಳಗಿಳಿದು ಬಂದಾಗ ಅವರನ್ನು ತಮ್ಮ ಬಿಲ್ಲಿನೊಂದಿಗೆ ಸೇರಿಸಿ ಅವಿಶ್ವಾಸಿಗಳು ಕಟ್ಟಿದರು. ಆಗ ಮುಸ್ಲಿಮರ ಪೈಕಿ ಒಬ್ಬರು ಹೇಳಿದರು: "ನೀವು ನಿಮ್ಮ ವಾಗ್ದಾನದ ವಿರುದ್ಧ ಪ್ರಥಮ ಕೆಲಸ ಮಾಡಿದಿರಿ. ನೀವು ಇದರ ನಂತರ ಏನೆಲ್ಲಾ ಮಾಡುವಿರಿ ಎಂದು ಅಲ್ಲಾಹನಿಗೆ ಮಾತ್ರ ತಿಳಿದಿದೆ." ಹೀಗೆ ಹೇಳಿದ ಅವರು ಅವಿಶ್ವಾಸಿಗಳ ಜೊತೆ ಹೋಗಲು ನಿರಾಕರಿಸಿದರು. ಅವಿಶ್ವಾಸಿಗಳು ಅವರನ್ನು ಹೊಡೆಯಲು ಮತ್ತು ಎಳೆದುಕೊಂಡು ಹೋಗಲು ಪ್ರಾರಂಭಿಸಿದರು. ಆದರೆ ಆ ಮುಸ್ಲಿಮ್, ಅವಿಶ್ವಾಸಿಗಳೊಂದಿಗೆ ಹೋಗಲು ಸಮ್ಮತಿಸದುದರಿಂದ ಮತ್ತು ತಮ್ಮ ನಿರ್ಧಾರದಲ್ಲಿ ಸ್ಥಿರವಾಗಿದ್ದುದರಿಂದ ಅವರನ್ನು ಅವಿಶ್ವಾಸಿಗಳು ಅಲ್ಲೇ ಕೊಂದು ಹಾಕಿದರು. ಉಳಿದಿಬ್ಬರನ್ನು ಕರೆದುಕೊಂಡು ಹೋಗಿ ಮಕ್ಕದ ಖುರೈಶ್ ಗೋತ್ರದವರಿಗೆ ಗುಲಾಮರನ್ನಾಗಿ ಮಾರಿದರು. ಅವರಲ್ಲಿ ಒಬ್ಬರ ಹೆಸರು ಖುಬೈಬ್.[ರ] ಇನ್ನೊಬ್ಬರ ಹೆಸರು ಝೈದ್[ರ].

ಖುಬೈಬರನ್ನು ಖರೀದಿ ಮಾಡಿದಾತನು ತನ್ನ ಪಿತನನ್ನು ಬದ್ರ್ ಯುದ್ಧದಲ್ಲಿ ಅವರು ಕೊಂದುದರಿಂದ ಅವರನ್ನು ಕೊಲ್ಲಲು ಉದ್ದೇಶಿಸಿದ್ದನು. ಒಂದು ದಿನ ಖುಬೈಬ್ ತನ್ನ ಯಾವುದೋ ಆವಶ್ಯಕತೆಗಾಗಿ ಚೂರಿಯನ್ನು ಕೇಳಿ ಪಡಕೊಂಡಿದ್ದರು. ಚೂರಿ ಖುಬೈಬರ ಕೈಯಲ್ಲಿದ್ದಾಗ ಒಂದು ಮಗು ಆಡುತ್ತಾ ಅವರ ಸನಿಹಕ್ಕೆ ಬಂದಿತು. ಖುಬೈಬ್ ಆ ಮಗುವನ್ನು ಎತ್ತಿಕೊಂಡು ತನ್ನ ತೊಡೆಯ ಮೇಲೆ ಕುಳ್ಳಿರಿಸಿದರು. ಆ ಮಗುವಿನ ತಾಯಿ ಇದನ್ನು ನೋಡಿ ಭಯಭೀತಳಾದಳು. ತಾವು ಖುಬೈಬ್‌ರನ್ನು ಕೊಲೆಮಾಡಲು ಉದ್ದೇಶಿಸಿರುವುದರಿಂದ ಅವರು ನಿಶ್ಚಯವಾಗಿಯೂ ಮಗುವನ್ನು ಕೊಲ್ಲುವರು ಎಂದು ಅವಳು ದೃಢವಾಗಿ ನಂಬಿದಳು. ಆ ಸಮಯದಲ್ಲಿ ಚೂರಿ ಖುಬೈಬ್‌ರ ಬಳಿ ಇತ್ತು. ಮಗು ಹತ್ತಿರವಿದ್ದುದರಿಂದ ಅದಕ್ಕೆ ಹಾನಿಯನ್ನುಂಟು ಮಾಡುವುದು ಸುಲಭವಾಗಿತ್ತು. ಖುಬೈಬ್ ಆ ಮಗುವಿನ

ತಾಯಿಯನ್ನು ನೋಡಿ ಅವಳ ಭಯವನ್ನು ಮನವರಿಕೆ ಮಾಡಿಕೊಂಡು, "ನಾನು ನಿಮ್ಮ ಮಗುವನ್ನು ಕೊಲ್ಲುವೆನೆಂದು ನೀವು ಯೋಚಿಸಿದ್ದೀರಾ. ಈ ಯೋಚನೆ ಎಂದೂ ಮನಸ್ಸಿಗೆ ತರಬೇಡಿರಿ. ನಾನು ಅಂತಹ ಕೆಟ್ಟಕೆಲಸವನ್ನು ಎಂದೂ ಮಾಡಲಾರೆನು. ಮುಸ್ಲಿಮರು ಮೋಸಗಾರರಲ್ಲ" ಎಂದರು. ಆ ಮಹಿಳೆ ಖುಬೈಬ್‌ರ ಇಂತಹ ವಿಶ್ವಾಸಪಾತ್ರವಾದ ಮತ್ತು ಸರಿಯಾದ ನಡವಳಿಕೆಯಿಂದ ಪ್ರಭಾವಿತಳಾದಳು. ಆಕೆ ಇದನ್ನು ಯಾವಾಗಲೂ ನೆನಪಿಟ್ಟುಕೊಂಡು, "ನಾನು ಖುಬೈಬ್‌ರಂತಹ ಗುಲಾಮರನ್ನು ಎಂದೂ ಕಂಡಿಲ್ಲ" ಎಂದು ಹೇಳುತ್ತಿದ್ದಳು.

ಕೊನೆಗೆ ಮಕ್ಕದವರು ಖುಬೈಬರನ್ನು ಕೊಂದು ಉತ್ಸವಾಚರಣೆ ಮಾಡಲು ಒಂದು ವಿಶಾಲವಾದ ಮೈದಾನಕ್ಕೆ ಅವರನ್ನು ಕರೆದುಕೊಂಡು ಹೋದರು. ಅವರನ್ನು ಕೊಲ್ಲುವ ಸಮಯ ಸಮೀಪಿಸಿದಾಗ, "ನನಗೆ ಎರಡು ರಕ್‌ಅತ್ ನಮಾಝ್ ಮಾಡಲು ಬಿಡಿರಿ" ಎಂದು ಹೇಳಿದರು. ಖುರೈಶ್ ಗೋತ್ರದವರು ಅದಕ್ಕೆ ಒಪ್ಪಿದರು. ಖುಬೈಬ್[ರ] ಎಲ್ಲರ ಮುಂದೆ ಈ ಲೋಕದಲ್ಲಿ ಕೊನೆಯ ಬಾರಿ ಅಲ್ಲಾಹನನ್ನು ಆರಾಧಿಸಿದರು. ಅವರು ನಮಾಝ್ ಅನುಷ್ಠಿಸಿದ ನಂತರ ಹೀಗೆ ಹೇಳಿದರು: "ನಾನು ನಮಾಝನ್ನು ದೀರ್ಘಗೊಳಿಸಬೇಕೆಂದು ಇಚ್ಚಿಸಿದ್ದೆ. ಆದರೆ ನಾನು ಮರಣಭೀತಿಯನ್ನು ಹೊಂದಿದ್ದೇನೆಂದು ನೀವು ಭಾವಿಸದಿರಲಿ ಎಂದು ನಮಾಝನ್ನು ಬೇಗನೆ ಮುಕ್ತಾಯಗೊಳಿಸಿದೆ." ಅನಂತರ ಅವರು ತನ್ನ ತಲೆಯನ್ನು ಹಂತಕನ ಮುಂದೆ ಇರಿಸುತ್ತಾ ಈ ಪದ್ಯ ಹಾಡಿದರು. ಅರ್ಥ:

"ನಾನು ಮುಸ್ಲಿಮನಾಗಿರುವ ಸ್ಥಿತಿಯಲ್ಲಿ ಕೊಲ್ಲಲ್ಪಡುವುದರಿಂದ ನನ್ನ ಶರೀರ ಯಾವ ಕಡೆಗೆ ಬೀಳಲಿದೆ ಎಂದು ನನಗೆ ಪರಿವೆ ಇಲ್ಲ. ಇದೆಲ್ಲಾ ಅಲ್ಲಾಹನಿಗಾಗಿದೆ. ಅಲ್ಲಾಹನು ಬಯಸುವುದಾದರೆ ನನ್ನ ಶರೀರದ ಛೇದಿಸಲ್ಪಟ್ಟ ತುಂಡು ತುಂಡುಗಳ ಮೇಲೆಯೂ ತನ್ನ ಅನುಗ್ರಹಗಳನ್ನು ಸುರಿಸಬಲ್ಲನು."[49c]

ಖುಬೈಬ್[ರ] ತನ್ನ ಪದ್ಯವನ್ನು ಹೇಳಿ ಮುಗಿಸುವಷ್ಟರಲ್ಲಿ ಹಂತಕನ ಖಡ್ಗ ಅವರ ಕುತ್ತಿಗೆಯ ಮೇಲೆ ಬಿತ್ತು. ತಲೆ ನೆಲಕ್ಕೆ ಬಿದ್ದಿತು. ಉತ್ಸವಾಚರಣೆಗೆ ನೆರೆದವರಲ್ಲಿ ಸಅದ್ ಬಿನ್ ಆಮಿರ್ ಸಹ ಇದ್ದರು. ಅವರು ಅನಂತರ ಮುಸ್ಲಿಮರಾದರು.

ಖುಬೈಬರ ಕೊಲೆಯ ವೃತ್ತಾಂತವನ್ನು ಸಅದ್ ಬಿನ್ ಆಮಿರ್‌ರವರ ಸಮ್ಮುಖದಲ್ಲಿ ವಿವರಿಸುವಾಗ ದುಃಖಾತಿರೇಕದ ಕಾರಣದಿಂದ ಅವರಿಗೆ ಪ್ರಜ್ಞಾಶೂನ್ಯತೆ ಉಂಟಾಗುತ್ತಿತ್ತೆಂದು ವರದಿ ಮಾಡಲ್ಪಟ್ಟಿದೆ.

ಗುಲಾಮರಾಗಿ ಮಾಡಲ್ಪಟ್ಟ ಇನ್ನೊಬ್ಬರಾದ ಝೈದರನ್ನು ಕೊಲ್ಲಲು ಮೈದಾನಕ್ಕೆ ಅವಿಶ್ವಾಸಿಗಳು ಕರೆದೊಯ್ದ ಸಂದರ್ಭದಲ್ಲಿ ಅದನ್ನು ಸಂತೋಷದಿಂದ ವೀಕ್ಷಿಸಲು ತಲಪಿದವರಲ್ಲಿ ಮಕ್ಕದ ಮುಖಂಡರಲ್ಲೊಬ್ಬರಾದ ಅಬೂ ಸುಫ್‌ಯಾನ್ ಸಹ ಇದ್ದರು. ಅವರು ಝೈದ್‌ರೊಂದಿಗೆ, "ನೀವು ಮನೆಯಲ್ಲಿ ಸುಖವಾಗಿದ್ದು ಮುಹಮ್ಮದ್

49c. ಬುಖಾರಿ.



ನಿಮ್ಮ ಸ್ಥಾನದಲ್ಲಿ ಈಗ ಇರಬೇಕಿತ್ತು ಎಂದು ನೀವು ಬಯಸುವುದಿಲ್ಲವೇ?" ಎಂದು ಕೇಳಿದಾಗ ಝೈದ್[ರ] ಹೇಳಿದರು: "ಅಬೂ ಸುಫ್‌ಯಾನ್, ನೀವು ಹೇಳುತ್ತಿರುವುದಾದರೂ ಏನು? ಅಲ್ಲಾಹನಾಣೆ, ಮದೀನದ ಮಾರ್ಗದಲ್ಲಿ ಒಂದು ಮುಳ್ಳು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಚುಚ್ಚಿ ನೋವುಂಟು ಮಾಡುವುದಕ್ಕಿಂತ ನಾನು ಮರಣಹೊಂದುವುದೇ ಉತ್ತಮ ಎಂದು ನಾನು ಬಗೆದಿರುವೆನು."[49d]

ಅವರು ಹಝ್ರತ್ ಪೈಗಂಬರರಿಗೆ[ಸ] ಸೂಚಿಸಿದ ಪ್ರೀತಿಯಿಂದ ಅಬೂ ಸುಫ್‌ಯಾನ್ ಪ್ರಭಾವಿತರಾಗದೆ ಇರಲಿಲ್ಲ. ಅವರು ಮೆಲ್ಲಗೆ ಹೇಳಿದರು: "ಅಲ್ಲಾಹನು ನಾನು ಹೇಳುವುದಕ್ಕೆ ಸಾಕ್ಷಿಯಾಗಿರುವನು. ಯಾವ ಪ್ರಕಾರ ಮುಹಮ್ಮದರೊಂದಿಗೆ ಅವರ ಸಂಗಡಿಗರು ಪ್ರೀತಿ ತೋರಿಸುತ್ತಾರೋ ಆ ರೀತಿಯಲ್ಲಿ ಬೇರೆ ಯಾವುದೇ ವ್ಯಕ್ತಿ ಇನ್ನೊಬ್ಬನೊಂದಿಗೆ ಪ್ರೀತಿ ಹೊಂದಿರು ವುದನ್ನು ನಾನು ನೋಡಿಲ್ಲ."

## ಪವಿತ್ರ ಖುರ್‌ಆನನ್ನು ಕಂಠಪಾಠ ಮಾಡಿದ ಎಪ್ಪತ್ತು ಮಂದಿಯನ್ನು ವಧಿಸಿದ ಘೋರ ಸಂಭವ[50]

ಸುಮಾರು ಇದೇ ಕಾಲದಲ್ಲಿ ನಜ್‌ದ್‌ನಿಂದ ಕೆಲವು ಜನರು ಹಝ್ರತ್ ಪೈಗಂಬರರ[ಸ] ಬಳಿಗೆ ಬಂದು, ಇಸ್ಲಾಮಿನ ಬಗ್ಗೆ ಕಲಿಸುವ ಕೆಲವರನ್ನು ತಮ್ಮ ಬಳಿಗೆ ಕಳುಹಿಸಿಕೊಡಲು ಅಪೇಕ್ಷಿಸಿದರು.

ಹಝ್ರತ್ ಪೈಗಂಬರ್[ಸ] ಅವರನ್ನು ನಂಬಲಿಲ್ಲ, ಆದರೆ ಆಗ ಮದೀನದಲ್ಲಿದ್ದ ಅಬೂ ಬರಾ ಎಂಬ ಗಣ್ಯ ವ್ಯಕ್ತಿ "ನಾನು ಆ ಗೋತ್ರದವರ ಬಗ್ಗೆ ಜಾಮೀನುದಾರನಾಗುತ್ತೇನೆ. ಅವರು ಏನೂ ಕೆಡುಕನ್ನು ಮಾಡಲಾರರು" ಎಂದು ಹಝ್ರತ್ ಪೈಗಂಬರರಿಗೆ[ಸ] ಖಾತರಿ ನೀಡಿದುದರಿಂದ ಹಝ್ರತ್ ಪೈಗಂಬರರು[ಸ] ಪವಿತ್ರ ಖುರ್‌ಆನ್ ಕಂಠಪಾಠ ಮಾಡಿದ ಎಪ್ಪತ್ತು ಮಂದಿಯನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟರು.

ಈ ಜನರ ಗುಂಪು ಬಿಅ್ರ್ ಮವೂನ ಎಂಬ ಸ್ಥಳವನ್ನು ತಲಪಿದಾಗ ಒಬ್ಬ ಮುಸ್ಲಿಮರಾದ ಜರಾಮ್ ಬಿನ್ ಮಲ್‌ಹಾನ್[ರ] ಎಂಬವರು ಆಮಿರ್ ಗೋತ್ರದ ಮುಖಂಡನ ಬಳಿಗೆ ಇಸ್ಲಾಮಿನ ಸಂದೇಶ ನೀಡಲು ಹೋದರು. ಆ ವ್ಯಕ್ತಿ ಅಬೂ ಬರಾ ಎಂಬ ಈ ಹಿಂದೆ ಪ್ರಸ್ತಾಪಿಸಲಾದ ಗಣ್ಯ ವ್ಯಕ್ತಿಯ ಸಹೋದರ ಪುತ್ರನಾಗಿದ್ದನು. ಅವನ ಗೋತ್ರದವರು ಬಾಹ್ಯವಾಗಿ ಜರಾಮ್‌ರವರನ್ನು ಒಳ್ಳೆಯ ರೀತಿ ಸ್ವಾಗತಿಸಿದರು. ಆದರೆ ಜರಾಮ್[ರ] ಗೋತ್ರ ಮುಖಂಡನ ಮುಂದೆ ನಿಂತು ಇಸ್ಲಾಮಿನ ಬಗ್ಗೆ ಪ್ರವಚನ ನೀಡುತ್ತಿದ್ದಾಗ ಒಬ್ಬನು ಯಾರಿಗೂ ಕಾಣಿಸದಂತೆ ಅವರ ಹಿಂಭಾಗದಿಂದ ಬಂದು ಅವರನ್ನು ಈಟಿಯಿಂದ ತಿವಿದನು. ಜರಾಮ್[ರ] ಅಲ್ಲೇ ಮೃತರಾದರು. ಅವರ ಕೊರಳನ್ನು ಈಟಿ ತಿವಿದು ಹೊರಗೆ ಬಂದಾಗ ಅವರು ಹೀಗೆ ಹೇಳಿದ್ದು

49d. ಇಬ್ನು ಹಿಶಾಮ್ ಭಾಗ 2 ಪುಟ 122. 50. ಇಬ್ನು ಹಿಶಾಮ್ ಭಾಗ 2 ಪುಟ 126, ಝುರ್‌ಖಾನಿ, ಬುಖಾರಿ.

ಕೇಳಿಸಿತು: "ಅಲ್ಲಾಹು ಅಕ್‌ಬರ್ (ಅಲ್ಲಾಹನು ದೊಡ್ಡವನು) ಕಅ್‌ಬದ ಒಡೆಯನಾಣೆ, ನಾನು ನನ್ನ ಜೀವಿತೋದ್ದೇಶವನ್ನು ಈಡೇರಿಸಿದೆ."

ಜರಾಮ್‌ರನ್ನು ಈ ರೀತಿ ವಂಚನೆಯಿಂದ ಕೊಂದ ಬಳಿಕ ಆ ಗೋತ್ರದ ಮುಂದಾಳುಗಳು ತಮ್ಮ ಗೋತ್ರದವರು ಉಳಿದ ಶಿಕ್ಷಕರನ್ನು ಆಕ್ರಮಿಸಲು ಪ್ರೋತ್ಸಾಹಿಸಿದರು. ಆದರೆ ಆ ಗೋತ್ರದ ಜನರು ಹೀಗೆಂದರು: "ನಮ್ಮ ನಾಯಕ ಅಬೂ ಬರಾ ಈ ಜನರಿಗೆ ಜಾಮೀನುದಾರರಾಗಲು ಒಪ್ಪಿರುವರು. ನಾವು ಅವರನ್ನು ಆಕ್ರಮಣ ಮಾಡಲಾರೆವು."

ಆಗ ಆ ಗೋತ್ರದ ಮುಂದಾಳುಗಳು  ಮುಸ್ಲಿಮ್ ಶಿಕ್ಷಕರನ್ನು ಕರೆದುಕೊಂಡು ಬಂದ ಎರಡು ಗೋತ್ರಗಳ ಜನರ ಸಹಾಯದೊಂದಿಗೆ ಆ ಮುಸ್ಲಿಮ್ ಶಿಕ್ಷಕರನ್ನು ಆಕ್ರಮಿಸಿದರು.

"ನಾವು ಉಪದೇಶಿಸಲು ಮತ್ತು ಇಸ್ಲಾಮ್ ಧರ್ಮವನ್ನು ಕಲಿಸಲು ಬಂದಿರುವೆವು. ನಾವು ಯುದ್ಧ ಮಾಡಲು ಬಂದಿಲ್ಲ" ಎಂದು ಹೇಳಿದ ಅವರ ಮಾತುಗಳು ಪ್ರಯೋಜನಕರವಾಗಲಿಲ್ಲ. ಅವಿಶ್ವಾಸಿಗಳು ಮುಸ್ಲಿಮರನ್ನು ಕೊಲ್ಲಲು ತೊಡಗಿದರು. ಕೊನೆಗೆ ಮೂವರ ಹೊರತು ಎಲ್ಲರೂ ಹತರಾದರು. ಇವರಲ್ಲಿ ಒಬ್ಬರು ಕಾಲಲ್ಲಿ ವೈಕಲ್ಯವನ್ನು ಹೊಂದಿದ್ದರು. ಅವರು ಹೋರಾಟದ ಮೊದಲೇ ಒಂದು ಬೆಟ್ಟವನ್ನೇರಿದ್ದರು. ಇನ್ನಿಬ್ಬರು ಒಂಟೆ ಮೇಯಿಸಲು ದೂರ ಹೋಗಿದ್ದರು. ಅವರು ಹಿಂದಿರುಗಿದಾಗ ತಮ್ಮ ಅರುವತ್ತೇಳು ಸಂಗಡಿಗರು ಮೃತರಾಗಿ ಬಿದ್ದಿರುವುದನ್ನು ಕಂಡರು. ಅವರು ಪರಸ್ಪರ ಸಮಾಲೋಚಿಸಿದರು. ಒಬ್ಬರು ಹೇಳಿದರು: "ನಾವು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ಈ ಸಂಭವದ ವಿವರ ನೀಡಬೇಕು." ಇನ್ನೊಬ್ಬರು ಹೇಳಿದರು: "ನಮ್ಮ ಗುಂಪಿನ ಮುಖಂಡರನ್ನಾಗಿ ಹಝ್ರತ್ ಪೈಗಂಬರರು(ಸ) ನೇಮಿಸಿದ ವ್ಯಕ್ತಿ ಎಲ್ಲಿ ಹತರಾದರೋ ಆ ಸ್ಥಳವನ್ನು ಬಿಟ್ಟು ನಾನು ಹೋಗಲಾರೆ." ಹೀಗೆ ಹೇಳಿ ಅವರು ಏಕಾಂಗಿಯಾಗಿ ಅವಿಶ್ವಾಸಿಗಳನ್ನು ಆಕ್ರಮಿಸಿ ಹೋರಾಡುತ್ತಾ ಮಡಿದರು. ಇನ್ನೊಬ್ಬರನ್ನು ಸೆರೆಹಿಡಿಯಲಾಯಿತು. ಆದರೆ ಅನಂತರ ಅವರನ್ನು ಆ ಗೋತ್ರದ ಒಬ್ಬ ಮುಂದಾಳು ಮಾಡಿದ್ದ ಒಂದು ಪ್ರತಿಜ್ಞೆಯ ಕಾರಣದಿಂದ ಬಿಡುಗಡೆಗೊಳಿಸಲಾಯಿತು. ಕೊಲ್ಲಲ್ಪಟ್ಟವರಲ್ಲಿ ಹಝ್ರತ್ ಅಬೂಬಕರ್(ರ) ಅವರ ವಿಮೋಚಿತ ಗುಲಾಮರಾಗಿದ್ದ ಆಮಿರ್ ಬಿನ್ ಫಹೀರ ಸಹ ಇದ್ದರು. ಅವರನ್ನು ಕೊಂದವ ಜಬ್ಬಾರ್ ಬಿನ್ ಸಲ್ಮಾ. ಆ ವ್ಯಕ್ತಿ ಅನಂತರ ಮುಸ್ಲಿಮ್ ಆದರು. ಜಬ್ಬಾರ್ ಹೀಗೆ ಹೇಳುತ್ತಿದ್ದರು: ಆಮಿರ್‌ರನ್ನು ನಾನು ಕೊಲೆ ಮಾಡಿದುದೇ ನಾನು ಇಸ್ಲಾಮ್ ಧರ್ಮ ಸ್ವೀಕರಿಸಲು ಹೇತುವಾಯಿತು. ನಾನು ಅವರನ್ನು ಕೊಲ್ಲಲು ತೊಡಗಿದಾಗ ಅವರು, "ಅಲ್ಲಾಹನಾಣೆ, ನಾನು ನನ್ನ ಉದ್ದೇಶದಲ್ಲಿ ಸಾಫಲ್ಯವನ್ನು ಪಡೆದೆ" ಎಂದು ಹೇಳಿದರು. ಅನಂತರ ನಾನು ಒಬ್ಬರೊಂದಿಗೆ ಕೇಳಿದೆ: "ಮುಸ್ಲಿಮರಿಗೆ ಮೃತ್ಯು ಎದುರಾದಾಗ ಇಂತಹ ಮಾತುಗಳನ್ನು ಅವರು ಏಕೆ ಹೇಳುತ್ತಾರೆ?" ಆ ವ್ಯಕ್ತಿ ಹೀಗೆ ಉತ್ತರ ನೀಡಿದರು:



"ಪ್ರತಿಯೊಬ್ಬ ಮುಸ್ಲಿಮ್ ಅಲ್ಲಾಹನ ಮಾರ್ಗದಲ್ಲಿ ಮೃತನಾಗುವುದು ಅನುಗ್ರಹವೆಂದೂ ವಿಜಯವೆಂದೂ ಗ್ರಹಿಸುತ್ತಾನೆ." ಈ ಉತ್ತರ ಜಬ್ಬಾರರ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ಅವರು ಇಸ್ಲಾಮ್ ಧರ್ಮವನ್ನು ಅಧ್ಯಯನ ಮಾಡಲು ತೊಡಗಿದರು. ಕೊನೆಗೆ ಅವರು ಮುಸ್ಲಿಮರಾದರು.[51]

ಮೇಲೆ ವಿವರಿಸಲಾದ ಎರಡು ದಾರುಣ ಘಟನೆಗಳಲ್ಲಿ ಅಂದಾಜು ಎಂಬತ್ತು ಮುಸ್ಲಿಮರು ಬಹಳ ಭಯಂಕರವಾದ ಒಳಸಂಚುಗಳ ಪರಿಣಾಮವಾಗಿ ಕೊಲ್ಲಲ್ಪಟ್ಟ ಸಮಾಚಾರಗಳು ಮದೀನವನ್ನು ತಲಪಿದವು. ಕೊಲ್ಲಲ್ಪಟ್ಟವರು ಸಾಮಾನ್ಯರಾಗಿರಲಿಲ್ಲ. ಪವಿತ್ರ ಖುರ್‌ಆನ್ ಕಂಠ ಪಾಠ ಮಾಡಿದವರು ಅವರಾಗಿದ್ದರು. ಅವರು ಯಾವುದೇ ಅಪರಾಧ ಮಾಡಿರಲಿಲ್ಲ. ಅವರು ಯಾರಿಗೂ ಕಷ್ಟ ಕೊಟ್ಟಿರಲಿಲ್ಲ. ಅವರು ಯಾವುದೇ ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಅಲ್ಲಾಹನೊಂದಿಗೆ ಮತ್ತು ಇಸ್ಲಾಮ್ ಧರ್ಮದೊಂದಿಗೆ ತಮಗೆ ಸಂಬಂಧವಿದೆ ಎಂದು ಸುಳ್ಳು ಸುಳ್ಳೇ ತೋರ್ಪಡಿಸಿಕೊಂಡ ಶತ್ರುಗಳ ವಶಕ್ಕೆ ಅವರು ನೀಡಲ್ಪಟ್ಟವರಾಗಿದ್ದರು. ಈ ಘಟನೆಗಳಿಂದ ಅವಿಶ್ವಾಸಿಗಳಿಗೆ ಇಸ್ಲಾಮ್ ಧರ್ಮದ ಬಗ್ಗೆ ಕಠಿಣ ಶತ್ರುತ್ವ ಇದ್ದಿತೆಂದು ಸಾಬೀತಾಗುತ್ತದೆ. ಇದಕ್ಕೆದುರಾಗಿ ಇಸ್ಲಾಮಿನ ಬಗ್ಗೆ ಮುಸ್ಲಿಮರ ಉತ್ಸಾಹ ಬಹಳ ಹೆಚ್ಚಾಗಿಯೂ ಸ್ಥಿರವಾಗಿಯೂ ಇದ್ದಿತು.

## ಬನೂ ಮುಸ್ತಲಿಖ್ ಯುದ್ಧ

ಉಹುದ್ ಯುದ್ಧದ ನಂತರ ಮಕ್ಕದಲ್ಲಿ ಕಠಿಣ ಕ್ಷಾಮ ಪರಿಸ್ಥಿತಿ ಉಂಟಾಯಿತು. ಮಕ್ಕದವರಿಗೆ ಹಝ್ರತ್ ಪೈಗಂಬರರ(ಸ) ಮೇಲೆ ಶತ್ರುತ್ವವಿದ್ದರೂ ಮತ್ತು ಮಕ್ಕದವರು ದೇಶದಲ್ಲೆಲ್ಲಾ ಹಝ್ರತ್ ಪೈಗಂಬರರ(ಸ) ವಿರುದ್ಧ ಜನರಲ್ಲಿ ದ್ವೇಷ ಹಬ್ಬಿಸಲು ಅನೇಕ ಕಾರ್ಯಗಳನ್ನು ಕೈಗೊಂಡರೂ ಅವುಗಳನ್ನು ನಿರ್ಲಕ್ಷಿಸಿ ಹಝ್ರತ್ ಪೈಗಂಬರ್(ಸ) ಮಕ್ಕದವರಿಗೆ ಕಠಿಣ ಕ್ಷಾಮದ ಕಾಲದಲ್ಲಿ ಮಕ್ಕದ ಬಡವರ ಸಹಾಯಕ್ಕಾಗಿ ಹಣ ಸಂಗ್ರಹಿಸಿ ಕಳುಹಿಸಿದ್ದರು. ಆದರೆ ಇಂತಹ ಹಿತಕಾರಿ ವರ್ತನೆಯಿಂದಲೂ ಮಕ್ಕದವರ ಮೇಲೆ ಯಾವುದೇ ಒಳ್ಳೆಯ ಪರಿಣಾಮ ಉಂಟಾಗಲಿಲ್ಲ. ಅವರ ವಿರೋಧದಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲ. ಅದಕ್ಕೆ ಬದಲಾಗಿ ಅವರ ವಿರೋಧ ಇನ್ನಷ್ಟು ಹೆಚ್ಚಾಯಿತು. ಮುಸ್ಲಿಮರಿಗೆ ಸಹಾನುಭೂತಿ ತೋರಿಸುತ್ತಿದ್ದ ಗೋತ್ರಗಳೂ ಮುಸ್ಲಿಮರ ವಿರೋಧಿಗಳಾದವು. ಇಂತಹ ವಿರೋಧಿ ಗೋತ್ರಗಳಲ್ಲಿ ಒಂದು ಬನೀ ಮುಸ್ತಲಿಖ್ ಗೋತ್ರವಾಗಿತ್ತು. ಅವರ ವ್ಯವಹಾರ ಬಾಂಧವ್ಯಗಳು ಮುಸ್ಲಿಮರೊಂದಿಗೆ ಮೊದಲು ಚೆನ್ನಾಗಿದ್ದವು. ಆದರೆ ಅವರು ಈಗ ವಿರೋಧಿಗಳಾಗಿ ಮದೀನವನ್ನು ಆಕ್ರಮಿಸಲು ಸಿದ್ಧತೆಗಳನ್ನು ನಡೆಸಲು ತೊಡಗಿದರು. ಅವರ ಸಿದ್ಧತೆಗಳ ಕುರಿತು ಹಝ್ರತ್ ಪೈಗಂಬರರಿಗೆ(ಸ) ತಿಳಿದಾಗ

51. ಅಸದುಲ್ ಘಾಬ ಮತ್ತು ಸೀರತ್ ಇಬ್ನು ಹಿಶಾಮ್.

ಅದರ ಬಗ್ಗೆ ವಾಸ್ತವಿಕ ಸಂಗತಿ ತಿಳಿಯಲು ಕೆಲವು ಜನರನ್ನು ಅವರ ಬಳಿಗೆ ಕಳುಹಿಸಿದರು. ಹಾಗೆ ಹೋದವರು ಮರಳಿ ಬಂದು ಆ ಸಮಾಚಾರಗಳು ಸರಿಯಾಗಿವೆ ಎಂದು ವರದಿ ನೀಡಿದರು. ಆಗ ತಾವು ಸ್ವತಃ ಹೋಗಿ ಈ ಹೊಸ ಆಕ್ರಮಣವನ್ನು ಎದುರಿಸಲು ಹಝ್ರತ್ ಪೈಗಂಬರ್(ಸ) ನಿರ್ಧರಿಸಿದರು. ಅವರು ಒಂದು ಸೈನ್ಯವನ್ನು ಸಿದ್ಧಪಡಿಸಿ ಬನೂ ಮುಸ್ತಲಿಖ್ ಗೋತ್ರದವರ ಕಡೆಗೆ ಹೋದರು. ಶತ್ರುಗಳಿಗೆ ಮುಸ್ಲಿಮರು ಎದುರಾದಾಗ ಶತ್ರುಗಳು ಯುದ್ಧಮಾಡದೆ ಹಿಂದೆ ಸರಿದು ಹೋಗಲು ಸಮ್ಮತಿಸುವಂತೆ ಮಾಡಲು ಹಝ್ರತ್ ಪೈಗಂಬರ್(ಸ) ಪ್ರಯತ್ನಿಸಿದರು. ಆದರೆ ಅವರು ಅದನ್ನು ನಿರಾಕರಿಸಿದರು. ಆಗ ಯುದ್ಧ ಪ್ರಾರಂಭವಾಯಿತು. ಕೆಲವೇ ತಾಸುಗಳಲ್ಲಿ ಶತ್ರುಗಳಿಗೆ ಪರಾಜಯವಾಯಿತು.

ಅವಿಶ್ವಾಸಿಗಳು ಮುಸ್ಲಿಮರಿಗೆ ಹಾನಿಯನ್ನುಂಟುಮಾಡಲು ಸನ್ನದ್ಧರಾಗಿದ್ದುದರಿಂದ ಮತ್ತು ಸ್ನೇಹದಿಂದಿದ್ದ ಗೋತ್ರಗಳು ಸಹ ಮುಸ್ಲಿಮರ ವಿರೋಧಿಗಳಾಗಿ ಪರಿವರ್ತನೆಗೊಳ್ಳುತ್ತಾ ಇದ್ದುದರಿಂದ ಮುಸ್ಲಿಮರ ಮಧ್ಯೆ ಇದ್ದ ಕಪಟವಿಶ್ವಾಸಿಗಳು ಈ ಸಂದರ್ಭದಲ್ಲಿ ಮುಸ್ಲಿಮರ ಪರವಾಗಿ ಯುದ್ಧದಲ್ಲಿ ಭಾಗವಹಿಸಲು ಧೈರ್ಯಗೊಂಡರು. ಪ್ರಾಯಶಃ ಅವರ ಉದ್ದೇಶ ಯುದ್ಧದ ಮಧ್ಯದಲ್ಲಿ ಏನಾದರೂ ಕುತಂತ್ರ ಮಾಡಿ ಮುಸ್ಲಿಮರಿಗೆ ಹಾನಿಯನ್ನುಂಟುಮಾಡುವ ಸಂದರ್ಭವನ್ನು ಹುಡುಕುವುದಾಗಿತ್ತು. ಆದರೆ ಬನೀ ಮುಸ್ತಲಿಖ್ ವಿರುದ್ಧ ಯುದ್ಧವು ಕೆಲವೇ ಗಂಟೆಗಳಲ್ಲಿ ಮುಗಿಯಿತು. ಆದುದರಿಂದ ಈ ಯುದ್ಧದ ಮಧ್ಯೆ ಏನಾದರೂ ಕುತಂತ್ರ ಮಾಡಲು ಕಪಟವಿಶ್ವಾಸಿಗಳಿಗೆ ಸಂದರ್ಭ ಸಿಗಲಿಲ್ಲ. ಬನೂ ಮುಸ್ತಲಿಖ್ ಗೋತ್ರದವರ ಪಟ್ಟಣದಲ್ಲಿ ಕೆಲವು ದಿನ ತಂಗಲು ಹಝ್ರತ್ ಪೈಗಂಬರ್(ಸ) ನಿರ್ಧರಿಸಿದರು. ಆ ಸಮಯದಲ್ಲಿ ಮಕ್ಕದ ವಲಸೆಗಾರನಾದ ಒಬ್ಬ ಮುಸ್ಲಿಮ್ ಮತ್ತು ಮದೀನದ ಒಬ್ಬ ಮುಸ್ಲಿಮ್ ಇವರ ಮಧ್ಯೆ ನೀರು ಸೇದುವ ಕುರಿತು ಯಾವುದೋ ಕಾರಣದಿಂದ ಜಗಳವಾಯಿತು. ಮಕ್ಕದ ವ್ಯಕ್ತಿ ಸ್ವತಂತ್ರಗೊಳಿಸಲ್ಪಟ್ಟ ಒಬ್ಬ ಗುಲಾಮನಾಗಿದ್ದನು. ಆತನು ಮದೀನದವನನ್ನು ಹೊಡೆದನು. ಆಗ ಮದೀನದವನು ತನ್ನ ಊರಿನ ಜನರನ್ನು (ಅನ್ಸಾರ್‌ಗಳನ್ನು) ಕರೆದನು. ಮಕ್ಕದವನು ತನ್ನ ಕಡೆಯವರನ್ನು (ಮುಹಾಜಿರ್‌ಗಳನ್ನು) ಕರೆದನು. ಜನರು ಸೇರಿದರು. ಪರಸ್ಪರ ಭಾವಾವೇಶಗಳು ಪ್ರಕಟವಾದುವು. ನಡೆದುದಾದರೂ ಏನೆಂದು ಯಾರೂ ವಿಚಾರಿಸಲಿಲ್ಲ. ಎರಡು ಪಕ್ಷಗಳ ಯುವಕರು ಖಡ್ಗ ಹಿರಿದರು. ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್ ಇದು ದೇವರು ದಯಪಾಲಿಸಿದ ಉತ್ತಮ ಅವಕಾಶವೆಂದು ಭಾವಿಸಿದನು. ಅವನು ಬೆಂಕಿಯ ಮೇಲೆ ಎಣ್ಣೆ ಸುರಿಸಲು ಬಯಸಿದನು. ಅವನು ಮದೀನದವರೊಂದಿಗೆ, "ಈ ವಲಸೆಗಾರರಿಗೆ ನಿಮ್ಮ ಉಪಕಾರಗಳು ಮಿತಿಮೀರಿದುವು. ನಿಮ್ಮ ಉತ್ತಮ ವರ್ತನೆಯಿಂದ ಅವರ ತಲೆ ತಿರುಗಿದೆ. ಅವರು ದಿನಗಳೆದಂತೆ ನಿಮ್ಮ ತಲೆಗೇರುತ್ತಾ ಹೋಗುತ್ತಾರೆ" ಎಂದನು.

ಅಬ್ದುಲ್ಲಾ ಇಚ್ಛಿಸಿದ ರೀತಿಯಲ್ಲಿ ಸಂಭವಗಳು ಘಟಿಸಿ ಜಗಳ ಹೆಚ್ಚಾಗುವುದು



ಸಂಭಾವ್ಯವಾಗಿತ್ತು. ಆದರೆ ಹಾಗೆ ಆಗಲಿಲ್ಲ. ಅಬ್ದುಲ್ಲಾ ತನ್ನ ಪ್ರಚೋದಕ ಭಾಷಣದ ಪ್ರಭಾವದ ಕುರಿತು ತಪ್ಪಾಗಿ ಅಂದಾಜು ಮಾಡಿದ್ದನು. ಅವನು ತನ್ನ ಭಾಷಣ ಮದೀನದವರ ಮೇಲೆ ಪ್ರಭಾವ ಬೀರಿದೆ ಎಂದು ಗ್ರಹಿಸಿ ಎಲ್ಲಿಯತನಕ ಮುಂದುವರಿದನೆಂದರೆ, "ನಾವು ಮದೀನಕ್ಕೆ ತಲಪೋಣ. ಅನಂತರ ಅತ್ಯಂತ ಗೌರವಾರ್ಹ ವ್ಯಕ್ತಿ ಅತ್ಯಂತ ಹೀನ ವ್ಯಕ್ತಿಯನ್ನು ನಗರದಿಂದ ಹೊರ ಹಾಕುವನು" ಎಂದು ಸಹ ಹೇಳಿದನು.

ಅವನು ಉದ್ದೇಶಿಸಿದ ಅತ್ಯಂತ ಗೌರವಾರ್ಹ ವ್ಯಕ್ತಿ ಸ್ವಯಂ ಆತನೇ ಆಗಿದ್ದನು. ಅವನು ಉದ್ದೇಶಿಸಿದ ಅತ್ಯಂತ ಹೀನ ವ್ಯಕ್ತಿ ಹಝ್ರತ್ ಪೈಗಂಬರರಾಗಿದ್ದರು. ಅಬ್ದುಲ್ಲಾನ ಮಾತು ಅವನ ಬಾಯಿಯಿಂದ ಹೊರಟ ಕೂಡಲೆ ಸತ್ಯವಿಶ್ವಾಸಿಗಳಿಗೆ ಅವನ ನಿಜವಾದ ರೂಪವೇನೆಂದು ತಿಳಿಯಿತು. ಅವರು ಹೇಳಿದರು: "ಅವನು ಹೇಳಿದ ಮಾತು ಸಾಮಾನ್ಯ ಮಾತಲ್ಲ. ಇದು ಶೈತಾನನ ಮಾತೇ ಆಗಿದೆ. ಅಬ್ದುಲ್ಲಾ ನಮ್ಮನ್ನು ದಾರಿ ತಪ್ಪಿಸಲು ಬಂದಿರುವನು."

ಒಬ್ಬ ಯುವಕನು ತನ್ನ ಚಿಕ್ಕಪ್ಪನ ಮೂಲಕ ಈ ಘಟನೆಯ ವರದಿಯನ್ನು ಹಝ್ರತ್ ಪೈಗಂಬರರಿಗೆ ತಲಪಿಸಿದನು. ಹಝ್ರತ್ ಪೈಗಂಬರ್(ಸ) ಅಬ್ದುಲ್ಲಾನನ್ನೂ ಅವನ ಸ್ನೇಹಿತರನ್ನೂ ಕರೆದು ವಿಚಾರಣೆ ನಡೆಸಿದಾಗ ಅವರು ತಮ್ಮ ಮೇಲೆ ಹೊರಿಸಲಾದ ಆಪಾದನೆಯನ್ನು ನಿರಾಕರಿಸಿ ಹಾಗೆ ಸಂಭವಿಸಿರಲೇ ಇಲ್ಲ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಏನೂ ಹೇಳಲಿಲ್ಲ. ಆದರೆ ಸತ್ಯಸಂಗತಿ ಎಲ್ಲೆಡೆಗಳಲ್ಲಿಯೂ ವ್ಯಾಪಿಸಲು ಆರಂಭವಾಯಿತು. ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲನ ಮಗ ಅಬ್ದುಲ್ಲಾ ಸಹ ಈ ವಿಷಯ ತಿಳಿದರು. ಅವರು ಕೂಡಲೆ ಹಝ್ರತ್ ಪೈಗಂಬರರ(ಸ) ಮುಂದೆ ಹಾಜರಾಗಿ ಹೇಳಿದರು:

"ಅಲ್ಲಾಹನ ಪ್ರವಾದಿಯವರೇ, ನನ್ನ ತಂದೆ ನಿಮಗೆ ಅಪಮಾನ ಮಾಡಿದ್ದಾರೆ. ಅವರಿಗೆ ತಕ್ಕದಾದ ಶಿಕ್ಷೆ ಮರಣದಂಡನೆ ಎಂದು ನನ್ನ ಅಭಿಪ್ರಾಯವಾಗಿದೆ. ನೀವು ಸಹ ಇದೇ ತೀರ್ಮಾನ ಮಾಡುವುದಾದರೆ ಈ ಆಜ್ಞೆಯನ್ನು ಕಾರ್ಯಗತಗೊಳಿಸಲು ನನಗೆ ನೀವು ಆದೇಶಿಸಬೇಕೆಂದು ನಾನು ಬಯಸುತ್ತೇನೆ. ನೀವು ಬೇರೆ ಯಾರಿಗಾದರೂ ನನ್ನ ತಂದೆಯನ್ನು ಕೊಲ್ಲಲು ಆದೇಶ ನೀಡಿದರೆ ನಾನು ಆ ವ್ಯಕ್ತಿಯನ್ನು ನನ್ನ ತಂದೆಯನ್ನು ಕೊಲೆಗೈದುದಕ್ಕೆ ಪ್ರತೀಕಾರವಾಗಿ ಕೊಲೆಮಾಡಿ ನಾನು ಅಲ್ಲಾಹನ ಕೋಪಕ್ಕೆ ಪಾತ್ರನಾಗ ಬಹುದಾಗಿದೆ."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನನಗೆ ಅಂತಹ ಉದ್ದೇಶ ಇಲ್ಲವೇ ಇಲ್ಲ. ನಾನು ನಿಮ್ಮ ತಂದೆಯೊಂದಿಗೆ ಮೃದುವಾಗಿ ಮತ್ತು ಸಹಾನುಭೂತಿಯಿಂದ ವರ್ತಿಸುವೆನು."[51a]

ಅಬ್ದುಲ್ಲಾ ತನ್ನ ತಂದೆಯ ವಿಶ್ವಾಸದ್ರೋಹ ಮತ್ತು ಕಟು ವಾಕ್ಯಗಳನ್ನು

51a. ಇಬ್ನು ಹಿಶಾಮ್ ಸಂಪುಟ 2 ಪುಟ 169.

ಹಝ್ರತ್ ಪೈಗಂಬರರ(ಸ) ಕೋಮಲ ಹೃದಯ ಮತ್ತು ಸಹಾನುಭೂತಿ ಯೊಂದಿಗೆ ಹೋಲಿಸಿ ನೋಡಿದಾಗ ಅವರಿಗೆ ಇಸ್ಲಾಮ್ ಬಗ್ಗೆ ಇರುವ ವಿಶ್ವಾಸ ಇನ್ನಷ್ಟು ವರ್ಧಿಸಿತು ಮತ್ತು ತನ್ನ ತಂದೆಯ ವಿರುದ್ಧ ಅವರ ಕೋಪ ಇನ್ನಷ್ಟು ವೃದ್ಧಿಗೊಂಡಿತು. ಮುಸ್ಲಿಮ್ ಸೈನ್ಯ ಮರಳಿ ಮದೀನದ ಸಮೀಪಕ್ಕೆ ತಲಪಿದಾಗ ಅವರು ಮುಂದೆ ಹೋಗಿ ತನ್ನ ತಂದೆಯನ್ನು ಮಾರ್ಗದಲ್ಲಿ ತಡೆದಿರಿಸಿ ಹೇಳಿದರು: "ನೀವು ಹಝ್ರತ್ ಪೈಗಂಬರರ(ಸ) ವಿರುದ್ಧ ಹೇಳಿದ ಮಾತುಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ತನಕ ನಾನು ನಿಮ್ಮನ್ನು ಮದೀನದೊಳಗೆ ಪ್ರವೇಶಿಸಲು ಬಿಡಲಾರೆನು. ನೀವು ಅಲ್ಲಾಹನ ಪ್ರವಾದಿಯ ಬಗ್ಗೆ ನೀಚನೆಂದೂ ನಿಮ್ಮ ಬಗ್ಗೆ ಗೌರವಾರ್ಹನೆಂದೂ ಯಾವ ನಾಲಗೆಯಲ್ಲಿ ಉಚ್ಚರಿಸಿದಿರೋ ಅದೇ ನಾಲಗೆಯಿಂದ ನೀವು ನೀಚನೆಂದೂ ಅಲ್ಲಾಹನ ಪ್ರವಾದಿ ಗೌರವಾರ್ಹರೆಂದೂ ಹೇಳಿರಿ. ನೀವು ಹೀಗೆ ಹೇಳುವ ತನಕ ನಾನು ನಿಮ್ಮನ್ನು ಮುಂದಕ್ಕೆ ಹೋಗಲು ಬಿಡಲಾರೆನು."

ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್ ತಬ್ಬಿಬ್ಬಾಗಿ ಹೆದರುತ್ತಾ ಹೇಳಿದನು: "ಓ ನನ್ನ ಮಗನೇ, ನಾನು ನಿನ್ನ ಮಾತಿಗೆ ಸಮ್ಮತಿಸುತ್ತಾ ಹೇಳುತ್ತೇನೆ. ಮುಹಮ್ಮದ್ ಪೈಗಂಬರ್ ಗೌರವಾರ್ಹರಾಗಿದ್ದಾರೆ. ನಾನು ನೀಚನಾಗಿದ್ದೇನೆ." ಅನಂತರ ಯುವ ಅಬ್ದುಲ್ಲಾ ತನ್ನ ತಂದೆಯನ್ನು ಮುಂದೆ ಹೋಗಲು ಅನುಮತಿಸಿದರು.

## ಮದೀನದ ಮೇಲೆ ಅರಬ್ ಗೋತ್ರಗಳ ಆಕ್ರಮಣ – ಕಂದಕ್ ಯುದ್ಧ

ಮದೀನದಲ್ಲಿ ವಾಸಿಸುತ್ತಿದ್ದ ಯಹೂದಿಯರ ಎರಡು ಗೋತ್ರಗಳ ಕುರಿತು ಇದರ ಮೊದಲು ಪ್ರಸ್ತಾಪಿಸಲಾಗಿದೆ. ಯುದ್ಧ, ಕಲಹ, ಕೊಲೆ ಮತ್ತು ಒಳಸಂಚುಗಳಲ್ಲಿ ಅವರು ಪಾಲುಗೊಂಡ ಕಾರಣ ಅವರನ್ನು ಮದೀನದಿಂದ ಗಡೀಪಾರು ಮಾಡಲಾಗಿತ್ತು. ಆ ಗೋತ್ರಗಳ ಪೈಕಿ ಬನೂ ನಝೀರ್ ಗೋತ್ರದ ಒಂದು ಭಾಗ ಸಿರಿಯದ ಕಡೆಗೆ ವಲಸೆ ಹೋಗಿತ್ತು. ಈ ಗೋತ್ರದ ಇನ್ನೊಂದು ಭಾಗ ಮದೀನದ ಉತ್ತರಕ್ಕಿದ್ದ ಖೈಬರ್ ಎಂಬ ಪಟ್ಟಣಕ್ಕೆ ವಲಸೆ ಹೋಗಿತ್ತು. ಖೈಬರ್ ಅರಬ್‌ದೇಶದಲ್ಲಿ ಯಹೂದಿಯರ ಬಹಳ ದೊಡ್ಡ ಕೇಂದ್ರವಾಗಿತ್ತು. ಅದು ಕೋಟೆಯಿಂದಾವೃತವಾದ ಪಟ್ಟಣವಾಗಿತ್ತು. ಅಲ್ಲಿಗೆ ಹೋದನಂತರ ಬನೂ ನಝೀರ್ ಗೋತ್ರದ ಯಹೂದಿಯರು ಮುಸ್ಲಿಮರ ವಿರುದ್ಧ ಅರಬಿಯರಲ್ಲಿ ವಿರೋಧ ಭಾವನೆ ಉಂಟಾಗಲು ಪ್ರಯತ್ನಿಸುತ್ತಾ ಇದ್ದರು. ಮಕ್ಕದವರು ಹೇಗೂ ಮೊದಲೇ ವಿರೋಧಿಗಳಾಗಿದ್ದರು. ಅವರಿಗೆ ಹೆಚ್ಚಿನ ಪ್ರಚೋದನೆ ಬೇಕಾಗಿರಲಿಲ್ಲ. ಇದೇ ರೀತಿ ನಜ್‌ದಿನ ಘತ್‌ಫಾನ್ ಗೋತ್ರ ಅರಬ್ ಗೋತ್ರಗಳಲ್ಲಿ ಬಹಳ ಗೌರವಾರ್ಹ ಸ್ಥಾನ ಪಡೆದಿತ್ತು. ಆ ಗೋತ್ರಕ್ಕೆ ಮಕ್ಕದವರೊಂದಿಗೆ ಇದ್ದ ಸ್ನೇಹದ ಕಾರಣ ಮುಸ್ಲಿಮರ ವಿರುದ್ಧ ಶತ್ರುತ್ವದಿಂದ ವರ್ತಿಸಲು ಸಿದ್ಧವಾಗಿತ್ತು.

ಯಹೂದಿಯರು ಖುರೈಶ್ ಮತ್ತು ಘತ್‌ಫಾನ್ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಪ್ರೋತ್ಸಾಹಿಸುವುದರೊಂದಿಗೆ ಬನೂ ಸಲೀಮ್ ಮತ್ತು ಬನೂ ಅಸದ್



ಎಂಬ ಬೇರೆ ಎರಡು ಬಲಿಷ್ಠ ಅರಬಿ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಲು ತೊಡಗಿದರು. ಬನೂ ಸಅದ್ ಎಂಬ ಗೋತ್ರ ಯಹೂದಿಯರೊಂದಿಗೆ ಪ್ರತಿಜ್ಞಾಬದ್ಧವಾಗಿತ್ತು. ಅದನ್ನು ಸಹ ಮಕ್ಕದ ಅವಿಶ್ವಾಸಿಗಳಿಗೆ ಸಹಕಾರ ನೀಡಲು ಯಹೂದಿಯರು ಸಿದ್ಧಪಡಿಸಿದರು.

ದೀರ್ಘಾವಧಿಯ ಸಿದ್ಧತೆಗಳ ನಂತರ ಅರಬ್ ದೇಶದ ಎಲ್ಲಾ ಬಲಿಷ್ಠ ಗೋತ್ರಗಳ ಒಂದು ಐಕ್ಯರಂಗದ ಅಸ್ತಿಭಾರವನ್ನು ಹಾಕಲಾಯಿತು. ಅದರಲ್ಲಿ ಮಕ್ಕದವರು, ಮಕ್ಕದ ಸುತ್ತುಮುತ್ತಲಿನ ಗೋತ್ರಗಳಿಗೆ ಸೇರಿದವರು, ನಜ್‌ದ್ ಮತ್ತು ಮದೀನದ ಉತ್ತರ ಭಾಗಗಳ ಗೋತ್ರಗಳು ಮತ್ತು ಯಹೂದಿಯರು ಸೇರಿದ್ದರು. ಇವರೆಲ್ಲರೂ ಒಟ್ಟಿಗೆ ಸೇರಿ ಮದೀನವನ್ನು ಆಕ್ರಮಿಸಲು ಒಂದು ದೊಡ್ಡ ಸೈನ್ಯವನ್ನು ಜಮಾಯಿಸಿದರು. ಇದು ಹಿಜರಿ 5ನೇ ವರ್ಷದ ಶವ್ವಾಲ್ ತಿಂಗಳ (ಎಂದರೆ ಕ್ರಿಸ್ತಶಕ 627ರ ಫೆಬ್ರವರಿಯ ಕೊನೆಯ ಮತ್ತು ಮಾರ್ಚ್‌ನ ಆರಂಭದ) ಕಾಲವಾಗಿತ್ತು[52]. ವಿವಿಧ ಚರಿತ್ರೆಗಾರರು ಈ ಸೈನ್ಯದ ಸೈನಿಕರ ಸಂಖ್ಯೆ ಹತ್ತು ಸಾವಿರದಿಂದ ಇಪ್ಪತ್ತನಾಲ್ಕು ಸಾವಿರದ ಅಂದಾಜು ಹೇಳಿದ್ದಾರೆ. ಅರಬ್ ರಾಜ್ಯದ ಎಲ್ಲಾ ಗೋತ್ರಗಳು ಐಕ್ಯದಿಂದ ಜಮಾಯಿಸಿದ ಸೈನ್ಯ ಕೇವಲ ಹತ್ತು ಸಾವಿರ ಸೈನಿಕರನ್ನು ಹೊಂದಿತ್ತೆಂದು ಹೇಳುವುದು ಸರಿಯಾಗಲಾರದು. ಇಪ್ಪತ್ತನಾಲ್ಕು ಸಾವಿರದ ಅಂದಾಜು ಹೆಚ್ಚು ಸರಿಯಾಗಿದೆ. ಆದರೆ ಹೆಚ್ಚು ಕಡಿಮೆ ಆ ಸೈನ್ಯದಲ್ಲಿ 18 ರಿಂದ 20 ಸಾವಿರದ ವರೆಗೆ ಸೈನಿಕರಿದ್ದರೆಂದು ನಿರ್ಧರಿಸಬಹುದು. ಮದೀನ ಒಂದು ಸಾಮಾನ್ಯ ನಗರವಾಗಿತ್ತು. ಅದರ ವಿರುದ್ಧ ಸಂಪೂರ್ಣ ಅರಬ್ ದೇಶದ ಸೈನ್ಯದ ಆಕ್ರಮಣ ಸಾಮಾನ್ಯ ಆಕ್ರಮಣವೇನೂ ಆಗಿರಲಿಲ್ಲ. ಮದೀನದ ಪುರುಷರನ್ನು (ಅವರಲ್ಲಿ ವೃದ್ಧರು, ಯುವಕರು ಮತ್ತು ಮಕ್ಕಳು ಸೇರಿದ್ದಾರೆ) ಒಟ್ಟಿಗೆ ಸೇರಿಸಿದರೆ ಅವರ ಸಂಖ್ಯೆ ಮೂರು ಸಾವಿರದಷ್ಟು ಆಗುತ್ತಿತ್ತು. ಇದಕ್ಕೆ ವಿರುದ್ಧವಾಗಿ ಶತ್ರು ಸೈನ್ಯದ ಸಂಖ್ಯೆ ಇಪ್ಪತ್ತರಿಂದ ಇಪ್ಪತ್ತನಾಲ್ಕು ಸಾವಿರದ ಮಧ್ಯೆ ಇತ್ತು. ಅವರೆಲ್ಲರೂ ತರಬೇತಿ ಪಡೆದ ಯುವ ಸೈನಿಕರಾಗಿದ್ದರು. ನಗರದೊಳಗೆ ಇದ್ದುಕೊಂಡು ಯುದ್ಧ ಮಾಡುವುದಾದರೆ ಹಾಗೆ ಯುದ್ಧ ಮಾಡುವವರಲ್ಲಿ ಮಕ್ಕಳೂ ವೃದ್ಧರೂ ಸೇರುತ್ತಾರೆ. ಆದರೆ ದೂರ ಹೋಗಿ ಯುದ್ಧ ಮಾಡಲಿದ್ದಾಗ ಆ ಸೈನ್ಯದಲ್ಲಿ ಯುವಕರು ಮತ್ತು ಬಲಿಷ್ಠರಾದವರು ಮಾತ್ರ ಇರುತ್ತಾರೆ. ಆದುದರಿಂದ ಅವಿಶ್ವಾಸಿಗಳ ಸೈನ್ಯ ಅವರ ಸಂಖ್ಯೆ ಇಪ್ಪತ್ತು ಸಾವಿರವಿರಲಿ ಅಥವಾ ಇಪ್ಪತ್ತೈದು ಸಾವಿರವಿರಲಿ ಅವರೆಲ್ಲರೂ ಬಲಿಷ್ಠ ಯುವಪ್ರಾಯದ ಮತ್ತು ನುರಿತ ಸೈನಿಕರಾಗಿದ್ದರು. ಆದರೆ ಮದೀನದ ಪುರುಷರ ಸಂಖ್ಯೆ ಮಕ್ಕಳನ್ನೂ ವೃದ್ಧರನ್ನೂ ಸೇರಿಸಿದರೂ ಮೂರು ಸಾವಿರಕ್ಕೆ ಸಮೀಪವಾಗಿತ್ತು. ಈ ಸ್ಥಿತಿಯಲ್ಲಿರುವ ಮದೀನದ ಸೈನ್ಯವನ್ನು ನಾವು ಮೂರು ಸಾವಿರ ಸೈನಿಕರನ್ನು ಒಳಗೊಂಡಿರುವುದಾಗಿ ಭಾವಿಸುವುದಾದರೆ ಶತ್ರುಗಳ ಸೈನ್ಯವನ್ನು ನಲ್ವತ್ತು ಸಾವಿರ ಸೈನಿಕರನ್ನು ಹೊಂದಿರುವುದಾಗಿ ಗಣಿಸಬೇಕಾಗಬಹುದು. ಶತ್ರುಗಳ

52. ಇಬ್ನು ಹಿಶಾಮ್ ಸಂಪುಟ 2 ಪುಟ 138 ಮತ್ತು ಲೈಫ್ ಆಫ್ ಮುಹಮ್ಮದ್ (ಮ್ಯೂರ್)

ಸೈನ್ಯದ ಸಂಖ್ಯೆ ಇಪ್ಪತ್ತು ಸಾವಿರ ಎಂದು ಹೇಳುವುದಾದರೆ ಮದೀನದ ಸೇನಾಬಲ ಒಂದೂವರೆ ಸಾವಿರ ಸೈನಿಕರದ್ದೆಂದು ಭಾವಿಸಬೇಕಾಗಿದೆ.

ಶತ್ರುಗಳ ಬೃಹತ್ತಾದ ಸೈನ್ಯ ಮದೀನವನ್ನು ಆಕ್ರಮಿಸಲು ಬರುವುದನ್ನು ತಿಳಿದಾಗ ಹಝ್ರತ್ ಪೈಗಂಬರ್(ಸ) ಶಿಷ್ಯರನ್ನು ಜಮಾಯಿಸಿ, ಈಗ ಏನು ಮಾಡಬೇಕೆಂದು ಸಮಾಲೋಚನೆ ನಡೆಸಿದರು. ಅಲ್ಲಿ ಸೇರಿದ್ದ ಶಿಷ್ಯರಲ್ಲಿ ಸಲ್ಮಾನುಲ್ ಫಾರಿಸೀ(ರ) ಎಂಬ ಫಾರಸೀ ವಂಶಜರಾದ ಪ್ರಥಮ ಫಾರಸೀ ಮುಸ್ಲಿಮರಿದ್ದರು. ಅವರೊಂದಿಗೆ ಹಝ್ರತ್ ಪೈಗಂಬರ್(ಸ), "ನಿಮ್ಮ ದೇಶದಲ್ಲಿ ಇಂತಹ ಸಂದರ್ಭದಲ್ಲಿ ಹೇಗೆ ರಕ್ಷಣೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ?" ಎಂದು ಕೇಳಿದಾಗ ಅವರು, "ಓ ಅಲ್ಲಾಹನ ಪೈಗಂಬರರೇ, ನಗರವು ಸುರಕ್ಷಿತವಾಗಿರದ ಸಂಧರ್ಭದಲ್ಲಿ ಮತ್ತು ಸೈನಿಕರ ಸಂಖ್ಯೆ ಕಡಿಮೆ ಆಗಿರುವಾಗ ನಮ್ಮ ದೇಶದ ಜನರು ಕಂದಕಗಳನ್ನು ತೋಡುತ್ತಾರೆ ಮತ್ತು ಕಂದಕವು ಸುತ್ತುವರಿದ ಸ್ಥಳದ ಒಳಗೆ ಸುರಕ್ಷಿತರಾಗಿ ಇರುತ್ತಾರೆ" ಎಂದರು.

ಹಝ್ರತ್ ಪೈಗಂಬರರಿಗೆ(ಸ) ಅವರ ಆ ಸಲಹೆ ಮೆಚ್ಚಿಗೆಯಾಯಿತು. ಮದೀನದ ಒಂದು ಭಾಗದಲ್ಲಿ ಎತ್ತರವಾದ ಬೆಟ್ಟಗಳಿದ್ದುವು. ಇನ್ನೊಂದು ಕಡೆ ಮನೆಗಳು ಒಂದಕ್ಕೊಂದು ಒತ್ತಿಕೊಂಡು ನಿರ್ಮಿಸಲ್ಪಟ್ಟಿದ್ದುವು. ಶತ್ರುಗಳು ಆ ಭಾಗದಿಂದ ಕೆಲವು ರಸ್ತೆಗಳ ಮೂಲಕ ಮಾತ್ರ ಒಳನುಗ್ಗಲು ಸಾಧ್ಯವಿತ್ತು. ಇನ್ನೊಂದು ಕಡೆ ಕೆಲವು ಮನೆಗಳು, ಕೆಲವು ತೋಟಗಳು ಮತ್ತು ಸ್ವಲ್ಪ ದೂರದಲ್ಲಿ ಯಹೂದಿ ಗೋತ್ರವಾದ ಬನೂ ಖುರೈಝರ ಕೋಟೆ ಇದ್ದಿತು. ಆ ಯಹೂದಿ ಗೋತ್ರ ಮುಸ್ಲಿಮರೊಂದಿಗೆ ಸ್ನೇಹ ಬಾಂಧವ್ಯದ ಒಪ್ಪಂದ ಮಾಡಿದುದರಿಂದ ಮದೀನದ ಆ ಪ್ರದೇಶ ಸಹ ಸುರಕ್ಷಿತವೆಂದು ಗ್ರಹಿಸಲಾಗಿತ್ತು. ನಾಲ್ಕನೆಯ ದಿಕ್ಕಿನಲ್ಲಿ ವಿಶಾಲ ಮೈದಾನವಿದ್ದು ಆ ಕಡೆಯಿಂದ ಹೆಚ್ಚು ಅಪಾಯದ ಭೀತಿ ಇತ್ತು.

ಆ ವಿಶಾಲ ಮೈದಾನವಿರುವ ದಿಕ್ಕಿನಲ್ಲಿ ಕಂದಕವನ್ನು ತೋಡಬೇಕೆಂದು ಹಝ್ರತ್ ಪೈಗಂಬರ್(ಸ) ನಿರ್ಧರಿಸಿದರು. ಶತ್ರುಗಳು ಅಪ್ರತೀಕ್ಷಿತವಾಗಿ ಥಕ್ಕನೆ ನಗರದೊಳಗೆ ಪ್ರವೇಶಮಾಡದಿರಲಿ ಎಂದು ಅವರ ಉದ್ದೇಶವಾಗಿತ್ತು. ಹತ್ತು ಹತ್ತು ಮಾರು ಉದ್ದದ ಕಂದಕ ತೋಡಲು ಹತ್ತು ಹತ್ತು ಜನರನ್ನು ನೇಮಿಸಲಾಯಿತು. ಈ ರೀತಿ ಅಂದಾಜು ಒಂದು ಮೈಲು ಉದ್ದದ ಕಂದಕವನ್ನು ತೋಡಲಾಯಿತು. ಕಂದಕವನ್ನು ತೋಡುವಾಗ ಒಂದು ಬಂಡೆಕಲ್ಲು ನೆಲದಡಿಯಲ್ಲಿ ಕಂಡು ಬಂತು. ಅದನ್ನು ಒಡೆದುಹಾಕಲು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಶಿಷ್ಯರು ಪೈಗಂಬರರಿಗೆ(ಸ) ಈ ವಿಷಯವನ್ನು ತಿಳಿಸಿದಾಗ ಅವರು ಸ್ವತಃ ಅಲ್ಲಿಗೆ ಹೋದರು. ತಮ್ಮ ಗುದ್ದಲಿ ಎತ್ತಿಕೊಂಡು ಜೋರಾಗಿ ಆ ಕಲ್ಲಿನ ಮೇಲೆ ಹೊಡೆದರು. ಗುದ್ದಲಿ ಆ ಕಲ್ಲಿನ ಮೇಲೆ ಬಿದ್ದಾಗ ಬೆಂಕಿಯ ಕಿಡಿಗಳು ಚಿಮ್ಮಿದವು. ಆಗ ಅವರು "ಅಲ್ಲಾಹು ಅಕ್‌ಬರ್" (ಅಲ್ಲಾಹನು ದೊಡ್ಡವನು) ಎಂದು ಹೇಳಿದರು. ಎರಡನೆಯ ಬಾರಿ ಗುದ್ದಲಿಯನ್ನು ಕಲ್ಲಿಗೆ ಹೊಡೆದಾಗ ಸಹ ಬೆಂಕಿಯ ಕಿಡಿಗಳು ಹೊರಚಿಮ್ಮಿದವು.



ಆಗ ಸಹ ಅವರು "ಅಲ್ಲಾಹು ಅಕ್‌ಬರ್" ಎಂದು ಹೇಳಿದರು. ಮೂರನೆಯ ಸಲ ಕಲ್ಲಿಗೆ ಹೊಡೆದಾಗ ಪುನಃ ಬೆಂಕಿಯ ಕಿಡಿಗಳು ಹೊರಚಿಮ್ಮಿದವು. ಕಲ್ಲು ತುಂಡು ತುಂಡಾಯಿತು. ಅವರು ಪುನಃ "ಅಲ್ಲಾಹು ಅಕ್‌ಬರ್" ಎಂದು ಹೇಳಿದರು.

ಆಗ ಶಿಷ್ಯರು, "ಓ ಅಲ್ಲಾಹನ ಪೈಗಂಬರರೇ, ನೀವು ಮೂರು ಸಲ ಅಲ್ಲಾಹು ಅಕ್‌ಬರ್ ಎಂದು ಏಕೆ ಹೇಳಿದಿರಿ?" ಎಂದು ಕೇಳಿದರು. ಆಗ ಹಝ್ರತ್ ಪೈಗಂಬರ್(ಸ), "ಆ ಕಲ್ಲಿನ ಮೇಲೆ ಗುದ್ದಲಿ ಹೊಡೆಯುವಾಗ ಉಂಟಾದ ಪ್ರಕಾಶದಲ್ಲಿ ಮೂರು ಬಾರಿ ಅಲ್ಲಾಹನು ನನಗೆ ಇಸ್ಲಾಮಿಗೆ ಇನ್ನು ಮುಂದೆ ಸಂಭವಿಸಲಿರುವ ಅಭಿವೃದ್ಧಿಗಳ ಚಿತ್ರಗಳನ್ನು ತೋರಿಸಿಕೊಟ್ಟನು. ಮೊದಲನೆಯ ಸಲ ಬೆಂಕಿಯ ಕಿಡಿಗಳು ಹೊರಚಿಮ್ಮಿದಾಗ ಉಂಟಾದ ಪ್ರಕಾಶದಲ್ಲಿ ಖೈಸರ್ ಸಾಮ್ರಾಜ್ಯದ, ಸಿರಿಯದ ಅರಮನೆಗಳು ನನಗೆ ತೋರಿಸಲ್ಪಟ್ಟವು ಮತ್ತು ಅವುಗಳ ಕೀಲಿಗೈಗಳು ನನಗೆ ನೀಡಲ್ಪಟ್ಟವು. ಎರಡನೆಯ ಸಲದ ಪ್ರಕಾಶದಲ್ಲಿ ಮದಾಯಿನಿನ ಬಿಳಿ ಅರಮನೆಗಳು ನನಗೆ ತೋರಿಸಲ್ಪಟ್ಟವು ಮತ್ತು ಪರ್ಶಿಯಾ ಸಾಮ್ರಾಜ್ಯದ ಬೀಗದ ಕೈಗಳು ನನಗೆ ನೀಡಲ್ಪಟ್ಟವು, ಮೂರನೆಯ ಸಲದ ಪ್ರಕಾಶದಲ್ಲಿ ಸನಾ ನಗರದ ಬಾಗಿಲುಗಳು ನನಗೆ ತೋರಿಸಲ್ಪಟ್ಟವು ಮತ್ತು ಯಮನ್ ರಾಜ್ಯದ ಕೀಲಿಗೈಗಳು ನನಗೆ ನೀಡಲ್ಪಟ್ಟವು. ನೀವು ಅಲ್ಲಾಹನ ವಾಗ್ದಾನಗಳ ಮೇಲೆ ಭರವಸೆ ಹೊಂದಿರಿ. ಶತ್ರುಗಳು ನಿಮಗೆ ಏನೂ ಹಾನಿಯನ್ನು ಉಂಟುಮಾಡಲಾರರು.[53]

ಅಷ್ಟು ಕಡಿಮೆ ಸಂಖ್ಯೆಯ ಜನರು ಅಷ್ಟು ದೊಡ್ಡ ಕಂದಕವನ್ನು ಸೈನ್ಯದ ವ್ಯೂಹ ರಚನೆಯ ತತ್ವಗಳ ಪ್ರಕಾರ ತೋಡಲು ಸಾಧ್ಯವಿರಲಿಲ್ಲ. ಶತ್ರುಗಳು ಥಕ್ಕನೆ ನಗರವನ್ನು ಪ್ರವೇಶಿಸದಂತೆ ಮಾತ್ರ ಅದು ತಡೆಯೊಡ್ಡುತ್ತಿತ್ತು. ಈ ಕಂದಕವನ್ನು ದಾಟಿ ಹೋಗುವುದು ಶತ್ರುಗಳಿಗೆ ಅಸಾಧ್ಯವೇನೂ ಆಗಿರಲಿಲ್ಲ ಇನ್ನು ಮುಂದೆ ನಾವು ವಿವರಿಸಲಿರುವ ಸಂಗತಿಗಳಿಂದ ಶತ್ರುಗಳು ಸಹ ಮದೀನವನ್ನು ಅದೇ ಭಾಗದಿಂದ ಆಕ್ರಮಿಸಲು ನಿರ್ಧರಿಸಿದ್ದರೆಂದು ಸಾಬೀತಾಗುತ್ತದೆ. ಶತ್ರುಗಳ ಬೃಹತ್ ಸೈನ್ಯ ಮದೀನವನ್ನು ಆಕ್ರಮಿಸಲು ಅದೇ ಭಾಗದ ಕಡೆಗೆ ಮುಂದೆ ಸಾಗುತ್ತಾ ಇತ್ತು. ಹಝ್ರತ್ ಪೈಗಂಬರರಿಗೆ(ಸ) ಈ ಸಮಾಚಾರ ದೊರಕಿದಾಗ ಅವರು ಕೆಲವು ಜನರನ್ನು ನಗರದ ಇತರ ಭಾಗಗಳನ್ನು ಸಂರಕ್ಷಿಸಲು ನೇಮಿಸಿದರು ಮತ್ತು ಉಳಿದ ಅಂದಾಜು ಹನ್ನೆರಡು ನೂರು ಜನರನ್ನು ಕಂದಕದ ರಕ್ಷಣೆಗಾಗಿ ಕರೆದುಕೊಂಡು ಹೋದರು.

## ಕಂದಕ್ ಯುದ್ಧದಲ್ಲಿ ಹೋರಾಡಿದ ಮುಸ್ಲಿಮ್ ಸೈನಿಕರ ಸಂಖ್ಯೆ ಎಷ್ಟು?

ಈ ಯುದ್ಧದಲ್ಲಿ ಭಾಗವಹಿಸಿದ ಮುಸ್ಲಿಮ್ ಸೈನಿಕರ ಸರಿಯಾದ ಸಂಖ್ಯೆ ಎಷ್ಟೆಂಬ ಬಗ್ಗೆ ಚರಿತ್ರೆಗಾರರು ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ. ಕೆಲವರು

53. ಅಸ್ಸೀರತುಲ್ ಹಲ್‌ಬಿಯ್ಯ, ಝುರ್‌ಖಾನಿ, ಸೀರತ್ ಇಬ್ನು ಹಿಶಾಮ್.

ಇವರ ಸಂಖ್ಯೆ ಮೂರು ಸಾವಿರ ಎಂದೂ ಕೆಲವರು ಹನ್ನೆರಡು–ಹದಿಮೂರು ನೂರುಗಳೆಂದೂ ಬೇರೆ ಕೆಲವರು ಬರೇ ಏಳು ನೂರೆಂದೂ ಬರೆದಿದ್ದಾರೆ. ಇವುಗಳು ಎಷ್ಟು ವಿಭಿನ್ನವಾಗಿವೆ ಎಂದರೆ ಇವುಗಳನ್ನು ಸರಿಹೊಂದಿಸುವುದು ಮೇಲಿಂದ ಮೇಲೆ ನೋಡಿದರೆ ಕಷ್ಟಕರವೆಂದು ತೋರುತ್ತದೆ. ಚರಿತ್ರೆಗಾರರಿಂದ ಇದನ್ನು ಬಗೆಹರಿಸಲು ಸಾಧ್ಯವಾಗಲಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ವರದಿಗಳನ್ನೆಲ್ಲಾ ಸರಿಹೊಂದಿಸಿ ವ್ಯಾಖ್ಯಾನಿಸಬಹುದು.

ಉಹುದ್ ಯುದ್ಧದ ಕ್ಷೇತ್ರದಿಂದ ಕಪಟವಿಶ್ವಾಸಿಗಳು ಮರಳಿ ಹೋದಾಗ ಮುಸ್ಲಿಮರ ಸಂಖ್ಯೆ ಯುದ್ಧಕ್ಷೇತ್ರದಲ್ಲಿ ಬರೇ ಏಳು ನೂರಾಗಿತ್ತು. ಕಂದಕ ಯುದ್ಧ ಕೇವಲ ಎರಡು ವರ್ಷಗಳ ಬಳಿಕ ನಡೆಯಿತು. ಈ ಮಧ್ಯಾವಧಿಯಲ್ಲಿ ಯಾವುದೇ ದೊಡ್ಡ ಗೋತ್ರದ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಮದೀನದಲ್ಲಿ ವಾಸಿಸಲು ಪ್ರಾರಂಭಿಸಿರಲಿಲ್ಲ. ಆದುದರಿಂದ ಏಳು ನೂರು ಜನರು ಇಷ್ಟು ಅಲ್ಪಾವಧಿಯಲ್ಲಿ ಮೂರು ಸಾವಿರ ಆಗುವುದು ಸಮಂಜಸವಾಗಿ ತೋರುವುದಿಲ್ಲ. ಎರಡನೆಯದಾಗಿ, ಉಹುದ್ ಯುದ್ಧದ ನಂತರ ಎರಡು ವರ್ಷಗಳ ಕಾಲ ಮುಸ್ಲಿಮರ ಸಂಖ್ಯೆ ವರ್ಧಿಸಿದರೂ ಯುದ್ಧ ಮಾಡುವವರ ಸಂಖ್ಯೆ ಮಾತ್ರ ಹಿಂದಿನಷ್ಟೇ ಆಗಿ ಉಳಿಯಿತೆಂದು ಹೇಳುವುದು ತರ್ಕಬದ್ಧವಲ್ಲ. ಆದುದರಿಂದ ಕಂದಕ ಯುದ್ಧದಲ್ಲಿ ಭಾಗವಹಿಸಿದ ಮುಸ್ಲಿಮ್ ಸೈನಿಕರ ಸಂಖ್ಯೆ ಹನ್ನೆರಡು ನೂರರಷ್ಟು ಆಗಿರಬಹುದೆಂದು ಭಾವಿಸಬಹುದಾಗಿದೆ.

ಆದರೆ ಕೆಲವರು ಮುಸ್ಲಿಮ್ ಸೈನಿಕರ ಸಂಖ್ಯೆ ಮೂರು ಸಾವಿರ ಎಂದೂ ಬೇರೆ ಕೆಲವರು ಏಳು ನೂರೆಂದೂ ಹೇಳಲು ಕಾರಣವೇನೆಂದು ಇಲ್ಲಿ ಪ್ರಶ್ನಿಸಬಹುದಾಗಿದೆ. ಇದರ ಉತ್ತರವೇನೆಂದರೆ, ಈ ಎರಡು ವರದಿಗಳು ಬೇರೆ ಬೇರೆ ಪರಿಸ್ಥಿತಿಗಳನ್ನು ದೃಷ್ಟಿಯಲ್ಲಿಟ್ಟು ಹೇಳಿದವುಗಳಾಗಿವೆ. ಈ ಯುದ್ಧದಲ್ಲಿ ಮೂರು ಭಾಗಗಳಿದ್ದುವು. ಒಂದು ಶತ್ರು ಸೈನ್ಯ ಮದೀನವನ್ನು ತಲಪುವ ಮೊದಲು ಮುಸ್ಲಿಮರು ಕಂದಕವನ್ನು ತೋಡುತ್ತಿದ್ದ ಸಮಯ. ಈ ಕೆಲಸದಲ್ಲಿ ಮಣ್ಣು ಹೊರುವ ಕೆಲಸವನ್ನು ಮಕ್ಕಳು ಸಹ ಮಾಡಬಹುದಾಗಿತ್ತು. ಕೆಲವು ಮಹಿಳೆಯರೂ ಈ ಕೆಲಸದಲ್ಲಿ ಭಾಗವಹಿಸಿರಬಹುದು. ಆದುದರಿಂದ ಕಂದಕ ತೋಡುವಾಗ ಆ ಕೆಲಸದಲ್ಲಿ ಭಾಗವಹಿಸಿದವರ ಸಂಖ್ಯೆ ಮೂರುಸಾವಿರ ಆಗಿತ್ತು. ಅದರಲ್ಲಿ ಮಕ್ಕಳೂ ಮಹಿಳೆಯರೂ ಇದ್ದರು. ಹಝ್ರತ್ ಪೈಗಂಬರ್(ಸ) ಧಾರ್ಮಿಕ ಸೇವೆಗಾಗಿ ಜನರನ್ನು ಪ್ರೋತ್ಸಾಹಿಸುತ್ತಾ ಇದ್ದುದರಿಂದ ಅವರೆಲ್ಲರೂ ಭಾಗವಹಿಸಿರಬಹುದು. ಕೆಲವರು ನೇರವಾಗಿ ಕಂದಕ ತೋಡುವ ಕೆಲಸದಲ್ಲಿ ಭಾಗವಹಿಸದಿದ್ದರೂ ಅದಕ್ಕೆ ಪೂರಕವಾದ ಕೆಲಸಗಳಲ್ಲಿ ಭಾಗವಹಿಸಿರಬಹುದಾಗಿದೆ. ಕಂದಕ ತೋಡುವಾಗ ಅದರಲ್ಲಿ ಭಾಗವಹಿಸಿದ ಮುಸ್ಲಿಮರ ಸಂಖ್ಯೆ ಮೂರು ಸಾವಿರವಾಗಿತ್ತೆಂದು ಹೇಳುವುದು ನನ್ನ ಅಭಿಪ್ರಾಯ ಮಾತ್ರವಲ್ಲ ಚರಿತ್ರೆಯಿಂದ ಸಹ ಇದಕ್ಕೆ ಸಾಕ್ಷ್ಯವು ದೊರಕುತ್ತದೆ.

ಚರಿತ್ರೆಯಲ್ಲಿ ಹೀಗೆ ಬರೆಯಲಾಗಿದೆ: ಕಂದಕ ತೋಡುವಾಗ ಎಲ್ಲಾ ಹುಡುಗರನ್ನು



ಸೇರಿಸಿಕೊಳ್ಳಲಾಯಿತು. ಎಲ್ಲಾ ಪುರುಷರು ಅವರು ದೊಡ್ಡವರಾಗಿರಲಿ, ಹುಡುಗರಾಗಿರಲಿ ಅವರೆಲ್ಲಾ ಕಂದಕ ತೋಡುತ್ತಿದ್ದರು. ಅಥವಾ ಇನ್ನಿತರ ಸಹಾಯಕ ಕೆಲಸ ಮಾಡುತ್ತಿದ್ದರು. ಶತ್ರು ಸೈನ್ಯ ಆಗಮಿಸಿ ಯುದ್ಧ ಆರಂಭವಾದಾಗ ಹದಿನೈದು ವರ್ಷಗಳಿಗಿಂತ ಚಿಕ್ಕ ವಯಸ್ಸಿನ ಎಲ್ಲಾ ಹುಡುಗರನ್ನು ಅಲ್ಲಿಂದ ಹೊರಟು ಹೋಗಲು ಪೈಗಂಬರ್(ಸ) ಆಜ್ಞಾಪಿಸಿದರು. ಹದಿನೈದು ವರ್ಷ ಪ್ರಾಯದವರು ಇಷ್ಟವಿದ್ದರೆ ನಿಲ್ಲಬಹುದು ಇಲ್ಲದಿದ್ದರೆ ಹೋಗಬಹುದೆಂದು ಆಜ್ಞಾಪಿಸಲಾಯಿತು.[54]

ಈ ವರದಿಯಿಂದ ತಿಳಿಯುವುದೇನೆಂದರೆ, ಕಂದಕ ತೋಡುವಾಗ ಮುಸ್ಲಿಮರ ಸಂಖ್ಯೆ ಹೆಚ್ಚಾಗಿತ್ತು. ಆದರೆ ಯುದ್ಧದ ಸಮಯ ಅವರ ಸಂಖ್ಯೆ ಕಡಿಮೆಯಾಯಿತು. ಯುದ್ಧ ಪ್ರಾರಂಭವಾಗುವಾಗ ಅಪ್ರಾಪ್ತ ವಯಸ್ಕರನ್ನು ಅಲ್ಲಿಂದ ಮರಳಿ ಹೋಗಲು ಆಜ್ಞಾಪಿಸಲಾಗಿತ್ತು. ಮೂರು ಸಾವಿರ ಮುಸ್ಲಿಮ್ ಸೈನಿಕರನ್ನು ಸೂಚಿಸುವ ವರದಿಗಳು ಕಂದಕ ತೋಡುವಾಗ ಇದ್ದ ಮುಸ್ಲಿಮರ ಸಂಖ್ಯೆಯನ್ನು ಸೂಚಿಸುತ್ತವೆ. ಅವರಲ್ಲಿ ಚಿಕ್ಕ ಮಕ್ಕಳೂ ಇದ್ದರು. ಬೇರೆ ಯುದ್ಧಗಳಲ್ಲಿ ಮಹಿಳೆಯರು ಭಾಗವಹಿಸಿದುದನ್ನು ಇಲ್ಲಿಗೆ ಹೊಂದಿಸಿಕೊಂಡು ಹೇಳುವುದಾದರೆ ಅವರಲ್ಲಿ ಕೆಲವು ಮಹಿಳೆಯರೂ ಸೇರಿದ್ದರು. ಹನ್ನೆರಡು ನೂರರ ಸಂಖ್ಯೆಯು ಯುದ್ಧವು ಪ್ರಾರಂಭವಾಗುವಾಗ ಅದರಲ್ಲಿ ಭಾಗವಹಿಸಿದ ಪ್ರಾಪ್ತ ವಯಸ್ಕ ಪುರುಷರ ಸಂಖ್ಯೆಯಾಗಿದೆ. ಹಾಗಾದರೆ ಏಳು ನೂರೆಂದು ಹೇಳಿದುದರ ಅರ್ಥವೇನು? ಅವರ ಅಭಿಪ್ರಾಯ ಸಹ ಸತ್ಯವೇ? ಹೀಗೆ ವರದಿ ಮಾಡಿದುದು ಇಬ್ನು ಇಸ್‌ಹಾಖ್ ಎಂಬ ಚರಿತ್ರೆಗಾರರಾಗಿದ್ದಾರೆ. ಅವರು ಬಹಳ ವಿಶ್ವಾಸಾರ್ಹ ಚರಿತ್ರೆಗಾರರಾಗಿದ್ದಾರೆ. ಇಬ್ನು ಹಝ್ಮ್‌ರಂತಹ ವಿಖ್ಯಾತ ಪಂಡಿತರು ಅವರ ಹೇಳಿಕೆಯನ್ನು ಅಂಗೀಕರಿಸಿದ್ದಾರೆ. ಆದುದರಿಂದ ಈ ವರದಿಯ ಬಗ್ಗೆ ಸಹ ಸಂಶಯಪಡಲಾಗದು.

ಈ ವರದಿಯ ಕುರಿತು ಚಾರಿತ್ರಿಕ ಸಂಶೋಧನೆ ನಡೆಸಿದಾಗ ತಿಳಿದು ಬಂದದ್ದೇನೆಂದರೆ, ಯುದ್ಧದ ಮಧ್ಯದಲ್ಲಿ ಯಹೂದಿ ಗೋತ್ರವಾದ ಬನೂ ಖುರೈಝ ಶತ್ರುಗಳೊಂದಿಗೆ ಸೇರಿದರು. ಅವರು ಶತ್ರುಗಳೊಂದಿಗೆ ಸೇರಿ ಮದೀನವನ್ನು ಹಠಾತ್ತಾಗಿ ಆಕ್ರಮಿಸುವ ಯೋಜನೆ ಸಿದ್ಧಗೊಳಿಸಿದ್ದರು. ಅವರ ರಹಸ್ಯ ಬಹಿರಂಗಗೊಂಡಾಗ ಮದೀನದಲ್ಲಿ ಬನೂ ಖುರೈಝ್ ಗೋತ್ರವಿದ್ದ ಪ್ರದೇಶದಲ್ಲಿ ಸಹ ರಕ್ಷಣೆಯ ಆವಶ್ಯಕತೆ ಇದೆಯೆಂದು ಪರಿಗಣಿಸಲಾಯಿತು. ಆ ಭಾಗದಲ್ಲಿ ಬನೂ ಖುರೈಝರ ಕೋಟೆ ಸಹ ಇತ್ತು. ಬನೂ ಖುರೈಝ ಮಿತ್ರಪಕ್ಷದವರೆಂದು ಗಣಿಸಲ್ಪಟ್ಟ ಕಾರಣ ಅವರ ಕೋಟೆ ಇದ್ದ ದಿಕ್ಕಿನಲ್ಲಿ ಸಾಕಷ್ಟು ರಕ್ಷಣೆಯ ಏರ್ಪಾಡು ಮಾಡಿರಲಿಲ್ಲ. ಶತ್ರುಗಳು ಆ ದಿಕ್ಕಿನಿಂದ ಪ್ರವೇಶಿಸಲು ಬನೂ ಖುರೈಝ ಬಿಡಲಾರರೆಂದು ಬಗೆಯಲಾಗಿತ್ತು. ಆದರೆ ಅನಂತರ ಬನೂ ಖುರೈಝರ ವಿದ್ರೋಹದ ಬಗ್ಗೆ ತಿಳಿದಾಗ ಆ ಭಾಗದ ರಕ್ಷಣೆಗೆ ಏರ್ಪಾಡು ಮಾಡಲಾಯಿತು. ಬನೂ ಖುರೈಝರ ಕೋಟೆ ಇದ್ದ ಪ್ರದೇಶದಲ್ಲಿ ಮಹಿಳೆಯರನ್ನೂ ಮಕ್ಕಳನ್ನೂ

54. ಅಸ್ಸೀರತುಲ್ ಹಲಬಿಯ್ಯ ಸಂಪುಟ 2 ಪುಟ 344.

ಶಿಬಿರಗಳಲ್ಲಿ ಇರಿಸಲಾಗಿತ್ತು. ಅವರ ರಕ್ಷಣೆಗಾಗಿ ಮುಸ್ಲಿಮ್ ಸೈನಿಕರ ಎರಡು ತುಕಡಿಗಳನ್ನು ರಚಿಸಲಾಯಿತು. ಇಬ್ನು ಅಸ್‌ಲಮ್(ರ) ನೇತೃತ್ವದಲ್ಲಿ ಇನ್ನೂರು ಸೈನಿಕರು ಮತ್ತು ಝೈದ್ ಬಿನ್ ಹಾರಿಸ್(ರ) ನೇತೃತ್ವದಲ್ಲಿ ಮುನ್ನೂರು ಸೈನಿಕರು ಮಹಿಳೆಯರ ರಕ್ಷಣೆಗಾಗಿ ನಿಂತರು. ತಾವು ಸುರಕ್ಷಿತರಾಗಿದ್ದೇವೆಂದು ತಿಳಿಯಪಡಿಸಲಿಕ್ಕಾಗಿ ಸ್ವಲ್ಪ ಸ್ವಲ್ಪ ಬಿಡುವು ಮಾಡಿಕೊಂಡು "ಅಲ್ಲಾಹು ಅಕ್‌ಬರ್" ಎಂದು ಘೋಷಿಸುತ್ತಾ ಇರಬೇಕೆಂದು ಅವರಿಗೆ ಆಜ್ಞಾಪಿಸಲಾಗಿತ್ತು.

ಈ ವರದಿಯಿಂದ ಇಬ್ನು ಇಸ್‌ಹಾಖ್‌ರವರು ಪ್ರಸ್ತಾಪಿಸಿದ ಏಳುನೂರು ಸೈನಿಕರ ಸಂಖ್ಯೆಯ ವಾಸ್ತವಿಕತೆ ಏನೆಂದು ತಿಳಿಯುತ್ತದೆ. ಒಟ್ಟಾರೆ ಹನ್ನೆರಡು ನೂರು ಸೈನಿಕರಿದ್ದರು. ಮಹಿಳೆಯರ ರಕ್ಷಣೆಗಾಗಿ ಅವರ ಪೈಕಿ ಐನೂರು ಜನರನ್ನು ನೇಮಿಸಲಾಯಿತು. ಹನ್ನೆರಡು ನೂರು ಸೈನಿಕರಲ್ಲಿ ಯುದ್ಧಕ್ಕಾಗಿ ಸಿದ್ಧರಾಗಿದ್ದವರು ಏಳು ನೂರು ಸೈನಿಕರು ಮಾತ್ರ. ಈ ರೀತಿ ಕಂದಕ ಯುದ್ಧದಲ್ಲಿ ಭಾಗವಹಿಸಿದ ಸೈನಿಕರ ಸಂಖ್ಯೆಯ ಬಗ್ಗೆ ಇದ್ದ ವಿವಿಧ ವರದಿಗಳನ್ನು ವಿಶದೀಕರಿಸಬಹುದಾಗಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಭಯಂಕರ ವಿಪತ್ತಿನ ಕಾಲದಲ್ಲಿ ಕಂದಕದ ರಕ್ಷಣೆಗಾಗಿ ಇದ್ದ ಸೈನಿಕರ ಸಂಖ್ಯೆ ಏಳು ನೂರು ಮಾತ್ರವಾಗಿತ್ತು. ಕಂದಕ ತೋಡಲಾಗಿದ್ದರೂ ಅಷ್ಟು ದೊಡ್ಡ ಸಂಖ್ಯೆಯ ಶತ್ರುಸೈನ್ಯವನ್ನು ಕಂದಕದ ಆಚೆ ಬದಿಯಲ್ಲಿ ತಡೆದಿಡುವುದು ಇಷ್ಟು ಅಲ್ಪ ಸಂಖ್ಯೆಯ ಜನರಿಗೆ ಅಸಾಧ್ಯವೇ ಆಗಿತ್ತು. ಆದರೆ ಅಲ್ಲಾಹನ ಸಹಾಯದ ಭರವಸೆಯಿಂದ ಈ ಅಲ್ಪ ಸಂಖ್ಯೆಯ ಸೈನ್ಯ ದೃಢವಿಶ್ವಾಸ ಮತ್ತು ದೃಢಚಿತ್ತದಿಂದ ಕಂದಕದ ಈಚೆ ಬದಿಯಲ್ಲಿ ಶತ್ರುಗಳ ಬಲಿಷ್ಠ ಸೈನ್ಯವನ್ನು ಪ್ರತೀಕ್ಷಿಸುತ್ತಾ ಇದ್ದರು. ಮಹಿಳೆಯರನ್ನು ಮತ್ತು ಮಕ್ಕಳನ್ನು ಎರಡು ಬೇರೆ ಬೇರೆ ಸ್ಥಳಗಳಲ್ಲಿ ಒಟ್ಟು ಸೇರಿಸಲಾಗಿತ್ತು. ಶತ್ರುಸೈನ್ಯ ಕಂದಕದ ಸಮೀಪ ಬಂದಾಗ ಅರಬಿಗಳಿಗೆ ಅದೊಂದು ಹೊಸ ವಿದ್ಯಮಾನವಾಗಿ ಗೋಚರಿಸಿತು. ಅವರು ಇಂತಹ ಯುದ್ಧಕ್ಕೆ ಸಿದ್ಧರಾಗಿರಲಿಲ್ಲವಾದುದರಿಂದ ಕಂದಕದ ಬದಿಯಲ್ಲಿ ಡೇರೆ ಹಾಕಿದರು ಮತ್ತು ಮದೀನವನ್ನು ಪ್ರವೇಶಿಸುವುದು ಹೇಗೆಂದು ಯೋಚಿಸತೊಡಗಿದರು.

## ಬನೂ ಖುರೈಝರ ದ್ರೋಹ

ಮದೀನದ ದೊಡ್ಡದಾದೊಂದು ಪ್ರದೇಶ ಕಂದಕದ ಕಾರಣದಿಂದ ಸುರಕ್ಷಿತವಾಗಿತ್ತು. ಬೇರೆ ಕಡೆಗಳಲ್ಲಿ ಕೆಲವು ಗುಡ್ಡಬೆಟ್ಟಗಳು, ಕೆಲವು ಸುದೃಢವಾದ ಮನೆಗಳು ಮತ್ತು ತೋಟಗಳು ಇದ್ದುವು. ಆದುದರಿಂದ ಸೈನ್ಯ ನಗರವನ್ನು ದಿಢೀರೆಂದು ನುಗ್ಗಿ ಪ್ರವೇಶಿಸಲು ಸಾಧ್ಯವಿರಲಿಲ್ಲ. ಮದೀನದಲ್ಲಿ ವಾಸವಿದ್ದ ಬನೂ ಖುರೈಝ ಎಂಬ ಯಹೂದಿಯರ ಗೋತ್ರವನ್ನು ತಮ್ಮೊಂದಿಗೆ ಸೇರಿಸಿ ಅವರ ಸಹಾಯದಿಂದ ಮದೀನವನ್ನು ಪ್ರವೇಶಿಸಬೇಕೆಂದು ಅವಿಶ್ವಾಸಿಗಳು ಪರಸ್ಪರ ಸಮಾಲೋಚನೆ ನಡೆಸಿದರು. ಮದೀನದಿಂದ ಗಡಿಪಾರುಮಾಡಲ್ಪಟ್ಟ ಬನೂ ನಝೀರ್ ಗೋತ್ರದ ಒಬ್ಬ ಮುಂದಾಳು ಹುಯಯ್ ಬಿನ್ ಅಖ್‌ತಬ್‌ನನ್ನು ಅವಿಶ್ವಾಸಿಗಳ ನಾಯಕ



ಅಬೂ ಸುಫ್‌ಯಾನ್ ಈ ಕಾರ್ಯ ಸಾಧನೆಗಾಗಿ ನೇಮಿಸಿದರು. ಹುಯಯ್ ಮಾಡಿದ ಒಳಸಂಚುಗಳ ಪರಿಣಾಮವಾಗಿಯೇ ಅರಬಿ ಗೋತ್ರಗಳು ಮದೀನವನ್ನು ಆಕ್ರಮಿಸಲು ಒಗ್ಗಟ್ಟಾಗಿ ಬಂದಿದ್ದರು.

ಹುಯಯ್ ಬನೂ ಖುರೈಝರ ಕೋಟೆಯನ್ನು ಸಮೀಪಿಸಿ ಯಹೂದಿಯರ ನಾಯಕರನ್ನು ಭೇಟಿಯಾಗಲು ಬಯಸಿದನು. ಮೊದಲು ಅವರು ಅವನನ್ನು ಭೇಟಿಯಾಗಲು ಇಷ್ಟಪಡಲಿಲ್ಲ. ಆದರೆ ಅನಂತರ ಯಹೂದಿಯರು ಅವನನ್ನು ಭೇಟಿಯಾದಾಗ ಅವನು ಹೇಳಿದನು: "ಮುಸ್ಲಿಮರನ್ನು ಧ್ವಂಸಗೊಳಿಸಲು ಎಲ್ಲಾ ಅರಬಿ ಗೋತ್ರಗಳು ಒಗ್ಗಟ್ಟಾಗಿ ಬಂದಿವೆ. ಈ ನಗರದವರು ಇಷ್ಟು ದೊಡ್ಡ ಸಂಖ್ಯೆಯ ಸೈನಿಕರನ್ನು ಎದುರಿಸಲು ಸಾಧ್ಯವೇ ಆಗಲಾರದು. ಮುಸ್ಲಿಮರನ್ನು ಆಕ್ರಮಿಸಲು ನಿಂತಿರುವ ಸೈನ್ಯ ಸೈನ್ಯವೇ ಅಲ್ಲ, ಅದು ಭೀಕರ ಅಲೆಗಳನ್ನು ಮೇಲಕ್ಕೇರಿಸುತ್ತಿರುವ ಸಮುದ್ರವೇ ಆಗಿದೆ." ಹುಯಯ್ ಹೀಗೆಲ್ಲಾ ಹೇಳಿ ಯಹೂದಿಯರು ಮುಸ್ಲಿಮರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಉಲ್ಲಂಘಿಸಿ ಅವರಿಗೆ ದ್ರೋಹ ಬಗೆಯುವಂತೆ ಮಾಡಿದನು.

ಯಹೂದಿಯರು ಅವಿಶ್ವಾಸಿಗಳೊಂದಿಗೆ ಹೀಗೆ ನಿರ್ಧರಿಸಿದರು: ಅವಿಶ್ವಾಸಿಗಳ ಸೈನ್ಯ ಮುಂಭಾಗದಿಂದ ಕಂದಕ ದಾಟಲು ಪ್ರಯತ್ನ ಮಾಡುತ್ತಾ ಇರಬೇಕು. ಅವರು ಕಂದಕ ದಾಟುವುದರಲ್ಲಿ ವಿಜಯಿಗಳಾದರೆ ಬನೂ ಖುರೈಝ ಮದೀನದ ಇನ್ನೊಂದು ಭಾಗದಿಂದ, ಎಂದರೆ ಮಹಿಳೆಯರು ಮತ್ತು ಮಕ್ಕಳನ್ನು ಬನೂ ಖುರೈಝರ ಮೇಲಿನ ನಂಬಿಕೆಯಿಂದ ಇರಿಸಲ್ಪಟ್ಟ, ರಕ್ಷಣೆಯ ವ್ಯವಸ್ಥೆ ಮಾಡದಿರುವ ಭಾಗದಿಂದ ಆಕ್ರಮಿಸಬೇಕು.

ಈ ರೀತಿ ಮುಸ್ಲಿಮರ ಭದ್ರತೆಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಜಜ್ಜಿ ಬಿಡುವುದು ಅವರ ಉದ್ದೇಶವಾಗಿತ್ತು. ಮುಸ್ಲಿಮರ ಎಲ್ಲಾ ಪುರುಷರು, ಮಹಿಳೆಯರು ಮತ್ತು ಮಕ್ಕಳು ಕೊಲ್ಲಲ್ಪಡಬೇಕೆಂದು ಅವರ ಉದ್ದೇಶವಾಗಿತ್ತು. ಅವಿಶ್ವಾಸಿಗಳ ಈ ಕಾರ್ಯಯೋಜನೆಯಲ್ಲಿ ಅವರಿಗೆ ಸ್ವಲ್ಪವಾದರೂ ಜಯಲಭಿಸಿದ್ದರೆ ಮುಸ್ಲಿಮರಿಗೆ ಸುರಕ್ಷಿತವಾದ ಯಾವುದೇ ಸ್ಥಳವೂ ದೊರಕುತ್ತಿರಲಿಲ್ಲ.

ಬನೂ ಖುರೈಝ ಗೋತ್ರದವರು ಮುಸ್ಲಿಮರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು ಪ್ರತಿಜ್ಞಾಬದ್ಧರಾಗಿದ್ದರು. ಅವರು ಮುಸ್ಲಿಮರ ಜೊತೆಗೂಡಿ ಯುದ್ಧಮಾಡಲು ಸಿದ್ಧರಾಗದಿದ್ದರೂ ಅವರು ವಾಸಿಸುತ್ತಿದ್ದ ಮದೀನದ ಭಾಗವನ್ನು ದಾಟಿಕೊಂಡು ಶತ್ರುಗಳು ಮುಸ್ಲಿಮರ ವಿರುದ್ಧ ಆಕ್ರಮಣವನ್ನು ಮಾಡಲು ಅವರು ಬಿಡಲಾರರು ಎಂಬ ಭರವಸೆಯನ್ನು ಮುಸ್ಲಿಮರು ಹೊಂದಿದ್ದರು. ಇದೇ ಕಾರಣದಿಂದ ಬನೂ ಖುರೈಝರು ವಾಸಿಸುತ್ತಿದ್ದ ಭಾಗದಲ್ಲಿ ಯಾವುದೇ ರಕ್ಷಣಾ ವ್ಯವಸ್ಥೆ ಮಾಡಿರಲಿಲ್ಲ. ಬನೂ ಖುರೈಝ ಮತ್ತು ಆಕ್ರಮಣಗಾರರಾದ ಅವಿಶ್ವಾಸಿಗಳು ಈ ಪರಿಸ್ಥಿತಿಯನ್ನು ಪರಾಂಬರಿಸಿ ಹೀಗೆ ನಿರ್ಧರಿಸಿದ್ದರು:

ಬನೂ ಖುರೈಝ ಅವಿಶ್ವಾಸಿಗಳೊಂದಿಗೆ ಗುಪ್ತ ಒಪ್ಪಂದ ಮಾಡಿಕೊಂಡಿದ್ದರೂ

ಅವರು ಬಹಿರಂಗವಾಗಿ ಅವಿಶ್ವಾಸಿಗಳಿಗೆ ಸಹಾಯ ಮಾಡುವುದು ಬೇಡ. ಅವರು ಬಹಿರಂಗವಾಗಿ ಸಹಾಯ ಮಾಡಲುತೊಡಗಿದರೆ ಮುಸ್ಲಿಮರು ಬನೂ ಖುರೈಝುರಿರುವ ದಿಕ್ಕಿನ ಕಡೆಗಳಲ್ಲೂ ಭದ್ರತೆಯ ಯಾವುದಾದರೂ ವ್ಯವಸ್ಥೆಯನ್ನು ರೂಪಿಸುವರು.

ಬನೂ ಖುರೈಝುರ ಈ ರೀತಿಯ ಒಳಸಂಚು ಮುಸ್ಲಿಮರಿಗೆ ಬಹಳ ಅಪಾಯಕರವಾಗಿತ್ತು. ಮುಸ್ಲಿಮರ ಸೈನ್ಯದ ಮೇಲೆ ಅವಿಶ್ವಾಸಿಗಳ ಸೈನ್ಯದ ಧಾಳಿ ಅತ್ಯಂತ ಭೀಕರವಾಗಿರುವ ಸಮಯದಲ್ಲಿ ಬನೂ ಖುರೈಝು ಶತ್ರುಗಳೊಂದಿಗೆ ಸೇರಿದರೆ, ಸುರಕ್ಷಿತವಾಗಿರದ ಆ ಭಾಗದ ರಕ್ಷಣೆಯನ್ನು ತುರ್ತಾಗಿ ಮಾಡುವುದು ಮುಸ್ಲಿಮರಿಗೆ ಅಸಾಧ್ಯವಾಗುತ್ತಿತ್ತು.

ಬನೂ ಖುರೈಝುರೊಂದಿಗೆ ರಹಸ್ಯ ಸಂಧಾನ ನಡೆಸಿದ ನಂತರ ಅವಿಶ್ವಾಸಿಗಳಿಗೆ ಮುಸ್ಲಿಮರ ಮೇಲೆ ಎರಡು ಕಡೆಗಳಿಂದ ಆಕ್ರಮಣ ಮಾಡಲು ಸಾಧ್ಯವೆಂಬ ಭರವಸೆ ಉಂಟಾದ ಕೂಡಲೆ ಅವಿಶ್ವಾಸಿಗಳ ಸೈನ್ಯ ಕಂದಕದ ಮೇಲೆ ಆಕ್ರಮಣ ಮಾಡಲು ತೊಡಗಿತು. ಮೊದಲು ಕೆಲವು ದಿನಗಳ ಕಾಲ, ಕಂದಕವನ್ನು ದಾಟುವುದು ಹೇಗೆ ಎಂದು ಅವಿಶ್ವಾಸಿಗಳಿಗೆ ತಿಳಿಯಲಿಲ್ಲ. ಅನಂತರ ಅವರು ಬಿಲ್ಲುಗಾರರನ್ನು ಎತ್ತರವಾದ ಸ್ಥಳಗಳಲ್ಲಿ ನಿಲ್ಲಿಸಿದರು. ಮುಸ್ಲಿಮರು ಚಿಕ್ಕ ಚಿಕ್ಕ ಗುಂಪುಗಳಾಗಿ ಕಂದಕದ ಬದಿಯಲ್ಲಿ ನಿಂತು ಅದರ ರಕ್ಷಣೆ ಮಾಡುತ್ತಿದ್ದರು. ಬಿಲ್ಲುಗಾರರು ಬಾಣಗಳ ಸುರಿಮಳೆಯಿಂದ ಮುಸ್ಲಿಮರನ್ನು ಆಕ್ರಮಿಸಿದಾಗ ಕಂದಕದ ಬದಿಯಿಂದ ದೂರ ಸರಿಯಲು ನಿರ್ಬಂಧಿತರಾಗುತ್ತಿದ್ದರು. ಆಗ ಶ್ರೇಷ್ಠ ವರ್ಗದ ಕುದುರೆಗಳನ್ನೇರಿ ಕಂದಕದ ಮೇಲಿನಿಂದ ಹಾರಿ ದಾಟಲು ಅವಿಶ್ವಾಸಿಗಳು ಪ್ರಯತ್ನಿಸುತ್ತಿದ್ದರು. ಈ ರೀತಿ ನಿರಂತರವಾಗಿ ಆಕ್ರಮಣ ನಡೆಸಿದರೆ ಕಾಲಾಳುಗಳ ಸೈನ್ಯ ಹೆಚ್ಚಿನ ಸಂಖ್ಯೆಯಲ್ಲಿ ಕಂದಕವನ್ನು ದಾಟಬಹುದಾದ ಯಾವುದಾದರೂ ಸ್ಥಳ ಸಿಗಬಹುದೆಂದು ಅವಿಶ್ವಾಸಿಗಳು ಯೋಚಿಸುತ್ತಿದ್ದರು.

ಅವಿಶ್ವಾಸಿಗಳು ನಿರಂತರವಾಗಿ ಆಕ್ರಮಣಗಳನ್ನು ಮುಂದುವರಿಸಿದರು. ಕೆಲವು ಸಲ ಮುಸ್ಲಿಮರಿಗೆ ಶ್ವಾಸೋಚ್ಛ್ವಾಸ ಮಾಡುವ ಕಾಲಾವಕಾಶ ಸಹ ದೊರಕುತ್ತಿರಲಿಲ್ಲ. ಒಂದು ದಿನ ಅವಿಶ್ವಾಸಿಗಳ ಆಕ್ರಮಣ ಎಷ್ಟು ಕಠಿಣವಾಗಿತ್ತೆಂದರೆ, ಮುಸ್ಲಿಮರಿಗೆ ಸಮಯಕ್ಕೆ ಸರಿಯಾಗಿ ನಮಾಝ್ ಮಾಡಲು ಸಾಧ್ಯವಾಗಲಿಲ್ಲ. ಇದರಿಂದ ದುಃಖಿತರಾಗಿ ಹಝ್‌ರತ್ ಪೈಗಂಬರ್(ಸ), "ಅಲ್ಲಾಹನು ಅವಿಶ್ವಾಸಿಗಳನ್ನು ಶಿಕ್ಷಿಸಲಿ. ಅವರು ನಮ್ಮ ನಮಾಝ್‌ಗಳನ್ನು ನಷ್ಟಪಡಿಸಿದರು" ಎಂದು ಹೇಳಿದರು.[55]

ನಾನು ಈ ಘಟನೆಯನ್ನು ಶತ್ರುಗಳ ಆಕ್ರಮಣದ ತೀವ್ರತೆಯನ್ನು ಸ್ಪಷ್ಟಪಡಿಸಲು ಬರೆದಿರುವೆನಾದರೂ ಈ ಸಂಭವ ಹಝ್‌ರತ್ ಪೈಗಂಬರರ(ಸ) ಸ್ವಭಾವ ಗುಣದ ಮೇಲೆ ಬಹಳ ಉಜ್ವಲವಾದ ಪ್ರಕಾಶವನ್ನು ಬೀರುತ್ತದೆ. ಹಝ್‌ರತ್ ಪೈಗಂಬರರಿಗೆ(ಸ)

55. ಬುಖಾರಿ.



ಲೋಕದಲ್ಲಿ ಅತ್ಯಂತ ಪ್ರಿಯವಾದುದು ಅಲ್ಲಾಹನ ಆರಾಧನೆ ಆಗಿತ್ತೆಂದು ಇದರಿಂದ ತಿಳಿಯುತ್ತದೆ. ಶತ್ರುಗಳು ಮದೀನಕ್ಕೆ ನಾಲ್ಕು ದಿಕ್ಕುಗಳಿಂದಲೂ ಮುತ್ತಿಗೆ ಹಾಕಿದ್ದಾಗ, ಮದೀನದ ಪುರುಷರ ಮಾತ್ರವಲ್ಲ ಮಹಿಳೆಯರ ಮತ್ತು ಮಕ್ಕಳ ಜೀವಗಳು ಸಹ ಅಪಾಯದಲ್ಲಿದ್ದಾಗ, ಪ್ರತಿ ಕ್ಷಣದಲ್ಲಿಯೂ ಮದೀನದ ಜನರ ಹೃದಯಗಳು ಮದೀನವನ್ನು ಶತ್ರುಗಳು ಪ್ರವೇಶಿಸುವ ಕುರಿತು ಭೀತಿಯಿಂದ ನಡುಗುತ್ತಿರುವಾಗ, ಅಂತಹ ವಿಷಮ ಘಟ್ಟದಲ್ಲಿಯೂ ಹಝ್‌ರತ್ ಪೈಗಂಬರ್(ಸ) ಆಶಿಸುತ್ತಾ ಇದ್ದುದು ಅಲ್ಲಾಹನ ಆರಾಧನೆ ನಿಗದಿತ ಸಮಯಗಳಲ್ಲಿ ಪ್ರತಿದಿನ ಉತ್ತಮವಾಗಿ ಅನುಷ್ಠಿಸಲ್ಪಡಬೇಕು ಎಂದಾಗಿತ್ತು.

ಮುಸ್ಲಿಮರ ಆರಾಧನೆ ಯಹೂದಿಯರ, ಕ್ರೈಸ್ತರ ಮತ್ತು ಹಿಂದೂಗಳ ಹಾಗೆ ವಾರಕ್ಕೊಮ್ಮೆ ಅನುಷ್ಠಿಸುವುದಾಗಿರಲಿಲ್ಲ. ಮುಸ್ಲಿಮರು ಏಕದೇವನನ್ನು ಆರಾಧಿಸುವುದು ಒಂದು ಹಗಲು ರಾತ್ರಿ ಒಟ್ಟು ಐದು ಸಾರಿಯಾಗಿದೆ. ಯುದ್ಧದಂತಹ ಅಪಾಯಕರ ಸನ್ನಿವೇಶದಲ್ಲಿ ದಿನದಲ್ಲಿ ಒಂದು ಬಾರಿ ಸಹ ಆರಾಧನೆ ನಡೆಸುವುದು ಮನುಷ್ಯರಿಗೆ ಕಷ್ಟಕರವಾಗಿದೆ. ಅಂತಹ ಸಮಯದಲ್ಲಿ ದಿನದಲ್ಲಿ ಐದು ಬಾರಿ, ಅದು ಸಹ ಸಾಮೂಹಿಕವಾಗಿ ನಮಾಝ್ ಅನುಷ್ಠಾನ ಮಾಡುವುದು ಎಷ್ಟು ಕಷ್ಟವೆಂದು ನೀವೇ ಯೋಚಿಸಿರಿ. ಆದರೆ ಈ ಅಪಾಯಕಾರಿ ದಿನಗಳಲ್ಲೂ ಹಝ್‌ರತ್ ಪೈಗಂಬರ್(ಸ) ಐದು ಹೊತ್ತಿನ ನಮಾಝುನ್ನು ಪ್ರತಿದಿನ ನಿಗದಿತ ಸಮಯದಲ್ಲಿ ಅನುಷ್ಠಿಸುತ್ತಾ ಇದ್ದರು. ಒಂದು ದಿನ ಶತ್ರುಗಳ ಕಠಿಣ ಆಕ್ರಮಣಗಳ ಕಾರಣದಿಂದ ನಿಗದಿತ ಸಮಯಗಳಲ್ಲಿ ತನ್ನ ಸೃಷ್ಟಿಕರ್ತನ ಆರಾಧನೆ ಸಮಾಧಾನಚಿತ್ತದಿಂದ ಮಾಡಲು ಸಾಧ್ಯವಾಗಲಿಲ್ಲ. ಆ ಕಾರಣದಿಂದ ಅವರಿಗೆ ಬಹಳ ದುಃಖವಾಯಿತು.

ಆ ಸಮಯದಲ್ಲಿ ಮುಂಭಾಗದಿಂದ ಮಕ್ಕದ ಐಕ್ಯಕೂಟದ ಸೈನಿಕರು ಆಕ್ರಮಣ ಮಾಡುತ್ತಿದ್ದರು. ಹಿಂಭಾಗದಿಂದ ಬನೂ ಖುರೈಝು ಮದೀನದೊಳಗೆ ಮುಸ್ಲಿಮರಿಗೆ ಸಂಶಯ ಉಂಟಾಗದ ರೀತಿಯಲ್ಲಿ ಪ್ರವೇಶಿಸಿ ಹೆಂಗಸರನ್ನೂ ಮಕ್ಕಳನ್ನೂ ಕೊಂದು ಹಾಕಲು ಸಂದರ್ಭಕ್ಕಾಗಿ ಕಾದು ಕುಳಿತುಕೊಂಡಿದ್ದರು. ಹೀಗಿರುವಾಗ ಒಂದು ದಿನ ಬನೂ ಖುರೈಝು ಒಬ್ಬ ಗೂಢಚಾರನನ್ನು ಮಹಿಳೆಯರನ್ನು ಮತ್ತು ಮಕ್ಕಳನ್ನು ಇರಿಸಿದ ಸ್ಥಳಕ್ಕೆ ಕಳುಹಿಸಿದರು. ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗಾಗಿ ಸಾಕಷ್ಟು ಸೈನಿಕರು ನೇಮಿಸಲ್ಪಟ್ಟಿರುವರೋ ಅಥವಾ ಅವರಿಗೆ ಯಾವುದೇ ರಕ್ಷಣೆಯ ಏರ್ಪಾಡು ಮಾಡಿಲ್ಲವೋ ಎಂಬುದನ್ನು ತಿಳಿಯುವುದು ಅವರ ಉದ್ದೇಶವಾಗಿತ್ತು. ಶತ್ರುಗಳಿಂದ ಹೆಚ್ಚು ಅಪಾಯದ ಭೀತಿ ಇರುವ ಕುಟುಂಬಗಳನ್ನು ಒಂದು ಪ್ರತ್ಯೇಕ ಆವರಣದೊಳಗೆ ಇರಿಸಲಾಗಿತ್ತು. ಗೂಢಚಾರನು ಅಲ್ಲಿಗೆ ಬಂದು ಅಲ್ಲೆಲ್ಲಾದರೂ ಮುಸ್ಲಿಮ್ ಸೈನಿಕರು ಅಡಗಿ ಕುಳಿತುಕೊಂಡಿರುವರೋ ಎಂಬುದನ್ನು ತಿಳಿದುಕೊಳ್ಳಲು ಸುತ್ತುಮುತ್ತಲೂ ನೋಡತೊಡಗಿದನು.

ಆಗ ಹಝ್‌ರತ್ ಪೈಗಂಬರರರ(ಸ) ಪಿತೃಸಹೋದರಿ ಹಝ್‌ರತ್ ಸಫಿಯಾ(ರ) ಆ ಗೂಢಚಾರನನ್ನು ಕಂಡರು. ಆ ಸಮಯದಲ್ಲಿ ಕೇವಲ ಒಬ್ಬ ಮುಸ್ಲಿಮ್

ಪುರುಷ ಅಲ್ಲಿ ಮಹಿಳೆಯರ ರಕ್ಷಣೆಗಾಗಿ ನಿಯುಕ್ತರಾಗಿದ್ದರು. ಅವರು ಸಹ ಆ ಸಮಯದಲ್ಲಿ ಅನಾರೋಗ್ಯದಿಂದಿದ್ದರು. ಹಝ್‌ರತ್ ಸಫಿಯಾ ರಕ್ಷಕ ಮುಸ್ಲಿಮ್ ಭಟನೊಂದಿಗೆ ಹೀಗೆಂದರು: "ಒಬ್ಬ ವ್ಯಕ್ತಿ ಮಹಿಳೆಯರನ್ನು ಸುರಕ್ಷಿತವಾಗಿ ಇರಿಸಿದಲ್ಲಿ ತಿರುಗಾಡುತ್ತಿದ್ದಾನೆ. ಅವನು ಅಲ್ಲಿಂದ ಹೋಗದೆ ಸುತ್ತಲೂ ನೋಡುತ್ತಾ ತಿರುಗಾಡುತ್ತಿದ್ದಾನೆ. ಅವನು ಶತ್ರುಗಳ ಗೂಢಚಾರನೆಂದೇ ತೋರುತ್ತದೆ. ನೀವು ಹೋಗಿ ಅವನನ್ನು ಎದುರಿಸಿ. ಇಲ್ಲಿಯ ಸಮಾಚಾರ ತಿಳಿದು ಈ ಕಡೆ ಶತ್ರುಗಳು ಆಕ್ರಮಣ ಮಾಡಲು ಮುಂದಾಗದಿರಲಿ."

ಆದರೆ ರೋಗಗ್ರಸ್ತನಾದ ಆ ಮುಸ್ಲಿಮ್ ಅವರ ಮಾತಿನ ಪ್ರಕಾರ ನಡೆಯಲು ಸಮ್ಮತಿಸಲಿಲ್ಲ. ಆಗ ಹಝ್‌ರತ್ ಸಫಿಯಾ ಸ್ವತಃ ಒಂದು ದೊಡ್ಡ ಬಿದಿರನ್ನು ಎತ್ತಿಕೊಂಡು ಆ ಗೂಢಚಾರನ ಮೇಲೆ ಆಕ್ರಮಣ ಮಾಡಿ ಬೇರೆ ಮಹಿಳೆಯರ ಸಹಾಯದಿಂದ ಅವನನ್ನು ಕೊಂದು ಹಾಕಿದರು. ಅನಂತರ ಅನ್ವೇಷಣೆ ನಡೆಸಿದಾಗ ಅವನು ಯಹೂದಿಯನೆಂದೂ ಬನೂ ಖುರೈಝರ ಗೂಢಚಾರನೆಂದೂ ತಿಳಿಯಿತು. ಆಗ ಮದೀನದ ಮುಸ್ಲಿಮರಿಗೆ ಈ ಭಾಗ ಸಹ ಸುರಕ್ಷಿತವಲ್ಲವೆಂದು ತಿಳಿಯಿತು. ಆದರೆ ಶತ್ರುಗಳು ಮುಂಭಾಗದಿಂದ ಮಾಡುತ್ತಿದ್ದ ಆಕ್ರಮಣ ಎಷ್ಟು ತೀವ್ರವಾಗಿತ್ತೆಂದರೆ ಮಹಿಳೆಯರ ಮತ್ತು ಮಕ್ಕಳ ಸಂರಕ್ಷಣೆಗಾಗಿ ತುರ್ತಾಗಿ ಏನಾದರೂ ವ್ಯವಸ್ಥೆ ಮಾಡುವುದು ಸಾಧ್ಯವಿರಲಿಲ್ಲ. ಹೀಗಿದ್ದರೂ ಹಝ್‌ರತ್ ಪೈಗಂಬರ್(ಸ) ಮಹಿಳೆಯರ ಮತ್ತು ಮಕ್ಕಳ ಸಂರಕ್ಷಣೆಗೆ ಆದ್ಯತೆ ನೀಡಬೇಕೆಂದು ಬಯಸಿದರು. ಮೇಲೆ ವಿವರಿಸಿದ ಹಾಗೆ ಹನ್ನೆರಡು ನೂರು ಸೈನಿಕರಲ್ಲಿ ಐನೂರು ಸೈನಿಕರನ್ನು ಮಹಿಳೆಯರ ಮತ್ತು ಮಕ್ಕಳ ಸಂರಕ್ಷಣೆಗಾಗಿ ನೇಮಿಸಿದರು. ಕಂದಕದ ರಕ್ಷಣೆಗಾಗಿ ಮತ್ತು ಹದಿನೆಂಟು–ಇಪ್ಪತ್ತು ಸಾವಿರದಷ್ಟು ಸೈನಿಕರನ್ನು ಎದುರಿಸಲು ಬಾಕಿಯಾಗಿ ಉಳಿದುದು ಏಳುನೂರು ಸೈನಿಕರಾಗಿದ್ದರು. ಈ ಪರಿಸ್ಥಿತಿಯನ್ನು ನೋಡಿ ಗಾಬರಿಗೊಂಡು ಕೆಲವು ಮುಸ್ಲಿಮರು ಹಝ್‌ರತ್ ಪೈಗಂಬರರ(ಸ) ಬಳಿಗೆ ಬಂದು, "ಈಗ ಪರಿಸ್ಥಿತಿ ತುಂಬಾ ಅಪಾಯಕರವಾಗಿದೆ. ಬಾಹ್ಯವಾಗಿ ನೋಡಿದರೆ ಈಗ ಮದೀನ ಸುರಕ್ಷಿತವಾಗಿರುವ ಭರವಸೆ ಏನೂ ಕಾಣುವುದಿಲ್ಲ. ನೀವು ಅಲ್ಲಾಹನೊಂದಿಗೆ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಅಲ್ಲಾಹನು ಅನುಗ್ರಹ ನೀಡುವಂತಹ ಪ್ರಾರ್ಥನೆಯನ್ನು ನಮಗೆ ಸಹ ಕಲಿಸಿಕೊಡಿರಿ" ಎಂದು ಹೇಳಿದರು.

ಹಝ್‌ರತ್ ಪೈಗಂಬರ್(ಸ) ಹೇಳಿದರು:

"ನೀವು ಗಾಬರಿಗೊಳ್ಳಬೇಡಿರಿ. ನೀವು ಹೀಗೆ ಪ್ರಾರ್ಥಿಸಿರಿ: ನಮ್ಮ ಕುಂದುಕೊರತೆಗಳನ್ನು ನೀನು ಮರೆಮಾಡು. ನಮ್ಮ ಹೃದಯಗಳನ್ನು ಬಲಪಡಿಸು. ನಮ್ಮ ಗಾಬರಿಯನ್ನು ದೂರೀಕರಿಸು."

ಹಝ್‌ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸಿದರು:

"ಓ ನನ್ನ ಅಲ್ಲಾಹ್, ನೀನು ನನಗೆ ಪವಿತ್ರ ಖುರ್‌ಆನ್ ಅವತೀರ್ಣಗೊಳಿಸಿದವನಾಗಿರುವೆ. ನೀನು ಶೀಘ್ರವಾಗಿ ಲೆಕ್ಕಾಚಾರ ಮಾಡುವವನಾಗಿರುವೆ. ನಮ್ಮನ್ನು



ಆಕ್ರಮಿಸಲು ಬಂದಿರುವ ಈ ಶತ್ರು ಕೂಟವನ್ನು ನೀನು ಪರಾಜಯಗೊಳಿಸು. ಓ ಅಲ್ಲಾಹ್, ನೀನು ಅವರನ್ನು ಪರಾಜಯಗೊಳಿಸು ಮತ್ತು ನಮ್ಮನ್ನು ಅವರ ಮೇಲೆ ಜಯಗಳಿಸುವಂತೆ ಮಾಡು. ಅವರ ಉದ್ದೇಶಗಳನ್ನು ನಿಷ್ಫಲಗೊಳಿಸು. ದುಃಖಿತರ ಪ್ರಾರ್ಥನೆಗಳನ್ನು ಆಲಿಸುವವನೇ ಮತ್ತು ಗಾಬರಿಗೊಂಡವರ ಮೊರೆಗಳನ್ನು ಅಂಗೀಕರಿಸುವವನೇ, ನನ್ನ ಕಳವಳವನ್ನೂ ದುಃಖವನ್ನೂ ಗಾಬರಿಯನ್ನೂ ದೂರೀಕರಿಸು. ನನಗೂ ನನ್ನ ಸಂಗಡಿಗರಿಗೂ ಬಂದೆರಗಿರುವ ವಿಪತ್ತನ್ನು ನೀನು ಅರಿತಿರುವೆ."[56]

## ಕಪಟ ವಿಶ್ವಾಸಿಗಳ ಮತ್ತು ಸತ್ಯ ವಿಶ್ವಾಸಿಗಳ ಮನೋಭಾವಗಳು

ಈ ಸಂದರ್ಭದಲ್ಲಿ ಕಪಟವಿಶ್ವಾಸಿಗಳು ಎಷ್ಟು ಗಾಬರಿಗೊಂಡರೆಂದರೆ ತಮ್ಮ ಕೋಮಿನ ಕುರಿತು ಪ್ರೀತಿ, ತಮ್ಮ ಪಟ್ಟಣ, ಮಕ್ಕಳು ಮತ್ತು ಮಹಿಳೆಯರ ರಕ್ಷಣೆಯ ಬಗ್ಗೆ ಚಿಂತೆ ಅವರ ಹೃದಯಗಳಿಂದ ಹೊರಟು ಹೋಯಿತು. ಆದರೆ ಅವರು ತಮ್ಮ ಜನರ ಮುಂದೆ ಅಪಮಾನಿತರಾಗಲು ಇಚ್ಛಿಸದುದರಿಂದ ಅವರು ನೆಪಗಳನ್ನು ಹೂಡಿ ಸೈನ್ಯದಿಂದ ಓಡಿಹೋಗಲು ಆಲೋಚಿಸಿದರು. ಈ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

ಅವರಲ್ಲಿ ಒಂದು ಗುಂಪು ಜನರು ಹಝ್‌ರತ್ ಪೈಗಂಬರರ ಬಳಿಗೆ ಬಂದು ರಣಾಂಗಣದಿಂದ ಓಡಿಹೋಗಲು ಅನುಮತಿಯನ್ನು ಯಾಚಿಸಿದರು. (ಯಹೂದಿಯರು ಶತ್ರುಗಳೊಂದಿಗೆ ಸೇರಿರುವ ಕಾರಣ ನಮ್ಮ ಮನೆಗಳಿಗೆ ಆಪತ್ತು ಬರುವುದೆಂದು ನಾವು ಭಯಪಡುತ್ತೇವೆ) ನಮ್ಮ ಮನೆಗಳು ರಕ್ಷಣೆ ಇಲ್ಲದ ಸ್ಥಿತಿಯಲ್ಲಿವೆ. (ನಮಗೆ ನಮ್ಮ ಮನೆಗಳ ಸಂರಕ್ಷಣೆಯ ಅನುಮತಿ ನೀಡಿರಿ.) ಆದರೆ ಅವರ ಮನೆಗಳು ಸುರಕ್ಷಿತವಾಗಿಲ್ಲವೆಂದು ಹೇಳುವುದು ತಪ್ಪಾಗಿದೆ. (ಮದೀನದ ಸಂರಕ್ಷಣೆಯ ಹೊಣೆಗಾರಿಕೆಯನ್ನು ಅಲ್ಲಾಹನೇ ಹೊತ್ತಿರುವ ಕಾರಣ) ಅವರ ಮನೆಗಳು ರಕ್ಷಣೆಯಿಂದ ವಿರಹಿತವಾಗಿಲ್ಲ. ಆದರೆ ಅವರು ಹೆದರಿಕೆಯಿಂದ ರಣರಂಗದಿಂದ ಓಡಿಹೋಗಲು ಬಯಸುತ್ತಾರೆ. (ಸೂರತುಲ್ ಅಹ್‌ಝಾಬ್: ವಚನ 14 – ವ್ಯಾಖ್ಯಾನ ಸಹಿತ ಅರ್ಥ)

ಆ ಸಮಯದಲ್ಲಿ ಮುಸ್ಲಿಮರ ಸ್ಥಿತಿಯನ್ನು ಪವಿತ್ರ ಖುರ್‌ಆನ್ ಹೀಗೆ ಚಿತ್ರೀಕರಿಸಿದೆ: ನಿಮ್ಮ ಮೇಲುಭಾಗದಿಂದಲೂ ನಿಮ್ಮ ಕೆಳಭಾಗದಿಂದಲೂ ಶತ್ರುಗಳು ಆಕ್ರಮಣ ಮಾಡಲು ಬಂದ ಸಂದರ್ಭವನ್ನು ಜ್ಞಾಪಿಸಿರಿ. (ಎಂದರೆ ಕೆಳಭಾಗದಿಂದ ಅವಿಶ್ವಾಸಿಗಳು ಮತ್ತು ಮೇಲಿನ ಭಾಗದಿಂದ ಯಹೂದಿಯರು.) ಆಗ ದೃಷ್ಟಿಗಳು ವಕ್ರಗೊಳ್ಳತೊಡಗಿದುವು. ಅವರ ಹೃದಯಗಳು ನೆಗೆಯುತ್ತಾ ಗಂಟಲಿನ ತನಕ ಬಂದುವು. ನಿಮ್ಮಲ್ಲಿ ಅನೇಕರು ಅಲ್ಲಾಹನ ಕುರಿತು ನಾನಾ ಸಂಶಯಗಳಲ್ಲಿ ಮುಳುಗಿದ್ದರು. ಆಗ ಸತ್ಯವಿಶ್ವಾಸಿಗಳ ಪರೀಕ್ಷೆ ಮಾಡಲ್ಪಟ್ಟಿತು. ಅವರು ತಲೆಯಿಂದ

---

56. ಬುಖಾರಿ.

ಕಾಲಿನ ತನಕ ತೀವ್ರವಾಗಿ ಕಂಪಿಸಲ್ಪಟ್ಟರು. ನೀವು ನೆನಪಿಟ್ಟುಕೊಳ್ಳಿರಿ: ಕಪಟ ವಿಶ್ವಾಸಿಗಳು ಮತ್ತು ಹೃದಯಗಳಲ್ಲಿ ರೋಗವಿದ್ದವರು, "ಅಲ್ಲಾಹನೂ ಅವನ ಪ್ರವಾದಿಯೂ ಸುಳ್ಳು ವಾಗ್ದಾನಗಳನ್ನು ಮಾಡಿರುವರು" ಎಂದು ಹೇಳುತ್ತಿದ್ದರು. ಅವರಲ್ಲಿ ಒಂದು ಗುಂಪು ಜನರು ಸತ್ಯವಿಶ್ವಾಸಿಗಳೊಂದಿಗೆ, "ಓ ಮದೀನದ ನಿವಾಸಿಗಳೇ, ನಿಮಗೆ ನಿಮ್ಮ ರಕ್ಷಣೆಗೆ ಯಾವುದೇ ಕೋಟೆ ಕೊತ್ತಲಗಳು ಇನ್ನು ದೊರಕಲಾರವು. ನೀವು ಇಲ್ಲಿಂದ ಓಡಿಹೋಗಿರಿ" ಎಂದು ಹೇಳಲು ತೊಡಗಿದ್ದರು. (ಸೂರತುಲ್ ಅಹ್‌ಝಾಬ್: ವಚನ 11–14 – ವ್ಯಾಖ್ಯಾನ ಸಹಿತ ಅರ್ಥ)

ಸತ್ಯವಿಶ್ವಾಸಿಗಳು ಶತ್ರುಗಳ ಐಕ್ಯಕೂಟದ ಸೈನ್ಯವನ್ನು ನೋಡಿದಾಗ ಹೀಗೆ ಹೇಳಿದರು: "ಇದರ ಬಗ್ಗೆ ಅಲ್ಲಾಹನೂ ಅವನ ಪೈಗಂಬರರೂ ನಮಗೆ ಇದಕ್ಕೆ ಮೊದಲೇ ತಿಳಿಸಿದ್ದರು. ಈ ಸೈನ್ಯದ ಆಕ್ರಮಣ ಅಲ್ಲಾಹನ ಮತ್ತು ಅವನ ಪೈಗಂಬರರ ಸತ್ಯಕ್ಕೆ ಸಾಕ್ಷ್ಯವಾಗಿದೆ." ಆ ಸೈನ್ಯದ ಆಕ್ರಮಣ ಅವರ ವಿಶ್ವಾಸವನ್ನೂ ನಿಷ್ಠೆಯನ್ನೂ ವರ್ಧಿಸಿತು. ಸತ್ಯವಿಶ್ವಾಸಿಗಳು ಅಲ್ಲಾಹನೊಂದಿಗೆ ಮಾಡಿದ ಪ್ರತಿಜ್ಞೆಗಳನ್ನು ಈಡೇರಿಸುತ್ತಾರೆ. ಅವರಲ್ಲಿ ಕೆಲವರು ತಮ್ಮ ಪ್ರಾಣಗಳನ್ನು ನೀಡಿ ತಾವು ಉದ್ದೇಶಿಸಿದುದನ್ನು ಗಳಿಸಿದರು. ಕೆಲವರಿಗೆ ಪ್ರಾಣವನ್ನು ಬಲಿದಾನವಾಗಿ ನೀಡುವ ಸಂದರ್ಭ ಒದಗಿಬಂದಿಲ್ಲ. ಆದರೆ ಅವರು ಅಲ್ಲಾಹನ ಮಾರ್ಗದಲ್ಲಿ ಜೀವವನ್ನು ಅರ್ಪಿಸುವ ಸಂದರ್ಭಕ್ಕಾಗಿ ಯಾವಾಗಲೂ ಕಾಯುತ್ತಾ ಇರುತ್ತಾರೆ. ಅವರು ಪ್ರಾರಂಭದಿಂದಲೇ ಅಲ್ಲಾಹನೊಂದಿಗೆ ಮಾಡಿದ್ದ ಪ್ರತಿಜ್ಞೆಗಳಿಗೆ ಬದ್ಧರಾಗಿ ಕಾರ್ಯೋನ್ಮುಖ ರಾಗಿರುತ್ತಾರೆ. (ಸೂರತುಲ್ ಅಹ್‌ಝಾಬ್ ವಚನ 23, 24 – ವ್ಯಾಖ್ಯಾನ ಸಹಿತ ಅರ್ಥ)

## ಮೃತದೇಹಕ್ಕೆ ಗೌರವ

ಕಂದಕವನ್ನು ಆಕ್ರಮಿಸುತ್ತಿದ್ದ ಶತ್ರುಗಳು ಕೆಲವು ಸಾರಿ ಅದನ್ನು ದಾಟುವುದರಲ್ಲಿ ಸಮರ್ಥರಾಗುತ್ತಿದ್ದರು. ಒಂದು ದಿನ ಅವಿಶ್ವಾಸಿಗಳ ಕೆಲವು ಹಿರಿಯ ಸೈನ್ಯಾಧಿಕಾರಿಗಳು ಕಂದಕವನ್ನು ದಾಟಿ ಬಂದಿದ್ದರು. ಆದರೆ ಮುಸ್ಲಿಮರು ಪ್ರಾಣಕ್ಕೆ ಪಣವೊಡ್ಡಿ ಅವರನ್ನು ಆಕ್ರಮಿಸಲು ಮುಂದಾದುದರಿಂದ ಅವರಿಗೆ ಹಿಂದಿರುಗಿ ಹೋಗದಿರಲು ಸಾಧ್ಯವಾಗಲಿಲ್ಲ. ಆ ಸಂದರ್ಭದಲ್ಲಿ ಕಂದಕವನ್ನು ದಾಟಿ ಬಂದ ಅವಿಶ್ವಾಸಿಗಳ ಒಬ್ಬ ಹಿರಿಯ ಮುಖಂಡ ನೌಫಲ್ ಎಂಬವನು ಕೊಲ್ಲಲ್ಪಟ್ಟನು. ಅವನು ಅವಿಶ್ವಾಸಿಗಳ ಹಿರಿಯ ಮುಖಂಡರಲ್ಲೊಬ್ಬನಾದುದರಿಂದ ಅವನ ಮೃತದೇಹಕ್ಕೆ ಮುಸ್ಲಿಮರಿಂದ ಏನಾದರೂ ಅಪಮಾನವಾದರೆ ತಮಗೆ ಅರಬ್ ರಾಜ್ಯದಲ್ಲಿ ಮುಖ ತೋರಿಸಿ ನಡೆಯಲು ಅಸಾಧ್ಯವಾಗುವುದು ಎಂದು ಅವಿಶ್ವಾಸಿಗಳು ಭಾವಿಸಿದರು. ಆಗ ಅವಿಶ್ವಾಸಿಗಳು ಹಝ್ರತ್ ಪೈಗಂಬರರಿಗೆ(ಸ) ಹೀಗೆ ಸಂದೇಶ ಕಳುಹಿಸಿದರು: "ನೀವು ನೌಫಲ್‌ರ ಶವವನ್ನು ನಮಗೆ ಕೊಡುವಿರಾದರೆ ನಿಮಗೆ ನಾವು ಹತ್ತುಸಾವಿರ ದಿರ್‌ಹಮ್ ಪರಿಹಾರವಾಗಿ ಕೊಡುವೆವು."

ಶತ್ರುಗಳು ಮುಸ್ಲಿಮರ ಮೃತದೇಹಗಳ ಮತ್ತು ವಿಶಿಷ್ಟವಾಗಿ ಹಝ್ರತ್



ಪೈಗಂಬರರ(ಸ) ಚಿಕ್ಕಪ್ಪ ಹಮ್‌ಝರವರ ಮೃತದೇಹದ ಕಿವಿ ಮೂಗುಗಳನ್ನು ಉಹುದ್ ಯುದ್ಧದಲ್ಲಿ ಕತ್ತರಿಸಿ ಮೃತ ದೇಹಗಳಿಗೆ ಅಪಮಾನ ಮಾಡಿದ್ದುದರಿಂದ, ಇದೇ ರೀತಿ ಮುಸ್ಲಿಮರು ಸಹ ವರ್ತಿಸಿ ತಮ್ಮ ಮುಖಂಡನ ಕಿವಿ ಮೂಗುಗಳನ್ನು ಕತ್ತರಿಸುವರು ಮತ್ತು ತಮ್ಮ ಕೋಮಿನವರನ್ನು ಅಪಮಾನಿಸುವರು ಎಂದು ಅವರು ಯೋಚಿಸಿದ್ದರು.

ಆದರೆ ಇಸ್ಲಾಮ್ ಧರ್ಮದ ಆಜ್ಞೆಗಳು ಅವರ ಯೋಚನೆಗೆ ವಿರುದ್ಧವಾಗಿದ್ದುವು. ಮೃತದೇಹಗಳನ್ನು ಅಪಮಾನಿಸುವುದನ್ನು ಇಸ್ಲಾಮ್ ಧರ್ಮವು ಅನುಮತಿಸುವುದಿಲ್ಲ.

ಅವಿಶ್ವಾಸಿಗಳ ಸಂದೇಶವು ಹಝ್ರತ್ ಪೈಗಂಬರರಿಗೆ(ಸ) ತಲಪಿದಾಗ ಅವರು "ಈ ಮೃತದೇಹವನ್ನು ನಮಗೇನು ಮಾಡಲಿಕ್ಕಿದೆ. ಇದು ನಮಗೆ ಯಾವ ಪ್ರಯೋಜನಕ್ಕೆ ಬರುವುದು? ನಾವು ಇದನ್ನು ನಿಮಗೆ ನೀಡುವುದಕ್ಕೆ ಪ್ರತಿಯಾಗಿ ಏನನ್ನೂ ಪಡೆದುಕೊಳ್ಳಲು ಇಚ್ಛಿಸುವುದಿಲ್ಲ. ನೀವು ಈ ಮೃತದೇಹವನ್ನು ಯಾವುದೇ ಸಂಕೋಚವಿಲ್ಲದೆ ಎತ್ತಿಕೊಂಡು ಹೋಗಿರಿ. ನಮಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ" ಎಂದರು.[57]

## ಐಕ್ಯಕೂಟದ ಆಕ್ರಮಣ

ಆ ದಿನಗಳಲ್ಲಿ ಶತ್ರು ಕೂಟದ ಅವಿಶ್ವಾಸಿಗಳು ಮಾಡುತ್ತಿದ್ದ ಆಕ್ರಮಣಗಳ ಬಗ್ಗೆ ಸರ್ ವಿಲಿಯಮ್ ಮ್ಯೂರ್ ಹೀಗೆ ಬರೆಯುತ್ತಾರೆ: "ಎರಡನೆಯ ದಿನ ಬೆಳಿಗ್ಗೆ ಐಕ್ಯ ಕೂಟದ ಅವಿಶ್ವಾಸಿಗಳು ಒಗ್ಗಟ್ಟಿನಿಂದ ತಮ್ಮ ವಿರುದ್ಧ ಆಕ್ರಮಣ ಮಾಡಲು ಸನ್ನದ್ಧರಾಗಿ ನಿಂತುದನ್ನು ಮುಹಮ್ಮದ್ ನೋಡಿದರು. ಅವರ ಆಕ್ರಮಣಗಳನ್ನು ತಡೆಯಲು ಬಹಳ ಜಾಗರೂಕತೆ ಮತ್ತು ಸದಾ ಎಚ್ಚರಿಕೆಯಿಂದ ಇರುವುದು ಆವಶ್ಯಕವಾಗಿತ್ತು. ಶತ್ರುಗಳು ಕೆಲವು ಸಾರಿ ಒಟ್ಟೊಟ್ಟಿಗೆ ಆಕ್ರಮಣ ಮಾಡುತ್ತಿದ್ದರು. ಕೆಲವು ಸಾರಿ ವಿಭಾಗಗಳಾಗಿ ಮುಸ್ಲಿಮರ ರಕ್ಷಣಾ ಠಾಣೆಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಯಾವುದಾದರೂ ರಕ್ಷಣಾ ಠಾಣೆಯನ್ನು ಸುಶಕ್ತವಾಗಿಲ್ಲವೆಂದು ಗುರುತಿಸಿದರೆ ಅವರು ಸೈನ್ಯವನ್ನು ಅಲ್ಲಿ ಜಮಾಯಿಸಿ ಬಾಣಗಳ ಮಳೆಸುರಿಸಿ ಕಂದಕವನ್ನು ದಾಟಲು ಪ್ರಯತ್ನಿಸುತ್ತಿದ್ದರು. ಖಾಲಿದ್ ಮತ್ತು ಅಮ್ರ್‌ರಂತಹ ಶೂರ ಸೇನಾನಿಗಳ ನೇತೃತ್ವದಲ್ಲಿ ಶತ್ರು ಸೈನ್ಯ ಮದೀನವನ್ನು ಪ್ರವೇಶಿಸಲು ಶೌರ್ಯದಿಂದ ಆಕ್ರಮಣ ಮಾಡುತ್ತಿತ್ತು. ಒಮ್ಮೆ ಮುಹಮ್ಮದರ ಡೇರೆ ಸಹ ಶತ್ರು ಸೈನಿಕರ ಆಕ್ರಮಣಗಳಿಗೆ ಗುರಿಯಾಗಿತ್ತು. ಆದರೆ ಮುಸ್ಲಿಮರು ನಿಷ್ಠೆಯಿಂದ ಅದನ್ನು ತಡೆದು ಬಾಣಗಳ ಸುರಿಮಳೆಯ ಮೂಲಕ ಶತ್ರುಗಳನ್ನು ಹಿಂದೆ ಸರಿಯುವಂತೆ ಮಾಡಿದರು. ಈ ಯುದ್ಧ ದಿನವಿಡೀ ನಡೆಯಿತು. ಮುಸ್ಲಿಮರ ಸೈನ್ಯದ ಎಲ್ಲರೂ ಒಟ್ಟಿಗೆ ಕಾರ್ಯಪ್ರವೃತ್ತರಾಗಿ ಬಹಳ ಕಷ್ಟದಿಂದ ಕಂದಕವನ್ನು ರಕ್ಷಿಸಬಹುದಾದ ಕಾರಣ ಅವರಿಗೆ ವಿಶ್ರಾಂತಿ ಪಡೆಯಲು ಸಂದರ್ಭವೇ ದೊರಕಲಿಲ್ಲ. ರಾತ್ರಿಯಲ್ಲಿ ಸಹ

57. ಸೀರತ್ ಹಲ್‌ಬಿಯ್ಯ..

ಖಾಲಿದರ ನೇತೃತ್ವದ ಕುದುರೆ ಸವಾರರ ಸೈನಿಕ ತುಕಡಿ ಆಕ್ರಮಣವನ್ನು ಮುಂದುವರಿಸಿತು. ಆದುದರಿಂದ ರಾತ್ರಿ ಹೊತ್ತಿನಲ್ಲಿ ಸಹ ತಮ್ಮ ರಕ್ಷಣಾ ಠಾಣೆಗಳನ್ನು ಪೂರ್ಣವಾಗಿ ಕಾಪಾಡಲು ಮುಸ್ಲಿಮರು ನಿರ್ಬಂಧಿತರಾದರು. ಆದರೆ ಶತ್ರುಗಳ ಎಲ್ಲಾ ಪ್ರಯತ್ನಗಳು ವ್ಯರ್ಥವಾದುವು. ಶತ್ರು ಸೈನಿಕರು ಕಂದಕವನ್ನು ದಾಟಲು ಎಂದೂ ಸಮರ್ಥರಾಗಲಿಲ್ಲ."[58]

ಯುದ್ಧ ಎರಡು ದಿನಗಳಿಂದ ನಡೆಯುತ್ತಾ ಇದ್ದರೂ ಎರಡು ಕಡೆಯ ಸೈನಿಕರು ಪರಸ್ಪರ ಎದುರುಬದುರಾಗಿ ನಿಂತು ಹೋರಾಡಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಇಪ್ಪತ್ತನಾಲ್ಕು ತಾಸುಗಳ ಯುದ್ಧದಲ್ಲಿ ಶತ್ರುಗಳ ಮೂವರು ಮತ್ತು ಮುಸ್ಲಿಮರ ಐವರು ಮೃತರಾದರು. ಈ ಯುದ್ಧದಲ್ಲಿ ಔಸ್ ಗೋತ್ರದ ಮುಖಂಡ ಮತ್ತು ಹಝ್ರತ್ ಪೈಗಂಬರರ(ಸ) ನಿಷ್ಠಾವಂತ ಶಿಷ್ಯರಾಗಿದ್ದ ಸಅದ್ ಬಿನ್ ಮುಆಝ್(ರ) ತೀವ್ರವಾಗಿ ಗಾಯಗೊಂಡರು. ಈ ಆಕ್ರಮಣಗಳ ಕಾರಣದಿಂದ ಕಂದಕದ ಒಂದು ಬದಿ ಹಾನಿಗೀಡಾಯಿತು ಮತ್ತು ಆ ಸ್ಥಳದಿಂದ ಆಕ್ರಮಣ ನಡೆಯುವುದು ಸಂಭಾವ್ಯವೆಂದು ಗ್ರಹಿಸಲಾಗಿತ್ತು. ಆದರೆ ಹಝ್ರತ್ ಪೈಗಂಬರರ(ಸ) ಧೈರ್ಯ ಮತ್ತು ಮುಸ್ಲಿಮರ ಬಗ್ಗೆ ಅವರಿಗಿದ್ದ ಹಿತಾಕಾಂಕ್ಷೆಯ ಕಾರಣದಿಂದ ಚಳಿಗಾಲದ ಆ ದಿನಗಳಲ್ಲಿ ರಾತ್ರಿ ಆಗಾಗ್ಗೆ ಎದ್ದು ಆ ಸ್ಥಳಕ್ಕೆ ಹೋಗಿ ಅವರು ಕಾವಲು ಕಾಯುತ್ತಿದ್ದರು. ಹಝ್ರತ್ ಆಯಿಶಾ ಹೀಗೆ ವರದಿ ಮಾಡುತ್ತಾರೆ:

ಹಝ್ರತ್ ಪೈಗಂಬರ್(ಸ) ಕಾವಲು ಕಾಯುತ್ತಾ ಆಯಾಸಗೊಂಡು ಚಳಿಯನ್ನು ಸಹಿಸಲಾಗದೆ ಬಂದು ಹೊದಿಕೆಯನ್ನು ಹೊದ್ದುಕೊಂಡು ಸ್ವಲ್ಪ ಹೊತ್ತು ಮಲಗುತ್ತಿದ್ದರು. ಆದರೆ ಶರೀರ ಬಿಸಿಯಾಗುತ್ತಲೇ ಎದ್ದು ಕಂದಕದ ಬದಿ ಹಾನಿಗೀಡಾದ ಆ ಸ್ಥಳಕ್ಕೆ ಕಾವಲು ನಿಲ್ಲಲು ಹೋಗುತ್ತಿದ್ದರು. ಹೀಗೆ ನಿರಂತರವಾಗಿ ಮಾಡಿದುದರಿಂದ ಒಂದು ದಿನ ಅವರು ಬಹಳ ಆಯಾಸಗೊಂಡರು. ಅವರು ಹೇಳಿದರು: "ಯಾರಾದರೂ ನಿಷ್ಠಾವಂತ ಮುಸ್ಲಿಮ್ ನನ್ನ ಪರವಾಗಿ ಕಾವಲು ಕಾಯಲು ಸಿದ್ಧನಾಗುವುದಾದರೆ ನಾನು ವಿಶ್ರಾಂತಿ ಪಡೆಯುತ್ತಿದ್ದೆನು." ಆಗ ಹೊರಗಿನಿಂದ ಸಅದ್ ಬಿನ್ ವಖಾಸ್‌ರ ಶಬ್ದ ಕೇಳಿಸಿತು. ಹಝ್ರತ್ ಪೈಗಂಬರ್(ಸ) ಕೇಳಿದರು: "ನೀವು ಬಂದುದು ಏಕೆ?" ಆಗ ಸಅದ್ ಹೇಳಿದರು: "ನಿಮಗೆ ಕಾವಲು ಕಾಯಲಿಕ್ಕಾಗಿ." ಹಝ್ರತ್ ಪೈಗಂಬರ್(ಸ) ಹೇಳಿದರು: "ನನಗೆ ಕಾವಲುಗಾರನ ಆವಶ್ಯಕತೆ ಇಲ್ಲ. ಆದರೆ ಕಂದಕದ ಇಂತಹ ಸ್ಥಳದಲ್ಲಿ ಅದರ ಬದಿ ಹಾನಿಗೊಂಡಿದೆ. ನೀವು ಅಲ್ಲಿಗೆ ಹೋಗಿ ಕಾವಲು ಕಾಯಿರಿ. ಮುಸ್ಲಿಮರೆಲ್ಲಾ ಸುರಕ್ಷಿತರಾಗಿರಲಿ." ಹಝ್ರತ್ ಸಅದ್ ಅಲ್ಲಿಗೆ ಕಾವಲು ನಿಲ್ಲಲು ಹೋದರು. ಹಝ್ರತ್ ಪೈಗಂಬರ್(ಸ) ನಿದ್ರಿಸಲು ಮಲಗಿದರು.[59] (ಆಶ್ಚರ್ಯದ ವಿಷಯ ವೇನೆಂದರೆ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಬಂದಾಗ ಪ್ರಾರಂಭ ಕಾಲದಲ್ಲಿ ಅವರಿಗೆ ಅಪಾಯ ಹೆಚ್ಚಾಗಿದ್ದಾಗ ಇದೇ ಸಅದ್‌ರವರು ಅವರ ರಕ್ಷಣೆಗಾಗಿ ಬಂದಿದ್ದರು).

58. ಲೈಫ್ ಆಫ್ ಮುಹಮ್ಮದ್ (ಲಂಡನ್ 1878 – ಪುಟ 322). 59. ಸೀರತ್ ಹಲ್‌ಬಿಯ್ಯ..



ಇದೇ ಕಾಲದಲ್ಲಿ ಒಮ್ಮೆ ಹಝ್ರತ್ ಪೈಗಂಬರ್(ಸ) ಆಯುಧಗಳ ಸದ್ದನ್ನು ಆಲಿಸಿ ಕೇಳಿದರು: "ಅದು ಯಾರು?" ಆಗ ಹಝ್ರತ್ ಇಬಾದ್ ಬಿನ್ ಬಶೀರ್, "ಅದು ನಾನು" ಎಂದು ಉತ್ತರ ನೀಡಿದರು. ಹಝ್ರತ್ ಪೈಗಂಬರ್,(ಸ) "ನಿಮ್ಮ ಜೊತೆ ಬೇರೆ ಯಾರಾದರೂ ಇದ್ದಾರೆಯೇ?" ಎಂದು ಕೇಳಿದರು. ಆಗ ಇಬಾದ್ ಹೇಳಿದರು: "ನಾನು ಮತ್ತು ನನ್ನ ಜೊತೆಗಿರುವವರು ನಿಮ್ಮ ಗುಡಾರಗಳ ರಕ್ಷಣೆಗಾಗಿ ಬಂದಿರುವೆವು." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಶತ್ರುಗಳು ಕಂದಕವನ್ನು ದಾಟಲು ಯತ್ನಿಸುತ್ತಾ ಇದ್ದಾರೆ. ನೀವು ಅಲ್ಲಿಗೆ ಹೋಗಿ ಅವರನ್ನು ತಡೆಯಿರಿ. ನನ್ನ ಡೇರೆಯ ಬಗ್ಗೆ ನಿಶ್ಚಿಂತರಾಗಿರಿ."

## ಬನೂ ಖುರೈಝ ಬಹುದೈವಾರಾಧಕರೊಂದಿಗೆ ಸೇರಿ ಮುಸ್ಲಿಮರನ್ನು ಆಕ್ರಮಿಸಲು ಸಿದ್ಧತೆಗಳನ್ನು ಮಾಡಿ ಸೋತದ್ದು

ಈ ಮೊದಲೇ ಬರೆದಂತೆ ಯಹೂದಿಯರು ಉಪಾಯದಿಂದ ಮದೀನವನ್ನು ಪ್ರವೇಶಿಸಲು ಪ್ರಯತ್ನಿಸಿದ್ದರು. ಅದರಲ್ಲಿ ಅವರ ಗೂಢಚಾರ ಕೊಲ್ಲಲ್ಪಟ್ಟಿದ್ದನು. ತಮ್ಮ ಗೂಢಸಂಚು ಮುಸ್ಲಿಮರಿಗೆ ತಿಳಿಯಿತೆಂದು ಯಹೂದಿಯರು ಅರಿತಾಗ ಅವರು ಧೈರ್ಯದಿಂದ ಶತ್ರುಗಳಿಗೆ ಸಹಾಯ ನೀಡಲು ಪ್ರಾರಂಭಿಸಿದರು. ಆದರೆ ಶತ್ರುಗಳೊಂದಿಗೆ ಸೇರಿ ಮದೀನದ ಹಿಂಭಾಗದಿಂದ ಆಕ್ರಮಣ ಮಾಡಲಿಲ್ಲ. ಏಕೆಂದರೆ ಅವರಿದ್ದ ಭಾಗದಲ್ಲಿ ಯುದ್ಧ ಮಾಡಲು ಮೈದಾನವು ಸಾಕಷ್ಟು ವಿಶಾಲವಾಗಿರಲಿಲ್ಲ. ಅಲ್ಲದೆ ಮುಸ್ಲಿಮರ ಸೈನ್ಯ ಸಹ ಅಲ್ಲಿದ್ದುದರಿಂದ ಅಲ್ಲಿ ದೊಡ್ಡ ಆಕ್ರಮಣ ಮಾಡಲು ಸಾಧ್ಯವಿರಲಿಲ್ಲ. ಆದರೆ ಕೆಲವು ದಿನಗಳ ನಂತರ ಯಹೂದಿಯರು ಮತ್ತು ಬಹುದೈವಾರಾಧಕರು ಒಟ್ಟಿಗೆ ಸೇರಿ ಆಕ್ರಮಣ ಮಾಡಲು ನಿರ್ಧರಿಸಿದರು. ಆದರೆ ಅದು ಸಂಭವಿಸುವ ಮೊದಲೇ ಅಲ್ಲಾಹನು ತನ್ನ ನೆರವನ್ನು ಮುಸ್ಲಿಮರಿಗೆ ಬಹಳ ಆಶ್ಚರ್ಯಕರವಾದ ರೀತಿಯಲ್ಲಿ ಪ್ರಕಟಿಸಿದನು. ಅದು ಹೀಗೆ:

ಘತ್‌ಫಾನ್ ಗೋತ್ರದ ನಈಮ್ ಎಂಬ ಒಬ್ಬ ವ್ಯಕ್ತಿ ಮನಸ್ಸಿನಲ್ಲಿ ಮುಸ್ಲಿಮನಾಗಿದ್ದರು. ಆ ವ್ಯಕ್ತಿ ಅವಿಶ್ವಾಸಿಗಳ ಸೈನ್ಯದೊಂದಿಗೆ ಬಂದಿದ್ದರು. ತನಗೆ ಸಂದರ್ಭ ದೊರಕಿದರೆ ತಾನು ಮುಸ್ಲಿಮರಿಗೆ ಸಹಾಯ ಮಾಡುವೆನು ಎಂದು ಆ ವ್ಯಕ್ತಿ ಅನುಕೂಲಕರ ಸಂದರ್ಭಕ್ಕಾಗಿ ಕಾಯುತ್ತಾ ಇದ್ದರು. ಆದರೆ ಒಬ್ಬ ವ್ಯಕ್ತಿ ಸಹಾಯ ಮಾಡುವುದಾದರೂ ಹೇಗೆ? ಯಹೂದಿಯರು ಅವಿಶ್ವಾಸಿಗಳೊಂದಿಗೆ ಮುಸ್ಲಿಮರನ್ನು ಆಕ್ರಮಿಸಲು ಜೊತೆಗೂಡಿದ ಸಮಾಚಾರ ಅವರಿಗೆ ತಿಳಿದಾಗ ಈಗ ಮುಸ್ಲಿಮರು ಸುರಕ್ಷಿತರಾಗುವ ಯಾವುದೇ ದಾರಿ ಕಾಣುವುದಿಲ್ಲ ಎಂದು ಅವರು ಬಹಳ ನೊಂದುಕೊಂಡರು. ಈ ಆಪತ್ತಿನಿಂದ ಮುಸ್ಲಿಮರನ್ನು ರಕ್ಷಿಸಲು ಏನಾದರೂ ಮಾಡಲೇ ಬೇಕು ಎಂದು ಅವರು ನಿರ್ಧರಿಸಿದರು.

ಯಹೂದಿಯರು ಅವಿಶ್ವಾಸಿಗಳ ಜೊತೆಗೂಡಿ ಮುಸ್ಲಿಮರನ್ನು ಆಕ್ರಮಿಸಲು

ಒಂದು ದಿನವನ್ನು ನಿರ್ಧರಿಸಿದಾಗ ಆ ವ್ಯಕ್ತಿ ಬನೂ ಖುರೈಝರ ಬಳಿಗೆ ಹೋದರು. ಅವರು ಯಹೂದಿಯರ ನಾಯಕರೊಂದಿಗೆ ಹೀಗೆ ಹೇಳಿದರು: "ಅರಬಿಗಳ ಸೈನ್ಯ ಓಡಿಹೋದರೆ ನಿಮ್ಮೊಂದಿಗೆ ಮುಸ್ಲಿಮರು ಹೇಗೆ ವರ್ತಿಸುವರೆಂದು ನೀವು ಯೋಚಿಸಿರಿ. ನೀವು ಮುಸ್ಲಿಮರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡಿರುವಿರಿ. ನೀವು ಒಪ್ಪಂದವನ್ನು ಮುರಿದರೆ ನಿಮಗೆ ಸಿಗಬಹುದಾದ ಶಿಕ್ಷೆಯ ಕುರಿತು ಅಂದಾಜು ಮಾಡಿರಿ."

ಆಗ ಯಹೂದಿ ನಾಯಕರು ಹೆದರಿದರು. ಅವರು ನಈಮ್‌ರೊಂದಿಗೆ ಮತ್ತೆ ತಾವೇನು ಮಾಡಬೇಕು? ಎಂದು ವಿಚಾರಿಸಿದರು. ಆಗ ನಈಮ್ ಹೀಗೆ ಸಲಹೆ ನೀಡಿದರು: "ಅರಬಿಗಳು ನಿಮ್ಮ ಜೊತೆಗೂಡಿ ಆಕ್ರಮಣ ಮಾಡಲು ಬಯಸುವುದಾದರೆ ನೀವು ಅವರೊಂದಿಗೆ ಹೀಗೆ ಹೇಳಿರಿ: 'ನೀವು ನಮ್ಮ ಬಳಿಗೆ ಎಪ್ಪತ್ತು ಜನರನ್ನು ನಮಗೆ ಒತ್ತೆಯಾಳುಗಳನ್ನಾಗಿ ಮಾಡಿ ಕಳುಹಿಸಬೇಕು. ಅವರು ನಮ್ಮ ಕೋಟೆಯ ರಕ್ಷಣೆಗೆ ನಿಯುಕ್ತರಾಗುವರು. ಆಗ ನಾವು ಮದೀನದ ಹಿಂಭಾಗದಿಂದ ಆಕ್ರಮಣ ಮಾಡುವೆವು'." ಅನಂತರ ನಈಮ್ ಅವಿಶ್ವಾಸಿಗಳ ಮುಂದಾಳುಗಳ ಬಳಿಗೆ ಹೋಗಿ, "ಈ ಯಹೂದಿಯರು ಮದೀನದ ನಿವಾಸಿಗಳೇ ಆಗಿದ್ದಾರೆ. ಅವರು ತಕ್ಕುದಾದ ಸಂದರ್ಭದಲ್ಲಿ ನಿಮಗೆ ದ್ರೋಹ ಮಾಡಿದರೆ ನೀವೇನು ಮಾಡುವಿರಿ? ಅವರು ಮುಸ್ಲಿಮರನ್ನು ಸಂತೋಷಕ್ಕೊಳಪಡಿಸಲು ಮತ್ತು ತಮ್ಮ ಅಪರಾಧವು ಮುಸ್ಲಿಮರಿಂದ ಕ್ಷಮಿಸಲ್ಪಡಲಿಕ್ಕಾಗಿ ನಿಮ್ಮಿಂದ ನಿಮ್ಮ ಜನರನ್ನು ಒತ್ತೆಯಾಳುಗಳಾಗಿ ಕೇಳಿ ಪಡೆದು ಅವರನ್ನು ಮುಸ್ಲಿಮರ ವಶಕ್ಕೆ ನೀಡಿದರೆ ನೀವೇನು ಮಾಡಬಲ್ಲಿರಿ? ನೀವು ಅವರನ್ನು ಪರೀಕ್ಷಿಸಿರಿ. ಅವರು ತಮ್ಮ ವಚನವನ್ನು ಪಾಲಿಸುವರೋ ಇಲ್ಲವೋ ಎಂದು ನೋಡಿರಿ. ನಿಮ್ಮ ಜೊತೆಗೂಡಿ ಆಕ್ರಮಣವನ್ನು ಪ್ರಾರಂಭಿಸಲು ಕೂಡಲೆ ಆಹ್ವಾನಿಸಿರಿ."

ಅವಿಶ್ವಾಸಿಗಳ ಮುಖಂಡರು ನಈಮ್‌ರ ಈ ಸಲಹೆಯನ್ನು ಸರಿಯಾಗಿದೆ ಎಂದು ಅಂಗೀಕರಿಸಿ ಮರುದಿನವೇ, "ನಾವು ನಿಮ್ಮ ಜೊತೆಗೂಡಿ ಒಂದು ಆಕ್ರಮಣವನ್ನು ಮಾಡಲು ಬಯಸುತ್ತೇವೆ. ನೀವು ಸಹ ನಿಮ್ಮ ಸೈನ್ಯದೊಂದಿಗೆ ನಾಳೆಯೇ ಆಕ್ರಮಣವನ್ನು ಮಾಡಿರಿ" ಎಂದು ಬನೂ ಖುರೈಝರಿಗೆ ಹೇಳಿ ಕಳುಹಿಸಿದರು. ಬನೂ ಖುರೈಝ ಹೀಗೆ ಉತ್ತರ ನೀಡಿದರು: "ನಾಳೆ ನಮ್ಮ ಸಬ್ಬತ್ ದಿನವಾಗಿದೆ. ಅಂದು ನಾವು ಯುದ್ಧಮಾಡಲಾರೆವು. ನಾವು ಮದೀನದವರಾಗಿದ್ದೇವೆ. ನೀವು ಹೊರಗಿನವರಾಗಿರುವಿರಿ. ನೀವು ಯುದ್ಧವನ್ನು ಬಿಟ್ಟೋಡಿದರೆ ನಮ್ಮ ಗತಿ ಏನಾಗುವುದು? ಆದುದರಿಂದ ನೀವು ಎಪ್ಪತ್ತು ಜನರನ್ನು ನಮಗೆ ಒತ್ತೆಯಾಳುಗಳಾಗಿ ನೀಡಿದರೆ ನಾವು ಸಹ ಯುದ್ಧದಲ್ಲಿ ನಿಮ್ಮೊಂದಿಗೆ ಸೇರುವೆವು."

ಅವಿಶ್ವಾಸಿಗಳಿಗೆ ಬನೂ ಖುರೈಝರ ಬಗ್ಗೆ ಮೊದಲೇ ಸಂಶಯ ಉಂಟಾಗಿದ್ದುದರಿಂದ ಅವರು ಬನೂ ಖುರೈಝರ ಅಪೇಕ್ಷೆಯನ್ನು ನೆರವೇರಿಸಲು ಸಮ್ಮತಿಸಲಿಲ್ಲ. ಅವರು ಬನೂ ಖುರೈಝರೊಂದಿಗೆ ಹೇಳಿದರು: "ನಮ್ಮೊಂದಿಗೆ ನಿಮ್ಮ ಸಂಬಂಧವು ಸತ್ಯಸಂಧವಾಗಿದ್ದರೆ ನಿಮ್ಮ ಇಂತಹ ಬೇಡಿಕೆಗಳಿಗೆ ಯಾವುದೇ ಅರ್ಥವಿಲ್ಲ."



ಈ ಸಂಭವದಿಂದ ಯಹೂದಿಯರ ಹೃದಯಗಳಲ್ಲಿ ಅವಿಶ್ವಾಸಿಗಳ ಬಗ್ಗೆ ಸಂಶಯಗಳು ತಲೆದೋರಿದುವು. ಸಂಶಯಗಳು ತಲೆದೋರುವಾಗ ಶೌರ್ಯದ ಸ್ಫೂರ್ತಿಯೂ ಕೊನೆಗೊಳ್ಳುವುದು ಸಹಜವಾಗಿದೆ. ಇಂತಹ ಸಂಶಯಗಳಿಂದ ಅವಿಶ್ವಾಸಿಗಳೂ ಪೀಡಿತರಾಗಿದ್ದರು. ಅವರು ರಾತ್ರಿ ವಿಶ್ರಾಂತಿಗಾಗಿ ತಮ್ಮ ಗುಡಾರಗಳಿಗೆ ತೆರಳಿದಾಗ ಅಲ್ಲಾಹನು ತನ್ನ ನೆರವಿನ ಇನ್ನೊಂದು ಮಾರ್ಗವನ್ನು ವಿಶ್ವಾಸಿಗಳಿಗೆ ತೆರೆದನು.

ರಾತ್ರಿ ಬಿರುಗಾಳಿ ಬೀಸಿತು. ಗುಡಾರಗಳನ್ನು ಅದು ಹರಿದು ಹಾಕಿತು. ಒಲೆಗಳಿಂದ ಪಾತ್ರೆಗಳನ್ನು ಕೆಡವಿ ಹಾಕಿತು. ಕೆಲವು ಗೋತ್ರಗಳ ಉರಿಸಿಟ್ಟ ಬೆಂಕಿ ನಂದಿ ಹೋಯಿತು. ಅರಬಿ ಬಹುದೈವಾರಾಧಕರು ರಾತ್ರಿ ಇಡೀ ಬೆಂಕಿಯುರಿಸಿ ಇಡುತ್ತಿದ್ದರು. ಬೆಂಕಿ ನಂದಿ ಹೋಗದೆ ಉರಿಯುತ್ತಾ ಇದ್ದರೆ ಅದು ಒಳ್ಳೆಯ ಶಕುನ ಎಂದು ಅವರು ಭಾವಿಸುತ್ತಿದ್ದರು. ಯಾರದಾದರೂ ಬೆಂಕಿ ನಂದಿ ಹೋದರೆ ಆ ದಿನವನ್ನು ಅವರು ಅಪಶಕುನವೆಂದು ಬಗೆಯುತ್ತಿದ್ದರು. ಆದುದರಿಂದ ಬೆಂಕಿ ನಂದಿ ಹೋದ ಗೋತ್ರಗಳ ಜನರು ತಮ್ಮ ಸಂಪ್ರದಾಯದ ಪ್ರಕಾರ ತಮ್ಮ ಡೇರೆಗಳನ್ನು ಆಗಲೇ ಕಿತ್ತು ರಣರಂಗದಿಂದ ಹಿಂದೆ ಸರಿಯುತ್ತಿದ್ದರು. ಪ್ರಶಸ್ತವಲ್ಲದ ಆ ಒಂದು ದಿನ ಹಿಂದೆ ಸರಿದು ಮರುದಿನ ಯುದ್ಧಕ್ಕಾಗಿ ಬರುವುದು ಅವರ ಉದ್ದೇಶವಾಗಿತ್ತು. ಹಗಲಿನ ಜಗಳಗಳ ಕಾರಣದಿಂದ ಶತ್ರು ಸೈನ್ಯದ ಸೇನಾನಾಯಕರಲ್ಲಿ ಸಂಶಯಗಳು ತಲೆದೋರಿದುದರಿಂದ ಮತ್ತು ಹಿಂದೆ ಸರಿದು ಹೋದ ಗೋತ್ರಗಳ ಸಮೀಪವಿದ್ದವರು, "ಪ್ರಾಯಶಃ ಯಹೂದಿಯರು ಮುಸ್ಲಿಮರೊಂದಿಗೆ ಸೇರಿ ರಾತ್ರಿ ಆಕ್ರಮಣ ಮಾಡಿರಬಹುದು. ಆದುದರಿಂದ ನಮ್ಮ ಸುತ್ತುಮುತ್ತಲಿನ ಗೋತ್ರಗಳ ಜನರು ಓಡಿ ಹೋಗುತ್ತಿದ್ದಾರೆ" ಎಂದು ಭ್ರಮಿಸಿ ಅವರು ಸಹ ತಮ್ಮ ಡೇರೆಗಳನ್ನು ಬೇಗಬೇಗನೆ ಕಿತ್ತು ಓಡಲು ತೊಡಗಿದರು.

ಅಬೂ ಸುಫ್‌ಯಾನ್ ತನ್ನ ಡೇರೆಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದರು. ಮೇಲಿನ ಸಂಭವದ ವಾರ್ತೆ ಅವರಿಗೂ ತಲಪಿತು. ಅವರು ಗಾಬರಿಯಿಂದ ಎದ್ದು ಕಟ್ಟಿಹಾಕಲಾದ ತನ್ನ ಒಂಟೆಯನ್ನೇರಿ ಅದನ್ನು ಮುಂದಕ್ಕೋಡಿಸಲು ಅದರ ಪಕ್ಕೆಗಳಿಗೆ ಹಿಮ್ಮಡಿಗಳಿಂದ ತುಳಿಯತೊಡಗಿದರು. ಕೊನೆಗೆ ಅವರ ಸ್ನೇಹಿತರು, "ನೀವು ಎಂತಹ ಮೂಢ ಕೆಲಸ ಮಾಡುತ್ತಿರುವಿರಿ" ಎಂದು ಅವರಿಗೆ ಹೇಳಿದಾಗ ಅವರಿಗೆ ಅವರ ತಪ್ಪಿನ ಅರಿವಾಯಿತು. ಒಂಟೆಯನ್ನು ಕಟ್ಟಿಹಾಕಲಾದ ಹಗ್ಗವನ್ನು ಬಿಚ್ಚಿ ಅವರು ಸಹ ರಣರಂಗದಿಂದ ಓಡಿ ಹೋದರು.

ಇಪ್ಪತ್ತು–ಇಪ್ಪತ್ತೈದು ಸಾವಿರ ಶತ್ರುಸೈನಿಕರು ಡೇರೆ ಹಾಕಿದ್ದ ಆ ಮೈದಾನವು ರಾತ್ರಿಯ ಕೊನೆಯ ಭಾಗದಲ್ಲಿ ಜನಶೂನ್ಯ ಮರುಭೂಮಿಯಾಯಿತು. ಆಗ ಅಲ್ಲಾಹನು,

"ನಾನು ನಿನ್ನ ಶತ್ರುಗಳನ್ನು ಓಡಿಸಿಬಿಟ್ಟೆನು" ಎಂದು ಸಂದೇಶವಾಣಿಯನ್ನು ಹಝ್‌ರತ್ ಪೈಗಂಬರರಿಗೆ(ಸ) ಅವತೀರ್ಣಗೊಳಿಸಿದನು. ವಾಸ್ತವಿಕ ಸಂಗತಿಯನ್ನು ತಿಳಿಯಲು ಹಝ್‌ರತ್ ಪೈಗಂಬರ್(ಸ) ಯಾರನ್ನಾದರೂ ಕಳುಹಿಸಲು ಅವರು ತಮ್ಮ ಸುತ್ತುಮುತ್ತು ಮಲಗಿದ್ದವರನ್ನು ಕರೆದರು. ಅದು ಚಳಿಗಾಲವಾಗಿತ್ತು. ಹೊದ್ದುಕೊಳ್ಳಲು ಮುಸ್ಲಿಮರಿಗೆ ಸಾಕಷ್ಟು ಚಾದರಗಳಿರಲಿಲ್ಲ. ಚಳಿಯಿಂದ ಅವರ ನಾಲಗೆಗಳು ಸಹ ನಿಶ್ಚಲಗೊಳ್ಳುತ್ತಿದ್ದುವು. ಕೆಲವು ಶಿಷ್ಯರು ಹೀಗೆ ವರದಿ ಮಾಡಿರುವರು: "ನಾವು ಹಝ್‌ರತ್ ಪೈಗಂಬರರ(ಸ) ಶಬ್ದ ಕೇಳಿದೆವು. ನಾವು ಅದಕ್ಕೆ ಉತ್ತರ ನೀಡಲು ಬಯಸಿದೆವು. ಆದರೆ ನಮಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ."

ಹಝ್‌ರತ್ ಹುಝೈಫ್(ರ) ಮಾತ್ರ ಹೀಗೆ ಹೇಳಿದರು: "ಅಲ್ಲಾಹನ ಪೈಗಂಬರರೇ, ನಾನು ಏನು ಮಾಡಬೇಕು?" ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ನೀವಲ್ಲ, ನನಗೆ ಬೇರೆ ಯಾರಾದರೂ ಬೇಕು."

ಪುನಃ ಅವರು, "ಯಾರಾದರೂ ಇದ್ದಾರೋ?" ಎಂದು ಕರೆದು ಹೇಳಿದರು. ಆದರೆ ಎಚ್ಚರಗೊಂಡವರಿಗೆ ಸಹ ಚಳಿಯ ಆಧಿಕ್ಯದ ಕಾರಣದಿಂದ ಉತ್ತರ ಹೇಳಲಾಗಲಿಲ್ಲ, ಆಗ ಹಝ್‌ರತ್ ಹುಝೈಫ ಪುನಃ ಹೇಳಿದರು: "ಅಲ್ಲಾಹನ ಪೈಗಂಬರರೇ, ನಾನು ಇಲ್ಲಿ ಇದ್ದೇನಲ್ಲ. ನಾನು ಏನು ಮಾಡಬೇಕು?" ಆಗ ಹಝ್‌ರತ್ ಪೈಗಂಬರ್(ಸ), "ನಾನು ನಿನ್ನ ಶತ್ರುಗಳನ್ನು ಓಡಿಸಿಬಿಟ್ಟಿರುವೆನು ಎಂದು ಅಲ್ಲಾಹನು ನನಗೆ ಸಂದೇಶ ನೀಡಿದ್ದಾನೆ. ನೀವು ಹೋಗಿ ಶತ್ರುಗಳ ಸ್ಥಿತಿಯನ್ನು ನೋಡಿ ಬನ್ನಿರಿ" ಎಂದು ಹೇಳಿದರು. ಹಝ್‌ರತ್ ಹುಝೈಫ ಕಂದಕದ ಬಳಿಗೆ ಹೋಗಿ ನೋಡಿದಾಗ ರಣರಂಗವು ಶತ್ರುಸೈನ್ಯದಿಂದ ಶೂನ್ಯವಾಗಿರುವುದನ್ನು ಅವರು ಕಂಡರು. ಅವರು ಹಝ್‌ರತ್ ಪೈಗಂಬರರ ಸಮೀಪಕ್ಕೆ ಮರಳಿ ಬಂದು, "ಲಾ ಇಲಾಹ ಇಲ್ಲಾಲ್ಲಾಹು ಮುಹಮ್ಮದುರ್‍ರಸೂಲುಲ್ಲಾಹ್" – ಅಲ್ಲಾಹನ ಹೊರತು ಅನ್ಯದೇವನಿಲ್ಲ. ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿರುವರು ಎಂಬ ಪವಿತ್ರ ವಚನವನ್ನು ಉಚ್ಚರಿಸುತ್ತಾ, "ಶತ್ರುಗಳು ರಣರಂಗವನ್ನು ಬಿಟ್ಟು ಓಡಿಹೋಗಿರುವರು" ಎಂದು ವರದಿ ಮಾಡಿದರು. ಬೆಳಗಾದ ಕೂಡಲೆ ಮುಸ್ಲಿಮರು ತಮ್ಮ ಡೇರೆಗಳನ್ನು ಕಿತ್ತು ತಮ್ಮ ಮನೆಗಳಿಗೆ ಮರಳತೊಡಗಿದರು.[60]

## ಬನೂ ಖುರೈಝುರಿಗೆ ದ್ರೋಹದ ಶಿಕ್ಷೆ

ಇಪ್ಪತ್ತು ದಿನಗಳ ನಂತರ ಮುಸ್ಲಿಮರು ಸಮಾಧಾನದ ಉಸಿರು ಬಿಡತೊಡಗಿದರು. ಆದರೆ ಬನೂ ಖುರೈಝುರ ವಿಷಯ ತೀರ್ಮಾನ ಮಾಡಲಿಕ್ಕಿತ್ತು. ಅವರ ದ್ರೋಹ ಅವಗಣಿಸುವಂತಹದ್ದಾಗಿರಲಿಲ್ಲ. ಹಝ್‌ರತ್ ಪೈಗಂಬರ್(ಸ) ತನ್ನ ಶಿಷ್ಯರಿಗೆ, "ನೀವು ಮನೆಗಳಲ್ಲಿ ವಿಶ್ರಾಂತಿ ಪಡೆಯಬೇಡಿರಿ. ಸಾಯಂಕಾಲದೊಳಗೆ ಬನೂ ಖುರೈಝುರ ಕೋಟೆಯನ್ನು ತಲಪಿರಿ" ಎಂದು ಹೇಳಿದರು. ಅನಂತರ

60. ಅಸ್ಸೀರತುಲ್ ಹಲ್‌ಬಿಯ್ಯ.



ಅವರು ಹಝ್‌ರತ್ ಅಲಿಯವರನ್ನು ಬನೂ ಖುರೈಝುರ ಬಳಿಗೆ ಕಳುಹಿಸಿ, "ನೀವು ಈ ರೀತಿ ದ್ರೋಹ ಮಾಡಿದುದು ಏಕೆ?" ಎಂದು ಕೇಳಲು ಹೇಳಿದರು.

ಆದರೆ ಬನೂ ಖುರೈಝು ತಮ್ಮ ಕೃತ್ಯಗಳಿಗಾಗಿ ಲಜ್ಜಿತರಾಗದೆ, ಕ್ಷಮಿಸಬೇಕೆಂದು ಹೇಳದೆ, ಅಥವಾ ಯಾವುದಾದರೂ ನೆಪವನ್ನು ಮುಂದಿರಿಸದೆ ಉದ್ಧಟತನದಿಂದ ಹಝ್‌ರತ್ ಅಲಿಯವರನ್ನೂ ಅವರ ಜೊತೆಗಿದ್ದವರನ್ನೂ ನಿಂದಿಸಿದರು ಮತ್ತು ಹಝ್‌ರತ್ ಪೈಗಂಬರರನ್ನೂ ಅವರ ಕುಟುಂಬದ ಮಹಿಳೆಯರನ್ನೂ ಬೈಯ್ಯಲು ಪ್ರಾರಂಭಿಸಿ, "ಮುಹಮ್ಮದ್ ಎಂತಹವರೆಂದು ನಮಗೆ ಗೊತ್ತಿಲ್ಲ. ನಮಗೆ ಅವರೊಂದಿಗೆ ಯಾವುದೇ ಒಪ್ಪಂದವಿಲ್ಲ" ಎಂದು ತಿರಸ್ಕಾರದಿಂದ ಹೇಳಿದರು.

ಹಝ್‌ರತ್ ಅಲಿ(ರ) ಬನೂ ಖುರೈಝುರ ಈ ಉತ್ತರವನ್ನು ಕೇಳಿ ಹಿಂತಿರುಗುತ್ತಿದ್ದಾಗ ಹಝ್‌ರತ್ ಪೈಗಂಬರ್(ಸ) ತನ್ನ ಸಂಗಡಿಗರೊಂದಿಗೆ ಯಹೂದಿಯರ ಕೋಟೆಗಳ ಕಡೆಗೆ ಹೋಗುವುದನ್ನು ಕಂಡರು.

ಯಹೂದಿಯರು ಹಝ್‌ರತ್ ಪೈಗಂಬರರನ್ನೂ(ಸ) ಅವರ ಪತ್ನಿಯರನ್ನೂ ಮಕ್ಕಳನ್ನೂ ಅಶ್ಲೀಲವಾಗಿ ನಿಂದಿಸುತ್ತಾ ಇದ್ದುದರಿಂದ ಅವರ ನಿಂದೆಗಳನ್ನು ಆಲಿಸಿದರೆ ಹಝ್‌ರತ್ ಪೈಗಂಬರರಿಗೆ(ಸ) ತುಂಬಾ ನೋವುಂಟಾಗುವುದೆಂಬ ಭಯದಿಂದ ಹಝ್‌ರತ್ ಅಲಿಯವರು ಹಝ್‌ರತ್ ಪೈಗಂಬರರೊಂದಿಗೆ(ಸ) ಹೀಗೆಂದರು: "ಓ ಅಲ್ಲಾಹನ ಪೈಗಂಬರರೇ, ನೀವು ಏಕೆ ಕಷ್ಟಪಡುವಿರಿ. ನಾವು ಈ ಯುದ್ಧವನ್ನು ಮಾಡಲು ಸಾಕಾಗುವೆವು. ನೀವು ಹಿಂದಿರುಗಿ ಹೋಗಿರಿ."

ಹಝ್‌ರತ್ ಪೈಗಂಬರ್(ಸ) ಹೇಳಿದರು: "ಯಹೂದಿಯರು ನಮ್ಮನ್ನು ನಿಂದಿಸುತ್ತಿರುವುದು ನನಗೆ ತಿಳಿದಿದೆ. ಅವರ ಬೈಗಳು ನನ್ನ ಕಿವಿಗೆ ಬೀಳದಿರಲಿ ಎಂದು ನೀವು ಬಯಸುತ್ತಿರುವಿರಿ."

ಆಗ ಹಝ್‌ರತ್ ಅಲಿ(ರ) ಹೇಳಿದರು: "ಹೌದು. ಇದೇ ನಮ್ಮ ಉದ್ದೇಶವಾಗಿದೆ."

ಹಝ್‌ರತ್ ಪೈಗಂಬರ್(ಸ) ಹೇಳಿದರು: "ಅದರಲ್ಲೇನಿದೆ. ಹಝ್‌ರತ್ ಪ್ರವಾದಿ ಮೂಸಾ(ಅ) ಯಹೂದಿಯರ ಸ್ವಂತ ವರ್ಗಕ್ಕೆ ಸೇರಿದ್ದರೂ ಅವರಿಗೆ ಸಹ ಯಹೂದಿಯರು ಇದಕ್ಕಿಂತ ಹೆಚ್ಚು ಕಷ್ಟಗಳನ್ನು ನೀಡಿದ್ದರು."

ಹೀಗೆ ಹೇಳುತ್ತಾ ಅವರು ಯಹೂದಿಯರ ಕೋಟೆಗಳ ಕಡೆಗೆ ಹೋದರು. ಆದರೆ ಯಹೂದಿಯರು ಕೋಟೆ ಬಾಗಿಲುಗಳನ್ನು ಮುಚ್ಚಿ ಯುದ್ಧವನ್ನು ಪ್ರಾರಂಭಿಸಿದರು. ಅವರ ಮಹಿಳೆಯರೂ ಅವರೊಂದಿಗೆ ಯುದ್ಧದಲ್ಲಿ ಭಾಗವಹಿಸಿದರು. ಕೋಟೆಯ ಗೋಡೆಯ ಕೆಳಗೆ ಮುಸ್ಲಿಮರು ಕುಳಿತಿದ್ದಾಗ ಒಬ್ಬ ಯಹೂದಿ ಮಹಿಳೆ ಮೇಲಿನಿಂದ ಕಲ್ಲೆಸೆದು ಒಬ್ಬ ಮುಸ್ಲಿಮನನ್ನು ಕೊಂದಳು.

ಮುಸ್ಲಿಮರು ಕೋಟೆಯ ಮುತ್ತಿಗೆಯನ್ನು ಮುಂದುವರಿಸಿದಾಗ ಕೆಲವು ದಿವಸಗಳ ನಂತರ, ತಾವು ಮುಸ್ಲಿಮರನ್ನು ದೀರ್ಘಕಾಲ ಎದುರಿಸಲಾರೆವು ಎಂದು ಯಹೂದಿಯರು ಮನವರಿಕೆ ಮಾಡಿಕೊಂಡರು. ಅವರ ಮುಖಂಡರು ಸಂಧಾನದ

ಪ್ರಸ್ತಾಪ ಮಾಡಿ ಹಝ್ರತ್ ಪೈಗಂಬರರಿಗೆ(ಸ) ಸಂದೇಶ ಕಳುಹಿಸಿ, ತಮ್ಮ ಬಳಿಗೆ ತಮ್ಮ ಸ್ನೇಹಿತನೂ ಔಸ್‌ಗೋತ್ರದ ಒಬ್ಬ ಮುಂದಾಳುವೂ ಆಗಿದ್ದ ಅಬೂ ಲುಬಾಬ ಅನ್‌ಸಾರಿಯನ್ನು ಸಮಾಲೋಚನೆಗಾಗಿ ಕಳುಹಿಸಬೇಕೆಂದು ಕೇಳಿಕೊಂಡರು.

ಹಝ್ರತ್ ಪೈಗಂಬರ್(ಸ) ಅಬೂ ಲುಬಾಬ ಅನ್‌ಸಾರಿಯನ್ನು ಯಹೂದಿಯರ ಬಳಿಗೆ ಕಳುಹಿಸಿದರು.

ಯಹೂದಿಯರು ಅಬೂ ಲುಬಾಬರೊಂದಿಗೆ ಹೀಗೆ ಕೇಳಿದರು: "ತೀರ್ಪು ನೀಡುವ ಹಕ್ಕು ನನಗೆ ಬಿಟ್ಟು ಕೊಟ್ಟು ನೀವು ಆಯುಧಗಳನ್ನು ಕೆಳಗಿಡಿರಿ ಎಂದು ಮುಹಮ್ಮದ್ ಹೇಳಿದ್ದಾರೆ. ಈ ಮಾತನ್ನು ನಾವು ಅಂಗೀಕರಿಸಬಹುದೇ?"

ಅಬೂ ಲುಬಾಬ ಬಾಯಿಯಲ್ಲಿ "ಅಂಗೀಕರಿಸಬಹುದು" ಎಂದು ಹೇಳುತ್ತಿರುವಾಗ ತಮ್ಮ ಕುತ್ತಿಗೆಯ ಮೇಲೆ ಕೈ ಚಲಾಯಿಸಿ ಕೊಲೆಗೈಯ್ಯಲ್ಪಡುವ ಹಾಗೆ ಸಂಜ್ಞೆಯಲ್ಲಿ ಸೂಚಿಸಿದರು.

ಅಷ್ಟರತನಕ ಹಝ್ರತ್ ಪೈಗಂಬರ್(ಸ) ಯಹೂದಿಯರ ಕುರಿತು ಯಾವುದೇ ನಿರ್ಧಾರ ಮಾಡಿರಲಿಲ್ಲ. ಆದರೆ ಅಬೂ ಲುಬಾಬ "ಈ ಅಪರಾಧಕ್ಕೆ ಮರಣದಂಡನೆಯ ಹೊರತು ಬೇರೆ ಯಾವ ಶಿಕ್ಷೆ ದೊರಕಲು ಸಾಧ್ಯ?" ಎಂದು ಯೋಚಿಸುತ್ತಾ ಅವರು ಅದನ್ನು ಹೇಳಲು ಉದ್ದೇಶಿಸಿರಲಿಲ್ಲವಾದರೂ ಸಂಜ್ಞೆಯಿಂದ ಸೂಚಿಸಿ ಹೇಳಿದರು. ಅದು ಯಹೂದಿಯರ ವಿನಾಶಕ್ಕೆ ಸೂಚಕವಾಯಿತು.

ಯಹೂದಿಯರು ತಾವು ಮುಹಮ್ಮದರ ತೀರ್ಪನ್ನು ಅಂಗೀಕರಿಸುತ್ತೇವೆ ಎಂದು ಹೇಳಿದ್ದರೆ, ಅವರಿಗೆ ದೊರಕಬಹುದಾದ ದೊಡ್ಡ ಶಿಕ್ಷೆ ಮದೀನದಿಂದ ಗಡಿಪಾರು ಮಾಡುವುದಾಗಿತ್ತು. ಆದರೆ ಅವರು ತಮಗೆ ದುರದೃಷ್ಟಕರವಾಗಿ ಹೀಗೆ ಹೇಳಿದರು: "ನಾವು ಮುಹಮ್ಮದರ ತೀರ್ಪನ್ನು ಒಪ್ಪಲು ಸಿದ್ಧರಿಲ್ಲ. ನಾವು ನಮ್ಮೊಂದಿಗೆ ಪ್ರತಿಜ್ಞಾಬದ್ಧರಾದ ಔಸ್‌ಗೋತ್ರದ ಮುಖಂಡ ಸಅದ್ ಬಿನ್ ಮುಆಝ್‌ರ ತೀರ್ಪನ್ನು ಅಂಗೀಕರಿಸುವೆವು."

ಆದರೆ ಆಗ ಯಹೂದಿಯರಲ್ಲಿ ಮತಭೇದ ಉಂಟಾಯಿತು. ಅವರಲ್ಲಿ ಕೆಲವರು, "ನಮ್ಮ ಕೋಮಿನವರು ಮುಸ್ಲಿಮರಿಗೆ ದ್ರೋಹಬಗೆದಿದ್ದಾರೆ. ಮುಸ್ಲಿಮರ ನಡವಳಿಕೆಯಿಂದ ಅವರ ಧರ್ಮ ಸತ್ಯವೆಂದು ಸಾಬೀತಾಗುತ್ತದೆ" ಎಂದು ಹೇಳಿ ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದರು.

ಅಮ್‌ರ್ ಬಿನ್ ಸಅದೀ ಯಹೂದಿಯರ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ತಮ್ಮ ಕೋಮಿನ ಜನರನ್ನು ಆಕ್ಷೇಪಿಸಿ ಹೀಗೆಂದರು: "ನೀವು ದ್ರೋಹ ಮಾಡಿರುವಿರಿ. ನೀವು ಒಪ್ಪಂದವನ್ನು ಮುರಿದಿರುವಿರಿ. ನೀವು ಮುಸ್ಲಿಮರಾಗಿರಿ ಅಥವಾ ಜಿಝಿಯಾ (ತೆರಿಗೆ) ನೀಡಿರಿ."

ಆಗ ಯಹೂದಿಯರು: "ನಾವು ಮುಸ್ಲಿಮರಾಗಲಾರೆವು ಮತ್ತು ಜಿಝಿಯಾ ಕೂಡ ಕೊಡಲಾರೆವು. ಅದಕ್ಕಿಂತ ಕೊಲ್ಲಲ್ಪಡುವುದೇ ಉತ್ತಮ" ಎಂದು ಹೇಳಿದರು.



ಆಗ ಅಮ್‌ರ್, "ನಾನು ನಿಮ್ಮಿಂದ ಮುಕ್ತನಾಗಿದ್ದೇನೆ. ನನಗೆ ನಿಮ್ಮೊಂದಿಗೆ ಸಂಬಂಧವಿಲ್ಲ" ಎಂದು ಹೇಳಿ ಯಹೂದಿಯರ ಕೋಟೆಯಿಂದ ಹೊರಗೆ ಹೋದರು. ಅವರು ಕೋಟೆಯಿಂದ ಹೊರಗೆ ಬರುವಾಗ ಮುಸ್ಲಿಮರ ಸೈನ್ಯದ ಒಂದು ತುಕಡಿ ಅವರನ್ನು ನೋಡಿತು. ಅದರ ಸೇನಾ ನಾಯಕರಾದ ಮುಹಮ್ಮದ್ ಬಿನ್ ಮುಸ್ಲಿಮ(ರ) ಅವರೊಂದಿಗೆ, "ನೀವು ಯಾರು?" ಎಂದು ಕೇಳಿದರು. ಆಗ ಅಮ್‌ರ್ ತನ್ನ ಪರಿಚಯ ಹೇಳಿದರು. ಆಗ ಮುಹಮ್ಮದ್ ಬಿನ್ ಮುಸ್ಲಿಮ ಅವರೊಂದಿಗೆ, "ನೀವು ಸುರಕ್ಷಿತವಾಗಿ ಹೊರಟು ಹೋಗಿರಿ" ಎಂದು ಹೇಳಿ ಹೀಗೆ ಅಲ್ಲಾಹನನ್ನು ಪ್ರಾರ್ಥಿಸಿದರು: "ಓ ಅಲ್ಲಾಹ್, ಒಳ್ಳೆಯವರ ತಪ್ಪುಗಳನ್ನು ಮರೆಮಾಡುವಂತಹ ಉತ್ತಮ ಕೃತ್ಯವನ್ನು ಮಾಡಲು ನನಗೆ ಅನುಗ್ರಹ ನೀಡು."

ಇದರ ಅರ್ಥವೇನೆಂದರೆ, ಈ ವ್ಯಕ್ತಿ ತನ್ನ ಮತ್ತು ತನ್ನ ಕೋಮಿನವರ ಕೃತ್ಯಗಳ ಕಾರಣದಿಂದ ಪಶ್ಚಾತ್ತಾಪಗೊಂಡಿರುವರು. ನಾವು ಅವರನ್ನು ಕ್ಷಮಿಸುವುದು ನಮ್ಮ ಸುಸ್ವಭಾವಕ್ಕೆ ಅರ್ಹವಾದ ಕರ್ತವ್ಯವಾಗಿದೆ. ಆದುದರಿಂದ ನಾನು ಅವರನ್ನು ಸೆರೆಹಿಡಿಯದೆ ಅಡ್ಡಿಯಿಲ್ಲದೆ ಹೋಗಲು ಬಿಟ್ಟೆನು. ಅಲ್ಲಾಹನು ನನಗೆ ಇಂತಹ ಒಳ್ಳೆಯ ಕೆಲಸ ಮಾಡುವ ಭಾಗ್ಯ ದಯಪಾಲಿಸುತ್ತಾ ಇರಲಿ.

ಹಝ್ರತ್ ಪೈಗಂಬರರಿಗೆ(ಸ) ಈ ವಿಷಯ ತಿಳಿದಾಗ ಅವರು ಮುಹಮ್ಮದ್ ಬಿನ್ ಮುಸ್ಲಿಮರೊಂದಿಗೆ, "ನೀವು ಆ ಯಹೂದಿಯನ್ನು ಏಕೆ ಹೋಗಲು ಬಿಟ್ಟಿರಿ?" ಎಂದು ಆಕ್ಷೇಪಿಸದೆ ಅವರ ಕೃತ್ಯದ ಕುರಿತು ಮೆಚ್ಚಿಗೆ ಸೂಚಿಸಿದರು.

## ಬನೂ ಖುರೈಝುರಿಗೆ ಸಅದ್ ನೀಡಿದ ತೀರ್ಪು ಮೂಸಾ ಪ್ರವಾದಿಯ ನ್ಯಾಯಶಾಸ್ತ್ರ ಗ್ರಂಥದ ಪ್ರಕಾರ

ಮೇಲಿನ ಸಂಭವಗಳು ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದವು ಗಳಾಗಿದ್ದುವು. ಬನೂ ಖುರೈಝು ಗೋತ್ರದ ಜನರು ತಮ್ಮ ಹಠದಲ್ಲಿ ನಿಂತರು. ಅವರು ಹಝ್ರತ್ ಪೈಗಂಬರರನ್ನು(ಸ) ನ್ಯಾಯಾಧೀಶರಾಗಿ ಅಂಗೀಕರಿಸಲಿಲ್ಲ. ತಮ್ಮ ಬಗ್ಗೆ ಸಅದ್(ರ) ತೀರ್ಪು ನೀಡಬೇಕೆಂದು ಅವರು ಒತ್ತಾಯ ಮಾಡಿದರು. ಹಝ್ರತ್ ಪೈಗಂಬರ್(ಸ) ಯಹೂದಿಯರ ಈ ಬೇಡಿಕೆಯನ್ನು ಅಂಗೀಕರಿಸಿದರು. ಸಅದ್ ಯುದ್ಧದಲ್ಲಿ ಗಾಯಗೊಂಡಿದ್ದುದರಿಂದ ಅವರು ಶುಶ್ರೂಷೆಯಲ್ಲಿದ್ದರು. "ನೀವು ನೀಡುವ ತೀರ್ಪು ಬನೂ ಖುರೈಝು ಅಂಗೀಕರಿಸುತ್ತಾರೆ. ಆದುದರಿಂದ ನೀವು ಬಂದು ವಿಚಾರಣೆ ನಡೆಸಿ ತೀರ್ಪು ನೀಡಿರಿ" ಎಂದು ಸಅದ್‌ರಿಗೆ ಹೇಳಿ ಕಳುಹಿಸಲಾಯಿತು.

ಬನೂ ಖುರೈಝುರೊಂದಿಗೆ ದೀರ್ಘಕಾಲದಿಂದ ಸ್ನೇಹದ ಪ್ರತಿಜ್ಞಾಬದ್ಧರಾದ ಔಸ್ ಗೋತ್ರದ ಜನರು ತಮ್ಮ ಗೋತ್ರಕ್ಕೆ ಸೇರಿದ ಸಅದ್‌ರವರ ಬಳಿಗೆ ಹೋಗಿ ಒತ್ತಾಯ ಪೂರ್ವಕವಾಗಿ ಹೀಗೆಂದರು: "ಖಝ್‌ರಜ್ ಗೋತ್ರದ ಜನರು ತಮ್ಮೊಂದಿಗೆ ಪ್ರತಿಜ್ಞಾಬದ್ಧರಾದವರನ್ನು ಯಾವಾಗಲೂ ರಕ್ಷಿಸಿದ್ದರು. ನೀವು ಔಸ್ ಗೋತ್ರದವರಾಗಿದ್ದೀರಿ. ಆದುದರಿಂದ ನಮ್ಮೊಂದಿಗೆ ಪ್ರತಿಜ್ಞಾಬದ್ಧರಾದ ಬನೂ ಖುರೈಝು ಗೋತ್ರದ ಯಹೂದಿಗಳ ಪರವಾಗಿ ನೀವು ತೀರ್ಪು ನೀಡಬೇಕು."

ಸಅದ್ ಗಾಯಗೊಂಡಿದ್ದ ಕಾರಣ ಸವಾರಿ ಮೃಗವನ್ನೇರಿ ಬನೂ ಖುರೈಝರ ಕಡೆಗೆ ಹೊರಟರು. ಅವರ ಗೋತ್ರದ ಜನರು ಅವರ ಎಡಬಲಗಳಲ್ಲಿ ಓಡುತ್ತಾ "ನೀವು ಬನೂ ಖುರೈಝರ ವಿರುದ್ಧ ತೀರ್ಪು ನೀಡಬೇಡಿರಿ" ಎಂದು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದರು. ಸಅದ್ ಹೀಗೆ ಉತ್ತರ ನೀಡುತ್ತಿದ್ದರು: "ಯಾರನ್ನು ನ್ಯಾಯ ತೀರ್ಮಾನಕ್ಕಾಗಿ ನೇಮಿಸಲಾಗುತ್ತಿದೆಯೋ ಅವನು ಪ್ರಾಮಾಣಿಕನಾಗಿರುತ್ತಾನೆ. ಅವನು ನ್ಯಾಯನಿಷ್ಠೆಯಿಂದ ತೀರ್ಪು ನೀಡಬೇಕು. ನಾನು ನ್ಯಾಯಬದ್ಧವಾಗಿ ತೀರ್ಪು ನೀಡುವೆನು."

ಸಅದ್ ಬನೂ ಖುರೈಝರ ಕೋಟೆಯನ್ನು ತಲಪಿದಾಗ ಬನೂ ಖುರೈಝದ ಜನರು ಕೋಟೆ ಗೋಡೆಯ ಸಮೀಪ ಸಅದರನ್ನು ಪ್ರತೀಕ್ಷಿಸುತ್ತಾ ನಿಂತಿದ್ದರು. ಮುಸ್ಲಿಮರು ಇನ್ನೊಂದು ಬದಿಯಲ್ಲಿ ಕುಳಿತಿದ್ದರು.

ಸಅದ್ ತನ್ನ ಗೋತ್ರದ ಜನರೊಂದಿಗೆ ಹೀಗೆ ಕೇಳಿದರು: "ನಾನು ಮಾಡಿದ ತೀರ್ಪು ಅಂಗೀಕರಿಸುವುದಾಗಿ ನೀವು ನನಗೆ ವಾಗ್ದಾನ ಮಾಡುವಿರೋ?" ಅವರು ಹೇಳಿದರು: "ನಾವು ನಿಮ್ಮ ತೀರ್ಪನ್ನು ಅಂಗೀಕರಿಸುವೆವು."

ಅನಂತರ ಸಅದ್ ಬನೂ ಖುರೈಝರೊಂದಿಗೆ ಕೇಳಿದರು: "ನಾನು ನೀಡುವ ತೀರ್ಪು ನೀವು ಅಂಗೀಕರಿಸುವಿರೋ?"

ಅವರು ಸಹ ಹೇಳಿದರು: "ನೀವು ನೀಡುವ ತೀರ್ಪನ್ನು ನಾವು ಅಂಗೀಕರಿಸುವೆವು."

ಅನಂತರ ಸಅದ್ ನಾಚಿಕೆಯಿಂದ ತಲೆ ತಗ್ಗಿಸುತ್ತಾ ಬೇರೆ ಕಡೆಗೆ ನೋಡುತ್ತಾ ಹಝ್ರತ್ ಪೈಗಂಬರ್(ಸ) ಕುಳಿತ ಸ್ಥಳದ ಕಡೆಗೆ ಸಂಜ್ಞೆ ಮಾಡುತ್ತಾ "ಅಲ್ಲಿ ಕುಳಿತಿರುವವರೂ ನಾನು ಮಾಡಿದ ತೀರ್ಪನ್ನು ಅಂಗೀಕರಿಸುವುದಾಗಿ ವಾಗ್ದಾನ ಮಾಡುತ್ತಾರೋ?" ಎಂದು ಕೇಳಿದರು.

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ಸಅದ್ ಮಾಡುವ ತೀರ್ಪನ್ನು ಅಂಗೀಕರಿಸುವೆವು."

ಸಅದ್(ರ) ಯಹೂದಿಯರು ಅಂಗೀಕರಿಸುವ ಬೈಬಲಿನ ಹಳೆಯ ನಿಯಮದ ಪ್ರಕಾರ ತೀರ್ಪು ನೀಡಿದರು.[61]

ಬೈಬಲಿನಲ್ಲಿ ಹೀಗೆ ಬರೆದಿದೆ: "ನೀವು ಒಂದು ಪಟ್ಟಣವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಅದರ ಹತ್ತಿರ ಬಂದಾಗ ಮೊದಲು ಅದು ಯುದ್ಧವಿಲ್ಲದೆ ಸಮಾಧಾನದಿಂದಲೇ ಅಧೀನವಾಗಬಹುದೆಂದು ಪ್ರಕಟಪಡಿಸಬೇಕು. ಅದರಲ್ಲಿ ಇರುವವರು ಒಪ್ಪಿ ಬಾಗಿಲನ್ನು ನಿಮಗೆ ತೆರೆದುಕೊಟ್ಟರೆ ಅವರೆಲ್ಲರೂ ನಿಮಗೆ ಬಿಟ್ಟೀಕೆಲಸ ಮಾಡುವ ದಾಸರಾಗಬೇಕು. ಅವರು ನಿಮ್ಮ ಮಾತಿಗೆ ಸಮ್ಮತಿಸದೆ

61. ಸೀರತ್ ಹಲ್‌ಬಿಯ್ಯ ಸಂಪುಟ 2 ಪುಟ 365, 366.



ಎದುರಿಸಿದರೆ ನೀವು ಆ ಪಟ್ಟಣಕ್ಕೆ ಮುತ್ತಿಗೆ ಹಾಕಬೇಕು. ನಿಮ್ಮ ದೇವರಾದ ಕರ್ತನು ಆ ಪಟ್ಟಣವನ್ನು ನಿಮಗೆ ವಶಮಾಡಿದಾಗ ಅದರಲ್ಲಿರುವ ಗಂಡಸರೆಲ್ಲರನ್ನೂ ಕನಿಕರಿಸದೆ ಸಂಹಾರ ಮಾಡಬೇಕು. ಹೆಂಗಸರನ್ನೂ ಮಕ್ಕಳನ್ನೂ ದನಗಳನ್ನೂ ಊರಲ್ಲಿರುವ ಆಸ್ತಿಯನ್ನೂ ನೀವು ಸ್ವಂತಕ್ಕೆ ತೆಗೆದುಕೊಳ್ಳಬಹುದು. ನಿಮ್ಮ ದೇವರಾದ ಕರ್ತನು ನಿಮಗೆ ವಶಪಡಿಸಿದ ಶತ್ರುಗಳ ಆಸ್ತಿಯನ್ನು ನೀವೇ ಅನುಭೋಗಿಸಬಹುದು. ಈ ದೇಶದ ಜನಾಂಗಗಳಿಗೆ ಸೇರದೆ ದೂರವಾಗಿರುವ ಜನಾಂಗಗಳ ಪಟ್ಟಣಗಳ ವಿಷಯದಲ್ಲಿ ನೀವು ಹಾಗೆಯೇ ನಡೆದುಕೊಳ್ಳಬೇಕು. ಆದರೆ ನಿಮ್ಮ ದೇವರಾದ ಕರ್ತನು ನಿಮಗೆ ಸ್ವಂತಕ್ಕಾಗಿ ಕೊಡುವ ಈ ಜನಾಂಗಗಳ ಪಟ್ಟಣಗಳ ವಿಷಯದಲ್ಲಿ ಹಾಗೆ ಮಾಡದೆ ಉಸುರುಬಿಡುವ ಒಬ್ಬರನ್ನಾದರೂ ಉಳಿಸಬಾರದು. ನಿಮ್ಮ ದೇವರಾದ ಕರ್ತನು ನಿಮಗೆ ಅಪ್ಪಣೆ ಕೊಟ್ಟಂತೆ ಇವರನ್ನು ಅಂದರೆ ಹಿತ್ತಿಯರು, ಅಮೋರಿಯರು, ಕಾನಾನ್ಯರು, ಪೆರಿಜ್ಜೀಯರು, ಹಿವ್ವಿಯರು, ಯೆಬೂಸಿಯರು, ಇವರೆಲ್ಲರನ್ನೂ ನಾಶಮಾಡಿಬಿಡಬೇಕು. ಇಲ್ಲವಾದರೆ ಅವರು ತಮ್ಮ ದೇವರುಗಳಿಗಾಗಿ ಆಚರಿಸಲು ನಿಷಿದ್ಧಾಚಾರಗಳನ್ನು ನಿಮಗೆ ಕಲಿಸಿಕೊಟ್ಟಾರು; ಮತ್ತು ನೀವು ನಿಮ್ಮ ದೇವರಾದ ಕರ್ತನಿಗೆ ದ್ರೋಹಿಗಳಾದೀರಿ." (ಧರ್ಮೋಪದೇಶ ಕಾಂಡ 20:10–18)

ಯಹೂದಿಯರು ಜಯಿಸಿ ಮುಸ್ಲಿಮರು ಸೋತುಹೋಗಿದ್ದರೆ ಬೈಬಲಿನ, ಮೇಲೆ ಉಲ್ಲೇಖಿಸಿದ ತೀರ್ಮಾನ ಪ್ರಕಾರ ಎಲ್ಲಾ ಮುಸ್ಲಿಮರು– ಪುರುಷರು, ಮಹಿಳೆಯರು ಮತ್ತು ಮಕ್ಕಳೆಲ್ಲರೂ ಕೊಲ್ಲಲ್ಪಡುತ್ತಿದ್ದರು. ಅಲ್ಲದೆ ಎಲ್ಲರನ್ನು ಕೊಲ್ಲಬೇಕೆಂದು ಯಹೂದಿಯರು ನಿರ್ಧರಿಸಿದ್ದರೆಂದು ಚರಿತ್ರೆಯಿಂದ ಸಾಬೀತಾಗುತ್ತದೆ. ಅವರು ಯಾವುದಾದರೂ ದೊಡ್ಡ ರಿಯಾಯಿತಿ ಮಾಡಲು ಉದ್ದೇಶಿಸಿದ್ದರೆ ದೂರದ ಪಟ್ಟಣಗಳನ್ನು ಸ್ವಾಧೀನಪಡಿಸುವಾಗ ಪಾಲಿಸಬೇಕೆಂದು ಬೈಬಲ್ ಹೇಳಿದ ನಿಯಮವನ್ನು ಅಂಗೀಕರಿಸಿ ಪುರುಷರನ್ನು ಕೊಂದು ಮಹಿಳೆಯರನ್ನೂ ಮಕ್ಕಳನ್ನೂ ಸ್ವಾಧೀನ ಪಡಿಸಿಕೊಂಡು ಸ್ವತ್ತು ಸಂಪತ್ತುಗಳನ್ನು ಲೂಟಿ ಮಾಡುತ್ತಿದ್ದರು.

ಸಅದ್(ರ) ಬನೂ ಖುರೈಝರೊಂದಿಗೆ ಪ್ರತಿಜ್ಞಾಬದ್ಧರಾದ ಔಸ್ ಗೋತ್ರಕ್ಕೆ ಸೇರಿದವರಾಗಿದ್ದು ಅವರ ಸ್ನೇಹಿತರೂ ಆಗಿದ್ದರು. ಇಸ್ಲಾಮಿನ ಧಾರ್ಮಿಕ ನಿಯಮಗಳ ಪ್ರಕಾರ ಹಝ್ರತ್ ಪೈಗಂಬರ್(ಸ) ನೀಡುವ ತೀರ್ಪನ್ನು ಯಹೂದಿಯರು ಅಂಗೀಕರಿಸಲು ಸಿದ್ಧರಾಗಿಲ್ಲವೆಂದು ಸಅದ್(ರ) ಮನವರಿಕೆ ಮಾಡಿಕೊಂಡಿದ್ದರು. ಯಹೂದಿಯರು ಹಝ್ರತ್ ಪೈಗಂಬರ್(ಸ) ಮಾಡುವ ತೀರ್ಮಾನವನ್ನು ಒಪ್ಪಿಕೊಳ್ಳಲು ಸಿದ್ಧರಾಗುತ್ತಿದ್ದರೆ ಇಸ್ಲಾಮೀ ನಿಯಮಗಳ ಪ್ರಕಾರ ಅವರ ಜೀವಗಳು ಸುರಕ್ಷಿತವಾಗುತ್ತಿದ್ದುವು.

ಹಝ್ರತ್ ಪ್ರವಾದಿ ಮೂಸಾ(ಅ) ತನ್ನ ಗ್ರಂಥದಲ್ಲಿ ಇಂತಹ ಘಟನೆಗಳಿಗಾಗಿ ಮೊದಲೇ ತೀರ್ಮಾನಿಸಿ ಪ್ರಸ್ತಾಪಿಸಿದ ನಿಯಮಗಳ ಪ್ರಕಾರವೇ ಸಅದ್ ಯಹೂದಿಯರಿಗೆ ಸಂಬಂಧಿಸಿ ತೀರ್ಪು ನೀಡಿದರು. ಈ ತೀರ್ಪಿನ

ಹೊಣೆಗಾರಿಕೆಯನ್ನು ಹಝ್ರತ್ ಪೈಗಂಬರರ(ಸ) ಮೇಲಾಗಲಿ ಮುಸ್ಲಿಮರ ಮೇಲಾಗಲಿ ಹೊರಿಸಬಾರದು. ಈ ತೀರ್ಮಾನಕ್ಕೆ ಹೊಣೆಗಾರರಾದವರು ಹಝ್ರತ್ ಮೂಸಾ,(ಅ) ಹಝ್ರತ್ ಮೂಸಾರವರ ಗ್ರಂಥ ಮತ್ತು ಅನ್ಯ ಜನಾಂಗದವರೊಂದಿಗೆ ಈ ರೀತಿ ಸಾವಿರಾರು ವರ್ಷಗಳಿಂದ ನಿಷ್ಠೆಯಿಂದ ವರ್ತಿಸಿದ ಯಹೂದಿಯರಾಗಿದ್ದಾರೆ. ಯಹೂದಿಯರನ್ನು ದಯಾಪೂರ್ಣ ವಾದ ತೀರ್ಮಾನಕ್ಕೆ ಹಝ್ರತ್ ಪೈಗಂಬರ್(ಸ) ಆಹ್ವಾನಿಸಿದರೂ ಅವರು ಅದನ್ನು ನಿರಾಕರಿಸಿದ್ದರು. ಯಹೂದಿಯರು ಹೇಳಿದ್ದರು: "ನಾವು ಮುಹಮ್ಮದರ ತೀರ್ಪನ್ನು ಒಪ್ಪಲು ಸಿದ್ಧರಿಲ್ಲ. ನಾವು ಸಅದರ ಮಾತನ್ನು ಅಂಗೀಕರಿಸುವೆವು."

ಸಅದ್(ರ) ಹಝ್ರತ್ ಮೂಸಾ ಪ್ರವಾದಿ ತನ್ನ ಗ್ರಂಥದಲ್ಲಿ ಬರೆದಿರುವ ತೀರ್ಪನ್ನು ಅನುಸರಿಸಿ ತೀರ್ಪು ನೀಡಿದ್ದರು. ಆದರೆ ಹಝ್ರತ್ ಪೈಗಂಬರ್ ದೌರ್ಜನ್ಯ ಮಾಡಿದರೆಂದು ಇಸ್ಲಾಮಿನ ಶತ್ರುಗಳಾದ ಕ್ರೈಸ್ತ ಲೇಖಕರು ಮೊದಲಾದವರು ಬೊಬ್ಬೆ ಹಾಕುತ್ತಾರೆ. ಹಝ್ರತ್ ಪೈಗಂಬರ್(ಸ) ಬೇರೆ ಯಾವುದೇ ಸಂದರ್ಭದಲ್ಲಿ ದೌರ್ಜನ್ಯ ಮಾಡಿರಲಿಲ್ಲವೆಂದು ಕ್ರೈಸ್ತ ಲೇಖಕರೇ ಮೊದಲಾದ ಶತ್ರುಗಳು ನೋಡುತ್ತಾ ಇಲ್ಲವೇ? ನೂರಾರು ಸಾರಿ ಶತ್ರುಗಳು ಹಝ್ರತ್ ಪೈಗಂಬರರಿಂದ(ಸ) ದಯಾ ಭಿಕ್ಷೆ ಯಾಚಿಸಿದ್ದರು. ಆದರೆ ಅವರು ಒಮ್ಮೆ ಸಹ ಅವರ ಮೇಲೆ ಪ್ರತೀಕಾರ ಮಾಡಲಿಲ್ಲ. ಅವರೆಲ್ಲರನ್ನೂ ದಯೆದೋರಿ ಕ್ಷಮಿಸಿದ್ದರು.

ಇದೊಂದು ಸಂದರ್ಭದಲ್ಲಿ ಮಾತ್ರ ಶತ್ರುಗಳು ತಾವು ಹಝ್ರತ್ ಪೈಗಂಬರರ ತೀರ್ಪನ್ನು ಒಪ್ಪಲಾರೆವು; ತಾವು ನಿರ್ದೇಶಿಸುವ ಬೇರೆ ಒಬ್ಬನ ತೀರ್ಪನ್ನು ಅಂಗೀಕರಿಸುವೆವು ಎಂದು ಹೇಳಿದ್ದರು. ತೀರ್ಪು ನೀಡಿದ ವ್ಯಕ್ತಿ ತಾನು ತೀರ್ಪು ನೀಡುವ ಮೊದಲು ತನ್ನ ತೀರ್ಪನ್ನು ಹಝ್ರತ್ ಪೈಗಂಬರರೂ ಅಂಗೀಕರಿಸಬೇಕೆಂದು ಅವರಿಂದ ವಚನವನ್ನು ಪಡೆದಿದ್ದರು. ಈ ಕಾರಣಗಳಿಂದ ಮೇಲಿನಂತೆ ಸಂಭವಿಸಿತು.

ಸಅದ್(ರ) ನೀಡಿದ ತೀರ್ಪು ಅವರ ಸ್ವಂತ ಇಚ್ಛೆಯಿಂದ ಮಾಡಿದ ತೀರ್ಪು ಆಗಿರಲಿಲ್ಲ. ಅದು ಹಝ್ರತ್ ಮೂಸಾ ಪ್ರವಾದಿಯ(ಅ) ತೀರ್ಪಿನ ಪುನರುಚ್ಚಾರ ಮಾತ್ರವಾಗಿತ್ತು. ತಾವು ಹಝ್ರತ್ ಮೂಸಾ ಪ್ರವಾದಿಯ ಅನುಯಾಯಿಗಳೆಂದು ಯಹೂದಿಯರ ವಾದವಾಗಿತ್ತು. ಯಾರಾದರೂ ದೌರ್ಜನ್ಯ ಮಾಡಿದ್ದರೆ ಹಾಗೆ ದೌರ್ಜನ್ಯ ಮಾಡಿದುದು ಯಹೂದಿಯರೇ ಆಗಿದ್ದಾರೆ. ಏಕೆಂದರೆ ಅವರು ಹಝ್ರತ್ ಪೈಗಂಬರರ ತೀರ್ಪಿಗೆ ತಮ್ಮನ್ನು ವಿಧೇಯರನ್ನಾಗಿ ಮಾಡದೆ ತಮ್ಮ ಜೀವಗಳ ಮೇಲೆಯೇ ದೌರ್ಜನ್ಯ ಮಾಡಿದರು. ಬೇರೆ ಯಾರಾದರೂ ದೌರ್ಜನ್ಯ ಮಾಡಿದ್ದರೆ ಅದು ಹಝ್ರತ್ ಮೂಸಾ ಪ್ರವಾದಿಯಾಗಿದ್ದಾರೆ. ಏಕೆಂದರೆ ಅವರು ಅಲ್ಲಾಹನಿಂದ ಆಜ್ಞೆ ಪಡೆದು, ಮುತ್ತಿಗೆ ಹಾಕಲ್ಪಟ್ಟ ನಂತರ ವಶಪಡಿಸಲಾದ ಶತ್ರುಗಳೊಂದಿಗೆ ಹೇಗೆ ವರ್ತಿಸಬೇಕೆಂದು ತನ್ನ ಗ್ರಂಥದಲ್ಲಿ ಬರೆದರು. ಇದು ದೌರ್ಜನ್ಯಕರವೆಂದು ಆಕ್ಷೇಪಿಸುವ ವಿರೋಧಿಗಳು ಹಝ್ರತ್ ಮೂಸಾರನ್ನು(ಅ) ದೌರ್ಜನ್ಯಗಾರರೆಂದು



ಹೇಳಲಿ ಅಥವಾ ಈ ಉಪದೇಶ ಅವತೀರ್ಣಗೊಳಿಸಿದ ಕರ್ತನನ್ನು ದೌರ್ಜನ್ಯಗಾರನೆಂದು ಹೇಳಲಿ. ಹಝ್ರತ್ ಪೈಗಂಬರರನ್ನು(ಸ) ದೌರ್ಜನ್ಯಗಾರರೆಂದು ಆಕ್ಷೇಪಿಸಲು ಅವರಿಗೆ ಯಾವ ನ್ಯಾಯಬದ್ಧ ಕಾರಣವೂ ಇರುವುದಿಲ್ಲ.

ಕಂದಕ ಯುದ್ಧ (ಇದರ ಇನ್ನೊಂದು ಹೆಸರು ಅಹ್‌ಝಾಬ್ ಯುದ್ಧ– ಶತ್ರು ಕೂಟಗಳ ಯುದ್ಧ) ಕೊನೆಗೊಂಡ ನಂತರ ಹಝ್ರತ್ ಪೈಗಂಬರ್(ಸ) ಹೀಗೆ ಘೋಷಿಸಿದರು: "ಇಂದಿನಿಂದ ಬಹುದೈವಾರಾಧಕರು ನಮ್ಮನ್ನು ಆಕ್ರಮಿಸಲಾರರು. ನಾವು ಸ್ವತಃ ಅವರಿಗೆ ಉತ್ತರ ನೀಡುವೆವು. ನಮ್ಮನ್ನು ಆಕ್ರಮಿಸಿದ ಗೋತ್ರಗಳ ವಿರುದ್ಧ ನಾವು ಸ್ವತಃ ಆಕ್ರಮಣ ಮಾಡುವೆವು.[62]

ಆ ಮೇಲೆ ಹೀಗೆಯೇ ಸಂಭವಿಸಿತು. ಕಂದಕ ಯುದ್ಧದಲ್ಲಿ ಶತ್ರುಗಳಿಗೆ ಹೆಚ್ಚಿನ ನಷ್ಟವುಂಟಾಗಿರಲಿಲ್ಲ. ಅವರ ಕೆಲವೇ ಜನರು ಕೊಲ್ಲಲ್ಪಟ್ಟಿದ್ದರು. ಅವರು ಮುಂದಿನ ವರ್ಷ ಪೂರ್ಣ ಸಿದ್ಧತೆಗಳೊಂದಿಗೆ ಪುನಃ ಮದೀನವನ್ನು ಆಕ್ರಮಿಸಲು ಬರಬಹುದಾಗಿತ್ತು. ಅವರು ಇಪ್ಪತ್ತು ಸಾವಿರಕ್ಕೆ ಬದಲಾಗಿ ನಲ್ವತ್ತು ಸಾವಿರ ಅಥವಾ ಐವತ್ತು ಸಾವಿರ ಸೈನಿಕರ ದಂಡನ್ನು ತರಬಹುದಾಗಿತ್ತು. ಅವರು ಹೆಚ್ಚು ಪ್ರಯತ್ನ ಮಾಡಿದ್ದರೆ ಒಂದು ಒಂದೂವರೆ ಲಕ್ಷ ಸೈನಿಕರನ್ನು ತರುವುದು ಅವರಿಗೆ ಕಷ್ಟಕರವಾಗುತ್ತಿರಲಿಲ್ಲ.

ಆದರೆ ಇಪ್ಪತ್ತೊಂದು ವರ್ಷಗಳ ಕಾಲ ನಿರಂತರವಾಗಿ ಇಸ್ಲಾಮಿನ ನಾಶಕ್ಕೆ ಪ್ರಯತ್ನಿಸಿ ಪರಾಜಿತರಾದ ಅವಿಶ್ವಾಸಿಗಳಿಗೆ ಅಲ್ಲಾಹನು ಹಝ್ರತ್ ಪೈಗಂಬರರ ಜೊತೆಗಿದ್ದಾನೆಂಬ ಭಾವನೆ ಉಂಟಾಗಲು ತೊಡಗಿತ್ತು. ಅವರ ದೇವತೆಗಳು ಹುಸಿದೈವಗಳೆಂದೂ ಪ್ರಪಂಚದ ಸೃಷ್ಟಿಕರ್ತ ಒಬ್ಬನೇ ದೇವನೆಂದೂ ಸ್ಪಷ್ಟವಾಗುತ್ತಾ ಬರುತ್ತಿತ್ತು. ಅವಿಶ್ವಾಸಿಗಳ ಶರೀರಗಳು ಸ್ವಸ್ಥವಾಗಿದ್ದವು. ಆದರೆ ಅವರ ಹೃದಯಗಳು ಬಿರುಕು ಬಿಟ್ಟಿದ್ದುವು. ಅವರು ಬಾಹ್ಯವಾಗಿ ತಮ್ಮ ವಿಗ್ರಹಗಳ ಮುಂದೆ ಸಾಷ್ಟಾಂಗವೆರಗುತ್ತಾ ಕಾಣಿಸಿಕೊಳ್ಳುತ್ತಿದ್ದರು. ಆದರೆ ಅವರ ಹೃದಯಗಳಲ್ಲಿ "ಲಾ ಇಲಾಹ ಇಲ್ಲಲ್ಲಾಹ್" (ಅಲ್ಲಾಹನ ಹೊರತು ಅನ್ಯ ದೇವನಿಲ್ಲ) ಎಂಬ ಶಬ್ದವು ಪ್ರತಿಧ್ವನಿಸುತ್ತಿತ್ತು.

## ಮುಸ್ಲಿಮರ ವಿಜಯದ ಆರಂಭ

ಕಂದಕ ಯುದ್ಧವು ಮುಕ್ತಾಯವಾದ ನಂತರ ಇನ್ನು ಮುಂದೆ ಅರಬ್ ದೇಶದ ಅವಿಶ್ವಾಸಿಗಳು ತಮ್ಮ ಮೇಲೆ ಆಕ್ರಮಣ ಮಾಡಲಾರರು ಎಂದು ಹಝ್ರತ್ ಪೈಗಂಬರರು(ಸ) ಹೇಳಿದ್ದರು. ಮುಸ್ಲಿಮರ ಸತ್ವ ಪರೀಕ್ಷೆ ಅದರ ಗರಿಷ್ಠ ಮಿತಿಯನ್ನು ತಲಪಿದೆ ಎಂದೂ ಇನ್ನು ಮುಂದೆ ಅವರಿಗೆ ಜಯದ ಕಾಲವು ಲಭಿಸುವುದು ಎಂದೂ ಅವರು ಉದ್ದೇಶಿಸಿದ ಅರ್ಥವಾಗಿತ್ತು.

ಕಂದಕ ಯುದ್ಧದ ತನಕ ನಡೆದ ಎಲ್ಲಾ ಹೋರಾಟಗಳಲ್ಲಿ ಅವಿಶ್ವಾಸಿಗಳು

62. ಬುಖಾರಿ.

ಮದೀನವನ್ನು ಆಕ್ರಮಿಸಲು ಬಂದಿದ್ದರು ಅಥವಾ ಅವಿಶ್ವಾಸಿಗಳ ಆಕ್ರಮಣಗಳನ್ನು ತಡೆಯಲು ಮುಸ್ಲಿಮರೇ ಮದೀನದ ಹೊರಗೆ ಬಂದಿದ್ದರು. ಆದರೆ ಮುಸ್ಲಿಮರು ಯುದ್ಧವನ್ನು ಮುಂದುವರಿಸಲು ಸ್ವತಃ ಪ್ರಯತ್ನ ಮಾಡಿರಲಿಲ್ಲ.

ಯುದ್ಧ ಪ್ರಾರಂಭವಾದರೆ ಅದರ ನಿಲುಗಡೆ ಎರಡು ರೀತಿಗಳಲ್ಲಿ ಇರುತ್ತದೆ. ಯುದ್ಧವು ಸಂಧಾನ ಮೂಲಕ ನಿಲ್ಲಿಸಲ್ಪಡುವುದು ಮೊದಲನೆಯ ರೀತಿಯಾಗಿದೆ. ಯುದ್ಧಮಾಡುವ ಪಕ್ಷಗಳಲ್ಲಿ ಒಂದು ಪಕ್ಷದವರು ತಮ್ಮ ಆಯುಧಗಳನ್ನು ಕೆಳಗಿಟ್ಟು ಶರಣಾಗತರಾಗುತ್ತಾರೆ. ಇದು ಯುದ್ಧ ನಿಲುಗಡೆಯ ಎರಡನೆಯ ರೀತಿಯಾಗಿದೆ. ಕಂದಕ ಯುದ್ಧದ ತನಕ ಮುಸ್ಲಿಮರ ಮತ್ತು ಅವಿಶ್ವಾಸಿಗಳ ಮಧ್ಯೆ ನಡೆದ ಯುದ್ಧಗಳಲ್ಲಿ ಶಾಂತಿ ಸಂಧಾನಗಳು ನಡೆಯಲಿಲ್ಲ ಅಥವಾ ಯಾವುದಾದರೂ ಒಂದು ಪಕ್ಷದವರು ಆಯುಧ ಕೆಳಗಿಟ್ಟು ಶರಣಾಗಲೂ ಇಲ್ಲ.

ಪುರಾತನ ಕಾಲದ ಸಂಪ್ರದಾಯಗಳ ಪ್ರಕಾರ ಯುದ್ಧದ ಮಧ್ಯೆ ಬಿಡುವಿನ ಕಾಲ ಇರುತ್ತಿತ್ತು. ಆದರೆ ಯುದ್ಧ ಜಾರಿಯಲ್ಲಿರುವ ಬಗ್ಗೆ ಹೇಳುವುದಾದರೆ, ಒಮ್ಮೆ ಯುದ್ಧ ಪ್ರಾರಂಭವಾದರೆ ಅದು ಜಾರಿಯಾಗಿಯೇ ಇರುತ್ತಿತ್ತು. ಅದು ಮುಕ್ತಾಯವಾಗುತ್ತಲೇ ಇರಲಿಲ್ಲ. ಆದುದರಿಂದ ಮುಸ್ಲಿಮರು ತಾವು ಬಯಸಿದಾಗ ಶತ್ರುಗಳ ಮೇಲೆ ಆಕ್ರಮಣ ಮಾಡಿ ಅವರನ್ನು ಶರಣಾಗತರಾಗಲು ನಿರ್ಬಂಧಿಸಬಹುದಾಗಿತ್ತು. ಆದರೆ ಮುಸ್ಲಿಮರು ಹಾಗೆ ಮಾಡಲಿಲ್ಲ. ಯುದ್ಧದ ಮಧ್ಯೆ ಬಿಡುವಿನ ಕಾಲದಲ್ಲಿ ಮುಸ್ಲಿಮರು ಸುಮ್ಮನೆ ಇರುತ್ತಿದ್ದರು. ಅವರು ಹಾಗೆ ವರ್ತಿಸುತ್ತಾ ಇದ್ದುದು ಪ್ರಾಯಶಃ ಈ ಬಿಡುವಿನ ಕಾಲದಲ್ಲಿ ಶಾಂತಿ ಸಂಧಾನದ ಏರ್ಪಾಡು ನಡೆಯಲಿ ಮತ್ತು ಯುದ್ಧ ಕೊನೆಗೊಳ್ಳಲಿ ಎಂಬ ಉದ್ದೇಶದಿಂದಾಗಿತ್ತು. ಆದರೆ ಒಂದು ದೀರ್ಘ ಕಾಲಾವಧಿ ತನಕ ಅವಿಶ್ವಾಸಿಗಳಿಂದ ಶಾಂತಿ ಸಂಧಾನದ ಪ್ರಸ್ತಾಪ ಬರದುದರಿಂದ ಮತ್ತು ಅವರು ಮುಸ್ಲಿಮರಿಗೆ ಶರಣಾಗತರೂ ಆಗದುದರಿಂದ ಹಾಗೂ ಅವರ ವಿರೋಧವು ಹೆಚ್ಚು ಉತ್ಸಾಹಭರಿತವಾಗುತ್ತಾ ಇದ್ದುದರಿಂದ ಯುದ್ಧದ ಅಂತಿಮವಾದ ಎರಡು ಪರಿಣಾಮಗಳಲ್ಲಿ ಒಂದು ಪರಿಣಾಮವು ಕಾರ್ಯಗತವಾಗುವ ತನಕ ಯುದ್ಧ ಮಾಡುವುದು ಮುಸ್ಲಿಮರಿಗೆ ಆವಶ್ಯಕವಾಯಿತು. ಒಂದೋ ಶಾಂತಿ ಸಂಧಾನವಾಗಬೇಕು ಅಥವಾ ಯುದ್ಧನಿರತ ಪಕ್ಷಗಳಲ್ಲಿ ಒಂದು ಇನ್ನೊಂದಕ್ಕೆ ಶರಣಾಗತವಾಗಬೇಕು. ಇವೇ ಯುದ್ಧದಿಂದ ಉದ್ದೇಶಿಸಲಾಗುವ ಎರಡು ಪರಿಣಾಮಗಳಾಗಿವೆ. ಇವೆರಡು ಅಂತಿಮ ಪರಿಣಾಮಗಳಲ್ಲಿ ಒಂದು ಜಾರಿಗೊಂಡರೆ ದೇಶದಲ್ಲಿ ಶಾಂತಿ ಸ್ಥಾಪಿತವಾಗಬಹುದಿತ್ತು.

ಕಂದಕ ಯುದ್ಧದ ನಂತರ ಹಝ್ರತ್ ಪೈಗಂಬರ್(ಸ) ಹೀಗೆ ನಿರ್ಧರಿಸಿದರು; ಯುದ್ಧದ ಎರಡು ಅಂತಿಮ ಪರಿಣಾಮಗಳಲ್ಲಿ ಒಂದು ಜಾರಿಗೊಳ್ಳುವ ಹಾಗೆ ನಾವು ಮಾಡುವೆವು. ನಮ್ಮ ಮತ್ತು ಅವಿಶ್ವಾಸಿಗಳ ಮಧ್ಯೆ ಒಂದೋ ಶಾಂತಿ ಸಂಧಾನವಾಗಬೇಕು ಅಥವಾ ಎರಡು ಪಕ್ಷಗಳಲ್ಲಿ ಒಂದು ಪಕ್ಷದವರು ಆಯುಧ ಕೆಳಗಿರಿಸಿ ಇನ್ನೊಂದು ಪಕ್ಷಕ್ಕೆ ಶರಣಾಗಬೇಕು. ಇಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ.



ಆಯುಧಗಳನ್ನು ಕೆಳಗಿಟ್ಟು ಶರಣಾಗಬೇಕಾದವರು ಅವಿಶ್ವಾಸಿಗಳೇ ಆಗಿದ್ದರು. ಏಕೆಂದರೆ ಇಸ್ಲಾಮಿನ ವಿಜಯದ ಬಗ್ಗೆ ಅಲ್ಲಾಹನಿಂದ ಶುಭವಾರ್ತೆ ಇಷ್ಟರಲ್ಲಿಯೇ ಲಭಿಸಿತ್ತು. ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಜೀವಿಸಿದ್ದ ಕಾಲದಲ್ಲಿಯೇ ಇಸ್ಲಾಮ್ ಜಯಗಳಿಸುವ ಬಗ್ಗೆ ಪ್ರಕಟಿಸಿದ್ದರು. ಇನ್ನುಳಿದ ವಿಷಯ ಶಾಂತಿ ಸಂಧಾನವಾಗಿದೆ. ಶಾಂತಿ ಸಂಧಾನದ ಪ್ರಸ್ತಾಪವು ಗೆದ್ದವರ ಕಡೆಯಿಂದ ಅಥವಾ ಸೋತವರ ಕಡೆಯಿಂದ ಬರಬೇಕಾಗಿದೆ. ಸೋತ ಪಕ್ಷವು ಶಾಂತಿಯ ಪ್ರಸ್ತಾಪವನ್ನು ಮುಂದಿಟ್ಟರೆ ಅದರ ಅರ್ಥವೇನೆಂದರೆ, ಸೋತ ಪಕ್ಷವು ತನ್ನ ರಾಜ್ಯದ ಒಂದು ಭಾಗವನ್ನು ಅಥವಾ ತನ್ನ ರಾಷ್ಟ್ರೀಯ ಆದಾಯದ ಒಂದು ಭಾಗವನ್ನು ಗೆದ್ದ ಪಕ್ಷಕ್ಕೆ ಸ್ಥಿರವಾಗಿ ಅಥವಾ ತಾತ್ಕಾಲಿಕವಾಗಿ ನೀಡಲು ಸಮ್ಮತಿ ಸೂಚಿಸುತ್ತದೆ ಮತ್ತು ಕೆಲವು ಸಂದರ್ಭಗಳಲ್ಲಿ ಗೆದ್ದ ಪಕ್ಷದವರು ವಿಧಿಸುವ ಶರತ್ತುಗಳನ್ನು ಅಂಗೀಕರಿಸುತ್ತದೆ. ಗೆದ್ದ ಪಕ್ಷದವರು ಸೋತ ಪಕ್ಷದವರಿಗೆ ಶಾಂತಿ ಸಂಧಾನದ ಪ್ರಸ್ತಾಪ ಮಾಡಿದರೆ ಅದರ ಅರ್ಥ: "ನಾವು ನಿಮ್ಮನ್ನು ಸಂಪೂರ್ಣವಾಗಿ ಜಜ್ಜಿಹಾಕಲು ಉದ್ದೇಶಿಸುವುದಿಲ್ಲ. ನೀವು ಕೆಲವು ಶರ್ತಗಳಿಗನುಸಾರವಾಗಿ ನಮ್ಮ ವಿಧೇಯತೆ ಅಥವಾ ಅಧೀನತೆಯನ್ನು ಒಪ್ಪಿಕೊಳ್ಳುವುದಾದರೆ ನಿಮ್ಮ ಸ್ವಾತಂತ್ರ್ಯ ಅಥವಾ ಪರಿಮಿತ ಸ್ವಾತಂತ್ರ್ಯವನ್ನು ನಾವು ಅಂಗೀಕರಿಸುವೆವು" ಎಂದಾಗುತ್ತದೆ.

ಮಕ್ಕದ ಅವಿಶ್ವಾಸಿಗಳು ಮತ್ತು ಹಝ್ರತ್ ಪೈಗಂಬರರ(ಸ) ಮಧ್ಯೆ ನಡೆದ ಯುದ್ಧಗಳಲ್ಲಿ ಪದೇ ಪದೇ ಅವಿಶ್ವಾಸಿಗಳಿಗೆಯೇ ಪರಾಜಯ ಉಂಟಾಗಿತ್ತು. ಆದರೆ ಈ ಪರಾಜಯದ ಅರ್ಥ ಅವರು ತಮ್ಮ ಉದ್ದೇಶಿತ ಗುರಿಯನ್ನು ತಲಪಲು ಸಮರ್ಥರಾಗಲಿಲ್ಲ ಎಂದು ಮಾತ್ರವಾಗಿತ್ತು. ಆದರೆ ನಿಜವಾದ ಅರ್ಥದಲ್ಲಿ ಅವರು ಸೋಲು ಅನುಭವಿಸಿದರೆಂದು ಹೇಳಬೇಕಾದರೆ ಅವರ ರಕ್ಷಣಾ ಸಾಮರ್ಥ್ಯವು ನಶಿಸಿ ಹೋಗಬೇಕಾಗಿತ್ತು. ಅವರ ಆಕ್ರಮಣಗಳು ನಿಷ್ಫಲವಾದ ಕಾರಣ ಅವರಿಗೆ ಸೋಲಾಯಿತೆಂದು ಪರಿಗಣಿಸಲು ಸಾಧ್ಯವಿರಲಿಲ್ಲ. ಆಕ್ರಮಣಗಾರರ ಆಕ್ರಮಣವು ವಿಫಲವಾಯಿತೆಂದೂ ಆದರೆ ಅವರು ಪುನಃ ಆಕ್ರಮಣ ಮಾಡಿ ತಮ್ಮ ಉದ್ದೇಶವನ್ನು ಸಫಲೀಕರಿಸುವರೆಂದೂ ಅವರ ಪರಾಜಯವು ಸೂಚಿಸುತ್ತಿತ್ತು. ಆದುದರಿಂದ ಯುದ್ಧ ನಿಯಮಗಳ ದೃಷ್ಟಿಯಲ್ಲಿ ಮಕ್ಕದ ಅವಿಶ್ವಾಸಿಗಳು ಸೋತಿರಲಿಲ್ಲ. ಅವರ ಪ್ರಸ್ತುತ ಸ್ಥಿತಿ ಹೇಗಿತ್ತೆಂದರೆ ಅವರ ಆಕ್ರಮಣಕಾರಿ ಕೃತ್ಯಗಳು ಅವರ ಉದ್ದೇಶವನ್ನು ಸಾಧಿಸಿ ಕೊಡಲು ಪರ್ಯಾಪ್ತವಾಗಿರಲಿಲ್ಲ. ತದ್ವಿರುದ್ಧವಾಗಿ ಮುಸ್ಲಿಮರ ರಕ್ಷಣಾ ಸಾಮರ್ಥ್ಯವು ಯುದ್ಧದ ದೃಷ್ಟಿಯಲ್ಲಿ ಕುಂಠಿತವಾಗಿರದಿದ್ದರೂ ಅವರನ್ನು ಬಲಹೀನ ಪಕ್ಷದವರೆಂದು ಪರಿಗಣಿಸಬಹುದಾಗಿತ್ತು. ಏಕೆಂದರೆ ಅವರು ಮೊದಲನೆಯದಾಗಿ ಅಲ್ಪಸಂಖ್ಯಾತರಾಗಿದ್ದರು. ಎರಡನೆಯದಾಗಿ ಅವರು ಯಾವುದೇ ಆಕ್ರಮಣಕಾರಿ ಕೃತ್ಯಗಳನ್ನು ಮಾಡಿರಲಿಲ್ಲ. ಎಂದರೆ ಅವರು ಯಾವುದೇ ಆಕ್ರಮಣವನ್ನು ಸ್ವತಃ ಪ್ರಾರಂಭಿಸಿರಲಿಲ್ಲ. ಅವರು ಅವಿಶ್ವಾಸಿಗಳ ಆಕ್ರಮಣಗಳಿಂದ ಸಂಪೂರ್ಣವಾಗಿ ಸುರಕ್ಷಿತರಾಗಿರುವರೆಂದು ಭಾವಿಸಲು ಅವರಿಗೆ ಸಾಧ್ಯವಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಮುಸ್ಲಿಮರು ಶಾಂತಿ ಸಂಧಾನದ ಪ್ರಸ್ತಾಪವನ್ನು ಅವಿಶ್ವಾಸಿಗಳ ಮುಂದಿರಿಸಿದರೆ

ಅದರ ಅರ್ಥವೇನೆಂದರೆ, ಅವರು ತಮ್ಮನ್ನು ರಕ್ಷಿಸಿಕೊಳ್ಳಲು ಅಸಮರ್ಥರಾಗಿ ಏನಾದರೂ ಕೊಟ್ಟು ತಮ್ಮನ್ನು ಶತ್ರುಗಳ ಬೆನ್ನಟ್ಟುವಿಕೆಯಿಂದ ಬಿಡಿಸಿಕೊಳ್ಳಲು ಬಯಸುತ್ತಾರೆ.

ಇಂತಹ ಪರಿಸ್ಥಿತಿಯಲ್ಲಿ ಮುಸ್ಲಿಮರು ಶಾಂತಿಯ ಪ್ರಸ್ತಾಪವನ್ನು ಶತ್ರುಗಳ ಮುಂದಿಡುತ್ತಿದ್ದರೆ ಅದು ಬಹಳ ಅಪಾಯಕರವಾಗುತ್ತಿತ್ತೆಂದು ಪ್ರತಿಯೊಬ್ಬ ವಿವೇಕಶಾಲಿ ತಿಳಿಯಬಲ್ಲ. ಅಂತಹ ಪ್ರಸ್ತಾಪವು ಅವರ ಅಸ್ತಿತ್ವವನ್ನೇ ಅಳಿಸಿ ಬಿಡುವಂತಹದ್ದಾಗುತ್ತಿತ್ತು. ತಮ್ಮ ಆಕ್ರಮಣಕಾರಿ ಕಾರ್ಯಗಳ ಪರಾಜಯದ ಕಾರಣದಿಂದ ಅವಿಶ್ವಾಸಿಗಳಲ್ಲುಂಟಾದ ನಿರಾಸೆಯು ಈ ಶಾಂತಿ ಸಂಧಾನದ ಪ್ರಸ್ತಾಪದಿಂದ ಹೊಸ ಆಕಾಂಕ್ಷೆಗಳಿಗೆ ಪರಿವರ್ತನೆಗೊಳ್ಳುತ್ತಿತ್ತು. ಮುಸ್ಲಿಮರು ಮದೀನವನ್ನು ವಿನಾಶದಿಂದ ರಕ್ಷಿಸಿದ್ದರೂ ಅವರು ತಮ್ಮ ಅಂತಿಮ ವಿಜಯದ ಬಗ್ಗೆ ನಿರಾಸೆ ಹೊಂದಿದವರಾಗಿದ್ದರೆಂದು ಶತ್ರುಗಳು ಗಣಿಸುತ್ತಿದ್ದರು. ಆದುದರಿಂದ ಶಾಂತಿ ಸಂಧಾನದ ಪ್ರಸ್ತಾಪವು ಮುಸ್ಲಿಮರ ಕಡೆಯಿಂದ ಬರುವುದು ಸಾಧ್ಯವಿರಲಿಲ್ಲ. ಶಾಂತಿ ಪ್ರಸ್ತಾಪವನ್ನು ಮಕ್ಕದವರು ಮಾಡಬೇಕಾಗಿತ್ತು ಅಥವಾ ಯಾವುದಾದರೂ ಮಧ್ಯವರ್ತಿಗಳಾದ ಗೋತ್ರಗಳವರು ಮಾಡಬೇಕಾಗಿತ್ತು. ಆದರೆ ಅರಬ್ ದೇಶದಲ್ಲಿ ಯಾವುದೇ ನಿಷ್ಪಕ್ಷ ಮಧ್ಯವರ್ತಿ ಗೋತ್ರ ಉಳಿದಿರಲಿಲ್ಲ. ಒಂದು ಕಡೆ ಮದೀನದ ಮುಸ್ಲಿಮರು; ಇನ್ನೊಂದು ಕಡೆ ಸಂಪೂರ್ಣ ಅರಬ್ ದೇಶದ ಅವಿಶ್ವಾಸಿಗೋತ್ರಗಳಿದ್ದುವು. ಆದುದರಿಂದ ಶಾಂತಿ ಪ್ರಸ್ತಾಪವನ್ನು ಅವಿಶ್ವಾಸಿಗಳೇ ಮಾಡಬೇಕಾಗಿತ್ತು. ಆದರೆ ಅವರಿಂದ ಯಾವುದೇ ಶಾಂತಿ ಸಂಧಾನದ ಪ್ರಸ್ತಾಪ ಬರುತ್ತಿರಲಿಲ್ಲ. ಈ ಸ್ಥಿತಿ ಒಂದು ನೂರು ವರ್ಷಗಳ ಕಾಲ ಮುಂದುವರಿದಿದ್ದರೂ ಆ ಕಾಲದ ಯುದ್ಧ ನಿಯಮಗಳ ಪ್ರಕಾರ ಅರಬ್ ದೇಶದಲ್ಲಿ ಯುದ್ಧದ ಸ್ಥಿತಿ ಸಹ ಮುಂದುವರಿಯುತ್ತಿತ್ತು.

ಮಕ್ಕದವರಿಂದ ಶಾಂತಿ ಸಂಧಾನದ ಪ್ರಸ್ತಾಪವು ಬರದ ಕಾರಣ ಮತ್ತು ಮದೀನದವರು ಅರಬಿ ಅವಿಶ್ವಾಸಿಗಳ ಅಧೀನತೆಯಲ್ಲಿರಲು ಸಿದ್ಧರಾಗಿರದ ಕಾರಣ ಈಗ ಒಂದೇ ದಾರಿ ಉಳಿದಿತ್ತು. ಮುಸ್ಲಿಮರು ಅರಬಿಗಳ ಐಕ್ಯ ಕೂಟದ ಆಕ್ರಮಣವನ್ನು ನಿಷ್ಫಲಗೊಳಿಸಿದುದರಿಂದ ಮುಸ್ಲಿಮರೇ ಸ್ವತಃ ಯುದ್ಧಕ್ಕಿಳಿದು ಅವಿಶ್ವಾಸಿಗಳಾದ ಅರಬಿಗಳನ್ನು ತಮ್ಮ ಅಧೀನತೆಯನ್ನು ಒಪ್ಪಿಕೊಳ್ಳುವಂತೆ ಮಾಡುವುದು ಅಥವಾ ಶಾಂತಿ ಸಂಧಾನಕ್ಕೆ ಅವರನ್ನು ನಿರ್ಬಂಧಿಸುವುದು.

ಹಝ್ರತ್ ಪೈಗಂಬರ್(ಸ) ಹೀಗೆಯೇ ಮಾಡಿದರು. ಇದು ಬಾಹ್ಯವಾಗಿ ನೋಡಿದರೆ ಯುದ್ಧದ ಮಾರ್ಗವಾಗಿದ್ದರೂ ಶಾಂತಿ ನೆಲೆಸಲು ಇದರ ಹೊರತು ಬೇರೆ ಮಾರ್ಗವಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೀಗೆ ಮಾಡದಿರುತ್ತಿದ್ದರೆ ಅವಿಶ್ವಾಸಿಗಳೊಂದಿಗೆ ಯುದ್ಧವು ನೂರಾರು ವರ್ಷ ಜಾರಿಯಲ್ಲಿರುತ್ತಿತ್ತು. ಹಿಂದೆ ಇಂತಹ ಪರಿಸ್ಥಿತಿಯಲ್ಲಿ ಯುದ್ಧವು ನೂರಾರು ವರ್ಷಗಳ ಕಾಲ ನಡೆಯುತ್ತಾ ಇತ್ತು. ಅರಬಿಗಳ ಕೆಲವು ಯುದ್ಧಗಳು ಮೂವತ್ತು ನಲ್ವತ್ತು ವರ್ಷಗಳ ತನಕ



ಮುಂದುವರಿಯುತ್ತಿತ್ತು. ಈ ಯುದ್ಧಗಳು ಹೀಗೆ ಮುಂದುವರಿಯಲು ಕಾರಣ ಈ ಯುದ್ಧಗಳನ್ನು ಕೊನೆಗೊಳಿಸಲು ಯಾವುದೇ ಮಾರ್ಗವನ್ನು ಕೈಗೊಳ್ಳದುದರಿಂದಾಗಿತ್ತು. ಯುದ್ಧವನ್ನು ಕೊನೆಗೊಳಿಸಲು ನಾನು ಇದರ ಮೊದಲು ಬರೆದಂತೆ ಎರಡೇ ಎರಡು ಮಾರ್ಗಗಳಿವೆ. ಯುದ್ಧ ಹೇಗೆ ನಡೆಸಬೇಕೆಂದರೆ ಎರಡು ಸ್ಪಷ್ಟ ಪರಿಣಾಮಗಳಲ್ಲಿ ಒಂದನ್ನು ಕೃತಿಗಿಳಿಸಬೇಕು. ಒಂದೋ ಎರಡು ಪಕ್ಷಗಳಲ್ಲಿ ಒಂದು ಸೋಲನ್ನೊಪ್ಪಿ ಆಯುಧ ಕೆಳಗಿಡಬೇಕು. ಅಥವಾ ಪರಸ್ಪರ ಒಪ್ಪಿಗೆಯಿಂದ ಸಂಧಾನ ಮಾಡಬೇಕು.

ಹಝ್ರತ್ ಪೈಗಂಬರ್(ಸ) ಮದೀನದಲ್ಲಿಯೇ ಕುಳಿತಿದ್ದು ಸ್ವತಃ ಆಕ್ರಮಣಕ್ಕಾಗಿ ಮುಂದುವರಿಯದೆ ಇರಬಹುದಿತ್ತಲ್ಲ ಎಂಬ ಪ್ರಶ್ನೆ ಇಲ್ಲಿ ಉದಿಸುತ್ತದೆ. ಆದರೆ ಯುದ್ಧದ ಅಸ್ತಿಭಾರವನ್ನು ಅವಿಶ್ವಾಸಿಗಳು ಹಾಕಿದುದರಿಂದ ಹಝ್ರತ್ ಪೈಗಂಬರ್(ಸ) ಸುಮ್ಮನೆ ನಿಷ್ಕ್ರಿಯವಾಗಿ ಕುಳಿತರೆ ಅದರ ಅರ್ಥ ಯುದ್ಧವು ಕೊನೆಗೊಂಡಿದೆ ಎಂದಾಗುತ್ತಿರಲಿಲ್ಲ. ಅದರ ಅರ್ಥ ಯುದ್ಧದ ಬಾಗಿಲು ಎಂದೆಂದಿಗೂ ತೆರೆದಿಡಲಾಗಿದೆ ಎಂದೇ ಆಗುತ್ತಿತ್ತು. ಅವಿಶ್ವಾಸಿಗಳು ಯಾವುದೇ ಪ್ರಚೋದನೆಯಿಲ್ಲದೆ ತಮಗಿಷ್ಟ ಬಂದಾಗ ಮದೀನವನ್ನು ಆಕ್ರಮಿಸಬಹುದಾಗಿತ್ತು. ಆ ಕಾಲದ ಸಂಪ್ರದಾಯ ಪ್ರಕಾರ ಅದು ಅವರಿಗೆ ನ್ಯಾಯಬದ್ಧವಾಗಿದೆ ಎಂದು ಅವರು ಗ್ರಹಿಸುತ್ತಿದ್ದರು. ಏಕೆಂದರೆ ಯುದ್ಧದ ಮಧ್ಯೆ ವಿರಾಮವುಂಟಾದರೆ ಅದರ ಅರ್ಥ ಯುದ್ಧ ಕೊನೆಗೊಂಡಿತು ಎಂದು ಆಗುತ್ತಿರಲಿಲ್ಲ. ವಿರಾಮ ಕಾಲವನ್ನು ಸಹ ಯುದ್ಧದ ಕಾಲಾವಧಿಗೆ ಸೇರಿಸಿ ಎಣಿಸಲಾಗುತ್ತಿತ್ತು. ಈ ಸಂದರ್ಭದಲ್ಲಿ ಕೆಲವರ ಹೃದಯದಲ್ಲಿ ಒಂದು ಪ್ರಶ್ನೆ ಉದಿಸಬಹುದು. ಒಂದು ಸತ್ಯಧರ್ಮಕ್ಕಾಗಿ ಯುದ್ಧ ಮಾಡುವುದು ನ್ಯಾಯಬದ್ಧವೇ?

## ಯುದ್ಧದ ಬಗ್ಗೆ ಯಹೂದಿ ಧರ್ಮ ಮತ್ತು ಕ್ರೈಸ್ತ ಧರ್ಮದ ಉಪದೇಶಗಳು

ಈ ಮೇಲಿನ ಪ್ರಶ್ನೆಗೆ ಉತ್ತರ ನೀಡುವುದು ಆವಶ್ಯಕವೆಂದು ನಾನು ಗ್ರಹಿಸುತ್ತೇನೆ. ವಿವಿಧ ಧರ್ಮಗಳು ಯುದ್ಧದ ಬಗ್ಗೆ ವಿವಿಧ ಉಪದೇಶಗಳನ್ನು ನೀಡಿವೆ. ಯುದ್ಧದ ಬಗ್ಗೆ ಹಝ್ರತ್ ಮೂಸಾ ಪ್ರವಾದಿಯ(ಅ) ಉಪದೇಶ ಹೇಗಿತ್ತೆಂದು ನಾನು ಈ ಮೊದಲೇ ಉಲ್ಲೇಖಿಸಿರುವೆನು.

ಕಾನಾನ್ಯವನ್ನು ಬಲಾತ್ಕಾರದಿಂದ ನುಗ್ಗಿ ಅಲ್ಲಿನ ಜನಾಂಗದವರನ್ನು ಸೋಲಿಸಿ ಆ ಪ್ರದೇಶದಲ್ಲಿ ತನ್ನ ಕೋಮಿನ ಜನರನ್ನು ವಾಸಿಸುವಂತೆ ಮಾಡಬೇಕೆಂದು ಹಝ್ರತ್ ಮೂಸಾ ಪ್ರವಾದಿಯವರಿಗೆ ಆಜ್ಞಾಪಿಸಲಾಗಿತ್ತು ಎಂದು ಬೈಬಲ್ ಹೇಳುತ್ತದೆ. (ಬೈಬಲ್ ಹಳೆ ಒಡಂಬಡಿಕೆ ಧರ್ಮೋಪದೇಶಕಾಂಡ 20:10–18 ನೋಡಿರಿ.)

ಹಝ್ರತ್ ಮೂಸಾ ಪ್ರವಾದಿ ಈ ರೀತಿ ಉಪದೇಶ ನೀಡಿದ್ದರೂ ಈ ಉಪದೇಶದ ಪ್ರಕಾರ ಅವರ ನಂತರ ಯಹೋಶುವ, ದಾವೂದ್ ಮತ್ತು ಇತರ ಪ್ರವಾದಿಗಳು ನಿರಂತರವಾಗಿ ವರ್ತಿಸಿದ್ದರೂ ಯಹೂದಿಯರೂ ಕ್ರೈಸ್ತರೂ

ಇವರನ್ನೆಲ್ಲಾ ದೇವನ ಪ್ರವಾದಿಗಳೆಂದೂ ಹಝ್ರತ್ ಮೂಸಾಪ್ರವಾದಿಯ ಗ್ರಂಥವನ್ನು ದೈವಿಕ ಗ್ರಂಥವೆಂದೂ ಗೌರವಿಸುತ್ತಾರೆ. ಹಝ್ರತ್ ಮೂಸಾ ಪ್ರವಾದಿಯ ಪ್ರವಾದಿತ್ವ ಶೃಂಖಲೆಯ ಕೊನೆಯಲ್ಲಿ ಆಗಮಿಸಿದ ಹಝ್ರತ್ ಈಸಾ ಪ್ರವಾದಿ(ಅ), "ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು" (ಮತ್ತಾಯ 5:39) ಎಂದು ಹೇಳಿದ್ದರು.

ಈ ಉಪದೇಶದ ಆಧಾರದಿಂದ ಕ್ರೈಸ್ತರು, ಹಝ್ರತ್ ಈಸಾ ಪ್ರವಾದಿ (ಯೇಸು ಕ್ರಿಸ್ತ) ಎಲ್ಲಾ ಜನಾಂಗಗಳನ್ನು ಯುದ್ಧದಿಂದ ತಡೆದಿರುವರು ಎಂದು ಹೇಳುತ್ತಾರೆ.

ಆದರೆ ಬೈಬಲಿನ ಹೊಸ ಒಡಂಬಡಿಕೆಯ ಸುವಾರ್ತೆಗಳಲ್ಲಿ ಈ ಉಪದೇಶಕ್ಕೆ ವಿರುದ್ಧವಾದ ಉಪದೇಶಗಳನ್ನು ಸಹ ಹಝ್ರತ್ ಈಸಾ ಪ್ರವಾದಿ ನೀಡಿದುದಾಗಿ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ ಈ ಕೆಳಗಿನ ಬೈಬಲ್ ವಾಕ್ಯ ನೋಡಿರಿ:

"ಭೂಲೋಕದ ಮೇಲೆ ಸಮಾಧಾನವನ್ನು ಹುಟ್ಟಿಸುವುದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವುದಕ್ಕೆ ಬಂದೆನು." (ಮತ್ತಾಯ 10:34)

ಇನ್ನೊಂದು ಬೈಬಲ್ ವಾಕ್ಯ ಹೀಗಿದೆ: "ಅದಕ್ಕೆ ಆತನು, ಈಗಲಾದರೋ ಹಮ್ಮೀಣಿಯಿದ್ದವನು ಅದನ್ನು ತಕ್ಕೊಳ್ಳಲಿ, ಹಸಿಬೆಯಿದ್ದವನು ಅದನ್ನು ತಕ್ಕೊಳ್ಳಲಿ, ಮತ್ತು ಕತ್ತಿಯಿಲ್ಲದವನು ತನ್ನ ಮೇಲಂಗಿಯನ್ನು ಮಾರಿ ಒಂದು ಕತ್ತಿಯನ್ನು ಕೊಂಡುಕೊಳ್ಳಲಿ." (ಲೂಕ 22:36).

ಮೇಲೆ ಉಲ್ಲೇಖಿಸಿದ ವಾಕ್ಯಗಳಲ್ಲಿ ಕೊನೆಯ ಎರಡು ವಾಕ್ಯಗಳು ಮೊದಲಿನ ವಾಕ್ಯಕ್ಕೆ ವಿರುದ್ಧವಾದ ಉಪದೇಶವನ್ನು ನೀಡುತ್ತದೆ. ಯೇಸು ಯುದ್ಧಮಾಡಿಸಲಿಕ್ಕೆ ಬಂದಿದ್ದರೆ ಒಂದು ಕೆನ್ನೆಗೆ ಹೊಡೆತ ತಿಂದು ಇನ್ನೊಂದು ಕೆನ್ನೆಯನ್ನು ಒಡ್ಡುವುದರ ಅರ್ಥವಾದರೂ ಏನು? ಒಂದೋ ಈ ಎರಡು ಉಪದೇಶಗಳು ಪರಸ್ಪರ ವಿರುದ್ಧವಾಗಿವೆ ಎಂದು ಸಮ್ಮತಿಸಬೇಕು ಅಥವಾ ಯಾವುದಾರೊಂದು ಉಪದೇಶವನ್ನು ಇನ್ನೊಂದಕ್ಕೆ ಹೊಂದಿಕೆಯಾಗುವ ಹಾಗೆ ವ್ಯಾಖ್ಯಾನಿಸಬೇಕು.

ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ಒಡ್ಡಬೇಕೆಂಬ ಉಪದೇಶ ಅನುಕರಣೆಗೆ ಯೋಗ್ಯವೋ ಅದನ್ನು ಕೃತಿಗಿಳಿಸಲು ಸಾಧ್ಯವೋ ಎಂಬುದರ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಿಲ್ಲ. ಆದರೆ ನಾನು ಇಲ್ಲಿ ಒಂದು ವಿಷಯ ಸ್ಪಷ್ಟಪಡಿಸುತ್ತೇನೆ. ಕ್ರೈಸ್ತ ಧರ್ಮದವರ ಚರಿತ್ರೆಯನ್ನು ಪರಿಶೋಧಿಸುವುದಾದರೆ, ಅವರು ಒಮ್ಮೆಯೂ ಯುದ್ಧದ ಬಗ್ಗೆ ಅತೃಪ್ತಿಯನ್ನು ಪ್ರಕಟಿಸಲಿಲ್ಲ. ಕ್ರೈಸ್ತ ಧರ್ಮ ರೋಮಿನಲ್ಲಿ ಜಯಗಳಿಸಿದಾಗ ಅದು ಅನ್ಯ ಜನಾಂಗದವರ ವಿರುದ್ಧ ಯುದ್ಧಮಾಡಿತ್ತು. ಕ್ರೈಸ್ತ ಧರ್ಮಾವಲಂಬಿಗಳು ಆತ್ಮ ರಕ್ಷಣೆಗೆ ಮಾತ್ರವಲ್ಲ, ಆಕ್ರಮಣಕಾರಿ ಯುದ್ಧಗಳನ್ನು ಸಹ ಮಾಡಿದ್ದರು. ಈಗ ಕ್ರೈಸ್ತ ಧರ್ಮೀಯರು



ಲೋಕದಲ್ಲಿ ಪ್ರಭುತ್ವಗಳಿಸಿದ್ದರೂ ಈಗಲೂ ಸಹ ಅವರು ಯುದ್ಧಗಳನ್ನು ಮಾಡುತ್ತಿದ್ದಾರೆ. ಆತ್ಮರಕ್ಷಕ ಯುದ್ಧಗಳನ್ನೂ ಆಕ್ರಮಣಕಾರಿ ಯುದ್ಧಗಳನ್ನೂ ಅವರು ಮಾಡುತ್ತಿದ್ದಾರೆ.

ಯುದ್ಧದಲ್ಲಿ ಜಯಗಳಿಸುವವರ ಬಗ್ಗೆ ಅವರು ಕ್ರೈಸ್ತವ ನಾಗರಿಕತೆಯ ನಿಯಮಗಳನ್ನು ಪಾಲಿಸುತ್ತಾರೆಂದು ಹೇಳಲಾಗುತ್ತದೆ. ಆದರೆ ಅವರು ಕ್ರೈಸ್ತವ ನಾಗರಿಕತೆಯ ನಿಯಮಗಳೆಂದು ಹೇಳುವುದು ಜಯಗಳಿಸಿದವರ ನಡೆವಳಿಕೆಯನ್ನಾಗಿದೆ. ಈ ಶಬ್ದದ ವಾಸ್ತವಿಕ ಅರ್ಥ ಈಗ ಏನೂ ಬಾಕಿಯಾಗಿ ಉಳಿದಿಲ್ಲ. ಎರಡು ಕ್ರೈಸ್ತವ ಜನಾಂಗಗಳು ಪರಸ್ಪರ ವಿರುದ್ಧ ಹೋರಾಡುತ್ತಿರುವಾಗ ಪ್ರತಿಯೊಂದು ಜನಾಂಗ ತಾನು ಕ್ರೈಸ್ತವ ನಾಗರಿಕತೆಯನ್ನು ಬೆಂಬಲಿಸುವುದಾಗಿ ಹೇಳಿಕೊಳ್ಳುತ್ತದೆ. ಯಾವುದಾದರೂ ಜನಾಂಗ ಗೆದ್ದರೆ ಆ ಗೆದ್ದ ಜನಾಂಗದ ನಡೆವಳಿಕೆಯ ರೀತಿಯನ್ನು ಕ್ರೈಸ್ತವ ನಾಗರಿಕತೆಯ ರೀತಿ ಎಂದು ಹೇಳಲಾಗುತ್ತದೆ.

ಯೇಸು ಕ್ರಿಸ್ತರ ಕಾಲದಿಂದ ಇಂದಿನವರೆಗೆ ಕ್ರೈಸ್ತವ ಜನಾಂಗಗಳು ಯುದ್ಧಮಾಡುತ್ತಾ ಇವೆ. ಅವರು ಯುದ್ಧಮಾಡುತ್ತಲೇ ಮುಂದುವರಿಯು ವರೆಂದು ನಾವು ಮುಂದಿನ ಕಾಲದ ಬಗ್ಗೆ ನಿರ್ಧರಿಸಬಹುದಾಗಿದೆ.

ಕ್ರೈಸ್ತರು ಮಾಡಿಕೊಂಡಿರುವ ನಿರ್ಧಾರದ ಬಗ್ಗೆ ಹೇಳುವುದಾದರೆ, ಅವರು ಯೇಸು ಕ್ರಿಸ್ತರ "ತನ್ನ ಮೇಲಂಗಿಯನ್ನು ಮಾರಿ ಒಂದು ಕತ್ತಿಯನ್ನು ತೆಗೆದುಕೊಳ್ಳಲಿ" ಮತ್ತು "ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ. ಖಡ್ಗವನ್ನು ಹಾಕುವುದಕ್ಕೆ ಬಂದೆನು" ಈ ಎರಡು ಉಪದೇಶ ವಾಕ್ಯಗಳನ್ನು ಅನುಕರಣೀಯ ತತ್ವಗಳಾಗಿ ಅಂಗೀಕರಿಸಿದ್ದಾರೆ.

"ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಮತ್ತೊಂದು ಕೆನ್ನೆಯನ್ನೂ ಒಡ್ಡು" ಎಂಬ ತತ್ವವು ಕ್ರೈಸ್ತ ಧರ್ಮದ ಆರಂಭ ಕಾಲದಲ್ಲಿ ಅಂದಿನ ಅವರ ಬಲಹೀನ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಂದರ್ಭಿಕವಾಗಿ ಅಂಗೀಕರಿಸಿದ ತತ್ವವಾಗಿರಬಹುದು. ಅಥವಾ ಕ್ರೈಸ್ತರ ಪರಸ್ಪರ ಬಾಂಧವ್ಯಕ್ಕೆ ಈ ತತ್ವವು ಸೀಮಿತವಾಗಿದ್ದಿರಲೂಬಹುದು. ಸರಕಾರಗಳಿಗೆ ಮತ್ತು ಜನಾಂಗಗಳಿಗೆ ಈ ತತ್ವವು ಅನ್ವಯಿಸುವುದಿಲ್ಲ.

ಎರಡನೆಯದಾಗಿ, ಯೇಸು ಕ್ರೈಸ್ತರ ಉಪದೇಶ ವಾಸ್ತವಿಕವಾಗಿ ಶಾಂತಿ ಸಮಾಧಾನದ ಬಗ್ಗೆ ಆಗಿತ್ತೆಂದೂ ಅವರು ಯುದ್ಧದ ಬಗ್ಗೆ ಉಪದೇಶಿಸಿರಲಿಲ್ಲವೆಂದೂ ನಾವು ಭಾವಿಸುವುದಾದರೂ ಸಹ ಆ ತತ್ವದ ವಿರುದ್ಧ ವರ್ತಿಸುವ ವ್ಯಕ್ತಿ ದೇವನಿಂದ ಆಯ್ಕೆಗೊಂಡವನಾಗಲು ಸಾಧ್ಯವಿಲ್ಲ ಎಂದು ಇದರಿಂದ ಸಾಬೀತಾಗುವುದಿಲ್ಲ, ಏಕೆಂದರೆ ಕ್ರೈಸ್ತಲೋಕ ಇಂದು ಸಹ ಹಝ್ರತ್ ಮೂಸಾ, ಹಝ್ರತ್ ಯಹೋಶುವ, ಹಝ್ರತ್ ದಾವೂದ್ ಮೊದಲಾದವರನ್ನು ದೇವಕೃಪೆಗೆ ಪಾತ್ರರಾದವರೆಂದು ಅಂಗೀಕರಿಸುತ್ತದೆ. ಇವರೆಲ್ಲರೂ ಯುದ್ಧ ಮಾಡಲು ಉಪದೇಶ ನೀಡಿರುತ್ತಾರೆ. ಅಲ್ಲದೆ ಕೆಲವು ರಾಷ್ಟ್ರೀಯ ವೀರರು ರಾಷ್ಟ್ರಕ್ಕಾಗಿ ತಮ್ಮ ಜೀವವನ್ನು

ಅಪಾಯಕ್ಕೆ ಒಡ್ಡಿ ಹೋರಾಡಿದಾಗ ವಿವಿಧ ಕಾಲದ ಪೋಪ್ ಮಾಡಿದ ನಿರ್ಧಾರಗಳ ಪ್ರಕಾರ ಈಗ ಸೈಂಟ್ (ಸಂತ) ಎಂದು ಕರೆಯಲ್ಪಡುತ್ತಾರೆ. (ಆದುದರಿಂದ ಕ್ರೈಸ್ತರು ಯುದ್ಧವನ್ನು ನಿಷಿದ್ಧವೆಂದು ಪರಿಗಣಿಸುವುದಿಲ್ಲ).

## ಯುದ್ಧದ ಕುರಿತು ಇಸ್ಲಾಮಿನ ನಿಯಮಗಳು

ಇಸ್ಲಾಮ್ ಧರ್ಮವು ಮೇಲೆ ವಿವರಿಸಲಾದ ಎರಡು ರೀತಿಯ ಉಪದೇಶಗಳ ಮಧ್ಯ ಮಾರ್ಗವನ್ನು ಅವಲಂಬಿಸಿ ಉಪದೇಶ ನೀಡುತ್ತದೆ. ಅದು ಮೂಸಾ ಪ್ರವಾದಿಯ ಉಪದೇಶದಂತೆ "ನೀನು ಆಕ್ರಮಣಕಾರಿಯಾಗಿ ಯಾವುದಾದರೂ ರಾಜ್ಯದಲ್ಲಿ ನುಗ್ಗು ಮತ್ತು ಅಲ್ಲಿನ ಜನಾಂಗವನ್ನು ಕೊಲ್ಲು" ಎಂದು ಹೇಳುವುದಿಲ್ಲ ಮತ್ತು ಈ ಕಾಲದ ವಿಕೃತಗೊಂಡ ಕ್ರೈಸ್ತ ಧರ್ಮದ ಹಾಗೆ ಉಚ್ಚಸ್ವರದಲ್ಲಿ "ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಮತ್ತೊಂದು ಕೆನ್ನೆಯನ್ನೂ ಒಡ್ಡು" ಎಂದು ಹೇಳಿ ಮೆಲ್ಲಗೆ ತನ್ನ ಸಂಗಡಿಗರೊಂದಿಗೆ, "ನಿಮ್ಮ ಅಂಗಿ ಮಾರಿಯಾದರೂ ಕಠಾರಿ ಕೊಳ್ಳಿರಿ" ಎಂದು ಹೇಳುವ ರೀತಿ ಸಹ ವರ್ತಿಸುವುದಿಲ್ಲ. ಇಸ್ಲಾಮ್ ಧರ್ಮ ನೀಡುವ ಉಪದೇಶ ಮನುಷ್ಯನ ಸಹಜ ಪ್ರಕೃತಿಗೆ ಅನುಯೋಜ್ಯವಾಗಿದೆ. ಅದು ಶಾಂತಿ, ಸಮಾಧಾನ ಸ್ಥಾಪಿತವಾಗಲು ಉಪಯುಕ್ತವಾದ ಏಕಮಾತ್ರ ಮಾರ್ಗವಾಗಿದೆ. ಅದು ಉಪದೇಶಿಸುವುದೇನೆಂದರೆ, ನೀನು ಯಾರನ್ನೂ ಆಕ್ರಮಿಸಬೇಡ ಆದರೆ ಯಾರಾದರೂ ನಿನ್ನನ್ನು ಆಕ್ರಮಿಸಿದರೆ ನೀನು ಅವನನ್ನು ಎದುರಿಸದೆ ಇದ್ದರೆ ಕಲಹ ಹೆಚ್ಚಾಗಲು ಮತ್ತು ಶಾಂತಿ ಸಮಾಧಾನ ಭಂಗಗೊಳ್ಳಲು ಕಾರಣವಾಗುವುದಾದರೆ ಅವನ ಆಕ್ರಮಣಕ್ಕೆ ತಕ್ಕುದಾದ ಪ್ರತ್ಯುತ್ತರ ನೀಡು.

ಈ ಒಂದು ಉಪದೇಶದ ಪ್ರಕಾರ ನಡೆದರೆ ಮಾತ್ರ ಲೋಕದಲ್ಲಿ ಶಾಂತಿ ಸಮಾಧಾನ ನೆಲೆಗೊಳ್ಳುವುದು. ಇದೇ ಉಪದೇಶದ ಪ್ರಕಾರ ಹಝ್ರತ್ ಪೈಗಂಬರ(ಸ) ವರ್ತಿಸಿದರು. ಅವರು ಮಕ್ಕದಲ್ಲಿ ನಿರಂತರವಾಗಿ ಶತ್ರುಗಳಿಂದ ಕಷ್ಟವನ್ನು ಅನುಭವಿಸುತ್ತಾ ಇದ್ದರು. ಆದರೆ ಅವರು ಯುದ್ಧಮಾಡಲು ಮುಂದಾಗಲಿಲ್ಲ. ಅವರು ಮದೀನಕ್ಕೆ ವಲಸೆ ಹೋದರು. ಶತ್ರುಗಳು ಅವರನ್ನು ಹಿಂಬಾಲಿಸಿ ಅಲ್ಲಿಗೂ ಆಕ್ರಮಿಸಲು ಬಂದರು. ಆಗ ಅಲ್ಲಾಹನು ಅವರಿಗೆ, ಶತ್ರುಗಳು ಆಕ್ರಮಣಕಾರಿ ಕೃತ್ಯಗಳನ್ನು ಮಾಡುತ್ತಾ ಇರುವುದರಿಂದ ಮತ್ತು ಇಸ್ಲಾಮನ್ನು ಅಳಿಸಿಬಿಡಲು ಉದ್ದೇಶಿಸಿರುವುದರಿಂದ ಸತ್ಯ ಮತ್ತು ಸನ್ಮಾರ್ಗದ ರಕ್ಷಣೆಗಾಗಿ ನೀವು ಅವರನ್ನು ಎದುರಿಸಿ ಎಂದು ಆದೇಶಿಸಿದನು. ಪವಿತ್ರ ಖುರ್‌ಆನ್ ಈ ಬಗ್ಗೆ ನೀಡಿದ ವಿವಿಧ ಆಜ್ಞೆಗಳು ಈ ರೀತಿ ಇವೆ:

1. **"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸೀದಿಗಳೂ ನಿರ್ನಾಮವಾಗುತ್ತಿದ್ದವು. ಅಲ್ಲಿ ದೇವನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ. ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝನ್ನು ನಿಷ್ಠೆಯಿಂದ ನಿರ್ವಹಿಸುವರು; ಝಕಾತ್ ನೀಡುವರು; ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲಾ ಕಾರ್ಯಗಳ ಅಂತ್ಯ ಪರಿಣಾಮ ಅಲ್ಲಾಹನ ಕೈಯಲ್ಲಿದೆ."** (22:40–42)



ಮುಸ್ಲಿಮರಿಗೆ ಯುದ್ಧ ಮಾಡಲಿಕ್ಕೆ ಅನುಮತಿ ನೀಡಲು ಅವತೀರ್ಣವಾದ ಈ ಪವಿತ್ರ ಖುರ್‌ಆನ್ ವಚನಗಳಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ: ಯಾವುದಾದರೂ ಕೋಮಿನ ಜನರು ಬೇರೆ ಕೋಮಿನ ಜನರನ್ನು ದೀರ್ಘ ಕಾಲದಿಂದ ದೌರ್ಜನ್ಯಕ್ಕೆ ಗುರಿಪಡಿಸುತ್ತಿದ್ದರೆ, ದೌರ್ಜನ್ಯಗಾರರಾದ ಕೋಮಿನ ಜನರು ನಿಷ್ಕಾರಣವಾಗಿ ಯುದ್ಧದ ಘೋಷಣೆ ಮಾಡಿದರೆ ಮತ್ತು ಧರ್ಮದ ಆಚರಣೆಗೆ ಅಡಚಣೆ ಉಂಟುಮಾಡುವುದಾದರೆ ಅಂತಹ ಸಂದರ್ಭದಲ್ಲಿ ದೌರ್ಜನ್ಯ ಪೀಡಿತ ಕೋಮಿನ ಜನರು ತಮಗೆ ಶಕ್ತಿ ಲಭಿಸಿದರೆ ಧಾರ್ಮಿಕ ಸ್ವಾತಂತ್ರ್ಯವನ್ನು ಗಳಿಸಲು ಪ್ರಯತ್ನಿಸುವುದು ಇಸ್ಲಾಮೀ ತತ್ವಗಳ ಪ್ರಕಾರ ಕಡ್ಡಾಯವಾಗಿದೆ. ಅವರಿಗೆ ಅಲ್ಲಾಹನು ಜಯವನ್ನು ದಯಪಾಲಿಸಿದರೆ ಅವರು ಎಲ್ಲಾ ಧರ್ಮಗಳನ್ನು ಸಂರಕ್ಷಿಸಬೇಕು. ಎಲ್ಲಾ ಧರ್ಮಗಳ ಪವಿತ್ರ ಧಾರ್ಮಿಕ ಸ್ಥಳಗಳ ಗೌರವ ಮತ್ತು ಮರ್ಯಾದೆಯನ್ನು ಕಾಪಾಡಬೇಕು. ಅವರು ತಮ್ಮ ವಿಜಯವನ್ನು ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಮತ್ತು ವೈಭವವನ್ನು ತೋರ್ಪಡಿಸಲಿಕ್ಕಾಗಿ ದುರುಪಯೋಗಪಡಿಸಬಾರದು. ಬಡವರ ಸಂರಕ್ಷಣೆ, ರಾಜ್ಯದ ಸುವ್ಯವಸ್ಥೆ ಮತ್ತು ಶಾಂತಿ ಪಾಲನೆಗಾಗಿ ತಮ್ಮ ಸಾಧನ ಸಂಪತ್ತುಗಳನ್ನು ವಿನಿಯೋಗಿಸಬೇಕು.

ಇದು ಸಂಕ್ಷಿಪ್ತವಾಗಿದ್ದರೂ ಎಲ್ಲಾ ವಿಷಯಗಳನ್ನು ಅಡಕಗೊಂಡ ಉಪದೇಶವಾಗಿದೆ. ಮುಸ್ಲಿಮರಿಗೆ ಯುದ್ಧಮಾಡಲು ಅನುಮತಿ ನೀಡಿದುದು ಏಕೆಂದು ಈ ವಚನಗಳಲ್ಲಿ ವಿವರಿಸಲಾಗಿದೆ. ಅವರು ಯುದ್ಧಮಾಡುವುದು ಶತ್ರುಗಳಿಂದ ಯುದ್ಧ ಮಾಡಲಿಕ್ಕೆ ನಿರ್ಬಂಧಿಸಲ್ಪಟ್ಟ ಕಾರಣದಿಂದಾಗಿದೆ. ಆಕ್ರಮಣಕಾರಿ ಯುದ್ಧವು ಇಸ್ಲಾಮಿನಲ್ಲಿ ನಿಷಿದ್ಧವಾಗಿದೆ. ಮುಸ್ಲಿಮರಿಗೆ ಯುದ್ಧದಲ್ಲಿ ನಿಶ್ಚಯವಾಗಿಯೂ ಜಯಸಿಗುವುದೆಂದು ಮುಂಚಿತವಾಗಿ ತಿಳಿಸಲಾಯಿತು. ಆದರೆ ಜಯ ಲಭಿಸಿದರೆ ಆಡಳಿತೆಯ ಮೂಲಕ ತಮ್ಮ ಜೇಬುಗಳನ್ನು ಭರ್ತಿಮಾಡುವುದು ಮತ್ತು ತಮ್ಮ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವುದು ಅವರ ಉದ್ದೇಶ ಲಕ್ಷ್ಯವಾಗಬಾರದು. ಅವರು ಬಡವರ ಸಂರಕ್ಷಣೆ, ಶಾಂತಿ ಪಾಲನೆ ಮತ್ತು ಅಶಾಂತಿಯನ್ನು ನಿವಾರಿಸಿ ಜನರ ಮತ್ತು ದೇಶದ ಅಭಿವೃದ್ಧಿಗಾಗಿ ಪ್ರಯತ್ನಿಸವುದನ್ನು ತಮ್ಮ ಉದ್ದೇಶ ಲಕ್ಷ್ಯವನ್ನಾಗಿ

ಮಾಡಿಕೊಳ್ಳಬೇಕು.

2. ಪವಿತ್ರ ಖುರ್‌ಆನ್ ಇನ್ನೊಂದು ಕಡೆ ಹೀಗೆ ಹೇಳಿದೆ: **"ನಿಮ್ಮ ವಿರುದ್ಧ ಯುದ್ಧಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ. ಅವರನ್ನು (ನಿಮ್ಮೊಡನೆ ಯುದ್ಧ ಮಾಡುವವರನ್ನು) ನೀವು ಕಂಡಲ್ಲಿ ಕೊಲ್ಲಿರಿ. ನಿಮ್ಮನ್ನು ಅವರು ಹೊರ ಅಟ್ಟಿದಲ್ಲಿಂದ ನೀವು ಸಹ ಅವರನ್ನು ಹೊರ ಅಟ್ಟಿರಿ. 'ಫಿತ್ನ' (ಪಿತೂರಿ, ಗಲಭೆ) ಕೊಲೆಗಿಂತ ಕಠಿಣ (ಕೇಡುಂಟು ಮಾಡುತ್ತದೆ). ಮಸ್ಜಿದುಲ್ ಹರಾಮಿನ ಸಮೀಪದಲ್ಲಿ ನೀವು ಅವರೊಡನೆ ಯುದ್ಧಮಾಡಬಾರದು– ಅಲ್ಲಿ ಅವರು ನಿಮ್ಮೊಡನೆ ಯುದ್ಧ ಪ್ರಾರಂಭಿಸಿದರೆ ಹೊರತು. (ಅಲ್ಲಿ ಸಹ) ಅವರು ನಿಮ್ಮೊಡನೆ ಯುದ್ಧ ಮಾಡಿದರೆ ನೀವು ಅವರನ್ನು ವಧಿಸಿರಿ. (ದುಷ್ಕರ್ಮಿಗಳಾದ) ಈ ಅವಿಶ್ವಾಸಿಗಳಿಗೆ ಇದೇ ಶಿಕ್ಷೆ. ಇನ್ನು ಅವರು (ಯುದ್ಧದಿಂದ) ವಿರಮಿಸಿದರೆ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯಾನಿಧಿಯೂ ಆಗಿದ್ದಾನೆ. 'ಫಿತ್ನ' ಇಲ್ಲದಂತಾಗಿ ಧರ್ಮ (ಸ್ವೀಕಾರ) ಅಲ್ಲಾಹನಿಗೋಸ್ಕರವಾಗುವವರೆಗೆ ನೀವು ಅವರೊಡನೆ ಯುದ್ಧಮಾಡಿರಿ. ಆದರೆ ಅವರು ವಿರಮಿಸಿದರೆ, (ಅರಿತುಕೊಳ್ಳಿರಿ) ದುಷ್ಕರ್ಮಿಗಳಲ್ಲದವರ ಮೇಲೆ ಆಕ್ರಮಣ ಸಲ್ಲದು."** (2:191–194)

ಅಂದರೆ, ನಿಮ್ಮ ವಿರುದ್ಧ ಯುದ್ಧ ಮಾಡುವವರ ವಿರುದ್ಧವಾಗಿ ನೀವು ನಿಮ್ಮ ಕೋಪ ಮತ್ತು ಸ್ವಾರ್ಥಕ್ಕಾಗಿ ಯುದ್ಧಮಾಡದೆ ಕೇವಲ ಅಲ್ಲಾಹನ ಮಾರ್ಗದಲ್ಲಿ ಯುದ್ಧಮಾಡಿರಿ. ಆದರೆ ನೀವು ನೆನಪಿಟ್ಟುಕೊಳ್ಳಿರಿ ಯುದ್ಧ ಮಾಡುವಾಗಲೂ ದೌರ್ಜನ್ಯಕರ ಕೃತ್ಯ ಮಾಡಬಾರದು. ಏಕೆಂದರೆ ಅಲ್ಲಾಹನು ದೌರ್ಜನ್ಯಗಾರರನ್ನು ಎಂದೂ ಇಷ್ಟಪಡುವುದಿಲ್ಲ. ನೀವು ನಿಮ್ಮ ಶತ್ರುಗಳನ್ನು ಯುದ್ಧದ ಸ್ಥಿತಿಯಲ್ಲಿ ಎಲ್ಲಿ ಎದುರಿಸಬೇಕಾಗಿ ಬಂದರೂ ಅವರ ವಿರುದ್ಧ ಯುದ್ಧ ಮಾಡಿರಿ. ಒಬ್ಬಿಬ್ಬರನ್ನು ಕಂಡರೆ ಅವರನ್ನು ಆಕ್ರಮಿಸಬೇಡಿರಿ. ನೀವು ಯುದ್ಧಕ್ಕಾಗಿ ಹೊರಡುವಂತೆ ಅವರು ನಿಮ್ಮನ್ನು ನಿರ್ಬಂಧಿಸಿರುವುದರಿಂದ ನೀವು ಸಹ ಅವರಿಗೆ ವಿರುದ್ಧವಾಗಿ ಯುದ್ಧಮಾಡುವ ಪಂಥಾಹ್ವಾನ ನೀಡಿರಿ. ಕೊಲೆ ಮತ್ತು ಯುದ್ಧ ಇವುಗಳಿಗಿಂತ ಧರ್ಮದ ಕಾರಣದಿಂದ ಯಾರಿಗಾದರೂ ಕಷ್ಟಕೊಡುವುದು ಹೆಚ್ಚು ಅಪಾಯಕಾರಿ ಪಾಪವಾಗಿದೆ. ನೀವು ಅಂತಹ ರೀತಿಯನ್ನು ಅವಲಂಬಿಸಬೇಡಿರಿ. ಅದು ಧರ್ಮರಹಿತ ಜನರು ಮಾಡುವ ಕೆಲಸವಾಗಿದೆ. ನೀವು ಪವಿತ್ರ ಮಸ್‌ಜಿದ್ (ಮಸ್ಜಿದುಲ್ ಹರಾಮ್) ಸಮೀಪದಲ್ಲಿ ಅವರು ಅದರ ಸಮೀಪ ಯುದ್ಧವನ್ನು ಪ್ರಾರಂಭಿಸುವ ತನಕ ಯುದ್ಧ ಮಾಡಬಾರದು. ಏಕೆಂದರೆ ಹಜ್ಜ್ ಮತ್ತು ಉಮ್ರಃ ಮಾಡಲು ಅದು ತಡೆಯಾಗುತ್ತದೆ. ಆದರೆ ಅವರು ಸ್ವತಃ ಯುದ್ಧವನ್ನು ಅಲ್ಲಿ ಪ್ರಾರಂಬಿಸಿದರೆ ನೀವು ಅವರಿಗೆ ಪ್ರತ್ಯುತ್ತರ ನೀಡುವ ಅನುಮತಿ ನಿಮಗಿದೆ. ಯಾರು ವಿವೇಕ ಭರಿತವೂ ನ್ಯಾಯ ಬದ್ಧವೂ ಆಗಿರುವ ಆಜ್ಞೆಗಳನ್ನು ತಿರಸ್ಕರಿಸುತ್ತಾರೋ ಅವರ ವಿರುದ್ಧ ಹೀಗೆಯೇ ವರ್ತಿಸಬೇಕಾಗುತ್ತದೆ. ಅವರಿಗೆ ಪ್ರಜ್ಞೆ ಮರುಕಳಿಸಿದರೆ ಮತ್ತು ಅವರು



ಯುದ್ಧವನ್ನು ನಿಲ್ಲಿಸಿದರೆ ಅಲ್ಲಾಹನು ಬಹಳ ಕ್ಷಮಿಸುವವನೂ ದಯೆದೋರುವವನೂ ಆಗಿದ್ದಾನೆ. ಇಂತಹ ಸ್ಥಿತಿಯಲ್ಲಿ ನೀವು ಸಹ ನಿಮ್ಮ ಕೈಗಳನ್ನು ತಡೆದಿಟ್ಟುಕೊಳ್ಳಬೇಕು. ಯುದ್ಧವನ್ನು ಪ್ರಾರಂಭಿಸಿದುದು ಅವರಾಗಿದ್ದರೂ ಆ ಕಾರಣದಿಂದ ನೀವು ಅಂತಹ ಪರಿಸ್ಥಿತಿಯಲ್ಲಿ ಆಕ್ರಮಣ ಮಾಡಬೇಡಿರಿ. ಅವರು ಯುದ್ಧವನ್ನು ಪ್ರಾರಂಭಿಸಿದ ಕಾರಣದಿಂದ ನೀವು ಅವರ ವಿರುದ್ಧ ಯುದ್ಧವನ್ನು ಜಾರಿಗೊಳಿಸಿರಿ. ಧರ್ಮದ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ಅವರು ಬಿಟ್ಟು ಬಿಡುವ ತನಕ ಮತ್ತು ಧರ್ಮದ ವಿಷಯ ಅಲ್ಲಾಹನೊಂದಿಗೆ ಮಾತ್ರ ಸಂಬಂಧ ಹೊಂದಿದೆ ಎಂದು ಅವರು ಅಂಗೀಕರಿಸುವ ತನಕ ಯುದ್ಧವನ್ನು ಜಾರಿಯಲ್ಲಿಡಿರಿ. ಆದರೆ ಧರ್ಮದ ವಿಷಯದಲ್ಲಿ ದೌರ್ಜನ್ಯಕರವಾಗಿ ವರ್ತಿಸುವುದು ಯಾವುದೇ ಮನುಷ್ಯನಿಗೆ ಅನುಮತಿಸಲಾಗಿಲ್ಲ. ಅವರು ವಿರಮಿಸಿದರೆ ಮತ್ತು ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸುವುದಾದರೆ ತಕ್ಷಣ ಯುದ್ಧವನ್ನು ನಿಲ್ಲಿಸಿರಿ. ಏಕೆಂದರೆ ಶಿಕ್ಷೆಯನ್ನು ದೌರ್ಜನ್ಯಗಾರರಿಗೆ ಮಾತ್ರ ನೀಡಲಾಗುತ್ತದೆ. ಅವರು ದೌರ್ಜನ್ಯ ಕೃತ್ಯಗಳಿಂದ ದೂರಸರಿದರೆ ಅವರ ವಿರುದ್ಧ ಯುದ್ಧ ಮಾಡುವುದು ಅನುಯೋಜ್ಯವಾಗಲಾರದು.

ಮೇಲಿನ ಖುರ್‌ಆನ್ ವಚನಗಳಲ್ಲಿ ಹೀಗೆ ಸೂಚಿಸಲಾಗಿದೆ:

a. ಅಲ್ಲಾಹನ ಮಾರ್ಗದಲ್ಲಿ ಮಾತ್ರ ಯುದ್ಧ ಮಾಡಬೇಕು. ಸ್ವಂತ ಆಶೆ ಮತ್ತು ಅಸೂಯೆಗಳಿಗಾಗಿ, ಅನ್ಯದೇಶವನ್ನು ವಶೀಕರಿಸಲು ಮತ್ತು ತನ್ನ ಪ್ರಭಾವ ವರ್ಧಿಸಲಿಕ್ಕಾಗಿ ಯುದ್ಧ ಮಾಡಬಾರದು.

b ಯಾರು ಮೊದಲು ಆಕ್ರಮಣ ಮಾಡುತ್ತಾರೋ ಅವರ ವಿರುದ್ಧ ಮಾತ್ರ ಯುದ್ಧಮಾಡಬೇಕು.

c. ನಿಮ್ಮ ವಿರುದ್ಧ ಯುದ್ಧ ಮಾಡುವವರ ವಿರುದ್ಧ ಮಾತ್ರ ಯುದ್ಧ ಮಾಡಬೇಕು. ಸೈನಿಕರಲ್ಲದವರನ್ನು ಕೊಲ್ಲುವುದು, ಯುದ್ಧದಲ್ಲಿ ನೇರವಾಗಿ ಭಾಗವಹಿಸದವರನ್ನು ಕೊಲ್ಲುವುದು ಅನುಮತಿಸಿಲ್ಲ.

d. ಶತ್ರುವು ಯುದ್ಧವನ್ನು ಪ್ರಾರಂಭಿಸಿದ್ದರೂ ಅವನು ಯುದ್ಧವನ್ನು ಯಾವ ಕ್ಷೇತ್ರಕ್ಕೆ ಸೀಮಿತಪಡಿಸಿರುವನೋ ಆ ಕ್ಷೇತ್ರದೊಳಗೆ ಯುದ್ಧವನ್ನು ಮಾಡಬೇಕು. ಅದರ ಕ್ಷೇತ್ರವನ್ನು ವಿಶಾಲಗೊಳಿಸಲು ಪ್ರಯತ್ನಿಸಬಾರದು. ಯುದ್ಧವನ್ನು ಭೌಗೋಳಿಕವಾಗಿ ಅಥವಾ ಆಯುಧಗಳ ದೃಷ್ಟಿಯಲ್ಲಿ ವಿಶಾಲಗೊಳಿಸಬಾರದು.

e. ಯುದ್ಧವನ್ನು ಸಾಮೂಹಿಕವಾಗಿ ಆಕ್ರಮಿಸುವ ಸೈನಿಕರ ವಿರುದ್ಧ ಮಾತ್ರ ಮಾಡಬೇಕು. ಶತ್ರು ಪಕ್ಷದ ಒಬ್ಬಿಬ್ಬರು ವ್ಯಕ್ತಿಗಳ ವಿರುದ್ಧ ಯುದ್ಧ ಮಾಡಬಾರದು.

f. ಯುದ್ಧ ನಡೆಯುತ್ತಿರುವಾಗ ಧಾರ್ಮಿಕ ಆರಾಧನೆಗೆ ಮತ್ತು ಧಾರ್ಮಿಕ ಅನುಷ್ಠಾನಗಳ ನಿರ್ವಹಣೆಗೆ ಅಡ್ಡಿ ಉಂಟಾಗದಂತೆ ಜಾಗರೂಕರಾಗಿರಬೇಕು. ಶತ್ರುವಿನ ಆರಾಧನಾಲಯದ ಸಮೀಪ ಯುದ್ಧ ಮಾಡುವುದರಿಂದ ಆರಾಧನೆಗೆ ಭಂಗ ಉಂಟಾಗುವಕಾರಣ ಶತ್ರು ಸ್ವತಃ ಅಂತಹ ಸ್ಥಳದಲ್ಲಿ ಯುದ್ಧವನ್ನು ಪ್ರಾರಂಭಿಸುವ

ತನಕ ಮುಸ್ಲಿಮರು ಅಲ್ಲಿ ಯುದ್ಧವನ್ನು ಮಾಡಬಾರದು.

g. ಶತ್ರುಗಳು ಧಾರ್ಮಿಕ ಆರಾಧನಾಲಯಗಳನ್ನು ಯುದ್ಧ ಕ್ಷೇತ್ರಗಳಾಗಿ ಮಾಡಿಕೊಂಡಿದ್ದರೆ ಮುಸ್ಲಿಮರು ಸಹ ಅಲ್ಲಿ ಯುದ್ಧ ಮಾಡಬೇಕಾಗಿ ಬರಬಹುದು. ಆದರೆ ಮುಸ್ಲಿಮರು ಸ್ವತಃ ಅಲ್ಲಿ ಯುದ್ಧ ಪ್ರಾರಂಭಿಸಬಾರದು. ಆರಾಧನಾಲಯಗಳ ಸಮೀಪ ಸಹ ಯುದ್ಧ ಮಾಡಬಾರದೆಂದು ಈ ವಚನಗಳು ಸೂಚಿಸುತ್ತವೆ. ಆರಾಧನಾಲಯಗಳನ್ನು, ಆಕ್ರಮಣ ಮಾಡುವುದು, ಅವುಗಳನ್ನು ಧ್ವಂಸಗೊಳಿಸುವುದು, ಅವುಗಳನ್ನು ಕೆಡವಿ ಹಾಕುವುದು ಇವುಗಳಿಗೆ ಆಸ್ಪದವೇ ಇಲ್ಲ. ಆದರೆ ಶತ್ರು ಆರಾಧನಾಲಯವನ್ನು ಯುದ್ಧದ ಕೋಟೆಯನ್ನಾಗಿ ಮಾಡಿಕೊಂಡರೆ ಅದಕ್ಕುಂಟಾಗುವ ಹಾನಿಗಳಿಗೆ ಅವನೇ ಹೊಣೆಗಾರನಾಗುವನು. ಅದರ ಹಾನಿಯ ಹೊಣೆಗಾರಿಕೆಯನ್ನು ಮುಸ್ಲಿಮರ ಮೇಲೆ ಹೊರಿಸಲಾಗದು.

h. ಶತ್ರುವು ಧಾರ್ಮಿಕ ಸ್ಥಳದಲ್ಲಿ ಯುದ್ಧ ಪ್ರಾರಂಭಿಸಿದ ನಂತರ ಅದರಿಂದ ಉಂಟಾಗುವ ಅಪಾಯಕರ ಪರಿಣಾಮಗಳನ್ನು ಅರಿತುಕೊಂಡರೆ ಮತ್ತು ಧಾರ್ಮಿಕ ಸ್ಥಳದಿಂದ ಹೊರಗೆ ಬಂದು ಬೇರೆ ಒಂದು ಸ್ಥಳವನ್ನು ರಣಾಂಗಣವಾಗಿ ಮಾಡಿಕೊಂಡರೆ ಅಲ್ಲಿ ಮೊದಲು ಶತ್ರುಗಳು ಯುದ್ಧವನ್ನು ಪ್ರಾರಂಭಿಸಿದರೆಂಬ ನೆಪದಿಂದ ಮುಸ್ಲಿಮರು ಆ ಧಾರ್ಮಿಕ ಸ್ಥಳಕ್ಕೆ ಹಾನಿಯನ್ನುಂಟುಮಾಡಬಾರದು. ಆ ಧಾರ್ಮಿಕ ಸ್ಥಳದ ಗೌರವ ಮತ್ತು ಪಾವಿತ್ರ್ಯವನ್ನು ಒಪ್ಪಿಕೊಂಡು ಕೂಡಲೆ ತಮ್ಮ ಆಕ್ರಮಣದ ಗುರಿಯನ್ನು ಬದಲಾಯಿಸಬೇಕು.

i. ಧಾರ್ಮಿಕ ಅನುಷ್ಠಾನ ಕರ್ಮಗಳಲ್ಲಿ ಶತ್ರುಗಳ ಹಸ್ತಕ್ಷೇಪವು ಕೊನೆಗೊಳ್ಳುವ ತನಕ ಮತ್ತು ಧರ್ಮ ಪರಿವರ್ತನೆ ಮನಸ್ಸಾಕ್ಷಿಯ ನಿರ್ಧಾರಕ್ಕೆ ಸಂಬಂಧಿಸಿದುದೆಂದು ಅಂಗೀಕರಿಸುವ ತನಕ ಹಾಗೂ ರಾಜಕೀಯ ವಿಷಯಗಳಿಗೆ ಸಂಬಂಧಿಸುವ ಹಾಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಶತ್ರುಗಳು ನಿಲ್ಲಿಸುವ ತನಕ ಯುದ್ಧವನ್ನು ಮುಂದುವರಿಸಬೇಕು. ಶತ್ರುಗಳು ಈ ಬಗ್ಗೆ ಪ್ರಕಟನೆ ನೀಡಿದರೆ ಮತ್ತು ಹಸ್ತಕ್ಷೇಪ ಮಾಡುವುದನ್ನು ತ್ಯಜಿಸಿದರೆ ಆಕ್ರಮಣವನ್ನು ಪ್ರಾರಂಭಿಸಿದುದು ಶತ್ರುಗಳಾದರೂ ಅವರ ವಿರುದ್ಧ ಯುದ್ಧವನ್ನು ಮುಂದುವರಿಸಬಾರದು.

3. ಪವಿತ್ರ ಖುರ್‌ಆನ್ ಹೀಗೆಯೂ ಹೇಳಿದೆ: **"ಅವಿಶ್ವಾಸಿಗಳೊಡನೆ ಹೇಳು: ಅವರು (ದುಷ್ಕೃತ್ಯಗಳನ್ನು) ತೊರೆದರೆ, ಮುಂಚೆ ಗೈದುದೆಲ್ಲ ಅವರಿಗೆ ಕ್ಷಮಿಸಲಾಗುವುದು. ಇನ್ನು ಅವರು (ಅಕ್ರಮದೆಡೆಗೇ) ಮರಳಿದರೆ, ಪೂರ್ವ ಜನಾಂಗಕ್ಕೆ ಬಂದಿದ್ದ ಸ್ಥಿತಿಯ ಉದಾಹರಣೆ ಖಂಡಿತವಾಗಿಯೂ (ಅವರ ಮುಂದೆ) ಇದೆ. 'ಫಿತ್ನ' (ಹಿಂಸಾಚಾರ) ಕೊನೆಗೊಳ್ಳುವ ತನಕ ಮತ್ತು ಧರ್ಮ (ಸ್ವೀಕಾರವು) ಸಂಪೂರ್ಣವಾಗಿ ಅಲ್ಲಾಹನಿಗೋಸ್ಕರ ಆಗುವ ವರೆಗೆ ನೀವು ಅವರೊಡನೆ ಹೋರಾಡಿರಿ. ಆದರೆ ಅವರು ಹಿಂಸೆ ತೊರೆದರೆ ಅವರ ವರ್ತನೆಯನ್ನು ಅಲ್ಲಾಹನು ಖಂಡಿತವಾಗಿಯೂ ಸೂಕ್ಷ್ಮಾವಲೋಕನ ಮಾಡುವವನಾಗಿದ್ದಾನೆ. ಇನ್ನು, ಅವರು ಹಿಮ್ಮೆಟ್ಟಿದರೆ, ನಿಶ್ಚಯವಾಗಿಯೂ ಅಲ್ಲಾಹನು ನಿಮ್ಮ ಸಂರಕ್ಷಕನೆಂದು ಅರಿತುಕೊಳ್ಳಿರಿ. ಅವನೇ ಅತ್ಯುತ್ತಮನಾದ ಸಂರಕ್ಷಕನು ಹಾಗೂ**



**ಅವನೇ ಅತ್ಯುತ್ತಮನಾದ ಸಹಾಯಕನು".** (8 : 39–41)

ಅಂದರೆ, ಓ ಮುಹಮ್ಮದ್, ಶತ್ರುಗಳು ಯುದ್ಧವನ್ನು ಪ್ರಾರಂಭಿಸಿದರು. ಅಲ್ಲಾಹನ ಆಜ್ಞೆ ಪ್ರಕಾರ ನೀನು ಅವರಿಗೆ ಅದರ ಪ್ರತಿಕ್ರಿಯೆ ನೀಡಬೇಕಾಯಿತು. ನೀನು ಅವರಿಗೆ ತಿಳಿಯಪಡಿಸು; ಈಗ ಯುದ್ಧದಿಂದ ಅವರು ಹಿಂದೆ ಸರಿದರೆ ಅವರು ಮಾಡಿದವುಗಳನ್ನು ಅವರಿಗೆ ಕ್ಷಮಿಸಿ ಕೊಡಲಾಗುವುದು. ಆದರೆ ಅವರು ಯುದ್ಧದಿಂದ ಹಿಂದೆ ಸರಿದು ಹೋಗದಿದ್ದರೆ ಮತ್ತು ಪದೇ ಪದೇ ಆಕ್ರಮಣ ಮಾಡುವುದಾದರೆ ಹಿಂದಿನ ಕಾಲದ ಪ್ರವಾದಿಗಳ ಶತ್ರುಗಳಿಗೆ ಸಂಭವಿಸಿದ ಅಂತಿಮ ಪರಿಣಾಮವನ್ನು ಅವರು ಸಹ ಅನುಭವಿಸುವರು. ಓ ಮುಸ್ಲಿಮರೇ, ಧರ್ಮದ ಕಾರಣದಿಂದ ಕಷ್ಟ ಕೊಡುವುದು ನಿಲ್ಲುವ ತನಕ, ಧರ್ಮವನ್ನು ಸಂಪೂರ್ಣವಾಗಿ ಅಲ್ಲಾಹನ ಮೇಲ್ವಿಚಾರಣೆಗೆ ವಹಿಸಿಕೊಡುವ ತನಕ ಮತ್ತು ಧರ್ಮದ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸುವ ತನಕ ನೀವು ಯುದ್ಧವನ್ನು ಜಾರಿಗೊಳಿಸಿರಿ. ಆ ಜನರು ಈ ಎಲ್ಲಾ ವಿಷಯಗಳಿಂದ ದೂರಸರಿದರೆ ಅವರು ಒಂದು ಮಿಥ್ಯ ಧರ್ಮದ ಅನುಯಾಯಿಗಳೆಂಬ ಕಾರಣದಿಂದ ಮಾತ್ರ ಯುದ್ಧವನ್ನು ಮುಂದುವರಿಸಬೇಡಿರಿ. ಅಲ್ಲಾಹನು ಅವರ ಕೃತ್ಯಗಳನ್ನು ಅರಿತುಕೊಂಡಿದ್ದಾನೆ. ಅವನು ಇಚ್ಛಿಸುವ ಹಾಗೆ ಅವರೊಂದಿಗೆ ವರ್ತಿಸುವನು. ಅವರ ಮಿಥ್ಯ ಧರ್ಮದ ಕಾರಣದಿಂದ ನೀವು ಅವರ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ಅನುಮತಿ ನೀಡಲಾಗದು. ನಮ್ಮ ಈ ಶಾಂತಿ ಪ್ರಸ್ತಾಪದ ನಂತರ ಯಾರು ಯುದ್ಧದಿಂದ ದೂರಸರಿಯುವುದಿಲ್ಲವೋ ಮತ್ತು ಯುದ್ಧವನ್ನು ಮುಂದುವರಿಸುತ್ತಾ ಹೋಗುತ್ತಾರೋ ಅಂತಹ ಜನರ ಕುರಿತು ಮುಸ್ಲಿಮರಾದ ನೀವು ತಿಳಿದುಕೊಳ್ಳಿರಿ. ನೀವು ಅಲ್ಪ ಸಂಖ್ಯಾತರಾಗಿದ್ದರೂ ನೀವೇ ಜಯಗಳಿಸುವಿರಿ. ಏಕೆಂದರೆ ಅಲ್ಲಾಹನು ನಿಮ್ಮ ಸ್ನೇಹಿತನಾಗಿದ್ದಾನೆ. ಅಲ್ಲಾಹನಿಗಿಂತ ಉತ್ತಮ ಸ್ನೇಹಿತನೂ ಉತ್ತಮ ಸಹಾಯಕನೂ ಬೇರೆ ಯಾರಿದ್ದಾರೆ?

ಮೇಲಿನ ಪವಿತ್ರ ಖುರ್‌ಆನ್ ವಚನಗಳು ಬದ್ರ್ ಯುದ್ಧದ ಕುರಿತು ಪ್ರಸ್ತಾಪಿಸಿದ ನಂತರ ಅವತೀರ್ಣಗೊಂಡುವು. ಬದ್ರ್ ಯುದ್ಧವು ಅವಿಶ್ವಾಸಿಗಳ ಮತ್ತು ಮುಸ್ಲಿಮರ ಮಧ್ಯೆ ನಡೆದ ಪ್ರಥಮ ಕ್ರಮಬದ್ಧ ಯುದ್ಧವಾಗಿತ್ತು. ಅವಿಶ್ವಾಸಿಗಳು ನಿಷ್ಕಾರಣವಾಗಿ ಮುಸ್ಲಿಮರನ್ನು ಆಕ್ರಮಿಸಿದ್ದರೂ ಮದೀನದ ಸುತ್ತು ಮುತ್ತಲಿನ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಿದ್ದರೂ ಶತ್ರುಗಳ ದೊಡ್ಡ ಮುಂದಾಳುಗಳು ಹತರಾಗಿ ಮುಸ್ಲಿಮರು ಜಯಶಾಲಿಗಳಾಗಿದ್ದರೂ ಹಝ್ರತ್ ಪೈಗಂಬರ್(ಸ) ಮೂಲಕ ಖುರ್‌ಆನ್‌ನಲ್ಲಿ ಹೀಗೆ ಪ್ರಕಟವಾಗಿತ್ತು:

ಈಗಲಾದರೂ ನೀವು ದುರಾಕ್ರಮಣಗಳನ್ನು ನಿಲ್ಲಿಸುವುದಾದರೆ ನಾವು ಯುದ್ಧವನ್ನು ಮುಂದುವರಿಸುವುದಿಲ್ಲ. ನಾವು ಕೇವಲ ಬಯಸುವುದೇನೆಂದರೆ, ಬಲಾತ್ಕಾರದಿಂದ ಧರ್ಮ ಪರಿವರ್ತನೆ ಮಾಡಬಾರದು ಮತ್ತು ಧರ್ಮದ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದು.

4. ಪವಿತ್ರ ಖುರ್‌ಆನ್ ಇನ್ನೊಂದು ಕಡೆಯಲ್ಲಿ ಹೀಗೆ ಹೇಳಿದೆ: **"ಅವರು ಶಾಂತಿಯೆಡೆಗೆ ವಾಲಿದರೆ ನೀನು ಸಹ ಅದಕ್ಕೆ ಒಪ್ಪು. ಅಲ್ಲಾಹನ ಮೇಲೆ ಭರವಸೆಯನ್ನಿಡು. ಖಂಡಿತವಾಗಿಯೂ ಅವನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ. ಅವರು ನಿನ್ನನ್ನು ವಂಚಿಸಲು ಉದ್ದೇಶಿಸಿದರೆ ಖಂಡಿತವಾಗಿಯೂ ಅಲ್ಲಾಹನು ನಿನಗೆ ಸಾಕು. ತನ್ನ ನೆರವಿನಿಂದಲೂ ಸತ್ಯವಿಶ್ವಾಸಿಗಳಿಂದಲೂ ಅವನೇ ನಿನಗೆ ಶಕ್ತಿ ನೀಡಿದನು."** (8:62–63)

ಅಂದರೆ, ಅವಿಶ್ವಾಸಿಗಳು ಯಾವಾಗಲಾದರೂ ಶಾಂತಿ ಸಂಧಾನದ ಕಡೆಗೆ ಬಾಗಿದರೆ ನೀನು ತಕ್ಷಣ ಅವರ ಮಾತನ್ನು ಅಂಗೀಕರಿಸು. ನೀನು ಶಾಂತಿ ಸಂಧಾನ ಮಾಡಿಕೋ. ಅವರು ಪ್ರಾಯಶಃ ಮೋಸಗಾರಿಕೆಯಿಂದ ವರ್ತಿಸುತ್ತಿದ್ದಾರೆ ಎಂದು ಶಂಕಿಸಬೇಡ. ನೀನು ಅಲ್ಲಾಹನ ಮೇಲೆ ಭರವಸೆ ಇಡು. ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸುವವನೂ ಎಲ್ಲವನ್ನು ತಿಳಿದವನೂ ಆಗಿರುವನು. ಅವರು ಮೋಸದಿಂದ ವರ್ತಿಸುತ್ತಾರೆಂಬ ನಿನ್ನ ಯೋಚನೆ ಸರಿಯಾಗಿದ್ದರೂ ಅವರು ವಾಸ್ತವಿಕವಾಗಿ ನಿನಗೆ ಮೋಸಮಾಡಲು ನಿರ್ಧಾರ ಮಾಡಿದ್ದರೂ ನೀನು ನೆನಪಿಡು; ಅವರು ಮೋಸಮಾಡುವುದರಿಂದ ಅವರಿಗೆ ಸಿಗುವ ಲಾಭವಾದರೂ ಏನು? ನಿನಗೆ ಅಲ್ಲಾಹನ ಸಹಾಯದಿಂದಲೇ ಜಯ ಲಭಿಸುತ್ತಾ ಇದೆ. ಅವನ ಸಹಾಯ ನಿನಗೆ ಸಾಕು. ಹಿಂದೆ ಅವನೇ ನೇರವಾಗಿ ಮತ್ತು ಸತ್ಯ ವಿಶ್ವಾಸಿಗಳ ಮೂಲಕ ನಿನಗೆ ಸಹಾಯ ನೀಡುತ್ತಾ ಇದ್ದನು.

ಶತ್ರುಗಳು ಶಾಂತಿ ಸಂಧಾನದ ಪ್ರಸ್ತಾಪ ಮಾಡಿದರೆ ಮುಸ್ಲಿಮರು ಅದನ್ನು ಅಂಗೀಕರಿಸಬೇಕೆಂದು ಈ ವಚನಗಳಲ್ಲಿ ಹೇಳಲಾಗಿದೆ. ಶಾಂತಿ ಸಂಧಾನದ ತತ್ವಗಳನ್ನು ಬಾಹ್ಯವಾಗಿ ಶತ್ರುವು ಅಂಗೀಕರಿಸಲು ಸಿದ್ಧನಾದರೆ, ಅವನು ದುರುದ್ದೇಶದಿಂದ ಹೀಗೆ ಮಾಡುತ್ತಾನೆಂದೂ ತನ್ನನ್ನು ಬಲಪಡಿಸಿಕೊಂಡ ನಂತರ ಅವನು ಒಪ್ಪಂದವನ್ನು ಉಲ್ಲಂಘಿಸಿ ಪುನಃ ಆಕ್ರಮಣ ಮಾಡಲು ಉದ್ದೇಶಿಸುತ್ತಾನೆಂದೂ ನೆವನಗಳನ್ನು ಹೇಳಿ ಶಾಂತಿ ಸಂಧಾನದ ಪ್ರಸ್ತಾಪವನ್ನು ತಳ್ಳಬಾರದು.

ಈ ವಚನಗಳಲ್ಲಿ ವಾಸ್ತವಿಕವಾಗಿ ಹುದೈಬಿಯಾ ಸಂಧಿಯ ಬಗ್ಗೆ ಭವಿಷ್ಯ ನುಡಿಯಲಾಗಿದೆ. ಈ ವಚನಗಳಲ್ಲಿ ಸೂಚಿಸಲಾಗಿರುವುದೇನೆಂದರೆ, ಒಂದು ಕಾಲವು ಬರಲಿದೆ. ಆಗ ಶತ್ರುಗಳು ನಿಮ್ಮೊಂದಿಗೆ ಶಾಂತಿ ಸಂಧಾನ ಮಾಡಲು ಬಯಸುವರು. ಆಗ ನೀವು "ಶತ್ರುಗಳು ದೌರ್ಜನ್ಯವೆಸಗಿರುವರು ಎಂದೂ ಅವರು ಅನಂತರ ಒಪ್ಪಂದವನ್ನು ಮುರಿಯುವರು ಎಂದೂ ನೆಪಹೇಳಿ ಶಾಂತಿ ಸಂಧಾನ ಪ್ರಸ್ತಾಪವನ್ನು ನಿರಾಕರಿಸಬಾರದು. ಒಳಿತು ಆವಶ್ಯಪಡುವುದು ಮತ್ತು ನಿಮಗೆ ಲಾಭಕರವಾಗಿರುವುದು ಶಾಂತಿ ಸಂಧಾನ ಪ್ರಸ್ತಾಪವನ್ನು ಅಂಗೀಕರಿಸುವುದಾಗಿದೆ.

5. ಪವಿತ್ರ ಖುರ್‌ಆನ್ ಇನ್ನೊಂದು ಕಡೆ ಹೀಗೆ ಹೇಳಿದೆ:

**"ಓ ವಿಶ್ವಾಸಿಗಳೇ ನೀವು ಅಲ್ಲಾಹನ ಮಾರ್ಗದಲ್ಲಿ ಸಂಚರಿಸುವಾಗ ಕೂಲಂಕಷವಾಗಿ ಪರಿಶೀಲನೆ ಮಾಡಿರಿ. ಯಾರಾದರೂ ನಿಮಗೆ ಶಾಂತಿಯ ವಚನವನ್ನು**



**ಹಾರೈಸಿದರೆ, 'ನೀನು ವಿಶ್ವಾಸಿಯಲ್ಲ' ಎಂದು ಹೇಳಬೇಡಿರಿ. ನೀವು ಇಹಲೋಕದ ವಸ್ತುಗಳನ್ನು ಬಯಸುತ್ತೀರಿ. ಆದರೆ ಅಲ್ಲಾಹನ ಬಳಿ ಧಾರಾಳ ಸಂಪತ್ತಿದೆ. ಇದಕ್ಕೆ ಮುಂಚೆ ನೀವು ಸಹ ಅವರಂತೆ ಇದ್ದಿರಿ. ನಂತರ ಅಲ್ಲಾಹನು ನಿಮ್ಮನ್ನು ಅನುಗ್ರಹಿಸಿದನು. ಆದ್ದರಿಂದ ನೀವು ಸೂಕ್ಷ್ಮವಾಗಿ ಪರಿಶೀಲಿಸಿಕೊಳ್ಳಿರಿ. ನಿಶ್ಚಯವಾಗಿಯೂ ನಿಮ್ಮ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲನು."** (4:95)

ಅಂದರೆ, ಓ ಸತ್ಯ ವಿಶ್ವಾಸಿಗಳೇ, ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧಕ್ಕಾಗಿ ಹೊರಡುವಾಗ ನಿಮ್ಮ ಶತ್ರುಗಳ ಕುರಿತು ಚೆನ್ನಾಗಿ ಪರಿಶೀಲಿಸಿರಿ. ಅವರು ಎಲ್ಲಾ ವಿಷಯಗಳನ್ನು ಅರಿತುಕೊಂಡು ಯುದ್ಧಕ್ಕೆ ಸಿದ್ಧರಾಗಿರುವರೆಂದು ಖಾತರಿ ಮಾಡಿಕೊಳ್ಳಿರಿ. ಯಾರಾದರೂ ವ್ಯಕ್ತಿ ಅಥವಾ ಜನರ ಗುಂಪು ನಿಮ್ಮೊಂದಿಗೆ ನಾವು ಶಾಂತಿ ಸಂಧಾನ ಮಾಡಲು ಬಯಸುತ್ತೇವೆ ಎಂದು ಹೇಳಿದರೆ "ನೀವು ವಂಚನೆ ಮಾಡುತ್ತಿರುವಿರಿ, ನಿಮ್ಮಿಂದ ನಾವು ಯಾವುದೇ ಉಪದ್ರವವಿಲ್ಲದೆ ಸ್ವಸ್ಥರಾಗಿರುವೆವು ಎಂದು ನಾವು ಪ್ರತೀಕ್ಷಿಸುವುದಿಲ್ಲ" ಎಂದು ಹೇಳಬೇಡಿರಿ. ನೀವು ಹಾಗೆ ಹೇಳುವಿರಾದರೆ ನೀವು ಅಲ್ಲಾಹನ ಮಾರ್ಗದಲ್ಲಿ ಹೋರಾಡುವವರಾಗಲಾರಿರಿ. ನೀವು ಲೌಕಿಕ ಲಾಭವನ್ನು ಆಶಿಸುವವರಾಗಿ ಗಣಿಸಲ್ಪಡುವಿರಿ. ನೀವು ಹಾಗೆ ಮಾಡಬೇಡಿರಿ, ಯಾವ ರೀತಿ ಅಲ್ಲಾಹನ ಬಳಿಯಲ್ಲಿ ಧರ್ಮವಿದೆಯೋ ಅದೇ ರೀತಿ ಅಲ್ಲಾಹನ ಬಳಿಯಲ್ಲಿ ಲೌಕಿಕ ಸಾಮಗ್ರಿಗಳೂ ಬಹಳ ಇವೆ. ಯಾರನ್ನಾದರೂ ಕೊಲ್ಲುವುದು ಮುಖ್ಯ ಉದ್ದೇಶವಲ್ಲವೆಂದು ನೀವು ನೆನಪಿಡಬೇಕು. ನಿಮಗೇನು ಗೊತ್ತಿದೆ? ಅವನು ನಾಳೆ ಸನ್ಮಾರ್ಗ ಗಳಿಸಲೂಬಹುದು. ನೀವು ಸಹ ಇದರ ಮೊದಲು ಇಸ್ಲಾಮ್ ಧರ್ಮದಿಂದ ಹೊರಗೆ ಇದ್ದಿರಿ. ಅಲ್ಲಾಹನು ನಿಮಗೆ ಉಪಕಾರಮಾಡಿದನು; ನೀವು ಈ ಧರ್ಮವನ್ನು ಸೇರುವ ಭಾಗ್ಯವನ್ನು ನಿಮಗೆ ದಯಪಾಲಿಸಿದನು. ಆದುದರಿಂದ ಕೊಲ್ಲುವುದಕ್ಕೆ ಆತುರಪಡಬೇಡಿರಿ. ನೀವು ವಾಸ್ತವಿಕ ಸ್ಥಿತಿಯನ್ನು ಪರಿಶೀಲಿಸಿರಿ. ನೀವು ಮಾಡುವುದನ್ನೆಲ್ಲಾ ಅಲ್ಲಾಹನು ಚೆನ್ನಾಗಿ ತಿಳಿದುಕೊಳ್ಳುತ್ತಾನೆ ಎಂಬುದನ್ನು ನೆನಪಿಡಿರಿ.

ಈ ಮೇಲಿನ ಖುರ್‌ಆನ್ ವಚನದಲ್ಲಿ ಹೇಳಿರುವುದೇನೆಂದರೆ, ಯುದ್ಧವು ಪ್ರಾರಂಭವಾದರೂ ಶತ್ರುವು ಆಕ್ರಮಣಕಾರಿ ಯುದ್ಧಮಾಡಲು ಬಯಸುತ್ತಾನೋ ಎಂಬುದರ ಕುರಿತು ಚೆನ್ನಾಗಿ ಪರಿಶೀಲಿಸಬೇಕು. ಶತ್ರುವು ಆಕ್ರಮಣಕಾರಿ ಯುದ್ಧವನ್ನು ಮಾಡಲು ಬಯಸದೆ ಕೇವಲ ಯಾವುದೋ ಭಯದ ಕಾರಣದಿಂದ ಯುದ್ಧ ಮಾಡಲು ಸಿದ್ಧತೆಗಳನ್ನು ಮಾಡುತ್ತಿರಲೂ ಬಹುದು. ಆದುದರಿಂದ ಚೆನ್ನಾಗಿ ಪರಿಶೀಲನೆ ನಡೆಸಬೇಕು. ಶತ್ರುವಿನ ಉದ್ದೇಶವು ಆಕ್ರಮಣಕಾರಿ ಯುದ್ಧಮಾಡುವುದಾಗಿದ್ದರೆ ಅವನನ್ನು ಎದುರಿಸಬೇಕು. ಅವನು, "ನನ್ನ ಉದ್ದೇಶ ಯುದ್ಧ ಮಾಡುವುದಾಗಿರಲಿಲ್ಲ. ನಾನು ಭಯದಿಂದ ಯುದ್ಧಕ್ಕಾಗಿ ಸಿದ್ಧತೆಗಳನ್ನು ಮಾಡುತ್ತಿದ್ದೆ" ಎಂದು ಹೇಳುವುದಾದರೆ ನೀವು ಅವನಿಗೆ, "ನೀನು ಯುದ್ಧಕ್ಕಾಗಿ ಮಾಡುವ ಸಿದ್ಧತೆಗಳು ನೀನು ನಮ್ಮನ್ನು ಆಕ್ರಮಣ ಮಾಡಲು ಬಯಸುತ್ತಿರುವುದನ್ನು

ಸೂಚಿಸುತ್ತವೆ. ನಾವು ನಿನ್ನ ಆಕ್ರಮಣಗಳಿಂದ ಸುರಕ್ಷಿತರಾಗಿರುವೆವು ಎಂದು ಹೇಗೆ ತಾನೆ ತಿಳಿಯಬಲ್ಲೆವು?" ಎಂದು ಹೇಳಬಾರದು. ಅವನ ಮಾತುಗಳನ್ನು ಅಂಗೀಕರಿಸಬೇಕು. ಅವನ ನಿರ್ಧಾರ ಅದರ ಮೊದಲು ಯುದ್ಧ ಮಾಡುವುದಾಗಿದ್ದರೂ ಅವನ ನಿರ್ಧಾರದಲ್ಲಿ ಅನಂತರ ಬದಲಾವಣೆ ಉಂಟಾಗುವುದು ಸಂಭಾವ್ಯವಾಗಿದೆ. ನೀವು ಈ ವಿಷಯಕ್ಕೆ ಜೀವಂತ ಸಾಕ್ಷಿ ಆಗಿರುವಿರಿ. ಹೃದಯಗಳಲ್ಲಿ ಪರಿವರ್ತನೆ ಉಂಟಾಗುತ್ತದೆ. ನೀವು ಇದರ ಮೊದಲು ಇಸ್ಲಾಮಿನ ಶತ್ರುಗಳಾಗಿದ್ದಿರಿ. ಈಗ ನೀವು ಇಸ್ಲಾಮಿನ ಯೋಧರಾಗಿರುವಿರಿ.

6. ಶತ್ರುಗಳೊಂದಿಗೆ ಮಾಡಿದ ಒಡಂಬಡಿಕೆ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ಬಹುದೇವಾರಾಧಕರ ಪೈಕಿ ಯಾರು ನಿಮ್ಮೊಂದಿಗೆ ಯಾವುದಾದರೂ ಒಡಂಬಡಿಕೆ ಮಾಡಿಕೊಂಡಿರುವರೋ, ಅನಂತರ ಅವರು ಆ ಒಡಂಬಡಿಕೆಯನ್ನು ಮುರಿದಿಲ್ಲವೋ ಮತ್ತು ನಿಮ್ಮ ವಿರುದ್ಧ ನಿಮ್ಮ ಶತ್ರುಗಳಿಗೆ ಸಹಾಯ ಮಾಡಿಲ್ಲವೋ ಅಂತಹ ಜನರೊಂದಿಗೆ ಒಡಂಬಡಿಕೆಯ ಕಾಲಾವಧಿಯ ತನಕ ನೀವು ಸಹ ಒಡಂಬಡಿಕೆಯನ್ನು ಪಾಲಿಸಿರಿ. ಇದೇ ಭಯ ಭಕ್ತಿಯ ಚಿಹ್ನೆಯಾಗಿದೆ. ಅಲ್ಲಾಹನು ಭಯ ಭಕ್ತಿಯುಳ್ಳವರನ್ನು ಇಷ್ಟಪಡುತ್ತಾನೆ."** (9:4)

7. ಯುದ್ಧ ಮಾಡುತ್ತಿರುವ ಶತ್ರು ಜನರಲ್ಲಿ ಯಾರಾದರೂ ಇಸ್ಲಾಮ್ ಧರ್ಮದ ಬಗ್ಗೆ ತಿಳಿಯಲು ಇಚ್ಚಿಸುವುದಾದರೆ ಅಂತಹವರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **"ಬಹುದೇವಾರಾಧಕರಲ್ಲಿ ಯಾರಾದರೂ ನಿನ್ನೊಡನೆ ಅಭಯ ಯಾಚಿಸಿದರೆ, ಅವನಿಗೆ ಆಶ್ರಯ ನೀಡು. ಹಾಗೆ ಅವನು ಅಲ್ಲಾಹನ ವಚನ ಆಲಿಸುವಂತಾಗಲಿ. ಅನಂತರ ಅವನನ್ನು ಅವನ ಸುರಕ್ಷಿತ ಸ್ಥಳಕ್ಕೆ ತಲಪಿಸು. ಇದು (ಈ ರಿಯಾಯಿತಿ) ಅವರು ತಿಳುವಳಿಕೆಯಿಲ್ಲದ ಜನರಾದುದರಿಂದಾಗಿದೆ."** (9:6)

ಅಂದರೆ, ಯುದ್ಧಮಾಡುತ್ತಿರುವ ಬಹುದೈವಾರಾಧಕರಲ್ಲಿ ಯಾರಾದರೂ ನಿಮ್ಮ ಆಶ್ರಯವನ್ನು ಬೇಡಿಕೊಂಡು ನಿಮ್ಮ ನಾಡಿಗೆ ಬಂದು ಇಸ್ಲಾಮಿನ ಬಗ್ಗೆ ಅಧ್ಯಯನ ಮಾಡಲು ಇಚ್ಚಿಸುವುದಾದರೆ ನೀವು ಅಗತ್ಯವಾಗಿ ಆಶ್ರಯನೀಡಬೇಕು – ಅವನು ಇಸ್ಲಾಮಿನ ಬಗ್ಗೆ ಅಧ್ಯಯನ ನಡೆಸಿ ಪವಿತ್ರ ಖುರ್‌ಆನ್ ಪ್ರಸ್ತಾಪಿಸುವ ವಿಷಯಗಳನ್ನು ಮನವರಿಕೆ ಮಾಡಿಕೊಳ್ಳುವ ತನಕ. ಅನಂತರ ಅವನು ಹೋಗಲು ಬಯಸುವ ಸ್ಥಳಕ್ಕೆ, ಅವನು ತನಗೆ ಸುರಕ್ಷಿತವಾಗಿದೆ ಎಂದು ಭಾವಿಸುವ ಸ್ಥಳಕ್ಕೆ ನೀವು ರಕ್ಷಣೆ ನೀಡಿ ತಲಪಿಸಿರಿ.

8. ಯುದ್ಧ ಕೈದಿಗಳ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ತನ್ನ ಶತ್ರುವನ್ನು ಕೈದಿಯನ್ನಾಗಿ ಮಾಡಿಕೊಳ್ಳುವುದು ಯಾವುದೇ ಪ್ರವಾದಿಗೆ ಶೋಭಾಯಮಾನವಾಗಿರುವುದಿಲ್ಲ. ಆದರೆ ಕ್ರಮಬದ್ಧವಾಗಿ ನಡೆದ ಯುದ್ಧದಲ್ಲಿ ಕೈದಿಯಾಗಿ ಸೆರೆಹಿಡಿಯಲ್ಪಟ್ಟವರು ಇದಕ್ಕೆ ಹೊರತಾಗಿರುತ್ತಾರೆ."** (8:68)

ಆ ಕಾಲ ಘಟ್ಟದಲ್ಲಿ ಮತ್ತು ಅನಂತರ ಹಲವು ನೂರು ವರ್ಷಗಳ ತನಕ ಲೋಕದಲ್ಲಿ ಜಾರಿಯಲ್ಲಿದ್ದ ಸಂಪ್ರದಾಯವು ಶತ್ರು ಜನಾಂಗದ ಜನರನ್ನು



ಯುದ್ಧಮಾಡದೆ ಸೆರೆಹಿಡಿಯುವುದು ನ್ಯಾಯಬದ್ಧವೆಂದಾಗಿತ್ತು. ಅದನ್ನು ಇಸ್ಲಾಮ್ ಧರ್ಮವು ಇಷ್ಟಪಡುವುದಿಲ್ಲ. ಯುದ್ಧರಂಗದಲ್ಲಿ ಹೋರಾಡಿದ ನಂತರ ಸೋತು ಶರಣಾಗತರಾಗುವವರನ್ನು ಮಾತ್ರ ಯುದ್ಧ ಕೈದಿಗಳಾಗಿ ಹಿಡಿಗೂಡಬಹುದೆಂದು ಇಸ್ಲಾಮ್ ಧರ್ಮವು ವಿಧಿಸುತ್ತದೆ.

9. ಯುದ್ಧ ಕೈದಿಗಳ ಕುರಿತು ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: **"ಯುದ್ಧ ಕೈದಿಗಳಾಗಿ ಸೆರೆ ಹಿಡಿಯಲ್ಪಟ್ಟವರನ್ನು ಔದಾರ್ಯ ಪೂರ್ಣವಾಗಿ ವರ್ತಿಸಿ ಬಿಟ್ಟು ಬಿಡಿರಿ. ಅಥವಾ ಪರಿಹಾರ ಪಡೆದು ಬಿಟ್ಟು ಬಿಡಿರಿ."** (47:5)

10. ಯಾವುದಾದರೂ ಕೈದಿಯ ಪರವಾಗಿ ಪರಿಹಾರ ಧನವನ್ನು ನೀಡುವವರು ಯಾರೂ ಇಲ್ಲದಿದ್ದರೆ ಅಥವಾ ಅವನ ಸಂಬಂಧಿಕರು ಅವನ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲು ಅವನು ಕೈದಿಯಾಗಿಯೇ ಇರಲಿ ಎಂದು ಬಯಸುತ್ತಿರುವವರಾದರೆ ಅಂತಹ ಕೈದಿಗಳ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ನಿಮ್ಮ ಅಧೀನದಲ್ಲಿರುವವರ ಪೈಕಿ ಯಾರಾದರೂ ಬಿಡುಗಡೆಯ ಒಪ್ಪಂದವನ್ನು ಬರೆದುಕೊಡಲು ಅಪೇಕ್ಷಿಸಿದರೆ ಅವರಿಗೆ ಅರ್ಹತೆ ಇದೆಯೆಂದು ನಿಮಗೆ ಮನವರಿಕೆಯಾದರೆ ಬರೆದು ಕೊಡಿರಿ. ನಿಮಗೆ ಅಲ್ಲಾಹನು ದಯಪಾಲಿಸಿದ ಸಂಪತ್ತಿನಿಂದ ಅವರಿಗೂ ನೀಡಿರಿ."** (24:34)

ಅಂದರೆ, ನಿಮ್ಮ ಯುದ್ಧ ಕೈದಿಗಳಲ್ಲಿ ನೀವು ಔದಾರ್ಯಪೂರ್ಣವಾಗಿ ಬಿಟ್ಟು ಬಿಡಲಾಗದವರು ಮತ್ತು ಅವರಿಗೆ ಪರಿಹಾರ ನೀಡಿ ಬಿಡುಗಡೆಗೊಳಿಸಲ್ಪಡದವರು ನಿಮ್ಮೊಂದಿಗೆ, "ನಮ್ಮನ್ನು ಬಿಡುಗಡೆ ಮಾಡಿದರೆ ನಮ್ಮ ನೈಪುಣ್ಯತೆಗಳನ್ನು ಬಳಸಿಕೊಂಡು ದುಡಿದು ನಿಮಗೆ ಸಲ್ಲಿಸಬೇಕಾದ ಪರಿಹಾರದ ಹಣವನ್ನು ಕೊಡುವೆವು" ಎಂದು ಹೇಳಿದರೆ, ಅವರು ಸ್ವತಂತ್ರರಾಗಿ ದುಡಿದು ಸಂಪಾದಿಸುವ ಸಾಮರ್ಥ್ಯ ಹೊಂದಿದ್ದರೆ ಅವರನ್ನು ಅಗತ್ಯವಾಗಿ ವಿಮೋಚನೆಗೊಳಿಸಿರಿ. ಅವರ ಪ್ರಯತ್ನದಲ್ಲಿ ನೀವು ಸಹ ಪಾಲುಗಾರರಾಗಿರಿ. ನಿಮಗೆ ಅಲ್ಲಾಹನು ದಯಪಾಲಿಸಿದ ಸಂಪತ್ತಿನಲ್ಲಿ ಸ್ವಲ್ಪ ಹಣವನ್ನು ಅವರ ವಿಮೋಚನೆಗಾಗಿ ವಿನಿಯೋಗಿಸಿರಿ. ಯುದ್ಧಕ್ಕಾದ ಖರ್ಚಿನ ಬಗ್ಗೆ ಕೈದಿಗೆ ವಿಧಿಸಲಾದ ದಂಡದಲ್ಲಿ ಒಂದು ಅಂಶವನ್ನು ಬಿಟ್ಟುಬಿಡಬೇಕು, ಅಥವಾ ಬೇರೆ ಮುಸ್ಲಿಮರು ಒಟ್ಟಿಗೆ ಸೇರಿ ಕೈದಿಗೆ ಆರ್ಥಿಕ ಸಹಾಯ ನೀಡಬೇಕು ಮತ್ತು ಅವನನ್ನು ವಿಮೋಚಿಸಬೇಕು.

ಮೇಲೆ ವಿವರಿಸಲಾದ ಸನ್ನಿವೇಶಗಳಲ್ಲಿ ಇಸ್ಲಾಮ್ ಧರ್ಮವು ಯುದ್ಧಕ್ಕೆ ಅನುಮತಿ ನೀಡಿದೆ. ಇಸ್ಲಾಮ್ ಯುದ್ಧಕ್ಕೆ ವಿಧಿಸಿರುವ ನಿಯಮಗಳು ಮೇಲಿನಂತೆ ಇವೆ. ಪವಿತ್ರ ಖುರ್‌ಆನಿನ ಈ ವಚನಗಳ ಬೆಳಕಿನಲ್ಲಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರಿಗೆ ಯುದ್ಧಕ್ಕೆ ಸಂಬಂಧಿಸಿ ನೀಡಿದ ಹೆಚ್ಚುವರಿ ಉಪದೇಶಗಳು ಈ ಕೆಳಗಿನಂತಿವೆ:

1) ಯುದ್ಧದಲ್ಲಿ ಮೃತರಾದವರ ಮೃತಶರೀರಗಳಿಗೆ ಅಂಗವೈಕಲ್ಯ ಮಾಡುವ

ಅನುಮತಿ ಮುಸ್ಲಿಮರಿಗೆ ಇರುವುದಿಲ್ಲ. ಮೃತ ಶರೀರದ ಅಂಗಾಂಗಾಗಳನ್ನು ಕತ್ತರಿಸಿ ಮೃತರಿಗೆ ಅವಮಾನ ಮಾಡಬಾರದು. (ಮುಸ್ಲಿಮ್)

2) ಮುಸ್ಲಿಮರು ಯುದ್ಧದಲ್ಲಿ ಯಾವುದೇ ವಂಚನೆ ಮಾಡಬಾರದು. (ಮುಸ್ಲಿಮ್)

3) ಮಕ್ಕಳನ್ನೂ ಮಹಿಳೆಯರನ್ನೂ ಕೊಲ್ಲಬಾರದು. (ಮುಸ್ಲಿಮ್)

4) ಪಾದರಿಗಳನ್ನು, ಪಂಡಿತರನ್ನು, ಮತ್ತಿತರ ಧಾರ್ಮಿಕ ನಾಯಕರನ್ನು ಕೊಲ್ಲಬಾರದು. (ತಹಾವೀ)

5) ವೃದ್ಧರನ್ನು ಕೊಲ್ಲಬಾರದು. ಮಕ್ಕಳನ್ನು, ಮಹಿಳೆಯರನ್ನು ಕೊಲ್ಲಬಾರದು. ಯಾವಾಗಲೂ ಶಾಂತಿ ಸಂಧಾನ ಮತ್ತು ಔದಾರ್ಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. (ಅಬೂದಾವೂದ್ )

6) ಮುಸ್ಲಿಮರು ಯುದ್ಧಕ್ಕೆ ಹೊರಟಾಗ ಶತ್ರುಗಳ ದೇಶದಲ್ಲಿ ಭಯದ ಪರಿಸ್ಥಿತಿಯನ್ನು ಉಂಟುಮಾಡಬಾರದು. ಜನಸಾಮಾನ್ಯರೊಂದಿಗೆ ಕ್ರೌರ್ಯದಿಂದ ವರ್ತಿಸಬಾರದು. (ಮುಸ್ಲಿಮ್)

7) ಯುದ್ಧಕ್ಕಾಗಿ ಹೊರಟಾಗ ಜನರಿಗೆ ತೊಂದರೆಯಾಗುವ ಸ್ಥಳದಲ್ಲಿ ಶಿಬಿರ ಹೂಡಬಾರದು. ಸೈನಿಕರು ಮಾರ್ಗದಲ್ಲಿ ಚಲಿಸುವಾಗ ಸಾರ್ವಜನಿಕರಿಗೆ ನಡೆಯಲು ತೊಂದರೆ ಆಗುವ ರೀತಿಯಲ್ಲಿ ಸಂಚಲನೆ ಮಾಡಬಾರದು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾರೆ: ಯಾರು ಈ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸಿ ಯುದ್ಧಮಾಡುತ್ತಾನೋ ಅವನು ಮಾಡುವ ಯುದ್ಧವು ಅವನ ಸ್ವಾರ್ಥಕ್ಕಾಗಿರುವುದು; ಅದು ಅಲ್ಲಾಹನಿಗೆ ಮಾಡುವ ಯುದ್ಧವಾಗಲಾರದು. (ಅಬೂದಾವೂದ್)

8) ಯುದ್ಧದಲ್ಲಿ ಶತ್ರುವಿನ ಮುಖಕ್ಕೆ ಗಾಯಮಾಡಬಾರದು. (ಬುಖಾರಿ, ಮುಸ್ಲಿಮ್)

9) ಯುದ್ಧದಲ್ಲಿ ಶತ್ರುವಿಗೆ ಅತ್ಯಂತ ಕಡಿಮೆ ಹಾನಿಯಾಗುವಂತೆ ಜಾಗರೂಕತೆ ವಹಿಸಬೇಕು. (ಅಬೂದಾವೂದ್)

10) ಬಂಧಿತರಲ್ಲಿ ನಿಕಟ ಸಂಬಂಧಿಕರಿದ್ದರೆ ಅವರನ್ನು ಒಬ್ಬರಿನ್ನೊಬ್ಬರಿಂದ ದೂರದಲ್ಲಿ ಇರಿಸಬಾರದು. (ಅಬೂದಾವೂದ್)

11) ಕೈದಿಗಳ ಸುಖಕ್ಕೆ ತಮ್ಮ ಸ್ವಂತ ಸುಖಕ್ಕಿಂತ ಹೆಚ್ಚಿನ ಲಕ್ಷ್ಯ ನೀಡಬೇಕು. (ತಿರ್‌ಮಿಝೀ)

12) ವಿದೇಶೀಯ ರಾಯಭಾರಿಗಳನ್ನು ಗೌರವಿಸಬೇಕು. ಅವರು ತಪ್ಪು ಮಾಡಿದರೂ ಅದನ್ನು ಕಡೆಗಣಿಸಬೇಕು. (ಅಬೂ ದಾವೂದ್)

13) ಯಾರಾದರೂ ಯುದ್ಧ ಕೈದಿಯೊಂದಿಗೆ ಕ್ರೌರ್ಯದಿಂದ ವರ್ತಿಸಿದರೆ ಆ ಯುದ್ಧಕೈದಿಯನ್ನು ಪರಿಹಾರ ಪಡೆಯದೆ ಬಿಡುಗಡೆ ಗೊಳಿಸಬೇಕು.



14) ಯುದ್ಧ ಕೈದಿ ಯಾರ ವಶಕ್ಕೆ ನೀಡಲ್ಪಟ್ಟಿರುವನೋ ಅವನು ತಾನು ತಿನ್ನುವುದನ್ನೇ ಕೈದಿಗೆ ತಿನ್ನಲು ಕೊಡಬೇಕು. ತಾನು ಧರಿಸುವಂತಹ ಬಟ್ಟೆಗಳನ್ನೇ ಕೈದಿಗೂ ಧರಿಸಲು ಕೊಡಬೇಕು. (ಬುಖಾರಿ)

ಈ ಆಜ್ಞೆಗಳ ಬೆಳಕಿನಲ್ಲಿ ಹಝ್ರತ್ ಅಬೂಬಕರ್(ರ) ಹೀಗೆ ಆದೇಶ ನೀಡಿದರು: ಕಟ್ಟಡಗಳನ್ನು ಕೆಡವಿಹಾಕಬಾರದು. ಫಲ ನೀಡುವ ಮರಗಳನ್ನು ಕಡಿಯಬಾರದು. (ಮುಅತ್ತಾ)

ಇಸ್ಲಾಮ್ ಧರ್ಮವು ಯುದ್ಧವನ್ನು ತಡೆಗಟ್ಟಲು ಎಷ್ಟು ಚೆನ್ನಾಗಿ ಈ ಉಪದೇಶಗಳನ್ನು ನೀಡಿತು ಮತ್ತು ಮುಸ್ಲಿಮರು ಅದನ್ನು ಅನುಸರಿಸಲು ಆಗ್ರಹಪಡಿಸಿತೆಂದು ಸ್ಪಷ್ಟವಾಗುತ್ತದೆ.

ಇಂದಿನ ಕಾಲಘಟ್ಟದಲ್ಲಿ ಪ್ರವಾದಿ ಮೂಸಾರ(ಅ) ಉಪದೇಶಗಳನ್ನು ಅನುಸರಣೆಗೆ ಯೋಗ್ಯವಾದುದೆಂದು ಪರಿಗಣಿಸಲಾಗದು. ಪ್ರವಾದಿ ಈಸಾರ(ಅ) ಉಪದೇಶವೂ ಈ ಕಾಲದಲ್ಲಿ ಅನುಸರಣೆಗೆ ಯೋಗ್ಯವೆಂದು ಪರಿಗಣಿಸಲು ಸಾಧ್ಯವಾಗದು. ಅಲ್ಲದೆ ಕ್ರೈಸ್ತ ಧರ್ಮಾವಲಂಬಿಗಳು ಯೇಸುಕ್ರಿಸ್ತರ ಉಪದೇಶಗಳ ಪ್ರಕಾರ ಎಂದೂ ನಡೆದುಕೊಂಡಿಲ್ಲ.

ಇಂದು ಇಸ್ಲಾಮ್ ಧರ್ಮದ ನಿಯಮಗಳೇ ಅನುಸರಿಸಲು ಯೋಗ್ಯವಾಗಿವೆ. ಅವುಗಳನ್ನು ಅನುಸರಿಸುವ ಮೂಲಕವೇ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವುದು.

## ಕಂದಕ್ ಯುದ್ಧದ ನಂತರ ಅವಿಶ್ವಾಸಿಗಳ ಆಕ್ರಮಣಗಳು

ಕಂದಕ್ ಯುದ್ಧದ ನಂತರ ಅವಿಶ್ವಾಸಿಗಳು ಧೈರ್ಯಗುಂದಿದ್ದರು ಮತ್ತು ನಿರುತ್ಸಾಹಿಗಳಾಗಿದ್ದರು. ಆದರೆ ತಾವು ಬಹು ಸಂಖ್ಯಾತರು ಮತ್ತು ಮುಸ್ಲಿಮರು ಅಲ್ಪ ಸಂಖ್ಯಾತರು ಎಂಬ ಭಾವನೆ ಅವರ ಮನಸ್ಸಿನಲ್ಲಿ ಇತ್ತು. ಮುಸ್ಲಿಮರು ಒಬ್ಬೊಬ್ಬರಾಗಿ ಸಿಕ್ಕಿದಾಗೆಲ್ಲಾ ಅವರನ್ನು ಕೊಂದು ತಮ್ಮ ಅಪಮಾನಕ್ಕೆ ಪ್ರತೀಕಾರ ಮಾಡಬಹುದೆಂದು ಅವರು ಭಾವಿಸುತ್ತಿದ್ದರು.

ಕಂದಕ್ ಯುದ್ಧದ ಸೋಲಿನ ಸ್ವಲ್ಪ ಕಾಲದ ನಂತರ ಮದೀನದ ಸುತ್ತು ಮುತ್ತಲಿನ ಗೋತ್ರಗಳು ಮುಸ್ಲಿಮರನ್ನು ಹಠಾತ್ತಾಗಿ ಆಕ್ರಮಿಸುತ್ತಾ ಇದ್ದರು. ಫಝಾರ ಎಂಬ ಗೋತ್ರದ ಕೆಲವು ಸವಾರರು ಮದೀನದ ಹತ್ತಿರ ಮುಸ್ಲಿಮರನ್ನು ಆಕ್ರಮಣಮಾಡಿ ಅಲ್ಲಿ ಮೇಯುತ್ತಿದ್ದ ಒಂಟೆಗಳನ್ನು ವಶಪಡಿಸಿಕೊಂಡು ಅವುಗಳನ್ನು ಮೇಯಿಸುತ್ತಾ ಇದ್ದವನನ್ನು ಕೊಂದು ಅವನ ಪತ್ನಿಯನ್ನು ಸೆರೆಹಿಡಿದುಕೊಂಡು ಹೋದರು. ಸೆರೆಹಿಡಿಯಲ್ಪಟ್ಟ ಮಹಿಳೆ ಏನೋ ಉಪಾಯದಿಂದ ತಪ್ಪಿಸಿಕೊಂಡು ಬಂದಳು. ಆದರೆ ಒಂಟೆಗಳಲ್ಲಿ ಕೆಲವನ್ನು ವಶಪಡಿಸಿ ಓಡಿ ಹೋಗಲು ಶತ್ರುಗಳು ಸಮರ್ಥರಾದರು.

ಈ ಘಟನೆ ನಡೆದು ಒಂದು ತಿಂಗಳು ದಾಟಿದ ನಂತರ ಘತ್‌ಫಾನ್

ಖಬೀಲದ (ಗೋತ್ರದ) ಜನರು ಮುಸ್ಲಿಮರ ಒಂಟೆಯ ಹಿಂಡನ್ನು ಲೂಟಿಮಾಡಲು ಪ್ರಯತ್ನಿಸಿದರು. ಹಝ್‌ರತ್ ಪೈಗಂಬರ್[ಸ] ಮುಹಮ್ಮದ್ ಬಿನ್ ಮುಸ್ಲಿಮರನ್ನು[ರ] ಹತ್ತು ಸವಾರರೊಂದಿಗೆ ಒಂಟೆಯ ಹಿಂಡಿನ ರಕ್ಷಣೆಗಾಗಿ ಮತ್ತು ಮದೀನದ ಸುತ್ತು ಮುತ್ತಲಿನ ಸ್ಥಿತಿಗತಿಗಳನ್ನು ತಿಳಿಯಲು ಕಳುಹಿಸಿದರು. ಆದರೆ ಶತ್ರುಗಳು ತಕ್ಕ ಸಂದರ್ಭ ನೋಡಿ ಒಂಟೆ ಸವಾರರನ್ನು ಕೊಂದರು. ಮುಹಮ್ಮದ್ ಬಿನ್ ಮುಸ್ಲಿಮ ಸಹ ಮೃತರಾದರೆಂದು ಶತ್ರುಗಳು ಭಾವಿಸಿದ್ದರು. ಆದರೆ ಅವರು ಮೃತರಾಗದೆ ಪ್ರಜ್ಞಾಶೂನ್ಯರಾಗಿ ಬಿದ್ದಿದ್ದರು. ಶತ್ರುಗಳು ಹೊರಟು ಹೋದ ನಂತರ ಅವರಿಗೆ ಪ್ರಜ್ಞೆ ಮರುಕಳಿಸಿತು. ಅವರು ಮದೀನಕ್ಕೆ ಹೋಗಿ ಹಝ್‌ರತ್ ಪೈಗಂಬರರಿಗೆ[ಸ] ಸಮಾಚಾರ ತಿಳಿಸಿದರು. ಈ ಘಟನೆಯ ಸ್ವಲ್ಪ ಸಮಯದ ನಂತರ ಹಝ್‌ರತ್ ಪೈಗಂಬರ್[ಸ] ರೂಮ್ (ಕಾನ್‌ಸ್ಟೆಂಟ್‌ನೋಪ್ಲ್) ಸರಕಾರದ ಕಡೆಗೆ ಕಳುಹಿಸಿದ ಒಬ್ಬ ರಾಯಭಾರಿಯನ್ನು ಜರ್‌ಹಮ್ ಗೋತ್ರದ ಜನರು ಆಕ್ರಮಿಸಿ ಅವರ ಸಾಮಗ್ರಿಗಳನ್ನು ಲೂಟಿ ಮಾಡಿದರು. ಇದು ಸಂಭವಿಸಿದ ನಂತರ ಒಂದು ತಿಂಗಳಾಗುವಾಗ ಬನೂ ಫಝಾರ ಗೋತ್ರದವರು ಮುಸ್ಲಿಮರ ಒಂದು ಸಂಚಾರಿ ವ್ಯಾಪಾರ ಸಂಘವನ್ನು ಆಕ್ರಮಿಸಿ ಅವರ ಸರಕುಗಳನ್ನು ದೋಚಿಕೊಂಡು ಹೋದರು. ಈ ಆಕ್ರಮಣ ಯಾವುದೇ ಧಾರ್ಮಿಕ ದ್ವೇಷದಿಂದ ಸಂಭವಿಸಿದುದಾಗಿರಲಿಲ್ಲ. ಏಕೆಂದರೆ ಬನೂ ಫಝಾರ ಢಕಾಯಿತಿಗಾರರ ಒಂದು ತಂಡವಾಗಿತ್ತು. ಅವರು ತಮಗೆ ಕಾಣಲು ಸಿಕ್ಕಿದ ಜನರನ್ನು ಹತ್ಯೆಗೈದು ಅವರ ಸ್ವತ್ತನ್ನು ದೋಚಿಕೊಂಡು ಹೋಗುತ್ತಿದ್ದರು. ಅಲ್ಲದೆ ಕಂದಕ್ ಯುದ್ದವನ್ನು ಸಂಘಟಿಸಿದವರ ಜೊತೆಗೂಡಿದ್ದ ಖೈಬರ್ ಪಟ್ಟಣದ ಯಹೂದಿಯರೂ ತಮ್ಮ ಸೋಲಿಗೆ ಪ್ರತೀಕಾರ ಮಾಡಲು ಸುತ್ತುಮುತ್ತಲಿನ ಅರಬಿ ಗೋತ್ರಗಳನ್ನು ಪ್ರಚೋದಿಸುತ್ತಾ ಇದ್ದರು. ಅವರು ಬೈಝಾಂಟಿನ್ ಸಾಮ್ರಾಜ್ಯದ ಗಡಿಪ್ರದೇಶದ ಅಧಿಕಾರಿಗಳನ್ನು ಮತ್ತು ಅರಬಿ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಹುರಿದುಂಬಿಸುತ್ತಾ ಇದ್ದರು. ಅರಬ್ ದೇಶದ ಅವಿಶ್ವಾಸಿಗಳಿಗೆ ಮದೀನವನ್ನು ಆಕ್ರಮಿಸುವ ಧೈರ್ಯವು ಇಲ್ಲವಾಗಿದ್ದರೂ ಅವರು ಯಹೂದಿಯರೊಂದಿಗೆ ಸೇರಿ ಅರಬ್ ರಾಜದಾದ್ಯಂತ ಮುಸ್ಲಿಮರಿಗೆ ಸಂಕಷ್ಟಗಳು ಉಂಟಾಗುವಂತೆ ಮತ್ತು ಅವರ ಸಾಮಗ್ರಿಗಳು ಕೊಳ್ಳೆ ಹೊಡೆಯಲ್ಪಡುವ ಪರಿಸ್ಥಿತಿ ಉಂಟಾಗುವಂತೆ ಮಾಡಿದ್ದರು. ಆದರೆ ಹಝ್‌ರತ್ ಪೈಗಂಬರ್[ಸ] ಅವಿಶ್ವಾಸಿಗಳ ವಿರುದ್ದ ನಿರ್ಣಾಯಕ ಯುದ್ಧಮಾಡುವ ನಿರ್ಧಾರವನ್ನು ಇನ್ನೂ ಕೈಗೊಂಡಿರಲಿಲ್ಲ. ಶಾಂತಿ ಸಂಧಾನದ ಮೂಲಕ ಯುದ್ಧದ ಸ್ಥಿತಿಯನ್ನು ಕೊನೆಗೊಳಿಸುವ ಪ್ರತೀಕ್ಷೆಯಲ್ಲಿ ಅವರಿದ್ದರು.

## ಮಕ್ಕದ ಕಡೆಗೆ ಹದಿನೈದು ನೂರು ಶಿಷ್ಯರೊಂದಿಗೆ ಹಝ್‌ರತ್ ಪೈಗಂಬರರ[ಸ] ಪ್ರಯಾಣ

ಈ ಕಾಲದಲ್ಲಿ ಹಝ್‌ರತ್ ಪೈಗಂಬರ್[ಸ] ಒಂದು ದಿವ್ಯ ದರ್ಶನವನ್ನು ಕಂಡರು. ಅದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**ನೀವು ನಿಶ್ಚಯವಾಗಿಯೂ ಅಲ್ಲಾಹನ ಇಚ್ಛೆಯ ಪ್ರಕಾರ ಪವಿತ್ರ ಮಸ್‌ಜಿದನ್ನು**



**ಸಮಾಧಾನದಿಂದ ಪ್ರವೇಶಿಸುವಿರಿ. ನಿಮ್ಮವರಲ್ಲಿ ಕೆಲವರ ತಲೆಯು ಪೂರ್ಣವಾಗಿ ಬೋಳಿಸಲ್ಪಟ್ಟಿರುವುದು. ಬೇರೆ ಕೆಲವರ ತಲೆಕೂದಲು ಕತ್ತರಿಸಲ್ಪಟ್ಟಿರುವುದು (ಹಜ್ಜ್ ಮಾಡುವಾಗ ತಲೆ ಮುಂಡನಮಾಡುವುದು ಅಥವಾ ತಲೆಗೂದಲನ್ನು ಕತ್ತರಿಸುವುದು ಆವಶ್ಯಕವಾಗಿದೆ). ನೀವು ಯಾರ ಬಗ್ಗೆಯೂ ಭಯಭೀತರಾಗದ ಸ್ಥಿತಿಯಲ್ಲಿರುವಿರಿ. ಅಲ್ಲಾಹನು ಇದನ್ನು ತಿಳಿದಿರುವನು, ನೀವು ತಿಳಿದಿಲ್ಲ. ಆದುದರಿಂದ ಅಲ್ಲಾಹನು ಈ ದಿವ್ಯ ದರ್ಶನವನ್ನು ಈಡೆರಿಸುವ ಮೊದಲು ಬೇರೆ ಒಂದು ಜಯವನ್ನು ನಿಮಗೆ ನಿಗದಿ ಪಡಿಸಿರುವನು. ಅದು ದಿವ್ಯದರ್ಶನದ ಜಯದ ಮೊದಲು.** (48:28)

ಈ ದಿವ್ಯದರ್ಶನದಲ್ಲಿ ವಾಸ್ತವಿಕವಾಗಿ ಶಾಂತಿ ಮತ್ತು ಸಮಾಧಾನದಿಂದ ಮಕ್ಕವನ್ನು ಜಯಿಸುವ ಬಗ್ಗೆ ಅಲ್ಲಾಹನು ಶುಭವಾರ್ತೆ ನೀಡಿದ್ದನು. ಆದರೆ ಹಝ್‌ರತ್ ಪೈಗಂಬರ್[ಸ] ತಮಗೆ ಅಲ್ಲಾಹನು ಈ ದಿವ್ಯ ದರ್ಶನದ ಮೂಲಕ ಪ್ರಾಯಶಃ ಪವಿತ್ರ ಮಸ್‌ಜಿದಿನ (ಕಅ್‌ಬದ) ಪ್ರದಕ್ಷಿಣೆ ಮಾಡುವ ಆಜ್ಞೆ ನೀಡಿರಬಹುದೆಂದು ಭಾವಿಸಿದರು. ಆದರೆ ಈ ತಪ್ಪು ಗ್ರಹಿಕೆಯಿಂದ ಭವಿಷ್ಯ ನುಡಿಯಲಾದ ಘಟನೆಗೆ ಅಸ್ತಿಭಾರ ಹಾಕಲ್ಪಡಲಿರುವುದರಿಂದ ಅಲ್ಲಾಹನು ಆ ತಪ್ಪುಗ್ರಹಿಕೆಯನ್ನು ಹಝ್‌ರತ್ ಪೈಗಂಬರರ[ಸ] ಗಮನಕ್ಕೆ ತರಲಿಲ್ಲ. ಹಝ್‌ರತ್ ಪೈಗಂಬರ್[ಸ] ತನ್ನ ದಿವ್ಯ ದರ್ಶನದ ಬಗ್ಗೆ ಶಿಷ್ಯರಿಗೆ ತಿಳಿಸಿ ಅವರನ್ನು ತನ್ನೊಂದಿಗೆ ಬರಲು ನಿರ್ದೇಶಿಸಿದರು. "ನಾವು ಕೇವಲ ಪವಿತ್ರ ಕಅ್‌ಬದ ಪ್ರದಕ್ಷಿಣೆಮಾಡಲು ಹೋಗುತ್ತಿದ್ದೇವೆ. ಆದುದರಿಂದ ಅಲ್ಲಿ ಯಾವುದೇ ಮತ ಪ್ರದರ್ಶನ ಅಥವಾ ಶತ್ರುಗಳಿಗೆ ಕೋಪ ಬರಿಸುವ ಕೃತ್ಯಗಳನ್ನು ಮಾಡಬಾರದು" ಎಂದು ಅವರು ತಾಕೀತು ಮಾಡಿದ್ದರು.

ಕ್ರಿಸ್ತಶಕ 628 ಫೆಬ್ರವರಿ ತಿಂಗಳ ಕೊನೆಯ ಭಾಗದಲ್ಲಿ ಹದಿನೈದು ನೂರು ಯಾತ್ರಿಕರೊಂದಿಗೆ ಮಕ್ಕದ ಕಡೆಗೆ ಹಝ್‌ರತ್ ಪೈಗಂಬರ್[ಸ] ಪ್ರಯಾಣ ಬೆಳೆಸಿದರು. (ಕಂದಕ್ ಯುದ್ಧದ ಒಂದು ವರ್ಷದ ನಂತರ ಹದಿನೈದು ನೂರು ಜನ ಮಕ್ಕ ಯಾತ್ರೆಗೆ ಹೊರಟುದರಿಂದ ಅದರ ಹಿಂದಿನ ವರ್ಷ ನಡೆದ ಕಂದಕ್ ಯುದ್ಧದಲ್ಲಿ ಇದಕ್ಕಿಂತ ಕಡಿಮೆ ಸಂಖ್ಯೆಯ ಸೈನಿಕರು ಭಾಗವಹಿಸಿರಬಹುದೆಂದು ತೋರಿಸಿಕೊಡುತ್ತದೆ. ಈ ಒಂದು ವರ್ಷದ ಅವಧಿಯಲ್ಲಿ ಮುಸ್ಲಿಮರ ಸಂಖ್ಯೆ ವರ್ಧಿಸಿದೆ. ಕಂದಕ್ ಯುದ್ಧದ ಕಾಲದಲ್ಲಿ ಮೂರುಸಾವಿರ ಸೈನಿಕರಿದ್ದರೆಂದು ಬರೆದ ಚರಿತ್ರೆಗಾರರು ತಪ್ಪು ಮಾಡಿದ್ದಾರೆ. ಆ ಕಾಲದಲ್ಲಿ ಹನ್ನೆರಡು ನೂರು ಸೈನಿಕರಿದ್ದರೆಂದು ಹೇಳಿದುದು ಸರಿಯಾಗಿದೆ).

ಹಜ್ಜ್‌ಗಾಗಿ ಹೊರಟ ಯಾತ್ರಿಕರ ಸಂಘದ ಮುಂಭಾಗದಲ್ಲಿ ಸ್ವಲ್ಪ ಮುಂದಕ್ಕೆ ಇಪ್ಪತ್ತು ಸವಾರರು ಸಾಗುತ್ತಿದ್ದರು. ಶತ್ರುಗಳು ಮುಸ್ಲಿಮರಿಗೆ ಹಾನಿಯನ್ನುಂಟುಮಾಡಲು ಉದ್ದೇಶಿಸುವುದಾದರೆ ಅದನ್ನು ಮುಸ್ಲಿಮರಿಗೆ ಕೂಡಲೆ ತಿಳಿಸಲಿಕ್ಕಾಗಿ ಹೀಗೆ ಮಾಡಲಾಗಿತ್ತು.

ಮಕ್ಕದ ಜನರಿಗೆ ಹಝ್‌ರತ್ ಪೈಗಂಬರರ[ಸ] ಈ ನಿರ್ಧಾರವನ್ನು ತಿಳಿಸಿದಾಗ ಅವರ ಸ್ವಂತ ಧಾರ್ಮಿಕ ಅಭಿಪ್ರಾಯ ಸಹ ಕಅ್‌ಬದ ಪ್ರದಕ್ಷಿಣೆಯನ್ನು ತಡೆಯಬಾರದು

ಎಂದಿದ್ದರೂ ಮುಸ್ಲಿಮರು ತಮ್ಮ ಉದ್ದೇಶವು ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾತ್ರವಾಗಿದೆ ಎಂದೂ ಯಾವುದೇ ರೀತಿಯ ವಿರೋಧ ಅಥವಾ ಜಗಳಕ್ಕಾಗಿ ತಾವು ಹೊರಟು ಬಂದಿಲ್ಲ ಎಂದೂ ಒತ್ತಿ ಹೇಳಿ ಪ್ರಕಟಿಸಿದ್ದರೂ ಮಕ್ಕದವರು ಮಕ್ಕವನ್ನು ಒಂದು ಕೋಟೆಯಾಗಿ ಪರಿವರ್ತಿಸಿ ಸುತ್ತು ಮುತ್ತಲಿನ ಗೋತ್ರ ಗಳ ಜನರನ್ನು ತಮ್ಮ ಸಹಾಯಕ್ಕಾಗಿ ಕರೆದರು.

ಹಝ್ರತ್ ಪೈಗಂಬರ್(ಸ) ಮಕ್ಕದ ಸಮೀಪ ತಲಪಿದಾಗ ಹೀಗೆ ಸಮಾಚಾರ ಲಭಿಸಿತು: ಖುರೈಶಿಗಳು ಚಿರತೆಯ ಚರ್ಮವನ್ನು ಧರಿಸಿರುವರು. ತಮ್ಮ ಪತ್ನಿಯರನ್ನೂ ಮಕ್ಕಳನ್ನೂ ತಮ್ಮ ಜೊತೆ ಸೇರಿಸಿಕೊಂಡಿರುವರು. ಹಝ್ರತ್ ಪೈಗಂಬರರು ಅವರನ್ನು ದಾಟಿಕೊಂಡು ಹೋಗಲು ಬಿಡಬಾರದು ಎಂದು ಅವರು ಪ್ರತಿಜ್ಞೆ ಮಾಡಿರುವರು.

ಅರಬಿಗಳ ಸಂಪ್ರದಾಯ ಪ್ರಕಾರ ಅವರ ಸಮುದಾಯ ಸಾಯಲು ನಿರ್ಧರಿಸಿದಾಗ ಆ ಸಮುದಾಯದ ಮುಂದಾಳುಗಳು ಚಿರತೆಯ ಚರ್ಮವನ್ನು ಧರಿಸುತ್ತಿದ್ದರು. ಅವರು ಸೂಚ್ಯವಾಗಿ ಪ್ರಕಟಿಸುತ್ತಿದ್ದರೇನೆಂದರೆ, ಈಗ ಬುದ್ಧಿ ಉಪಯೋಗಿಸಲು ಸಮಯವಿಲ್ಲ. ತಾವು ಧೈರ್ಯ ಮತ್ತು ಸಾಹಸಗಳಿಂದ ಶತ್ರುವನ್ನು ಎದುರಿಸಿ ಜೀವವನ್ನು ಬಲಿಗೊಡುವೆವು.

ಈ ಸಮಾಚಾರ ತಲಪಿ ಸ್ವಲ್ಪ ಸಮಯ ಕಳೆಯುವುದರೊಳಗೆ ಮಕ್ಕದ ಸೈನ್ಯದ ಮುಂಗಾವಲಿನ ತಂಡ ಮುಸ್ಲಿಮರ ಎದುರಿಗೆ ಬಂದು ನಿಂತಿತು. ಅಲ್ಲಿಂದ ಮುಸ್ಲಿಮರು ಮುಂದುವರಿಯಬೇಕಿದ್ದರೆ ಶತ್ರುಗಳನ್ನು ಖಡ್ಗ ಬಲದಿಂದ ಹಿಮ್ಮೆಟ್ಟಿಸಬೇಕಾಗುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಎಂತಹ ಪರಿಸ್ಥಿತಿಯಲ್ಲಿಯೂ ಹೋರಾಡಬಾರದೆಂದು ನಿರ್ಧರಿಸಿ ಯಾತ್ರೆಗೆ ಹೊರಟಿದ್ದರು.

ಹಝ್ರತ್ ಪೈಗಂಬರ್(ಸ) ಮಕ್ಕದವರ ಮುಂಗಾವಲಿನ ಸೈನಿಕರೊಂದಿಗೆ ಸೆಣಸದೆ, ಗುಡ್ಡಗಾಡುಗಳ ಮಧ್ಯೆ ಹಾದು ಹೋಗುತ್ತಿದ್ದ ಬಳಸುದಾರಿಯನ್ನು ಚೆನ್ನಾಗಿ ಬಲ್ಲ ಒಬ್ಬ ದಾರಿ ತೋರಿಸುವವನ ಸಹಾಯದಿಂದ ಮಕ್ಕವನ್ನು ತಲಪಲು ನಿರ್ಧರಿಸಿದರು. ಈ ದಾರಿ ತೋರಿಸಿಕೊಡುವವನು ಹಝ್ರತ್ ಪೈಗಂಬರರನ್ನೂ(ಸ) ಅವರ ಸಂಗಡಿಗರನ್ನೂ ಮಕ್ಕದ ಸಮೀಪ ಹುದೈಬಿಯಾ ಎಂಬಲ್ಲಿಗೆ ತಲಪಿಸಿದನು. ಅಲ್ಲಿ ಹಝ್ರತ್ ಪೈಗಂಬರರ(ಸ) ಒಂಟೆ ನಿಂತುಬಿಟ್ಟಿತು ಮತ್ತು ಮುಂದೆ ಸಾಗಲು ಅದು ನಿರಾಕರಿಸಿತು. ಆಗ ಶಿಷ್ಯರು ಹೇಳಿದರು: "ನಿಮ್ಮ ಒಂಟೆಗೆ ಆಯಾಸವಾಗಿದೆ. ನೀವು ಬೇರೆ ಒಂದು ಒಂಟೆಯ ಮೇಲೆ ಕುಳಿತುಕೊಳ್ಳಿರಿ."

ಹಝ್ರತ್ ಪೈಗಂಬರ್(ಸ) ಹೇಳಿದರು: "ಒಂಟೆಗೆ ಆಯಾಸವಾಗಿಲ್ಲ. ನಾವು ಇಲ್ಲಿಯೇ ತಂಗಬೇಕೆಂದು ಅಲ್ಲಾಹನು ಇಚ್ಛಿಸಿರುವುದಾಗಿ ತೋರುತ್ತದೆ. ನಾನು ಇಲ್ಲಿಯೇ ನಿಂತು ಮಕ್ಕದವರೊಂದಿಗೆ ನಮಗೆ ಹಜ್ಜ್ ಮಾಡಲು ಅನುಮತಿಸಬೇಕೆಂದು ಎಲ್ಲ ರೀತಿಯಲ್ಲೂ ಅಪೇಕ್ಷಿಸುವೆನು. ಅವರು ವಿಧಿಸುವ ಯಾವುದೇ ಶರ್ತವನ್ನು



ನಾನು ಅಂಗೀಕರಿಸುವೆನು".

ಆಗ ಮಕ್ಕದವರ ಸೈನ್ಯ ಮಕ್ಕದಿಂದ ದೂರ ಠಾಣ್ಯ ಹೂಡಿ ಮುಸ್ಲಿಮರ ಆಗಮನವನ್ನು ಪ್ರತೀಕ್ಷಿಸುತ್ತಾ ಇತ್ತು. ಆಗ ಹಝ್ರತ್ ಪೈಗಂಬರ್(ಸ) ಬಯಸುತ್ತಿದ್ದರೆ ಯಾವುದೇ ಹೋರಾಟವಿಲ್ಲದೆ ಮಕ್ಕವನ್ನು ಪ್ರವೇಶಿಸಬಹುದಾಗಿತ್ತು. ಆದರೆ ಮಕ್ಕದವರ ಒಪ್ಪಿಗೆಯನ್ನು ಪಡೆದು ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಲು ಮೊದಲು ಪ್ರಯತ್ನಿಸುವುದಾಗಿಯೂ ಮಕ್ಕದವರು ಹೋರಾಟ ಪ್ರಾರಂಭಿಸಿ ಮುಸ್ಲಿಮರನ್ನು ಯುದ್ಧ ಮಾಡಲು ನಿರ್ಬಂಧಿಸಿದರೆ ಮಾತ್ರ ಅವರನ್ನು ಎದುರಿಸುವುದಾಗಿಯೂ ಹಝ್ರತ್ ಪೈಗಂಬರ್(ಸ) ನಿರ್ಧರಿಸಿದ್ದರು. ಇದೇ ಕಾರಣದಿಂದ ಮಕ್ಕಕ್ಕೆ ಹೋಗುವ ಮಾರ್ಗವು ಮುಸ್ಲಿಮರಿಗೆ ತೆರೆದಿದ್ದರೂ ಹಝ್ರತ್ ಪೈಗಂಬರ್(ಸ) ಹುದೈಬಿಯಾದಲ್ಲಿ ತಂಗಿದ್ದರು.

ಹಝ್ರತ್ ಪೈಗಂಬರ್(ಸ) ಹುದೈಬಿಯಾದಲ್ಲಿ ಠಾಣ್ಯಹೂಡಿದ ವರದಿ ಮಕ್ಕದ ಸೈನ್ಯಕ್ಕೂ ತಲಪಿತು. ಅವರು ತಾವಿದ್ದ ಠಾಣ್ಯದಿಂದ ಹಿಂದಕ್ಕೆ ಸರಿದು ಮಕ್ಕದ ಸಮೀಪ ಸನ್ನದ್ಧರಾಗಿ ನಿಂತರು.

ಮಕ್ಕದ ಅವಿಶ್ವಾಸಿಗಳು ತಮ್ಮ ಒಬ್ಬ ಮುಂದಾಳುವಾದ ಬದೀಲ್‌ನನ್ನು ಹಝ್ರತ್ ಪೈಗಂಬರ್‌ರೊಂದಿಗೆ ಮಾತನಾಡಲು ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ಬದೀಲ್‌ನೊಂದಿಗೆ, "ಪವಿತ್ರ ಕಅ್‌ಬದ ಪ್ರದಕ್ಷಿಣೆಯ ಏಕಮಾತ್ರ ಉದ್ದೇಶದಿಂದ ನಾವು ಬಂದಿರುವೆವು. ಆದರೆ ಮಕ್ಕದವರು ನಿರ್ಬಂಧಿಸಿದರೆ ನಾವು ಸಹ ಹೋರಾಡಬೇಕಾದೀತು" ಎಂದು ಹೇಳಿ ಕಳುಹಿಸಿದರು.

ಅನಂತರ ಮಕ್ಕದವರ ಸೈನ್ಯಾಧಿಪತಿ ಅಬೂ ಸುಫಿಯಾನ್‌ರ ಅಳಿಯ ಉರ್‌ವ ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ಬಹಳ ಉದ್ಧಟತನದಿಂದ, "ನೀವು ಕರೆದುಕೊಂಡು ಬಂದಿರುವ ಪುಂಡರ ತಂಡವನ್ನು ಮಕ್ಕದವರು ತಮ್ಮ ನಗರದೊಳಗೆ ಪ್ರವೇಶಮಾಡಲು ಯಾವ ರೀತಿಯಲ್ಲೂ ಬಿಡಲಾರರು" ಎಂದನು.

ಇದೇ ರೀತಿ ಒಬ್ಬರ ನಂತರ ಇನ್ನೊಬ್ಬರಂತೆ ಬೇರೆ ಬೇರೆ ವ್ಯಕ್ತಿಗಳು ವಿವಿಧ ಸಂದೇಶಗಳನ್ನು ತರುತ್ತಾ ಇದ್ದರು. ಕೊನೆಗೆ ಮಕ್ಕದವರು ಹೀಗೆ ಹೇಳಿ ಕಳುಹಿಸಿದರು: "ಈ ವರ್ಷ ನಿಮ್ಮನ್ನು ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಲು ಯಾವ ರೀತಿಯಲ್ಲೂ ಅನುಮತಿಸಲಾರೆವು. ಏಕೆಂದರೆ ನಿಮಗೆ ಅನುಮತಿ ನೀಡಿದರೆ ಅದು ನಮಗೆ ಅಪಮಾನಕರವಾಗುವುದು. ಆದರೆ ಮುಂದಿನ ವರ್ಷ ನೀವು ಬರುವುದಾದರೆ ನಾವು ಕಅ್‌ಬದ ಪ್ರದಕ್ಷಿಣೆಗೆ ಅನುಮತಿ ನೀಡುವೆವು."

ಮಕ್ಕದ ಸುತ್ತು ಮುತ್ತಲಿನ ಜನರು ಮಕ್ಕದವರೊಂದಿಗೆ, "ನೀವು ಅವರನ್ನು ಏಕೆ ತಡೆಯುತ್ತಿರುವಿರಿ? ಅವರು ಕಅ್‌ಬದ ಪ್ರದಕ್ಷಿಣೆಗಾಗಿ ಮಾತ್ರ ಬಂದಿರುತ್ತಾರೆ" ಎಂದು ಹೇಳಿ ಒತ್ತಾಯಿಸುತ್ತಿದ್ದರು. ಆದರೆ ಮಕ್ಕದವರು ತಮ್ಮ ಹಠದಲ್ಲಿಯೇ ಸ್ಥಿರವಾಗಿ ನಿಂತರು. ಆಗ ಮಕ್ಕದ ಹೊರಗಿನ ಗೋತ್ರಗಳಿಗೆ ಸೇರಿದವರು

ಮಕ್ಕದವರೊಂದಿಗೆ, "ಕಷ್ಟ ಕೊಡುವುದೇ ನಿಮ್ಮ ಉದ್ದೇಶವಾಗಿದೆ. ಶಾಂತಿ ಸಂಧಾನ ನಿಮ್ಮ ಉದ್ದೇಶವಾಗಿಲ್ಲವೆಂದು ನಿಮ್ಮ ರೀತಿ ನೀತಿಗಳು ಸೂಚಿಸುತ್ತವೆ. ನಾವು ನಿಮ್ಮೊಂದಿಗೆ ಸೇರಲು ಸಿದ್ದರಿಲ್ಲ" ಎಂದು ಹೇಳಿದರು. ಆಗ ಮಕ್ಕದವರು ಹೆದರಿದರು. ಅವರು ಮುಸ್ಲಿಮರೊಂದಿಗೆ ಯಾವುದಾದರೂ ಒಪ್ಪಂದವೇರ್ಪಡಿಸುವ ಬಗ್ಗೆ ಪ್ರಯತ್ನಮಾಡಲು ತೊಡಗಿದರು.

ಈ ವಿಷಯಗಳು ಹಝ್ರತ್ ಪೈಗಂಬರರಿಗೆ(ಸ) ತಿಳಿದಾಗ ಅವರು ಹಝ್ರತ್ ಉಸ್ಮಾನ್‌ರನ್ನು(ರ) (ಇವರು ಆನಂತರ ಇಸ್ಲಾಮಿನ ಮೂರನೆಯ ಖಲೀಫರಾದರು) ಮಕ್ಕದವರೊಂದಿಗೆ ಮಾತನಾಡಲು ಕಳುಹಿಸಿದರು.

ಹಝ್ರತ್ ಉಸ್ಮಾನ್(ರ) ಮಕ್ಕವನ್ನು ತಲಪಿದಾಗ ಅವರ ಅನೇಕ ಸಂಬಂಧಿಕರು ಅವರ ಸುತ್ತು ಮುತ್ತು ನೆರೆದು, "ನೀವು ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಿರಿ. ಆದರೆ ಮುಹಮ್ಮದ್ ಮುಂದಿನ ವರ್ಷ ತವಾಫ್ ಮಾಡಲಿ" ಎಂದು ಹೇಳಿದರು. ಆಗ ಹಝ್ರತ್ ಉಸ್ಮಾನ್(ರ) "ನಾನು ನನ್ನ ಮುಖಂಡರಿಲ್ಲದೆ ಕಅ್‌ಬದ ಪ್ರದಕ್ಷಣೆ ಮಾಡಲಾರೆನು" ಎಂದು ಹೇಳಿದರು. ಹಝ್ರತ್ ಉಸ್ಮಾನ್(ರ) ಮಕ್ಕದ ಮುಂದಾಳುಗಳೊಂದಿಗೆ ದೀರ್ಘ ಕಾಲ ಮಾತುಕತೆಯಲ್ಲಿ ಭಾಗವಹಿಸಿದುದರಿಂದ ಕೆಲವು ಕುಹಕಿಗಳು, "ಉಸ್ಮಾನ್‌ರನ್ನು ಕೊಲೆಮಾಡಲಾಗಿದೆ" ಎಂದು ವದಂತಿ ಹಬ್ಬಿಸಿದರು.

ಈ ವದಂತಿ ಹಝ್ರತ್ ಪೈಗಂಬರರಿಗೂ ತಲಪಿತು. ಆಗ ಅವರು ತನ್ನ ಶಿಷ್ಯರನ್ನು ಜಮಾಯಿಸಿ, "ರಾಯಭಾರಿಯ ಜೀವ ಎಲ್ಲಾ ಕೋಮುಗಳಲ್ಲಿಯೂ ಸುರಕ್ಷಿತವಾಗಿರುತ್ರದೆ. ಆದರೆ ಉಸ್ಮಾನರನ್ನು ಮಕ್ಕದವರು ಕೊಂದರೆಂಬ ಸುದ್ದಿ ನೀವು ಕೇಳಿರುವಿರಿ. ಇದು ಸತ್ಯವಾಗಿದ್ದರೆ ನಾವು ಬಲ ಪ್ರಯೋಗಿಸಿ ಮಕ್ಕವನ್ನು ಪ್ರವೇಶಿಸುವೆವು. (ಮಕ್ಕವನ್ನು ಶಾಂತಿ ಸಮಾಧಾನಗಳೊಂದಿಗೆ ಪ್ರವೇಶಿಸುವೆವು ಎಂಬ ನಮ್ಮ ಮೊದಲಿನ ನಿರ್ಧಾರವು ಪರಿಸ್ಥಿತಿಗಳು ಬದಲಾವಣೆಗೊಂಡುದರಿಂದ ಬದಲಾಯಿಸಬೇಕಾಗಿದೆ). ನಾವು ಮುಂದೆ ಸಾಗಿ ಮಕ್ಕದೊಳಗೆ ನುಗ್ಗಬೇಕಾಗಿ ಬಂದರೆ, ನಾವು ಜಯಿಸಿಯೇ ಮರಳುವೆವು, ಅಥವಾ ನಾವು ಒಬ್ಬೊಬ್ಬರಾಗಿ ರಣರಂಗದಲ್ಲಿ ಕೊಲ್ಲಲ್ಪಡುವೆವು ಎಂದು ನನ್ನ ಕೈಯಲ್ಲಿ ಕೈಯಿಟ್ಟು ತಮ್ಮ ನಿಷ್ಠೆಯನ್ನು ಸೂಚಿಸಲು ಬಯಸುವವರು ಮುಂದೆ ಬನ್ನಿರಿ" ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ತನ್ನ ಮಾತುಗಳನ್ನು ಕೊನೆಗೊಳಿಸಿದ ಕೂಡಲೇ ಅವರ ಜೊತೆಗೆ ಬಂದ ಹದಿನೈದು ನೂರು ಯಾತ್ರಿಕರು ಹದಿನೈದು ನೂರು ಸೈನಿಕರಾಗಿ ಬದಲಾಯಿಸಲ್ಪಟ್ಟರು. ಅವರು ಒಬ್ಬರಿನ್ನೊಬ್ಬರನ್ನು ಹಿಂದಿಕ್ಕುತ್ತಾ ಉನ್ಮಾದಿತರಂತೆ ಮುನ್ನುಗಿ ಹಝ್ರತ್ ಪೈಗಂಬರರ(ಸ) ಕೈಯಲ್ಲಿ ತಮ್ಮ ಕೈಗಳನ್ನು ಇತರರಿಗಿಂತ ಮುಂಚಿತವಾಗಿ ಇಟ್ಟು ನಿಷ್ಠೆಯ ಪ್ರತಿಜ್ಞೆ ಮಾಡಲು ಪ್ರಾರಂಭಿಸಿದರು. ಈ ನಿಷ್ಠೆಯ ಪ್ರತಿಜ್ಞೆ (ಬೈಅತ್) ಇಸ್ಲಾಮಿನ ಚರಿತ್ರೆಯಲ್ಲಿ ಬಹಳ ಪ್ರಾಮುಖ್ಯತೆ ಪಡೆದಿದೆ. ಇದನ್ನು ವೃಕ್ಷದ ಒಡಂಬಡಿಕೆ ಎಂದು ಸಹ ಹೇಳಲಾಗುತ್ತದೆ. ಏಕೆಂದರೆ ಆಗ ಹಝ್ರತ್



ಪೈಗಂಬರ್(ಸ) ಒಂದು ವೃಕ್ಷದ ಕೆಳಗೆ ಕುಳಿತಿದ್ದರು. ಈ ನಿಷ್ಠೆಯ ಪ್ರತಿಜ್ಞೆ ಮಾಡಿದ ವ್ಯಕ್ತಿಗಳು ತಾವು ಜೀವದಿಂದಿರುವ ತನಕ ಅದರ ಬಗ್ಗೆ ಹೆಮ್ಮೆಯಿಂದ ವಿವರಿಸುತ್ತಿದ್ದರು. ಹದಿನೈದು ನೂರು ಜನರ ಪೈಕಿ ಒಬ್ಬ ಕೂಡ ಈ ಪ್ರತಿಜ್ಞೆ ಮಾಡಲು ಹಿಂಜರಿಯಲಿಲ್ಲ. "ಮುಸ್ಲಿಮರ ರಾಯಭಾರಿಯನ್ನು ಶತ್ರುಗಳು ಕೊಂದಿದ್ದರೆ, ನಾವು ನಿಶ್ಚಯವಾಗಿಯೂ ಎರಡರಲ್ಲಿ ಒಂದು ಪರಿಣಾಮ ಉಂಟಾಗುವಂತೆ ಮಾಡುವೆವು. ನಾವು ಸಾಯಂಕಾಲದೊಳಗೆ ಮಕ್ಕವನ್ನು ಜಯಿಸುವೆವು ಅಥವಾ ಸಾಯಂಕಾಲದೊಳಗೆ ಯುದ್ಧರಂಗದಲ್ಲಿ ಸಾಯುವೆವು" ಎಂದು ಅವರು ನಿರ್ಧರಿಸಿದರು.

ಆದರೆ ಮುಸ್ಲಿಮರು ತಮ್ಮ ನಿಷ್ಠೆಯ ಪ್ರತಿಜ್ಞೆ ಮಾಡಿ ಮುಗಿಸುವುದರೊಳಗೆ ಹಝ್ರತ್ ಉಸ್ಮಾನ್(ರ) ಮರಳಿ ಬಂದರು. ಅವರು, "ಈ ವರ್ಷ ಪವಿತ್ರ ಕಅ್‌ಬದ ಪ್ರದಕ್ಷಿಣೆಯನ್ನು ಮಾಡಲು ಮುಸ್ಲಿಮರಿಗೆ ಮಕ್ಕದವರು ಅನುಮತಿ ನೀಡುವುದಿಲ್ಲ. ಆದರೆ ಮುಂದಿನ ವರ್ಷ ಅದಕ್ಕೆ ಅನುಮತಿ ನೀಡಲು ಅವರು ಸಿದ್ಧರಾಗಿದ್ದಾರೆ ಮತ್ತು ಇದಕ್ಕಾಗಿ ಒಪ್ಪಂದ ಮಾಡಲು ಅವರು ತಮ್ಮ ಪ್ರತಿನಿಧಿಗಳನ್ನು ನಿಶ್ಚಯಿಸಿದ್ದಾರೆ" ಎಂದು ಹೇಳಿದರು. ಹಝ್ರತ್ ಉಸ್ಮಾನ್(ರ) ಬಂದು ತಲಪಿದ ಸ್ವಲ್ಪ ಸಮಯದೊಳಗೆ ಮಕ್ಕದ ಒಬ್ಬ ಮುಂದಾಳುವಾದ ಸಹೀಲ್ ಒಪ್ಪಂದ ಮಾಡಲು ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಬಂದರು. ಹಝ್ರತ್ ಪೈಗಂಬರ್(ಸ) ಮತ್ತು ಮಕ್ಕದವರ ಮಧ್ಯೆ ಒಪ್ಪಂದವನ್ನು ಬರೆಯಲಾಯಿತು.

## ಹುದೈಬಿಯಾ ಸಂಧಿಯ ಶರ್ತಗಳು

ಸಂಧಿ ಈ ರೀತಿಯಾಗಿತ್ತು:

*ಅಲ್ಲಾಹನ ನಾಮದಿಂದ ಅಬ್ದುಲ್ಲಾರವರ ಮಗ ಮುಹಮ್ಮದ್ ಮತ್ತು ಅಮ್ರ್‌ರವರ ಮಗ ಸಹೀಲ್ (ಮಕ್ಕದ ಆಡಳಿತಾಧಿಕಾರಿಗಳ ಪ್ರತಿನಿಧಿ) ಇವರ ಮಧ್ಯೆ ತೀರ್ಮಾನಿಸಲಾದ ಶಾಂತಿ ಒಪ್ಪಂದ ಶರ್ತಗಳು ಹೀಗಿವೆ:*

*ಹತ್ತು ವರ್ಷಗಳ ತನಕ ಕದನ ವಿರಾಮವಿರುವುದು. ಮುಹಮ್ಮದರೊಂದಿಗೆ ಸೇರಲು ಬಯಸುವವರು ಮತ್ತು ಅವರೊಂದಿಗೆ ಒಪ್ಪಂದವನ್ನು ಮಾಡಲು ಬಯಸುವವರು ಹಾಗೆ ಮಾಡಬಹುದು. ಖುರೈಶರೊಂದಿಗೆ ಸೇರಲು ಬಯಸುವವರು ಮತ್ತು ಅವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಬಯಸುವವರು ಸಹ ಹಾಗೆ ಮಾಡಬಹುದು. ಯಾವುದಾದರೂ ಹುಡುಗನ ತಂದೆ ಜೀವಂತವಾಗಿದ್ದರೆ ಅಥವಾ ಹುಡುಗ ಚಿಕ್ಕ ಪ್ರಾಯದವನಾಗಿದ್ದು ಅವನು ತನ್ನ ತಂದೆ ಅಥವಾ ಸಂರಕ್ಷಕನ ಒಪ್ಪಿಗೆಯಿಲ್ಲದೆ ಮುಹಮ್ಮದರ ಬಳಿಗೆ ಹೋದರೆ ಅವನನ್ನು ಅವನ ತಂದೆಗೆ ಅಥವಾ ಸಂರಕ್ಷಕನಿಗೆ ಹಿಂದಿರುಗಿಸಬೇಕು. ಆದರೆ ಮುಹಮ್ಮದರ ಸಂಗಡಿಗರಲ್ಲಿ ಯಾರಾದರೂ ಖುರೈಶರ ಕಡೆಗೆ ಹಿಂದಿರುಗಿದರೆ ಅವರನ್ನು ಮುಹಮ್ಮದರ ಬಳಿಗೆ ಮರಳಿ ಕಳುಹಿಸಿಕೊಡಲಿಕ್ಕಿಲ್ಲ, ಮುಹಮ್ಮದ್ ಈ ವರ್ಷ ಮಕ್ಕವನ್ನು ಪ್ರವೇಶಿಸದೆ ಮರಳಿ ಹೋಗುವರು. ಆದರೆ ಮುಂದಿನ ವರ್ಷ ಮುಹಮ್ಮದ್*

*ಮತ್ತು ಅವರ ಸಂಗಡಿಗರು ಮಕ್ಕಕ್ಕೆ ಬರಬಹುದು. ಅವರು ಮೂರು ದಿನ ಮಕ್ಕದಲ್ಲಿ ತಂಗಿ ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಬಹುದು. ಆಗ ಖುರೈಶ್ ಜನರು ಮಕ್ಕದಿಂದ ಹೊರಗೆ ಬೆಟ್ಟಗಳಿಗೆ ಹೋಗಿ ತಂಗುವರು. ಮುಹಮ್ಮದ್ ಮತ್ತು ಅವರ ಸಂಗಡಿಗರು ಮಕ್ಕವನ್ನು ಪ್ರವೇಶಿಸುವಾಗ ಪ್ರತಿಯೊಬ್ಬ ಪ್ರಯಾಣಿಕ ತನ್ನೊಂದಿಗೆ ಇಟ್ಟುಕೊಳ್ಳುವಂತಹ ಒರೆಯೊಳಗಿಟ್ಟ ಖಡ್ಗದ ಹೊರತು ಬೇರೆ ಯಾವ ಆಯುಧವನ್ನೂ ತರಬಾರದು.*[63]

ಈ ಒಪ್ಪಂದ ಬರೆಯಿಸುವಾಗ ಎರಡು ಆಶ್ಚರ್ಯಕರ ಸಂಗತಿಗಳು ನಡೆದುವು. ಹಝ್ರತ್ ಪೈಗಂಬರ್(ಸ) ಒಪ್ಪಂದವನ್ನು "ಅಪರಿಮಿತ ಕರುಣಾಮಯನೂ ಪದೇ ಪದೇ ದಯೆದೋರುವವನೂ ಆಗಿರುವ ಅಲ್ಲಾಹನ ನಾಮದಿಂದ" ಎಂದು ಬರೆಯಿಸಲು ತೊಡಗಿದಾಗ ಸಹೀಲ್ ಹೀಗೆ ಆಕ್ಷೇಪಿಸಿದರು:

"ನಮಗೆ ಅಲ್ಲಾಹನ ಬಗ್ಗೆ ಗೊತ್ತಿದೆ. ಆದರೆ ಅಪರಿಮಿತ ಕರುಣಾಮಯ (ರಹ್ಮಾನ್) ಮತ್ತು ಪದೇ ಪದೇ ದಯೆದೋರುವವನು (ರಹೀಮ್) ಯಾರೆಂದು ತಿಳಿಯದು. ಈ ಒಪ್ಪಂದ ನಮ್ಮ ಮತ್ತು ನಿಮ್ಮ ಮಧ್ಯೆ ಆಗುತ್ತಿರುವುದರಿಂದ ನಮ್ಮಿಬ್ಬರ ಎರಡು ಧರ್ಮಗಳನ್ನೂ ಗೌರವಿಸುವುದು ಆವಶ್ಯಕವಾಗಿದೆ."

ಆಗ ಹಝ್ರತ್ ಪೈಗಂಬರ್(ಸ) ಅದಕ್ಕೆ ಒಪ್ಪಿಗೆ ಸೂಚಿಸಿ, "ಅಲ್ಲಾಹನ ನಾಮದಿಂದ" ಎಂದು ಮಾತ್ರ ಬರೆಯಿಸಲು ಸಮ್ಮತಿಸಿದರು.

ಅನಂತರ ಹಝ್ರತ್ ಪೈಗಂಬರ್(ಸ) "ಅಲ್ಲಾಹನ ಪೈಗಂಬರ್ ಮುಹಮ್ಮದ್" ಎಂದು ಬರೆಯಿಸಲು ಪ್ರಾರಂಭಿಸಿದಾಗ ಸಹೀಲ್, "ನಾವು ನಿಮ್ಮನ್ನು ಪೈಗಂಬರ್ ಎಂದು ಒಪ್ಪಿಕೊಳ್ಳುವುದಾದರೆ ನಾವು ನಿಮ್ಮೊಂದಿಗೆ ಹೋರಾಡುವುದು ಏಕೆ?" ಎಂದು ಆಕ್ಷೇಪಿಸಿದರು. ಹಝ್ರತ್ ಪೈಗಂಬರ್(ಸ) ಈ ಆಕ್ಷೇಪವನ್ನು ಪರಿಗಣಿಸಿದರು. ಅವರು, "ಅಲ್ಲಾಹನ ಪೈಗಂಬರ್ ಮುಹಮ್ಮದ್" ಎಂಬುದಕ್ಕೆ ಪ್ರತಿಯಾಗಿ "ಅಬ್ದುಲ್ಲಾರವರ ಮಗ ಮುಹಮ್ಮದ್" ಎಂದು ಬರೆಯಿಸಿದರು.

ಹಝ್ರತ್ ಪೈಗಂಬರ್(ಸ) ಮಕ್ಕದವರ ಎಲ್ಲಾ ಆಕ್ಷೇಪಗಳನ್ನು ಅಂಗೀಕರಿಸುತ್ತಾ ಹೋದುದರಿಂದ ಶಿಷ್ಯರ ಹೃದಯದಲ್ಲಿ ದುಃಖ ಮತ್ತು ಕಳವಳ ಉಂಟಾಯಿತು. ಮಕ್ಕದವರ ಆಕ್ಷೇಪಗಳ ಬಗ್ಗೆ ಕೋಪದಿಂದ ಅವರ ರಕ್ತವು ಕುದಿಯತೊಡಗಿತು. ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ) ಸಮೀಪಕ್ಕೆ ಹೋಗಿ, "ಏನು ನಾವು ಸತ್ಯವಂತರಲ್ಲವೇ?" ಎಂದು ಕೇಳಿದರು. ಪೈಗಂಬರ್(ಸ) ಹೇಳಿದರು: "ಹೌದು." ಹಝ್ರತ್ ಉಮರ್ ಪುನಃ ಕೇಳಿದರು: "ನಾವು ಕಅ್‌ಬದ ಪ್ರದಕ್ಷಿಣೆ ಮಾಡುವೆವು ಎಂದು ಅಲ್ಲಾಹನು ನಿಮಗೆ ತಿಳಿಸಿರಲಿಲ್ಲವೇ?" ಹಝ್ರತ್ ಪೈಗಂಬರ್(ಸ) "ಹೌದು" ಎಂದು ಉತ್ತರಿಸಿದರು.

---

63. ಇಬ್ನು ಹಿಶಾಮ್ ಭಾಗ 5 ಪುಟ 180, ಬುಖಾರಿ ಕಿತಾಬುಶ್ಶುರೂತ್.



ಆಗ ಹಝ್ರತ್ ಉಮರ್(ರ) ಹೇಳಿದರು: "ಹಾಗಾದರೆ ಈ ಒಪ್ಪಂದವನ್ನು ನೀವು ಏಕೆ ಮಾಡಿದಿರಿ?"

ಹಝ್ರತ್ ಪೈಗಂಬರ್(ಸ) ಹೇಳಿದರು: "ಪವಿತ್ರ ಕಅ್‌ಬದ ಪ್ರದಕ್ಷಿಣೆಯನ್ನು ನಾವು ಶಾಂತಿ ಸಮಾಧಾನದಿಂದ ಮಾಡುವೆವು ಎಂದು ಅಲ್ಲಾಹನು ನಮಗೆ ತಿಳಿಸಿದ್ದನು. ಆದರೆ ನಾವು ಇದೇ ವರ್ಷ ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡುವೆವು ಎಂದು ಅಲ್ಲಾಹನು ಹೇಳಿರಲಿಲ್ಲ. ಅದು ನಾನೇ ಯೋಚಿಸಿ ಮಾಡಿದ ನಿರ್ಧಾರವಾಗಿದೆ."

ಬೇರೆ ಕೆಲವು ಶಿಷ್ಯರು ಸಹ ಈ ಒಪ್ಪಂದದ ಬೇರೆ ಕೆಲವು ಶರ್ತಗಳ ಬಗ್ಗೆಯೂ ಆಕ್ಷೇಪಿಸಿದರು. ಮಕ್ಕದ ಒಬ್ಬ ತರುಣ ಮುಸ್ಲಿಮನಾದರೆ ಅವನ ತಂದೆ ಅಥವಾ ಸಂರಕ್ಷಕನ ಬಳಿಗೆ ಅವನನ್ನು ಮರಳಿ ಕಳುಹಿಸಬೇಕು. ಆದರೆ ಮುಸ್ಲಿಮರಲ್ಲಿ ಯಾರಾದರೂ ಮಕ್ಕದವರ ಪಕ್ಷಕ್ಕೆ ಹೋದರೆ ಮಕ್ಕದವರು ಅವರನ್ನು ಮರಳಿ ಕಳುಹಿಸಬೇಕೆಂದಿಲ್ಲ ಎಂಬ ಶರ್ತದ ಬಗ್ಗೆ ಅವರ ಆಕ್ಷೇಪವಿತ್ತು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು:

"ಒಬ್ಬ ವ್ಯಕ್ತಿ ಮುಸ್ಲಿಮನಾಗಿರುವುದು ಅವನು ಇಸ್ಲಾಮನ್ನು ಸತ್ಯಧರ್ಮವೆಂದು ಗ್ರಹಿಸಿಕೊಂಡಾಗಿದ್ದರೆ ಹಾಗೂ ಕೇವಲ ಸಂಪ್ರದಾಯ ಮತ್ತು ಆಚಾರಗಳ ಪ್ರಕಾರ ನಾಮಮಾತ್ರವಾಗಿ ಮುಸ್ಲಿಮನಾಗಿಲ್ಲವಾದರೆ, ಅಂತಹ ವ್ಯಕ್ತಿ ಎಲ್ಲಿದ್ದರೂ ಇಸ್ಲಾಮಿನ ಪ್ರಚಾರಕನಾಗುವನು ಮತ್ತು ಇಸ್ಲಾಮಿನ ಅಭಿವೃದ್ಧಿಗೆ ಸಹಾಯಕನಾಗುವನು. ಆದರೆ ಒಬ್ಬನು ಇಸ್ಲಾಮ್ ಧರ್ಮವನ್ನು ತ್ಯಜಿಸುವವನಾದರೆ ನಾವು ಅವನನ್ನು ನಮ್ಮ ಮಧ್ಯೆ ಇಟ್ಟುಕೊಂಡು ಏನು ಮಾಡಲಿಕ್ಕಿದೆ? ನಮ್ಮ ಧರ್ಮವನ್ನು ಮಿಥ್ಯ ಧರ್ಮವೆಂದು ಭಾವಿಸುವವನು ನಮಗೆ ಯಾವ ಪ್ರಯೋಜನಕ್ಕೆ ಬರುವನು?"

ಹಝ್ರತ್ ಪೈಗಂಬರರ(ಸ) ಈ ಹೇಳಿಕೆ "ಇಸ್ಲಾಮ್ ಧರ್ಮವನ್ನು ತ್ಯಜಿಸುವವರನ್ನು ಕೊಲ್ಲಬೇಕು" ಎಂದು ತಪ್ಪಾಗಿ ಗ್ರಹಿಸಿರುವ ಮುಸ್ಲಿಮರಿಗೆ ತಕ್ಕುದಾದ ಉತ್ತರವಾಗಿದೆ. ಇಸ್ಲಾಮ್ ಧರ್ಮವನ್ನು ತ್ಯಜಿಸುವವನಿಗೆ ಇಸ್ಲಾಮ್ ಧರ್ಮ ಶಾಸ್ತ್ರದ ಪ್ರಕಾರ ಮರಣ ದಂಡನೆಯೇ ಶಿಕ್ಷೆಯಾಗಿದ್ದರೆ, ಹಝ್ರತ್ ಪೈಗಂಬರ್(ಸ) ಈ ಒಪ್ಪಂದದಲ್ಲಿ, ಮುಸ್ಲಿಮರನ್ನು ತ್ಯಜಿಸಿ ಅವಿಶ್ವಾಸಿಗಳ ಬಳಿಗೆ ಹೋಗುವವರನ್ನು, ಅವರಿಗೆ ಶಿಕ್ಷೆ ನೀಡಲು ತಮ್ಮ ಬಳಿಗೆ ಹಿಂದಿರುಗಿಸಬೇಕು ಎಂದು ಆಗ್ರಹಪಡಿಸುತ್ತಿದ್ದರು.

ಈ ಒಪ್ಪಂದ ಬರೆದು ಎರಡು ಪಕ್ಷಗಳ ಸಹಿ ಹಾಕಿದ ನಂತರ ಅಲ್ಲಾಹನು ಈ ಒಪ್ಪಂದವನ್ನು ಪರೀಕ್ಷಿಸುವ ಒಂದು ಸನ್ನಿವೇಶವನ್ನು ಉಂಟುಮಾಡಿದನು. ಮಕ್ಕದವರ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಿದ ಸಹೀಲರ ಪುತ್ರ ಹಗ್ಗದಿಂದ ಕಟ್ಟಲ್ಪಟ್ಟಿದ್ದು ಗಾಯಗಳಿಂದ ರಕ್ತ ಸೋರುತ್ತಿರುವ ಅವಸ್ಥೆಯಲ್ಲಿ ಬಂದು ಹಝ್ರತ್ ಪೈಗಂಬರರ(ಸ) ಮುಂದೆ ಬಿದ್ದು, "ಓ ಅಲ್ಲಾಹನ ಪೈಗಂಬರರೇ, ನಾನು ಮನಃಪೂರ್ವಕವಾಗಿ ಮುಸ್ಲಿಮನಾಗಿರುವೆನು. ನಾನು ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದುದರಿಂದ ನನ್ನ ತಂದೆ ನನಗೆ ಕಷ್ಟ ಕೊಡುತ್ತಿದ್ದಾರೆ. ನನ್ನ ತಂದೆ

ಇಲ್ಲಿಗೆ ಬಂದುದು ತಿಳಿದುದರಿಂದ ನಾನು ಇದು ತಕ್ಕುದಾದ ಸಂಧರ್ಭವೆಂದು ಗ್ರಹಿಸಿ ನಿಮ್ಮ ಬಳಿಗೆ ಬಂದಿರುವೆನು" ಎಂದನು.

ಹಝ್ರತ್ ಪೈಗಂಬರ್(ಸ) ಆ ಯುವಕನೊಂದಿಗೆ ಮಾತನ್ನು ಆರಂಭಿಸುವ ಮೊದಲೇ ಅವನ ತಂದೆ ಸಹೀಲ್ ಹೇಳಿದರು: "ಒಪ್ಪಂದದ ಪ್ರಕಾರ ಇವನನ್ನು ನನ್ನೊಂದಿಗೆ ಕಳುಹಿಸಬೇಕು."

ಅಬೂ ಜಂದಲ್ ಎಂದು ಹೆಸರನ್ನು ಹೊಂದಿದ ಆ ಯುವಕನ ದುಸ್ಥಿತಿಯನ್ನು ನೋಡಿ ಮುಸ್ಲಿಮರು ವ್ಯಥೆಗೊಂಡರು. ತನ್ನ ತಂದೆಯಿಂದ ಇಂತಹ ದೌರ್ಜನ್ಯಗಳಿಗೆ ಪಾತ್ರನಾಗುತ್ತಿದ್ದ ಒಬ್ಬ ಯುವಕನನ್ನು ಮರಳಿ ಆತನ ತಂದೆಯ ಬಳಿಗೆ ಕಳುಹಿಸುವುದನ್ನು ನೋಡಲು ಅವರಿಗೆ ಸಹಿಸಲಾಗಲಿಲ್ಲ. ಅವರು ಒರೆಗಳಿಂದ ಖಡ್ಗವನ್ನೆಳೆದು, "ಹಿಂಸಾಚಾರಕ್ಕೆ ಗುರಿಪಡಿಸಲ್ಪಡುತ್ತಿರುವ ನಮ್ಮ ಈ ಸಹೋದರನನ್ನು ಹಿಂಸಾಚಾರಕ್ಕೆ ಗುರಿಯಾಗುವ ಸ್ಥಳಕ್ಕೆ ಪುನಃ ಹೋಗಲು ಬಿಡಲಾರೆವು. ನಾವು ಇದಕ್ಕಾಗಿ ನಮ್ಮ ಪ್ರಾಣವನ್ನೇ ನೀಡುವೆವು" ಎಂದು ನಿರ್ಧರಿಸಿದರು. ಅಲ್ಲದೆ ಅಬೂ ಜಂದಲ್ ಸಹ ಹಝ್ರತ್ ಪೈಗಂಬರರೊಂದಿಗೆ,

"ನೀವು ನನ್ನ ಸ್ಥಿತಿಯನ್ನು ನೋಡಿದ ನಂತರ ಸಹ ಈ ದೌರ್ಜನ್ಯಗಾರರ ವಶಕ್ಕೆ ನನ್ನನ್ನು ಒಪ್ಪಿಸುವಿರಾ? ಅವರು ನನಗೆ ಮೊದಲಿಗಿಂತ ಹೆಚ್ಚು ಚಿತ್ರಹಿಂಸೆ ನೀಡುವರು" ಎಂದು ಹೇಳಿದರು.

ಆಗ ಹಝ್ರತ್ ಪೈಗಂಬರ್,(ಸ) "ಅಲ್ಲಾಹನ ಪೈಗಂಬರ್ ಒಪ್ಪಂದಗಳನ್ನು ಮುರಿಯುವುದಿಲ್ಲ. ನಾವು ಒಪ್ಪಂದ ಮಾಡಿರುವೆವು. ನೀವು ಈಗ ಸಹನೆಯಿಂದ ವರ್ತಿಸಿರಿ ಮತ್ತು ಅಲ್ಲಾಹನ ಮೇಲೆ ಭರವಸೆ ಇಡಿರಿ. ನಿಮಗೆ ಮತ್ತು ನಿಮ್ಮಂತಹ ಇನ್ನಿತರ ಯುವಜನರಿಗೆ ಅಲ್ಲಾಹನೇ ಯಾವುದಾದರೂ ರಕ್ಷಾಮಾರ್ಗವನ್ನು ಉಂಟು ಮಾಡುವನು" ಎಂದರು.

ಈ ಒಪ್ಪಂದ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಮರಳಿ ಹೋದರು. ಅವರು ಮದೀನಕ್ಕೆ ತಲಪಿದಾಗ ಅಬೂ ಬಸೀರ್ ಎಂಬ ಒಬ್ಬ ಮಕ್ಕದ ಯುವಕ ಅವರ ಹಿಂದಿನಿಂದ ಓಡುತ್ತಾ ಬಂದು ಮದೀನವನ್ನು ತಲಪಿದನು. ಆದರೆ ಹಝ್ರತ್ ಪೈಗಂಬರ್(ಸ) ಅವನನ್ನು ಮಕ್ಕಕ್ಕೆ ಮರಳಿ ಹೋಗಲು ಆಗ್ರಹಪಡಿಸಿದರು. ಅವನನ್ನು ಹಿಡಿದುಕೊಂಡು ಹೋಗಲು ಬಂದವರೊಂದಿಗೆ ಮಾರ್ಗದಲ್ಲಿ ಹೊಡೆದಾಟವಾಯಿತು. ಅವನು ತನ್ನನ್ನು ಹಿಡಿದುಕೊಂಡು ಹೋಗುವವರಲ್ಲಿ ಒಬ್ಬನನ್ನು ಕೊಂದು ಓಡಿ ಹೋದನು. ಮಕ್ಕದವರು ಬಂದು ಹಝ್ರತ್ ಪೈಗಂಬರರಿಗೆ(ಸ) ದೂರಿತ್ತರು. ಹಝ್ರತ್ ಪೈಗಂಬರ್,(ಸ) "ನಾವು ನಿಮ್ಮ ಆ ವ್ಯಕ್ತಿಯನ್ನು ನಿಮ್ಮ ವಶಕ್ಕೆ ನೀಡಿದ್ದೇವೆ. ಅವನು ಎಲ್ಲಿದ್ದರೂ ಹುಡುಕಿ ಪುನಃ ನಿಮ್ಮ ವಶಕ್ಕೆ ನೀಡುವೆವು ಎಂಬ ಹೊಣೆಗಾರಿಕೆ ನಾವು ವಹಿಸಿಕೊಂಡಿಲ್ಲ" ಎಂದು ಹೇಳಿದರು.



ಈ ಘಟನೆಯ ಕೆಲವು ದಿನಗಳ ನಂತರ ಒಬ್ಬ ಮಹಿಳೆ ಮಕ್ಕದಿಂದ ಮದೀನಕ್ಕೆ ಓಡಿ ಬಂದಿದ್ದಳು. ಆಕೆಯ ಸಂಬಂಧಿಕರು ಆಕೆಯನ್ನು ಮರಳಿ ಕಳುಹಿಸಬೇಕೆಂದು ಹೇಳಿದಾಗ, ಹಝ್ರತ್ ಪೈಗಂಬರ್(ಸ), "ಒಪ್ಪಂದವನ್ನು ಪುರುಷರ ಬಗ್ಗೆ ಮಾತ್ರ ಮಾಡಲಾಗಿದೆ. ಮಹಿಳೆಯರಿಗೆ ಅದು ಅನ್ವಯಿಸುವುದಿಲ್ಲ. ಆದುದರಿಂದ ನಾವು ಮಹಿಳೆಯನ್ನು ಮರಳಿ ಕಳುಹಿಸುವುದಿಲ್ಲ" ಎಂದು ಹೇಳಿದರು.

## ವಿವಿಧ ದೇಶಗಳ ದೊರೆಗಳಿಗೆ ಪತ್ರಗಳು

ಮದೀನಕ್ಕೆ ಮರಳಿ ಬಂದ ನಂತರ ಹಝ್ರತ್ ಪೈಗಂಬರ್(ಸ) ತನ್ನ ಸಂದೇಶವನ್ನು ಲೋಕದ ಎಲ್ಲಾ ಭಾಗಗಳಿಗೆ ತಲಪಿಸುವ ನಿರ್ಧಾರ ಮಾಡಿದರು. ತನ್ನ ಈ ನಿರ್ಧಾರದ ಕುರಿತು ಹಝ್ರತ್ ಪೈಗಂಬರ್(ಸ) ಶಿಷ್ಯರೊಂದಿಗೆ ಹೇಳಿದಾಗ ಅವರಲ್ಲಿ ಕೆಲವರಿಗೆ ದೊರೆಗಳ ಆಸ್ಥಾನದ ಶಿಷ್ಟಾಚಾರಗಳ ಬಗ್ಗೆ ತಿಳಿದಿದ್ದುದರಿಂದ ಅವರು, "ದೊರೆಗಳು ಮುದ್ರೆಯೊತ್ತಿರದ ಪತ್ರಗಳನ್ನು ಸ್ವೀಕರಿಸುವುದಿಲ್ಲ" ಎಂದು ಹೇಳಿದರು. ಆದುದರಿಂದ ಹಝ್ರತ್ ಪೈಗಂಬರ್(ಸ) ಒಂದು ಮುದ್ರೆಯನ್ನು ತಯಾರು ಮಾಡಿಸಿದರು. ಅದರಲ್ಲಿ "ಮುಹಮ್ಮದ್ ರಸೂಲುಲ್ಲಾಹ್" (ಮುಹಮ್ಮದ್ ಅಲ್ಲಾಹನ ಸಂದೇಶವಾಹಕ) ಎಂದು ಕೊರೆಯಲಾಗಿತ್ತು. ಅಲ್ಲಾಹನಿಗೆ ಗೌರವ ಸೂಚಕವಾಗಿ ಅವರು ಅಲ್ಲಾಹ್ ಎಂಬ ಪದವನ್ನು ಮೇಲೆ, ಅದರ ಕೆಳಗೆ ರಸೂಲ್ ಮತ್ತು ಅದರ ಕೆಳಗೆ ಮುಹಮ್ಮದ್ ಎಂದು ಆ ಮುದ್ರಿಕೆಯಲ್ಲಿ ಕೊರೆಯಿಸಿದರು.

ಕ್ರಿ.. ಶಕ 628ರಲ್ಲಿ (ಮುಹರ್ರಮ್ ತಿಂಗಳಲ್ಲಿ) ಹಝ್ರತ್ ಪೈಗಂಬರರ(ಸ) ಪತ್ರಗಳೊಂದಿಗೆ ಶಿಷ್ಯರು ಬೇರೆ ಬೇರೆ ದೇಶಗಳ ಕಡೆಗೆ ಹೊರಟರು. ಇದರಲ್ಲಿ ಒಂದು ಪತ್ರ ಬೈಝಾಂಟೈನ್ ಸಾಮ್ರಾಜ್ಯದ ದೊರೆ ಖೈಸರ್‌ನಿಗಾಗಿತ್ತು. ಇನ್ನೊಂದು ಪತ್ರ ಇರಾನಿನ ದೊರೆಗೆ, ಮತ್ತೊಂದು ಪತ್ರ ಖೈಸರನ ಅಧೀನಕ್ಕೊಳಗಾದ ಈಜಿಪ್ಟಿನ ದೊರೆಗಾಗಿತ್ತು. ಒಂದು ಪತ್ರ ಅಬಿಸೀನಿಯಾದ ರಾಜ ನಜ್ಜಾಶಿಗೆ ಕಳುಹಿಸಲಾಗಿತ್ತು. ಇದಲ್ಲದೆ ಬೇರೆ ಕೆಲವು ದೊರೆಗಳಿಗೆ ಅವರು ಪತ್ರಗಳನ್ನು ಕಳುಹಿಸಿದರು.

## ಬೈಝಾಂಟೈನ್(ರೂಮ್) ಸಾಮ್ರಾಜ್ಯದ ಚಕ್ರವರ್ತಿ ಹೆರಾಕ್ಲಿಯಸ್‌ಗೆ ಬರೆದ ಪತ್ರ

ಬೈಝಾಂಟೈನ್ (ಕಾನ್‌ಸ್ಟೆಂಟಿನೋಪ್ಲ್)ನ ಚಕ್ರವರ್ತಿ ಹೆರಾಕ್ಲಿಯಸ್ (ಹಿರ್‌ಕಲ್)ನಿಗೆ ಪತ್ರವನ್ನು ಹಝ್ರತ್ ದಿಹ್‌ಯ ಕಲ್‌ಬೀಯವರ(ರ) ಕೈಯಲ್ಲಿ ಕಳುಹಿಸಲಾಗಿತ್ತು. ಅವರು ಮೊದಲು ಅರಬ್ ವಂಶಜ ಆಗಿದ್ದ ಬಸ್ರಾದ ಗವರ್ನರ್ ಬಳಿಗೆ ಹೋಗಿ ಅವರ ಮೂಲಕ ಖೈಸರ್‌ಗೆ ಪತ್ರ ತಲಪಿಸಬೇಕೆಂದು ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದ್ದರು. ಹಝ್ರತ್ ದಿಹ್‌ಯ ಕಲ್‌ಬೀ ಬಸ್ರಾದ ಗವರ್ನರ್ ಬಳಿಗೆ ತಲಪಿದಾಗ ಸಂದರ್ಭವಶಾತ್ ಖೈಸರನು ಶಾಮ್ (ಸಿರಿಯಾ) ಪ್ರದೇಶದ ಸಂಚಾರಕ್ಕೆ ಬಂದಿದ್ದನು. ಆಗ ಬಸ್ರಾದ ಗವರ್ನರ್ ದಿಹ್‌ಯ ಕಲ್‌ಬೀಯವರನ್ನು

ಖೈಸರನ ಬಳಿಗೆ ಕಳುಹಿಸಿದರು. ದಿಹ್‌ಯ ಖೈಸರನ ಆಸ್ಥಾನಕ್ಕೆ ತಲಪಿದಾಗ ಅವನ ಆಸ್ಥಾನದ ಅಧಿಕಾರಿಗಳು, ಖೈಸರ್ ಮುಂದೆ ಹಾಜರಾಗುವವರು ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡುವುದು ಅತ್ಯಾವಶ್ಯಕವಾಗಿದೆ ಎಂದರು. ದಿಹ್‌ಯ ಹೇಳಿದರು: "ನಾವು ಮುಸ್ಲಿಮರು ಮನುಷ್ಯರಿಗೆ ಸಾಷ್ಟಾಂಗ ಪ್ರಣಾಮ ಮಾಡುವುದಿಲ್ಲ." ಅವರು ಖೈಸರ್‌ನಿಗೆ ಸಾಷ್ಟಾಂಗ ಪ್ರಣಾಮ ಮಾಡದೆ ಅವನ ಮುಂದೆ ಹೋಗಿ ಹಝ್ರತ್ ಪೈಗಂಬರರ(ಸ) ಪತ್ರವನ್ನು ಕೊಟ್ಟರು. ಖೈಸರನು ಭಾಷಾಂತರಗಾರನಿಂದ ಪತ್ರವನ್ನು ಓದಿಸಿ ವಿಷಯವನ್ನು ತಿಳಿದುಕೊಂಡನು. ಅರಬ್ ದೇಶದ ಯಾವುದಾದರೂ ವ್ಯಾಪಾರಿ ತಂಡವು ಅಲ್ಲಿಗೆ ಬಂದಿದ್ದರೆ ತನ್ನ ಮುಂದೆ ಹಾಜರುಪಡಿಸಬೇಕೆಂದು ಅವನು ಆದೇಶಿಸಿದನು. ಅದೇ ಸಂಧರ್ಭದಲ್ಲಿ ಅಬೂ ಸುಫ್‌ಯಾನ್ ಒಂದು ವ್ಯಾಪಾರಿ ತಂಡದೊಂದಿಗೆ ಅಲ್ಲಿಗೆ ಆಗಮಿಸಿದ್ದರು. ಅಧಿಕಾರಿಗಳು ಅಬೂ ಸುಫ್‌ಯಾನರನ್ನು ದೊರೆಯ ಸನ್ನಿಧಿಗೆ ಕರೆದು ತಂದರು. ಅಬೂ ಸುಫ್‌ಯಾನರನ್ನು ತನ್ನ ಮುಂದೆ ಎಲ್ಲರಿಗಿಂತಲೂ ಮುಂದೆ ನಿಲ್ಲಿಸಬೇಕೆಂದೂ ತಂಡದ ಇತರರನ್ನು ಅವರ ಹಿಂದೆ ನಿಲ್ಲಿಸಬೇಕೆಂದೂ ದೊರೆ ಆಜ್ಞಾಪಿಸಿದನು. ಅಬೂ ಸುಫ್‌ಯಾನ್ ಯಾವುದಾದರು ವಿಷಯದ ಬಗ್ಗೆ ಸುಳ್ಳು ಹೇಳಿದರೆ ಅವರ ಸಂಗಡಿಗರು ಅದನ್ನು ಕೂಡಲೆ ಸರಿಪಡಿಸಬೇಕೆಂದು ಸಹ ಆಜ್ಞಾಪಿಸಿದನು. ಅನಂತರ ಅಬೂ ಸುಫ್‌ಯಾನ್‌ರೊಂದಿಗೆ ಹೀಗೆ ಸಂವಾದ ನಡೆಸಿದನು:

ಪ್ರಶ್ನೆ: ನನಗೆ ಪತ್ರ ಬರೆದಿರುವ ವ್ಯಕ್ತಿ ಪ್ರವಾದಿತ್ವದ ವಾದ ಮಾಡುತ್ತಿರುವರು. ಅವರನ್ನು ನೀವು ಬಲ್ಲಿರಾ, ಅವರ ಕುಲ ಎಂತಹದು?

ಅಬೂ ಸುಫ್‌ಯಾನ್ ಉತ್ತರ ಹೇಳಿದರು: ಅವರು ಉತ್ತಮ ಕುಲದವರು ಅವರು ನನ್ನ ಸಂಬಂಧಿಕರೂ ಆಗಿದ್ದಾರೆ.

ಪ್ರಶ್ನೆ: ಇಂತಹ ವಾದವನ್ನು ಇವರ ಮೊದಲು ಅರಬ್ ದೇಶದಲ್ಲಿ ಯಾರಾದರೂ ಮಾಡಿರುವರೋ?

ಉತ್ತರ: ಇಲ್ಲ.

ಪ್ರಶ್ನೆ: ಅವರು ವಾದಿಸಿದುದಕ್ಕೆ ಮೊದಲು ನೀವು ಅವರ ಮೇಲೆ ಸುಳ್ಳುಗಾರ ಎಂದು ಆರೋಪಮಾಡುತ್ತಿದ್ದಿರೋ?

ಉತ್ರರ: ಇಲ್ಲ.

ಪ್ರಶ್ನೆ: ಅವರ ತಂದೆ ತಾತಂದಿರಲ್ಲಿ ಯಾರಾದರೂ ದೊರೆಗಳಾಗಿದ್ದರೆ?

ಉತ್ರರ: ಇಲ್ಲ.

ಪ್ರಶ್ನೆ: ಅವರ ಬುದ್ಧಿ ಮತ್ತು ಸಲಹೆ ಹೇಗಿದೆ?

ಉತ್ತರ: ನಾವು ಅವರ ಬುದ್ಧಿ ಮತ್ತು ಸಲಹೆಯಲ್ಲಿ ಎಂದೂ ಯಾವ ಕುಂದು ಕೊರತೆಯನ್ನೂ ಕಾಣಲಿಲ್ಲ.

ಪ್ರಶ್ನೆ: ಅವರ ಗುಂಪಿನಲ್ಲಿ ದಬ್ಬಾಳಿಕೆಗಾರರೂ ಶಕ್ತಿಶಾಲಿಗಳೂ ಆದ ಜನರು



ಪ್ರವೇಶಿಸುತ್ತಿದ್ದಾರೋ ಅಥವಾ ಬಡವರೂ ನಿರ್ಗತಿಕರಾದವರೋ?

ಉತ್ತರ: ಬಡವರೂ ನಿರ್ಗತಿಕರೂ ಯುವಕರೂ ಅವರ ಗುಂಪಿನಲ್ಲಿ ಪ್ರವೇಶಿಸುತ್ತಿದ್ದಾರೆ.

ಪ್ರಶ್ನೆ: ಅವರ ಅನುಯಾಯಿಗಳ ಸಂಖ್ಯೆ ಹೆಚ್ಚಾಗುತ್ತಾ ಇದೆಯೋ, ಕಡಿಮೆ ಆಗುತ್ತಿದೆಯೋ?

ಉತ್ತರ: ಅವರ ಅನುಯಾಯಿಗಳ ಸಂಖ್ಯೆ ಹೆಚ್ಚಾಗುತ್ತಾ ಇದೆ.

ಪ್ರಶ್ನೆ: ಅವರ ಧರ್ಮವನ್ನು ಕೆಟ್ಟದೆಂದು ಹೇಳಿ ಅದನ್ನು ತ್ಯಜಿಸಿದ ಯಾರಾದರೂ ಇದ್ದಾರೆಯೇ?

ಉತ್ತರ: ಇಲ್ಲ.

ಪ್ರಶ್ನೆ: ಅವರು ತನ್ನ ಪ್ರತಿಜ್ಞೆಗೆ ವಿರುದ್ಧವಾಗಿ ಎಂದಾದರೂ ವರ್ತಿಸಿದ್ದಾರೆಯೇ?

ಉತ್ತರ: ಇಂದಿನ ವರೆಗೆ ಹಾಗೆ ಆಗಿಲ್ಲ. ನಾವು ಅವರೊಂದಿಗೆ ಹೊಸದಾಗಿ ಒಂದು ಒಡಂಬಡಿಕೆ ಮಾಡಿದ್ದೇವೆ. ಅದರ ಬಗ್ಗೆ ಅವರು ಹೇಗೆ ವರ್ತಿಸುತ್ತಾರೆಂದು ನೋಡಲಿಕ್ಕಿದೆ.

ಪ್ರಶ್ನೆ: ಅವರ ಮತ್ತು ನಿಮ್ಮ ಮಧ್ಯೆ ಎಂದಾದರೂ ಯುದ್ಧ ನಡೆದಿದೆಯೇ?

ಉತ್ತರ: ಹೌದು.

ಪ್ರಶ್ನೆ: ಯುದ್ಧಗಳ ಪರಿಣಾಮ ಏನಾಯಿತು?

ಉತ್ತರ: ನೀರೆತ್ತುವ ಚಕ್ರಕ್ಕೆ ಜೋಡಿಸಿದ ನೀರಿನ ತೊಟ್ಟಿಗಳ ಹಾಗೆ ಅದರ ಸ್ಥಿತಿ ಇದೆ. ಕೆಲವು ಸಾರಿ ನಮ್ಮ ಕೈಯಲ್ಲಿ ತೊಟ್ಟಿ ಇರುತ್ತದೆ. ಕೆಲವು ಸಾರಿ ಅವರ ಕೈಯಲ್ಲಿ ತೊಟ್ಟಿ ಇರುತ್ತದೆ. ಬದ್ರ್ ಯುದ್ಧದಲ್ಲಿ ನಾನು ಸೇರಿರಲಿಲ್ಲ. ಆದುದರಿಂದ ಅವರಿಗೆ ಜಯ ಲಭಿಸಿತು. ಉಹುದ್ ಯುದ್ಧದಲ್ಲಿ ನಾನು ಮುಖ್ಯ ಸೇನಾಧಿಪತಿಯಾಗಿದ್ದೆ. ನಾವು ಅವರ ಹೊಟ್ಟೆ ಸೀಳಿದೆವು, ಅವರ ಕಿವಿ ಕತ್ತರಿಸಿದೆವು, ಅವರ ಮೂಗನ್ನು ತುಂಡರಿಸಿದೆವು.

ಪ್ರಶ್ನೆ: ಅವರು ನಿಮಗೆ ಆಜ್ಞಾಪಿಸುವುದೇನನ್ನು?

ಉತ್ತರ: ಅವರು ಹೇಳುತ್ತಾರೆ – ಏಕದೇವನನ್ನು ಆರಾಧಿಸಿರಿ. ಅವನಿಗೆ ಯಾರನ್ನೂ ಸಹಭಾಗಿ ಮಾಡಬೇಡಿರಿ. ನಮ್ಮ ತಂದೆ ತಾತಂದಿರು ಆರಾಧಿಸುತ್ತಾ ಇದ್ದ ವಿಗ್ರಹಗಳನ್ನು ಪೂಜಿಸುವುದನ್ನು ಅವರು ತಡೆಯುತ್ತಾರೆ. ನಾವು ಏಕದೇವನನ್ನು ಆರಾಧಿಸಬೇಕೆಂದೂ ಸತ್ಯಹೇಳಬೇಕೆಂದೂ ಕೆಟ್ಟ ಮತ್ತು ಕೊಳಕು ಕೃತ್ಯಗಳಿಂದ ದೂರ ಸರಿಯಬೇಕೆಂದೂ ಹೇಳುತ್ತಾರೆ. ನಾವು ಸೌಹಾರ್ದದಿಂದ ವರ್ತಿಸಬೇಕೆಂದೂ ಪ್ರತಿಜ್ಞೆಯ ಪಾಲನೆ ಮಾಡಬೇಕೆಂದೂ ವಿಶ್ವಸ್ತ ನಿಧಿಗಳನ್ನು ಮರಳಿಕೊಡಬೇಕೆಂದೂ ಅವರು ಆಜ್ಞಾಪಿಸುತ್ತಾರೆ.[64]

64. ಬುಖಾರಿ.

## ಹಝ್ರತ್ ಪೈಗಂಬರ್(ಸ) ಸತ್ಯವಂತನಾದ ಪ್ರವಾದಿ ಎಂದು ಖೈಸರ್ ಚಕ್ರವರ್ತಿಯ ತೀರ್ಮಾನ

ಈ ಪ್ರಶ್ನೋತ್ತರಗಳು ಮುಗಿದ ನಂತರ ಖೈಸರ್ ಚಕ್ರವರ್ತಿ ಹೇಳಿದನು: ಪ್ರವಾದಿತ್ವ ವಾದಿಯ ಕುಟುಂಬದ ಬಗ್ಗೆ ನಾನು ಪ್ರಶ್ನೆ ಕೇಳಿದಾಗ ಅವರು ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವರೆಂದು ಹೇಳಿದಿರಿ. ಪ್ರವಾದಿಗಳು ಯಾವಾಗಲೂ ಉತ್ತಮ ವಂಶದಲ್ಲಿ ಜನಿಸುತ್ತಾರೆ. ಅವರಿಗಿಂತ ಮೊದಲು ಯಾರಾದರೂ ಪ್ರವಾದಿತ್ವದ ವಾದ ಮಾಡಿದ್ದಾರೋ ಎಂದು ನಾನು ಕೇಳಿದಾಗ ಇಲ್ಲವೆಂದು ನೀವು ಹೇಳಿದಿರಿ. ನಾನು ಈ ಪ್ರಶ್ನೆ ಕೇಳಿದುದು ಏಕೆಂದರೆ, ಸಮೀಪ ಕಾಲದಲ್ಲಿ ಯಾರಾದರೂ ತಾನು ಪ್ರವಾದಿ ಎಂದು ವಾದಿಸಿದ್ದರೆ ಅವನನ್ನು ಅನುಕರಣೆ ಮಾಡಿ ಇವರೂ ವಾದಿಸಿರಬಹುದೆಂದು ಊಹಿಸಬಹುದಾಗಿತ್ತು. ಅವರು ಪ್ರವಾದಿ ಎಂದು ವಾದಿಸುವ ಮೊದಲು ಅವರ ಮೇಲೆ ಯಾವಾಗಲಾದರೂ ಸುಳ್ಳು ಹೇಳುವವರೆಂದು ಆರೋಪ ಹೊರಿಸಲಾಗಿತ್ತೇ ಎಂದು ನಾನು ಕೇಳಿದೆ. ನೀವು ಇಲ್ಲ ಎಂದು ಹೇಳಿದಿರಿ. ಒಬ್ಬ ಮನುಷ್ಯನು ಮನುಷ್ಯರ ಬಗ್ಗೆ ಸುಳ್ಳು ಹೇಳದವನಾಗಿದ್ದರೆ ದೇವನ ಬಗ್ಗೆಯೂ ಸುಳ್ಳು ಹೇಳಲಾರ ಎಂದು ನಾನು ತಿಳಿದುಕೊಂಡೆನು. ಅವರ ತಂದೆ ತಾತಂದಿರಲ್ಲಿ ಯಾರಾದರೂ ದೊರೆಗಳಾಗಿದ್ದರೇ ಎಂದು ನಾನು ಕೇಳಿದೆ. ನೀವು ಇಲ್ಲವೆಂದು ಹೇಳಿದಿರಿ. ಅವರು ತನ್ನ ತಂದೆ ತಾತಂದಿರ ರಾಜ್ಯವನ್ನು ಮರಳಿ ಗಳಿಸಲು ಪ್ರವಾದಿತ್ವದ ವಾದ ಮಾಡಿಲ್ಲ ಎಂದು ನನಗೆ ತಿಳಿಯಿತು. ಅವರ ಅನುಯಾಯಿಗಳಾಗಿ ದಬ್ಬಾಳಿಕೆಗಾರರೂ ಬಲಿಷ್ಠರೂ ಸೇರುತ್ತಿದ್ದಾರೋ ಅಥವಾ ಬಡವರೂ ನಿರ್ಗತಿಕರೂ ಸೇರುತ್ತಿದ್ದರೋ ಎಂದು ನಾನು ಪ್ರಶ್ನಿಸಿದೆ. ನೀವು ಬಡವರೂ ನಿರ್ಗತಿಕರೂ ಅವರ ಗಂಪಿನಲ್ಲಿ ಸೇರುತ್ತಿದ್ದಾರೆ ಎಂದು ಹೇಳಿದಿರಿ. ಎಲ್ಲಾ ಪ್ರವಾದಿಗಳ ಅನುಯಾಯಿಗಳಲ್ಲಿ ಬಹುತೇಕ ಜನರು ಬಡವರೂ ನಿರ್ಗತಿಕರೂ ಆಗಿರುತ್ತಾರೆ. ದಬ್ಬಾಳಿಕೆಗಾರರೂ ಬಲಿಷ್ಠರೂ ಅಹಂಕಾರಿಗಳೂ ಅವರ ಜೊತೆ ಸೇರುವುದಿಲ್ಲ. ಅವರ ಅನುಯಾಯಿಗಳ ಸಂಖ್ಯೆ ವರ್ಧಿಸುತ್ತಿದೆಯೋ, ಕಡಿಮೆಯಾಗುತ್ತಿದೆಯೋ? ಎಂದು ನಾನು ಕೇಳಿದೆ. ಅವರ ಅನುಯಾಯಿಗಳ ಸಂಖ್ಯೆ ವರ್ಧಿಸುತ್ತಾ ಇದೆ ಎಂದು ನೀವು ಹೇಳಿದಿರಿ. ಪ್ರವಾದಿಗಳ ಅನುಯಾಯಿಗಳ ಸ್ಥಿತಿ ಹೀಗೆಯೇ ಇರುತ್ತದೆ. ಅವರ ಸಂಖ್ಯೆ ವರ್ಧಿಸುತ್ತಲೇ ಇರುತ್ತದೆ. ಅವರ ಧರ್ಮವನ್ನು ಇಷ್ಟಪಡದೆ, ಅವರ ಧರ್ಮವನ್ನು ತ್ಯಜಿಸಿ ಯಾರಾದರೂ ಹೋಗುತ್ತಾರೋ ಎಂದು ನಾನು ಕೇಳಿದೆ. ನೀವು ಇಲ್ಲ ಎಂದು ಹೇಳಿದಿರಿ ಪ್ರವಾದಿಗಳ ಅನುಯಾಯಿಗಳ ಸ್ಥಿತಿ ಹೀಗೆಯೇ ಇರುತ್ತದೆ. ಪ್ರವಾದಿಗಳ ಅನುಯಾಯಿಗಳು ಪ್ರವಾದಿಯ ಧರ್ಮ ಕೆಟ್ಟದ್ದೆಂದು ಮನವರಿಕೆ ಮಾಡಿ ಅದನ್ನು ಬಿಟ್ಟುಹೋಗುವುದಿಲ್ಲ. ಅವರಲ್ಲಿ ಯಾರಾದರೂ ಬಿಟ್ಟು ಹೋಗುವುದಾದರೆ ಬೇರೆ ಯಾವುದಾದರೂ ಕಾರಣವಿರುತ್ತದೆ. ನಿಮ್ಮ ಮಧ್ಯೆ ಯುದ್ಧವಾಗಿದೆಯೋ? ಅದರ ಪರಿಣಾಮ ಏನಾಯಿತು? ಎಂದು ನಾನು ಕೇಳಿದೆ. ಯುದ್ಧದ ಪರಿಣಾಮ ನೀರೆತ್ತುವ ಚಕ್ರಕ್ಕೆ ಜೋಡಿಸಿದ ನೀರಿನ ತೊಟ್ಟಿಯ ಹಾಗೆ



ಆಗಿದೆ ಎಂದು ನೀವು ಹೇಳಿದಿರಿ. ಪ್ರಾರಂಭದಲ್ಲಿ ಪ್ರವಾದಿಗಳ ಅನುಯಾಯಿಗಳಿಗೆ ಕಷ್ಟ ಕಾರ್ಪಣ್ಯಗಳು ಉಂಟಾಗುತ್ತವೆ. ಆದರೆ ಕೊನೆಗೆ ಅವರೇ ವಿಜಯಿಗಳಾಗುತ್ತಾರೆ. ಅವರು ನಿಮಗೆ ನೀಡುವ ಉಪದೇಶಗಳು ಯಾವುವು ಎಂದು ನಾನು ಕೇಳಿದೆ. ಪ್ರಾರ್ಥನೆ, ಸತ್ಯಸಂಧತೆ, ಪರಿಶುದ್ಧತೆ, ಪ್ರತಿಜ್ಞೆಯಪಾಲನೆ ಮತ್ತು ವಿಶ್ವಸ್ತನಿಧಿಯನ್ನು ಕಾಪಾಡುವ ಉಪದೇಶ ನೀಡುತ್ತಾರೆಂದು ನೀವು ಹೇಳಿದಿರಿ. ಅವರು ಮೋಸ, ವಂಚನೆ ಮಾಡುತ್ತಾರೋ ಎಂದು ನಾನು ಕೇಳಿದೆ. ಇಲ್ಲವೆಂದು ನೀವು ಹೇಳಿದಿರಿ. ಇದು ಯಾವಾಗಲೂ ಒಳ್ಳೆಯ ಜನರ ನಡೆವಳಿಕೆಗಳು ಆಗಿರುತ್ತವೆ. ಅವರು ತನ್ನ ಪ್ರವಾದಿತ್ವದ ವಾದದಲ್ಲಿ ಸತ್ಯವಂತರೆಂದು ನಾನು ಭಾವಿಸುತ್ತೇನೆ. ಈ ಕಾಲಘಟ್ಟದಲ್ಲಿ ಆ ಪ್ರವಾದಿ ಬರುವರೆಂದು ನಾನು ಸಹ ಯೋಚಿಸಿದ್ದೆನು. ಆದರೆ ಆ ಪ್ರವಾದಿ ಅರಬಿಗಳಲ್ಲಿ ಜನಿಸುವರೆಂದು ನಾನು ನಿರೀಕ್ಷಿಸಿರಲಿಲ್ಲ. ನೀವು ಹೇಳಿದ ಉತ್ತರಗಳು ಸತ್ಯವಾಗಿದ್ದರೆ ಅವರು ನಿಶ್ಚಯವಾಗಿಯೂ ಈ ಎಲ್ಲಾ ದೇಶಗಳನ್ನು ತಮ್ಮ ಅಧೀನಕ್ಕೊಳಪಡಿಸುವರು ಎಂದು ನಾನು ಭಾವಿಸುತ್ತೇನೆ.[64a]

ದೊರೆಯ ಈ ಮಾತುಗಳನ್ನು ಆಲಿಸಿದಾಗ ಅವರ ಆಸ್ಥಾನಿಕರು ರೋಷಾನ್ವಿತರಾದರು. "ನೀವು ಕ್ರೈಸ್ತ ಧರ್ಮಾವಲಂಬಿಯಾಗಿದ್ದರೂ ಒಬ್ಬ ಅನ್ಯ ಜನಾಂಗದ ವ್ಯಕ್ತಿಯನ್ನು ಸತ್ಯವಂತನೆಂದು ಅಂಗೀಕರಿಸುತ್ತಿರುವಿರಲ್ಲ" ಎಂದು ಅವರು ಹೇಳಿದರು. ಆಸ್ಥಾನಿಕರ ಪ್ರತಿಭಟನೆಯ ಧ್ವನಿಯು ಉಚ್ಚವಾಗ ತೊಡಗಿತು. ಆಗ ಆಸ್ಥಾನದ ಅಧಿಕಾರಿಗಳು ಅಬೂ ಸುಫ್‌ಯಾನರನ್ನೂ ಅವರ ಜೊತೆಗಾರರನ್ನೂ ಅಲ್ಲಿಂದ ಬೇಗ ಬೇಗನೆ ಹೊರಗೆ ಕಳುಹಿಸಿದರು.

## ಹಿರ್‌ಕಲ್ ಚಕ್ರವರ್ತಿಗೆ ಕಳುಹಿಸಿದ ಪತ್ರ

ಅಪರಿಮಿತ ಕರುಣಾಮಯನೂ ಪದೇ ಪದೇ ದಯೆದೋರುವವನೂ ಆಗಿರುವ ಅಲ್ಲಾಹನ ನಾಮದಿಂದ. ಅಲ್ಲಾಹನ ದಾಸನೂ ಪೈಗಂಬರನೂ ಆಗಿರುವ ಮುಹಮ್ಮದ್‌ನಿಂದ ರೂಮಿನ ಅಧಿಪತಿ ಹಿರ್‌ಕಲ್‌ರಿಗೆ ಬರೆದ ಪತ್ರ. ಅಲ್ಲಾಹನ ಮಾರ್ಗದರ್ಶನವನ್ನು ಹಿಂಬಾಲಿಸುವವನ ಮೇಲೆ ಶಾಂತಿ ಉಂಟಾಗಲಿ. ಆದಾಗಿ, ನಾನು ನಿಮ್ಮನ್ನು ಇಸ್ಲಾಮ್ ಧರ್ಮಕ್ಕೆ ಆಹ್ವಾನಿಸುತ್ತೇನೆ. (ಎಂದರೆ ಏಕದೇವನನ್ನು ಮತ್ತು ಅವನ ಸಂದೇಶವಾಹಕ ಮುಹಮ್ಮದ್‌ನನ್ನು ನಂಬಲು.) ನೀವು ಇಸ್ಲಾಮ್ ಧರ್ಮವನ್ನು ಸೇರಿದರೆ ನಿಮ್ಮನ್ನು ಅಲ್ಲಾಹನು ಎಲ್ಲಾ ಪರೀಕ್ಷೆಗಳಲ್ಲೂ ರಕ್ಷಿಸುವನು. ನಿಮಗೆ ಇಮ್ಮಡಿ ಪುಣ್ಯವನ್ನು ದಯಪಾಲಿಸುವನು (ಈಸಾರನ್ನು ನಂಬುವ ಮತ್ತು ಮುಹಮ್ಮದರನ್ನು ನಂಬುವ ಅನುಗ್ರಹ). ಆದರೆ ನೀವು ಹೀಗೆ ಮಾಡುವುದನ್ನು ನಿರಾಕರಿಸಿದರೆ ನಿಮ್ಮ ಸ್ವಂತ ಪಾಪ ದೋಷ ಮಾತ್ರವಲ್ಲ, ನಿಮ್ಮ ಪ್ರಜೆಗಳು

64a. ಬುಖಾರಿ.

ಸತ್ಯಧರ್ಮವನ್ನು ಅಂಗೀಕರಿಸದೆ ಇದ್ದುದರ ಪಾಪ ದೋಷ ಸಹ ನಿಮ್ಮ ಮೇಲೆ ಹೊರಿಸಲ್ಪಡುವುದು. ಕೊನೆಗೆ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ಬರೆಯಲಾಗಿತ್ತು:

ಓ ಗ್ರಂಥ ನೀಡಲ್ಪಟ್ಟವರೇ, ನಿಮಗೂ ನಮಗೂ ಸಮಾನವಾಗಿರುವ ವಿಶ್ವಾಸದ ಕಡೆಗೆ ಬನ್ನಿರಿ: ನಾವು ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸಬಾರದು. ಯಾವ ವಸ್ತುವನ್ನೂ ಅವನಿಗೆ ಸರಿಸಾಟಿಯಾಗಿ ಮಾಡಬಾರದು. ಅಲ್ಲಾಹನ ಹೊರತು ಅವನ ಯಾವನಾದರೂ ದಾಸನಿಗೆ ಅವನು ದೈವಿಕ ಗುಣಗಳನ್ನು ಹೊಂದಿದವನೆಂದು ಗಣಿಸಲ್ಪಡುವ ರೀತಿಯಲ್ಲಿ ಗೌರವವನ್ನು ನೀಡಬಾರದು. ಗ್ರಂಥ ನೀಡಲ್ಪಟ್ಟವರು ಈ ಆಹ್ವಾನವನ್ನು ಅಂಗೀಕರಿಸದಿದ್ದರೆ, ಓ ಮುಹಮ್ಮದ್, ಮತ್ತು ಅವರ ಸಂಗಾತಿಗಳೇ, ನೀವು ಹೇಳಿರಿ; ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರೆಂಬುದಕ್ಕೆ ನೀವು ಸಾಕ್ಷಿಗಳಾಗಿರಿ.[65]

ಚರಿತ್ರೆಯ ಕೆಲವು ಗ್ರಂಥಗಳಲ್ಲಿ ಹೀಗೆ ಬರೆಯಲಾಗಿದೆ: ಈ ಪತ್ರವನ್ನು ಖೈಸರನ ಮುಂದೆ ಇರಿಸಿದಾಗ ಕೆಲವು ಆಸ್ಥಾನಿಕರು ಹೇಳಿದರು: ಈ ಪತ್ರವನ್ನು ಹರಿದು ಬಿಸಾಡಬೇಕು. ಈ ಪತ್ರದಲ್ಲಿ ಚಕ್ರವರ್ತಿಯನ್ನು ಅಪಮಾನಿಸಲಾಗಿದೆ. ಈ ಪತ್ರದ ಮೇಲೆ ರೂಮಿನ ಚಕ್ರವರ್ತಿ ಎಂದು ಬರೆಯದೆ ರೂಮಿನ ಅಧಿಪತಿ ಎಂದು ಬರೆಯಲಾಗಿದೆ. ಆದರೆ ಚಕ್ರವರ್ತಿ ಹೇಳಿದನು: ಪತ್ರವನ್ನು ಓದುವ ಮೊದಲೇ ಹರಿದು ಹಾಕುವುದು ವಿವೇಕ ಶೂನ್ಯ ಕೃತ್ಯವಾಗಿದೆ. ನನ್ನನ್ನು ರೂಮಿನ ಅಧಿಪತಿ ಎಂದು ಬರೆದುದು ಸರಿಯೇ ಆಗಿದೆ. ಏಕೆಂದರೆ ಸರ್ವವೂ ದೇವನ ಮಾಲಿಕತ್ವಕ್ಕೆ ಸೇರಿದೆ. ನಾನು ದೇಶದ ಮೇಲ್ವಿಚಾರಕನು ಮಾತ್ರವಾಗಿರುವೆನು.

ಹಝ್ರತ್ ಪೈಗಂಬರರಿಗೆ(ಸ) ಈ ಘಟನೆಯ ಸಮಾಚಾರ ತಿಳಿದಾಗ ಅವರು ಹೇಳಿದರು: ರೂಮಿನ ದೊರೆಯು ಈ ರೀತಿ ವರ್ತಿಸಿದುದರಿಂದ ಆತನ ಆಡಳಿತೆಯು ರಕ್ಷಿಸಲ್ಪಡುವುದು. ಆತನ ಸಂತಾನಕ್ಕೆ ಸೇರಿದವರು ದೀರ್ಘಕಾಲ ಆಳುವರು. ಹಾಗೆಯೇ ಸಂಭವಿಸಿತು. ಅನಂತರದ ಕಾಲಘಟ್ಟದಲ್ಲಿ ನಡೆದ ಯುದ್ಧಗಳಲ್ಲಿ ರೂಮಿನ ಚಕ್ರಾಧಿಪತ್ಯಕ್ಕೆ ಅಧೀನವಾದ ಅನೇಕ ದೇಶಗಳು ಹಝ್ರತ್ ಪೈಗಂಬರರ(ಸ) ಬೇರೆ ಒಂದು ಭವಿಷ್ಯವಾಣಿಯ ಪ್ರಕಾರ ಅವರ ಕೈಬಿಟ್ಟು ಹೋದರೂ ಈ ಸಂಭವ ನಡೆದು ಆರು ನೂರು ವರ್ಷಗಳ ಕಾಲ ಈ ದೊರೆಯ ರಾಜವಂಶವು ಕಾನ್‌ಸ್ಟೆಂಟ್‌ನೋಪ್ಲ್‌ನಲ್ಲಿ (ಎಂದರೆ ರೂಮ್‌ನಲ್ಲಿ) ಆಳ್ವಿಕೆ ನಡೆಸಿತು. ರೂಮ್ ಸರಕಾರದ ವಶದಲ್ಲಿ ಹಝ್ರತ್ ಪೈಗಂಬರರ(ಸ) ಈ ಪತ್ರ ದೀರ್ಘಕಾಲ ಸುರಕ್ಷಿತವಾಗಿತ್ತು. ಬಾದಶಹ ಮನ್‌ಸೂರ್ ಕಲಾದೂನ್‌ರವರ ಕೆಲವು ರಾಯಭಾರಿಗಳು ಒಮ್ಮೆ ರೂಮಿನ ದೊರೆಯ ಬಳಿಗೆ ಹೋದಾಗ ದೊರೆಯು ಅವರಿಗೆ ತೋರಿಸಲು ಒಂದು ಪೆಟ್ಟಿಗೆಯನ್ನು ತರಿಸಿ ಹೇಳಿದರು: ನನ್ನ ಒಬ್ಬ ಹಿರಿಯ ತಾತನವರಿಗೆ ನಿಮ್ಮ ಪೈಗಂಬರರ ಪತ್ರ ಬಂದಿತ್ತು. ಅದು ಇಂದಿನ ತನಕ ಸುರಕ್ಷಿತವಾಗಿ ಇರಿಸಲ್ಪಟ್ಟಿದೆ.

65. ಬುಖಾರಿ; ಝುರ್‌ಖಾನಿ ಸಂಪುಟ3 ಪುಟ 336.



## ಪರ್ಶಿಯಾ (ಇರಾನ್) ದೊರೆಗೆ ಪತ್ರ

ಹಝ್ರತ್ ಪೈಗಂಬರ್(ಸ) ಪರ್ಶಿಯಾದ ದೊರೆಗೆ ಅಬ್ದುಲ್ಲಾ ಬಿನ್ ಹುಝಾಫರ ಮೂಲಕ ಪತ್ರವನ್ನು ಕಳುಹಿಸಿದ್ದರು. ಅದರಲ್ಲಿ ಹೀಗೆ ಬರೆದಿತ್ತು:

ಅಪರಿಮಿತ ಕರುಣಾಮಯನೂ ಪದೇ ಪದೇ ದಯೆದೋರುವವನೂ ಆಗಿರುವ ಅಲ್ಲಾಹನ ನಾಮದಿಂದ. ಅಲ್ಲಾಹನ ಪೈಗಂಬರ್ ಮುಹಮ್ಮದ್ ಪರ್ಶಿಯಾದ ದೊರೆ ಕಿಸ್ರಾರಿಗೆ ಬರೆದ ಪತ್ರ. ಅಲ್ಲಾಹನ ಮಾರ್ಗದರ್ಶನವನ್ನು ಹಿಂಬಾಲಿಸುವವನ ಮೇಲೆ ಶಾಂತಿ ಉಂಟಾಗಲಿ – ಅಲ್ಲಾಹನನ್ನೂ ಅವನ ಸಂದೇಶ ವಾಹಕನನ್ನೂ ನಂಬಿ ಅಲ್ಲಾಹನ ಹೊರತು ಅನ್ಯ ದೇವನಿಲ್ಲ, ಅವನು ಏಕನೂ ಸರಿಸಾಟಿಗಳಿಲ್ಲದವನೂ ಆಗಿರುವನು ಮತ್ತು ಮುಹಮ್ಮದ್ ಅವನ ದಾಸನೂ ಸಂದೇಶವಾಹಕನೂ ಆಗಿರುವನೆಂದು ಸಾಕ್ಷ್ಯ ಹೇಳುವವನ ಮೇಲೆ. ನಾನು ಅಲ್ಲಾಹನ ಆಜ್ಞೆ ಪ್ರಕಾರ ನಿಮ್ಮನ್ನು ಇಸ್ಲಾಮ್ ಧರ್ಮದ ಕಡೆಗೆ ಆಹ್ವಾನಿಸುತ್ತೇನೆ. ಏಕೆಂದರೆ ನಾನು ಸಕಲ ಮನುಷ್ಯರಿಗೆ ಅಲ್ಲಾಹನ ಸಂದೇಶವಾಹಕನಾಗಿ ಕಳುಹಿಸಲ್ಪಟ್ಟಿರುವೆನು. ನಾನು ಪ್ರತಿಯೊಬ್ಬ ಜೀವಂತ ವ್ಯಕ್ತಿಗೆ ಎಚ್ಚರಿಕೆ ನೀಡಲಿಕ್ಕಾಗಿ ಮತ್ತು ಅವಿಶ್ವಾಸಿಗಳಿಗೆ ಪೂರ್ಣವಾಗಿ ಸಂದೇಶ ತಲಪಿಸಲು ನೇಮಿಸಲ್ಪಟ್ಟಿರುವೆನು. ನೀವು ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದರೆ ಎಲ್ಲಾ ಪರೀಕ್ಷೆಗಳಿಂದ ಸುರಕ್ಷಿತರಾಗುವಿರಿ. ನೀವು ಸಂದೇಶವನ್ನು ತಿರಸ್ಕರಿಸಿದರೆ ಎಲ್ಲಾ ಅಗ್ನಿ ಆರಾಧಕರ ಪಾಪ ನಿಮ್ಮ ಮೇಲೆ ಹೊರಿಸಲ್ಪಡುವುದು.[66]

ಅಬ್ದುಲ್ಲಾ ಬಿನ್ ಹುಝಾಫ ಹೀಗೆ ಹೇಳುತ್ತಾರೆ: ನಾನು ಕಿಸ್ರಾ ದೊರೆಯ ಆಸ್ಥಾನವನ್ನು ತಲಪಿದಾಗ ಒಳಗೆ ಪ್ರವೇಶಿಸಲು ಅನುಮತಿ ಕೇಳಿದೆ. ನನಗೆ ಅನುಮತಿ ದೊರಕಿತು. ನಾನು ಪತ್ರವನ್ನು ಓದಿ ಕಿಸ್ರಾನಿಗೆ ಕೊಟ್ಟಾಗ ಅವನು ಭಾಷಾಂತರಕಾರನನ್ನು ಕರೆದು ಓದಲು ಆಜ್ಞಾಪಿಸಿದನು. ಭಾಷಾಂತರಕಾರನು ಪತ್ರದ ಭಾಷಾಂತರವನ್ನು ಓದಿ ಹೇಳಿದಾಗ ಕಿಸ್ರಾ ಕೋಪದಿಂದ ಪತ್ರವನ್ನು ಹರಿದು ಹಾಕಿದನು. ಅಬ್ದುಲ್ಲಾ ಬಿನ್ ಹುಝಾಫ ಈ ಸಮಾಚಾರವನ್ನು ಹಝ್ರತ್ ಪೈಗಂಬರರಿಗೆ(ಸ) ನಿವೇದಿಸಿದಾಗ ಅವರು ಹೀಗೆಂದರು;

"ಕಿಸ್ರಾ ನಮ್ಮ ಪತ್ರದೊಂದಿಗೆ ವರ್ತಿಸಿದ ಹಾಗೆಯೇ ಅಲ್ಲಾಹನು ಅವನ ದೊರೆತನಕ್ಕೆ ಸಂಬಂಧಿಸಿ ವರ್ತಿಸುವನು."

ಕಿಸ್ರಾ ಹೀಗೆ ವರ್ತಿಸಲು ಕಾರಣವೇನೆಂದರೆ, ರೂಮ್ (ಕಾನ್‌ಸ್ಟೆಂಟಿನೋಪ್ಲ್) ಸಾಮ್ರಾಜ್ಯದ ದೇಶಗಳಿಂದ ಓಡಿ ಪರ್ಶಿಯಾದಲ್ಲಿ ಆಶ್ರಯ ಪಡೆದಿದ್ದ ಮತ್ತು ರೂಮೀ ಸಾಮ್ರಾಜ್ಯದ ವಿರುದ್ಧ ಒಳಸಂಚುಗಳಲ್ಲಿ ಕಿಸ್ರಾನಿಗೆ ಸಹಕಾರಿಗಳಾಗಿದ್ದುದರಿಂದ ಕಿಸ್ರಾನಿಗೆ ಬಹಳ ನಿಕಟರಾಗಿದ್ದ ಯಹೂದಿಯರ ಮೂಲಕ ಅರಬ್ ದೇಶದ ಯಹೂದಿಯರು ಕಿಸ್ರಾನನ್ನು ಹಝ್ರತ್ ಪೈಗಂಬರರ(ಸ) ವಿರುದ್ಧ ಪ್ರಚೋದಿಸಿದ್ದರು.

66. ಝುರ್‌ಖಾನಿ ಸಂಪುಟ 3 ಪುಟ 340, ತಾರೀಖುಲ್ ಖಮೀಸ್ ಸಂಪುಟ 2 ಪುಟ 38.

ಹಝ್ರತ್ ಪೈಗಂಬರರ(ಸ) ಪತ್ರವು ಕಿಸ್ರಾನಿಗೆ ಲಭಿಸಿದಾಗ ಯಹೂದಿಯರ ದೂರುಗಳು ಸರಿಯೆಂದು ಅವನು ತಪ್ಪಾಗಿ ಭಾವಿಸಿದನು. ಈ ಪ್ರವಾದಿತ್ವವಾದಿ ನನ್ನ ರಾಜ್ಯದ ಮೇಲೆ ಸಹ ಕಣ್ಣಿರಿಸಿರುವನು ಎಂದು ಅವನು ಯೋಚಿಸಿದನು. ಈ ಪತ್ರ ದೊರಕಿದ ಕೂಡಲೆ ಅವನು ಯಮನ್‌ನಲ್ಲಿ ತನ್ನ ಗವರ್ನರ್ ಆಗಿದ್ದವನಿಗೆ ಹೀಗೆ ಪತ್ರ ಬರೆದನು:

"ಖುರೈಶರಲ್ಲಿ ಒಬ್ಬ ಪ್ರವಾದಿತ್ವದ ವಾದ ಮಾಡಿದ್ದಾನೆ. ಅವನು ತನ್ನ ವಾದದಲ್ಲಿ ಬಹಳ ಮುಂದುವರಿದಿರುವನು. ನೀನು ಕೂಡಲೆ ಇಬ್ಬರನ್ನು ಕಳುಹಿಸಿ ಅವನನ್ನು ಬಂಧಿಸಿ ನನ್ನ ಮುಂದೆ ಹಾಜರುಪಡಿಸು."

ಆಗ ಯಮನ್‌ನಲ್ಲಿ ಕಿಸ್ರಾನ ಗವರ್ನರ್ ಆಗಿದ್ದ ಬಾಝಾನ್, ಒಬ್ಬ ಸೈನ್ಯಾಧಿಕಾರಿಯನ್ನು ಮತ್ತು ಒಬ್ಬ ಸವಾರನನ್ನು ಹಝ್ರತ್ ಪೈಗಂಬರರ(ಸ) ಬಳಿಗೆ ಕಳುಹಿಸಿದನು. ಅವನು ಒಂದು ಪತ್ರ ಸಹ ಕಳುಹಿಸಿದ್ದು ಅದರಲ್ಲಿ ಹೀಗೆ ಬರೆಯಲಾಗಿತ್ತು:

"ನೀವು ಈ ಪತ್ರ ತಲಪಿದ ಕೂಡಲೆ ಈ ಜನರೊಂದಿಗೆ ಕಿಸ್ರಾರವರ ದರಬಾರಿಗೆ ಹಾಜರಾಗಬೇಕು."

ಆ ಅಧಿಕಾರಿ ಮೊದಲು ಮಕ್ಕದ ಕಡೆಗೆ ಹೊರಟು ತಾಯಿಫ್ ತಲಪಿದಾಗ ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಇರುವುದಾಗಿ ತಿಳಿಯಿತು. ಅವನು ಅಲ್ಲಿಂದ ಮದೀನಕ್ಕೆ ಹೋದನು. ಮದೀನಕ್ಕೆ ತಲಪಿ ಅವನು ಹಝ್ರತ್ ಪೈಗಂಬರರೊಂದಿಗೆ(ಸ) ಹೇಳಿದನು:

"ಕಿಸ್ರಾ ಯಮನಿನ ಗವರ್ನರ್ ಬಾಝಾನ್‌ರಿಗೆ, ನಿಮ್ಮನ್ನು ಬಂಧಿಸಿ ತನ್ನ ಆಸ್ಥಾನದಲ್ಲಿ ಹಾಜರುಗೊಳಿಸಲು ಆಜ್ಞಾಪಿಸಿರುವನು. ನೀವು ಈ ಆಜ್ಞೆಯನ್ನು ತಿರಸ್ಕರಿಸಿದರೆ ಕಿಸ್ರಾ ನಿಮ್ಮನ್ನು ನಾಶಮಾಡುವನು ಮತ್ತು ನಿಮ್ಮ ಸಮುದಾಯವನ್ನೂ ನಾಶಗೊಳಿಸುವನು. ಅವನು ನಿಮ್ಮ ದೇಶವನ್ನು ಧ್ವಂಸಗೊಳಿಸುವನು. ಆದುದರಿಂದ ನೀವು ಅಗತ್ಯವಾಗಿ ನಮ್ಮೊಂದಿಗೆ ಬನ್ನಿರಿ."

ಹಝ್ರತ್ ಪೈಗಂಬರ್(ಸ) ಅವನ ಮಾತುಗಳನ್ನು ಆಲಿಸಿ ಹೇಳಿದರು: "ನೀವು ನಾಳೆ ನನ್ನನ್ನು ಭೇಟಿಯಾಗಿರಿ."

ರಾತ್ರಿ ಹಝ್ರತ್ ಪೈಗಂಬರ್(ಸ) ಅಲ್ಲಾಹನನ್ನು ಬೇಡಿಕೊಂಡರು. ಸರ್ವಶಕ್ತನಾದ ಅಲ್ಲಾಹನು ಅವರ ಪ್ರಾರ್ಥನೆಗಳನ್ನು ಅಂಗೀಕರಿಸಿ ಹೇಳಿದನು:

"ಕಿಸ್ರಾ ನಿಮ್ಮೊಂದಿಗೆ ಅವಮರ್ಯಾದೆಯಿಂದ ವರ್ತಿಸಿದುದಕ್ಕೆ ಶಿಕ್ಷೆಯಾಗಿ ಅವನ ಸ್ಥಾನದಲ್ಲಿ ನಾವು ಅವನ ಮಗನನ್ನು ಅಧಿಕಾರಾರೂಢನನ್ನಾಗಿ ಮಾಡಿರುವೆವು. ಆತನು ಇದೇ ವರ್ಷ ಜಮಾದುಲ್ ಅವ್ವಲ್ ಮಾಸದ ಹತ್ತನೇ ದಿನಾಂಕ ಸೋಮವಾರ ದಿವಸ ಅವನನ್ನು ಕೊಲ್ಲುವನು."



ಬೇರೆ ಕೆಲವು ವರದಿಗಳಲ್ಲಿ, "ಇಂದು ರಾತ್ರಿ ಅವನು ಕಿಸ್ರಾನನ್ನು ಕೊಂದನು" ಎಂದು ಹೇಳಿದುದಾಗಿ ಪ್ರಸ್ತಾಪಿಸಲಾಗಿದೆ. ಅದೇ ರಾತ್ರಿ ಜಮಾದುಲ್ ಅವ್ವಲ್ ತಿಂಗಳ ಹತ್ತನೆಯ ದಿನಾಂಕದ ರಾತ್ರಿ ಆಗಿರಲೂ ಸಾಧ್ಯತೆ ಇದೆ.

ಬೆಳಗ್ಗೆ ಹಝ್ರತ್ ಪೈಗಂಬರ್(ಸ) ಯಮನಿನ ಇಬ್ಬರು ದೂತರನ್ನು ಕರೆದು ಈ ಭವಿಷ್ಯವಾಣಿಯನ್ನು ತಿಳಿಸಿದರು. ಕಿಸ್ರಾ ಇಂತಹ ಮಾಸದಲ್ಲಿ ಇಂತಹ ದಿನಾಂಕದಂದು ಕೊಲ್ಲಲ್ಪಡುವನು ಎಂದು ಅಲ್ಲಾಹನು ತನಗೆ ತಿಳಿಸಿರುವನು ಎಂದು ಅವರು ಬಾಝಾನ್‌ನಿಗೆ ಬರೆದು ಕಳುಹಿಸಿದರು.

ಈ ಪತ್ರ ಯಮನಿನ ಗವರ್ನರಿಗೆ ತಲಪಿದಾಗ ಅವನು ಹೇಳಿದನು: "ಅವರು ಸತ್ಯವಂತರಾದ ಪೈಗಂಬರ್ ಆಗಿದ್ದರೆ ಅವರು ಹೇಳಿದಂತೆ ಸಂಭವಿಸುವುದು. ಹಾಗೆ ಆಗದಿದ್ದರೆ ಅವರ ಮತ್ತು ಅವರ ರಾಜ್ಯದ ಗತಿ ಒಳ್ಳೆಯದಾಗದು."

ಸ್ವಲ್ಪ ಕಾಲಾವಧಿಯ ನಂತರ ಪರ್ಶಿಯಾದ ಒಂದು ಹಡಗು ಯಮನಿನ ಹಡಗುದಾಣಕ್ಕೆ ಬಂದಿತು. ಯಮನಿನ ಗವರ್ನರನಿಗೆ ಒಂದು ಪತ್ರವನ್ನು ಪರ್ಶಿಯಾದ ಕಿಸ್ರಾ ಆ ಹಡಗಿನಲ್ಲಿ ಕಳುಹಿಸಿದ್ದನು. ಆ ಪತ್ರಕ್ಕೆ ಒತ್ತಲಾದ ಮುದ್ರೆಯನ್ನು ನೋಡಿದಾಗ ಯಮನಿನ ಗವರ್ನರ್ ಹೀಗೆಂದನು:

"ಮದೀನದ ಪೈಗಂಬರ್ ಸತ್ಯ ಹೇಳಿರುವರು. ಪರ್ಶಿಯಾದ ರಾಜನು ಬದಲಾಯಿಸಲ್ಪಟ್ಟಿರುವನು. ಈ ಪತ್ರದಲ್ಲಿ ಹೊಸ ದೊರೆಯ ಮುದ್ರೆ ಇದೆ."

ಆ ಪತ್ರವನ್ನು ತೆರೆದಾಗ ಅದರಲ್ಲಿ ಹೀಗೆ ಬರೆದಿತ್ತು: ಯಮನಿನ ಗವರ್ನರ್ ಬಾಝಾನ್‌ರಿಗೆ ಪರ್ಶಿಯಾದ ಕಿಸ್ರಾ ಶೀರೂವಿಯ ಬರೆದ ಪತ್ರ:

"ನಾನು ನನ್ನ ತಂದೆಯಾದ ಮಾಜಿ ಕಿಸ್ರಾರನ್ನು, ಅವರು ದೇಶದಲ್ಲಿ ರಕ್ತಪಾತದ ಬಾಗಿಲನ್ನು ತೆರೆದಿಟ್ಟ ಕಾರಣ ಕೊಂದಿರುವೆನು. ಅವರು ಸಜ್ಜನರನ್ನು ಕೊಲ್ಲುತ್ತಿದ್ದರು ಮತ್ತು ಪ್ರಜೆಗಳ ಮೇಲೆ ದೌರ್ಜನ್ಯ ಮಾಡುತ್ತಿದ್ದರು. ನನ್ನ ಈ ಪತ್ರ ತಲಪಿದ ಕೂಡಲೆ ಎಲ್ಲಾ ಅಧಿಕಾರಿಗಳಿಂದ ನನ್ನ ಬಗ್ಗೆ ನಿಷ್ಠೆ ಸೂಚಿಸುವ ಪ್ರಮಾಣ ಮಾಡಿಸಿರಿ. ನನ್ನ ಪಿತ ಅರಬ್ ದೇಶದ ಒಬ್ಬ ಪ್ರವಾದಿಯನ್ನು ಬಂಧಿಸಲು ನೀಡಿದ ಆಜ್ಞೆಯನ್ನು ರದ್ದುಗೊಳಿಸಲಾಗಿದೆ ಎಂದು ತಿಳಿದುಕೊಳ್ಳಿರಿ."[67]

ಈ ಪತ್ರ ಓದಿದ ಬಾಝಾನ್ ಎಷ್ಟು ಪ್ರಭಾವಿತರಾದರೆಂದರೆ ಅವರು ಮತ್ತು ಅವರ ಅನೇಕ ಸಂಗಾತಿಗಳು ಇಸ್ಲಾಮ್ ಧರ್ಮಕ್ಕೆ ಸೇರಿದರು ಮತ್ತು ಹಝ್ರತ್ ಪೈಗಂಬರರಿಗೆ(ಸ) ಅದರ ಬಗ್ಗೆ ತಿಳಿಸಿದರು.

## ಅಬಿಸೀನಿಯಾದ ದೊರೆ ನಜ್ಜಾಶಿಗೆ ಬರೆದ ಪತ್ರ

ಅಬಿಸೀನಿಯಾದ ದೊರೆ ನಜ್ಜಾಶಿಗೆ ಅಮ್ರ್ ಬಿನ್ ಉಮಯ್ಯ ಝುಮರೀ(ರ) ಮೂಲಕ ಪತ್ರವನ್ನು ಕಳುಹಿಸಲಾಯಿತು. ಅದರಲ್ಲಿ ಹೀಗೆ ಬರೆಯಲಾಗಿತ್ತು:

67. ತಬರಿ ಸಂಪುಟ 3 ಪುಟ 1572–1574 ಇಬ್ನು ಹಿಶಾಮ್.

ಅಪರಿಮಿತ ಕರುಣಾಮಯನೂ ಪದೇ ಪದೇ ದಯೆದೋರುವವನೂ ಆಗಿರುವ ಅಲ್ಲಾಹನ ನಾಮದಿಂದ. ಅಲ್ಲಾಹನ ಪೈಗಂಬರ್ ಮುಹಮ್ಮದ್‌ನಿಂದ ಅಬಿಸೀನಿಯಾದ ದೊರೆ ನಜ್ಜಾಶಿಗೆ ಪತ್ರ. ನಿಮ್ಮ ಮೇಲೆ ಅಲ್ಲಾಹನ ಶಾಂತಿ ಸುರಿಯುತ್ತಾ ಇದೆ (ಈ ದೊರೆಯು ಮುಸ್ಲಿಮರಿಗೆ ಆಶ್ರಯ ನೀಡಿದುದರಿಂದ ಅವರಿಗೆ ಹೀಗೆ ತಿಳಿಸಲಾಯಿತು: ನಿಮ್ಮ ಈ ಕೃತ್ಯ ಅಲ್ಲಾಹನ ದೃಷ್ಟಿಯಲ್ಲಿ ಸ್ವೀಕಾರಾರ್ಹವಾಗಿದ್ದು ನೀವು ಅಲ್ಲಾಹನ ಸಂರಕ್ಷಣೆಗೆ ಪಾತ್ರರಾಗಿರುವಿರಿ). ನಾನು ಅಲ್ಲಾಹನ ಸ್ತುತಿಯನ್ನು ಮಾಡುತ್ತೇನೆ. ಅವನ ವಿನಾ ಬೇರೆ ಆರಾಧ್ಯನಿಲ್ಲ. ಅವನು ರಾಜಾಧಿರಾಜನೂ ಪರಮ ಪವಿತ್ರನೂ ಎಲ್ಲಾ ಕುಂದುಕೊರತೆಗಳಿಂದ ಮುಕ್ತನೂ ಎಲ್ಲಾ ಕುಂದು ಕೊರತೆಗಳಿಂದ ಮುಕ್ತಿ ನೀಡುವವನೂ ತನ್ನ ದಾಸರಿಗೆ ಶಾಂತಿದಾಯಕನೂ ನೆಮ್ಮದಿ ನೀಡುವವನೂ ಎಲ್ಲರ ಸಂರಕ್ಷಕನೂ ಆಗಿರುವನು. ನಾನು ಸಾಕ್ಷಿ ಹೇಳುತ್ತೇನೆ: ಮರ್‌ಯಮ್ ಪುತ್ರ ಈಸಾ ಅಲ್ಲಾಹನ ವಚನವನ್ನು ಲೋಕದಲ್ಲಿ ಹರಡುವವರಾಗಿದ್ದರು. ಅಲ್ಲಾಹನಿಗೆ ತನ್ನನ್ನು ಅರ್ಪಿಸಿದ ಮರ್‌ಯಮ್‌ರಿಗೆ ಅಲ್ಲಾಹನು ನೀಡಿದ ವಾಗ್ದಾನಗಳನ್ನು ಈಡೇರಿಸುವವರು ಅವರಾಗಿದ್ದರು. ಸಹಭಾಗಿಗಳಿಲ್ಲದ ಏಕದೇವನನ್ನು ಆರಾಧಿಸಲು ಮತ್ತು ಅವನನ್ನು ಅನುಸರಿಸುವ ಬಗ್ಗೆ ಪರಸ್ಪರ ಒಪ್ಪಂದ ಮಾಡಿಕೊಳ್ಳಲು ನಾನು ನಿಮ್ಮನ್ನು ಆಹ್ವಾನಿಸುತ್ತೇನೆ. ನೀವು ನನ್ನನ್ನು ಅನುಸರಿಸಬೇಕೆಂದೂ ನನ್ನನ್ನು ಕಳುಹಿಸಿದ ಅಲ್ಲಾಹನನ್ನು ನಂಬಬೇಕೆಂದೂ ಕರೆ ನೀಡುತ್ತೇನೆ. ನಾನು ಅವನ ಪೈಗಂಬರ್ ಆಗಿದ್ದೇನೆ. ನಾನು ನಿಮಗೂ ನಿಮ್ಮ ಸೈನಿಕರಿಗೂ ಸರ್ವಶಕ್ತನಾದ ಅಲ್ಲಾಹನ ಧರ್ಮದಲ್ಲಿ ಸೇರಲು ಆಹ್ವಾನ ನೀಡುತ್ತೇನೆ. ನಾನು ನನ್ನ ಹೊಣೆಗಾರಿಕೆಯನ್ನು ಈಡೇರಿಸಿದೆನು. ದೇವನ ಸಂದೇಶವನ್ನು ನಿಮಗೆ ತಲಪಿಸಿರುವೆನು. ನಾನು ಪ್ರಾಮಾಣಿಕತೆಯಿಂದ ಸತ್ಯವನ್ನು ತೆರೆದಿಟ್ಟಿರುವೆನು. ನನ್ನ ಪ್ರಾಮಾಣಿಕತೆಯನ್ನು ಗಮನಿಸಿರಿ. ಯಾರು ಅಲ್ಲಾಹನ ಮಾರ್ಗದರ್ಶನವನ್ನು ಅನುಸರಿಸುತ್ತಾನೋ ಅವನ ಮೇಲೆ ಅಲ್ಲಾಹನಿಂದ ಶಾಂತಿಯು ಸುರಿಸಲ್ಪಡುತ್ತದೆ.[68]

ಈ ಪತ್ರ ನಜ್ಜಾಶಿಗೆ ತಲಪಿದಾಗ ಅವರು ಬಹಳ ಆದರಭಾವದಿಂದ ಈ ಪತ್ರವನ್ನು ಕಣ್ಣಿಗೆ ಒತ್ತಿಕೊಂಡರು ಮತ್ತು ಸಿಂಹಾಸನದಿಂದ ಕೆಳಗಿಳಿದು ನಿಂತುಕೊಂಡರು. ಆನೆಯ ದಂತದಿಂದ ನಿರ್ಮಿಸಲಾದ ಒಂದು ಪೆಟ್ಟಿಗೆ ತನ್ನಿರಿ ಎಂದು ಅವರು ಹೇಳಿದರು. ಆಗ ಒಂದು ಪೆಟ್ಟಿಗೆಯನ್ನು ತರಲಾಯಿತು. ನಜ್ಜಾಶಿ ಆ ಪತ್ರವನ್ನು ಅದರೊಳಗಿಟ್ಟು ಹೀಗೆ ಹೇಳಿದರು:

"ಈ ಪತ್ರ ಸುರಕ್ಷಿತವಾಗಿರುವ ತನಕ ಅಬಿಸೀನಿಯಾದ ಸರಕಾರ ಭದ್ರವಾಗಿರುವುದು."

ನಜ್ಜಾಶಿಯ ಈ ಅಭಿಪ್ರಾಯ ಅನಂತರ ಸತ್ಯವೆಂದು ಸಾಬೀತಾಯಿತು. ಒಂದು ಸಾವಿರ ವರ್ಷಗಳ ತನಕ ಇಸ್ಲಾಮ್ ಧರ್ಮವು ಲೋಕದಾದ್ಯಂತ ಸಮುದ್ರದ ಅಲೆಗಳಂತೆ ಮೇಲಕ್ಕೆದ್ದು ಹರಡುತ್ತಾ ಹೋದರೂ ಅಬಿಸೀನಿಯಾದ

68. ಝುರ್‌ಖಾನಿ – ಸಂಪುಟ 3 ಪುಟ 342, ಅಸ್ಸೀರತುಲ್ ಹಲ್‌ಬಿಯ್ಯ–ಸಂಪುಟ 3 ಪುಟ 273.



ಬಲಭಾಗದಿಂದಲೂ ಎಡಭಾಗದಿಂದಲೂ ಇಸ್ಲಾಮೀ ಸೈನ್ಯ ದಾಟಿಹೋದರೂ ಅಬಿಸೀನಿಯಾದ ದೊರೆ ಆರಂಭ ಕಾಲದಲ್ಲಿ ಮುಸ್ಲಿಮ್ ವಲಸೆಗಾರರಿಗೆ ಮಾಡಿದ ಉಪಕಾರಗಳ ಕಾರಣದಿಂದ ಮತ್ತು ಅಬಿಸೀನಿಯಾದ ದೊರೆ ಹಝ್ರತ್ ಪೈಗಂಬರರ(ಸ) ಪತ್ರಕ್ಕೆ ತೋರಿಸಿದ ಆದರಗಳ ಕಾರಣದಿಂದ ಮುಸ್ಲಿಮ್ ಸೈನಿಕರು ಆ ಕಡೆಗೆ ಕಣ್ಣೆತ್ತಿ ಸಹ ನೋಡಲಿಲ್ಲ.

ಖೈಸರನಂತಹ ಚಕ್ರವರ್ತಿಯ ಸಾಮ್ರಾಜ್ಯ ಪುಡಿ ಪುಡಿಯಾಯಿತು. ಕಿಸ್ರಾನಂತಹ ದೊರೆಯ ಸರಕಾರದ ಹೆಸರಾಗಲಿ ಅವಶೇಷಗಳಾಗಲಿ ಬಾಕಿಯಾಗಿ ಉಳಿಯಲಿಲ್ಲ. ಚೈನ ಮತ್ತು ಭಾರತದ ಸಾಮ್ರಾಜ್ಯಗಳು ಬುಡಮೇಲಾದವು. ಆದರೆ ಅಬಿಸೀನಿಯಾದ ಆ ಚಿಕ್ಕ ರಾಜ್ಯದ ಸರಕಾರ ಸುರಕ್ಷಿತವಾಗಿ ಉಳಿಯಿತು. ಆ ದೇಶದ ದೊರೆಯು ಆದಿಕಾಲದ ಮುಸ್ಲಿಮ್ ವಲಸೆಗಾರರಿಗೆ ಆಶ್ರಯ ನೀಡಿದುದರಿಂದಲೂ ಹಝ್ರತ್ ಪೈಗಂಬರರ(ಸ) ಪತ್ರಕ್ಕೆ ಆದರ ತೋರಿಸಿದುದರಿಂದಲೂ ಹೀಗಾಯಿತು. ಅಬಸೀನಿಯಾದ ದೊರೆಯ ಒಂದು ಸಾಮಾನ್ಯ ಉಪಕಾರಕ್ಕೆ ಪ್ರತಿಯಾಗಿ ಮುಸ್ಲಿಮರು ಅಬಿಸೀನಿಯಾದವರೊಂದಿಗೆ ವರ್ತಿಸಿದ ರೀತಿ ಇದಾಗಿದೆ.

"ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಮುಂದಕ್ಕೆ ಒಡ್ಡು" ಎಂಬ ತತ್ವದ ಪ್ರತಿಪಾದಕರೆಂದು ವಾದಿಸುವ ಕ್ರೈಸ್ತರು ತಮ್ಮದೇ ಧರ್ಮಾನುಯಾಯಿ ಮತ್ತು ತಮ್ಮದೇ ರೀತಿ ನೀತಿಗಳನ್ನು ಅನುಸರಿಸುತ್ತಿರುವ ಅಬಸೀನಿಯಾದ ಚಕ್ರವರ್ತಿ ಮತ್ತು ಅವರ ಜನಾಂಗದವರೊಂದಿಗೆ ಇತ್ತೀಚೆಗೆ ಮಾಡಿದ ವರ್ತನೆ ಹೇಗಿದೆ ಎಂದು ಲೋಕಕ್ಕೆ ತಿಳಿದಿದೆ. ಅಬಿಸೀನಿಯಾದ ನಗರಗಳನ್ನು ಬಾಂಬ್ ಸ್ಫೋಟಿಸಿ ಧ್ವಂಸಗೊಳಿಸಲಾಯಿತು. ಅಲ್ಲಿನ ದೊರೆ ತನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಪಲಾಯನ ಮಾಡಿ ವಿದೇಶಗಳಲ್ಲಿ ಎಷ್ಟೋ ವರ್ಷ ವಾಸಿಸಬೇಕಾಯಿತು. ಅಬಿಸೀನಿಯಾದ ಜನರೊಂದಿಗೆ ವರ್ತಿಸಿದ ಎರಡು ರೀತಿಗಳು – ಒಂದು ಮುಸ್ಲಿಮರದ್ದು, ಇನ್ನೊಂದು ಕ್ರೈಸ್ತರದ್ದು– ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪರಿಶುದ್ಧ ಶಕ್ತಿಯನ್ನು ಸಾಬೀತು ಗೊಳಿಸುತ್ತಾ ಇಲ್ಲವೆ? ಈಗ ಮುಸ್ಲಿಮರು ಧರ್ಮದಿಂದ ದೂರ ಸರಿದು ಹೋಗಿದ್ದರೂ ಈ ಶಕ್ತಿ ಇಂದು ಸಹ ಮುಸ್ಲಿಮರ ಯೋಚನೆಗಳನ್ನು ಸದಾಚಾರ ಮತ್ತು ಕೃತಜ್ಞತೆಯಿಂದ ವರ್ತಿಸಲು ಪ್ರೇರೇಪಣೆ ನೀಡುತ್ತದೆ.

## ಈಜಿಪ್ಟಿನ ದೊರೆ ಮುಖೌಖಿಸ್‌ನಿಗೆ ಪತ್ರ

ಈಜಿಪ್ಟಿನ ದೊರೆ ಮುಖೌಖಿಸ್‌ನಿಗೆ ಬರೆದ ಪತ್ರವನ್ನು ಹಾತಿಬ್ ಇಬ್ನು ಅಬೀ ಬಲ್‌ತಅ್(ರ) ಮೂಲಕ ಕಳುಹಿಸಲಾಯಿತು.

ಈ ಪತ್ರದಲ್ಲಿ ರೂಮಿನ (ಕಾನ್‌ಸ್ಟೆಂಟ್‌ನೋಪ್ಲ್) ಚಕ್ರವರ್ತಿಗೆ ಬರೆದ ಹಾಗೆ ಬರೆಯಲಾಗಿತ್ತು. ಆದರೆ "ನೀವು ನಿರಾಕರಿಸಿದರೆ ರೂಮಿನ ಪ್ರಜೆಗಳ ಪಾಪಭಾರ ಸಹ ನಿಮ್ಮ ಮೇಲೆ ಹೊರಿಸಲಾಗುವುದು" ಎಂಬ ವಾಕ್ಯಕ್ಕೆ ಬದಲಾಗಿ "ಈಜಿಪ್ಟಿನ ಜನರ ಪಾಪಭಾರ ಸಹ ನಿಮ್ಮ ಮೇಲೆ ಹೊರಿಸಲಾಗುವುದು" ಎಂದು ಬರೆಯಲಾಗಿತ್ತು.

ಹಾತಿಬ್ ಈಜಿಪ್ಟನ್ನು ತಲಪಿದಾಗ ಮುಖೌಖಿಸ್ ರಾಜಧಾನಿಯಲ್ಲಿ ಇರಲಿಲ್ಲ. ಅವನು ಅಲೆಕ್ಸಾಂಡ್ರಿಯದಲ್ಲಿದ್ದನು. ಹಾತಿಬರು ಅಲೆಕ್ಸಾಂಡ್ರಿಯಕ್ಕೆ ಹೋದಾಗ ಮುಖೌಖಿಸ್ ಸಮುದ್ರ ಕರಾವಳಿಯಲ್ಲಿ ತನ್ನ ದರಬಾರನ್ನು ನಡೆಸುತ್ತಿದ್ದನು. ಹಾತಿಬ್ ಒಂದು ನಾವೆಯಲ್ಲಿ ಕುಳಿತು ಮುಖೌಖಿಸ್ ಇದ್ದಲ್ಲಿಗೆ ತಲಪಿದಾಗ ಅವನ ಸುತ್ತಲೂ ಕಾವಲುಗಾರರು ಇದ್ದರು. ಹಾತಿಬ್ ದೂರದಿಂದ ಪತ್ರವನ್ನು ಎತ್ತಿ ಹಿಡಿದು ಕೂಗಿ ಹೇಳಲು ತೊಡಗಿದರು. ಮುಖೌಖಿಸ್ ಆ ವ್ಯಕ್ತಿಯನ್ನು ತನ್ನ ಮುಂದೆ ಕರೆದುಕೊಂಡು ಬರಲು ಆಜ್ಞಾಪಿಸಿದನು. ಆ ಪತ್ರವನ್ನು ಓದಿದ ನಂತರ ಮುಖೌಖಿಸ್ ಹೇಳಿದನು: "ಅವರು ಸತ್ಯವಂತರಾದ ಪ್ರವಾದಿಯಾಗಿದ್ದರೆ ಅವರು ತನ್ನ ಶತ್ರುಗಳ ವಿರುದ್ಧ ಏಕೆ ಪ್ರಾರ್ಥಿಸುವುದಿಲ್ಲ?"

ಆಗ ಹಾತಿಬ್ ಹೇಳಿದರು: "ನೀವು ಹಝ್ರತ್ ಮರ್ಯಮರ ಪುತ್ರ ಹಝ್ರತ್ ಈಸಾರನ್ನು ನಂಬುತ್ತಿರುವಿರಿ. ಆದರೆ ಹಝ್ರತ್ ಈಸಾರಿಗೆ ಅವರ ಜನಾಂಗದವರು ಕಷ್ಟ ನೀಡಿದಾಗ ಅವರು ನಾಶವಾಗಲಿ ಎಂದು ಹಝ್ರತ್ ಈಸಾ ಪ್ರಾರ್ಥಿಸಲಿಲ್ಲ."

ಆಗ ಮುಖೌಖಿಸ್ ಹೇಳಿದನು: "ನೀವು ಒಬ್ಬ ಬುದ್ಧಿಶಾಲಿಯಿಂದ ಆಗಮಿಸಿದ ಒಬ್ಬ ಬುದ್ಧಿಶಾಲಿ ರಾಯಭಾರಿಯಾಗಿರುವಿರಿ. ನೀವು ಚೆನ್ನಾಗಿ ಉತ್ತರ ನೀಡಿದಿರಿ." ಆಗ ಹಾತಿಬ್ ಹೇಳಿದರು: ನಿಮಗಿಂತ ಮೊದಲು ಇಲ್ಲಿ ಒಬ್ಬ ದೊರೆ ಇದ್ದನು. ನಾನು ಬಹಳ ದೊಡ್ಡ ಪ್ರಭು ಎಂದು ಅವನು ಹೇಳುತ್ತಿದ್ದನು. ಅವನೇ ಫಿರ್ಔನ್. ಕೊನೆಗೆ ಅಲ್ಲಾಹನು ಅವನ ಮೇಲೆ ಶಿಕ್ಷೆ ಇಳಿಸಿದನು. ನೀವು ದುರಹಂಕಾರಿಗಳಾಗಬೇಡಿರಿ. ದೇವನ ಈ ಪ್ರವಾದಿಯನ್ನು ನಂಬಿರಿ. ನಾನು ದೇವನ ಪ್ರಮಾಣ ಮಾಡಿ ಹೇಳುತ್ತೇನೆ. ಹಝ್ರತ್ ಈಸಾ(ಅ) ಹಝ್ರತ್ ಮುಹಮ್ಮದ್(ಸ) ಬಗ್ಗೆ ನುಡಿದಂತಹ ಭವಿಷ್ಯವಾಣಿಗಳನ್ನು ಹಝ್ರತ್ ಮೂಸಾ(ಅ) ಹಝ್ರತ್ ಈಸಾ(ಅ) ಬಗ್ಗೆ ನುಡಿದಿಲ್ಲ. ನೀವು ಯಹೂದಿಯರನ್ನು ಹಝ್ರತ್ ಈಸಾ ಕಡೆಗೆ ಆಮಂತ್ರಿಸುವ ಹಾಗೆಯೇ ನಾವು ನಿಮ್ಮನ್ನು ಹಝ್ರತ್ ಮುಹಮ್ಮದ್(ಸ) ಕಡೆಗೆ ಆಮಂತ್ರಿಸುತ್ತೇವೆ. ಪ್ರತಿಯೊಂದು ಪ್ರವಾದಿಗೆ ಅನುಯಾಯಿಗಳ ಒಂದು ಸಮುದಾಯವಿರುತ್ತದೆ ಮತ್ತು ಆ ಸಮುದಾಯದ ಕರ್ತವ್ಯ ಪ್ರವಾದಿ ಹೇಳಿದ ಹಾಗೆ ನಡೆದುಕೊಳ್ಳುವುದಾಗಿದೆ. ಆದುದರಿಂದ ಹಝ್ರತ್ ಈಸಾ ಹೇಳಿದ ಹಾಗೆ ಆಗಮಿಸಿದ ಈ ಪ್ರವಾದಿಯ ಕಾಲದಲ್ಲಿ ನೀವು ಇರುವ ಕಾರಣ ನೀವು ಅವರನ್ನು ನಂಬುವುದು ನಿಮ್ಮ ಕರ್ತವ್ಯವಾಗಿದೆ. ನಮ್ಮ ಧರ್ಮವು ಹಝ್ರತ್ ಈಸಾ(ಅ) ಸತ್ಯ ಪ್ರವಾದಿ ಎಂದು ನೀವು ಅಂಗೀಕರಿಸುವುದರಿಂದ ನಿಮ್ಮನ್ನು ತಡೆಯುವುದಿಲ್ಲ. ಹಝ್ರತ್ ಈಸಾ ಸತ್ಯಪ್ರವಾದಿ ಎಂದು ನಂಬಬೇಕೆಂದು ನಾವು ಇತರರಿಗೂ ಅಜ್ಞಾಪಿಸುತ್ತೇವೆ." ಆಗ ಮುಖೌಖಿಸ್ ಹೇಳಿದನು: "ನಾನು ಈ ಪ್ರವಾದಿಯ ಬಗ್ಗೆ ತಿಳಿದಿರುವೆನು. ಅವರು ಯಾವುದೇ ಕೆಟ್ಟ ಕೆಲಸದ ಆಜ್ಞೆ ನೀಡುವುದಿಲ್ಲ ಎಂದು ಮನವರಿಕೆ ಮಾಡಿಕೊಂಡಿರುವೆನು. ಅವರು ಯವುದೇ ಒಳ್ಳೆಯ ಕೆಲಸವನ್ನು



ಮಾಡದಂತೆ ತಡೆಯುವುದಿಲ್ಲ ಎಂದು ಸಹ ತಿಳಿದಿರುವೆನು. ಅವರು ಮಾಂತ್ರಿಕರ ಹಾಗೆ ಮತ್ತು ಕಣಿ ಹೇಳುವವರ ಹಾಗೆ ಅಲ್ಲವೆಂದೂ ನಾನು ಅರಿತಿರುವೆನು. ಅವರ ಕೆಲವು ಭವಿಷ್ಯವಾಣಿಗಳು ಈಡೇರಿದುದು ನಾನು ತಿಳಿದಿರುವೆನು."

ಅನಂತರ ಮುಖೌಖಿಸ್ ದಂತದ ಒಂದು ಪೆಟ್ಟಿಗೆ ತರಿಸಿ ಅದರಲ್ಲಿ ಹಝ್ರತ್ ಪೈಗಂಬರರ(ಸ) ಪತ್ರ ಇರಿಸಿದನು. ಆ ಪೆಟ್ಟಿಗೆಯ ಮೇಲೆ ಮುದ್ರೆ ಹಾಕಿ ತನ್ನ ಒಬ್ಬ ಸೇವಕಿಯ ಕೈಯಲ್ಲಿ ಜೋಪಾನವಾಗಿಡಲು ಕೊಟ್ಟನು. ಅನಂತರ ಆತನು ಪೈಗಂಬರರ ಹೆಸರಿನಲ್ಲಿ ಈ ಕೆಳಗಿನಂತೆ ಒಂದು ಪತ್ರ ಬರೆದನು:

ಮುಹಮ್ಮದ್ ಬಿನ್ ಅಬ್ದುಲ್ಲಾರವರಿಗೆ ಈಜಿಪ್ಟಿನ ದೊರೆ ಮುಖೌಖಿಸ್ ಬರೆದ ಪತ್ರ. ನಿಮ್ಮ ಮೇಲೆ ಶಾಂತಿ ಇರಲಿ. ನಾನು ನಿಮ್ಮ ಪತ್ರ ಓದಿರುವೆನು. ನೀವು ಅದರಲ್ಲಿ ಬರೆದ ವಿಷಯ ಮತ್ತು ನೀವು ನೀಡಿದ ಆಹ್ವಾನದ ಕುರಿತು ಗಮನಿಸಿರುವೆನು. ಇಸ್ರಾಯೇಲ್ ಪ್ರವಾದಿಗಳು ಭವಿಷ್ಯ ನುಡಿದ ಹಾಗೆ ಒಬ್ಬ ಪ್ರವಾದಿ ಆಗಮಿಸಲಿರುವರು ಎಂದು ನನಗೆ ತಿಳಿದಿದೆ. ಆದರೆ ಬರಲಿರುವ ಪ್ರವಾದಿ ಸಿರಿಯಾದಿಂದ ಬರುವರೆಂದು ನಾನು ಭಾವಿಸಿದ್ದೆನು. ನಾನು ನಿಮ್ಮ ರಾಯಭಾರಿಯನ್ನು ಬಹಳ ಗೌರವ ನೀಡಿ ಉಪಚರಿಸಿರುವೆನು. ಅವರಿಗೆ ಒಂದು ಸಾವಿರ ನಾಣ್ಯ ಮತ್ತು ಐದು ಜೋಡಿ ನಿಲುವಂಗಿಗಳನ್ನು ಗೌರವ ಸೂಚಕವಾಗಿ ನೀಡಿರುವೆನು. ನಾನು ಇಬ್ಬರು ಈಜಿಪ್ಟಿನ ತರುಣಿಯರನ್ನು ನಿಮಗೆ ಪಾರಿತೋಷಿಕವಾಗಿ ಕಳುಹಿಸುತ್ತಿರುವೆನು. ಈಜಿಪ್ಟ್ ಜನರಲ್ಲಿ ಈ ತರುಣಿಯರು ಬಹಳ ಗೌರವಾರ್ಹರಾಗಿದ್ದಾರೆ. ಇವರಲ್ಲಿ ಒಬ್ಬಾಕೆಯ ಹೆಸರು ಮಾರಿಯ ಎಂದೂ ಇನ್ನೊಬ್ಬಳ ಹೆಸರು ಸೀರೀನ್ ಎಂದೂ ಆಗಿದೆ. ಈಜಿಪ್ಟ್ ದೇಶದ ಅತ್ಯುತ್ತಮ ಬಟ್ಟೆಗಳ ಇಪ್ಪತ್ತು ಜೋಡಿಗಳನ್ನೂ ನಿಮಗೆ ಕಳುಹಿಸಿಕೊಡುತ್ತಿದ್ದೇನೆ. ಅಲ್ಲದೆ ಒಂದು ಹೇಸರಗತ್ತೆಯನ್ನು ಸಹ ನಿಮ್ಮ ಸಂಚಾರಕ್ಕಾಗಿ ಕಳುಹಿಸಿಕೊಡುತ್ತಿದ್ದೇನೆ.

ಕೊನೆಯದಾಗಿ ಪ್ರಾರ್ಥಿಸುತ್ತೇನೆ; ನಿಮ್ಮ ಮೇಲೆ ಅಲ್ಲಾಹನ ಶಾಂತಿ ಇರಲಿ.[69]

ಮುಖೌಖಿಸ್ ಹಝ್ರತ್ ಪೈಗಂಬರರಿಗೆ(ಸ) ಆದರ ಸೂಚಿಸಿದರೂ ಆತನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಲಿಲ್ಲ ಎಂದು ಈ ಪತ್ರದಿಂದ ತಿಳಿಯುತ್ತದೆ.

## ಬಹ್ರೈನಿನ ದೊರೆಗೆ ಪತ್ರ

ಬಹ್ರೈನಿನ ದೊರೆಗೂ ಹಝ್ರತ್ ಪೈಗಂಬರ್(ಸ) ಪತ್ರ ಕಳುಹಿಸಿದ್ದರು. ಅಲಾ ಇಬ್ನು ಹಝ್ರಮೀ(ರ) ಈ ಪತ್ರವನ್ನು ತೆಗೆದುಕೊಂಡು ಹೋಗಿದ್ದರು. ಈ ಪತ್ರದಲ್ಲಿ ಬರೆದುದೇನೆಂದು ಹದೀಸುಗಳಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ.

ಈ ಪತ್ರ ತಲಪಿದ ಕೂಡಲೇ ಬಹ್ರೈನಿನ ದೊರೆ ಇಸ್ಲಾಮ್ ಧರ್ಮಕ್ಕೆ ಸೇರಿದರು. ಅವರು ಹಝ್ರತ್ ಪೈಗಂಬರರಿಗೆ(ಸ) ಹೀಗೆ ಬರೆದರು: "ನಾನು ಮತ್ತು ನನ್ನ ಜೊತೆ ಅನೇಕ ಜನರು ಇಸ್ಲಾಮ್ ಧರ್ಮಕ್ಕೆ ಸೇರಿದ್ದೇವೆ. ನನ್ನ

---

69. ಝುರ್ಖಾನಿ – ಸಂಪುಟ 3 ಪುಟ 349 – 350, ತಬರಿ – ಸಂಪುಟ 3 ಪುಟ 1559.

ದೇಶದಲ್ಲಿ ಇಸ್ಲಾಮ್ ಧರ್ಮವನ್ನು ಪ್ರವೇಶಿಸದವರು, ಯಹೂದಿಯರು ಮತ್ತು ಅಗ್ನಿ ಆರಾಧಕರು ಇದ್ದಾರೆ. ನಾನು ಅವರೊಂದಿಗೆ ಹೇಗೆ ವರ್ತಿಸಬೇಕೆಂದು ನನಗೆ ಆಜ್ಞೆ ನೀಡಿರಿ."

ಈ ಪತ್ರಕ್ಕೆ ಹಝ್ರತ್ ಪೈಗಂಬರ್(ಸ) ಹೀಗೆ ಉತ್ತರ ಬರೆದರು:

"ನೀವು ಮುಸ್ಲಿಮರಾದುದರಿಂದ ನಾನು ಸಂತೋಷಗೊಂಡಿರುವೆನು. ನನ್ನ ಕಡೆಯಿಂದ ಬರುವ ದೂತರು ನಿಮಗೆ ನೀಡುವ ಆಜ್ಞೆಗಳನ್ನು ನೀವು ಪಾಲಿಸಿರಿ. ನನ್ನ ದೂತರ ಆಜ್ಞೆಗಳನ್ನು ಪಾಲಿಸುವವರು ನನ್ನ ಆಜ್ಞೆಗಳನ್ನು ಪಾಲಿಸುತ್ತಾರೆ. ನಿಮ್ಮ ಕಡೆಗೆ ಆಗಮಿಸಿದ ನನ್ನ ರಾಯಭಾರಿ ನಿಮ್ಮನ್ನು ಬಹಳ ಹೊಗಳಿರುವರು ಮತ್ತು ನೀವು ಇಸ್ಲಾಮ್ ಧರ್ಮಕ್ಕೆ ಸೇರಿದ ವಿಷಯ ತಿಳಿಸಿದರು. ನಾನು ದೇವನೊಂದಿಗೆ ನಿಮ್ಮ ಸಮುದಾಯದ ಬಗ್ಗೆ ಪ್ರಾರ್ಥಿಸಿರುವೆನು. ನೀವು ಮುಸ್ಲಿಮರಲ್ಲಿ ಇಸ್ಲಾಮೀ ರೀತಿ ನೀತಿಗಳನ್ನು ಜಾರಿಗೊಳಿಸಿರಿ. ಅವರ ಸಂಪತ್ತನ್ನು ಸಂರಕ್ಷಿಸಿರಿ. ನಾಲ್ಕಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವ ಅನುಮತಿ ನೀಡಬೇಡಿರಿ. ಮುಸ್ಲಿಮರಾದವರು ಹಿಂದೆ ಮಾಡಿದ ಅಪರಾಧಗಳನ್ನು ಕ್ಷಮಿಸಿರಿ. ನೀವು ಸದಾಚಾರ ನಿರತರಾಗಿರುವ ತನಕ ಅಧಿಕಾರಚ್ಯುತಿಯನ್ನು ಹೊಂದಲಾರಿರಿ. ಯಹೂದಿಯರ ಮತ್ತು ಅಗ್ನಿ ಆರಾಧಕರ ಮೇಲೆ ಒಂದು ತೆರಿಗೆ ವಿಧಿಸಲಾಗಿದೆ. ಇದರ ಹೊರತು ಇನ್ನೇನನ್ನೂ ಆವಶ್ಯಪಡಬಾರದು."[70]

ಮೇಲೆ ವಿವರಿಸಿದವರಿಗಲ್ಲದೆ, ಒಮಾನಿನ ದೊರೆ, ಯಮಾಮದ ದೊರೆ, ಗಸ್ಸಾನಿನ ದೊರೆ, ಯಮನಿನ ಬನೀ ನಹ್‌ದ್ ಗೋತ್ರ, ಹಮದಾನ್ ಗೋತ್ರ, ಬನೀ ಅಲೀಮ್ ಗೋತ್ರ ಮತ್ತು ಹಝ್ರಮೀ ಗೋತ್ರಗಳ ಮುಖ್ಯಸ್ಥರಿಗೆ ಹಝ್ರತ್ ಪೈಗಂಬರ್(ಸ) ಪತ್ರ ಬರೆದಿದ್ದರು. ಅವರಲ್ಲಿಬಹುತೇಕ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಹಝ್ರತ್ ಪೈಗಂಬರ್(ಸ) ಈ ಪತ್ರಗಳನ್ನು ಬರೆದುದು ಅವರು ದೇವನ ಬಗ್ಗೆ ಎಷ್ಟು ದೃಢ ವಿಶ್ವಾಸ ಹೊಂದಿದ್ದರೆಂದೂ ಅವರು ತಮ್ಮ ವಾದದ ಆರಂಭದಿಂದಲೇ ತಾವು ಯಾವುದೇ ಒಂದು ಜನಾಂಗಕ್ಕೆ ಪೈಗಂಬರ್ ಆಗಿ ಕಳುಹಿಸಲ್ಪಟ್ಟಿಲ್ಲ, ಬದಲು ಎಲ್ಲಾ ಜನಾಂಗಗಳಿಗೂ ಅಲ್ಲಾಹನ ಸಂದೇಶವಾಹಕರಾಗಿ ನಿಯುಕ್ತರಾಗಿದ್ದರೆಂಬ ದೃಢವಿಶ್ವಾಸ ಹೊಂದಿದ್ದರೆಂದೂ ಸೂಚಿಸುತ್ತದೆ.

ಹಝ್ರತ್ ಪೈಗಂಬರ್(ಸ) ಯಾರಿಗೆಲ್ಲಾ ಪತ್ರ ಬರೆದರೋ ಅವರಲ್ಲಿ ಕೆಲವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಅವರಲ್ಲಿ ಬೇರೆ ಕೆಲವರು ಗೌರವ ಭಾವದಿಂದ ಪತ್ರ ಸ್ವೀಕರಿಸಿದರು; ಆದರೆ ಮುಸ್ಲಿಮರಾಗಲಿಲ್ಲ. ಕೆಲವರು ಸಾಮಾನ್ಯ ಸಜ್ಜನಿಕೆಯಿಂದ ವರ್ತಿಸಿದರು. ಬೇರೆ ಕೆಲವರು ದುರಹಂಕಾರ ತೋರಿಸಿದರು. ಆದರೆ ಹಝ್ರತ್ ಪೈಗಂಬರರ(ಸ) ಪತ್ರದೊಂದಿಗೆ ವಿವಿಧ ದೊರೆಗಳು ಮತ್ತು ಜನಾಂಗಗಳು ಹೇಗೆ ವರ್ತಿಸಿದರೋ ಅದೇ ರೀತಿ ಅಲ್ಲಾಹನು ಅವರೊಂದಿಗೆ ವರ್ತಿಸಿದನೆಂಬುದಕ್ಕೆ ಚರಿತ್ರೆಯು ಸಾಕ್ಷ ವಹಿಸುತ್ತದೆ ಎಂಬುದಕ್ಕೆ ಸಂಶಯವಿಲ್ಲ.

---

70. ಝುರ್‌ಖಾನಿ ಸಂಪುಟ 9 ಪುಟ 351 – 352, ಅಸ್ಸೀರತುಲ್ ಹಲ್‌ಬಿಯ್ಯ – ಸಂಪುಟ 3 ಪುಟ 278.



## ಖೈಬರ್ ಕೋಟೆಯನ್ನು ವಶಪಡಿಸಿಕೊಂಡದ್ದು

ನಾವು ಮೊದಲೇ ವಿವರಿಸಿದ ಹಾಗೆ ಯಹೂದಿಯರು ಮತ್ತು ಅರಬ್ ದೇಶದ ಅವಿಶ್ವಾಸಿಗಳು ಮುಸಲ್ಮಾನರ ವಿರುದ್ಧ ಮದೀನದ ಸುತ್ತು ಮುತ್ತಲಿನ ಗೋತ್ರ ವರ್ಗದವರನ್ನು ಪ್ರಚೋದಿಸುತ್ತಿದ್ದರು. ಮುಸ್ಲಿಮರನ್ನು ನಾಶಪಡಿಸಲು ಅಥವಾ ಮದೀನವನ್ನು ಆಕ್ರಮಿಸಲು ಅರಬಿ ಗೋತ್ರಗಳಿಗೆ ಸಾಮರ್ಥ್ಯವಿಲ್ಲವೆಂದು ಮನವರಿಕೆ ಮಾಡಿಕೊಂಡ ಯಹೂದಿಯರು ಬೈಝಾಂಟಿನ್ ಸಾಮ್ರಾಜ್ಯದ ದಕ್ಷಿಣ ಗಡಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಕ್ರೈಸ್ತ ವಿಶ್ವಾಸಿಗಳಾದ ಅರಬ್ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಲು ತೊಡಗಿದರು. ಅವರು ಇರಾಖ್‌ನಲ್ಲಿದ್ದ ತಮ್ಮ ಮತಾವಲಂಬಿಗಳಿಗೆ ಹಝ್ರತ್ ಪೈಗಂಬರರ(ಸ) ವಿರುದ್ಧ ಪತ್ರಗಳನ್ನು ಬರೆದು ಅವರು ಇರಾನಿನ ರಾಜನಾದ ಕಿಸ್ರಾನನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಲು ಪ್ರಯತ್ನಿಸುತ್ತಿದ್ದರು. ನಾವು ಮೊದಲು ವಿವರಿಸಿದಂತೆ ಅವರ ಕುತಂತ್ರಗಳ ಪರಿಣಾಮವಾಗಿಯೇ ಇರಾನಿನ ದೊರೆಯಾದ ಕಿಸ್ರಾ ಮುಸ್ಲಿಮರ ವಿರುದ್ಧ ಬಹಳ ಕೋಪಾವಿಷ್ಟನಾದನು ಮತ್ತು ಅವನು ಹಝ್ರತ್ ಪೈಗಂಬರರನ್ನು(ಸ) ಬಂಧಿಸಲು ಯಮನಿನ ಗವರ್ನರನಿಗೆ ಆಜ್ಞೆ ನೀಡಿದ್ದನು. ಆದರೆ ಅಲ್ಲಾಹನು ತನ್ನ ವಿಶಿಷ್ಟವಾದ ಅನುಗ್ರಹದಿಂದ ಹಝ್ರತ್ ಪೈಗಂಬರರನ್ನು(ಸ) ರಕ್ಷಿಸಿದನು ಹಾಗೂ ಯಹೂದಿಯರ ಮತ್ತು ಕಿಸ್ರಾನ ಕುತಂತ್ರಗಳನ್ನು ನಿಷ್ಫಲಗೊಳಿಸಿದನು.

ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಅಲ್ಲಾಹನು ವಿಶಿಷ್ಟವಾಗಿ ಅನುಗ್ರಹಿಸಿರದಿದ್ದರೆ ಹಝ್ರತ್ ಪೈಗಂಬರರು(ಸ) ಒಂದು ಕಡೆಯಿಂದ ಇರಾನಿನ ದೊರೆ ಕಿಸ್ರಾನನ್ನು, ಇನ್ನೊಂದು ಕಡೆ ರೂಮಿ (ಕಾನ್‌ಸ್ಟೆಂಟಿನೋಪ್ಲ್) ನ ದೊರೆ ಖೈಸರ್‌ನ ಸೈನ್ಯವನ್ನು ಹೇಗೆ ತಾನೆ ಎದುರಿಸಲು ಸಾಧ್ಯವಿದ್ದಿತು? ಕಿಸ್ರಾನನ್ನು ಕೊಂದು ಹಾಕಿದುದು ಸರ್ವಶಕ್ತನಾದ ದೇವನೇ ಆಗಿರುವನು. ಅವನೇ ಕಿಸ್ರಾನ ಮಗನ ಮೂಲಕ ಹಝ್ರತ್ ಪೈಗಂಬರರ(ಸ) ವಿರುದ್ಧ ಹೊರಡಿಸಿದ ಆಜ್ಞೆಯನ್ನು ರದ್ದುಗೊಳಿಸಿದನು. ಈ ದೃಷ್ಟಾಂತವನ್ನು ನೋಡಿದ ಯಮನಿನ ಅಧಿಕಾರಿಗಳು ಇಸ್ಲಾಮ್ ಧರ್ಮ ಸ್ವೀಕರಿಸಿದರು ಮತ್ತು ಯಮನ್ ಪ್ರಾಂತ್ಯ ಯಾವುದೇ ಹೋರಾಟವಿಲ್ಲದೆ ಇಸ್ಲಾಮೀ ರಾಜ್ಯದ ಒಂದು ಭಾಗವಾಯಿತು.

ಯಹೂದಿಯರು ಉಂಟುಮಾಡಿದ ಸನ್ನಿವೇಶಗಳ ಕಾರಣದಿಂದ ಅವರನ್ನು ಮದೀನದಿಂದ ಇನ್ನಷ್ಟು ದೂರ ನೂಕುವುದು ಅತ್ಯಾವಶ್ಯಕವಾಯಿತು. ಅವರನ್ನು ಮದೀನದ ಸಮೀಪ ವಾಸಿಸಲು ಬಿಟ್ಟಿದ್ದರೆ ಅವರು ಇನ್ನಷ್ಟು ರಕ್ತಪಾತ, ದುಷ್ಕರ್ಮ ಮತ್ತು ಒಳಸಂಚುಗಳನ್ನು ಮಾಡುತ್ತಿದ್ದರು.

ಹುದೈಬಿಯಾದಿಂದ ಹಿಂದಿರುಗಿ ಐದು ತಿಂಗಳು ಕಳೆದ ನಂತರ ಹಝ್ರತ್ ಪೈಗಂಬರ್(ಸ) ಹೀಗೆ ನಿರ್ಧರಿಸಿದರು. ಯಹೂದಿಯರು ಮದೀನದಿಂದ ಸ್ವಲ್ಪ ದೂರದಲ್ಲಿದ್ದ ಖೈಬರ್‌ನಲ್ಲಿ ವಾಸಿಸುತ್ತಿದ್ದುದರಿಂದ ಅವರಿಗೆ ಅಲ್ಲಿಂದ ಮದೀನದ ವಿರುದ್ಧ ಒಳಸಂಚುಗಳನ್ನು ಮಾಡುವುದು ಸುಲಭವಾದುದರಿಂದ ಅವರನ್ನು ಅಲ್ಲಿಂದ

ಹೊರಹಾಕಬೇಕು.

ಕಿ.ಶ. 628ರ ಆಗಸ್ಟ್ ತಿಂಗಳಲ್ಲಿ ಹಝ್ರತ್ ಪೈಗಂಬರ್(ಸ) ಹದಿನಾರು ನೂರು ಶಿಷ್ಯರೊಂದಿಗೆ ಖೈಬರ್ ಕಡೆಗೆ ಸಾಗಿದರು. ಖೈಬರ್ ಕೋಟೆಯಿಂದ ಆವೃತವಾದ ಒಂದು ಪಟ್ಟಣವಾಗಿತ್ತು. ಅದರ ನಾಲ್ಕು ದಿಕ್ಕುಗಳಲ್ಲೂ ಬೆಟ್ಟಗಳ ಮೇಲೆ ಕೋಟೆಗಳು ನಿರ್ಮಿಸಲ್ಪಟ್ಟಿದ್ದುವು. ಇಂತಹ ಸುರಕ್ಷಿತ ಪಟ್ಟಣವನ್ನು ಇಷ್ಟು ಕಡಿಮೆ ಸಂಖ್ಯೆಯ ಸೈನಿಕರ ಸಹಾಯದಿಂದ ಜಯಿಸುವುದು ಸುಲಭದ ಕೆಲಸವೇನೂ ಆಗಿರಲಿಲ್ಲ. ಖೈಬರ್‌ನ ಸುತ್ತು ಮುತ್ತಲೂ ಇದ್ದ ಚಿಕ್ಕ ಚಿಕ್ಕ ರಕ್ಷಣಾ ಠಾಣೆಗಳು ಚಿಕ್ಕ ಪುಟ್ಟ ಯುದ್ಧಗಳ ಮೂಲಕ ಜಯಿಸಲ್ಪಟ್ಟವು. ಆದರೆ ಯಹೂದಿಯರೆಲ್ಲರೂ ಖೈಬರಿನ ಪ್ರಧಾನ ಕೋಟೆಯಲ್ಲಿ ಆಶ್ರಯ ಪಡೆದಾಗ ಅದನ್ನು ಜಯಿಸಲು ಮಾಡಿದ ಪ್ರಯತ್ನಗಳು ನಿಷ್ಫಲವಾದುವು. ಒಂದು ದಿನ ಸರ್ವಶಕ್ತನಾದ ದೇವನು ಹಝ್ರತ್ ಪೈಗಂಬರಿಗೆ,(ಸ) "ಈ ಪಟ್ಟಣವು ಹಝ್ರತ್ ಅಲಿಯವರಿಂದ ಜಯಿಸಲ್ಪಡುವುದೆಂದು ವಿಧಿಸಲ್ಪಟ್ಟಿದೆ" ಎಂದು ತಿಳಿಸಿದನು.

ಹಝ್ರತ್ ಪೈಗಂಬರ್(ಸ) ಬೆಳಗ್ಗಿನ ಹೊತ್ತು ಹೀಗೆ ಪ್ರಕಟಿಸಿದರು: ಯಾರನ್ನು ಅಲ್ಲಾಹನು, ಅವನ ಸಂದೇಶವಾಹಕ ಮತ್ತು ಮುಸ್ಲಿಮರು ಪ್ರೀತಿಸುತ್ತಾರೋ ಅವರ ಕೈಗೆ ನಾನು ಇಸ್ಲಾಮಿನ ಕರಿಪತಾಕೆಯನ್ನು ಕೊಡುತ್ತೇನೆ. ಅವರಿಂದ ಈ ಕೋಟೆ ಜಯಿಸಲ್ಪಡಬೇಕೆಂದು ಅಲ್ಲಾಹನು ನಿರ್ಧರಿಸಿರುವನು.

ಅನಂತರ ಅದರ ಮರುದಿನ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿಯವರನ್ನು(ರ) ಕರೆದು ಇಸ್ಲಾಮಿನ ಪತಾಕೆಯನ್ನು ಅವರ ಕೈಗೆ ನೀಡಿದರು. ಆಗ ಹಝ್ರತ್ ಅಲಿ(ರ) ಪೈಗಂಬರ್ ಶಿಷ್ಯರ ಸೈನ್ಯದೊಂದಿಗೆ ಕೋಟೆಯ ಮೇಲೆ ಆಕ್ರಮಣ ಮಾಡಿದರು.

ಯಹೂದಿಯರು ಕೋಟೆಯೊಳಗೆ ಸುರಕ್ಷಿತರಾಗಿದ್ದರೂ ಹಝ್ರತ್ ಅಲಿ ಮತ್ತು ಪೈಗಂಬರ್ ಶಿಷ್ಯರಿಗೆ ಆ ದಿನ ಸರ್ವಶಕ್ತನಾದ ದೇವನು ಎಂತಹ ಶಕ್ತಿಯನ್ನು ನೀಡಿದನೆಂದರೆ ಸಂಜೆಯೊಳಗೆ ಆ ಕೋಟೆಯನ್ನು ಜಯಿಸಲಾಯಿತು.

ಅನಂತರ ನಡೆದ ಶಾಂತಿ ಸಂಧಾನದಲ್ಲಿ ಹೀಗೆ ನಿರ್ಧರಿಸಲಾಯಿತು: ಯಹೂದಿಯರು ತಮ್ಮ ಪತ್ನಿಯರು ಮತ್ತು ಮಕ್ಕಳೊಂದಿಗೆ ಮದೀನದಿಂದ ದೂರ ಹೋಗಿ ವಾಸಿಸುವರು. ಅವರ ಎಲ್ಲಾ ಸಂಪತ್ತು ಮುಸ್ಲಿಮರ ವಶಕ್ಕೆ ನೀಡಲಾಗುವುದು. ಯಾರಾದರೂ ಸುಳ್ಳು ಹೇಳಿ ತನ್ನ ಸಂಪತ್ತನ್ನೂ ಸಾಮಗ್ರಿಗಳನ್ನೂ ಬಚ್ಚಿಟ್ಟರೆ ಅಂತಹ ವ್ಯಕ್ತಿ ಈ ಶಾಂತಿ ಒಪ್ಪಂದದ ರಕ್ಷಣೆಗೆ ಒಳಪಡಲಾರನು ಮತ್ತು ಅವನು ವಿದ್ರೋಹದ ಶಿಕ್ಷೆಗೆ ಗುರಿಯಾಗುವನು.

## ಮೂರು ವಿಚಿತ್ರ ಘಟನೆಗಳು

ಈ ಯುದ್ಧದ ಕಾಲದಲ್ಲಿ ಮೂರು ವಿಚಿತ್ರ ಘಟನೆಗಳು ನಡೆದುವು. ಒಂದು, ಅಲ್ಲಾಹನ ಒಂದು ದೃಷ್ಟಾಂತದ ರೂಪದಲ್ಲಿತ್ತು. ಇನ್ನೆರಡು, ಹಝ್ರತ್ ಪೈಗಂಬರರ(ಸ)



ಉನ್ನತ ಸ್ವಭಾವ ಗುಣಗಳನ್ನು ಪ್ರತಿಬಿಂಬಿಸಿದುವು.

ದೃಷ್ಟಾಂತದ ವಿವರ ಹೀಗಿದೆ: ಈ ಯುದ್ಧದ ನಂತರ ಖೈಬರ್‌ನ ಮುಖಂಡ ಕಿನಾನನ ವಿಧವೆ ಸಫಿಯ್ಯರೊಂದಿಗೆ ಹಝ್ರತ್ ಪೈಗಂಬರರ(ಸ) ವಿವಾಹವಾಯಿತು. ಅವರ ಮುಖದಲ್ಲಿ ಕೆಲವು ಕಲೆಗಳನ್ನು ಕಂಡು ಹಝ್ರತ್ ಪೈಗಂಬರ್(ಸ) ಕೇಳಿದರು: "ನಿನ್ನ ಮುಖದಲ್ಲಿ ಈ ಕಲೆಗಳು ಹೇಗೆ ಬಂದುವು?" ಅವರು ಹೇಳಿದರು: "ಚಂದ್ರನು ನನ್ನ ಮಡಿಲಲ್ಲಿ ಬಿದ್ದುದಾಗಿ ನಾನೊಂದು ಸ್ವಪ್ನವನ್ನು ಕಂಡೆನು. ನಾನು ಸ್ವಪ್ನವನ್ನು ನನ್ನ ಪತಿಗೆ ತಿಳಿಸಿದಾಗ ಅವರು ಇದು ವಿಚಿತ್ರವಾದೊಂದು ಸ್ವಪ್ನವಾಗಿದೆ. ನಿನ್ನ ಪಿತ ಬಹಳ ದೊಡ್ಡ ವಿದ್ವಾಂಸರಾಗಿದ್ದಾರೆ. ಅವರ ಸಮೀಪಕ್ಕೆ ಹೋಗಿ ಸ್ವಪ್ನದ ವಿಷಯವನ್ನು ತಿಳಿಸು ಎಂದರು. ನಾನು ನನ್ನ ಸ್ವಪ್ನವನ್ನು ನನ್ನ ತಂದೆಯವರಿಗೆ ವಿವರಿಸಿದಾಗ ಕೂಡಲೆ ಅವರು ನನ್ನ ಮುಖಕ್ಕೆ ಹೊಡೆದು ಹೇಳಿದರು: "ಅಯೋಗ್ಯೆ, ನೀನು ಅರಬ್ ದೇಶದ ದೊರೆಯನ್ನು ವಿವಾಹವಾಗಲು ಇಚ್ಛಿಸುತ್ತಿರುವೆಯೋ?"[71]

ಸಫಿಯ್ಯರ ಪಿತ ಹಾಗೆ ಹೇಳಿದುದು ಚಂದ್ರ ಅರಬಿಯರ ರಾಷ್ಟ್ರೀಯ ಚಿಹ್ನೆಯಾಗಿದ್ದುದರಿಂದಾಗಿದೆ. ಒಬ್ಬನ ಮಡಿಲಲ್ಲಿ ಚಂದ್ರ ಬಿದ್ದುದ್ದಾಗಿ ಸ್ವಪ್ನದಲ್ಲಿ ಕಂಡರೆ, ಅವನು ಅರಬ್ ದೇಶದ ದೊರೆಯೊಂದಿಗೆ ಸಂಬಂಧ ಸ್ಥಾಪಿಸುವನು ಎಂದು ಅದರ ವ್ಯಾಖ್ಯಾನ ಮಾಡಲಾಗುತ್ತಿತ್ತು. ಚಂದ್ರ ಸೀಳಿ ಹೋದುದಾಗಿ ಅಥವಾ ಬಿದ್ದುಬಿಟ್ಟುದಾಗಿ ಸ್ವಪ್ನದಲ್ಲಿ ಕಂಡರೆ, ಅರಬ್ ರಾಜ್ಯದ ಸರಕಾರದಲ್ಲಿ ಒಡಕುಂಟಾಗುವುದೆಂದು ಅಥವಾ ಅದು ನಾಶವಾಗುವುದೆಂದು ವ್ಯಾಖ್ಯಾನಿಸಲಾಗುತ್ತಿತ್ತು.

ಸಫಿಯ್ಯರವರು ಕಂಡ ಈ ಸ್ವಪ್ನವು ಹಝ್ರತ್ ಪೈಗಂಬರರ(ಸ) ಸತ್ಯತೆಗೆ ಒಂದು ಸಾಕ್ಷವಾಗಿದೆ ಮತ್ತು ಅಲ್ಲಾಹನು ತನ್ನ ದಾಸರಿಗೆ ಅಗೋಚರ ವಿಷಯಗಳ ಕುರಿತು ಸಮಾಚಾರ ನೀಡುತ್ತಾನೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇಂತಹ ಸಮಾಚಾರಗಳು ಸತ್ಯ ವಿಶ್ವಾಸಿಗಳಿಗೆ ಹೆಚ್ಚಾಗಿಯೂ ಅವಿಶ್ವಾಸಿಗಳಿಗೆ ಕಡಿಮೆ ಸಂಖ್ಯೆಯಲ್ಲಿಯೂ ದೊರಕುತ್ತವೆ. ಸಫಿಯ್ಯರವರು ಯಹೂದಿ ಮಹಿಳೆಯಾಗಿದ್ದಾಗ ಅಲ್ಲಾಹನು ಅವರಿಗೆ ಈ ಪರಿಶುದ್ಧ ಅದೃಶ್ಯ ಸಮಾಚಾರವನ್ನು ತಿಳಿಸಿದ್ದನು. ಅವರ ಪತಿ ಒಪ್ಪಂದವನ್ನು ಉಲ್ಲಂಘಿಸಿದುದರ ಶಿಕ್ಷೆಗೆ ಗುರಿಯಾಗಿ ಕೊಲ್ಲಲ್ಪಟ್ಟನು. ಸಫಿಯ್ಯರನ್ನು ಒಬ್ಬ ಶಿಷ್ಯರ ವಶಕ್ಕೆ ಕೈದಿಯಾಗಿ ನೀಡಲಾಗಿದ್ದರೂ ಬೇರೆ ಕೆಲವರ ಆಗ್ರಹದ ಪ್ರಕಾರ, ಅನಂತರ ಅವರು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ವಿವಾಹಿತರಾದರು. ಹೀಗೆ ಅವರಿಗೆ ತಿಳಿಸಲಾದ ಅದೃಶ್ಯ ವಾರ್ತೆ ಈಡೇರಿತು.

ಇನ್ನೊಂದು ಘಟನೆಯ ವಿವರ ಹೀಗಿದೆ: ಖೈಬರ್ ಕೋಟೆಗೆ ಮುತ್ತಿಗೆ ಹಾಕಿದ್ದಾಗ ಒಬ್ಬ ಯಹೂದಿ ಶ್ರೀಮಂತನ ಕುರಿ ಮೇಯಿಸುವವನು ಮುಸ್ಲಿಮನಾದನು. ಅವನು ಹೀಗೆಂದನು: "ಓ ಅಲ್ಲಾಹನ ಪೈಗಂಬರರೆ, ನಾನು ಮುಸ್ಲಿಮನಾದ

71 ಅಸ್ಸೀರತುಲ್ ಹಲಬಿಯ್ಯ ಸಂಪುಟ 3, ಪುಟ 50.

ಕಾರಣ ನಾನು ಯಹೂದಿಯರ ಬಳಿಗೆ ಹೋಗಲಾರೆ. ಈ ಕುರಿಗಳ ಯಹೂದಿ ಮಾಲಿಕನು ಇವುಗಳನ್ನು ನನ್ನ ಮೇಲೆ ನಂಬಿಕೆಯಿಟ್ಟು ಮೇಯಿಸಲು ವಹಿಸಿಕೊಟ್ಟಿರುವನು. ನಾನು ಏನು ಮಾಡಲಿ?"

ಆಗ ಹಝ್ರತ್ ಪೈಗಂಬರ್(ಸ) ಹೀಗೆಂದರು: "ಕುರಿಗಳನ್ನು ಕೋಟೆಯ ಕಡೆಗೆ ಮುಖಮಾಡಿಸಿ ನಿಲ್ಲಿಸಿ ಅವುಗಳನ್ನು ಅಟ್ಟಿಬಿಡಿರಿ. ಸರ್ವಶಕ್ತನಾದ ದೇವನು ಅವುಗಳನ್ನು ಅವುಗಳ ಮಾಲಿಕನಿಗೆ ತಲಪಿಸುವನು."

ಆ ಕುರಿಗಾಹಿ ಹಾಗೆಯೇ ಮಾಡಿದನು. ಕುರಿಗಳು ಕೋಟೆಯನ್ನು ಸಮೀಪಿಸಿದಾಗ ಕೋಟೆಯೊಳಗೆ ಅವುಗಳನ್ನು ಕೊಂಡುಹೋಗಲಾಯಿತು.[72]

ಈ ಘಟನೆಯಿಂದ ಹಝ್ರತ್ ಪೈಗಂಬರ್(ಸ) ವಿಶ್ವಾಸ ಪಾಲನೆಯ ತತ್ವಗಳನ್ನು ಎಷ್ಟು ಶ್ರದ್ಧೆಯಿಂದ ಅನುಸರಿಸುತ್ತಿದ್ದರೆಂದೂ ಇತರರು ಸಹ ಅವುಗಳನ್ನು ಅನುಸರಿಸುವಂತೆ ಹೇಗೆ ಮಾಡುತ್ತಿದ್ದರೆಂದೂ ಸ್ಪಷ್ಟವಾಗುತ್ತದೆ.

ಯುದ್ಧದಲ್ಲಿ ವಿರೋಧ ಪಕ್ಷದಲ್ಲಿರುವವರ ಸಂಪತ್ತನ್ನು ಸ್ವಾಧೀನ ಪಡಿಸಿಕೊಳ್ಳುವುದು ನ್ಯಾಯಬದ್ಧವೆಂದು ಈಗಲೂ ಅಂಗೀಕರಿಸ ಲಾಗುತ್ತಿದೆ. ಅತ್ಯಂತ ಪರಿಷ್ಕೃತವೆಂದು ಗಣಿಸಲ್ಪಡುವ ಈ ಕಾಲದಲ್ಲಿ ಶತ್ರುಗಳ ಸೈನ್ಯಕ್ಕೆ ಸೇರಿದ ಮೃಗಗಳು ತಮ್ಮ ಸ್ವಾಧೀನಕ್ಕೆ ಬಂದಾಗ ಅವುಗಳನ್ನು ಶತ್ರುಗಳ ಸೈನ್ಯದ ಕಡೆಗೆ ಹಿಂದಿರುಗಿಸಿದ ಘಟನೆ ಎಂದಾದರೂ ನಡೆದಿದೆಯೋ?

ಆ ಕುರಿಗಳು ಶತ್ರುಗಳಿಗೆ ಸೇರಿದವುಗಳಾಗಿದ್ದರೂ ಅವುಗಳನ್ನು ಶತ್ರುಗಳಿಗೆ ಹಿಂದಿರುಗಿಸುವುದರಿಂದ ಅವರಿಗೆ ತಿಂಗಳುಗಟ್ಟಲೆ ಆಹಾರದ ಏರ್ಪಾಡು ಅದರಿಂದ ಆಗಬಹುದಾಗಿದ್ದರೂ ಅದರ ಭರವಸೆಯಿಂದ ಶತ್ರುಗಳು ಕೋಟೆಯೊಳಗೆಯೇ ಇದ್ದುಕೊಂಡು ಯುದ್ಧವನ್ನು ಮುಂದುರಿಸಬಲ್ಲರೆಂದು ತಿಳಿದಿದ್ದರೂ ಹಝ್ರತ್ ಪೈಗಂಬರ್(ಸ) ಆ ಕುರಿಹಿಂಡನ್ನು ಶತ್ರುಗಳಿಗೆ ಹಿಂದಿರುಗಿಸಿದರು. ಯಾವ ಮುಸ್ಲಿಮನಿಗೆ ನಂಬಿಕೆಯಿಂದ ಅವುಗಳನ್ನು ಮೇಯಿಸಲು ನೀಡಲಾಗಿತ್ತೋ ಆ ಮುಸ್ಲಿಮನ ವಿಶ್ವಾಸಾರ್ಹತೆಗೆ ಕುಂದುಂಟಾಗಬಾರದು ಎಂಬುದು ಮಾತ್ರ ಅವರ ಉದ್ದೇಶವಾಗಿತ್ತು.

ಮೂರನೆಯ ಘಟನೆಯ ವಿವರ ಹೀಗೆ: ಒಬ್ಬ ಯಹೂದಿ ಮಹಿಳೆ ಪೈಗಂಬರರ ಶಿಷ್ಯರೊಂದಿಗೆ ಕೇಳಿದಳು – ವಧಿಸಲ್ಪಟ್ಟ ಕುರಿಯ ದೇಹದ ಯಾವ ಭಾಗ ಅವರಿಗೆ ಇಷ್ಟ? ಎಂದು. ಹಝ್ರತ್ ಪೈಗಂಬರರಿಗೆ(ಸ) ಕುರಿಯ ಮುಂಗಾಲುಗಳ ಮಾಂಸ ಇಷ್ಟ ಎಂದು ಅವರು ಉತ್ತರಿಸಿದರು. ಆ ಮಹಿಳೆ ಒಂದು ಕುರಿಯನ್ನು ವಧಿಸಿ ಅದರ ಮಾಂಸದಿಂದ ಖಾದ್ಯ ಮಾಡಿ ವಿಷ ಸೇರಿಸಿದಳು – ವಿಶಿಷ್ಟವಾಗಿ ಮುಂಗಾಲಿನ ಮೇಲ್ಭಾಗದ ಮಾಂಸ ತುಂಡುಗಳಿಗೆ; ಅವುಗಳು ಹಝ್ರತ್ ಪೈಗಂಬರರಿಗೆ(ಸ) ಹೆಚ್ಚು ಇಷ್ಟಕರವೆಂದು ತಿಳಿದುದರಿಂದ. ಸೂರ್ಯಾಸ್ತಮಾನದ ನಂತರ ನಮಾಝ್ ಮಾಡಿ ಹಝ್ರತ್ ಪೈಗಂಬರ್(ಸ)

72. ಅಸ್ಸೀರತುಲ್ ಹಲ್‌ಬಿಯ್ಯಾ–ಸಂಪುಟ 3, ಪುಟ 34.



ತಮ್ಮ ಡೇರೆಗೆ ಮರಳಿದಾಗ ಅವರ ಡೇರೆಯ ಸಮೀಪ ಒಬ್ಬ ಮಹಿಳೆ ಕುಳಿತುಕೊಂಡಿರುವುದನ್ನು ಕಂಡರು. ಆಕೆ ಬಂದ ಉದ್ದೇಶವೇನೆಂದು ಅವರು ಕೇಳಿದರು. ಆಕೆ ಹೇಳಿದಳು: "ಓ ಅಬುಲ್ ಖಾಸಿಮ್, (ಖಾಸಿಮನ ಪಿತ) ನಾನು ನಿಮಗೊಂದು ಪಾರಿತೋಷಕ ತಂದಿದ್ದೇನೆ."

ಆಕೆ ತಂದುದನ್ನು ತೆಗೆದುಕೊಳ್ಳಲು ಹಝ್ರತ್ ಪೈಗಂಬರ್(ಸ) ತನ್ನೊಬ್ಬ ಶಿಷ್ಯನಿಗೆ ಹೇಳಿದರು. ಅನಂತರ ಅವರು ಊಟಕ್ಕೆ ಕುಳಿತಾಗ ಹುರಿದ ಕುರಿಯ ಮುಂಗಾಲಿನ ಮಾಂಸ ಸಹ ಬಡಿಸಲಾಗಿತ್ತು. ಹಝ್ರತ್ ಪೈಗಂಬರ್(ಸ) ಆ ಮಾಂಸದ ಒಂದು ಚೂರನ್ನು ತಿಂದರು. ಅವರ ಶಿಷ್ಯರಾದ ಬಶೀರುಬ್ನಿಲ್ ಬರಾ ಸಹ ಒಂದು ಚೂರು ಮಾಂಸವನ್ನು ತಿಂದರು. ಆಗ ಇನ್ನಿತರ ಶಿಷ್ಯರು ಸಹ ಮಾಂಸವನ್ನು ತಿನ್ನಲು ಕೈ ಮುಂದೆ ಮಾಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ತಿನ್ನಬೇಡಿರಿ. ಇದರಲ್ಲಿ ವಿಷ ಮಿಶ್ರಿತವಾಗಿದೆ ಎಂದು ಈ ಮುಂಗಾಲು ನನಗೆ ತಿಳಿಸಿದೆ." (ಇದರ ಕುರಿತು ಯಾವುದಾದರೂ ದೇವ ಸಂದೇಶ ಲಭಿಸಿತೆಂದು ಇದರ ಅರ್ಥವಲ್ಲ. ಇದು ಅರಬಿಗಳು ಮಾತನಾಡುವ ಒಂದು ರೀತಿಯಾಗಿದೆ. ಮಾಂಸವನ್ನು ರುಚಿಸಿದಾಗ ಅದು ವಿಷ ಮಿಶ್ರಿತವಾಗಿದೆ ಎಂದು ನನಗೆ ತಿಳಿಯಿತು ಎಂದು ಇದರ ಅರ್ಥವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಮೂಸಾ ಪ್ರವಾದಿಗೆ ಸಂಬಂಧಿಸಿದ ಒಂದು ಘಟನೆಯನ್ನು ವಿವರಿಸುತ್ತಾ, "ಒಂದು ಗೋಡೆ ಕುಸಿದು ಬೀಳಲು ಇಚ್ಛಿಸುತ್ತಿತ್ತು" ಎಂದು ಹೇಳಲಾಗಿದೆ. ಅದರ ಅರ್ಥ ಆ ಗೋಡೆಯು ಕುಸಿದು ಬೀಳುವ ಚಿಹ್ನೆಗಳು ಕಂಡುಬರುತ್ತಿದ್ದುವು ಎಂದಾಗಿದೆ. ಅದೇ ರೀತಿ ಇಲ್ಲಿ ಮಾಂಸದ ತುಂಡು ಮಾತನಾಡಿತು ಎಂದು ಈ ವಾಕ್ಯದ ಅರ್ಥವಲ್ಲ. ಮಾಂಸವನ್ನು ಕಚ್ಚುವಾಗ ನನಗೆ ಅದು ತಿಳಿಯಿತು ಎಂದು ಮಾತ್ರ ಇದರ ಅರ್ಥವಾಗಿದೆ. ಮುಂದಿನ ಮಾತು ಇದನ್ನು ಸ್ಪಷ್ಟೀಕರಿಸುತ್ತದೆ.)

ಬಶೀರ್ ಹೇಳಿದರು: "ನಿಮಗೆ ಗೌರವವನ್ನು ದಯಪಾಲಿಸಿದ ಅಲ್ಲಾಹನಾಣೆ, ನನಗೆ ಸಹ ಆ ಮಾಂಸದ ತುಂಡಿನಲ್ಲಿ ವಿಷವು ಮಿಶ್ರಿತವಾಗಿರುವುದೆಂದು ಸಂಶಯ ಉಂಟಾಗಿತ್ತು. ನಾನು ಅದನ್ನು ಎಸೆದು ಬಿಡಬೇಕೆಂದು ನನ್ನ ಮನಸ್ಸು ಆಶಿಸುತ್ತಿತ್ತು. ನಾನು ಹಾಗೆ ಮಾಡಿದರೆ ಪ್ರಾಯಶಃ ತಮಗೆ ಮೆಚ್ಚಿಗೆ ಆಗಲಾರದು ಎಂಬ ಭಯದಿಂದ ಮತ್ತು ನಿಮ್ಮ ಆಹಾರವು ಹಾಳಾಗದಿರಲಿ ಎಂದು ಇಚ್ಛಿಸಿ ನಾನು ಹಾಗೆ ಮಾಡಲಿಲ್ಲ. ಇದು ವಿಷಮಿಶ್ರಿತವಾಗಿದೆ ಎಂಬ ಸಂಶಯ ನನಗಿತ್ತು. ಆದುದರಿಂದ ಹಝ್ರತ್ ಪೈಗಂಬರ್(ಸ) ಈ ತುತ್ತನ್ನು ನುಂಗಬಾರದೆಂದು ನಾನು ಆಶಿಸಿದರೂ ನೀವು ಅದನ್ನು ನುಂಗಿದಾಗ ನಾನು ಸಹ ನಿಮ್ಮನ್ನು ಅನುಸರಿಸಿ ನುಂಗಿದೆನು."

ಇದರ ಸ್ವಲ್ಪ ಸಮಯದ ನಂತರ ಬಶೀರರ ಶರೀರ ಪ್ರಕೃತಿ ಕೆಟ್ಟು ಹೋಯಿತು. ಕೆಲವು ವರದಿಗಳ ಪ್ರಕಾರ ಅವರು ಅಲ್ಲಿ ಖೈಬರ್‌ನಲ್ಲಿಯೇ ಮೃತರಾದರು. ಬೇರೆ ಕೆಲವು ವರದಿಗಳ ಪ್ರಕಾರ ಅವರು ಸ್ವಲ್ಪ ಕಾಲ ಅನಾರೋಗ್ಯದಿಂದಿದ್ದು ಅನಂತರ

ಮೃತರಾದರು.

ಹಝ್ರತ್ ಪೈಗಂಬರ್[ಸ] ಸ್ವಲ್ಪ ಮಾಂಸವನ್ನು ಒಂದು ನಾಯಿಗೆ ತಿನ್ನಲು ಹಾಕಿದಾಗ, ಆ ನಾಯಿ ಆ ಮಾಂಸವನ್ನು ತಿಂದು ಸತ್ತುಹೋಯಿತು. ಆಗ ಆ ಯಹೂದಿ ಮಹಿಳೆಯನ್ನು ಕರೆಸಲಾಯಿತು. "ನೀನು ಕುರಿಮಾಂಸದಲ್ಲಿ ವಿಷ ಸೇರಿಸಿರುವೆ" ಎಂದು ಹಝ್ರತ್ ಪೈಗಂಬರ್[ಸ] ಆಕೆಯೊಂದಿಗೆ ಹೇಳಿದಾಗ, "ನಿಮಗೆ ಅದನ್ನು ಹೇಳಿದುದು ಯಾರು?" ಎಂದು ಆಕೆ ಕೇಳಿದಳು. ಆಗ ಹಝ್ರತ್ ಪೈಗಂಬರರ[ಸ] ಕೈಯಲ್ಲಿ ಕುರಿಯ ಮುಂಗಾಲಿನ ತುಂಡಿತ್ತು. ಅವರು ಹೇಳಿದರು: "ನನಗೆ ಕುರಿಯ ಈ ಮುಂಗಾಲು ತಿಳಿಸಿತು."

ಆಗ ಆಕೆಗೆ ತನ್ನ ರಹಸ್ಯ ಕಾರ್ಯಾಚರಣೆ ಹಝ್ರತ್ ಪೈಗಂಬರರಿಗೆ[ಸ] ತಿಳಿದಿದೆ ಎಂದು ಸ್ಪಷ್ಟವಾಯಿತು. ಅವಳು ಬಹಿರಂಗವಾಗಿ ತಾನು ವಿಷ ಹಾಕಿದುದನ್ನು ಒಪ್ಪಿಕೊಂಡಳು. ಆಗ ಹಝ್ರತ್ ಪೈಗಂಬರ್[ಸ] ಕೇಳಿದರು: "ಈ ಅನಿಷ್ಟ ಕೆಲಸ ಮಾಡಲು ನಿನ್ನನ್ನು ಪ್ರೇರೇಪಿಸುದುದು ಏನು?"

ಅವಳು ಹೇಳಿದಳು: "ನನ್ನ ಸಂಬಂಧಿಕರು ನಿಮ್ಮೊಂದಿಗೆ ನಡೆದ ಯುದ್ಧದಲ್ಲಿ ಮೃತರಾಗಿದ್ದಾರೆ. ಆದುದರಿಂದ ನಿಮಗೆ ವಿಷವಿಕ್ಕಬೇಕೆಂದು ನಾನು ನಿರ್ಧರಿಸಿದೆನು. ಅವರು ಮನುಷ್ಯ ಸಹಜವಾದ ಇಚ್ಛೆಯ ಪ್ರಕಾರ ಕೆಲಸ ಮಾಡುವುದಾದರೆ ಅವರು ಸತ್ತು ಅವರಿಂದ ನಮಗೆ ಮುಕ್ತಿ ದೊರಕುವುದು. ಅವರು ನಿಜವಾಗಿಯೂ ಪ್ರವಾದಿಯಾಗಿದ್ದರೆ ದೇವನು ಅವರನ್ನು ರಕ್ಷಿಸುವನು" ಎಂದು ನಾನು ಭಾವಿಸಿದೆನು.

ಹಝ್ರತ್ ಪೈಗಂಬರ್[ಸ] ಆಕೆಯ ಈ ಮಾತುಗಳನ್ನು ಆಲಿಸಿ ಆಕೆಯನ್ನು ಕ್ಷಮಿಸಿದರು.[73] ಆಕೆಗೆ ಮರಣದಂಡನೆಯ ಶಿಕ್ಷೆ ಖಂಡಿತವಾಗಿಯೂ ನೀಡಬಹುದಾಗಿದ್ದರೂ ಆಕೆಯನ್ನು ಶಿಕ್ಷಿಸದೆ ಬಿಟ್ಟುಬಿಡಲಾಯಿತು. ಈ ಘಟನೆಯಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಪೈಗಂಬರ್[ಸ] ತನ್ನನ್ನು ಮತ್ತು ತನ್ನ ಸ್ನೇಹಿತರನ್ನು ಕೊಲ್ಲಲು ಪ್ರಯತ್ನಿಸುತ್ತಾ ಇದ್ದವರನ್ನು ಸಹ ಕ್ಷಮಿಸುತ್ತಿದ್ದರು. ಒಬ್ಬ ಅಪರಾಧಿ ವ್ಯಕ್ತಿ ಜೀವಂತವಾಗಿ ಉಳಿದರೆ ಅನೇಕ ಹಿಂಸಾಚಾರಗಳಿಗೂ ದೌರ್ಜನ್ಯಗಳಿಗೂ ಅವನು ಕಾರಣೀಭೂತನಾಗುವನೆಂಬ ಸಾಧ್ಯತೆಗಳು ಇದ್ದಾಗ ಮಾತ್ರ ಅವರು ಶಿಕ್ಷಿಸುತ್ತಿದ್ದರು.

## ಪವಿತ್ರ ಕಅ್‌ಬದ ಪ್ರದಕ್ಷಿಣೆ

ಹಝ್ರತ್ ಪೈಗಂಬರ್[ಸ] ಮದೀನಕ್ಕೆ ವಲಸೆ ಬಂದ ಏಳನೆಯ ವರ್ಷ, ಎಂದರೆ ಕಿ.ಶ. 629 ಫೆಬ್ರವರಿಯಲ್ಲಿ ಹಿಂದಿನ ವರ್ಷ ಮಕ್ಕದವರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಅವರು ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಲು ಮಕ್ಕಕ್ಕೆ ಹೋಗಬೇಕಾಗಿತ್ತು. ಆ ಸಮಯ ಬಂದಾಗ ಅವರು ಎರಡು ಸಾವಿರ ಶಿಷ್ಯರೊಂದಿಗೆ ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಲು ಮಕ್ಕಕ್ಕೆ ಹೊರಟರು. ಅವರು

73. ಸೀರತುಲ್ ಹಲ್‌ಬಿಯ್ಯ–ಸಂಪುಟ 3 ಪುಟ 61.



ಮಕ್ಕದಿಂದ ಸ್ವಲ್ಪ ದೂರವಿದ್ದ ತಂಗುದಾಣವಾದ 'ಮರ್‍ರುಝ್ಝಹ್‌ರಾನ್' ತಲಪಿದಾಗ ಒಪ್ಪಂದ ಪ್ರಕಾರ ಎಲ್ಲಾ ಭಾರವಾದ ಆಯುಧಗಳನ್ನೂ ಕವಚಗಳನ್ನೂ ಅಲ್ಲಿ ಶೇಖರಿಸಿಟ್ಟು, ಅಲ್ಲಿಂದ ತನ್ನ ಶಿಷ್ಯರೊಂದಿಗೆ ಒರೆಯೊಳಗಿಡಲಾದ ಖಡ್ಗವನ್ನು ಮಾತ್ರ ಒಪ್ಪಂದದ ಪ್ರಕಾರ ತಮ್ಮ ರಕ್ಷಣೆಗಾಗಿ ಇಟ್ಟುಕೊಂಡು ಪವಿತ್ರ ಕಅ್‌ಬದ ಪ್ರದೇಶವನ್ನು ಪ್ರವೇಶಿಸಿದರು. ಏಳು ವರ್ಷದ ಗಡಿಪಾರಿನ ನಂತರ ವಲಸೆಗಾರರು ಶಾಂತಿಯುತವಾಗಿ ಮಕ್ಕದಲ್ಲಿ ಪ್ರವೇಶಿಸಿದುದು ಸಾಮಾನ್ಯ ಘಟನೆಯೇನೂ ಅಲ್ಲ. ದೀರ್ಘಕಾಲ ಮಕ್ಕದವರು ಅವರ ಮೇಲೆ ಮಾಡಿದ ದೌರ್ಜನ್ಯವನ್ನು ಜ್ಞಾಪಿಸಿಕೊಂಡು ಅವರ ರಕ್ತ ಕುದಿಯುತ್ತಿತ್ತು. ಅದೇ ಸಂದರ್ಭದಲ್ಲಿ ಸರ್ವಶಕ್ತನಾದ ದೇವನು ಅವರಿಗೆ ಪವಿತ್ರ ಕಅ್‌ಬದ ಪ್ರದಕ್ಷಿಣೆಯ ಭಾಗ್ಯ ನೀಡಿದುದರಿಂದ ಅವರು ಸಂತೋಷಭರಿತರೂ ಆಗಿದ್ದರು. ಮಕ್ಕದ ಜನರು ಮಕ್ಕದಿಂದ ಹೊರಗೆ ಹೋಗಿ ಬೆಟ್ಟಗಳ ಮೇಲೇರಿ ನಿಂತು ಮುಸ್ಲಿಮರನ್ನು ನೋಡುತ್ತಾ ಇದ್ದರು.

ಅಲ್ಲಾಹನು ತಮಗೆ ಮಕ್ಕವನ್ನು ಪ್ರವೇಶಿಸುವ ಭಾಗ್ಯ ನೀಡಿರುವನೋ ಇಲ್ಲವೋ? ಎಂದು ಸತ್ಯವಿಶ್ವಾಸಿಗಳು ಅವಿಶ್ವಾಸಿಗಳಿಗೆ ಹೇಳಲು ಆಶಿಸುತ್ತಿದ್ದರು. ಆಗ ಅಬ್ದುಲ್ಲಾ ಬಿನ್ ರವಾಹ ಸಮರಗೀತೆ ಹಾಡಲು ತೊಡಗಿದರು. ಆಗ ಹಝ್ರತ್ ಪೈಗಂಬರ್[ಸ] ಅವರನ್ನು ತಡೆದು ಹೇಳಿದರು: "ನೀವು ಇಂತಹ ಪದ್ಯ ಹಾಡಬೇಡಿರಿ. ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ, ಆ ದೇವನೇ ತನ್ನ ಸಂದೇಶವಾಹಕನಿಗೆ ಸಹಾಯ ಮಾಡಿದನು ಮತ್ತು ಸತ್ಯವಿಶ್ವಾಸಿಗಳನ್ನು ಅಪಮಾನದ ಕೂಪದಿಂದ ಮೇಲಕ್ಕೆತ್ತಿ ಉಚ್ಚ ಸ್ಥಾನವನ್ನು ನೀಡಿದನು. ಅಲ್ಲಾಹನೇ ಶತ್ರುಗಳನ್ನು ಸತ್ಯ ವಿಶ್ವಾಸಿಗಳ ಮುಂಭಾಗದಿಂದ ಓಡಿಸಿಬಿಟ್ಟಿರುವನು ಎಂದು ಹೇಳಿರಿ."

ಪವಿತ್ರ ಕಅ್‌ಬದ ಪ್ರದಕ್ಷಿಣೆ, ಸಫಾ ಮರ್ವಗಳ ಮಧ್ಯೆ ಓಟ ಮೊದಲಾದ ಅನುಷ್ಠಾನ ಕರ್ಮಗಳನ್ನು ಮಾಡಿ ಅವರೆಲ್ಲರೂ ಮೂರು ದಿನಗಳ ಕಾಲ ಮಕ್ಕದಲ್ಲಿ ತಂಗಿದರು. ಹಝ್ರತ್ ಅಬ್ಬಾಸ್‌ರವರ[ರ] ನಾದಿನಿ ಮೈಮೂನಾ ಮಕ್ಕದಲ್ಲಿದ್ದರು. ಅವರು ವಿಧವೆಯಾಗಿದ್ದರು. ಹಝ್ರತ್ ಪೈಗಂಬರ್[ಸ] ಮೈಮೂನರನ್ನು ವಿವಾಹವಾಗಬೇಕೆಂದು ಹಝ್ರತ್ ಅಬ್ಬಾಸ್ ಅಪೇಕ್ಷಿಸಿದರು. ಹಝ್ರತ್ ಪೈಗಂಬರ್[ಸ] ಅದಕ್ಕೆ ಸಮ್ಮತಿಸಿದರು. ನಾಲ್ಕನೆಯ ದಿನ ಹಝ್ರತ್ ಪೈಗಂಬರ್[ಸ] ಮಕ್ಕದಿಂದ ಒಪ್ಪಂದದ ಪ್ರಕಾರ ಹೊರಟು ಹೋಗಬೇಕೆಂದು ಮಕ್ಕದವರು ಹೇಳಿದರು. ಆಗ ಹಝ್ರತ್ ಪೈಗಂಬರ್[ಸ] ತನ್ನ ಎಲ್ಲಾ ಶಿಷ್ಯರು ಮಕ್ಕವನ್ನು ಬಿಟ್ಟು ಮದೀನಾಭಿಮುಖವಾಗಿ ಪ್ರಯಾಣ ಮಾಡಲು ಆಜ್ಞಾಪಿಸಿದರು. ಮಕ್ಕದವರ ಭಾವನೆಗಳನ್ನು ಪರಿಗಣಿಸಿ ಅವರು ತಮ್ಮ ನವ ವಧುವಾದ ಮೈಮೂನಾರನ್ನು ಮಕ್ಕದಲ್ಲಿ ಬಿಟ್ಟರು. ಅವರು ಸಾಮಗ್ರಿಗಳನ್ನು ಸಾಗಿಸುವ ಸವಾರರ ಜೊತೆಗೆ ಬರುವಂತೆ ಹೇಳಿ ತಮ್ಮ ಸವಾರಿ ಮೃಗವನ್ನು ಓಡಿಸಿ ಪವಿತ್ರ ಕಅ್‌ಬದ ಪ್ರದೇಶದಿಂದ ಹೊರಗೆ ಹೋಗಿ ಕಾಡುಗುಡ್ಡಗಳಲ್ಲಿ ಬಿಡಾರ ಹೂಡಿದರು. ಅಲ್ಲಿಗೆ ಮೈಮೂನರನ್ನು ತಂದೊಪ್ಪಿಸಲಾಯಿತು.

## ಹಝ್ರತ್ ಪೈಗಂಬರರ(ಸ) ಬಹು ಪತ್ನಿತ್ವದ ಕುರಿತು ಆಕ್ಷೇಪಗಳಿಗೆ ಉತ್ತರ

ಇಂತಹ ಸಂಕ್ಷಿಪ್ತ ಜೀವನ ಚರಿತ್ರೆಯಲ್ಲಿ ಮೇಲಿನ ಘಟನೆ ಉಲ್ಲೇಖಿಸ ಬೇಕಾಗಿರಲಿಲ್ಲ. ಈ ಘಟನೆಯ ಒಂದು ವಿಶಿಷ್ಟ ಅಂಶವು ಇದನ್ನು ಇಲ್ಲಿ ವಿವರಿಸಲು ನನ್ನನ್ನು ನಿರ್ಬಂಧಿತನನ್ನಾಗಿ ಮಾಡಿದೆ. ಹಝ್ರತ್ ಪೈಗಂಬರರಿಗೆ(ಸ) ಅನೇಕ ಪತ್ನಿಯರಿದ್ದರೆಂದೂ ಅವರು ಹೀಗೆ ಮಾಡಿದುದು ಅವರ ಭೋಗಲಾಲಸೆಯ ಪ್ರತೀಕವೆಂದೂ ಆಕ್ಷೇಪಿಸಲಾಗುತ್ತಿದೆ. ಆದರೆ ಅವರ ಪತ್ನಿಯರಿಗೆ ಅವರೊಂದಿಗೆ ಇದ್ದ ಸಂಬಂಧವನ್ನು ನಾವು ನೋಡುವುದಾದರೆ, ಅವರ ಪತ್ನಿಯರೊಂದಿಗೆ ಅವರ ಸಂಬಂಧವು ಪರಿಶುದ್ಧವೂ ನಿಸ್ವಾರ್ಥವೂ ಆಧ್ಯಾತ್ಮಿಕ ಮೌಲ್ಯಗಳನ್ನು ಹೊಂದಿದುದೂ ಆಗಿತ್ತೆಂದು ಒಪ್ಪಬೇಕಾಗುತ್ತದೆ. ಒಬ್ಬ ಏಕ ಪತ್ನೀ ವ್ರತನಾದ ಪತಿಯ ಸಂಬಂಧ ಸಹ ಪತ್ನಿಯೊಂದಿಗೆ ಇಷ್ಟು ಗಾಢವಾಗಿರಲು ಸಾಧ್ಯವಿಲ್ಲ. ಹಝ್ರತ್ ಪೈಗಂಬರ್(ಸ) ತನ್ನ ಪತ್ನಿಯರೊಂದಿಗೆ ಕೇವಲ ಭೋಗಲಾಲಸೆಯ ಸಂಬಂಧವನ್ನು ಮಾತ್ರ ಹೊಂದಿದ್ದರೆ ಅವರ ಪತ್ನಿಯರ ಹೃದಯದಲ್ಲಿ ಅವರ ಬಗ್ಗೆ ಯಾವುದೇ ಆಧ್ಯಾತ್ಮಿಕ ಭಾವನೆ ಉಂಟಾಗುತ್ತಿರಲಿಲ್ಲ. ಆದರೆ ಅವರ ಪತ್ನಿಯರಿಗೆ ಅವರೊಂದಿಗೆ ಇದ್ದ ಅಪಾರ ಪ್ರೀತಿ ಮತ್ತು ಅವರಿಂದ ಉತ್ತಮವಾದ ರೀತಿಯಲ್ಲಿ ಪ್ರಭಾವಿತರಾದುದರ ಬಗ್ಗೆ ಅವರು ನಿಧನ ಹೊಂದಿದ ನಂತರ ಅವರ ಪತ್ನಿಯರಿಗೆ ಸಂಬಂಧಿಸಿದ ಚರಿತ್ರೆಯಲ್ಲಿ ಲಿಖಿತವಾದ ಅನೇಕ ಘಟನೆಗಳಿಂದ ಸಾಬೀತಾಗುತ್ತದೆ.

ಉದಾಹರಣೆಗೆ, ಈ ಚಿಕ್ಕ ಸಂಭವವನ್ನು ನೋಡಿರಿ. ಮೈಮೂನಾ(ರ) ಮಕ್ಕ ನಗರದ ಹೊರವಲಯದಲ್ಲಿ ಹಝ್ರತ್ ಪೈಗಂಬರರನ್ನು(ಸ) ಒಂದು ಡೇರೆಯಲ್ಲಿ ಪ್ರಥಮ ಬಾರಿ ಬಂದು ಸೇರಿದರು. ಮೈಮೂನಾರೊಂದಿಗೆ ಹಝ್ರತ್ ಪೈಗಂಬರರ(ಸ) ಸಂಬಂಧ ಕೇವಲ ದೈಹಿಕವಾಗಿದ್ದರೆ ಮತ್ತು ಅವರು ತನ್ನ ಕೆಲವು ಪತ್ನಿಯರಿಗೆ ಬೇರೆ ಪತ್ನಿಯರಿಗಿಂತ ಹೆಚ್ಚು ಸ್ಥಾನವನ್ನು ನೀಡುವವರಾಗಿದ್ದರೆ ಮೈಮೂನಾ(ರ) ಹಝ್ರತ್ ಪೈಗಂಬರರನ್ನು(ಸ) ಪ್ರಥಮ ಬಾರಿ ಭೇಟಿಯಾದುದು ತನ್ನ ಜೀವಿತದ ಉತ್ತಮವಾದೊಂದು ಘಟನೆ ಎಂದು ಪರಿಗಣಿಸಲು ಸಾಧ್ಯವಿರಲಿಲ್ಲ. ಅವರು ಆ ಘಟನೆಯನ್ನು ಮರೆತು ಬಿಡಲು ಸಹ ಪ್ರಯತ್ನಿಸುತ್ತಿದ್ದರು. ಮೈಮೂನ(ರ) ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಐವತ್ತು ವರ್ಷಗಳ ಕಾಲ ಜೀವಿಸಿದ್ದರು. ಅವರು ಎಂಬತ್ತು ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. ಆದರೆ ಅವರು ಅನುಗ್ರಹಿಸಲ್ಪಟ್ಟ ತನ್ನ ಆ ಶುಭ ಮುಹೂರ್ತವನ್ನು ಎಂದೂ ಮರೆತು ಬಿಡಲಿಲ್ಲ. ಎಂಬತ್ತು ವರ್ಷ ಪ್ರಾಯದಲ್ಲಿ ಯೌವನದ ಎಲ್ಲಾ ಭಾವಾವೇಶಗಳು ತಣ್ಣಗಾದಾಗ ಮತ್ತು ಹಝ್ರತ್ ಪೈಗಂಬರ್(ಸ) ಮೃತರಾಗಿ ಐವತ್ತು ವರ್ಷ ಕಳೆದ ನಂತರ (ಅದು ಸಹ ಒಂದು ಪೂರ್ಣ ಜೀವಿತ ಕಾಲವೆಂದು ಪರಿಗಣಿಸಬಹುದಾಗಿದೆ) ಮೈಮೂನ(ರ) ನಿಧನ ಹೊಂದಿದರು. ಅವರು ಮರಣಾ ಸನ್ನರಾದಾಗ ತನ್ನ ಸುತ್ತು ಮುತ್ತಲೂ ಇದ್ದವರೊಂದಿಗೆ ತನ್ನ ಕೊನೆಯಾಸೆಯನ್ನು ಹೀಗೆ ಈಡೇರಿಸುವಂತೆ ಅಪೇಕ್ಷಿಸಿದರು: "ನಾನು ಮೃತಳಾದರೆ ಮಕ್ಕದಿಂದ ಹೊರಗೆ



ಹಝ್ರತ್ ಪೈಗಂಬರ್(ಸ) ತಂಗಲು ಡೇರೆ ಹಾಕಿದ ಸ್ಥಳದಲ್ಲಿ, ಎಂದರೆ ನಾನು ಅವರನ್ನು ಪತ್ನಿಯಾಗಿ ಪ್ರಥಮ ಬಾರಿ ಭೇಟಿಯಾದ ಸ್ಥಳದಲ್ಲಿ ಗೋರಿ ತೋಡಿ ನನ್ನ ದೇಹವನ್ನು ದಫನು ಮಾಡಬೇಕು."[74]

ಲೋಕದಲ್ಲಿ ಅನೇಕ ವಾಸ್ತವಿಕ ವಿಚಿತ್ರ ಘಟನೆಗಳು ನಡೆಯುತ್ತವೆ ಮತ್ತು ಕೆಲವು ಕಥೆಗಳಲ್ಲಿ ಸಹ ವಿಚಿತ್ರ ಘಟನೆಗಳು ಪ್ರಸ್ತಾಪಿಸಲ್ಪಡುತ್ತವೆ. ಆದರೆ ವಾಸ್ತವಿಕವಾದ ಯಾವುದೇ ವಿಚಿತ್ರ ಘಟನೆ ಮತ್ತು ಕಥೆಗಳಲ್ಲಿ ವಿವರಿಸಲಾಗುವ ಘಟನೆಗಳು ಈ ಗಾಢವಾದ ಪ್ರೇಮಕ್ಕಿಂತ ಹೆಚ್ಚು ಪ್ರಭಾವಶಾಲಿಯಾದುದು ಎಂದು ಸೂಚಿಸಲು ಸಾಧ್ಯವೇ?

## ಖಾಲಿದ್ ಬಿನ್ ವಲೀದ್ ಮತ್ತು ಅಮ್ರಿಬ್ನುಲ್ ಆಸ್ ಅವರ ಇಸ್ಲಾಮ್ ಧರ್ಮ ಸ್ವೀಕಾರ

ಪವಿತ್ರ ಕಅ್‌ಬದ ಪ್ರದಕ್ಷಿಣೆಯ ನಂತರ ಮದೀನಕ್ಕೆ ಹಝ್ರತ್ ಪೈಗಂಬರ್(ಸ) ಹಿಂದಿರುಗಿದ ಕೂಡಲೆ ಇಬ್ಬರು ವಿಶಿಷ್ಟ ವ್ಯಕ್ತಿಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಅವಿಶ್ವಾಸಿಗಳು ಮುಸ್ಲಿಮರ ವಿರುದ್ಧ ಯುದ್ಧವನ್ನು ಪ್ರಾರಂಭಿಸಿದ ಮೊದಲುಗೊಂಡು ಅಂದಿನ ತನಕ ಅವಿಶ್ವಾಸಿಗಳ ಪರವಾಗಿ ಹೋರಾಡುತ್ತಿದ್ದ ಪರಾಕ್ರಮಿಗಳಾದ ಸೈನ್ಯಾಧಿಕಾರಿಗಳಲ್ಲಿ ಅವರಿಬ್ಬರೂ ಸೇರಿದ್ದರು. ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಎಂತಹ ಧೀರ ಸೈನ್ಯಾಧಿಪತಿಗಳಾದರೆಂದರೆ ಅವರ ಹೆಸರು ಚರಿತ್ರೆಯಿಂದ ಅಳಿಸಬಿಡಲು ಸಾಧ್ಯವಾಗದು. ಇಸ್ಲಾಮಿನ ಚರಿತ್ರೆಯಲ್ಲಿ ಇವರಿಬ್ಬರ ಹೆಸರುಗಳಲ್ಲಿ ಒಂದು ಖಾಲಿದ್ ಬಿನ್ ವಲೀದ್ ಎಂದಾಗಿದೆ. ಅವರು ರೂಮಿನ ಸಾಮ್ರಾಜ್ಯದ ಅಸ್ತಿಭಾರವನ್ನು ಅಲುಗಾಡಿಸಿದ್ದರು. ಅವರು ಆ ಸಾಮ್ರಾಜ್ಯಕ್ಕೆ ಸೇರಿದ ಪ್ರದೇಶಗಳನ್ನು ಒಂದಾದ ನಂತರ ಇನ್ನೊಂದರಂತೆ ಜಯಿಸಿ ಇಸ್ಲಾಮೀ ಆಡಳಿತೆಗೆ ಒಳಪಡಿಸುತ್ತಾ ಹೋದರು. ಇನ್ನೊಬ್ಬರ ಹೆಸರು ಅಮ್ರಿಬ್ನುಲ್ ಆಸ್ ಎಂದು. ಅವರು ಈಜಿಪ್ಟನ್ನು ಜಯಿಸಿ ಇಸ್ಲಾಮೀ ಆಡಳಿತಕ್ಕೆ ಸೇರಿಸಿದರು.

## ಮೂತ ಯುದ್ಧ

ಹಝ್ರತ್ ಪೈಗಂಬರ್(ಸ) ಪವಿತ್ರ ಕಅ್‌ಬದ ಪ್ರದಕ್ಷಿಣೆಯ ನಂತರ ಮದೀನಕ್ಕೆ ಹಿಂದಿರುಗಿ ಬಂದಾಗ, ಸಿರಿಯಾದ ಗಡಿ ಪ್ರದೇಶದಲ್ಲಿದ್ದ ಕ್ರೈಸ್ತರಾದ ಅರಬಿ ಗೋತ್ರಗಳು ಯಹೂದಿಯರಿಂದ ಮತ್ತು ಅವಿಶ್ವಾಸಿಗಳಿಂದ ಹುರಿದುಂಬಿಸಲ್ಪಟ್ಟು ಮದೀನದ ಆಕ್ರಮಣಕ್ಕೆ ಸಿದ್ಧತೆಗಳನ್ನು ಮಾಡುತ್ತಿದ್ದಾರೆ ಎಂದು ಅವರಿಗೆ ಸಮಾಚಾರಗಳು ದೊರೆತವು.

ಹಝ್ರತ್ ಪೈಗಂಬರ್(ಸ) ಹದಿನೈದು ಮಂದಿಯ ಒಂದು ಸಮಿತಿಯನ್ನು ನೇಮಿಸಿ ಈ ಕಿಂವದಂತಿಗಳು ಎಷ್ಟರ ಮಟ್ಟಿಗೆ ಸತ್ಯವೆಂದು ಪರಿಶೀಲಿಸಲು ಸಿರಿಯಾದ ಗಡಿ ಪ್ರದೇಶಗಳಿಗೆ ಕಳುಹಿಸಿದರು. ಈ ಸಮಿತಿ ಸಿರಿಯಾದ ಗಡಿಪ್ರದೇಶವನ್ನು ತಲುಪಿದಾಗ ಅಲ್ಲಿ ಒಂದು ಸೈನ್ಯವು ಜಮಾವಣೆ ಆಗುತ್ತಿರುವುದನ್ನು ಅವರು

---

74. ಅಸ್ಸೀರತುಲ್ ಹಲ್‌ಬಿಯ್ಯ ಸಂಪುಟ 3 ಪುಟ 73

ಕಂಡರು. ಅವರು ತಕ್ಷಣ ಹಿಂದಿರುಗಿ ಹೋಗಿ ಹಝ್ರತ್ ಪೈಗಂಬರರಿಗೆ ವರದಿ ಸಲ್ಲಿಸುವುದಕ್ಕೆ ಬದಲಾಗಿ ಆ ಕಾಲದ ಸತ್ಯ ವಿಶ್ವಾಸಿಗಳ ಚಿಹ್ನೆಯಾಗಿದ್ದ ಧರ್ಮಪ್ರಚಾರದ ಉತ್ಸಾಹವು ಅವರ ಮೇಲೆ ಜಯಗಳಿಸಿತು. ಅವರು ಧೈರ್ಯದಿಂದ ಮುಂದೆ ಸಾಗಿ ಆ ಜನರನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸಲು ತೊಡಗಿದರು.

ಮುಸ್ಲಿಮರ ಶತ್ರುಗಳಿಂದ ಉತ್ತೇಜಿಸಲ್ಪಟ್ಟು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ದೇಶದ ಮೇಲೆ ಆಕ್ರಮಣಮಾಡಿ ಅದನ್ನು ಜಯಸಲು ಬಯಸುತ್ತಾ ಇದ್ದವರು, ಏಕದೇವ ವಿಶ್ವಾಸದ ಉಪದೇಶದಿಂದ ಪ್ರಭಾವಿತರಾಗಲು ಹೇಗೆ ತಾನೆ ಸಾಧ್ಯ? ಮುಸ್ಲಿಮರು ಅವರಿಗೆ ಉಪದೇಶಿಸಲು ಪ್ರಾರಂಭಿಸಿದಾಗ ನಾಲ್ಕು ದಿಕ್ಕುಗಳಿಂದಲೂ ಸೈನಿಕರು ಅವರನ್ನು ಸುತ್ತುವರಿದು ಬಾಣಗಳನ್ನು ಅವರ ಮೇಲೆ ಸುರಿಸಲು ತೊಡಗಿದರು. ತಮ್ಮ ಧರ್ಮೋಪದೇಶಗಳನ್ನು ಸಾಕ್ಷ್ಯಾಧಾರಗಳಿಂದ ಖಂಡಿಸುವುದಕ್ಕೆ ಪ್ರತಿಯಾಗಿ ಅವರು ಬಾಣಗಳನ್ನೆಸೆಯುವುದನ್ನು ನೋಡಿ ಮುಸ್ಲಿಮರು ಓಡಿಹೋಗಲಿಲ್ಲ. ನೂರಾರು ಅಥವಾ ಸಾವಿರಾರು ಸಂಖ್ಯೆಯಲ್ಲಿದ್ದ ಸೈನಿಕರಿಂದ ಅವರು ತಮ್ಮ ಜೀವ ರಕ್ಷಣೆಗೆ ಪ್ರಯತ್ನಿಸಲಿಲ್ಲ. ಸತ್ಯ ಮುಸ್ಲಿಮರ ಹಾಗೆ ಆ ಹದಿನೈದು ಜನರು ನೂರಾರು ಅಥವಾ ಸಾವಿರಾರು ಸಂಖ್ಯೆಯಲ್ಲಿದ್ದ ಆ ಸೈನಿಕರನ್ನು ಎದುರಿಸಲು ಮುಂದಾಗಿ ಅಲ್ಲಿಯೇ ಕೊಲ್ಲಲ್ಪಟ್ಟರು. ಇಂತಹ ದೌರ್ಜನ್ಯ ನಡೆಸಿದ ಜನರನ್ನು ಶಿಕ್ಷಿಸಲು ಒಂದು ಸೈನ್ಯವನ್ನು ಕಳುಹಿಸಲು ಹಝ್ರತ್ ಪೈಗಂಬರ್(ಸ) ನಿರ್ಧರಿಸಿದ್ದರು. ಆದರೆ ಅನಂತರ ದೊರೆತ ಸಮಾಚಾರಗಳ ಪ್ರಕಾರ ಅಲ್ಲಿ ಜಮಾವಣೆಯಾಗಿದ್ದ ಸೈನ್ಯವು ಚದುರಿ ಹೋಗಿತ್ತು. ಆದುದರಿಂದ ಅವರು ತಮ್ಮ ನಿರ್ಧಾರವನ್ನು ಸ್ವಲ್ಪ ಕಾಲಕ್ಕೆ ಮುಂದೂಡಿದರು.

ಹಝ್ರತ್ ಪೈಗಂಬರ್(ಸ) ಅದೇ ಕಾಲದಲ್ಲಿ ಗಸ್ಸಾನ್ ಗೋತ್ರದ ಮುಂದಾಳು ಮತ್ತು ರೂಮ್ ಸರಕಾರದ ವತಿಯಿಂದ ಬುಸ್ರಾದ ಆಡಳಿತಗಾರನಾಗಿದ್ದವನಿಗೆ ಅಥವಾ ರೂಮಿನ ಖೈಸರನಿಗೆ ಪತ್ರ ಬರೆದರು. ಆ ಪತ್ರದಲ್ಲಿ ಮೇಲಿನ ಘಟನೆಯ ಕುರಿತು ಪ್ರಾಯಶಃ ಪ್ರಸ್ತಾಪಿಸಲಾಗಿತ್ತು. ಸಿರಿಯಾದ ಕೆಲವು ಗೋತ್ರಗಳು ಇಸ್ಲಾಮೀ ಪ್ರದೇಶವನ್ನು ಆಕ್ರಮಿಸಲು ಸಿದ್ಧತೆ ಮಾಡುತ್ತಿದ್ದಾರೆ. ಎಂದೂ ಅವರು ನಿಷ್ಕಾರಣವಾಗಿ ಹದಿನೈದು ಮುಸ್ಲಿಮರನ್ನು ಕೊಂದರೆಂದೂ ಬರೆದಿರಬಹುದು. ಈ ಪತ್ರ ಅಲ್‌ಹರ್ಸ್ ಎಂಬ ಶಿಷ್ಯರ ಕೈಯಲ್ಲಿ ಕೊಟ್ಟು ಕಳುಹಿಸಲಾಗಿತ್ತು. ಅವರು ಸಿರಿಯಾದ ಕಡೆಗೆ ಪ್ರಯಾಣ ಮಾಡುತ್ತಾ ಮೂತ ಎಂಬಲ್ಲಿ ತಂಗಿದರು. ಅಲ್ಲಿ ಗಸ್ಸಾನ್ ಗೋತ್ರದ ಒಬ್ಬ ಮುಖಂಡನಾದ ಮತ್ತು ಖೈಸರನಿಂದ ನೇಮಿಸಲ್ಪಟ್ಟ ಅಧಿಕಾರಿಯಾಗಿದ್ದ ಶರ್‌ಜೀಲ್ ಎಂಬವನು ಅವರನ್ನು ಕಂಡನು. ಅವನು ಅವರೊಂದಿಗೆ, "ನೀವೆಲ್ಲಿಗೆ ಹೋಗುತ್ತಿದ್ದೀರಿ? ನೀವು ಮುಹಮ್ಮದರ ದೂತರಾಗಿರ ಬಹುದಲ್ಲವೇ?" ಎಂದು ಕೇಳಿದನು. ಅವರು "ಹೌದು" ಎಂದು ಹೇಳಿದರು. ಆಗ ಅವನು ಅಲ್‌ಹರ್ಸ್‌ರನ್ನು ಸೆರೆಹಿಡಿದು ಹಗ್ಗದಿಂದ ಹೆಡಮುರಿ ಕಟ್ಟಿ ಅವರನ್ನು ಹೊಡೆದು ಕೊಂದನು. ಚರಿತ್ರೆಯಲ್ಲಿ ಸಾಕಷ್ಟು ವಿವರಗಳು ದೊರಕುವುದಿಲ್ಲವಾದರೂ ಈ ಘಟನೆ



ಸೂಚಿಸುವುದೇನೆಂದರೆ ಶರ್‌ಜೀಲ್‌ನು ಹದಿನೈದು ಮುಸ್ಲಿಮರನ್ನು ಕೊಂದ ತಂಡದ ನಾಯಕರಲ್ಲಿ ಒಬ್ಬನಾಗಿರಲೂಬಹುದು. ಅವನು ಅಲ್‌ಹರ್ಸ್‌ರೊಂದಿಗೆ, "ನೀವು ಪ್ರಾಯಶಃ ಮುಹಮ್ಮದರ ದೂತರಾಗಿರಬಹುದಲ್ಲವೇ?" ಎಂದು ವಿಚಾರಿಸಿದುದರಿಂದ, ಹಝ್ರತ್ ಪೈಗಂಬರ್(ಸ) ಖೈಸರನಿಗೆ ದೂರು ನೀಡಿ "ನಿಮ್ಮ ಪ್ರದೇಶದ ಜನರು ನಮ್ಮ ಪ್ರದೇಶಗಳ ಮೇಲೆ ಆಕ್ರಮಣಗಳನ್ನು ಮಾಡುತ್ತಿದ್ದಾರೆ" ಎಂದು ಆಕ್ಷೇಪಿಸಬಹುದೆಂದು ಅವನಿಗೆ ಭಯವಿದ್ದಿತೆಂದು ತೋರುತ್ತದೆ. ದೂರಿನ ಕಾರಣದಿಂದ ಖೈಸರ್ ದೊರೆ ತಮ್ಮನ್ನು ಪ್ರಶ್ನಿಸಬಾರದು ಎಂದು ಅವನು ಹೆದರಿದನು. ಆದುದರಿಂದ ಖೈಸರನಿಗೆ ದೂರು ತಲಪದಿರಲಿ ಮತ್ತು ಖೈಸರ್ ಆ ಬಗ್ಗೆ ತಪಾಸಣೆ ನಡೆಸದಿರಲಿ ಎಂದು ಉದ್ದೇಶಿಸಿ ಅವನು ಹಝ್ರತ್ ಪೈಗಂಬರರ ದೂತನನ್ನು ಕೊಂದನು. ಆದರೆ ಅಲ್ಲಾಹನು ಅವನ ದುರುದ್ದೇಶಗಳನ್ನು ಈಡೇರಲು ಬಿಡಲಿಲ್ಲ, ಹಝ್ರತ್ ಪೈಗಂಬರ್‌ರಿಗೆ ಅಲ್‌ಹರ್ಸ್ ವಧೆಯ ಬಗ್ಗೆ ಯಾವುದೋ ರೀತಿಯಲ್ಲಿ ಸಮಾಚಾರ ತಲುಪಿತು.

ಹಝ್ರತ್ ಪೈಗಂಬರ್(ಸ) ಈ ಘಟನೆ ಮತ್ತು ಇದರ ಮೊದಲನೆಯ ಘಟನೆಯ ಶಿಕ್ಷೆ ನೀಡಲಿಕ್ಕಾಗಿ ಮೂರು ಸಾವಿರ ಮಂದಿಯ ಸೈನ್ಯವನ್ನು ಸಿದ್ಧಪಡಿಸಿ ಹಝ್ರತ್ ಝೈದ್ ಬಿನ್ ಹಾರಿಸರ (ಅವರು ವಿಮೋಚಿತ ಗುಲಾಮರಾಗಿದ್ದರು. ಅವರ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ.) ನೇತೃತ್ವದಲ್ಲಿ ಸಿರಿಯಾಕ್ಕೆ ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ಹೀಗೆ ಆದೇಶಿಸಿದರು:

"ಝೈದ್ ಬಿನ್ ಹಾರಿಸ ಸೈನ್ಯದ ಸೇನಾಧಿಪತಿ ಆಗಿರುವರು. ಅವರು ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಜಅಫರ್ ಬಿನ್ ಅಬೀ ತಾಲಿಬ್ ಸೇನಾಧಿಪತಿಯಾಗುವರು. ಅವರು ಸಹ ಕೊಲ್ಲಲ್ಪಟ್ಟರೆ ಅಬ್ದುಲ್ಲಾ ಬಿನ್ ರವಾಹ ಸೇನಾಧಿಪತಿಯಾಗುವರು. ಅವರು ಸಹ ಕೊಲ್ಲಲ್ಪಟ್ಟರೆ ಮುಸ್ಲಿಮರು ತಮ್ಮಲ್ಲಿ ಒಬ್ಬರನ್ನು ಸೇನಾಧಿಪತಿಯಾಗಿ ಆಯ್ಕೆ ಮಾಡಬೇಕು."

ಆಗ ಒಬ್ಬ ಯಹೂದಿ ಅಲ್ಲಿದ್ದನು. ಅವನು ಹಝ್ರತ್ ಪೈಗಂಬರ್‌ರೊಂದಿಗೆ ಹೀಗೆಂದನು:

"ಅಬುಲ್ ಖಾಸಿಮ್, ನೀವು ಸತ್ಯವಂತರೆಂದಾದರೆ ಈ ಮೂರು ಜನರು ಕೊಲ್ಲಲ್ಪಡುವರು. ಏಕೆಂದರೆ ಅಲ್ಲಾಹನು ತನ್ನ ಪ್ರವಾದಿಗಳ ಬಾಯಿಯಿಂದ ಬಂದ ಮಾತುಗಳನ್ನು ಈಡೇರಿಸುತ್ತಾನೆ."

ಆ ಯಹೂದಿ ಝೈದ್‌ರನ್ನು ಅಭಿಮುಖೀಕರಿಸಿ ಹೇಳಿದನು: "ನಾನು ಸತ್ಯವಾಗಿ ಹೇಳುತ್ತೇನೆ. ಮುಹಮ್ಮದ್ ಸತ್ಯವಾಗಿಯೂ ಪ್ರವಾದಿಯಾಗಿದ್ದರೆ ನೀವು ಎಂದೂ ಜೀವಂತರಾಗಿ ಮರಳಿ ಬರಲಾರಿರಿ."

ಆಗ ಝೈದ್ ಹೇಳಿದರು: "ನಾನು ಮರಳಿ ಬಂದರೂ ಬಾರದೆ ಇದ್ದರೂ ಮುಹಮ್ಮದ್(ಸ) ಅಲ್ಲಾಹನ ಸತ್ಯ ಪ್ರವಾದಿ ಆಗಿದ್ದಾರೆ."

ಮರುದಿನ ಬೆಳಿಗ್ಗೆ ಹಝ್ರತ್ ಪೈಗಂಬರ್(ಸ) ಮತ್ತು ಅವರ ಶಿಷ್ಯರು ಸೈನ್ಯವನ್ನು ಕಳುಹಿಸಿ ಕೊಡಲು ಹೋದರು. ಹಝ್ರತ್ ಪೈಗಂಬರರ ಜೀವಿತ ಕಾಲದಲ್ಲಿ ಬೇರೊಬ್ಬ ಸೇನಾಧಿಪತಿಯ ಅಧೀನಕ್ಕೊಳಪಟ್ಟು ಮುಖ್ಯವಾದೊಂದು ಯುದ್ಧಕ್ಕಾಗಿ ಇಷ್ಟು ದೊಡ್ಡ ಸೈನ್ಯ ಸಾಗಿದುದು ಇದು ಮೊದಲ ಬಾರಿಯಾಗಿತ್ತು. ಹಝ್ರತ್ ಪೈಗಂಬರ್ ಈ ಸೈನ್ಯದೊಂದಿಗೆ ಸಾಗುತ್ತಾ ಉಪದೇಶಿಸುತ್ತಾ ಹೋಗುತ್ತಿದ್ದರು. ಕೊನೆಗೆ ಸೈನ್ಯವು ಮದೀನದ ಹೊರವಲಯದಲ್ಲಿ ಹಝ್ರತ್ ಪೈಗಂಬರ್ ಮದೀನವನ್ನು ಪ್ರಥಮ ಸಾರಿ ಪ್ರವೇಶಿಸಿದ ಸ್ಥಳವನ್ನು ತಲುಪಿತು. ಆ ಸ್ಥಳದಲ್ಲಿ ಮದೀನದವರು ಪ್ರಯಾಣ ಹೊರಟವರನ್ನು ಬೀಳ್ಕೊಡುತ್ತಿದ್ದರು. ಅಲ್ಲಿ ಹಝ್ರತ್ ಪೈಗಂಬರ್(ಸ) ನಿಂತು ಹೇಳಿದರು: "ನಾನು ನಿಮಗೆ ಅಲ್ಲಾಹನಿಗೆ ಭಯಭಕ್ತಿ ತೋರಿಸಬೇಕೆಂಬ ಉಪದೇಶ ನೀಡುತ್ತೇನೆ. ನೀವು ಪರಸ್ಪರ ಉತ್ತಮವಾದ ರೀತಿಯಲ್ಲಿ ವರ್ತಿಸಬೇಕು. ನೀವು ಅಲ್ಲಾಹನ ನಾಮವನ್ನು ಉಚ್ಚರಿಸುತ್ತಾ ಯುದ್ಧಕ್ಕೆ ಹೋಗಿರಿ, ಸಿರಿಯಾದಲ್ಲಿರುವ ನಿಮ್ಮ ಶತ್ರು ಮತ್ತು ಅಲ್ಲಾಹನ ಶತ್ರು ಆಗಿರುವ ಜನರ ವಿರುದ್ಧ ಯುದ್ಧ ಮಾಡಿರಿ. ನೀವು ಸಿರಿಯಾವನ್ನು ತಲುಪಿದಾಗ ಆರಾಧನಾಲಯಗಳಲ್ಲಿ ಕುಳಿತು ದೇವನಾಮವನ್ನು ಸ್ಮರಿಸುವವರನ್ನು ನೀವು ಕಾಣುವಿರಿ. ನೀವು ಅವರೊಂದಿಗೆ ಅನುಚಿತವಾಗಿ ವರ್ತಿಸಬಾರದು. ಅವರಿಗೆ ಕಷ್ಟ ಕೊಡಬಾರದು. ನೀವು ಶತ್ರು ರಾಜ್ಯದಲ್ಲಿ ಯಾವುದೇ ಮಹಿಳೆಯನ್ನು ಕೊಲ್ಲಬಾರದು, ಯಾವುದೇ ಮಗುವನ್ನು ಕೊಲ್ಲಬಾರದು, ಯಾವುದೇ ಅಂಧನನ್ನು ಕೊಲ್ಲಬಾರದು, ಯಾವುದೇ ವೃದ್ಧನನ್ನು ಕೊಲ್ಲಬಾರದು, ಯಾವುದೇ ಮರವನ್ನು ಕಡಿಯಬಾರದು, ಯಾವುದೇ ಕಟ್ಟಡವನ್ನು ಕೆಡವಬಾರದು."

ಹೀಗೆ ಉಪದೇಶಿಸಿದ ನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಮರಳಿದರು. ಸೈನ್ಯವು ಸಿರಿಯಾದ ಕಡೆಗೆ ಸಾಗಿತು. ಇದು ಇಸ್ಲಾಮಿನ ಕಡೆಯಿಂದ ಕ್ರೈಸ್ತರನ್ನು ಎದುರಿಸಲು ಹೊರಟ ಪ್ರಥಮ ಸೈನ್ಯವಾಗಿತ್ತು. ಈ ಸೈನ್ಯ ಸಿರಿಯಾದ ಗಡಿಗೆ ತಲುಪಿದಾಗ ಖೈಸರ್ ಸಹ ಆಚೆ ಕಡೆ ಒಂದು ಲಕ್ಷ ಸೈನ್ಯದೊಂದಿಗೆ ಬಂದಿರುವುದಾಗಿ ತಿಳಿಯಿತು. ಒಂದು ಲಕ್ಷದಷ್ಟು ಕ್ರೈಸ್ತರಾದ ಅರಬಿ ಗೋತ್ರಗಳ ಸೈನಿಕರೂ ಅವರೊಂದಿಗೆ ಇರುವುದಾಗಿ ತಿಳಿಯಿತು. ಆಗ ಮುಸ್ಲಿಮರು ಮಾರ್ಗ ಮಧ್ಯೆ ಶಿಬಿರ ಹೂಡಿ ಹಝ್ರತ್ ಪೈಗಂಬರರಿಗೆ ಸಮಾಚಾರ ತಿಳಿಸಲು ಯೋಚಿಸಿದರು. ಹಝ್ರತ್ ಪೈಗಂಬರ್(ಸ) ಈ ಸಮಾಚಾರವನ್ನು ತಿಳಿದು ಹೆಚ್ಚು ನೆರವನ್ನು ಕಳುಹಿಸುವರು. ಅವರು ಏನಾದರೂ ಆಜ್ಞೆ ನೀಡುವುದಾದರೆ ಅದನ್ನು ತಿಳಿದುಕೊಳ್ಳುವ ಎಂದು ಅವರು ಬಯಸಿದ್ದರು. ಈ ಬಗ್ಗೆ ಸಮಾಲೋಚನೆ ನಡೆಯುತ್ತಾ ಇದ್ದಾಗ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಭಾವಾವೇಶದಿಂದ ಎದ್ದು ನಿಂತು ಹೀಗೆಂದರು: "ಓ ಜನರೇ, ನೀವು ನಿಮ್ಮ ಮನೆಗಳಿಂದ ಅಲ್ಲಾಹನ ಮಾರ್ಗದಲ್ಲಿ ಹುತಾತ್ಮರಾಗಲು ಹೊರಟು ಬಂದಿರುವಿರಿ. ನೀವು ಯಾವುದಕ್ಕಾಗಿ ಹೊರಟು ಬಂದಿರುವಿರೋ ಅದರ ಬಗ್ಗೆ ನೀವು ಈಗ ಗಾಬರಿಗೊಂಡಿರುವಿರಿ.



ನಾವು ಯುದ್ಧ ಮಾಡುತ್ತಾ ಇದ್ದದ್ದು ನಮ್ಮ ಜನಸಂಖ್ಯೆ, ನಮ್ಮ ಶಕ್ತಿ, ನಮ್ಮ ಬಹುಸಂಖ್ಯೆಯ ಕಾರಣದಿಂದಲ್ಲ. ನಮಗಾಗಿ ಅಲ್ಲಾಹನು ಅವತೀರ್ಣಗೊಳಿಸಿದ ಧರ್ಮದ ಸಂರಕ್ಷಣೆಗೋಸ್ಕರ ಮಾತ್ರ ನಾವು ಯುದ್ಧ ಮಾಡುತ್ತಿದ್ದೆವು. ಶತ್ರುಗಳ ಸಂಖ್ಯೆ ಹೆಚ್ಚಾಗಿದ್ದರೆ ಹೆಚ್ಚಾಗಿಯೇ ಇರಲಿ. ನಾವು ಯುದ್ಧ ಮಾಡಿದರೆ ನಮಗೆ ಎರಡು ಒಳಿತುಗಳಲ್ಲಿ ಒಂದು ನಿಶ್ಚಯವಾಗಿಯೂ ದೊರಕುವುದು. ಒಂದೋ ನಾವು ಜಯಶಾಲಿಗಳಾಗುವೆವು ಅಥವಾ ಅಲ್ಲಾಹನ ಮಾರ್ಗದಲ್ಲಿ ಹುತಾತ್ಮರಾಗುವೆವು." ಜನರು ಅವರ ಮಾತನ್ನು ಆಲಿಸಿ ಹೇಳಿದರು: "ಇಬ್ನು ರವಾಹ ಸತ್ಯ ಹೇಳುತ್ತಿದ್ದಾರೆ." ಕೂಡಲೆ ಸೈನ್ಯಕ್ಕೆ ಮುಂದೆ ಸಾಗಲು ಆದೇಶ ಲಭಿಸಿತು.

ಸೈನ್ಯವು ಮುಂದೆ ಸಾಗಿದಾಗ ರೂಮೀ ಸೈನ್ಯ ತಮ್ಮ ಕಡೆಗೆ ಬರುತ್ತಿರುವುದಾಗಿ ಮುಸ್ಲಿಮರು ಕಂಡರು. ಅವರು ಮೂತ ಎಂಬಲ್ಲಿ ಯುದ್ಧಕ್ಕೆ ಸನ್ನದ್ಧರಾಗಿ ನಿಂತರು. ಯುದ್ಧ ಪ್ರಾರಂಭವಾಯಿತು. ಸ್ವಲ್ಪವೇ ಸಮಯದೊಳಗೆ ಮುಸ್ಲಿಮರ ಸೇನಾಧಿಪತಿ ಝೈದ್ ಬಿನ್ ಹಾರಿಸ(ರ) ಕೊಲ್ಲಲ್ಪಟ್ಟರು. ಆಗ ಹಝ್ರತ್ ಪೈಗಂಬರ್‌ರ ಚಿಕ್ಕಪ್ಪನವರ ಮಗ ಜಅಫರ್ ಬಿನ್ ಅಬೀತಾಲಿಬ್(ರ) ಇಸ್ಲಾಮೀ ಸೈನ್ಯದ ಪತಾಕೆಯನ್ನು ಎತ್ತಿ ಹಿಡಿದು ಸೈನ್ಯದ ಸೇನಾಧಿಪತಿಯ ಸ್ಥಾನವನ್ನು ವಹಿಸಿದರು. ಶತ್ರು ಸೈನ್ಯದ ಆಕ್ರಮಣ ಹೆಚ್ಚಾಗುತ್ತಾ ಇದ್ದುದರಿಂದ ಮತ್ತು ಮುಸ್ಲಿಮರ ಸಂಖ್ಯೆ ಕಡಿಮೆಯಾಗಿದ್ದ ಕಾರಣ ಶತ್ರು ಸೈನ್ಯದ ಒತ್ತಡವನ್ನು ಸಹಿಸಲು ಅಸಾಧ್ಯವಾಗುತ್ತಿದ್ದ ಕಾರಣ ಅವರು ಭಾವಾವೇಶದಿಂದ ತನ್ನ ಕುದುರೆಯಿಂದ ಜಿಗಿದು ತನ್ನ ಕುದುರೆಯ ಕಾಲುಗಳನ್ನು ಕಡಿದು ಹಾಕಿದರು. ಅವರ ಈ ವರ್ತನೆಯ ಅರ್ಥವೇನೆಂದರೆ, "ನಾನಂತೂ ಈ ರಣರಂಗದಿಂದ ಓಡಿಹೋಗಲು ಸಿದ್ಧನಾಗಲಾರೆನು. ನಾನು ಮೃತನಾಗಲು ಇಷ್ಟಪಡುತ್ತೇನೆ. ಓಡಿಹೋಗಲು ಇಷ್ಟಪಡಲಾರೆನು."

ಇದೊಂದು ಅರಬಿ ಸಂಪ್ರದಾಯವಾಗಿತ್ತು. ಅರಬಿಗಳು ಕುದುರೆಗಳ ಕಾಲುಗಳನ್ನು ಕಡಿಯುತ್ತಿದ್ದುದು ಸವಾರನಿಲ್ಲದ ಕುದುರೆ ಅಡ್ಡಾದಿಡ್ಡಿಯಾಗಿ ಓಡುತ್ತಾ ಸೈನ್ಯದಲ್ಲಿ ಗಲಿಬಿಲಿ ಉಂಟು ಮಾಡದಿರಲಿ ಎನ್ನುವುದಕ್ಕಾಗಿತ್ತು.

ಸ್ವಲ್ಪ ಸಮಯದೊಳಗೆ ಜಅಫರರ ಬಲಗೈ ಶತ್ರುಗಳಿಂದ ಕಡಿಯಲ್ಪಟ್ಟಿತು. ಆಗ ಅವರು ಎಡಗೈಯಲ್ಲಿ ಪತಾಕೆಯನ್ನು ಎತ್ತಿ ಹಿಡಿದರು. ಅವರ ಎಡಗೈ ಸಹ ಕಡಿಯಲ್ಪಟ್ಟಾಗ ಅವರು ತನ್ನ ಕಡಿದು ಹೋದ ಕೈಗಳ ಉಳಿದ ಭಾಗಗಳಿಂದ ಪತಾಕೆಯನ್ನು ತನ್ನ ಎದೆಗೆ ಒತ್ತಿ ಹಿಡಿದು ನಿಂತುಕೊಂಡರು. ಅನಂತರ ಅವರು ಸಹ ಹುತಾತ್ಮರಾದರು. ಆ ಬಳಿಕ ಅಬ್ದುಲ್ಲಾ ಬಿನ್ ರವಾಹ(ರ) ಹಝ್ರತ್ ಪೈಗಂಬರರ ಆಜ್ಞೆಯಂತೆ ಇಸ್ಲಾಮೀ ಪತಾಕೆ ಎತ್ತಿಹಿಡಿದರು. ಅವರು ಸಹ ಹೋರಾಡುತ್ತಾ ಹುತಾತ್ಮರಾದರು.

ಆಗ ಮುಸ್ಲಿಮರು ಸಮಾಲೋಚಿಸಿ ತಮ್ಮಲ್ಲಿ ಒಬ್ಬನನ್ನು ತಮ್ಮ ಸೇನಾಧಿಪತಿಯಾಗಿ ಆರಿಸಿಕೊಳ್ಳಲು ಸಾಧ್ಯವಿರಲಿಲ್ಲ. ಶತ್ರುಗಳ ಸಂಖ್ಯೆ ಅಧಿಕವಾಗಿದ್ದುದರಿಂದ ಮುಸ್ಲಿಮರು ರಣರಂಗವನ್ನು ಬಿಟ್ಟು ಹೋಗುವುದಕ್ಕೆ

ಸಮೀಪವಾಗಿದ್ದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಖಾಲಿದ್ ಬಿನ್ ವಲೀದ್ ಇಸ್ಲಾಮೀ ಪತಾಕೆಯನ್ನು ತನ್ನೊಬ್ಬ ಸ್ನೇಹಿತನ ಆಗ್ರಹ ಪ್ರಕಾರ ಎತ್ತಿ ಹಿಡಿದು ಇಸ್ಲಾಮೀ ಸೈನ್ಯದ ನೇತಾರರಾಗಿ ಸಾಯಂಕಾಲದ ತನಕ ಶತ್ರುಗಳನ್ನು ಎದುರಿಸುತ್ತಾ ಇದ್ದರು.

ಮರುದಿನ ಬಳಲಿದ ಮತ್ತು ಗಾಯಗೊಂಡ ಮುಸ್ಲಿಮ್ ಸೈನಿಕರನ್ನು, ಶತ್ರುಗಳನ್ನು ಎದುರಿಸಲು ಖಾಲಿದ್[ರ] ಮುನ್ನಡೆಸಿದಾಗ ಅವರು ಚಾತುರ್ಯದ ಒಂದು ಕೆಲಸ ಮಾಡಿದರು. ಅವರು ಮುಂದಿದ್ದ ಸೈನಿಕರನ್ನು ಹಿಂದೆ ನಿಲ್ಲಿಸಿ ಹಿಂದೆ ಇದ್ದವರನ್ನು ಮುಂದೆ ನಿಲ್ಲಿಸಿದರು. ಬಲಭಾಗದಲ್ಲಿದ್ದವರನ್ನು ಎಡಭಾಗಕ್ಕೆ ನಿಲ್ಲಿಸಿ ಎಡಭಾಗದಲ್ಲಿದ್ದವರನ್ನು ಬಲಭಾಗಕ್ಕೆ ನಿಲ್ಲಿಸಿದರು. ಅನಂತರ ಮುಸ್ಲಿಮರಿಂದ ಎಂತಹ ರಣಗರ್ಜನೆ ಮಾಡಿಸಿದರೆಂದರೆ, ಮುಸ್ಲಿಮರಿಗೆ ಹೆಚ್ಚಿನ ನೆರವು ಬಂದಿದೆ ಎಂದು ಭಾವಿಸಿದ ಶತ್ರುಗಳು ಹಿಂದೆ ಸರಿದು ಹೋದರು. ಖಾಲಿದ್[ರ] ಮುಸ್ಲಿಮ್ ಸೈನಿಕರನ್ನು ರಕ್ಷಿಸಿ ಮರಳಿ ಕರೆತಂದರು.[75]

ಅಲ್ಲಾಹನು ಈ ಘಟನೆಯ ಸಮಾಚಾರ ಹಝ್ರತ್ ಪೈಗಂಬರರಿಗೆ ಅದೇ ದಿನ ತನ್ನ ದಿವ್ಯ ಸಂದೇಶವಾಣಿ ಮೂಲಕ ನೀಡಿದನು. ಹಝ್ರತ್ ಪೈಗಂಬರ್[ಸ] ಮುಸ್ಲಿಮರನ್ನು ಮಸ್‌ಜಿದ್‌ನಲ್ಲಿ ಜಮಾಯಿಸಿದರು. ಅವರು ಮಸ್‌ಜಿದ್‌ನ ಪ್ರವಚನ ವೇದಿಕೆಯನ್ನೇರಿದಾಗ ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯುತ್ತಿತ್ತು. ಅವರು ಹೀಗೆಂದರು:

"ಓ ಜನರೇ, ಈ ಯುದ್ಧಕ್ಕೆ ಹೋದವರ ಸಮಾಚಾರವನ್ನು ನಾನು ನೀಡಲು ಬಯಸುತ್ತೇನೆ. ಆ ಸೈನ್ಯ ಇಲ್ಲಿಂದ ಹೋದ ಕೂಡಲೆ ಶತ್ರುಗಳಿಗೆ ಎದುರಾದರು. ಯುದ್ಧ ಪ್ರಾರಂಭವಾದ ಕೂಡಲೇ ಝೈದ್ ಹುತಾತ್ಮರಾದರು. ನೀವು ಝೈದ್‌ಗಾಗಿ ಪ್ರಾರ್ಥಿಸಿರಿ, ಅನಂತರ ಪತಾಕೆಯನ್ನು ಜಅಫರ್ ಹಿಡಿದುಕೊಂಡು ಶತ್ರುಗಳನ್ನು ಆಕ್ರಮಿಸಿದರು. ಅವರು ಸಹ ಹುತಾತ್ಮರಾದರು. ನೀವು ಅವರಿಗೋಸ್ಕರ ಸಹ ಪ್ರಾರ್ಥಿಸಿರಿ. ಅನಂತರ ಅಬ್ದುಲ್ಲಾ ಬಿನ್ ರವಾಹ ಪತಾಕೆ ಹಿಡಿದೆತ್ತಿದರು. ಅವರು ಚೆನ್ನಾಗಿ ಧೈರ್ಯದಿಂದ ಹೋರಾಡಿ ಹುತಾತ್ಮರಾದರು. ನೀವು ಅವರಿಗೋಸ್ಕರ ಸಹ ಪ್ರಾರ್ಥನೆ ಮಾಡಿರಿ. ಅನಂತರ ಖಾಲಿದ್ ಪತಾಕೆ ಎತ್ತಿ ಹಿಡಿದರು. ನಾನು ಅವರನ್ನು ಸೇನಾಧಿಪತಿಯಾಗಿ ನೇಮಿಸಿರಲಿಲ್ಲ. ಅವರು ಸ್ವತಃ ತನ್ನನ್ನು ಸೇನಾಧಿಪತಿಯಾಗಿ ಮಾಡಿಕೊಂಡರು. ಅವರು ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವಾಗಿದ್ದಾರೆ. ಅವರು ಅಲ್ಲಾಹನ ಸಹಾಯದಿಂದ ಇಸ್ಲಾಮೀ ಸೈನ್ಯವನ್ನು ಸುರಕ್ಷಿತವಾಗಿ ಕರೆದುಕೊಂಡು ಬರುತ್ತಿದ್ದಾರೆ. ಹಝ್ರತ್ ಪೈಗಂಬರರ ಈ ಪ್ರವಚನದ ನಂತರ ಖಾಲಿದ್ ಬಿನ್ ವಲೀದರನ್ನು ಸೈಫುಲ್ಲಾಹ್ (ಅಲ್ಲಾಹನ ಖಡ್ಗ) ಎಂದು ಮುಸ್ಲಿಮರು ಕರೆಯಲು ತೊಡಗಿದರು. ಖಾಲಿದ್ ಇಸ್ಲಾಮ್ ಧರ್ಮದ ಆರಂಭ ಕಾಲದಲ್ಲಿ ವಿಶ್ವಾಸಿಯಾಗದೆ ಕೊನೆಗೆ ಮುಸ್ಲಿಮರಾದುದರಿಂದ ಕೆಲವರು ಅವರನ್ನು

75. ಆಸ್ಸೀರತುಲ್ ಹಲ್‌ಬಿಯ್ಯ–ಸಂಪುಟ 3 ಪುಟ 75.



ಪರಿಹಾಸ್ಯ ಮಾಡಲು ಅಥವಾ ಅವರೊಂದಿಗೆ ಜಗಳ ಮಾಡಿದಾಗ ಲೇವಡಿ ಮಾಡಲು ಆ ವಿಷಯವನ್ನು ಪ್ರಸ್ತಾಪಿಸುತ್ತಿದ್ದರು. ಒಂದು ಸಲ ಇದೇ ವಿಷಯದಲ್ಲಿ ಅಬ್ದುರ್ರಹ್ಮಾನ್ ಬಿನ್ ಔಫ್‌ರೊಂದಿಗೆ ಅವರ ಜಗಳವಾಯಿತು. ಅವರು ಹಝ್ರತ್ ಪೈಗಂಬರರಿಗೆ ಖಾಲಿದರ ವಿರುದ್ಧ ದೂರಿತ್ತರು. ಹಝ್ರತ್ ಪೈಗಂಬರ್[ಸ] ಹೇಳಿದರು:

"ಬದ್ರ್ ಯುದ್ಧದ ಕಾಲದಿಂದ ಮೊದಲ್ಗೊಂಡು ಇಸ್ಲಾಮಿಗೆ ಸೇವೆ ಸಲ್ಲಿಸುತ್ತಿರುವ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಏಕೆ ಕಷ್ಟ ಕೊಡುತ್ತಿರುವಿರಿ. ನೀವು ಉಹುದ್ ಬೆಟ್ಟದ ಗಾತ್ರದಷ್ಟು ಬಂಗಾರ ಖರ್ಚು ಮಾಡಿದರೂ ಅವರು ಗಳಿಸಿದಷ್ಟು ಬಹುಮಾನವನ್ನು ಅಲ್ಲಾಹನಿಂದ ಪಡೆಯಲಾರಿರಿ."

ಆಗ ಖಾಲಿದ್ ಹೇಳಿದರು: "ಇವರು ನನ್ನನ್ನು ಹಂಗಿಸುವಾಗ ನಾನು ಸಹ ಅದಕ್ಕುತ್ತರ ನೀಡುತ್ತೇನೆ."

ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: "ನೀವು ಯಾರೂ ಖಾಲಿದರಿಗೆ ಕಷ್ಟ ಕೊಡಬೇಡಿರಿ. ಅವರು ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವಾಗಿದ್ದಾರೆ. ಅದನ್ನು ಅಲ್ಲಾಹನು ಅವಿಶ್ವಾಸಿಗಳ ನಾಶಕ್ಕಾಗಿ ಹಿಡಿದೆತ್ತಿರುವನು."[76]

ಹಝ್ರತ್ ಪೈಗಂಬರ್[ಸ] ನುಡಿದ ಈ ಭವಿಷ್ಯವಾಣಿ ಕೆಲವು ವರ್ಷಗಳ ನಂತರ ಅಕ್ಷರಶಃ ಈಡೇರಿತು. ಖಾಲಿದರು ಮುಸ್ಲಿಮ್ ಸೈನ್ಯವನ್ನು ಮದೀನಕ್ಕೆ ಮರಳಿ ತಂದಾಗ ಮದೀನದಲ್ಲಿದ್ದ ಮುಸ್ಲಿಮರು ಅವರನ್ನು "ಓಡಿ ಬಂದವರು" ಎಂದು ಹೇಳಲು ತೊಡಗಿದ್ದರು. ಅವರು ಉದ್ದೇಶಿಸಿದುದು, "ನೀವು ಹೋರಾಡಿ ಅಲ್ಲಿಯೇ ಸಾಯಬೇಕಾಗಿತ್ತು. ನೀವು ಮರಳಿ ಬರಬಾರದಿತ್ತು" ಎಂದಾಗಿತ್ತು.

ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: "ಅವರು ಓಡಿ ಬಂದವರಲ್ಲ. ಅವರು ಪದೇ ಪದೇ ಶತ್ರುಗಳನ್ನು ಎದುರಿಸಿ ಹೋರಾಡುವ ಸೈನಿಕರಾಗಿದ್ದಾರೆ." ಈ ರೀತಿ ಮುಂದೆ ಸಿರಿಯಾದೊಂದಿಗೆ ನಡೆಯಲಿದ್ದ ಯುದ್ಧಗಳ ಕುರಿತು ಹಝ್ರತ್ ಪೈಗಂಬರ್[ಸ] ಭವಿಷ್ಯ ನುಡಿದಿದ್ದರು.

## ಮಕ್ಕಃ ವಿಜಯ

ಹಿಜರಿ ಸಂವತ್ಸರ 8ರ ರಮಝಾನ್ ತಿಂಗಳಲ್ಲಿ (ಎಂದರೆ ಕ್ರಿಸ್ತ ಶಕ 629ರ ಡಿಸೆಂಬರ್ ತಿಂಗಳಲ್ಲಿ) ಹಝ್ರತ್ ಪೈಗಂಬರ್[ಸ] ಇಸ್ಲಾಮ್ ಧರ್ಮ ಅರಬ್ ದೇಶದಲ್ಲಿ ಸುಸ್ಥಾಪಿತವಾಗುವಂತೆ ಮಾಡಿದ ಅಂತಿಮ ಯುದ್ಧಕ್ಕಾಗಿ ಮಕ್ಕದ ಕಡೆಗೆ ಸಾಗಿದರು. ಅದು ಹೀಗೆ ಸಂಭವಿಸಿತು: ಹುದೈಬಿಯಾ ಸಂಧಿಯ ಕಾಲದಲ್ಲಿ ಹೀಗೆ ತೀರ್ಮಾನವಾಗಿತ್ತು – ಅರಬ್ ಗೋತ್ರಗಳು ತಮಗೆ ಇಷ್ಟವಿರುವ ಪಕ್ಷದೊಂದಿಗೆ

76. ಸೀರತ್ ಹಲ್‌ಬಿಯ್ಯ–ಸಂಪುಟ 3 ಪುಟ 77.

ಮಕ್ಕದವರೊಂದಿಗೆ ಅಥವಾ ಪೈಗಂಬರರೊಂದಿಗೆ – ಸೇರಬಹುದು. ಹತ್ತು ವರ್ಷಗಳ ತನಕ ಪರಸ್ಪರ ಯುದ್ಧ ಮಾಡಬಾರದು. ಒಂದು ಪಕ್ಷ ಇನ್ನೊಂದು ಪಕ್ಷದ ಮೇಲೆ ಆಕ್ರಮಣ ಮಾಡಿದರೆ ಒಪ್ಪಂದ ರದ್ದಾಗುವುದು.

ಈ ಒಪ್ಪಂದದ ಪ್ರಕಾರ ಅರಬ್ ದೇಶದ ಬನೂ ಬಕ್ರ್ ಗೋತ್ರ ಮಕ್ಕದವರೊಂದಿಗೆ ಸೇರಿತ್ತು. ಖುಝಾಅ ಎಂಬ ಗೋತ್ರ ಹಝ್ರತ್ ಪೈಗಂಬರರೊಂದಿಗೆ ಸೇರಿತ್ತು. ಅರಬ್ ದೇಶದ ಅವಿಶ್ವಾಸಿಗಳು ಒಪ್ಪಂದ ಪಾಲನೆ ಕುರಿತು ಬಹಳ ಕಡಿಮೆ ಶ್ರದ್ಧೆ ವಹಿಸುತ್ತಿದ್ದರು. ವಿಶಿಷ್ಟವಾಗಿ ಮುಸ್ಲಿಮರೊಂದಿಗೆ ಮಾಡಿಕೊಂಡ ಒಪ್ಪಂದದ ಬಗ್ಗೆ ಇನ್ನಷ್ಟು ಕಡಿಮೆ ಕಾಳಜಿ ಅವರಿಗಿತ್ತು.

ಬನೂ ಬಕ್ರ್ ಗೋತ್ರದವರಿಗೆ ಬನೂ ಖುಝಾಅ ಗೋತ್ರದವರೊಂದಿಗೆ ಹಳೆಯ ದ್ವೇಷವಿತ್ತು. ಹುದೈಬಿಯಾ ಸಂಧಿಯ ನಂತರ ಅವರು ಮಕ್ಕದವರೊಂದಿಗೆ ಸಮಾಲೋಚನೆ ನಡೆಸಿದರು. ಬನೂ ಖುಝಾಅ ಗೋತ್ರ ಈಗ ಒಪ್ಪಂದದ ಕಾರಣದಿಂದ ಯಾವುದೇ ವಿಪತ್ತನ್ನು ಪ್ರತೀಕ್ಷಿಸದೆ ನಿಶ್ಚಿಂತೆಯಿಂದ ಇದೆ. ಆದುದರಿಂದ ಅವರ ಮೇಲೆ ತಮ್ಮ ಸೇಡು ತೀರಿಸಲು ಈಗ ಸೂಕ್ತ ಸಮಯವಾಗಿದೆ ಎಂದು ಅವರು ಆಲೋಚಿಸಿದರು. ಹಾಗೆ ಮಕ್ಕದ ಖುರೈಶರು ಮತ್ತು ಬನೂ ಬಕ್ರ್ ಗೋತ್ರದವರು ಒಟ್ಟಿಗೆ ಸೇರಿ ಬನೂ ಖುಝಾಅ ಗೋತ್ರವನ್ನು ರಾತ್ರಿ ಹೊತ್ತು ಹಠಾತ್ತಾಗಿ ಆಕ್ರಮಿಸಿ ಅವರ ಅನೇಕ ಜನರನ್ನು ಕೊಂದುಹಾಕಿದರು. ಖುಝಾಅ ಗೋತ್ರದವರಿಗೆ ಖುರೈಶರು ಬನೂ ಬಕ್ರ್ ಗೋತ್ರದವರೊಂದಿಗೆ ಸೇರಿ ತಮ್ಮವರನ್ನು ಆಕ್ರಮಿಸಿದುದಾಗಿ ತಿಳಿದಾಗ ಅವರು ಒಪ್ಪಂದ ಉಲ್ಲಂಘನೆಯನ್ನು ಹಝ್ರತ್ ಪೈಗಂಬರರಿಗೆ[ಸ] ತಿಳಿಸಲು ಶೀಘ್ರವಾಗಿ ಓಡುವ ಒಂಟೆಗಳ ಮೇಲೇರಿಸಿ ನಲ್ವತ್ತು ಜನರನ್ನು ಕೂಡಲೇ ಮದೀನಕ್ಕೆ ಕಳುಹಿಸಿದರು. ಅವರು ಹೀಗೆಂದು ಹೇಳಿ ಕಳುಹಿಸಿದ್ದರು: “ನಾವು ಪರಸ್ಪರ ಮಾಡಿಕೊಂಡ ಒಪ್ಪಂದದ ಪ್ರಕಾರ ನೀವು ನಮ್ಮ ಪರವಾಗಿ ಮಕ್ಕದವರನ್ನು ಆಕ್ರಮಣ ಮಾಡಿ ಪ್ರತೀಕಾರ ಮಾಡಬೇಕಾದುದು ನಿಮಗೆ ಕಡ್ಡಾಯವಾಗಿದೆ.” ಖುಝಾಅ ಗೋತ್ರದ ಈ ನಿಯೋಗವು ಮಕ್ಕವನ್ನು ತಲಪಿದಾಗ ಹಝ್ರತ್ ಪೈಗಂಬರ್[ಸ] ಹೀಗೆ ಹೇಳಿದರು: “ನಿಮ್ಮ ಕಷ್ಟವು ನನ್ನ ಕಷ್ಟವೇ ಆಗಿದೆ. ನಾನು ನಿಮ್ಮೊಂದಿಗೆ ಮಾಡಿದ ಒಪ್ಪಂದವನ್ನು ಪಾಲಿಸಲು ಸಿದ್ಧನಾಗಿದ್ದೇನೆ. (ಆಗ ಮಳೆ ಸುರಿಯುತ್ತಾ ಇತ್ತು) ಈ ಮೋಡದಿಂದ ಮಳೆಯು ಸುರಿಯುತ್ತಿರುವ ಹಾಗೆ ನಿಮ್ಮ ಸಹಾಯಕ್ಕೆ ಇಸ್ಲಾಮೀ ಸೈನ್ಯವು ಬೇಗನೆ ತಲಪುವುದು.”

ಮಕ್ಕದವರಿಗೆ ಈ ನಿಯೋಗದ ಬಗ್ಗೆ ತಿಳಿದಾಗ ಅವರು ಬಹಳ ಗಾಬರಿಗೊಂಡರು. ಅವರು ಅಬೂ ಸುಫ್ಯಾನರನ್ನು ಮುಸ್ಲಿಮರ ಆಕ್ರಮಣವನ್ನು ತಡೆಯಲು ಮದೀನಕ್ಕೆ ಕಳುಹಿಸಿದರು. ಅಬೂ ಸುಫ್ಯಾನ್ ಮದೀನವನ್ನು ತಲಪಿ, ಹುದೈಬಿಯಾ ಸಂಧಿಯ ಕಾಲದಲ್ಲಿ ತಾನು ಉಪಸ್ಥಿತನಿರಲಿಲ್ಲವೆಂದೂ ಆದುದರಿಂದ ಹೊಸ ಸಂಧಿಯನ್ನು ಮಾಡಬೇಕೆಂದೂ ಹಝ್ರತ್ ಪೈಗಂಬರ್‌ರನ್ನು[ಸ] ಒತ್ತಾಯಿಸಿದರು. ಹಝ್ರತ್ ಪೈಗಂಬರ್[ಸ] ಅಬೂ ಸುಫ್ಯಾನರ ಅಪೇಕ್ಷೆಗೆ



ಯಾವ ಉತ್ತರವನ್ನೂ ಕೊಡಲಿಲ್ಲ. ಉತ್ತರ ಕೊಟ್ಟರೆ ರಹಸ್ಯ ಬಹಿರಂಗವಾಗುತ್ತಿತ್ತು. ಅಬೂ ಸುಫ್ಯಾನ್ ನಿರಾಶೆಯಿಂದ ಗಾಬರಿಗೊಂಡು ಮಸ್‌ಜಿದ್‌ನಲ್ಲಿ ಎದ್ದು ನಿಂತು, “ನಾನು ಮಕ್ಕದವರ ಪರವಾಗಿ ನಿಮಗೆ ಹೊಸದಾಗಿ ಶಾಂತಿಯ ಪ್ರಕಟಣೆ ನೀಡುತ್ತೇನೆ” ಎಂದು ಘೋಷಿಸಿದರು. ಈ ಮಾತನ್ನು ಕೇಳಿ ಮುಸ್ಲಿಮರು ಅವರ ಮೌಢ್ಯಕ್ಕಾಗಿ ನಗಲು ತೊಡಗಿದರು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: “ಅಬೂ ಸುಫ್ಯಾನ್, ನೀವು ಈ ವಿಷಯವನ್ನು ಏಕಪಕ್ಷೀಯವಾಗಿ ಪ್ರಕಟಿಸುತ್ತಿರುವಿರಿ. ನಾವು ನಿಮ್ಮೊಂದಿಗೆ ಯಾವುದಾದರೂ ಹೊಸ ಒಪ್ಪಂದ ಮಾಡಿಕೊಂಡಿಲ್ಲ.”

ಹಝ್ರತ್ ಪೈಗಂಬರ್[ಸ] ಮದೀನದ ಸುತ್ತುಮುತ್ತಲಿನ ಇಸ್ಲಾಮ್ ಧರ್ಮಾನುಯಾಯಿಗಳಾದ ಅರಬಿ ಗೋತ್ರಗಳಿಗೆ ಮಕ್ಕಕ್ಕೆ ದಂಡೆತ್ತಿ ಹೋಗಲು ಸಿದ್ಧರಾಗಲು ದೂತರನ್ನು ಕಳುಹಿಸಿದರು. ಅವರೆಲ್ಲರೂ ಸನ್ನದ್ಧರಾಗಿ ಮಕ್ಕಕ್ಕೆ ಹೋಗುವ ಮಾರ್ಗದಲ್ಲಿ ಮದೀನದ ದಂಡಿನೊಂದಿಗೆ ಸೇರಿಕೊಳ್ಳುವರೆಂದು ವರದಿಗಳು ಲಭಿಸಿದಾಗ ಹಝ್ರತ್ ಪೈಗಂಬರ್[ಸ] ಮದೀನದವರಿಗೆ ಶಸ್ತ್ರಸಜ್ಜಿತರಾಗಲು ಆಜ್ಞಾಪಿಸಿದರು. ಕ್ರಿಸ್ತ ಶಕ 630 ಜನವರಿ ದಿನಾಂಕ ಒಂದರಂದು ಈ ದಂಡು ಮದೀನದಿಂದ ಹೊರಟಿತು. ಮಕ್ಕಕ್ಕೆ ಹೋಗುವ ಮಾರ್ಗದಲ್ಲಿ ಸಾಗಿದಾಗ ಮುಸ್ಲಿಮ್ ಗೋತ್ರಗಳ ಸೈನಿಕರು ನಾಲ್ಕು ದಿಕ್ಕುಗಳಿಂದಲೂ ಬಂದು ಸೇರುತ್ತಾ ಇದ್ದರು. ಕೆಲವು ತಂಗುದಾಣಗಳನ್ನು ದಾಟಿ ಈ ಸೈನ್ಯ ಫಾರಾನಿನ ಪರ್ವತ ಶ್ರೇಣಿಯನ್ನು ಪ್ರವೇಶಿಸಿದಾಗ ಹಝ್ರತ್ ಮೂಸಾ ಪ್ರವಾದಿಯ[ಅ] ಭವಿಷ್ಯವಾಣಿಯ ಪ್ರಕಾರ ಅವರ ಸಂಖ್ಯೆ ಹತ್ತು ಸಾವಿರದ ತನಕ ತಲಪಿತ್ತು. ಈ ಸೈನ್ಯ ಮಕ್ಕದ ಕಡೆಗೆ ಸಾಗುತ್ತಿದ್ದಾಗ ಮಕ್ಕದವರು ವಾತಾವರಣದಲ್ಲಿ ಹಬ್ಬಿ ಕೊಂಡಿದ್ದ ನಿಶ್ಶಬ್ದತೆಯಿಂದ ಹೆಚ್ಚು ಹೆಚ್ಚಾಗಿ ಭಯಭೀತರಾಗುತ್ತಾ ಇದ್ದರು. ಕೊನೆಗೆ ಅವರು ಸಮಾಲೋಚನೆ ನಡೆಸಿ ಅಬೂಸುಫ್ಯಾನರನ್ನು ಮಕ್ಕದ ಹೊರ ವಲಯಕ್ಕೆ ಕಳುಹಿಸಿ ಮುಸ್ಲಿಮರು ಉದ್ದೇಶಿಸಿರುವುದಾದರೂ ಏನೆಂದು ತಿಳಿದುಕೊಂಡು ಬರಲು ಆಗ್ರಹಪಡಿಸಿ ಅವರನ್ನು ಅದಕ್ಕೆ ಒಪ್ಪುವಂತೆ ಮಾಡಿದರು. ಮಕ್ಕದಿಂದ ಒಂದು ತಂಗುದಾಣದಷ್ಟು ದೂರವನ್ನು ಅಬೂ ಸುಫ್ಯಾನ್ ದಾಟಿ ಹೋದಾಗ ರಾತ್ರಿ ಹೊತ್ತು ಗುಡ್ಡಗಾಡುಗಳಲ್ಲೆಲ್ಲಾ ಬೆಂಕಿಯ ಪ್ರಕಾಶವನ್ನು ಕಂಡರು. ಪ್ರತಿಯೊಂದು ಡೇರೆಯ ಮುಂದೆ ಬೆಂಕಿಯನ್ನು ಉರಿಸಿಡಬೇಕೆಂದು ಹಝ್ರತ್ ಪೈಗಂಬರ್[ಸ] ಆದೇಶಿಸಿದ್ದರು. ಗುಡ್ಡಗಾಡುಗಳಲ್ಲಿ ಹತ್ತು ಸಾವಿರ ಜನರಿಗೋಸ್ಕರ ನಿರ್ಮಿಸಿದ ಡೇರೆಗಳ ಮುಂದೆ ಉರಿಸಲಾದ ಬೆಂಕಿಯು ರಾತ್ರಿ ಹೊತ್ತು ಭಯಾನಕ ದೃಶ್ಯವನ್ನು ತೋರಿಸುತ್ತಿತ್ತು.

ಅಬೂ ಸುಫ್ಯಾನ್ ತನ್ನ ಜೊತೆಗಾರರೊಂದಿಗೆ, “ಏನು ಆಕಾಶದಿಂದ ಸೈನ್ಯವೇನಾದರೂ ಇಳಿದು ಬಂದಿದೆಯೋ, ಏಕೆಂದರೆ ಅರಬ್ ದೇಶದ ಯಾವುದೇ ಜನಾಂಗದ ಸೈನ್ಯ ಇಷ್ಟು ಬೃಹತ್ತಾಗಿರಲು ಸಾಧ್ಯವಿಲ್ಲ” ಎಂದರು. ಅವರ ಜೊತೆಗಾರರು

ವಿವಿಧ ಗೋತ್ರಗಳ ಹೆಸರನ್ನು ಹೇಳಿದರು. ಆಗ ಅಬೂ ಸುಫ್‌ಯಾನ್ ಹೇಳಿದರು: "ಅರಬ್ ದೇಶದ ಯಾವುದೇ ಗೋತ್ರದ ಸೈನ್ಯವು ಇಷ್ಟು ದೊಡ್ಡದಾಗಿರಲು ಹೇಗೆ ತಾನೆ ಸಾಧ್ಯ?" ಈ ರೀತಿ ಮಾತನಾಡುತ್ತಾ ಇದ್ದಾಗ ಅಂಧಕಾರದಿಂದ ಒಂದು ಶಬ್ದ ಕೇಳಿಸಿತು:

"ಓ ಅಬೂ ಹನ್‌ಝಲ (ಇದು ಅಬೂ ಸುಫ್‌ಯಾನರ ಇನ್ನೊಂದು ಹೆಸರು). ಅಬೂ ಸುಫ್‌ಯಾನ್ ಧ್ವನಿಯನ್ನು ಗುರುತಿಸಿ ಹೇಳಿದರು: "ಅಬ್ಬಾಸ್, ನೀವು ಇಲ್ಲಿಗೆ ಹೇಗೆ ಬಂದಿರಿ?" ಹಝ್‌ರತ್ ಅಬ್ಬಾಸ್ ಹೇಳಿದರು: "ಹಝ್‌ರತ್ ಮುಹಮ್ಮದರ ಸೈನ್ಯ ಇಲ್ಲಿ ಶಿಬಿರ ಹೂಡಿದೆ. ನೀವು ಬೇಗನೆ ಯಾವುದಾದರೂ ಉಪಾಯವನ್ನು ಕೈಗೊಳ್ಳದಿದ್ದರೆ ನಿಮಗೆ ಶಿಕ್ಷೆ ಮತ್ತು ಅಪಮಾನ ಸಿದ್ಧಪಡಿಸಿಡಲಾಗಿದೆ."

ಹಝ್‌ರತ್ ಅಬ್ಬಾಸ್ ಅಬೂ ಸುಫ್‌ಯಾನರ ಹಳೆಯ ಮಿತ್ರರಾಗಿದ್ದುದರಿಂದ ಅವರು ಮೇಲಿನಂತೆ ಮಾತನಾಡಿದ ನಂತರ ಅಬೂ ಸುಫ್‌ಯಾನರನ್ನು ತನ್ನೊಂದಿಗೆ ಬಂದು ಹಝ್‌ರತ್ ಪೈಗಂಬರರನ್ನು ಭೇಟಿಯಾಗಲು ಆಗ್ರಹ ಪಡಿಸಿದರು. ಅವರು ಅಬೂ ಸುಫ್‌ಯಾನರ ಕೈಹಿಡಿದು ತನ್ನೊಂದಿಗೆ ಒಂಟೆಯ ಮೇಲೆ ಕುಳ್ಳಿರಿಸಿದರು. ಒಂಟೆಯನ್ನು ಓಡಿಸುತ್ತಾ ಹಝ್‌ರತ್ ಪೈಗಂಬರರ ಸಮೀಪಕ್ಕೆ ಹೋದರು.

ಹಝ್‌ರತ್ ಅಬ್ಬಾಸರ ಜೊತೆಗೆ ಹಝ್‌ರತ್ ಉಮರ್ ಕಾವಲಿನ ಕೆಲಸಕ್ಕೆ ನೇಮಿಸಲ್ಪಟ್ಟಿದ್ದರು. ಆದುದರಿಂದ ಅಬೂ ಸುಫ್‌ಯಾನರನ್ನು ಹಝ್‌ರತ್ ಉಮರ್ ಕೊಲ್ಲಬಹುದೆಂಬ ಭಯ ಅವರಿಗಿತ್ತು. ಆದರೆ "ಅಬೂ ಸುಫ್‌ಯಾನರನ್ನು ನಿಮ್ಮವರಲ್ಲಿ ಯಾರಾದರೂ ಕಂಡರೆ ಅವರನ್ನು ಕೊಲ್ಲಬಾರದು" ಎಂದು ಹಝ್‌ರತ್ ಪೈಗಂಬರ್(ಸ) ಮೊದಲೇ ಆಜ್ಞಾಪಿಸಿದ್ದರು. ಅಬೂ ಸುಫ್‌ಯಾನರು ಸೇನಾ ಸಮೂಹವನ್ನು ಕಂಡಾಗ ಅವರ ಹೃದಯದಲ್ಲಿ ಮಹತ್ತಾದೊಂದು ಪರಿವರ್ತನೆ ಉಂಟಾಯಿತು. ಅವರು ಹೀಗೆ ಯೋಚಿಸಿದರು: ಕೆಲವೇ ವರ್ಷಗಳ ಮೊದಲು ಮುಹಮ್ಮದರನ್ನು ಒಬ್ಬ ಸಂಗಡಿಗನೊಂದಿಗೆ ಮಕ್ಕವನ್ನು ಬಿಟ್ಟು ಹೋಗಲು ನಿರ್ಬಂಧಿಸಲಾಗಿತ್ತು. ಈಗ ಬರೇ ಏಳು ವರ್ಷಗಳ ನಂತರ ಅವರು "ಹತ್ತು ಸಾವಿರ ಪರಿಶುದ್ಧರೊಂದಿಗೆ" ಯಾವುದೇ ದೌರ್ಜನ್ಯ ಮಾಡದೆ, ಯಾವುದೇ ಅಕ್ರಮ ಮಾಡದೆ ನ್ಯಾಯಬದ್ಧವಾದ ರೀತಿಯಲ್ಲಿ ಮಕ್ಕವನ್ನು ಪ್ರವೇಶಿಸಲು ಆಗಮಿಸಿದ್ದಾರೆ. ಅವರನ್ನು ತಡೆಗಟ್ಟಲು ಮಕ್ಕದವರಿಗೆ ಈಗ ಶಕ್ತಿ ಇಲ್ಲ.

ಈ ಯೋಚನೆಯ ಕಾರಣದಿಂದ ಮತ್ತು ಭಯಭೀತಿಯ ಕಾರಣದಿಂದ ಅಬೂ ಸುಫ್‌ಯಾನ್ ಹಝ್‌ರತ್ ಪೈಗಂಬರರ ಸನ್ನಿಧಾನವನ್ನು ತಲಪಿದಾಗ ತಬ್ಬಿಬ್ಬಾಗಿದ್ದರು. ಹಝ್‌ರತ್ ಪೈಗಂಬರರು ಅಬೂ ಸುಫ್‌ಯಾನರ ಈ ಅವಸ್ಥೆಯನ್ನು ನೋಡಿ ಹಝ್‌ರತ್ ಅಬ್ಬಾಸ್‌ರೊಂದಿಗೆ ಹೇಳಿದರು: "ನೀವು ಇವರನ್ನು ನಿಮ್ಮ ಜೊತೆಗೆ ಕರೆದುಕೊಂಡು ಹೋಗಿರಿ. ರಾತ್ರಿ ನಿಮ್ಮ ಬಳಿ ವಿಶ್ರಾಂತಿ ಪಡೆಯಲಿ. ಬೆಳಗ್ಗೆ ನನ್ನ ಸಮೀಪಕ್ಕೆ ಅವರನ್ನು ಕರೆದುಕೊಂಡು ಬನ್ನಿರಿ."



ರಾತ್ರಿ ಅಬೂ ಸುಫ್‌ಯಾನ್ ಹಝ್‌ರತ್ ಅಬ್ಬಾಸರ ಬಿಡಾರದಲ್ಲಿ ತಂಗಿದರು. ಅವರನ್ನು ಬೆಳಗ್ಗೆ ಹಝ್‌ರತ್ ಅಬ್ಬಾಸ್ ಕರೆದುಕೊಂಡು ಬಂದಾಗ ಫಜರ್ ನಮಾಝಿನ ಸಮಯವಾಗಿತ್ತು. ಬೆಳಗ್ಗೆ ಎದ್ದು ನಮಾಝ್ ಮಾಡುವ ಬಗ್ಗೆ ಮಕ್ಕದವರಿಗೆ ತಿಳಿದಿರಲು ಹೇಗೆ ತಾನೆ ಸಾಧ್ಯ? ಮುಸ್ಲಿಮರು ನೀರು ತುಂಬಿದ ಪಾತ್ರೆಗಳನ್ನು ತೆಗೆದುಕೊಂಡು ಅತ್ತಿತ್ತ ಹೋಗುವುದನ್ನು ಅಬೂ ಸುಫ್‌ಯಾನ್ ಕಂಡರು. ಕೆಲವರು ಪ್ರಾರ್ಥನೆಗೆ ಸಿದ್ಧರಾಗಲು ಶುಚೀಕರಣ ಕ್ರಿಯೆ ನಡೆಸುತ್ತಿದ್ದರು. ಕೆಲವರು ಸಾಲಾಗಿ ನಿಂತುಕೊಳ್ಳುತ್ತಿದ್ದರು. ಅಬೂ ಸೂಫ್‌ಯಾನ್, ಜನರು ಹೀಗೆ ಏಕೆ ಮಾಡುತ್ತಾರೆಂದು ತಿಳಿಯದೆ "ನನ್ನನ್ನು ಶಿಕ್ಷಿಸಲು ಇವರು ಯಾವುದೋ ಸನ್ನಾಹದಲ್ಲಿ ನಿರತರಾಗಿರುವರು" ಎಂದು ಶಂಕಿಸಿದರು. ಅವರು ಹಝ್‌ರತ್ ಅಬ್ಬಾಸ್‌ರೊಂದಿಗೆ ಕೇಳಿದರು: "ಈ ಜನರು ಬೆಳ್ಳಂಬೆಳಗ್ಗೆ ಏನು ಮಾಡುತ್ತಿದ್ದಾರೆ?" ಆಗ ಹಝ್‌ರತ್ ಅಬ್ಬಾಸ್ ಹೇಳಿದರು: "ನೀವು ಭಯಪಡಬೇಕಾಗಿಲ್ಲ. ಈ ಜನರು ನಮಾಝ್ ಮಾಡಲು ಸಿದ್ದರಾಗುತ್ತಿದ್ದಾರೆ."

ಅನಂತರ ಅಬೂ ಸುಫ್‌ಯಾನ್ ಹೀಗೆ ಕಂಡರು: ಸಾವಿರಗಟ್ಟಲೆ ಮುಸ್ಲಿಮರು ಪೈಗಂಬರರ(ಸ) ಹಿಂದೆ ಸಾಲುಗಟ್ಟಿ ನಿಂತಿದ್ದಾರೆ. ಹಝ್‌ರತ್ ಪೈಗಂಬರ್(ಸ) ಬಾಗಿದಾಗ ಬಾಗಿ, ಅವರು ಸಾಷ್ಟಾಂಗ ಪ್ರಣಾಮ ಮಾಡಿದಾಗ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದಾರೆ. ಹಝ್‌ರತ್ ಅಬ್ಬಾಸ್‌ರವರು ಕಾವಲು ಕಾಯಲು ನಿಯುಕ್ತರಾಗಿದ್ದುದರಿಂದ ಅವರು ನಮಾಝ್‌ನಲ್ಲಿ ಸೇರಿರಲಿಲ್ಲ. ಅಬೂ ಸುಫ್‌ಯಾನ್ ಅವರೊಂದಿಗೆ ಕೇಳಿದರು: "ಈ ಜನರು ಏನು ಮಾಡುತ್ತಿದ್ದಾರೆ; ಮುಹಮ್ಮದರು ಮಾಡುವ ಹಾಗೆ ಮಾಡುತ್ತಿದ್ದಾರಲ್ಲ?" ಹಝ್‌ರತ್ ಅಬ್ಬಾಸ್ ಹೇಳಿದರು: "ನೀವು ಯಾವ ಚಿಂತೆಯಲ್ಲಿ ಮುಳುಗಿದ್ದೀರಿ? ಈಗ ಈ ಜನರು ನಮಾಝ್ ಮಾಡುತ್ತಾ ಇದ್ದಾರೆ. ಆದರೆ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಅವರೊಂದಿಗೆ, ಆಹಾರವನ್ನೂ ಪಾನೀಯವನ್ನೂ ಬಿಟ್ಟು ಬಿಡಲು ಆಜ್ಞಾಪಿಸಿದರೆ ಅವರು ಹಾಗೆಯೇ ಮಾಡುವರು."

ಅಬೂ ಸುಫ್‌ಯಾನ್ ಹೇಳಿದರು: "ನಾನು ಕಿಸ್ರಾನ ಆಸ್ಥಾನವನ್ನು ನೋಡಿದ್ದೇನೆ. ಖೈಸರನ ಆಸ್ಥಾನವನ್ನೂ ನೋಡಿದ್ದೇನೆ. ಆದರೆ ಅವರ ಸಮುದಾಯದವರು ಅವರಿಗೆ, ಮುಹಮ್ಮದರ ಅನುಯಾಯಿಗಳು ಮುಹಮ್ಮದರಿಗೆ ಅರ್ಪಿಸುವಂತಹ ವಿಧೇಯತೆಯನ್ನು ಅರ್ಪಿಸುವುದಾಗಿ ನಾನು ಎಂದೂ ಕಾಣಲಿಲ್ಲ."

ಅನಂತರ ಅಬೂ ಸುಫ್‌ಯಾನ್ ಹಝ್‌ರತ್ ಅಬ್ಬಾಸರೊಂದಿಗೆ ಹೇಳಿದರು: "ಮುಹಮ್ಮದರು ತನ್ನ ಊರಿನ ಜನರೊಂದಿಗೆ ಕ್ಷಮೆಯ ಭಾವನೆಯೊಂದಿಗೆ ವರ್ತಿಸಲು ನೀವು ಅಪೇಕ್ಷೆ ಸಲ್ಲಿಸಲು ಸಾಧ್ಯವಿಲ್ಲವೇ?"

ನಮಾಝ್ ಮುಕ್ತಾಯವಾದ ನಂತರ ಹಝ್‌ರತ್ ಅಬ್ಬಾಸ್ ಅಬೂ ಸುಫ್‌ಯಾನರನ್ನು ಹಝ್‌ರತ್ ಪೈಗಂಬರರ ಸಮೀಪಕ್ಕೆ ಕರೆದುಕೊಂಡು ಹೋದರು. ಹಝ್‌ರತ್ ಪೈಗಂಬರ್(ಸ) ಹೇಳಿದರು: "ಓ ಅಬೂ ಸುಫ್‌ಯಾನ್, ಅಲ್ಲಾಹನ

ಹೊರತು ಅನ್ಯ ಆರಾಧ್ಯನು ಯಾರೂ ಇಲ್ಲ ಎಂಬ ವಾಸ್ತವಿಕಾಂಶ ನಿಮಗಿನ್ನು ಸ್ಪಷ್ಟವಾಗಿಲ್ಲವೇ?"

ಅಬೂ ಸುಫ್‌ಯಾನ್ ಹೇಳಿದರು: "ನನ್ನ ತಂದೆ ತಾಯಿ ತಮಗೆ ಬಲಿದಾನವರ್ಪಿಸುವವರಾಗಲಿ. ನೀವು ಅತ್ಯಂತ ತಾಳ್ಮೆಯುಳ್ಳವರೂ ಅತ್ಯಂತ ಸಜ್ಜನಿಕೆಯುಳ್ಳವರೂ ಬಂಧು ಬಾಂಧವರ ಬಗ್ಗೆ ಪ್ರೀತಿ ಹೊಂದಿದವರೂ ಆಗಿರುವಿರಿ. ನಾನು ಈಗ ಎಲ್ಲವನ್ನೂ ಮನವರಿಕೆ ಮಾಡಿರುವೆನು. ಅಲ್ಲಾಹನ ಹೊರತು ಅನ್ಯ ದೇವನಿರುತ್ತಿದ್ದರೆ ನಮಗೆ ಏನಾದರೂ ಸಹಾಯ ಮಾಡುತ್ತಿದ್ದನು."

ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಅಲ್ಲಾಹನ ಸಂದೇಶವಾಹಕನೆಂದು ನೀವು ತಿಳಿದುಕೊಳ್ಳುವ ಕಾಲ ಇನ್ನೂ ಬಂದಿಲ್ಲವೆ?"

ಅಬೂ ಸುಫ್‌ಯಾನ್ ಹೇಳಿದರು: "ಈ ಬಗ್ಗೆ ನನ್ನ ಹೃದಯದಲ್ಲಿ ಕೆಲವು ಸಂಶಯಗಳಿವೆ."

ಅಬೂ ಸುಫ್‌ಯಾನರು ಹಿಂಜರಿದರೂ ಅವರ ಜೊತೆಯಲ್ಲಿ ಮುಸ್ಲಿಮರ ಕುರಿತು ಮಾಹಿತಿ ಸಂಗ್ರಹಿಸಲು ಬಂದ ಇಬ್ಬರು ಮುಸ್ಲಿಮರಾದರು. ಅವರಲ್ಲೊಬ್ಬರು ಹಕೀಮ್ ಇಬ್ನು ಹಝಾಮ್ ಆಗಿದ್ದರು. ಅನಂತರ ಅಬೂ ಸುಫ್‌ಯಾನ್ ಸಹ ಮುಸ್ಲಿಮರಾದರು. ಆದರೆ ಮಕ್ಕಃ ವಿಜಯದ ನಂತರ ಅವರ ಹೃದಯ ಪ್ರಾಯಶಃ ಪೂರ್ಣವಾಗಿ ಸತ್ಯವನ್ನು ಅಂಗೀಕರಿಸಿತು.

ಸತ್ಯ ವಿಶ್ವಾಸವನ್ನು ಸ್ವೀಕರಿಸಿದ ನಂತರ ಹಕೀಮ್ ಬಿನ್ ಹಝಾಮ್ ಹೀಗೆಂದರು: "ಓ ಅಲ್ಲಾಹನ ಪೈಗಂಬರರೇ, ನೀವು ಈ ಸೈನ್ಯವನ್ನು ಕರೆದುಕೊಂಡು ಬಂದುದು ನಿಮ್ಮ ಊರಿನ ಜನರನ್ನು ನಾಶಪಡಿಸಲಿಕ್ಕೆಯೋ?"

ಹಝ್ರತ್ ಪೈಗಂಬರ್(ಸ) ಹೇಳಿದರು: "ಮಕ್ಕದ ಜನರು ದೌರ್ಜನ್ಯ ಮಾಡಿರುವರು; ಅವರು ಪಾಪಗಳನ್ನು ಮಾಡಿರುವರು. ನೀವು ಹುದೈಬಿಯಾ ಸಂಧಿಯನ್ನು ಮುರಿದಿರುವಿರಿ. ಖಝಾಅ ಗೋತ್ರದ ವಿರುದ್ಧ ದೌರ್ಜನ್ಯ ಕರವಾಗಿ ಯುದ್ಧ ಮಾಡಿದಿರಿ. ಅಲ್ಲಾಹನು ಶಾಂತಿಧಾಮವನ್ನಾಗಿ ಮಾಡಿದ ಪವಿತ್ರ ಸ್ಥಳದಲ್ಲಿಯೂ ನೀವು ಯುದ್ಧ ಮಾಡಿದಿರಿ"

ಹಕೀಮ್ ಹೇಳಿದರು: "ನೀವು ಹೇಳಿದುದೆಲ್ಲಾ ಸರಿಯಾಗಿದೆ. ಅವರು ನೀವು ಹೇಳಿದಂತೆಯೇ ಮಾಡಿರುವರು. ಆದರೆ ನೀವು ಮಕ್ಕವನ್ನು ಆಕ್ರಮಿಸಲು ಬರುವುದಕ್ಕೆ ಬದಲಾಗಿ ಹವಾಝಿನ್ ಗೋತ್ರದವರನ್ನು ಆಕ್ರಮಿಸಬೇಕಾಗಿತ್ತು."

ಹಝ್ರತ್ ಪೈಗಂಬರ್(ಸ) ಹೇಳಿದರು: "ಆ ಗೋತ್ರದವರು ಸಹ ದೌರ್ಜನ್ಯಗಾರರಾಗಿದ್ದಾರೆ. ಆದರೆ ಮಕ್ಕದ ಮೇಲೆ ಜಯ, ಇಸ್ಲಾಮಿನ ವಿಜಯ ಮತ್ತು ಹವಾಝಿನ್ ಗೋತ್ರದ ಪರಾಜಯ ನನ್ನ ಕೈಗಳಿಂದಲೇ ಅಲ್ಲಾಹನು ನೆರವೇರಿಸುವನು ಎಂದು ನಾನು ಅಲ್ಲಾಹನ ಮೇಲೆ ಭರವಸೆಯನ್ನು ಹೊಂದಿರುತ್ತೇನೆ."



ಆಗ ಅಬೂ ಸುಫ್‌ಯಾನ್ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ಮಕ್ಕದ ಜನರು ನಿಮ್ಮನ್ನು ಎದುರಿಸಲು ಖಡ್ಗ ಎತ್ತದಿದ್ದರೆ ಅವರು ಸುರಕ್ಷಿತರಾಗುವರೋ?"

ಹಝ್ರತ್ ಪೈಗಂಬರರು(ಸ) ಹೇಳಿದರು: "ಯಾರು ತನ್ನ ಮನೆಬಾಗಿಲು ಮುಚ್ಚಿಕೊಂಡು ಮನೆಯೊಳಗಿರುತ್ತಾರೋ ಅವರಿಗೆ ಅಭಯ ನೀಡಲಾಗುವುದು."

ಹಝ್ರತ್ ಅಬ್ಬಾಸ್ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ಅಬೂ ಸುಫ್‌ಯಾನ್ ಬಹಳ ಆತ್ಮಾಭಿಮಾನಿಯಾಗಿರುವರು. ಅವರಿಗೆ ಗೌರವ ನೀಡುವ ಯಾವುದಾದರೂ ವ್ಯವಸ್ಥೆ ಮಾಡಬೇಕೆಂದು ಅವರ ಇಂಗಿತವಾಗಿದೆ."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಒಳ್ಳೆಯದು, ಯಾರು ಅಬೂ ಸುಫ್‌ಯಾನರ ಮನೆಗೆ ಹೋಗಿ ಆಶ್ರಯ ಪಡೆಯುತ್ತಾರೋ ಅವರಿಗೆ ಸಹ ಅಭಯ ನೀಡಲಾಗುವುದು. ಪವಿತ್ರ ಕಅ್‌ಬದ ಮಸ್‌ಜಿದ್‌ನಲ್ಲಿ ಪ್ರವೇಶಿಸುವವರಿಗೂ ಅಭಯ ನೀಡಲಾಗುವುದು. ತಮ್ಮ ಆಯುಧಗಳನ್ನು ಕೆಳಗಿಡುವವರಿಗೂ ಅಭಯ ನೀಡಲಾಗುವುದು ತಮ್ಮ ಮನೆಬಾಗಿಲು ಮುಚ್ಚಿಕೊಂಡು ಒಳಗಿರುವವರಿಗೂ ಅಭಯ ನೀಡಲಾಗುವುದು. ಹಕೀಮ್ ಬಿನ್ ಹಝಾಮರ ಮನೆಯಲ್ಲಿ ಆಶ್ರಯ ಪಡೆಯುವರಿಗೂ ಅಭಯ ನೀಡಲಾಗುವುದು."

ಅಬೀ ರವೀಹ ಎಂಬವರು ನೀಗ್ರೋ ಗುಲಾಮರಾಗಿದ್ದ ಬಿಲಾಲರ ಸಹೋದರರಾಗಿ ಹಝ್ರತ್ ಪೈಗಂಬರರಿಂದ ಸಾರಲ್ಪಟ್ಟಿದರು. ಅವರನ್ನು ಕರೆದು ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ನಮ್ಮ ಪತಾಕೆಯನ್ನು ಅಬೀ ರವೀಹರಿಗೆ ಕೊಡುತ್ತಿದ್ದೇವೆ. ಯಾರು ಅಬೀ ರವೀಹರ ಪತಾಕೆಯ ಕೆಳಗೆ ನಿಲ್ಲುತ್ತಾರೋ ಅವರಿಗೆ ನಾವು ಹಾನಿ ಮಾಡಲಾರೆವು."

ಅನಂತರ ಬಿಲಾಲರನ್ನು ಕರೆದು ಹಝ್ರತ್ ಪೈಗಂಬರ್(ಸ) ಹೇಳಿದರು: "ಅಬೀರವೀಹರ ಪತಾಕೆಯ ಕೆಳಗೆ ಬಂದು ನಿಲ್ಲುವವರಿಗೆ ಅಭಯ ನೀಡಲಾಗುವುದು ಎಂದು ನೀವು ಅಬೀರವೀಹರ ಮುಂದಿನಿಂದ ಘೋಷಿಸುತ್ತಾ ಮುಂದೆಸಾಗಿರಿ."[77]

ಈ ಆಜ್ಞೆಯಲ್ಲಿ ಎಷ್ಟು ಸೂಕ್ಷ್ಮವಾದ ಜಾಣ್ಮೆ ಇದ್ದಿತೆಂದು ಗಮನಿಸಿರಿ. ಮಕ್ಕದ ಜನರು ಬಿಲಾಲರ ಕಾಲುಗಳಿಗೆ ಹಗ್ಗ ಕಟ್ಟಿ ಅವರನ್ನು ರಸ್ತೆಗಳಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಮಕ್ಕದ ರಸ್ತೆಗಳಾಗಲಿ ಮಕ್ಕದ ಬಯಲುಗಳಾಗಲಿ ಬಿಲಾಲರಿಗೆ ಶಾಂತಿ ಸಮಾಧಾನದ ಸ್ಥಳಗಳಾಗಿರಲಿಲ್ಲ. ಅವು ಅವರಿಗೆ ಹಿಂಸೆ, ಹೀನಾಯಿಸುವಿಕೆ ಮತ್ತು ಪರಿಹಾಸಕ್ಕೊಳಪಡಿಸುವ ಸ್ಥಳಗಳಾಗಿದ್ದವು. ಬಿಲಾಲರ ಹೃದಯ ತಾನು ಅನುಭವಿಸಿದ ಹಿಂಸಾಚಾರಗಳಿಗೆ ಸೇಡು ತೀರಿಸಿಕೊಳ್ಳಲು ಪದೇ ಪದೇ ಬಯಸುತ್ತಿರಬಹುದೆಂದು ಹಝ್ರತ್ ಪೈಗಂಬರ್(ಸ) ಯೋಚಿಸಿದರು. ತನ್ನ ಈ

77. ಸೀರತಹಲ್‌ಬಿಯ್ಯ ಸಂಪುಟ 3 ಪುಟ 91.

ನಿಷ್ಠಾವಂತ ಶಿಷ್ಯನ ಪರವಾಗಿ ಸೇಡು ತೀರಿಸಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ನಮ್ಮ ಸೇಡು ತೀರಿಸುವಿಕೆ ಇಸ್ಲಾಮ್ ಧರ್ಮದ ಭವ್ಯತೆಗೆ ಅನುಸಾರವಾಗಿರಬೇಕಾದುದು ಆವಶ್ಯಕವಾಗಿದೆ ಎಂದು ಅವರು ನಿರ್ಧರಿಸಿದರು.

ಹಝ್ರತ್ ಪೈಗಂಬರ್(ಸ) ಬಿಲಾಲ್ ಪರವಾಗಿ ಪ್ರತೀಕಾರ ಮಾಡಿದುದು ಖಡ್ಗವೆತ್ತಿಕೊಂಡು ಅವರ ಶತ್ರುಗಳ ಕತ್ತುಗಳನ್ನು ಕಡಿದು ಹಾಕುವ ಮೂಲಕವಲ್ಲ. ಅವರು ಬಿಲಾಲರ ಸಹೋದರನ ಕೈಯಲ್ಲಿ ಒಂದು ದೊಡ್ಡ ಪತಾಕೆಯನ್ನು ಕೊಟ್ಟು ನಿಲ್ಲಿಸಿದರು ಮತ್ತು ಬಿಲಾಲರು, "ನನ್ನ ಸಹೋದರನ ಪತಾಕೆಯ ಕೆಳಗೆ ಬಂದು ಯಾರು ನಿಲ್ಲುತ್ತಾರೋ ಅವರಿಗೆ ಅಭಯ ನೀಡಲಾಗುವುದು" ಎಂದು ಘೋಷಿಸುತ್ತಾ ಹೋಗಲು ನಿಯುಕ್ತರಾದರು.

ನೋಡಿರಿ, ಇದೆಷ್ಟು ಭವ್ಯ ಪ್ರತೀಕಾರವಾಗಿದೆ. ಇದೆಷ್ಟು ಸುಂದರ ಪ್ರತೀಕಾರವಾಗಿದೆ. ಬಿಲಾಲರು ಉಚ್ಚ ಧ್ವನಿಯಿಂದ "ಓ ಮಕ್ಕದ ನಿವಾಸಿಗಳೇ, ನೀವು ನನ್ನ ಸಹೋದರನ ಪತಾಕೆಯ ಕೆಳಗೆ ಬಂದು ನಿಲ್ಲಿರಿ; ನಿಮಗೆ ಅಭಯ ನೀಡಲಾಗುವುದು" ಎಂದು ಹೇಳುತ್ತಾ ಹೋಗುವಾಗ ಅವರ ಹೃದಯ ತಾನಾಗಿಯೇ ಪ್ರತೀಕಾರದ ಭಾವನೆಗಳಿಂದ ಬರಿದಾಗುತ್ತಾ ಹೋಗುತ್ತಿರಬಹುದು. "ನನಗಾಗಿ ಹಝ್ರತ್ ಪೈಗಂಬರ್(ಸ) ವ್ಯವಸ್ಥೆ ಮಾಡಿದ ಪ್ರತೀಕಾರಕ್ಕಿಂತ ಭವ್ಯವಾದುದೂ ಸುಂದರವಾದುದೂ ಆಗಿರುವ ಪ್ರತೀಕಾರ ನನಗೋಸ್ಕರ ಬೇರೆ ಯಾವುದೇ ಆಗಲಾರದು" ಎಂದು ಬಿಲಾಲ್(ರ) ಯೋಚಿಸುತ್ತಾ ಇರಬಹುದು.

ಹಝ್ರತ್ ಪೈಗಂಬರರ(ಸ) ಸೈನ್ಯ ಮಕ್ಕದ ಕಡೆಗೆ ಸಾಗಲು ತೊಡಗಿದಾಗ ಹಝ್ರತ್ ಅಬ್ಬಾಸ್‌ರೊಂದಿಗೆ ಹೀಗೆ ಹೇಳಿದರು: "ಮಾರ್ಗದಲ್ಲಿ ಯಾವುದಾದರೂ ಬದಿಯಲ್ಲಿ ನೀವು ಅಬೂ ಸುಫ್‌ಯಾನರನ್ನೂ ಅವರ ಜೊತೆಗಾರರನ್ನೂ ನಿಮ್ಮೊಂದಿಗೆ ನಿಲ್ಲಿಸಿರಿ. ಅವರು ಇಸ್ಲಾಮೀ ಸೈನ್ಯವನ್ನೂ ಅವರ ನಿಷ್ಠೆಯನ್ನೂ ನೋಡಲಿ. ಹಝ್ರತ್ ಅಬ್ಬಾಸ್(ರ) ಹಾಗೆಯೇ ಮಾಡಿದರು. ಅಬೂ ಸುಫ್‌ಯಾನ್ ಮತ್ತು ಅವರ ಜೊತೆಗಾರರ ಎದುರಿನಿಂದ ಒಂದರ ನಂತರ ಇನ್ನೊಂದರಂತೆ ಅರಬಿ ಗೋತ್ರಗಳು ಮುಂದೆ ಸಾಗುತ್ತಿದ್ದವು. ಅವರಿಂದ ಮಕ್ಕದವರು ಸಹಾಯವನ್ನು ಪಡೆಯುವ ಭರವಸೆಯನ್ನು ಹೊಂದಿದ್ದರು. ಆದರೆ ಅವರು ಇಂದು ಅವಿಶ್ವಾಸಿಗಳ ಪತಾಕೆ ಹಾರಿಸುತ್ತಿರಲಿಲ್ಲ. ಅವರು ಇಂದು ಇಸ್ಲಾಮಿನ ಪತಾಕೆ ಹಾರಿಸುತ್ತಾ ಹೋಗುತ್ತಿದ್ದರು. ಅವರ ನಾಲಗೆಯಿಂದ ಸರ್ವಶಕ್ತನಾದ ದೇವನ ಏಕತ್ವದ ಘೋಷಣೆ ಮಾಡಲ್ಪಡುತ್ತಿತ್ತು. ಅವರು ಹಝ್ರತ್ ಪೈಗಂಬರರ(ಸ) ಹತ್ಯೆಮಾಡಲು ಮಕ್ಕದ ಅವಿಶ್ವಾಸಿಗಳು ಪ್ರತೀಕ್ಷಿಸಿದಂತೆ ಮುಂದೆ ಸಾಗುತ್ತಿರಲಿಲ್ಲ. ಅವರು ಹಝ್ರತ್ ಪೈಗಂಬರರಿಗೋಸ್ಕರ ತಮ್ಮ ರಕ್ತದ ಕೊನೆಯ ಹನಿಯನ್ನು ಸಹ ಹರಿಸಲು ಸನ್ನದ್ಧರಾಗಿದ್ದರು. ಅವರ ಅತ್ಯಂತ ದೊಡ್ಡ ಅಭಿಲಾಷೆ ಏಕದೇವನ ಏಕತ್ವವನ್ನು ಮತ್ತು ಪೈಗಂಬರರ ಸಂದೇಶವನ್ನು ಲೋಕದಲ್ಲಿ ಸ್ಥಾಪಿಸುವುದಾಗಿತ್ತು.

ಸೇನಾ ತಂಡಗಳ ನಂತರ ಸೇನಾ ತಂಡಗಳು ದಾಟಿ ಹೋಗುತ್ತಾ ಇದ್ದವು.



ಅಶ್‌ಜಅ್ ಗೋತ್ರದ ಸೇನಾ ತಂಡ ದಾಟಿ ಹೋಗುತ್ತಿರುವಾಗ ಅವರಿಗೆ ಇಸ್ಲಾಮಿನ ಬಗ್ಗೆ ಇದ್ದ ಪ್ರೀತಿ ಮತ್ತು ಇಸ್ಲಾಮಿಗಾಗಿ ಬಲಿದಾನವಾಗುವ ಉತ್ಸಾಹ ಅವರ ಮುಖಗಳಲ್ಲಿ ಪ್ರತಿಬಿಂಬಿಸುತ್ತಿದ್ದವು. ಅವರ ರಣಧ್ವನಿಗಳಲ್ಲಿ ಅದು ಪ್ರಕಟವಾಗುತ್ತಿತ್ತು. ಆಗ ಅಬೂ ಸುಫ್‌ಯಾನ್ ಕೇಳಿದರು: "ಇವರು ಯಾರು?"

ಹಝ್ರತ್ ಅಬ್ಬಾಸ್ ಹೇಳಿದರು: "ಅವರು ಅಶ್‌ಜಅ್ ಗೋತ್ರದವರು."

ಆಗ ಅಬೂ ಸುಫ್‌ಯಾನ್ ಆಶ್ಚರ್ಯಚಕಿತರಾಗಿ ಹಝ್ರತ್ ಅಬ್ಬಾಸ್‌ರ ಮುಖ ನೋಡಿ ಹೇಳಿದರು: "ಅರಬ್ ದೇಶದಲ್ಲಿ ಹಝ್ರತ್ ಪೈಗಂಬರರಿಗೆ ಇವರಿಗಿಂತ ಕಡು ಶತ್ರುಗಳು ಬೇರೆ ಯಾರೂ ಇರಲಿಲ್ಲ."

ಹಝ್ರತ್ ಅಬ್ಬಾಸ್ ಹೇಳಿದರು: "ಇದು ಅಲ್ಲಾಹನ ಅನುಗ್ರಹವಾಗಿದೆ. ಅವನು ಇಚ್ಛಿಸಿದಾಗ ಇಸ್ಲಾಮಿನ ಬಗ್ಗೆ ಪ್ರೀತಿ ಅವರ ಹೃದಯಗಳಲ್ಲಿ ಪ್ರವೇಶಿಸಿತು."

ಎಲ್ಲರಿಗಿಂತಲೂ ಕೊನೆಗೆ ಹಝ್ರತ್ ಪೈಗಂಬರ್(ಸ) ಮುಹಾಜಿರ್‌ಗಳ (ಮಕ್ಕಾದಿಂದ ವಲಸೆ ಹೋದವರು) ಮತ್ತು ಅನ್‌ಸಾರ್‌ಗಳ (ಮದೀನದವರ) ಸೈನ್ಯದೊಂದಿಗೆ ಮುಂದೆ ಸಾಗಿದರು. ಅವರ ಸಂಖ್ಯೆ ಎರಡು ಸಾವಿರದಷ್ಟು ಇತ್ತು. ಅವರು ತಲೆಯಿಂದ ಕಾಲುಗಳ ತನಕ ಶಿರಸ್ತ್ರಾಣ ಮತ್ತು ಯುದ್ಧ ಕವಚಗಳನ್ನು ಧರಿಸಿದ್ದರು. ಹಝ್ರತ್ ಉಮರ್(ರ) ಅವರ ಸಾಲುಗಳನ್ನು ಸರಿಪಡಿಸುತ್ತಾ ಹೋಗುತ್ತಿದ್ದರು. ಅವರು ಹೇಳುತ್ತಿದ್ದರು:

"ನೀವು ಸಾವಧಾನದಿಂದ ಹೆಜ್ಜೆ ಹಾಕಿರಿ. ಸಾಲುಗಳ ಮಧ್ಯೆ ದೂರ ಸರಿಯಾಗಿರಲಿ."

ಇಸ್ಲಾಮಿನ ಈ ನಿಷ್ಠಾವಂತರ ಉತ್ಸಾಹ, ದೃಢ ಸಂಕಲ್ಪ ಮತ್ತು ಧೈರ್ಯ ಸ್ಥೈರ್ಯಗಳು ಅವರ ಮುಖಗಳಲ್ಲಿ ಪ್ರತಿಬಿಂಬಿಸುತ್ತಿದ್ದುವು.

ಅಬೂ ಸುಫ್‌ಯಾನ್ ಅವರನ್ನು ನೋಡಿದಾಗ ಅವರ ಹೃದಯ ಭಯ ವಿಹ್ವಲವಾಯಿತು. ಅವರು ಕೇಳಿದರು: "ಇವರೆಲ್ಲ ಯಾರು?"

ಹಝ್ರತ್ ಅಬ್ಬಾಸ್ ಹೇಳಿದರು: "ಹಝ್ರತ್ ಪೈಗಂಬರ್(ಸ) ಮಕ್ಕದ ವಲಸೆಗಾರರ ಮತ್ತು ಮದೀನದವರಸೈನ್ಯದೊಂದಿಗೆ ಸಾಗುತ್ತಿದ್ದಾರೆ."

ಅಬೂ ಸುಫ್‌ಯಾನ್ ಹೇಳಿದರು: "ಈ ಸೈನ್ಯವನ್ನು ಎದುರಿಸಲು ಲೋಕದಲ್ಲಿ ಯಾರಿಗೆ ಶಕ್ತಿ ಇದೆ?"

ಅನಂತರ ಅಬೂ ಸುಫ್‌ಯಾನ್ ಹಝ್ರತ್ ಅಬ್ಬಾಸ್‌ರೊಂದಿಗೆ ಹೇಳಿದರು:

"ನಿಮ್ಮ ಸಹೋದರ ಪುತ್ರ ಈಗ ಲೋಕದ ಅತ್ಯಂತ ದೊಡ್ಡ ದೊರೆಯಾಗಿರುವರು."

ಹಝ್ರತ್ ಅಬ್ಬಾಸ್(ರ) ಹೇಳಿದರು: "ನಿಮ್ಮ ಹೃದಯದ ಕಣ್ಣುಗಳು ಇನ್ನೂ ತೆರೆದಿಲ್ಲ. ಇದು ದೊರೆತನವಲ್ಲ, ಇದು ಪ್ರವಾದಿತ್ವದ ಮಹಿಮೆಯಾಗಿದೆ."

ಅಬೂ ಸುಫ್‌ಯಾನ್ ಹೇಳಿದರು: "ಹೌದು, ಹೌದು. ಇದು ಪ್ರವಾದಿತ್ವದ ಮಹಿಮೆಯೇ ಆಗಿದೆ."

ಈ ಸೈನ್ಯ ಅಬೂ ಸುಫ್‌ಯಾನ್ ನಿಂತ ಸ್ಥಳವನ್ನು ದಾಟಿ ಹೋಗುವಾಗ ಮದೀನದವರ ಸೈನ್ಯದ ಸೇನಾಧಿಕಾರಿ ಸಅದ್ ಬಿನ್ ಉಬಾದರು ಅಬೂ ಸುಫ್‌ಯಾನರನ್ನು ನೋಡಿ ಹೇಳಿದರು: "ಈ ದಿನ ಖಡ್ಗ ಬಲದಿಂದ ಮಕ್ಕವನ್ನು ಪ್ರವೇಶಿಸಲು ಅಲ್ಲಾಹನು ನಮಗೆ ಧರ್ಮಬದ್ಧವಾಗಿ ಮಾಡಿದ್ದಾನೆ. ಈ ದಿನ ಖುರೈಶರು ಹೀನೈಸಲ್ಪಡುವರು."

ಹಝ್ರತ್ ಪೈಗಂಬರರು(ಸ) ಅಬೂ ಸುಫ್‌ಯಾನರ ಮುಂದಿನಿಂದ ದಾಟಿ ಹೋಗುವಾಗ ಅಬೂ ಸುಫ್‌ಯಾನ್ ಉಚ್ಚ ಸ್ವರದಲ್ಲಿ ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ನೀವು ನಿಮ್ಮ ಊರಿನ ಜನರನ್ನು ಹತ್ಯೆ ಮಾಡಲು ಅನುಮತಿ ನೀಡಿರುವಿರೋ? ಮದೀನದವರ ಸೇನಾಧಿಕಾರಿ ಸಅದ್ ಮತ್ತು ಅವರ ಜೊತೆಗಾರರು ಹೀಗೆ ಹೀಗೆ ಹೇಳುತ್ತಾ ಹೋದರು. ಅವರು ಹೇಳುತ್ತಿದ್ದರು: ಈ ದಿನ ಯುದ್ಧವಾಗುವುದು, ಮಕ್ಕದ ಪಾವಿತ್ರ್ಯವು ನಮ್ಮನ್ನು ಯುದ್ಧದಿಂದ ತಡೆಗಟ್ಟಲಾರದು. ನಾವು ಖುರೈಶರನ್ನು ಹೀನಾಯ ಗೊಳಿಸುವೆವು.

"ಓ ಪೈಗಂಬರರೇ, ನೀವು ಲೋಕದಲ್ಲಿ ಎಲ್ಲರಿಗಿಂತಲೂ ಉತ್ತಮರೂ ಎಲ್ಲರಿಗಿಂತಲೂ ಹೆಚ್ಚು ದಯೆದೋರುವವರೂ ಎಲ್ಲರಿಗಿಂತಲೂ ಹೆಚ್ಚಾಗಿ ಕುಟುಂಬ ಸಂಬಂಧ ಸ್ಥಾಪಿಸುವವರೂ ಆಗಿರುವಿರಿ. ಈ ದಿನ ನೀವು ನಿಮ್ಮ ಊರಿನವರ ದೌರ್ಜನ್ಯವನ್ನು ಮರೆತು ಬಿಡಲಾರಿರೇನು?"

ಅಬೂ ಸುಫ್‌ಯಾನರ ಈ ದೂರು ಮತ್ತು ಬೇಡಿಕೆಗಳನ್ನು ಆಲಿಸಿದ ಮುಹಾಜಿರೀನ್‌ರ (ಅವರನ್ನು ಮಕ್ಕದ ರಸ್ತೆಗಳಲ್ಲಿ ಹೊಡೆಯಲಾಗುತ್ತಿತ್ತು, ಮನೆಗಳಿಂದ ಹೊರಹಾಕಲಾಗುತ್ತಿತ್ತು ಮತ್ತು ಸ್ವತ್ತುಗಳನ್ನು ಕಿತ್ತುಕೊಳ್ಳಲಾಗುತ್ತಿತ್ತು) ಹೃದಯ ತುಂಬಿ ಬಂದಿತು. ಅವರ ಹೃದಯಗಳಲ್ಲಿ ಮಕ್ಕದವರ ಬಗ್ಗೆ ದಯಾಭಾವನೆ ಉಂಟಾಯಿತು. ಅವರು ಹೇಳಿದರು:

"ಓ ಅಲ್ಲಾಹನ ಪೈಗಂಬರರೇ, ಮಕ್ಕದವರು ಮಾಡಿದ ದೌರ್ಜನ್ಯಗಳ ಬಗ್ಗೆ ನಮ್ಮಿಂದ ಮದೀನದವರು ತಿಳಿದುಕೊಂಡಿರುವುದರಿಂದ ಅವರು ಖುರೈಶರೊಂದಿಗೆ ಹೇಗೆ ಪ್ರತಿಕಾರ ಮಾಡುವರೆಂದು ತಿಳಿಯದು."

ಹಝ್ರತ್ ಪೈಗಂಬರ್(ಸ) ಹೇಳಿದರು: "ಸಅದ್ ಹೇಳಿದುದು ತಪ್ಪಾಗಿದೆ. ಇಂದು ದಯೆಯ ದಿನವಾಗಿದೆ. ಇಂದು ಅಲ್ಲಾಹನು ಪವಿತ್ರ ಕಅ್‌ಬಕ್ಕೆ ಮತ್ತು ಖುರೈಶರಿಗೆ ಗೌರವ ನೀಡುವನು."

ಅನಂತರ ಹಝ್ರತ್ ಪೈಗಂಬರ್(ಸ) ಒಬ್ಬರನ್ನು ಸಅದರ ಬಳಿಗೆ ಈ ಸಂದೇಶದೊಂದಿಗೆ ಕಳುಹಿಸಿದರು:



"ನೀವು ನಿಮ್ಮ ನಾಯಕತ್ವದ ಪತಾಕೆಯನ್ನು ನಿಮ್ಮ ಮಗ ಖೈಸ್‌ರಿಗೆ ಕೊಡಿರಿ, ಅವರು ನಿಮ್ಮ ಸ್ಥಾನದಲ್ಲಿ ಮದೀನದವರ ಸೇನಾನಾಯಕರಾಗುವರು."[78]

ಈ ರೀತಿ ಹಝ್ರತ್ ಪೈಗಂಬರ್(ಸ) ಮಕ್ಕದ ನಿವಾಸಿಗಳ ಹೃದಯಕ್ಕೆ ಸಾಂತ್ವನ ನೀಡಿದರು ಮತ್ತು ಮದೀನದವರ ಹೃದಯಕ್ಕೆ ದುಃಖ ಉಂಟಾಗದಂತೆ ರಕ್ಷಿಸಿದರು. ಹಝ್ರತ್ ಪೈಗಂಬರರಿಗೆ ಖೈಸ್ ಬಗ್ಗೆ ಪೂರ್ಣ ನಂಬಿಕೆ ಇತ್ತು. ಅವರು ಅತ್ಯಂತ ಉತ್ತಮ ಸ್ವಭಾವದ ತರುಣರಾಗಿದ್ದರು. ಅವರು ಎಂತಹ ಸಜ್ಜನರಾಗಿದ್ದರೆಂದರೆ ಚರಿತ್ರೆಯಲ್ಲಿ ಹೀಗೆ ಬರೆಯಲಾಗಿದೆ: ಅವರು ಅವರ ಮರಣ ಪೂರ್ವ ಅಸ್ವಸ್ಥರಾಗಿದ್ದಾಗ ಕೆಲವರು ಅವರನ್ನು ಸಂದರ್ಶಿಸಲು ಬಂದರು, ಕೆಲವರು ಬರಲಿಲ್ಲ. ಅವರು ತನ್ನ ಸ್ನೇಹಿತರೊಂದಿಗೆ ವಿಚಾರಿಸಿದರು: "ನನ್ನ ಪರಿಚಯ ಇರುವ ಕೆಲವರು ನನ್ನನ್ನು ಸಂದರ್ಶಿಸಲು ಏಕೆ ಬಂದಿಲ್ಲ?" ಹೀಗೆ ಕೇಳಿದಾಗ ಅವರ ಸ್ನೇಹಿತರು ಹೇಳಿದರು:

"ನೀವು ಬಹಳ ಉದಾರಿಗಳಾಗಿರುವಿರಿ. ನೀವು ಪ್ರತಿಯೊಬ್ಬರಿಗೆ ಅವರ ಕಷ್ಟ ಕಾಲದಲ್ಲಿ ಸಾಲವಾಗಿ ಹಣ ಕೊಡುತ್ತೀರಿ. ನಗರದ ಅನೇಕ ಜನರು ನಿಮ್ಮ ಸಾಲಗಾರರಾಗಿದ್ದಾರೆ. ಪ್ರಾಯಶಃ ನಿಮಗೆ ಅವಶ್ಯಕತೆ ಇರುವ ಕಾರಣ ನೀವು ಹಣವನ್ನು ಕೇಳಬಹುದೆಂದು ಶಂಕಿಸಿ ಅವರು ಸಂದರ್ಶನ ಮಾಡಲು ಬರಲಿಲ್ಲ."

ಆಗ ಖೈಸ್ ಹೇಳಿದರು: "ಓಹೋ, ನನ್ನ ಸ್ನೇಹಿತರಿಗೆ ನಿಷ್ಕಾರಣವಾಗಿ ತೊಂದರೆ ಆಗಿದೆ. 'ಖೈಸ್‌ರಿಗೆ ಕೊಡಬೇಕಾದ ಸಾಲದ ಹಣವನ್ನು ಕ್ಷಮಿಸಲಾಗಿದೆ' ಎಂದು ನನ್ನ ಪರವಾಗಿ ನಗರದಲ್ಲಿ ಡಂಗುರ ಸಾರಿರಿ." ಅನಂತರ ಖೈಸ್‌ರನ್ನು ಸಂದರ್ಶಿಸಲು ಬಂದ ಜನಸಂದಣಿಯಿಂದ ಅವರ ಮಾಳಿಗೆಯ ಏಣಿ ಮುರಿದು ಹೋಯಿತು.

ಸೈನ್ಯವೆಲ್ಲಾ ದಾಟಿ ಹೋದ ನಂತರ ಹಝ್ರತ್ ಅಬ್ಬಾಸ್ ಅಬೂ ಸುಫ್‌ಯಾನರೊಂದಿಗೆ ಹೇಳಿದರು:

"ಈಗ ನೀವು ನಿಮ್ಮ ಸವಾರಿ ಮೃಗವನ್ನು ಓಡಿಸಿ ಮಕ್ಕವನ್ನು ಶೀಘ್ರವಾಗಿ ತಲುಪಿ, ಹಝ್ರತ್ ಪೈಗಂಬರರ ಆಗಮನದ ಕುರಿತು ಮಕ್ಕದ ನಿವಾಸಿಗಳಿಗೆ ತಿಳಿಸಿರಿ ಮತ್ತು ಅವರು ಮಕ್ಕದವರಿಗೆ ಅಭಯ ನೀಡಲು ವಿಧಿಸಿದ ಶರ್ತಗಳನ್ನು ವಿವರಿಸಿರಿ."

ಅಬೂ ಸುಫ್‌ಯಾನ್ ಮಕ್ಕಕ್ಕೆ ಹೋಗಿ ಈ ವಿಷಯವನ್ನು ಪ್ರಕಟಿಸಿದಾಗ ಅವರು ಹೃದಯದಲ್ಲಿ ತಾನು ಮಕ್ಕದ ನಿವಾಸಿಗಳ ಸಂರಕ್ಷಣೆಗೆ ಒಂದು ಮಾರ್ಗವನ್ನು ಕಂಡುಕೊಂಡಿದ್ದೇನೆ ಎಂದು ಸಂತೋಷ ಭರಿತರಾಗಿದ್ದರೂ ಅವರ ಪತ್ನಿ ಹಿಂದಳಿಗೆ ಅದು ಇಷ್ಟವಾಗಲಿಲ್ಲ, ಆಕೆ ಇಸ್ಲಾಮಿನ ಆರಂಭ ಕಾಲದಿಂದಲೇ ಜನರಿಗೆ ಇಸ್ಲಾಮಿನ

---

78. ಸೀರತ್ ಹಲ್‌ಬಿಯ್ಯ ಸಂಪುಟ 3 ಪುಟ 93.

ವಿರುದ್ಧ ದ್ವೇಷಾಸೂಯೆಗಳ ಉಪದೇಶನೀಡುತ್ತಾ ಇದ್ದರೂ ಆಕೆ ಒಬ್ಬ ಶೌರ್ಯವಂತೆ ಮಹಿಳೆಯಾಗಿದ್ದಳು. ಅವಳು ತನ್ನ ಪತಿಯ ಗಡ್ಡವನ್ನು ಹಿಡಿದು ಮಕ್ಕದ ಜನರನ್ನು ಕೂಗಿ ಕರೆದು ಹೀಗೆಂದಳು:

"ನೀವೆಲ್ಲರೂ ಬಂದು ಈ ಮಹಾ ಮೂಢನನ್ನು ಕೊಂದು ಹಾಕಿರಿ. ನೀವು ನಿಮ್ಮ ನಗರದ ಗೌರವವನ್ನು ಕಾಪಾಡಲು ಹೋರಾಡುತ್ತಾ ಜೀವತ್ಯಾಗ ಮಾಡಿರಿ ಎಂದು ಉಪದೇಶಿಸುವುದಕ್ಕೆ ಪ್ರತಿಯಾಗಿ ಇವನು ನಿಮಗೆ ಅಭಯದ ಘೋಷಣೆ ಮಾಡುತ್ತಾ ಇದ್ದಾನೆ."

ಅಬೂ ಸುಫ್‌ಯಾನ್ ಅವಳ ಈ ವರ್ತನೆಯನ್ನು ನೋಡಿ ಹೇಳಿದರು:

"ಮೂರ್ಖ ಹೆಣ್ಣೇ, ಈಗ ಇಂತಹ ಮಾತಿಗೆ ಸಮಯವಿಲ್ಲ, ನೀನು ಹೋಗಿ ನಿನ್ನ ಮನೆಯಲ್ಲಿ ಅವಿತುಕೊಳ್ಳು. ನಾನು ಯಾವ ಸೈನ್ಯವನ್ನು ನೋಡಿ ಬಂದಿರುವೆನೋ ಅದನ್ನು ಎದುರಿಸುವ ಶಕ್ತಿ ಈ ಅರಬ್ ದೇಶದಲ್ಲಿ ಯಾರಿಗೂ ಇಲ್ಲ."

ಅನಂತರ ಅಬೂ ಸುಫ್‌ಯಾನ್ ಅಭಯದ ಶರ್ತಗಳನ್ನು ವಿವರಿಸಲು ತೊಡಗಿದರು: ಯಾವ ಮನೆಗಳ ಮತ್ತು ಸ್ಥಳಗಳ ಕುರಿತು ಅಭಯದ ವಾಗ್ದಾನ ನೀಡಲಾಗಿತ್ತೋ ಅಲ್ಲಿಗೆ ಜನರು ಓಡಿಹೋಗಲು ತೊಡಗಿದರು.

ಹನ್ನೊಂದು ಪುರುಷರು ಮತ್ತು ನಾಲ್ಕು ಮಹಿಳೆಯರ ವಿರುದ್ಧ ಕಠಿಣ ಹಿಂಸಾಚಾರ, ಹತ್ಯೆ ಮತ್ತು ಕ್ರೂರಕೃತ್ಯಗಳ ಅಪರಾಧ ಸಾಬೀತಾಗಿತ್ತು. ಅವರು ಯುದ್ಧಾಪರಾಧಿಗಳಾಗಿದ್ದರು. ಅವರನ್ನು ಕೊಲ್ಲಲು ಹಝ್ರತ್ ಪೈಗಂಬರ್(ಸ) ಅನುಮತಿ ನೀಡಿದ್ದರು. ಅವರು ಯುದ್ಧಾಪರಾಧಿಗಳ ಶ್ರೇಣಿಗೆ ಸೇರಿದ್ದುದರಿಂದ ಹಾಗೆ ಆಜ್ಞೆ ನೀಡಲಾಗಿತ್ತು.

ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಖಾಲಿದ್ ಬಿನ್ ವಲೀದರಿಗೆ(ರ) ಆಗ್ರಹ ಪೂರ್ವಕವಾಗಿ ಹೀಗೆ ಆಜ್ಞಾಪಿಸಿದ್ದರು: "ನಿಮ್ಮ ವಿರುದ್ಧ ಯಾರಾದರೂ ಹೋರಾಟ ಪ್ರಾರಂಭಿಸುವ ಮೊದಲು ನೀವು ಆಕ್ರಮಿಸಬಾರದು." ಆದರೆ ನಗರದ ಯಾವ ದಿಕ್ಕಿನಿಂದ ಖಾಲಿದ್ ಪ್ರವೇಶಿಸಿದರೋ ಅಲ್ಲಿಗೆ ಹಝ್ರತ್ ಪೈಗಂಬರರ ಅಭಯದಾನದ ವಾರ್ತೆ ತಲಪಿರಲಿಲ್ಲ. ಆ ಭಾಗದಲ್ಲಿದ್ದ ಅವಿಶ್ವಾಸಿಗಳ ಸೈನ್ಯ ಖಾಲಿದರನ್ನು ಎದುರಿಸಿತು. ಮತ್ತು 24 ಮಂದಿ ಕೊಲ್ಲಲ್ಪಟ್ಟರು. ಖಾಲಿದ್ ಬಹಳ ಆವೇಶಭರಿತ ವ್ಯಕ್ತಿಯಾಗಿದ್ದುದರಿಂದ ಯಾರೋ ಹೋಗಿ ಹಝ್ರತ್ ಪೈಗಂಬರ್‌ರಿಗೆ ಈ ಸಮಾಚಾರ ತಲಪಿಸಿ, "ಖಾಲಿದರನ್ನು ತಡೆಯಿರಿ, ಇಲ್ಲದಿದ್ದರೆ ಅವರು ಮಕ್ಕದವರನ್ನೆಲ್ಲಾ ಕೊಲ್ಲುವರು" ಎಂದು ಅರಿಕೆ ಮಾಡಿದರು.

ಹಝ್ರತ್ ಪೈಗಂಬರ್(ಸ) ಕೂಡಲೆ ಖಾಲಿದರನ್ನು ಕರೆಯಿಸಿ ಹೇಳಿದರು: "ನಾನು ನಿಮ್ಮನ್ನು ಯುದ್ಧ ಮಾಡುವುದರಿಂದ ತಡೆದಿರಲಿಲ್ಲವೇ?"

ಖಾಲಿದ್ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನೀವು ನಮ್ಮನ್ನು ಯುದ್ಧ ಮಾಡುವುದರಿಂದ ತಡೆದಿರುವಿರಿ. ಆದರೆ ಅವರು ಮೊದಲು ನಮ್ಮನ್ನು



ಆಕ್ರಮಿಸಲು ತೊಡಗಿದರು ಮತ್ತು ನಮ್ಮ ಮೇಲೆ ಬಾಣಗಳನ್ನು ಪ್ರಯೋಗಿಸಿದರು. ನಾನು ಸ್ವಲ್ಪ ಹೊತ್ತು ನಿಂತೆನು. ನಾನು ಹೇಳಿದನು: 'ನಾವು ನಿಮ್ಮ ಮೇಲೆ ಆಕ್ರಮಣ ಮಾಡಲು ಬಯಸುವುದಿಲ್ಲ. ನೀವು ನಮ್ಮನ್ನು ಆಕ್ರಮಿಸಬೇಡಿರಿ.' ಅವರು ತಮ್ಮ ಆಕ್ರಮಣಗಳಿಂದ ಹಿಂದೆ ಸರಿಯುವುದಿಲ್ಲ ಎಂದು ನೋಡಿದಾಗ ನಾನು ಅವರೊಂದಿಗೆ ಹೋರಾಡಿದೆನು ಮತ್ತು ಅಲ್ಲಾಹನು ಅವರನ್ನು ನಾಲ್ದೆಸೆಗಳಲ್ಲೂ ಚದುರಿ ಹೋಗುವಂತೆ ಮಾಡಿದನು."

ಒಟ್ಟಾರೆ ಹೇಳುವುದಾದರೆ, ಈ ಒಂದು ಚಿಕ್ಕ ಘಟನೆಯ ಹೊರತು ಬೇರೆ ಯಾವ ಅನಿಷ್ಟ ಸಂಭವವೂ ಉಂಟಾಗಲಿಲ್ಲ. ಮಕ್ಕನಗರವು ಹಝ್ರತ್ ಪೈಗಂಬರರ ಸ್ವಾಧೀನಕ್ಕೆ ಬಂತು.

ಹಝ್ರತ್ ಪೈಗಂಬರ್(ಸ) ಮಕ್ಕವನ್ನು ಪ್ರವೇಶಿಸಿದಾಗ ಅವರೊಂದಿಗೆ ಜನರು ವಿಚಾರಿಸಿದರು: "ಓ ಪೈಗಂಬರರೇ ನೀವು ನಿಮ್ಮ ಸ್ವಂತ ಮನೆಯಲ್ಲಿ ತಂಗುವಿರೋ?"

ಆಗ ಅವರು ಹೇಳಿದರು: "ಅಖೀಲ್ (ಪೈಗಂಬರರ ಚಿಕ್ಕಪ್ಪನ ಮಗ) ನನಗೋಸ್ಕರ ಯಾವುದಾದರೂ ಮನೆಯನ್ನು ಉಳಿಸಿ ಇಟ್ಟಿರುವನೋ?"

ಅಂದರೆ, "ನಾನು ಮದೀನಕ್ಕೆ ವಲಸೆ ಹೋದಾಗ ನನ್ನ ಸಂಬಂಧಿಕರು ನನ್ನ ಎಲ್ಲಾ ಸ್ವತ್ತುಗಳನ್ನು ವಿಕ್ರಯಿಸಿ ತಿಂದು ಹಾಕಿರುವರು. ನನಗೆ ಮಕ್ಕದಲ್ಲಿ ಈಗ ಯಾವುದೇ ವಾಸದ ಸ್ಥಳವಿಲ್ಲ."

ಮತ್ತೆ ಅವರು ಹೇಳಿದರು: "ನಾವು ಖೈಫ್ ಬನೀ ಕನಾನದಲ್ಲಿ ತಂಗುವೆವು." ಅದು ಮಕ್ಕ ನಗರದ ಒಂದು ಮೈದಾನವಾಗಿತ್ತು. ಅಲ್ಲಿ ಖುರೈಶ್ ಮತ್ತು ಕನಾನ ಗೋತ್ರದವರು ಒಟ್ಟಿಗೆ ಸೇರಿ ಹೀಗೆಂದು ಪ್ರಮಾಣ ಮಾಡಿದ್ದರು:

"ಬನೂ ಹಾಶಿಮ್ ಮತ್ತು ಬನೂ ಅಬ್ದುಲ್ ಮುತ್ತಲಿಬ್ ಕುಟುಂಬದವರು ಮುಹಮ್ಮದರನ್ನು ಹಿಡಿದು ನಮ್ಮ ಸ್ವಾಧೀನಕ್ಕೆ ನೀಡುವ ತನಕ ಮತ್ತು ಅವರಿಗೆ ಸಹಾಯ ಮಾಡುವುದನ್ನು ಬಿಟ್ಟುಬಿಡುವ ತನಕ ನಾವು ಅವರೊಂದಿಗೆ ವಿವಾಹ ಸಂಬಂಧವನ್ನಾಗಲಿ ಕೊಡು ಕೊಳ್ಳುವ ಸಂಬಂಧವನ್ನಾಗಲಿ ಮಾಡಿಕೊಳ್ಳಲಾರೆವು."

ಅವಿಶ್ವಾಸಿಗಳು ಈ ರೀತಿ ಪ್ರಮಾಣ ಮಾಡಿದ ನಂತರ ಹಝ್ರತ್ ಪೈಗಂಬರ್(ಸ), ಅವರ ಚಿಕ್ಕಪ್ಪ ಅಬೂತಾಲಿಬ್ ಮತ್ತು ಅವರ ಎಲ್ಲಾ ಅನುಯಾಯಿಗಳು 'ಅಬೂತಾಲಿಬರ ಕಣಿವೆ' ಎಂಬಲ್ಲಿ ಆಶ್ರಯ ಪಡೆದಿದ್ದರು. ಮೂರು ವರ್ಷಗಳ ಕಾಲ ಬಂಧನಾವಸ್ಥೆಯಲ್ಲಿ ತೀವ್ರ ಕಷ್ಟಗಳಿಗೆ ಗುರಿಯಾಗಿದ್ದು, ಅನಂತರ ಅವರಿಗೆ ಅಲ್ಲಾಹನು ಮುಕ್ತಿಯನ್ನು ನೀಡಿದ್ದನು.

ಹಝ್ರತ್ ಪೈಗಂಬರ್(ಸ) ತನ್ನ ವಾಸಕ್ಕೆ ಅವಿಶ್ವಾಸಿಗಳು ಪ್ರತಿಜ್ಞೆ ಮಾಡಿದ ಸ್ಥಳವನ್ನು ಆಯ್ಕೆ ಮಾಡಿದುದು ಎಷ್ಟು ಅರ್ಥಗರ್ಭಿತವಾಗಿದೆ. ಮುಹಮ್ಮದರನ್ನು ನಮ್ಮ ಸ್ವಾಧೀನಕ್ಕೆ ನೀಡುವ ತನಕ ನಾವು ಅವರ ಗೋತ್ರದವರೊಂದಿಗೆ ಶಾಂತಿ ಸಂಧಿ ಮಾಡಿಕೊಳ್ಳಲಾರೆವು ಎಂದು ಇದೇ ಸ್ಥಳದಲ್ಲಿ ಮಕ್ಕದವರು ಪ್ರತಿಜ್ಞೆ ಮಾಡಿದ್ದರು.

ಇಂದು ಹಝ್ರತ್ ಪೈಗಂಬರ್[ಸ] ಅದೇ ಮೈದಾನಕ್ಕೆ ಬಂದಿಳಿದರು. ಅವರು ಮಕ್ಕದವರೊಂದಿಗೆ ಹೀಗೆ ಹೇಳಬಯಸುತ್ತಿರುವಂತಿತ್ತು: ನಾನು ಎಲ್ಲಿಗೆ ಬರಬೇಕೆಂದು ನೀವು ಬಯಸುತ್ತಿದ್ದಿರೋ ನಾನು ಅಲ್ಲಿಗೆ ಬಂದಿರುವೆನು. ನನ್ನನ್ನು ನಿಮ್ಮ ದೌರ್ಜನ್ಯಗಳಿಗೆ ಗುರಿ ಮಾಡಲು ಈಗ ನಿಮಗೆ ಶಕ್ತಿ ಇದೆಯೋ? ಯಾವ ಸ್ಥಳದಲ್ಲಿ ನೀವು ನನ್ನನ್ನು ಅಪಮಾನಿತನನ್ನಾಗಿಯೂ ಶಪಿಸಲ್ಪಟ್ಟವನನ್ನಾಗಿಯೂ ಕಾಣಬೇಕೆಂದು ಬಯಸುತ್ತಿದ್ದಿರೋ ಮತ್ತು ನನ್ನ ಗೋತ್ರದವರು ನನ್ನನ್ನು ಹಿಡಿದು ನಿಮ್ಮ ವಶಕ್ಕೆ ಯಾವ ಸ್ಥಳದಲ್ಲಿ ನೀಡಬೇಕೆಂದು ಇಚ್ಛಿಸುತ್ತಿದ್ದಿರೋ ಆ ಸ್ಥಳಕ್ಕೆ ನಾನು ಬಂದಿರುವೆನು. ಈಗ ನನ್ನ ಗೋತ್ರ ಮಾತ್ರವಲ್ಲ, ಸಂಪೂರ್ಣ ಅರಬ್ ದೇಶ ನನ್ನ ಜೊತೆಗಿದೆ. ನನ್ನ ಗೋತ್ರ ನನ್ನನ್ನು ನಿಮ್ಮ ವಶಕ್ಕೆ ನೀಡಿಲ್ಲ. ನನ್ನ ಗೋತ್ರ ನಿಮ್ಮನ್ನು ನನ್ನ ಸ್ವಾಧೀನಕ್ಕೆ ನೀಡಿದೆ.

ಅಲ್ಲಾಹನ ವಿಧಿಯ ಪ್ರಕಾರ ಆ ದಿನ ಸೋಮವಾರದ ದಿನವಾಗಿತ್ತು. ಹಝ್ರತ್ ಪೈಗಂಬರ್[ಸ] ಸೌರ್ ಗುಹೆಯಿಂದ ಹಝ್ರತ್ ಅಬೂಬಕರೊಂದಿಗೆ[ರ] ಮದೀನಕ್ಕೆ ವಲಸೆಹೋದ ದಿನವೂ ಸೋಮವಾರವಾಗಿತ್ತು. ಅವರು ಆ ದಿನ ಸೌರ್ ಪರ್ವತದಿಂದ ಮಕ್ಕವನ್ನು ಅಭಿಮುಖೀಕರಿಸಿ ದು:ಖದಿಂದ ಹೇಳಿದ್ದರು: "ಓ ಮಕ್ಕ, ನೀನು ನನಗೆ ಲೋಕದ ಎಲ್ಲಾ ನಗರಗಳಿಗಿಂತ ಹೆಚ್ಚು ಪ್ರಿಯಕರವಾಗಿರುವೆ. ಆದರೆ ನಿನ್ನ ನಿವಾಸಿಗಳು ನನ್ನನ್ನು ಇಲ್ಲಿ ಇರಲು ಬಿಡುವುದಿಲ್ಲ."

ಮಕ್ಕದೊಳಗೆ ಪ್ರವೇಶಿಸುವಾಗ ಹಝ್ರತ್ ಅಬೂಬಕರ್[ರ] ಹಝ್ರತ್ ಪೈಗಂಬರರ[ಸ] ಒಂಟೆಯ ಕಡಿವಾಣವನ್ನು ಹಿಡಿದಿದ್ದರು. ಅವರು ಹಝ್ರತ್ ಪೈಗಂಬರರೊಂದಿಗೆ ಮಾತನಾಡುತ್ತಿದ್ದರು ಮತ್ತು ಮಕ್ಕದ ವಿಜಯವನ್ನು ಮುಂಚಿತವಾಗಿ ತಿಳಿಸಿದ ಪವಿತ್ರ ಖುರ್‌ಆನಿನ ಸೂರತುಲ್‌ಫತ್‌ಹ್ ಪಠಿಸುತ್ತಲೂ ಇದ್ದರು.

ಹಝ್ರತ್ ಪೈಗಂಬರ್[ಸ] ನೇರವಾಗಿ ಪವಿತ್ರ ಕಅ್‌ಬದ ಹತ್ತಿರಹೋಗಿ ಒಂಟೆಯ ಮೇಲೆ ಕುಳಿತಿರುವ ಸ್ಥಿತಿಯಲ್ಲಿಯೇ ಏಳು ಬಾರಿ ಪವಿತ್ರ ಕಅ್‌ಬದ ಪ್ರದಕ್ಷಿಣೆ ಮಾಡಿದರು. ಅವರ ಕೈಯಲ್ಲಿ ಆಗ ಒಂದು ಬೆತ್ತವಿತ್ತು, ಪವಿತ್ರ ಕಅ್‌ಬ ಮಂದಿರವನ್ನು ಹಝ್ರತ್ ಇಬ್ರಾಹೀಮ್[ಅ] ಮತ್ತು ಹಝ್ರತ್ ಇಸ್ಮಾಈಲ್[ಅ] ಏಕದೇವನ ಆರಾಧನೆಗೋಸ್ಕರ ನಿರ್ಮಿಸಿದ್ದರು. ಆದರೆ ಅವರ ಸಂತಾನಕ್ಕೆ ಸೇರಿದ ದಾರಿ ತಪ್ಪಿದ ಜನರು ಅದನ್ನು ವಿಗ್ರಹಗಳ ದಾಸ್ತಾನು ಮಳಿಗೆಯನ್ನಾಗಿ ಮಾಡಿದ್ದರು. ಅದರ ಸುತ್ತುಮುತ್ತು ಹಝ್ರತ್ ಪೈಗಂಬರ್[ಸ] ತಿರುಗಾಡಿ ಅಲ್ಲಿ ಇರಿಸಲಾದ ಮುನ್ನೂರ ಅರುವತ್ತು ವಿಗ್ರಹಗಳ ಪೈಕಿ ಪ್ರತಿಯೊಂದರ ಮುಂದೆ ಹೋಗಿ ಅದಕ್ಕೆ ಬೆತ್ತದಿಂದ ಹೊಡೆದು,

ಜಾಅಲ್ ಹಖ್ಖು ವ ಝಹಖಲ್ ಬಾತಿಲು
ಇನ್ನಲ್ ಬಾತಿಲ ಕಾನ ಝಹೂಖ–

"ಸತ್ಯ ಬಂದಿತು. ಅಸತ್ಯ ಅಳಿದು ಹೋಯಿತು. ಖಂಡಿತವಾಗಿಯೂ ಅಸತ್ಯ



ಅಳಿದೇ ಹೋಗುತ್ತದೆ." ಎಂಬ ಅರ್ಥದ ಪವಿತ್ರ ಖುರ್‌ಆನಿನ ವಚನವನ್ನು ಪಠಿಸುತ್ತಾ ಇದ್ದರು.

ಈ ವಚನವು ಮಕ್ಕವನ್ನು ಜಯಿಸುವ ಮೊದಲು ಹಝ್ರತ್ ಪೈಗಂಬರರಿಗೆ[ಸ] ಬನೀ ಇಸ್ರಾಈಲ್ ಎಂಬ ಶೀರ್ಷಿಕೆಯನ್ನು ಹೊಂದಿದ ಅಧ್ಯಾಯದಲ್ಲಿ ಅವತೀರ್ಣವಾಗಿತ್ತು. ಈ ಅಧ್ಯಾಯದಲ್ಲಿ ವಲಸೆ ಹೋಗುವಿಕೆ ಮತ್ತು ಮಕ್ಕವನ್ನು ಜಯಿಸುವ ಕುರಿತು ಸೂಚಿಸಲಾಗಿತ್ತು. ಪವಿತ್ರ ಖುರ್‌ಆನಿನ ಈ ಅಧ್ಯಾಯವು ಹಝ್ರತ್ ಪೈಗಂಬರ್[ಸ] ಮಕ್ಕದಿಂದ ಮದೀನಕ್ಕೆ ವಲಸೆ ಹೋಗುವ ಮೊದಲು ಅವತೀರ್ಣಗೊಂಡಿತೆಂದು ಯೂರೋಪಿನ ಲೇಖಕರು ಒಮ್ಮತದ ಅಭಿಪ್ರಾಯ ಹೇಳಿದ್ದಾರೆ. ಈ ಅಧ್ಯಾಯದಲ್ಲಿ ಹೀಗೆ ಹೇಳಲಾಗಿದೆ:

**(ಓ ಮುಹಮ್ಮದ್) ನೀನು ಹೇಳು, ಓ ನನ್ನ ಪ್ರಭೂ, ನನ್ನನ್ನು ನೀನು ಈ (ಮಕ್ಕ)ನಗರದಲ್ಲಿ ಒಳ್ಳೆಯ ರೀತಿಯಲ್ಲಿ ಪ್ರವೇಶಿಸುವಂತೆ ಮಾಡು. ಎಂದರೆ ಇಲ್ಲಿಂದ ವಲಸೆ ಹೋದ ನಂತರ ಜಯಶಾಲಿಯಾಗಿ ಪ್ರವೇಶಿಸುವಂತೆ ಮಾಡು. ನನ್ನನ್ನು ಇಲ್ಲಿಂದ ವಲಸೆಗಾಗಿ ಹೊರಡುವಾಗ ಉತ್ತಮವಾದ ರೀತಿಯಲ್ಲಿ ಹೊರಡುವಂತೆ ಮಾಡು, ನಿನ್ನ ಸನ್ನಿಧಿಯಿಂದ ನನಗೆ ಜಯ ಮತ್ತು ನೆರವನ್ನು ಒದಗಿಸಿಕೊಡು. ಹೀಗೆಯೂ ಹೇಳು: ಸತ್ಯ ಬಂದಿತು. ಅಸತ್ಯ ಎಂದರೆ ಬಹುದೇವಾರಾಧನೆ ಸೋತು ಓಡಿ ಹೋಯಿತು. ಅಸತ್ಯಕ್ಕೆ ಎಂದರೆ ಬಹುದೇವಾರಾಧನೆಗೆ ಸೋತು ಓಡಿ ಹೋಗುವುದು ಯಾವಾಗಲೂ ವಿಧಿಸಲ್ಪಟ್ಟಿದೆ.** (17 : 81, 82)

ಈ ಭವಿಷ್ಯವಾಣಿ ಅಕ್ಷರಶಃ ಈಡೇರಿತು. ಹಝ್ರತ್ ಅಬೂಬಕರ್[ರ] ಈ ವಚನಗಳನ್ನು ಪಠಿಸುವಾಗ ಮುಸ್ಲಿಮರಲ್ಲೂ ಅವಿಶ್ವಾಸಿಗಳಲ್ಲೂ ಉಂಟಾಗಿರಬಹುದಾದ ಭಾವಾವೇಶಗಳು ವಿವರಿಸಲು ಅಸಾಧ್ಯವಾಗಿವೆ. ಒಟ್ಟಾರೆ ಹೇಳುವುದಾದರೆ, ಏಕದೇವನ ಆರಾಧನೆಗೋಸ್ಕರ ಹಝ್ರತ್ ಇಬ್ರಾಹೀಮ್[ಅ] ನಿರ್ಮಿಸಿದ ಪ್ರಾರ್ಥನಾಲಯ ಏಕದೇವನ ಆರಾಧನೆಗೋಸ್ಕರ ಮಾತ್ರ ಮೀಸಲಾಗಿರಿಸಲಾಯಿತು ಮತ್ತು ಅಲ್ಲಿದ್ದ ವಿಗ್ರಹಗಳು ಶಾಶ್ವತವಾಗಿ ತುಂಡರಿಸಲ್ಪಟ್ಟವು. ಹಝ್ರತ್ ಪೈಗಂಬರ್[ಸ] ಹುಬಲ್ ಎಂಬ ವಿಗ್ರಹದ ಮೇಲೆ ತನ್ನ ಬೆತ್ತದಿಂದ ಹೊಡೆದಾಗ ಅದು ಅದನ್ನು ಇರಿಸಲಾದ ಸ್ಥಳದಿಂದ ಕೆಳಗೆ ಬಿದ್ದು ತುಂಡಾಯಿತು. ಹಝ್ರತ್ ಝುಬೈರ್[ರ] ಅಬೂ ಸುಫ್‌ಯಾನರ ಕಡೆಗೆ ನೋಡಿ ನಗುತ್ತಾ ಹೇಳಿದರು:

"ನಿಮಗೆ ನೆನಪಿದೆಯೋ, ಮುಸ್ಲಿಮರು ಉಹುದ್‌ನಲ್ಲಿ ಗಾಯಗೊಂಡು ವಿಷಣ್ಣರಾಗಿ ಒಂದು ಕಡೆ ನಿಂತಿದ್ದಾಗ ನೀವು ಹೆಮ್ಮೆಯಿಂದ 'ಉಅ್‌ಲು ಹುಬಲ್ ಉಅ್‌ಲು ಹುಬಲ್' – ಹುಬಲಿಗೆ ಜಯವಾಗಲಿ, ಹುಬಲಿಗೆ ಜಯವಾಗಲಿ, ಹುಬಲನೇ ನಿಮಗೆ ಉಹುದ್ ಯುದ್ಧದಲ್ಲಿ ಜಯ ನೀಡಿದನು ಎಂದು ನೀವು ಘೋಷಿಸುತಿದ್ದಿರಿ, ನೀವು ಇಂದು ನೋಡುತ್ತಿರುವಿರಿ. ಆ ಹುಬಲ್ ವಿಗ್ರಹದ ತುಂಡುಗಳು ನಿಮ್ಮ ಮುಂದಿದೆ."

ಅಬೂ ಸುಫ್‌ಯಾನ್ ಹೇಳಿದರು: "ಝುಬೈರ್, ನೀವು ಆ ಮಾತುಗಳನ್ನು ಬಿಟ್ಟು ಬಿಡಿರಿ. ಇಂದು ನಮಗೆ ಚೆನ್ನಾಗಿ ಕಾಣಿಸುತ್ತಿದೆ. ಮುಹಮ್ಮದರ(ಸ) ದೇವನ ಹೊರತು ಅನ್ಯ ದೇವನಿದ್ದಿದ್ದರೆ ಇಂದು ನಾವು ಏನನ್ನು ನೋಡುತ್ತಿರುವೆವೋ ಆ ರೀತಿ ಎಂದೂ ಸಂಭವಿಸುತ್ತಾ ಇರಲಿಲ್ಲ."

ಅನಂತರ ಹಝ್ರತ್ ಪೈಗಂಬರ್(ಸ) ಕಅ್‌ಬದ ಒಳಗೆ ಚಿತ್ರಿಸಲಾಗಿದ್ದ ಹಝ್ರತ್ ಇಬ್ರಾಹೀಮ್ ಮೊದಲಾದವರ ಚಿತ್ರಗಳನ್ನು ಅಳಿಸಿ ಬಿಡಲು ಆಜ್ಞಾಪಿಸಿದರು ಮತ್ತು ಅಲ್ಲಾಹನು ಮಾಡಿದ ವಾಗ್ದಾನಗಳು ಈಡೇರಿದ ಬಗ್ಗೆ ಕೃತಜ್ಞತೆ ಸೂಚಿಸಲು ಪವಿತ್ರ ಕಅ್‌ಬದೊಳಗೆ ಎರಡು ರಕ್‌ಅತ್ ನಮಾಝ್ ಮಾಡಿದರು.

ಕಅ್‌ಬದ ಒಳಗಿರುವ ಚಿತ್ರಗಳನ್ನು ಅಳಿಸಿ ಬಿಡಲು ಹಝ್ರತ್ ಉಮರರನ್ನು(ರ) ಹಝ್ರತ್ ಪೈಗಂಬರ್(ಸ) ನೇಮಿಸಿದ್ದರು. ಹಝ್ರತ್ ಉಮರ್, ಹಝ್ರತ್ ಇಬ್ರಾಹೀಮರನ್ನು ಪ್ರವಾದಿ ಎಂದು ತಾವು ಸಹ ನಂಬುತ್ತೇವೆ ಎಂದು ಯೋಚಿಸಿ ಅವರ ಚಿತ್ರವನ್ನು ಅಳಿಸಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ನೀವು ಹೀಗೇಕೆ ಮಾಡಿದಿರಿ?" ಅಲ್ಲಾಹನು ಹಝ್ರತ್ ಇಬ್ರಾಹೀಮರ ಕುರಿತು: "ಇಬ್ರಾಹೀಮ್ ಯಹೂದಿ ಅಥವಾ ಕ್ರಿಸ್ತೀಯನೋ ಆಗಿರಲಿಲ್ಲ. ಅವರು ಅಲ್ಲಾಹನನ್ನು ಪರಿಪೂರ್ಣವಾಗಿ ಅನುಸರಿಸುವವರೂ ಅಲ್ಲಾಹನ ಎಲ್ಲಾ ಸತ್ಯಗಳನ್ನು ನಂಬುವ ಏಕದೇವಾರಾಧಕ ದಾಸರಾಗಿದ್ದರು"[79] ಎಂದು ಹೇಳಿರುವನು. ಹಝ್ರತ್ ಪೈಗಂಬರರ ಆಜ್ಞೆ ಪ್ರಕಾರ ಆ ಚಿತ್ರವನ್ನು ಅಳಿಸಿ ಬಿಡಲಾಯಿತು. ಆ ದಿನ ಅಲ್ಲಾಹನ ದೃಷ್ಟಾಂತಗಳನ್ನು ನೋಡಿ ಮುಸ್ಲಿಮರ ಹೃದಯ ಸತ್ಯ ವಿಶ್ವಾಸದಿಂದ ಎಷ್ಟು ತುಂಬಿತೆಂದರೆ ಅವರು ಹಝ್ರತ್ ಪೈಗಂಬರರ ಮಹತ್ತಾದ ವ್ಯಕ್ತಿತ್ವದ ಕುರಿತು ದೃಢ ವಿಶ್ವಾಸಿಗಳಾದರು. ಹಝ್ರತ್ ಪೈಗಂಬರ್(ಸ) ಝಮ್ ಝಮ್ ಒರತೆಯಿಂದ ನೀರನ್ನು ತರಿಸಿದರು. ಝಮ್ ಝಮ್ ಒರತೆಯನ್ನು ಹಝ್ರತ್ ಇಬ್ರಾಹೀಮರ ಪುತ್ರ ಹಝ್ರತ್ ಇಸ್ಮಾಈಲ್‌ಗೋಸ್ಕರ ಒಂದು ದೃಷ್ಟಾಂತವಾಗಿ ಅಲ್ಲಾಹನು ಹೊರ ಚಿಮ್ಮಿಸಿದ್ದನು. ಹಝ್ರತ್ ಪೈಗಂಬರ್(ಸ) ಝಮ್ ಝಮ್ ನೀರನ್ನು ಕುಡಿದು ಉಳಿದ ನೀರಿನಿಂದ ನಮಾಝ್‌ಗೋಸ್ಕರ ಶುಚೀಕರಣ ಕ್ರಿಯೆಗಳನ್ನು ಮಾಡುತ್ತಿದ್ದಾಗ ಅವರ ದೇಹದಿಂದ ಒಂದು ಹನಿ ನೀರನ್ನು ಸಹ ನೆಲಕ್ಕೆ ಬೀಳಲು ಬಿಡಲಾಗಲಿಲ್ಲ. ಮುಸ್ಲಿಮರು ಆ ನೀರನ್ನು ಕೈಯಲ್ಲಿ ಹಿಡಿದಿರಿಸಿ ತಮ್ಮ ದೇಹಗಳಿಗೆ ಅನುಗ್ರಹದಾಯಕವಾಗಿ ಸವರುತ್ತಿದ್ದರು. ಆಗ ಬಹುದೇವಾರಾಧಕರು, "ಲೋಕದ ಯಾವುದೇ ದೊರೆಯ ಪ್ರಜೆಗಳು ತಮ್ಮ ದೊರೆಯ ಬಗ್ಗೆ ಇಷ್ಟು ಪ್ರೀತಿಯನ್ನು ಹೊಂದಿರುವುದನ್ನು ನಾವು ಎಲ್ಲಿಯೂ ಕಾಣಲಿಲ್ಲ" ಎಂದು ಹೇಳುತ್ತಿದ್ದರು. ಅನಂತರ ಮಕ್ಕದ ಜನರನ್ನು ಹಝ್ರತ್ ಪೈಗಂಬರರ ಸಮ್ಮುಖದಲ್ಲಿ ಹಾಜರು ಪಡಿಸಲಾಯಿತು. ಆಗ ಅವರು ಹೀಗೆಂದರು: "ಓ ಮಕ್ಕದ ನಿವಾಸಿಗಳೇ, ನೀವು ನೋಡಿರುವಿರಿ ಅಲ್ಲಾಹನ ವಾಗ್ದಾನಗಳು ಹೇಗೆ ಅಕ್ಷರಶಃ ಈಡೇರಿದುವು ಎಂದು. ಏಕದೇವ ವಿಶ್ವಾಸಿಗಳಾದ

79. ಸೂರಃ ಆಲಿ ಇಮ್ರಾನ್ ವಚನ 68.



ಬಡ ಜನರಿಗೆ ನೀವು ಮಾಡಿದ ದೌರ್ಜನ್ಯ ಮತ್ತು ಹಿಂಸಾಚಾರಗಳಿಗೆ ನಿಮಗೆ ಯಾವ ಶಿಕ್ಷೆ ನೀಡಬೇಕು?"

ಆಗ ಮಕ್ಕದ ಜನರು ಹೇಳಿದರು: "ಯೂಸುಫ್ ತನ್ನ ಸಹೋದರರೊಂದಿಗೆ ಹೇಗೆ ವರ್ತಿಸಿದರೋ ಅದೇ ರೀತಿ ನೀವು ನಮ್ಮೊಂದಿಗೆ ವರ್ತಿಸುವಿರೆಂದು ನಾವು ಆಶಿಸುತ್ತೇವೆ."

ಇದು ಅಲ್ಲಾಹನ ಒಂದು ಚಮತ್ಕಾರವೇ ಆಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನ "ಯೂಸುಫ್" ಎಂಬ ಅಧ್ಯಾಯದಲ್ಲಿ ಭವಿಷ್ಯವಾಣಿಯ ರೂಪದಲ್ಲಿ ಹೇಳಿದ್ದ ವಚನಗಳೇ ಮಕ್ಕದವರ ಬಾಯಿಯಿಂದ ಹೊರಟವು. ಮಕ್ಕವನ್ನು ಜಯಿಸುವುದಕ್ಕೆ ಹತ್ತು ವರ್ಷಗಳ ಮೊದಲು ಅಲ್ಲಾಹನು ಹಝ್ರತ್ ಪೈಗಂಬರ್‌ರಿಗೆ(ಸ) ಹೀಗೆ ತಿಳಿಸಿದ್ದನು: "ಯೂಸುಫ್ ತನ್ನ ಸಹೋದರರೊಂದಿಗೆ ವರ್ತಿಸಿದ ರೀತಿಯಲ್ಲಿಯೇ ನೀವು ಮಕ್ಕದ ಜನರೊಂದಿಗೆ ವರ್ತಿಸುವಿರಿ." ಹಝ್ರತ್ ಪೈಗಂಬರ್(ಸ), ಹಝ್ರತ್ ಯೂಸುಫ್‌ರಿಗೆ ಹೋಲಿಕೆಯುಳ್ಳವರೆಂದು ಮಕ್ಕದ ಜನರ ಬಾಯಿಯಿಂದ ದೃಢೀಕರಿಸಲ್ಪಟ್ಟಾಗ ಮತ್ತು ಯೂಸುಫರಿಗೆ ಅಲ್ಲಾಹನು ಜಯವನ್ನು ನೀಡಿದ ಹಾಗೆ ಹಝ್ರತ್ ಪೈಗಂಬರರಿಗೂ ಸಹೋದರರ ಮೇಲೆ ಜಯ ನೀಡಿದಾಗ, ಅವರು ಸಹ ಹೀಗೆ ಪ್ರಕಟಿಸಿದರು:

"ಅಲ್ಲಾಹನಾಣೆ, ಇಂದು ನಿಮಗೆ ಯಾವ ಶಿಕ್ಷೆಯೂ ನೀಡಲ್ಪಡಲಾರದು.

ನಿಮ್ಮ ಮೇಲೆ ಯಾವುದೇ ದೋಷಾರೋಪ ಹೊರಿಸಲ್ಪಡಲಾರದು."

ಹಝ್ರತ್ ಪೈಗಂಬರ್(ಸ) ಕಅ್‌ಬದ ವಿವಿಧ ಪ್ರಾರ್ಥನೆಯ ವಿಧಿಗಳಲ್ಲಿ ತಲ್ಲೀನರಾಗಿದ್ದರು. ತನ್ನ ಊರಿನ ಜನರೊಂದಿಗೆ ಕ್ಷಮೆ ಮತ್ತು ದಯೆಯಿಂದ ವರ್ತಿಸಲು ತೊಡಗಿದ್ದರು. ಆಗ ಮದೀನ ನಿವಾಸಿಗಳ ಹೃದಯ ಒಳಗಿಂದೊಳಗೆ ಕುಗ್ಗಿ ಹೋಗುತ್ತಾ ಇತ್ತು. ಅವರು ಪರಸ್ಪರ ಸಂಜ್ಞೆಯಿಂದ ಹೇಳುತ್ತಿದ್ದರು. ಪ್ರಾಯಶಃ ಇಂದು ಅಲ್ಲಾಹನ ಪೈಗಂಬರರನ್ನು ನಮ್ಮಿಂದ ಬೇರ್ಪಡಿಸುತ್ತಾ ಇದ್ದೇವೆ. ಅಲ್ಲಾಹನು ಅವರ ನಗರ ಅವರ ಕೈವಶವಾಗುವಂತೆ ಮಾಡಿರುವನು. ಅವರ ಗೋತ್ರ ಅವರನ್ನು ನಂಬಿದೆ. ಆಗ ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ಮದೀನದ ಜನರ ಈ ಆಶಂಕೆಗಳ ಬಗ್ಗೆ ತನ್ನ ಸಂದೇಶವಾಣಿ ಅರುಹಿದನು. ಹಝ್ರತ್ ಪೈಗಂಬರ್(ಸ) ತಲೆಯೆತ್ತಿ ಮದೀನದ ಜನರ ಕಡೆಗೆ ನೋಡಿ ಹೇಳಿದರು:

"ಓ ಮದೀನದ ನಿವಾಸಿಗಳಾದ ಸ್ನೇಹಿತರೇ, ಮುಹಮ್ಮದರಿಗೆ ಅವರ ನಗರದ ಬಗ್ಗೆ ಇರುವ ಪ್ರೀತಿ ಅವರನ್ನು ಸತಾಯಿಸುತ್ತಿದೆ ಎಂದೂ ಅವರ ಊರಿನ ಜನರ ಬಗ್ಗೆ ಪ್ರೀತಿ ಅವರ ಹೃದಯವನ್ನು ತಳಮಳಗೊಳಿಸಿದೆ ಎಂದೂ ನೀವು ಭಾವಿಸುತ್ತೀರಲ್ಲವೇ?"

ಮದೀನದವರು (ಅನ್‌ಸಾರ್) ಹೇಳಿದರು: "ಅಲ್ಲಾಹನ ಪೈಗಂಬರರೇ, ನೀವು ಹೇಳಿದುದು ಸರಿ. ನಮ್ಮ ಹೃದಯದಲ್ಲಿ ಅಂತಹ ಯೋಚನೆ ಮೂಡಿಬಂದಿದೆ."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಿಮಗೆ ಗೊತ್ತಿದೆ ನನ್ನ ಹೆಸರೇನೆಂದು. ನಾನು ಅಲ್ಲಾಹನ ದಾಸನೂ ಅವನ ಪೈಗಂಬರನೂ ಆಗಿರುವೆನು. ಇಸ್ಲಾಮ್ ಧರ್ಮವು ಬಲಹೀನವಾಗಿದ್ದ ಕಾಲದಲ್ಲಿ ನೀವು ನಿಮ್ಮ ಜೀವಗಳನ್ನು ಬಲಿದಾನ ಮಾಡಿದಿರಿ. ಇಂತಹ ನಿಮ್ಮನ್ನು ಬಿಟ್ಟು ನಾನು ಬೇರೆ ಕಡೆಗೆ ಹೋಗುವುದು ಹೇಗೆ ತಾನೆ ಸಾಧ್ಯ?"

ಅನಂತರ ಹೀಗೆ ಹೇಳಿದರು: "ಹಾಗೆ ಎಂದೂ ಆಗಲಾರದು. ನಾನು ಅಲ್ಲಾಹನ ದಾಸನೂ ಅವನ ಪೈಗಂಬರನೂ ಆಗಿರುವೆನು. ನಾನು ಅಲ್ಲಾಹನಿಗೋಸ್ಕರ ನನ್ನ ಊರನ್ನು ಬಿಟ್ಟು ಹೋಗಿದ್ದೆನು. ಈಗ ನಾನು ಅಲ್ಲಿಗೆ ಮರಳಿ ಬರಲಾರೆನು. ನನ್ನ ಜೀವಿತವು ನಿಮ್ಮ ಜೀವಿತದೊಂದಿಗೆ ಮತ್ತು ನನ್ನ ಮೃತ್ಯು ನಿಮ್ಮ ಮೃತ್ಯುವಿನೊಂದಿಗೆ ಜೋಡಿಸಲ್ಪಟ್ಟಿದೆ."

ಮದೀನದವರು ಹಝ್ರತ್ ಪೈಗಂಬರರ(ಸ) ಮಾತುಗಳನ್ನು ಆಲಿಸಿ ಅವರ ಪ್ರೀತಿ ವಿಶ್ವಾಸಗಳನ್ನು ನೋಡಿ ಆನಂದಾಶ್ರು ಸುರಿಸುತ್ತಾ ಮುನ್ನುಗ್ಗಿ ಹೀಗೆಂದರು:

"ಅಲ್ಲಾಹನಾಣೆ! ನಾವು ಅಲ್ಲಾಹನನ್ನೂ ಅವನ ಪೈಗಂಬರರನ್ನೂ ಶಂಕಿಸಿದೆವು. ವಾಸ್ತವಿಕ ವಿಷಯವೇನೆಂದರೆ, ಅಲ್ಲಾಹನ ಪೈಗಂಬರರು(ಸ) ನಮ್ಮನ್ನೂ ನಮ್ಮ ನಗರವನ್ನೂ ಬಿಟ್ಟು ಬೇರೆಲ್ಲಿಗಾದರೂ ಹೋಗುವುದನ್ನು ನಾವು ಸಹಿಸಲಾರೆವು."

ಹಝ್ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನೂ ಅವನ ಪೈಗಂಬರರೂ ನಿಮ್ಮನ್ನು ದೋಷ ಮುಕ್ತರೆಂದು ಗ್ರಹಿಸುತ್ತಾರೆ. ನಿಮ್ಮ ನಿಷ್ಕಳಂಕ ನಿಷ್ಠೆಯನ್ನು ಮೆಚ್ಚುತ್ತಾರೆ."

ಹಝ್ರತ್ ಪೈಗಂಬರ್(ಸ) ಮತ್ತು ಮದೀನದ ನಿವಾಸಿಗಳೊಂದಿಗೆ ಈ ರೀತಿ ಸ್ನೇಹ ಪೂರ್ಣವಾದ ಮಾತುಕತೆ ನಡೆಯುತ್ತಿದ್ದಾಗ ಮಕ್ಕದ ಜನರ ಕಣ್ಣುಗಳು ಕಣ್ಣೀರು ಸುರಿಸದಿದ್ದರೂ ಅವರ ಹೃದಯಗಳು ಕಣ್ಣೀರು ಸುರಿಸುತ್ತಾ ಹೀಗೆ ಹೇಳಿರಬಹುದು: ಒಂದು ಅಮೂಲ್ಯ ರತ್ನವನ್ನು– ಅದಕ್ಕಿಂತ ಹೆಚ್ಚು ಬೆಲೆ ಬಾಳುವ ವಸ್ತುವನ್ನು ಅಲ್ಲಾಹನು ಈ ಲೋಕದಲ್ಲಿ ಸೃಷ್ಟಿಸಲಿಲ್ಲ–ಅದನ್ನು ಅಲ್ಲಾಹನು ಅವರಿಗೆ ನೀಡಿದ್ದನು. ಆದರೆ ಅವರು ಅದನ್ನು ತಮ್ಮ ಮನೆಗಳಿಂದ ಹೊರಗೆಸೆದರು. ಅದು ಅಲ್ಲಾಹನ ಅನುಗ್ರಹ ಮತ್ತು ಅವನ ಸಹಾಯದಿಂದ ಮಕ್ಕಕ್ಕೆ ಮರಳಿ ಬಂದಿದ್ದರೂ ಅವರು ತನ್ನ ಪ್ರತಿಜ್ಞೆಯ ಕಾರಣದಿಂದ ತನ್ನ ಸ್ವಂತ ಇಚ್ಛೆ ಮತ್ತು ಸ್ವಂತ ಸಂತೋಷದಿಂದ ಮಕ್ಕವನ್ನು ಬಿಟ್ಟು ಮದೀನಕ್ಕೆ ಹೋಗುತ್ತಿರುವರು.

ಕೆಲವರು ಮಾಡಿದ್ದ ದೌರ್ಜನ್ಯಕರ ಕೊಲೆ ಮತ್ತು ಹಿಂಸಾಚಾರಗಳ ಕಾರಣದಿಂದ ಅವರನ್ನು ಕೊಲ್ಲಬೇಕೆಂದು ಹಝ್ರತ್ ಪೈಗಂಬರ್(ಸ) ವಿಧಿಸಿದ್ದರೂ ಅವರಲ್ಲಿ ಬಹುತೇಕ ಜನರನ್ನು ಕೆಲವು ಮುಸ್ಲಿಮರ ಶಿಫಾರಸ್ಸುಗಳ ಪ್ರಕಾರ ಶಿಕ್ಷಿಸದೆ ಬಿಟ್ಟರು. ಹೀಗೆ ಶಿಕ್ಷಿಸದೆ ಬಿಡಲಾದ ಜನರಲ್ಲಿ ಅಬೂಜಹಲನ ಮಗ ಇಕ್ರಿಮ ಸಹ ಸೇರಿದ್ದರು.



ಇಕ್ರಿಮರ ಪತ್ನಿ ಹೃದಯದಲ್ಲಿ ಮುಸ್ಲಿಮಳಾಗಿದ್ದರು. ಆಕೆ ಹಝ್ರತ್ ಪೈಗಂಬರ್‌ರೊಂದಿಗೆ(ಸ) ಹೇಳಿದರು: "ಅಲ್ಲಾಹನ ಪೈಗಂಬರ್‌ರೇ, ಇಕ್ರಿಮರನ್ನು ಸಹ ಕ್ಷಮಿಸಿರಿ." ಹಝ್ರತ್ ಪೈಗಂಬರ್, "ನಾವು ಅವರನ್ನು ಕ್ಷಮಿಸಿದೆವು" ಎಂದು ಹೇಳಿದರು.

ಇಕ್ರಿಮ ಯೆಮನ್ ಕಡೆಗೆ ಓಡಿಹೋಗುತ್ತಿದ್ದರು. ಅವರ ಪತ್ನಿ ಪ್ರೀತಿಯಿಂದ ಅವರನ್ನು ಹುಡುಕುತ್ತಾ ಅವರ ಹಿಂದೆ ಹೋದರು. ಇಕ್ರಿಮ ಸಮುದ್ರದ ಕರಾವಳಿಯಲ್ಲಿ ನಾವೆಯಲ್ಲಿ ಕುಳಿತುಕೊಂಡು ಅರಬ್ ದೇಶಕ್ಕೆ ವಿದಾಯ ಹೇಳುತ್ತಾ ಇದ್ದಾಗ, ಅವರ ಪತ್ನಿ ಕೆದರಿದ ಕೂದಲನ್ನು ಹೊಂದಿ ಗಾಬರಿಗೊಂಡು ಅಲ್ಲಿಗೆ ತಲಪಿ ಕೂಗಿ ಹೇಳಿದರು: "ಓ ನನ್ನ ಚಿಕ್ಕಪ್ಪನ ಪುತ್ರ, (ಅರಬ್ ಮಹಿಳೆಯರು ತಮ್ಮ ಪತಿಯನ್ನು ಚಿಕ್ಕಪ್ಪನ ಪುತ್ರ ಎಂದು ಕರೆಯುವ ರೂಢಿ ಇತ್ತು.) ನೀವು ಅಂತಹ ಸಜ್ಜನ ಮತ್ತು ದಯಾಶೀಲರಾದವರನ್ನು ಬಿಟ್ಟು ಎಲ್ಲಿಗೆ ಹೋಗುತ್ತಿರುವಿರಿ?" ಇಕ್ರಿಮ ಅಚ್ಚರಿಯಿಂದ ತನ್ನ ಪತ್ನಿಯೊಂದಿಗೆ ಕೇಳಿದರು: "ನಾನು ಮಾಡಿದ ಎಲ್ಲಾ ಶತ್ರುತ್ವದ ಕೆಲಸಗಳ ನಂತರವೂ ಪೈಗಂಬರರು ನನಗೆ ಕ್ಷಮೆಯನ್ನು ನೀಡುವರೇ?"

ಇಕ್ರಿಮರ ಪತ್ನಿ ಹೇಳಿದರು: "ಹೌದು, ನಾನು ಅವರಿಂದ ವಚನವನ್ನು ಪಡೆದಿರುವೆನು. ಅವರು ನಿಮ್ಮನ್ನು ಕ್ಷಮಿಸಿರುವರು."

ಇಕ್ರಿಮ ಹಝ್ರತ್ ಪೈಗಂಬರರ(ಸ) ಸಮೀಪ ಹೋಗಿ ಹೇಳಿದರು: "ನೀವು ನನ್ನಂತಹ ಮನುಷ್ಯನನ್ನು ಕ್ಷಮಿಸಿರುವಿರೆಂದು ನನ್ನ ಪತ್ನಿ ಹೇಳುತ್ತಾಳೆ."

ಹಝ್ರತ್ ಪೈಗಂಬರ್(ಸ) ಹೇಳಿದರು: "ನಿಮ್ಮ ಪತ್ನಿ ಹೇಳಿದುದು ಸತ್ಯವೇ ಆಗಿದೆ, ನಾವು ನಿಮ್ಮನ್ನು ಕ್ಷಮಿಸಿರುವೆವು."

ಇಕ್ರಿಮ ಹೇಳಿದರು: "ಯಾರು ಇಷ್ಟು ಕಠಿಣ ಶತ್ರುವನ್ನು ಕ್ಷಮಿಸುತ್ತಾರೋ ಅವರು ಸುಳ್ಳುಗಾರರಾಗಲು ಸಾಧ್ಯವಿಲ್ಲ. ನಾನು ಸಾಕ್ಷಿ ಹೇಳುತ್ತೇನೆ – ಅಲ್ಲಾಹನು ಒಬ್ಬನೇ. ಅವನಿಗೆ ಯಾರೂ ಸಹಭಾಗಿಗಳಿಲ್ಲ. ನಾನು ಸಾಕ್ಷಿ ಹೇಳುತ್ತೇನೆ – ಓ ಮುಹಮ್ಮದ್, ನೀವು ಅವನ ದಾಸರೂ ಪೈಗಂಬರರೂ ಆಗಿರುವಿರಿ."

ಅನಂತರ ಇಕ್ರಿಮ ನಾಚಿಕೆಯಿಂದ ತಲೆ ತಗ್ಗಿಸಿ ನಿಂತರು. ಹಝ್ರತ್ ಪೈಗಂಬರ್(ಸ) ಅವರ ನಾಚಿಕೆಯನ್ನು ನೋಡಿ ಅವರಿಗೆ ಸಮಾಧಾನ ನೀಡಲು ಹೀಗೆಂದರು: "ನಾನು ನಿಮ್ಮನ್ನು ಕ್ಷಮಿಸಿರುವೆನು ಮಾತ್ರವಲ್ಲ, ಈದಿನ ನೀವು ನನಗೆ ನೀಡಲು ಸಾಮರ್ಥ್ಯವಿರುವ ಯಾವುದಾದರೂ ವಸ್ತುವನ್ನು ಅವಶ್ಯಪಡುವುದಾದರೆ ನಾನು ಅದನ್ನೂ ನಿಮಗೆ ಕೊಡುವೆನು."

ಇಕ್ರಿಮ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನಾನು ನಿಮ್ಮ ವಿರುದ್ಧ ಮಾಡಿದ ಶತ್ರುತ್ವದ ಕೃತ್ಯಗಳನ್ನು ನನಗೆ ಕ್ಷಮಿಸಲು ನೀವು ಅಲ್ಲಾಹನನ್ನು ಬೇಡಿಕೊಳ್ಳಿರಿ. ಇದಕ್ಕಿಂತಲೂ ದೊಡ್ಡ ಅಪೇಕ್ಷೆ ನನಗೇನೂ ಇಲ್ಲ." ಆಗ ಹಝ್ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸಿದರು:

"ಓ ಅಲ್ಲಾಹ್, ಇಕ್ರಿಮ ನನ್ನ ವಿರುದ್ಧ ಮಾಡಿದ ಎಲ್ಲಾ ದುಷ್ಕೃತ್ಯಗಳನ್ನು ನೀನು ಕ್ಷಮಿಸುವವನಾಗು, ಅವರ ಬಾಯಿಯಿಂದ ಹೊರಟ ಎಲ್ಲಾ ಬೈಗಳನ್ನು ನೀನು ಕ್ಷಮಿಸು." ಅನಂತರ ಹಝ್ರತ್ ಪೈಗಂಬರ್(ಸ) ಎದ್ದು ತಾನು ಹೊದ್ದುಕೊಂಡಿದ್ದ ಕಂಬಳಿಯನ್ನು ಅವರ ಮೇಲೆ ಹೊದಿಸಿದರು. ಅನಂತರ ಹೇಳಿದರು:

"ಯಾರು ಅಲ್ಲಾಹನನ್ನು ನಂಬಿ ನಮ್ಮ ಬಳಿಗೆ ಬರುತ್ತಾರೋ ಅಂತಹವರಿಗೆ ನಮ್ಮ ಮನೆ ಅವರ ಮನೆಯಾಗಿದೆ. ನಮ್ಮ ಸ್ಥಳ ಅವರ ಸ್ಥಳವಾಗಿದೆ."

ಇಕ್ರಿಮ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದರಿಂದ ಹಝ್ರತ್ ಪೈಗಂಬರ್(ಸ) ಹಲವು ವರ್ಷಗಳ ಹಿಂದೆ ತನ್ನ ಶಿಷ್ಯರೊಂದಿಗೆ ಹೇಳಿದ ಭವಿಷ್ಯವಾಣಿ ಈಡೇರಿತು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: "ನಾನು ಸ್ವರ್ಗದಲ್ಲಿರುವುದಾಗಿ ಕನಸನ್ನು ಕಂಡೆನು, ಅಲ್ಲಿ ನಾನು ದ್ರಾಕ್ಷೆಯ ಒಂದು ಗೊಂಚಲನ್ನು ಕಂಡೆನು. ನಾನು ಜನರೊಂದಿಗೆ ಕೇಳಿದೆ, ಇದು ಯಾರಿಗೋಸ್ಕರ ಇರಿಸಲಾಗಿದೆ? ಒಬ್ಬರು ಹೀಗೆ ಉತ್ತರ ನೀಡಿದರು: ಅದು ಅಬೂ ಜಹಲನಿಗೋಸ್ಕರ ಇರಿಸಲಾಗಿದೆ. ಇದು ನನಗೆ ವಿಚಿತ್ರವಾಗಿ ಕಂಡಿತು. ನಾನು ಹೇಳಿದೆ, ಸ್ವರ್ಗವನ್ನು ಸತ್ಯ ವಿಶ್ವಾಸಿಗಳ ಹೊರತು ಅನ್ಯರು ಪ್ರವೇಶಿಸುವುದಿಲ್ಲ. ಹೀಗಿರುವಾಗ ಅಬೂಜಹಲನಿಗೆ ದ್ರಾಕ್ಷೆಯನ್ನು ಒದಗಿಸಿ ಇರಿಸಿರುವುದಾದರೂ ಹೇಗೆ?"

ಇಕ್ರಿಮ ಮುಸ್ಲಿಮರಾದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಆ ದ್ರಾಕ್ಷೆಯ ಗೊಂಚಲು ಇಕ್ರಿಮರಿಗೋಸ್ಕರ ಇರಿಸಲಾಗಿತ್ತು. ಮಗನಿಗೆ ಪ್ರತಿಯಾಗಿ ತಂದೆಯ ಹೆಸರು ಹೇಳಲಾಯಿತು. ಕನಸುಗಳಲ್ಲಿ ಬಹುತೇಕ ಹೀಗೆಯೇ ಸೂಚಿಸಲಾಗುತ್ತದೆ.[80]

ಮರಣ ದಂಡನೆ ವಿಧಿಸಲಾದ ಯುದ್ಧಾಪರಾಧಿಗಳಲ್ಲಿ ಹಝ್ರತ್ ಪೈಗಂಬರರ ಪುತ್ರಿ ಹಝ್ರತ್ ಝೈನಬರನ್ನು(ರ) ಹತ್ಯೆ ಮಾಡಿದ ಹಬ್ಬಾರ್ ಎಂಬವನೂ ಇದ್ದನು. ಅವನು ಹಝ್ರತ್ ಝೈನಬರ(ರ) ಒಂಟೆಯ ಜೀನಿನ ಹಗ್ಗವನ್ನು ಕಡಿದುದರಿಂದ ಅವರು ಒಂಟೆಯಿಂದ ಕೆಳಗೆ ಬಿದ್ದ ಕಾರಣ ಅವರಿಗೆ ಗರ್ಭಪಾತವಾಯಿತು, ಸ್ವಲ್ಪ ಕಾಲದ ನಂತರ ಅವರು ಮೃತರಾದರು. ಅವನು ಬೇರೆ ಅನೇಕ ಅಪರಾಧಗಳನ್ನೂ ಮಾಡಿದ್ದನು. ಅದರೊಂದಿಗೆ ಈ ಅಪರಾಧವು ಅವನನ್ನು ಮರಣ ದಂಡನೆಗೆ ಅರ್ಹನನ್ನಾಗಿ ಮಾಡಿತ್ತು. ಅವನು ಸಹ ಹಝ್ರತ್ ಪೈಗಂಬರರ(ಸ) ಮುಂದೆ ಹಾಜರಾಗಿ ಹೀಗೆಂದನು: "ನಾನು ನಿಮ್ಮ ಭಯದಿಂದ ಇರಾನಿಗೆ ಓಡಿಹೋಗಿದ್ದೆನು. ನಾನು ಆಮೇಲೆ ಹೀಗೆ ಯೋಚಿಸಿದೆ – ಅಲ್ಲಾಹನು ಹಝ್ರತ್ ಪೈಗಂಬರರ(ಸ) ಮೂಲಕ ನಮ್ಮ ಬಹುದೈವಾರಾಧಕ ವಿಶ್ವಾಸವನ್ನು

80. ಸೀರತ್ ಹಲ್‌ಬಿಯ್ಯ – ಸಂಪುಟ 3 ಪುಟ 104.



ದೂರ ಸರಿಸಿರುವನು. ನಮ್ಮನ್ನು ಆಧ್ಯಾತ್ಮಿಕ ಹಾನಿಗಳಿಂದ ರಕ್ಷಿಸಿರುವನು. ನಾನು ಪರಕೀಯರ ಬಳಿಗೆ ಹೋಗುವುದಕ್ಕಿಂತ ನಮ್ಮವರೇ ಆದ ಪೈಗಂಬರರ(ಸ) ಸಮೀಪ ಹೋಗಿ ನನ್ನ ಅಪರಾಧಗಳನ್ನು ನಿವೇದಿಸಿಕೊಂಡು ಕ್ಷಮೆಯನ್ನು ಯಾಚಿಸುವೆನು."

ಹಝ್ರತ್ ಪೈಗಂಬರ್(ಸ) ಹೇಳಿದರು: "ಹಬ್ಬಾರ್, ಅಲ್ಲಾಹನು ನಿನ್ನ ಹೃದಯದಲ್ಲಿ ಇಸ್ಲಾಮಿನ ಬಗ್ಗೆ ಪ್ರೀತಿಯನ್ನು ಅಂಕುರಿಸಿರುವಾಗ ನಾನು ನಿನ್ನ ಪಾಪಗಳನ್ನು ಏಕೆ ಕ್ಷಮಿಸಲಾರೆನು? ನೀನು ಹೋಗು, ನಾನು ನಿನ್ನನ್ನು ಕ್ಷಮಿಸಿರುವೆನು. ಇಸ್ಲಾಮ್ ನಿನ್ನ ಎಲ್ಲಾ ಗತಕಾಲದ ಪಾಪಗಳನ್ನು ಅಳಿಸಿ ಬಿಟ್ಟಿದೆ."

ಇಲ್ಲಿ ಈ ವಿಷಯದ ಬಗ್ಗೆ ಸವಿಸ್ತಾರವಾಗಿ ಬರೆಯಲು ಎಡೆಯಿಲ್ಲ. ಆ ಭಯಾನಕ ಅಪರಾಧಿಗಳಲ್ಲಿ ಕೆಲವರನ್ನು ಹಝ್ರತ್ ಪೈಗಂಬರ್(ಸ) ಸಾಮಾನ್ಯವಾದ ಕ್ಷಮೆಯಾಚನೆಯ ಕಾರಣದಿಂದ ಕ್ಷಮಿಸಿಬಿಟ್ಟರು. ಅವರಲ್ಲಿ ಬಹುತೇಕ ಮಂದಿ ಮಾಡಿದ ಅಪರಾಧಗಳು ಹೃದಯಕ್ಕೆ ಬಹಳ ನೋವನ್ನುಂಟುಮಾಡುವುದಾಗಿತ್ತು. ಅಂತಹ ಘೋರ ಅಪರಾಧಿಗಳಿಗೆ ಹಝ್ರತ್ ಪೈಗಂಬರ್(ಸ) ನೀಡಿದ ಕ್ಷಮೆಯು ಅತ್ಯಂತ ಉಜ್ವಲವಾಗಿದ್ದು ಪಾಷಾಣ ಹೃದಯನಾದ ಮನುಷ್ಯನು ಸಹ ಅದರಿಂದ ಪ್ರಭಾವಿತನಾಗದಿರಲು ಸಾಧ್ಯವಿರಲಿಲ್ಲ.

## ಹುನೈನ್ ಯುದ್ಧ

ಹಝ್ರತ್ ಪೈಗಂಬರ್(ಸ) ಮಕ್ಕವನ್ನು ಅಚಾನಕವಾಗಿ ಪ್ರವೇಶಿಸಿದ ಕಾರಣ ಮಕ್ಕದಿಂದ ಸ್ವಲ್ಪ ದೂರದಲ್ಲಿದ್ದ, ಮುಖ್ಯವಾಗಿ ದಕ್ಷಿಣ ಭಾಗದಲ್ಲಿದ್ದ ಅರಬಿ ಗೋತ್ರಗಳಿಗೆ ಈ ಘಟನೆಯ ಕುರಿತು ಅವರು ಮಕ್ಕವನ್ನು ಪ್ರವೇಶಿಸಿದ ನಂತರವೇ ತಿಳಿಯಿತು. ಈ ಘಟನೆಯನ್ನು ತಿಳಿದ ಕೂಡಲೆ ಅರಬಿ ಗೋತ್ರಗಳು ತಮ್ಮ ಸೈನ್ಯವನ್ನು ಜಮಾಯಿಸಲು ತೊಡಗಿ ಪೈಗಂಬರರನ್ನು ಎದುರಿಸಲು ಸಿದ್ಧತೆ ನಡೆಸಿದರು. ಹವಾಝಿನ್ ಮತ್ತು ಸಖೀಫ್ ಎಂಬ ಎರಡು ಅರಬಿ ಗೋತ್ರಗಳು ತಾವು ಬಹಳ ಶೌರ್ಯವಂತರೆಂದು ಯೋಚಿಸುತ್ತಿದ್ದರು. ಅವರು ಪರಸ್ಪರ ಕೂಡಲೆ ಸಮಾಲೋಚಿಸಿ ತಮ್ಮ ನಾಯಕನನ್ನಾಗಿ ಮಾಲಿಕ್ ಬಿನ್ ಔಫ್‌ನನ್ನು ಆಯ್ಕೆ ಮಾಡಿದರು. ಅನಂತರ ಅವರು ಸುತ್ತುಮುತ್ತಲೂ ಇದ್ದ ಗೋತ್ರಗಳನ್ನು ತಮ್ಮೊಂದಿಗೆ ಸೇರಲು ಆಹ್ವಾನಿಸಿದರು. ಈ ಗೋತ್ರಗಳಲ್ಲಿ ಒಂದು 'ಬನೂ ಸಅದ್ ಬಿನ್ ಬುಲೇರ್' ಆಗಿತ್ತು. ಹಝ್ರತ್ ಪೈಗಂಬರರಿಗೆ(ಸ) ಹಾಲೂಡಿಸಿದ ತಾಯಿ ಹಲೀಮ ಇದೇ ಗೋತ್ರದವರಾಗಿದ್ದರು. ಹಝ್ರತ್ ಪೈಗಂಬರ್(ಸ) ಇದೇ ಗೋತ್ರದ ಮಧ್ಯೆ ತನ್ನ ಬಾಲ್ಯವನ್ನು ಕಳೆದಿದ್ದರು.

ಈ ಗೋತ್ರಗಳು ಒಟ್ಟಿಗೆ ಸೇರಿ ಮಕ್ಕದ ಕಡೆಗೆ ಸಾಗಿದರು. ಅವರು ತಮ್ಮೊಂದಿಗೆ ತಮ್ಮ ಸಂಪತ್ತನ್ನೂ ತಮ್ಮ ಪತ್ನಿಯರನ್ನೂ ಮಕ್ಕಳನ್ನೂ ಕರೆದುಕೊಂಡು ಹೋಗಿದ್ದರು. ಅವರ ಮುಂದಾಳುಗಳೊಂದಿಗೆ, "ನೀವೇಕೆ ಹೀಗೆ ಮಾಡಿದಿರಿ?" ಎಂದು ವಿಚಾರಿಸಿದಾಗ, ಅವರು ಹೀಗೆಂದರು: "ನಾವು ಓಡಿಹೋದರೆ ನಮ್ಮ

ಪತ್ನಿಯರೂ ಮಕ್ಕಳೂ ಶತ್ರುಗಳ ಸೆರೆಯಾಳುಗಳಾಗುವರು ಮತ್ತು ನಮ್ಮ ಸಂಪತ್ತು ಕೊಳ್ಳೆ ಹೊಡೆಯಲ್ಪಡುವುದು ಎಂದು ಸೈನಿಕರು ಯೋಚಿಸಲಿ ಎಂದು ನಾವು ಹೀಗೆ ಮಾಡಿದೆವು."

ಅವರು ಎಂತಹ ದೃಢ ನಿರ್ಧಾರದೊಂದಿಗೆ ಮುಸ್ಲಿಮರನ್ನು ನಾಶ ಮಾಡಲು ಈ ಯುದ್ಧಕ್ಕೆ ಹೊರಟಿದ್ದರೆಂದು ಅವರ ಈ ಮಾತಿನಿಂದ ಸ್ಪಷ್ಟವಾಗುತ್ತದೆ. ಕೊನೆಗೆ ಈ ಸೈನ್ಯ ಅವ್‌ತಾಸ್ ಎಂಬ ಕಣಿವೆ ಪ್ರದೇಶದಲ್ಲಿ ಬಂದಿಳಿಯಿತು. ಅದು ಯುದ್ಧ ಮಾಡಲು ಅತ್ಯಂತ ಉತ್ತಮವಾದ ಕಣಿವೆ ಪ್ರದೇಶವಾಗಿತ್ತು. ಅಲ್ಲಿ ಗುಪ್ತವಾಗಿ ಆಶ್ರಯ ಪಡೆಯಬಹುದಾದ ಸ್ಥಳಗಳಿದ್ದುವು. ಅಲ್ಲಿ ಜಾನುವಾರುಗಳಿಗೆ ಮೇವು ಮತ್ತು ಮನುಷ್ಯರಿಗೆ ಕುಡಿಯಲು ನೀರು ಇತ್ತು. ಕುದುರೆಯೋಡಿಸಲು ಭೂಮಿ ಬಹಳ ಉತ್ತಮವಾಗಿತ್ತು.

ಹಝ್ರತ್ ಪೈಗಂಬರರಿಗೆ(ಸ) ಈ ವಾರ್ತೆ ತಲಪಿದಾಗ ಅವರು ತನ್ನ ಶಿಷ್ಯರಾದ ಅಬ್ದುಲ್ಲಾ ಬಿನ್ ಅಬೀ ಹದ್‌ರದರನ್ನು ಈ ಸೈನ್ಯದ ಕುರಿತು ಮಾಹಿತಿಯನ್ನು ಸಂಗ್ರಹಿಸಲು ಕಳುಹಿಸಿದರು. ಅಬ್ದುಲ್ಲಾ ಬಂದು, ಸೈನ್ಯ ಅಲ್ಲಿ ಜಮಾಯಿಸಿದೆ ಎಂದೂ ಅವರು ಹೋರಾಡಲೂ ಸಾಯಲೂ ಸಿದ್ಧರಾಗಿದ್ದಾರೆಂದೂ ತಿಳಿಸಿದರು.

ಆ ಜನರು ಬಾಣ ಹೂಡುವುದರಲ್ಲಿ ನಿಷ್ಣಾತರಾಗಿದ್ದರು. ಅವರು ಶಿಬಿರ ಹೂಡಿದ ಪ್ರದೇಶದಲ್ಲಿ ಯುದ್ಧ ಮಾಡಬಹುದಾದ ಕ್ಷೇತ್ರ ಬಹಳ ಸೀಮಿತವಾಗಿತ್ತು. ಅಲ್ಲಿಗೆ ಬಂದು ಆಕ್ರಮಣ ಮಾಡುವವರು ಸುಲಭವಾಗಿ ಬಾಣಗಳಿಗೆ ಗುರಿಯಾಗಲು ಸಾಧ್ಯವಿತ್ತು.

ಹಝ್ರತ್ ಪೈಗಂಬರ್(ಸ) ಮಕ್ಕದ ಒಬ್ಬ ಬಹಳ ದೊಡ್ಡ ವ್ಯಾಪಾರಿಯೂ ಶ್ರೀಮಂತನೂ ಆಗಿದ್ದ ಸಫ್‌ವಾನ್ ಎಂಬ ಮುಂದಾಳುವಿನಿಂದ ಯುದ್ಧಕ್ಕಾಗಿ ಆಯುಧ ಮತ್ತು ಹಣವನ್ನು ಕೇಳಿದರು: ಸಫ್‌ವಾನ್ ಹೇಳಿದರು: "ನೀವು ನಿಮ್ಮ ಅಧಿಕಾರದ ದರ್ಪದಿಂದ ನನ್ನ ಸಂಪತ್ತನ್ನು ಕಿತ್ತುಕೊಳ್ಳಲು ಬಯಸುತ್ತೀರೇನು?"

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾವು ನಿಮ್ಮ ಸಂಪತ್ತನ್ನು ಕಿತ್ತುಕೊಳ್ಳಲು ಬಯಸುವುದಿಲ್ಲ. ನಾವು ನಿಮ್ಮಿಂದ ಸಾಲವಾಗಿ ಪಡೆದುಕೊಳ್ಳಲು ಇಚ್ಛಿಸುತ್ತೇವೆ. ಅದಕ್ಕೆ ಖಾತರಿ ನೀಡಲು ಸಹ ಸಿದ್ಧರಾಗಿದ್ದೇವೆ."

ಆಗ ಸಫ್‌ವಾನ್ ಹೇಳಿದರು: "ಹಾಗಾದರೆ ಸರಿ. ನೀವು ನನ್ನಿಂದ ನೀವು ಅಪೇಕ್ಷಿಸುವುದನ್ನು ಪಡೆದುಕೊಳ್ಳಿರಿ."

ಹಝ್ರತ್ ಪೈಗಂಬರ್(ಸ) ಸಫ್‌ವಾನ್‌ರಿಂದ ಒಂದು ನೂರು ಯುದ್ಧ ಕವಚಗಳನ್ನೂ ಅವುಗಳಿಗೆ ಬೇಕಾದ ಆಯುಧಗಳನ್ನೂ ಮೂರು ಸಾವಿರ ನಾಣ್ಯಗಳನ್ನೂ ಸಾಲವಾಗಿ ಪಡೆದರು. ಅವರು ತನ್ನ ಚಿಕ್ಕಪ್ಪನ ಪುತ್ರರಾದ ನೌಫಲ್ ಬಿನ್ ಹಾರಿಸ್‌ರಿಂದ ಮೂರುಸಾವಿರ ಈಟಿಗಳನ್ನೂ ಸಾಲವಾಗಿ ಪಡೆದುಕೊಂಡರು.

ಸೈನ್ಯವು ಹವಾಝಿನ್ ಗೋತ್ರದವರನ್ನು ಎದುರಿಸಲು ಹೊರಟಾಗ ಮಕ್ಕದವರು,



ತಾವು ಇನ್ನೂ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿಲ್ಲವಾದರೂ ತಾವು ಇಸ್ಲಾಮೀ ಸರಕಾರದ ಅಧೀನಕ್ಕೆ ಒಳಪಟ್ಟಿರುವುದರಿಂದ ತಮಗೆ ಯುದ್ಧದಲ್ಲಿ ಭಾಗವಹಿಸುವ ಅವಕಾಶವನ್ನು ನೀಡಬೇಕು ಎಂದು ಹೇಳಿದರು. ಅವರಿಗೆ ಸಮ್ಮತಿ ದೊರೆತ ಕಾರಣ ಎರಡು ಸಾವಿರ ಯೋಧರು ಮಕ್ಕದಿಂದ ಹಝ್ರತ್ ಪೈಗಂಬರರ(ಸ) ಸೈನ್ಯದ ಜೊತೆಗೆ ಹೊರಟರು. ಮಾರ್ಗ ಮಧ್ಯದಲ್ಲಿ ಝಾತ್ ಅನ್‌ವಾತ್ ಎಂಬ ಯಾತ್ರಾ ಸ್ಥಳವನ್ನು ದಾಟಿ ಹೋಗಲಿಕ್ಕಿದ್ದಿತು. ಅಲ್ಲೊಂದು ಬೇರಿ ಹಣ್ಣಿನ ಪುರಾತನವಾದ ಮರವಿತ್ತು. ಅದನ್ನು ಪವಿತ್ರವೆಂದು ಅರಬಿಗಳು ಗಣಿಸುತ್ತಿದ್ದರು. ಅರಬಿ ಶೂರರು ಯಾವುದಾದರೂ ಹೊಸ ಆಯುಧವನ್ನು ಖರೀದಿಸಿದರೆ ಅದನ್ನು ಆ ಮರಕ್ಕೆ ತೂಗಾಡಿಸಿ ಅದಕ್ಕೆ ಅನುಗ್ರಹ ದೊರಕುವುದೆಂದು ಭಾವಿಸುತ್ತಿದ್ದರು. ಹಝ್ರತ್ ಪೈಗಂಬರರ(ಸ) ಶಿಷ್ಯರು ಆ ಮರದ ಸಮೀಪ ದಾಟಿ ಹೋಗುತ್ತಿದ್ದಾಗ ಅವರಲ್ಲಿ ಕೆಲವರು ಹೇಳಿದರು: "ನಮಗೆ ಸಹ ಒಂದು ಝಾತ್ ಅನ್‌ವಾತ್ ಬೇಕಾಗಿದೆ."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನೇ ದೊಡ್ಡವನು, ನೀವು ಹೇಳುವುದು ಹಝ್ರತ್ ಮೂಸಾರವರ(ಅ) ಸಮುದಾಯದವರ ಮಾತಿನ ಹಾಗಿದೆ. ಆ ಜನರು ಕನ್‌ಆನ್ ಕಡೆಗೆ ಹೋದಾಗ ಕನ್‌ಆನಿನ ನಿವಾಸಿಗಳು ಮೂರ್ತಿ ಪೂಜೆ ಮಾಡುವುದಾಗಿ ಅವರು ಕಂಡರು. ಅವರು ಮೂಸಾರೊಂದಿಗೆ ಹೇಳಿದರು: 'ಓ ಮೂಸಾ, ಈ ಜನರಿಗೆ ಆರಾಧ್ಯ ದೇವತೆಗಳು ಇರುವ ಹಾಗೆ ನಮಗೆ ಸಹ ಯಾವುದಾದರೂ ಆರಾಧ್ಯ ದೇವನನ್ನು ಮಾಡಿಕೊಡಿರಿ.' " (ಪವಿತ್ರ ಖುರ್‌ಆನ್ 7:139)

ಹಝ್ರತ್ ಪೈಗಂಬರ್(ಸ) ಮುಂದುವರಿಸುತ್ತಾ ಹೇಳಿದರು: "ಇವೆಲ್ಲಾ ಅಜ್ಞಾನದ ಮಾತುಗಳಾಗಿವೆ. ಇಂತಹ ಊಹಾಪೋಹಗಳ ಕಾರಣದಿಂದ ನಿಮ್ಮವರಲ್ಲಿ ಒಂದು ಗುಂಪು ಇಂತಹದೇ ಕೆಲಸಗಳನ್ನು ಮಾಡಲು ತೊಡಗುವರೋ ಎಂದು ನಾನು ಭಯಪಡುತ್ತೇನೆ."

ಇಂದಿನ ಕಾಲದಲ್ಲಿ ಯುದ್ಧ ಮಾಡಲು ರಹಸ್ಯ ಕಂದಕ (ಬಂಕರ್)ಗಳನ್ನು ನಿರ್ಮಿಸುವ ಹಾಗೆ ಹವಾಝಿನ್ ಮತ್ತು ಅವರ ಸಹಕಾರಿಗಳು ಒಂದು ರಹಸ್ಯ ಅಡಗುದಾಣವನ್ನು, ಮುಸ್ಲಿಮರನ್ನು ಆಕ್ರಮಿಸಲು ನಿರ್ಮಿಸಿದ್ದರು. ಇಸ್ಲಾಮೀ ಸೈನ್ಯ ಹುನೈನ್ ತಲಪಿದಾಗ ಹವಾಝಿನ್ ಸೈನ್ಯದವರು ಚಿಕ್ಕಚಿಕ್ಕ ಮಣ್ಣು ದಿಬ್ಬಗಳನ್ನು ನಿರ್ಮಿಸಿ ಅವುಗಳ ಹಿಂದೆ ಅವಿತು ಕುಳಿತುಕೊಂಡಿದ್ದರು. ಮಧ್ಯದಲ್ಲಿ ಒಂದು ಅಗಲ ಕಿರಿದಾದ ರಸ್ತೆಯನ್ನು ಮುಸ್ಲಿಮರಿಗೆ ತೆರೆದಿಟ್ಟಿದ್ದರು. ಹೆಚ್ಚಿನ ಸೈನಿಕರು ದಿಬ್ಬಗಳ ಹಿಂದೆ ಅವಿತು ಕುಳಿತುಕೊಂಡಿದ್ದರು. ಕೆಲವು ಸೈನಿಕರು ಒಂಟೆ ಮೊದಲಾದುವುಗಳ ಮುಂದೆ ಸಾಲಾಗಿ ನಿಂತಿದ್ದರು. ಈ ಸೈನ್ಯವನ್ನು ಮುಸ್ಲಿಮರು ನೋಡಿ ಶತ್ರು ಸೈನಿಕರು ಇಷ್ಟೇ ಇರುವರೆಂದು ಭಾವಿಸುತ್ತಾ ಅವರನ್ನು ಆಕ್ರಮಿಸಲು ಮುಂದೆ ಸಾಗಿದರು. ಮುಸ್ಲಿಮರು ಸಾಕಷ್ಟು ಮುಂದೆ ಸಾಗಿ ಬಂದಾಗ ಅವಿತು

ಕೊಂಡಿದ್ದ ಸೈನಿಕರು ತಾವು ಈಗ ಚೆನ್ನಾಗಿ ಆಕ್ರಮಣ ಮಾಡಬಲ್ಲೆವು ಎಂದು ತಿಳಿದುಕೊಂಡಾಗ ಅವರು ಅವಿತು ಕೊಂಡಲ್ಲಿಂದ ಬಾಣ ಪ್ರಯೋಗ ಮಾಡತೊಡಗಿದರು ಮತ್ತು ಮುಂದೆ ನಿಂತಿದ್ದ ಸೈನಿಕರೂ ಆಕ್ರಮಣವನ್ನು ಪ್ರಾರಂಭಿಸಿದರು. ತಮಗೆ ತಮ್ಮ ಶೌರ್ಯ ಪ್ರಕಟಿಸಲು ಈ ದಿನ ಸಂದರ್ಭ ಸಿಗುವುದೆಂದು ಯೋಚಿಸಿ ಬಂದಿದ್ದ ಮಕ್ಕದವರು ಎರಡು ಕಡೆಯ ಆಕ್ರಮಣಗಳನ್ನು ಎದುರಿಸಲಾಗದೆ ಮಕ್ಕದ ಕಡೆಗೆ ಓಡಿಹೋದರು. ಮುಸ್ಲಿಮರು ಇಂತಹ ಕಷ್ಟದ ಅನುಭವವನ್ನು ಮುಂಚೆ ಸಹ ಹೊಂದಿದವರಾಗಿದ್ದರು. ಆದರೆ ಅವರ ಸೈನ್ಯದಿಂದ ಎರಡು ಸಾವಿರ ಒಂಟೆ ಮತ್ತು ಕುದುರೆಗಳು ಫಕ್ಕನೆ ಓಡಿ ಹೋದುದರಿಂದ ಮುಸ್ಲಿಮರ ಕುದುರೆ ಮತ್ತು ಒಂಟೆಗಳು ಸಹ ಹೆದರಿದುವು ಮತ್ತು ಎಲ್ಲಾ ಸೈನ್ಯವು ಹಿಂದಕ್ಕೆ ಕೂಡಲೆ ಓಡಲು ತೊಡಗಿತು. ಮೂರು ಕಡೆಗಳಿಂದ ಆಕ್ರಮಿಸಲ್ಪಟ್ಟಾಗ, ಅಲ್ಲಿ ಒಂದು ಕಡೆ ಹಝ್ರತ್ ಪೈಗಂಬರ್(ಸ) ಮತ್ತು ಅವರ ಹನ್ನೆರಡು ಮಂದಿ ಶಿಷ್ಯರು ನಿಂತಿದ್ದರು. ಇದರ ಅರ್ಥ ಉಳಿದ ಎಲ್ಲ ಶಿಷ್ಯರೂ ಓಡಿ ಹೋದರೆಂದಲ್ಲ. ಅಂದಾಜು ಒಂದು ನೂರರಷ್ಟು ಸೈನಿಕರು ಅಲ್ಲಿ ಯುದ್ಧ ಕ್ಷೇತ್ರದಲ್ಲಿ ನಿಂತಿದ್ದರು. ಆದರೆ ಅವರು ಹಝ್ರತ್ ಪೈಗಂಬರ್(ಸ) ನಿಂತಲ್ಲಿಂದ ದೂರ ಇದ್ದರು. ಹಝ್ರತ್ ಪೈಗಂಬರರ(ಸ) ಸುತ್ತುಮುತ್ತು ಇದ್ದುದು ಬರೇ ಹನ್ನೆರಡು ಮಂದಿ.

ಒಬ್ಬ ಶಿಷ್ಯ ಈ ಸನ್ನಿವೇಶದ ಬಗ್ಗೆ ಹೀಗೆ ಹೇಳುತ್ತಾರೆ: "ನಾನು ಮತ್ತು ನನ್ನ ಸಂಗಡಿಗರು ನಮ್ಮ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ನಮ್ಮ ಸವಾರಿ ಮೃಗಗಳನ್ನು ಯುದ್ಧದ ಮೈದಾನಕ್ಕೆ ತಿರುಗಿಸಲು ಎಷ್ಟು ಪ್ರಯತ್ನಿಸಿದರೂ ಎರಡು ಸಾವಿರ ಒಂಟೆ, ಕುದುರೆಗಳು ಓಡಿಹೋದುದರಿಂದ ಅವು ಬಹಳ ಹೆದರಿದ್ದುವು. ನಮ್ಮ ಕೈಗಳಲ್ಲಿರುವ ಕಡಿವಾಣದ ಹಗ್ಗವನ್ನು ಎಳೆದೆಳೆದು ನಮ್ಮ ಕೈಗಳು ಗಾಯಗೊಳ್ಳುತ್ತಿದ್ದವು. ಆದರೆ ಒಂಟೆ, ಕುದುರೆಗಳು ರಣರಂಗಕ್ಕೆ ಮರಳಿಹೋಗಲು ಒಪ್ಪುತ್ತಿರಲಿಲ್ಲ. ಕೆಲವು ಸಾರಿ ನಾವು ಸವಾರಿ ಮೃಗದ ಹಗ್ಗವನ್ನು ಎಷ್ಟು ತೀವ್ರವಾಗಿ ಎಳೆದೆವೆಂದರೆ, ಸವಾರಿ ಮೃಗದ ತಲೆಯು ಅದರ ಬೆನ್ನಿಗೆ ಬಂದು ತಾಗುತ್ತಿತ್ತು. ಅನಂತರ ನಾವು ಹಿಂಗಾಲುಗಳಿಂದ ತಿವಿದು ಅವುಗಳನ್ನು ರಣರಂಗಕ್ಕೆ ತಿರುಗಿಸಲು ಪ್ರಯತ್ನಿಸಿದಾಗ, ಅವುಗಳು ಇನ್ನಷ್ಟು ವೇಗವಾಗಿ ರಣರಂಗದಿಂದ ದೂರ ಓಡುತ್ತಿದ್ದುವು. ಹಝ್ರತ್ ಪೈಗಂಬರರ ಸ್ಥಿತಿ ಏನಾಗಿರಬಹುದೆಂದು ನಮ್ಮ ಹೃದಯ ಬಡಿದುಕೊಳ್ಳುತ್ತಿತ್ತು. ಆದರೆ ನಾವು ಏನನ್ನೂ ಮಾಡಲು ಅಸಮರ್ಥರಾಗಿದ್ದೆವು."

ಹಝ್ರತ್ ಪೈಗಂಬರರ(ಸ) ಶಿಷ್ಯರ ಸ್ಥಿತಿ ಹೀಗಿರುವಾಗ ಅವರು ಕೆಲವು ಜನರೊಂದಿಗೆ ರಣರಂಗದಲ್ಲಿ ನಿಂತಿದ್ದರು. ಅವರ ಮುಂಭಾಗದಿಂದಲೂ ಎಡಬಲಭಾಗಗಳಿಂದಲೂ ಬಾಣಗಳು ಬಂದು ಬೀಳುತ್ತಿದ್ದವು. ಹಿಂಭಾಗದಲ್ಲಿ ಒಂದು ಕಿರಿದಾದ ದಾರಿ ಇತ್ತು. ಅದರ ಮೂಲಕ ಕೆಲವೇ ಜನರು ಒಟ್ಟಿಗೆ ದಾಟಿ ಹೋಗಲು ಸಾಧ್ಯವಿತ್ತು. ಆದರೆ ಆ ದಾರಿಯ ಹೊರತು ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಬೇರೆ ಮಾರ್ಗ ಇರಲಿಲ್ಲ. ಆಗ ಹಝ್ರತ್ ಅಬೂಬಕರ್(ರ) ತನ್ನ ಸವಾರಿ ಮೃಗದಿಂದ ಇಳಿದು ಹಝ್ರತ್ ಪೈಗಂಬರರ ಹೇಸರಗತ್ತೆಯ ಹಗ್ಗವನ್ನು ಹಿಡಿದು



ಹೇಳಿದರು:

"ಅಲ್ಲಾಹನ ಪೈಗಂಬರರೇ, ನೀವು ಸ್ವಲ್ಪ ಸಮಯ ಹಿಂದೆ ಸರಿದು ನಿಲ್ಲಿರಿ, ಅಷ್ಟರೊಳಗೆ ಇಸ್ಲಾಮೀ ಸೈನ್ಯ ಇಲ್ಲಿಗೆ ಬಂದು ಜಮಾಯಿಸುವುದು."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅಬೂಬಕರ್, ನನ್ನ ಹೇಸರಗತ್ತೆಯ ಹಗ್ಗವನ್ನು ಬಿಟ್ಟುಬಿಡಿ." ಅವರು ಹೇಸರಗತ್ತೆಗೆ ಹಿಮ್ಮಡಿಗಳಿಂದ ತುಳಿದು ಶತ್ರು ಸೈನಿಕರು ಅವಿತು ಕೊಂಡು ಬಾಣ ಬಿಡುತ್ತಿದ್ದ ಪ್ರದೇಶದಲ್ಲಿದ್ದ ಅಗಲ ಕಿರಿದಾದ ರಸ್ತೆಯಲ್ಲಿ ಮುಂದೆ ಸಾಗಿದರು.

ಅವರು ಹೀಗೆ ಹೇಳಿದರು: "ಅನನ್ನಬಿಯ್ಯು ಲಾ ಕಝಿಬ್. ಅನಬ್ನು ಅಬ್ದುಲ್ ಮುತ್ತಲಿಬ್." – "ನಾನು ಪ್ರವಾದಿ ಆಗಿದ್ದೇನೆ. ಇದು ಸುಳ್ಳು ಮಾತು ಅಲ್ಲ. ನಾನು ಅಬ್ದುಲ್ ಮುತ್ತಲಿಬರ ಸಂತಾನಕ್ಕೆ ಸೇರಿದವನಾಗಿದ್ದೇನೆ."

ಅವರು ಹೇಳಿದುದರ ಉದ್ದೇಶಾರ್ಥ ಹೀಗೆ: ನಾನು ಅಲ್ಲಾಹನಿಂದ ನೇಮಿಸಲ್ಪಟ್ಟ ಪ್ರವಾದಿಯಾಗಿದ್ದೇನೆ. ನಾನು ಸುಳ್ಳುಗಾರನಲ್ಲ. ನಾನು ಶತ್ರುಗಳಿಂದ ಸುತ್ತುವರಿಯಲ್ಪಟ್ಟಿದ್ದರೂ ನಾನು ಶತ್ರುಗಳ ಆಕ್ರಮಣಗಳಿಂದ ಸುರಕ್ಷಿತನಾಗಿರುವುದು ನನ್ನಲ್ಲಿ ದೈವತ್ವದ ಶಕ್ತಿ ಇರುವ ಕಾರಣದಿಂದಲ್ಲ. ನಾನು ಮನುಷ್ಯನೇ ಆಗಿರುವೆನು. ನಾನು ಅಬ್ದುಲ್ ಮುತ್ತಲಿಬರ ಮೊಮ್ಮಗ ಆಗಿರುವೆನು.

ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ಬಾಸ್‌ರನ್ನು ಕರೆದರು. ಅವರ ಧ್ವನಿ ಬಹಳ ಉಚ್ಚಮಟ್ಟದಾಗಿತ್ತು. ಅವರೊಂದಿಗೆ ಹಝ್ರತ್ ಪೈಗಂಬರ್(ಸ) ಹೇಳಿದರು:

"ನೀವು ಉಚ್ಚ ಧ್ವನಿಯಲ್ಲಿ ಹೀಗೆ ಕೂಗಿ ಹೇಳಿರಿ. ಹುದೈಬಿಯಾ ಸಂಧಿಯ ದಿನ ಮರದ ಕೆಳಗೆ ನಿಷ್ಠೆಯ ಪ್ರತಿಜ್ಞೆ ಮಾಡಿದ ಶಿಷ್ಯರೇ, ಪವಿತ್ರ ಖುರ್‌ಆನಿನ ಸೂರತುಲ್ ಬಖರ ಅವತೀರ್ಣವಾದ ಕಾಲದಿಂದಲೇ ಮುಸ್ಲಿಮರಾದವರೇ, ನಿಮ್ಮನ್ನು ಅಲ್ಲಾಹನ ಪೈಗಂಬರರು ಕರೆಯುತ್ತಿದ್ದಾರೆ."

ಹಝ್ರತ್ ಅಬ್ಬಾಸ್(ರ) ಅತ್ಯಂತ ಉಚ್ಚ ಧ್ವನಿಯಲ್ಲಿ ಹಝ್ರತ್ ಪೈಗಂಬರರ ಸಂದೇಶವನ್ನು ಕೂಗಿ ಹೇಳಿದಾಗ ಪೈಗಂಬರರ(ಸ) ಶಿಷ್ಯರ ಸ್ಥಿತಿ ಹೇಗಿತ್ತೆಂದು ಅವರ ಸ್ವಂತ ಮಾತುಗಳಿಂದ ಮಾತ್ರ ಅಂದಾಜು ಮಾಡಲು ಸಾಧ್ಯ.

ನಾನು ಮೇಲೆ ಉಲ್ಲೇಖಿಸಿದ ಅದೇ ಶಿಷ್ಯರು ಹೀಗೆ ಹೇಳುತ್ತಾರೆ: "ನಾವು ಕುದುರೆಗಳನ್ನೂ ಒಂಟೆಗಳನ್ನೂ ಮರಳಿ ತರಲು ಶತ ಪ್ರಯತ್ನ ಮಾಡುತ್ತಿದ್ದಾಗ ಹಝ್ರತ್ ಅಬ್ಬಾಸರ ಧ್ವನಿ ನಮ್ಮ ಕಿವಿಗಳಿಗೆ ಬಂದು ಅಪ್ಪಳಿಸಿತು. ನಮಗೆ ಹೇಗೆ ಅನಿಸಿತೆಂದರೆ, ನಾವು ಈ ಲೋಕದಲ್ಲಿಲ್ಲ, ಪರಲೋಕದಲ್ಲಿ ಅಲ್ಲಾಹನ ಮುಂದೆ ನಿಂತಿದ್ದೇವೆಂದೂ ಅಲ್ಲಾಹನ ದಿವ್ಯದೂತರು ನಮ್ಮ ಲೆಕ್ಕ ತೆಗೆಯಲು ಕರೆಯುತ್ತಿದ್ದಾರೆಂದೂ. ಆಗ ನಮ್ಮಲ್ಲಿ ಕೆಲವರು ತಮ್ಮ ಖಡ್ಗಗಳನ್ನೂ ಗುರಾಣಿಗಳನ್ನೂ ಹಿಡಿದುಕೊಂಡು ಒಂಟೆಗಳಿಂದ ಕೆಳಗೆ ಹಾರಿದರು. ಕೆಲವರು ಹೆದರಿದ ಒಂಟೆಗಳನ್ನು

ಅಲೆದಾಡಲು ಬಿಟ್ಟರು. ಕೆಲವರು ಖಡ್ಗದಿಂದ ತಮ್ಮ ಒಂಟೆಗಳ ಕತ್ತುಗಳನ್ನು ಕಡಿದು ಹಾಕಿ ಹಝ್ರತ್ ಪೈಗಂಬರರ ಕಡೆಗೆ ಪಾದಚಾರಿಗಳಾಗಿ ಓಡಿಹೋದರು. ಒಂಟೆಮರಿ ಮತ್ತು ಹಸುವಿನ ಕರು ಕೂಗುವಾಗ ಅವುಗಳ ತಾಯಿ ಒಂಟೆ ಮತ್ತು ಹಸು ಅವುಗಳ ಕಡೆಗೆ ಓಡಿಹೋಗುವ ಹಾಗೆ ಹಝ್ರತ್ ಪೈಗಂಬರರ ಕಡೆಗೆ ಆ ದಿನ ಮದೀನದ ಶಿಷ್ಯರು ಓಡುತ್ತಿದ್ದರು."

ಸ್ವಲ್ಪವೇ ಸಮಯದೊಳಗೆ ಶಿಷ್ಯರು, ವಿಶಿಷ್ಟವಾಗಿ ಮದೀನದ ಶಿಷ್ಯರು ಹಝ್ರತ್ ಪೈಗಂಬರರನ್ನು ಸುತ್ತುವರಿದು ನಿಂತು ಹೋರಾಡಿದರು ಮತ್ತು ಶತ್ರುಗಳನ್ನು ಸೋಲಿಸಿದರು.

ಹಝ್ರತ್ ಪೈಗಂಬರರ(ಸ) ಪರಿಶುದ್ಧ ಶಕ್ತಿ ಸಾಮರ್ಥ್ಯದ ಈ ದೃಷ್ಟಾಂತ ನೋಡಿರಿ. ಕೆಲವೇ ದಿನಗಳ ಹಿಂದೆ ಅವರ ಕಠಿಣ ಶತ್ರುವಾಗಿದ್ದ ಮತ್ತು ಅವರಿಗೆದುರಾಗಿ ಶತ್ರು ಸೈನ್ಯದ ಸೇನಾಧಿಪತಿಯಾಗಿದ್ದ ಅಬೂ ಸುಫ್ಯಾನ್ ಇಂದು ಹುನೈನ್ ಯುದ್ಧದಲ್ಲಿ ಅವರೊಂದಿಗೆ ಸೇರಿ ಹೋರಾಡಿದರು. ಅವಿಶ್ವಾಸಿಗಳಾಗಿದ್ದ ಮಕ್ಕದ ಸೈನಿಕರ ಒಂಟೆಗಳು ಹಿಂದಕ್ಕೆ ಓಡಿದಾಗ ಅತ್ಯಂತ ಬುದ್ಧಿಶಾಲಿಯೂ ಜಾಗರೂಕನೂ ಆಗಿದ್ದ ಅವರು ತನ್ನ ಕುದುರೆ ಸಹ ಹೆದರಿಕೆಯಿಂದ ಹಿಂದಕ್ಕೆ ಓಡಬಹುದೆಂದು ಗ್ರಹಿಸಿದ ಕೂಡಲೆ ಕುದುರೆಯಿಂದ ಕೆಳಗೆ ಹಾರಿ ಹಝ್ರತ್ ಪೈಗಂಬರರ ಹೇಸರಗತ್ತೆಯ ಕಡಿವಾಣ ಹಿಡಿದು ನಡೆಯುತ್ತಾ ಮುಂದೆ ಸಾಗಿದರು.

ಅಬೂ ಸುಫ್ಯಾನ್ ಹೀಗೆ ಹೇಳುತ್ತಾರೆ: "ಆಗ ಹಿರಿದ ಖಡ್ಗ ನನ್ನ ಕೈಯ್ಯಲ್ಲಿತ್ತು. ಹೃದಯದ ರಹಸ್ಯಗಳನ್ನು ಅರಿತಿರುವ ಅಲ್ಲಾಹನಾಣೆ! ನನ್ನನ್ನು ಕೊಲ್ಲದೆ ಯಾರೂ ಹಝ್ರತ್ ಪೈಗಂಬರರನ್ನು ಸಮೀಪಿಸಲಾರರೆಂದು ನಾನು ದೃಢವಾಗಿ ನಿರ್ಧರಿಸಿ, ನಾನು ಹಝ್ರತ್ ಪೈಗಂಬರರ ಹೇಸರಗತ್ತೆಯ ಸಮೀಪ ನಿಂತಿದ್ದೆನು. ಆಗ ಹಝ್ರತ್ ಪೈಗಂಬರ್(ಸ) ಆಶ್ಚರ್ಯಚಕಿತರಾಗಿ ನನ್ನನ್ನು ನೋಡುತ್ತಿದ್ದರು."

(ಪ್ರಾಯಶಃ ಹಝ್ರತ್ ಪೈಗಂಬರ್(ಸ) ಹೀಗೆ ಯೋಚಿಸುತ್ತಾ ಇದ್ದಿರಬಹುದು. ಕೇವಲ ಹದಿನೈದು ದಿನಗಳ ಹಿಂದೆ ಈ ಮನುಷ್ಯ ಮಕ್ಕದವರ ಸೈನ್ಯವನ್ನು ಮುನ್ನಡೆಸಿಕೊಂಡು ನನ್ನನ್ನು ಕೊಲ್ಲಲು ಹೊರಡುವವನಾಗಿದ್ದರು. ಆದರೆ ಕೆಲವೇ ದಿನಗಳಲ್ಲಿ ಅಲ್ಲಾಹನು ಅವರ ಹೃದಯದಲ್ಲಿ ಎಂತಹ ಪರಿವರ್ತನೆ ಉಂಟುಮಾಡಿದನೆಂದರೆ, ಮಕ್ಕದ ಸೇನಾಧಿಪತಿ ಒಬ್ಬ ಸಾಮಾನ್ಯ ಸೈನಿಕನ ಹಾಗೆ ನನ್ನ ಹೇಸರಗತ್ತೆಯ ಕಡಿವಾಣ ಹಿಡಿದು ನಿಂತಿದ್ದಾರೆ. ಅವರ ಮುಖಭಾವ ನೋಡುವಾಗ ಅವರು ಇಂದು ಪ್ರಾಣತೆತ್ತು ತನ್ನ ಪಾಪದೋಷಗಳಿಗೆ ಪರಿಹಾರ ಮಾಡಿಕೊಳ್ಳಲು ಸಿದ್ಧನಾಗಿರುವಂತೆ ಭಾಸವಾಗುತ್ತದೆ.)

ಹಝ್ರತ್ ಪೈಗಂಬರ್(ಸ) ಅಬೂ ಸುಫ್ಯಾನರನ್ನು ಆಶ್ಚರ್ಯ ಚಕಿತರಾಗಿ ನೋಡುತ್ತಿದ್ದಾಗ ಹಝ್ರತ್ ಅಬ್ಬಾಸ್(ರ) ಅದನ್ನು ನೋಡಿ ಹೇಳಿದರು:



"ಅಲ್ಲಾಹನ ಪೈಗಂಬರರೇ, ಅಬೂ ಸುಫ್ಯಾನ್ ನಿಮ್ಮ ಚಿಕ್ಕಪ್ಪನವರ ಮಗನೂ ನಿಮ್ಮ ಸಹೋದರನೂ ಆಗಿರುವರು. ಈ ದಿನ ನೀವು ಅವರ ವರ್ತನೆಯಿಂದ ಸಂತೋಷಪಡಿರಿ."

ಹಝ್ರತ್ ಪೈಗಂಬರ್(ಸ) ಹೇಳಿದರು: "ಅಬೂ ಸುಫ್ಯಾನ್ ನನ್ನ ವಿರುದ್ಧ ಮಾಡಿದ ಎಲ್ಲಾ ದುಷ್ಕೃತ್ಯಗಳನ್ನು ಅಲ್ಲಾಹನು ಕ್ಷಮಿಸಲಿ."

ಅಬೂ ಸುಫ್ಯಾನ್ ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ನನ್ನನ್ನು ಸಂಬೋಧಿಸಿ 'ಓ ನನ್ನ ಸಹೋದರ' ಎಂದು ಹೇಳಿದಾಗ ನಾನು ಪ್ರೀತಿಯ ಉತ್ಸಾಹದಿಂದ ಹೇಸರಗತ್ತೆಯ ರಿಕಾಪಿನಲ್ಲಿದ್ದ ಅವರ ಕಾಲನ್ನು ಚುಂಬಿಸಿದೆ."

ಹಝ್ರತ್ ಪೈಗಂಬರ್(ಸ) ತಾತ್ಕಾಲಿಕ ಉಪಯೋಗಕ್ಕೋಸರ ಸಾಲವಾಗಿ ಪಡೆದಿದ್ದ ಯುದ್ಧ ಸಾಮಗ್ರಿಗಳನ್ನು ಅವುಗಳ ಮಾಲೀಕರಿಗೆ ಹುನೈನ್ ಯುದ್ಧದ ನಂತರ ಹಿಂದಿರುಗಿಸಿದರು. ಅದರೊಂದಿಗೆ ಬಹಳ ಬಹುಮಾನಗಳನ್ನೂ ಆದರದಿಂದ ನೀಡಿದರು. ಆಗ ಆ ಜನರು ಈ ವ್ಯಕ್ತಿ ಈ ಕಾಲದ ಸಾಮಾನ್ಯ ಜನರ ಹಾಗೆ ಅಲ್ಲ ಎಂದು ಗ್ರಹಿಸಿದರು. ಸಫ್ವಾನ್ ಕೂಡಲೇ ಮುಸ್ಲಿಮರಾದರು.

ಈ ಯುದ್ಧಕ್ಕೆ ಸಂಬಂಧಿಸಿ ಒಂದು ವಿಚಿತ್ರ ಘಟನೆ ಸಹ ಚರಿತ್ರೆಗಳಲ್ಲಿ ಬರೆಯಲ್ಪಟ್ಟಿದೆ. ಶೈಬ ಎಂಬವರು ಮಕ್ಕದ ನಿವಾಸಿಯೂ ಪವಿತ್ರ ಕಅ್‌ಬದ ಸೇವೆಗಾಗಿ ನೇಮಿಸಲ್ಪಟ್ಟವರೂ ಆಗಿದ್ದರು. ಅವರು ಹೀಗೆ ಹೇಳುತ್ತಾರೆ:

"ನಾನು ಸಹ ಆ ಯುದ್ಧದಲ್ಲಿ ಭಾಗವಹಿಸಿದೆ. ಸೈನ್ಯಗಳು ಪರಸ್ಪರ ಎದುರು ಬದುರಾಗಿ ನಿಂತಾಗ ಸಂದರ್ಭ ನೋಡಿ ಹಝ್ರತ್ ಪೈಗಂಬರರನ್ನು ಕೊಲ್ಲಲು ನಾನು ಸಂಕಲ್ಪ ಮಾಡಿದ್ದೆ. ಅರಬಿಗಳೂ ಅರಬಿಯೇತರರೂ ಮಾತ್ರವಲ್ಲ, ಲೋಕದ ಎಲ್ಲಾ ಜನರು ಸಹ ಮುಹಮ್ಮದರ ಧರ್ಮದಲ್ಲಿ ಸೇರಿದರೂ ನಾನು ಅದರಲ್ಲಿ ಸೇರಲಾರೆನೆಂದು ನಾನು ಮನಸ್ಸಿನಲ್ಲಿ ಹೇಳಿದೆ. ಯುದ್ಧವು ತೀವ್ರವಾಗಿ ಎರಡು ಕಡೆಯವರು ಪರಸ್ಪರ ಎದುರಿಸುತ್ತಾ ಹೋರಾಡುತ್ತಿದ್ದಾಗ ನಾನು ಖಡ್ಗವನ್ನು ಒರೆಯಿಂದ ತೆಗೆದು ಹಝ್ರತ್ ಪೈಗಂಬರರ ಸಮೀಪ ಹೋಗಲು ತೊಡಗಿದೆನು. ಆಗ ನನಗೆ, ನನ್ನ ಮತ್ತು ಅವರ ನಡುವೆ ಬೆಂಕಿಯ ಒಂದು ಜ್ವಾಲೆ ಮೇಲೇಳುತ್ತಿರುವುದಾಗಿ ಕಾಣಿಸಿತು. ಅದು ನನ್ನನ್ನು ಭಸ್ಮೀಭೂತನನ್ನಾಗಿ ಮಾಡುವ ಹಾಗಿತ್ತು. ಆಗ ಹಝ್ರತ್ ಪೈಗಂಬರರ, 'ಶೈಬ, ನನ್ನ ಸಮೀಪಕ್ಕೆ ಬಾ, ಎಂಬ ಧ್ವನಿ ಕೇಳಿಸಿತು. ನಾನು ಅವರ ಸಮೀಪಕ್ಕೆ ಹೋದಾಗ ಅವರು ನನ್ನ ಎದೆಯ ಮೇಲೆ ಕೈಯನ್ನು ಸವರುತ್ತಾ ಹೇಳಿದರು: 'ಓ ಅಲ್ಲಾಹ್, ಶೈಬನಿಗೆ ಅವನ ಪೈಶಾಚಿಕ ಯೋಚನೆಗಳಿಂದ ಮುಕ್ತಿಯನ್ನು ದಯಪಾಲಿಸು.' "

ಶೈಬ ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ನನ್ನ ಎದೆಯ ಮೇಲೆ ಕೈಯಿಂದ ಸವರಿದ ಕೂಡಲೆ ನನಗೆ ಹಝ್ರತ್ ಪೈಗಂಬರರ ವಿರುದ್ಧ ಇದ್ದ ಹಗೆತನ ಮತ್ತು ದ್ವೇಷ ಹಾರಿ ಹೋಯಿತು. ಹಝ್ರತ್ ಪೈಗಂಬರರು ನನಗೆ

ನನ್ನ ಕಣ್ಣುಗಳಿಗಿಂತ, ನನ್ನ ಕಿವಿಗಳಿಗಿಂತ ಮತ್ತು ನನ್ನ ಹೃದಯಕ್ಕಿಂತ ಹೆಚ್ಚು ಪ್ರಿಯರಾದರು. ಹಝ್ರತ್ ಪೈಗಂಬರರು ಹೇಳಿದರು: 'ಶೈಬ ಮುಂದೆ ಹೋಗಿ ಹೋರಾಟಮಾಡು.' ನಾನು ಹೋರಾಡಲು ಮುಂದೆ ಹೋದೆನು. ಆಗ ನನಗೆ ಇದ್ದ ಆಶೆ ನನ್ನ ಜೀವ ತೆತ್ತಾದರೂ ಹಝ್ರತ್ ಪೈಗಂಬರರನ್ನು ರಕ್ಷಿಸಬೇಕೆಂದು ಹೊರತು ಬೇರೇನೂ ಆಶೆ ಇರಲಿಲ್ಲ. ಆಗ ನನ್ನ ಪಿತ ಜೀವಿಸಿದ್ದು ಶತ್ರು ಸೈನಿಕರಲ್ಲೊಬ್ಬನಾಗಿ ನನ್ನನ್ನು ಎದುರಿಸಲು ಬರುತ್ತಿದ್ದರೆ ನಾನು ಅವರ ಎದೆಯಲ್ಲಿ ನನ್ನ ಖಡ್ಗವನ್ನು ತುರುಕಲು ಅಲ್ಪ ಮಾತ್ರವೂ ಹಿಂಜರಿಯುತ್ತಿರಲಿಲ್ಲ."[81]

ಅನಂತರ ಹಝ್ರತ್ ಪೈಗಂಬರ್(ಸ) ತಾಯಿಫ್ ಕಡೆಗೆ ಹೊರಟರು. ಅದು ಹಝ್ರತ್ ಪೈಗಂಬರರನ್ನು ಕಲ್ಲೆಸೆದು ಹೊರಗೋಡಿಸಿದ ನಗರವಾಗಿತ್ತು. ಅವರು ಆ ನಗರಕ್ಕೆ ಸ್ವಲ್ಪಕಾಲ ಮುತ್ತಿಗೆ ಹಾಕಿದರು. ಅನಂತರ ಕೆಲವರು ಹೀಗೆ ಸಲಹೆ ನೀಡಿದರು: "ಈ ನಗರಕ್ಕೆ ಮುತ್ತಿಗೆ ಹಾಕಿ ಸಮಯವನ್ನು ವ್ಯರ್ಥ ಮಾಡುವ ಆವಶ್ಯಕತೆ ಇಲ್ಲ. ಅರಬ್ ದೇಶ ಸಂಪೂರ್ಣವಾಗಿ ನಿಮ್ಮ ಅಧೀನಕ್ಕೆ ಬಂದಿರುವಾಗ ಈ ಒಂದು ನಗರ ಏನು ತಾನೆ ಮಾಡಬಲ್ಲುದು."

ಹಝ್ರತ್ ಪೈಗಂಬರ್(ಸ) ತನ್ನ ಸೈನ್ಯವನ್ನು ಅಲ್ಲಿಂದ ಕರೆದುಕೊಂಡು ಹೋದರು. ಸ್ವಲ್ಪ ಕಾಲದ ನಂತರ ತಾಯಿಫ್ ನಗರವಾಸಿಗಳೂ ಮುಸ್ಲಿಮರಾದರು.

## ಮಕ್ಕ ವಿಜಯ ಮತ್ತು ಹುನೈನ್ ಯುದ್ಧದ ನಂತರ

ಈ ಯುದ್ಧಗಳು ಮುಗಿದ ನಂತರ ಸೋತ ಶತ್ರುಗಳಿಂದ ದಂಡವಾಗಿ ಪಡೆದ ಹಣ ಮತ್ತು ಶತ್ರುಗಳು ರಣಾಂಗಣದಲ್ಲಿ ಬಿಟ್ಟೋಡಿದ ಸಂಪತ್ತು ಆಗಿನ ಯುದ್ಧಗಳ ಸಂಪ್ರದಾಯದಂತೆ ಮುಸ್ಲಿಮ್ ಸೈನಿಕರಿಗೆ ಹಂಚಬೇಕಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಈ ಸಂಪತ್ತನ್ನು ಮುಸ್ಲಿಮ್ ಸೈನಿಕರಿಗೆ ಹಂಚುವುದಕ್ಕೆ ಪ್ರತಿಯಾಗಿ ಅದನ್ನು ಮಕ್ಕದ ಜನರಿಗೆ ಮತ್ತು ಮಕ್ಕದ ಸುತ್ತಮುತ್ತಲಿನ ಜನರಿಗೆ ಹಂಚಿದರು. ಆ ಜನರ ಹೃದಯಗಳಲ್ಲಿ ಸತ್ಯವಿಶ್ವಾಸ ಇನ್ನೂ ಸರಿಯಾಗಿ ಸ್ಥಾಪಿತವಾಗಿರಲಿಲ್ಲ. ಅವರಲ್ಲಿ ಹಲವರು ಅವಿಶ್ವಾಸಿಗಳಾಗಿಯೇ ಇದ್ದರು. ಮುಸ್ಲಿಮರಾದವರು ಸಹ ಇತ್ತೀಚೆಗೆ ಮುಸ್ಲಿಮರಾಗಿದ್ದರು. ಒಂದು ಸಮುದಾಯದ ಜನರು ಅನ್ಯರಿಗೆ ತಮ್ಮ ಸಂಪತ್ತನ್ನು ಹಂಚುವುದು ಅವರಿಗೆ ಅತ್ಯಂತ ಹೊಸದಾದೊಂದು ಅನುಭವವಾಗಿತ್ತು. ಈ ಸಂಪತ್ತಿನ ಹಂಚುವಿಕೆಯಿಂದ ಅವರ ಹೃದಯಗಳಲ್ಲಿ ಭಯಭಕ್ತಿ ಮತ್ತು ಒಳಿತು ಹೆಚ್ಚಾಗುವುದಕ್ಕೆ ಪ್ರತಿಯಾಗಿ ಅವರಲ್ಲಿ ದುರಾಶೆ ಇನ್ನಷ್ಟು ಹೆಚ್ಚಿತು. ಅವರು ಹಝ್ರತ್ ಪೈಗಂಬರರ ಸುತ್ತು ಗೆರಾವು ಮಾಡಿದರು. ತಮಗೆ ಇನ್ನಷ್ಟು ಬೇಕೆಂದು ಆಗ್ರಹ ಪಡಿಸುತ್ತಾ ಅವರನ್ನು ನೂಕುತ್ತಾ ಒಂದು ಮರದ ತನಕ ತಂದರು. ಒಬ್ಬನು ಅವರ ಭುಜದ ಮೇಲಿದ್ದ ಚಾದರವನ್ನು ಹಿಡಿದು ತಿರುಚಲು ತೊಡಗಿದಾಗ ಅವರಿಗೆ ಶ್ವಾಸ ಕಟ್ಟಲು ತೊಡಗಿತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು:

81. ಸೀರತ್ ಇಬ್ನು ಹಿಶಾಮ್, ಸಂಪುಟ-3 ಪುಟ-9, ಝುರ್‌ಖಾನಿ-ಸಂಪುಟ 4 ಪುಟ 465, ಝಾದುಲ್ ಮಆದ್‌ನಿಂದ ಟಿಪ್ಪಣಿ.



"ಓ ಜನರೇ, ನನ್ನ ಬಳಿ ಇನ್ನೇನಾದರೂ ಇದ್ದಿದ್ದರೆ ನಾನು ಅದನ್ನು ಸಹ ನಿಮಗೆ ಕೊಡುತ್ತಿದ್ದೆನು. ನೀವು ನನ್ನನ್ನು ಜಿಪುಣನಾಗಿಯೂ ಹೇಡಿಯಾಗಿಯೂ ಎಂದೂ ಕಾಣಲಾರಿರಿ."

ಹಝ್ರತ್ ಪೈಗಂಬರ್(ಸ) ಅನಂತರ ತನ್ನ ಒಂಟೆಯ ಸಮೀಪಕ್ಕೆ ಹೋಗಿ ಅದರ ಒಂದು ಕೂದಲನ್ನು ಕಿತ್ತುಕೊಂಡು ಅದನ್ನು ಎತ್ತಿಹಿಡಿದು ಹೇಳಿದರು:

"ನನಗೆ ನಿಮ್ಮ ಸಂಪತ್ತಿನಲ್ಲಿ ಈ ರೋಮದಷ್ಟು ಸಹ ಆವಶ್ಯಕತೆ ಇಲ್ಲ. ಅರಬ್ ಸಂಪ್ರದಾಯದ ಕಟ್ಟಳೆಗಳ ಪ್ರಕಾರ ಸರಕಾರದ ಪಾಲಾಗಿ ಐದನೆಯ ಒಂದಂಶವನ್ನು ಮಾತ್ರ ಹಿಡಿದಿಟ್ಟುಕೊಳ್ಳಲಾಗುವುದು. ಈ ಐದನೆಯ ಒಂದಂಶವನ್ನು ನನ್ನ ಸ್ವಂತ ಉಪಯೋಗಕ್ಕಾಗಿ ಖರ್ಚುಮಾಡಲಾರೆನು. ಅದನ್ನು ಸಹ ನಿಮ್ಮ ಸೇವೆಗಾಗಿ ಖರ್ಚು ಮಾಡಲಾಗುವುದು. ನೀವು ನೆನಪಿಟ್ಟುಕೊಳ್ಳಿರಿ. ವಿಶ್ವಾಸಘಾತ ಮಾಡುವವನು ಅಂತಿಮ ವಿಚಾರಣೆಯ ದಿನ ಅಲ್ಲಾಹನ ಸನ್ನಿಧಾನದಲ್ಲಿ ಅಪಮಾನಿತನಾಗುವನು."[82]

ಹಝ್ರತ್ ಪೈಗಂಬರ್(ಸ) ಬಾದಶಹರಾಗುವ ವ್ಯಾಮೋಹ ಹೊಂದಿದ್ದರೆಂದು ಕೆಲವರು ಹೇಳುತ್ತಾರೆ. ಆದರೆ ಒಬ್ಬ ಬಾದಶಹನನ್ನು ಈ ರೀತಿ ನೂಕುತ್ತಾ ಹೋಗಿ ಅವನ ಕೊರಳಲ್ಲಿ ಕುಣಿಕೆ ಹಾಕಿ ಉಸಿರುಗಟ್ಟಿಸಲು ಯಾರಿಗಾದರೂ ಶಕ್ತಿ ಇರುವುದೇ? ಅಲ್ಲಾಹನ ಪೈಗಂಬರರ ಹೊರತು ಈ ರೀತಿಯ ಮಾದರಿ ಯಾರು ತೋರಿಸಬಲ್ಲರು. ಹಝ್ರತ್ ಪೈಗಂಬರ್(ಸ) ಈ ರೀತಿ ಬಡ ಜನರಲ್ಲಿ ಸಂಪತ್ತನ್ನೆಲ್ಲಾ ಹಂಚುತ್ತಾ ಇದ್ದರೂ ಅವರು ಹಂಚಿದುದು ನ್ಯಾಯ ಸಮ್ಮತವಾದ ರೀತಿಯಲ್ಲಿ ಆಗಿರಲಿಲ್ಲ ಎಂದು ಭಾವಿಸುತ್ತಿದ್ದ ಕೆಲವು ಕಠಿಣ ಹೃದಯರೂ ಇದ್ದರು. ಅವರಲ್ಲೊಬ್ಬ ಝುಲ್ ಖುವೈಸರ ಎಂಬವನಾಗಿದ್ದನು. ಅವನು ಹಝ್ರತ್ ಪೈಗಂಬರರ ಸಮೀಪಕ್ಕೆ ಬಂದು, "ನೀವು ಈ ದಿನ ಮಾಡಿದುದನ್ನು ನಾನು ನೋಡಿರುವೆನು" ಎಂದನು.

ಹಝ್ರತ್ ಪೈಗಂಬರ್(ಸ) ಕೇಳಿದರು: "ನೀನು ಏನನ್ನು ನೋಡಿದೆ?"

ಅವನು ಹೇಳಿದನು: "ನೀವು ಈ ದಿನ ದೌರ್ಜನ್ಯ ಮಾಡಿರುವಿರಿ. ನ್ಯಾಯ ಸಮ್ಮತವಾಗಿ ನಡೆದು ಕೊಂಡಿಲ್ಲ ಎಂದು ನಾನು ನೋಡಿರುವೆನು."

ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ನ್ಯಾಯ ಸಮ್ಮತವಾಗಿ ವರ್ತಿಸಿಲ್ಲವಾದರೆ ಲೋಕದಲ್ಲಿ ಬೇರೆ ಯಾರು ತಾನೆ ನ್ಯಾಯ ಸಮ್ಮತವಾಗಿ ವರ್ತಿಸಬಲ್ಲರು?"

ಆಗ ಶಿಷ್ಯರು ಭಾವೋದ್ವೇಗದಿಂದ ಎದ್ದುನಿಂತರು. ಅವನು ಮಸ್‌ಜಿದ್‌ನಿಂದ ಹೊರಗೆ ಹೋದಾಗ ಅವರ ಪೈಕಿ ಕೆಲವರು ಹೇಳಿದರು: "ಅಲ್ಲಾಹನ ಪೈಗಂಬರರೇ, ಈ ವ್ಯಕ್ತಿ ಕೊಲ್ಲಲ್ಪಡಲು ಅರ್ಹನಾಗಿದ್ದಾನೆ. ನಾವು ಅವನನ್ನು ಕೊಲ್ಲಲು ನೀವು ಅನುಮತಿ ಕೊಡುವಿರೇನು?"

82. ಸೀರತ್ ಹಲ್‌ಬಿಯ್ಯ, ಸಂಪುಟ 3 ಪುಟ 135.

ಹಝ್ರತ್ ಪೈಗಂಬರ್(ಸ) ಹೇಳಿದರು: “ಈ ವ್ಯಕ್ತಿ ಕಾನೂನು ಕಾಯದೆಗಳನ್ನು ಪಾಲಿಸುತ್ತಾ ಇದ್ದರೆ ನಾವು ಅವನನ್ನು ಹೇಗೆ ತಾನೆ ಕೊಲ್ಲಬಲ್ಲೆವು?”

ಶಿಷ್ಯರು ಕೇಳಿದರು: “ಒಬ್ಬನು ಬಾಹ್ಯವಾಗಿ ಒಂದು ರೀತಿ ವರ್ತಿಸುತ್ತಾನೆ. ಅವನ ಹೃದಯದಲ್ಲಿ ಬೇರೆ ಒಂದು ಇದೆ. ಇಂತಹ ವ್ಯಕ್ತಿ ಶಿಕ್ಷೆಗೆ ಅರ್ಹನಾಗುವುದಿಲ್ಲವೇ?”

ಹಝ್ರತ್ ಪೈಗಂಬರ್(ಸ) ಹೇಳಿದರು: “ಜನರ ಹೃದಯಗಳ ಭಾವನೆಗಳ ಪ್ರಕಾರ ಅವರೊಂದಿಗೆ ವರ್ತಿಸಬೇಕೆಂದು ಅಲ್ಲಾಹನು ನನಗೆ ಆಜ್ಞಾಪಿಸಿಲ್ಲ. ಜನರ ಬಾಹ್ಯ ವರ್ತನೆಗಳಿಗೆ ಅನುಸಾರವಾಗಿ ಅವರೊಂದಿಗೆ ವರ್ತಿಸಬೇಕೆಂದು ಅಲ್ಲಾಹನು ಆಜ್ಞಾಪಿಸಿದ್ದಾನೆ.”

ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: “ಈ ವ್ಯಕ್ತಿ ಮತ್ತು ಅವನ ಜೊತೆಗಾರರು ಮುಂದೊಂದು ದಿನ ಇಸ್ಲಾಮಿಗೆ ವಿದ್ರೋಹ ಮಾಡುವರು.”

ಹಝ್ರತ್ ಅಲಿಯವರ ಖಿಲಾಫತ್ ಕಾಲದಲ್ಲಿ ಈ ವ್ಯಕ್ತಿ ಮತ್ತು ಅವನ ಗೋತ್ರದವರು ವಿದ್ರೋಹಿಗಳ ನಾಯಕರಾಗಿದ್ದರು. ಅವರು ಖವಾರಿಜ್ ಎಂದು ಕುಪ್ರಸಿದ್ಧರಾಗಿದ್ದಾರೆ.

ಹವಾಝಿನ್‌ರ ವಿರುದ್ಧ ಯುದ್ಧ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಮರಳಿದರು. ಅವರು ಮದೀನಕ್ಕೆ ತಲಪಿದ ದಿನ ಮದೀನದವರಿಗೆ ಒಂದು ಹೊಸ ಸಂತೋಷದ ದಿನವಾಗಿತ್ತು. ಮೊದಲನೆಯ ಬಾರಿ ಹಝ್ರತ್ ಪೈಗಂಬರ್(ಸ) ಮಕ್ಕದವರ ದೌರ್ಜನ್ಯದಿಂದ ಕಂಗೆಟ್ಟವರಾಗಿ ಮದೀನಕ್ಕೆ ವಲಸೆ ಹೋಗಿದ್ದರು. ಇಂದು ಅವರು ಮಕ್ಕವನ್ನು ಜಯಿಸಿದ ನಂತರ ತನ್ನ ಸ್ವಂತ ಇಚ್ಛೆಯ ಪ್ರಕಾರ ಮತ್ತು ತನ್ನ ವಾಗ್ದಾನವನ್ನು ಪಾಲಿಸಲು ಮದೀನಕ್ಕೆ ಪುನಃ ಆಗಮಿಸಿದರು.

## ತಬೂಕ್ ದಂಡಯಾತ್ರೆ

ಮದೀನದ ಖಝ್ರಜ್ ಗೋತ್ರದ ಅಬೂ ಆಮಿರ್ ಮದನಿ ಎಂಬವನು ಯಹೂದಿಯರು ಮತ್ತು ಕ್ರೈಸ್ತರೊಂದಿಗೆ ಅವನಿಗಿದ್ದ ನಿಕಟ ಸಂಪರ್ಕಗಳ ಕಾರಣದಿಂದ ಧ್ಯಾನ, ಭಜನೆ ಮೊದಲಾದುವುಗಳನ್ನು ಮಾಡುವ ಅಭ್ಯಾಸವನ್ನು ಹೊಂದಿದ್ದನು. ಅವನು ಕ್ರೈಸ್ತ ಧರ್ಮಾವಲಂಬಿಯಾಗಿರದಿದ್ದರೂ ಆವನನ್ನು ಜನರು ಸನ್ಯಾಸಿ ಎಂದು ಕರೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಮೊದಲನೆಯ ಬಾರಿ ಆಗಮಿಸಿದಾಗ ಅವನು ಮಕ್ಕಕ್ಕೆ ಓಡಿ ಹೋಗಿದ್ದನು. ಮಕ್ಕವನ್ನು ಹಝ್ರತ್ ಪೈಗಂಬರರು ಜಯಿಸಿದಾಗ ಅವನು, ಇಸ್ಲಾಮಿನ ವಿರುದ್ಧ ದಂಗೆಯೆಬ್ಬಿಸಲು ಏನಾದರೂ ಉಪಾಯವನ್ನು ಕೈಗೊಳ್ಳಬೇಕು ಎಂದು ನಿರ್ಧರಿಸಿದನು. ಅವನು ತನ್ನ ಹೆಸರು ಮತ್ತು ವೇಷವನ್ನು ಬದಲಾಯಿಸಿ ಮದೀನದ ಸಮೀಪ ಖುಬಾ ಎಂಬ ಗ್ರಾಮದಲ್ಲಿ ವಾಸಿಸಲು ತೊಡಗಿದನು.



ಹಲವಾರು ವರ್ಷ ಅವನು ಮದೀನದ ಹೊರಗೆ ಹೋಗಿ ವಾಸಿಸುತ್ತಿದ್ದುದರಿಂದಲೂ ತನ್ನ ಉಡುಗೆ ತೊಡುಗೆಗಳನ್ನು ಬದಲಾಯಿಸಿ ಕೊಂಡುದರಿಂದಲೂ ಮದೀನದ ಜನರು ಸಾಮಾನ್ಯವಾಗಿ ಅವನನ್ನು ಗುರುತಿಸುತ್ತಿರಲಿಲ್ಲ. ಆದರೆ ಅವನು ಸಂಪರ್ಕವಿರಿಸಿಕೊಂಡಿದ್ದ ಕಪಟ ವಿಶ್ವಾಸಿಗಳು ಮಾತ್ರ ಆವನನ್ನು ಗುರುತಿಸಿದ್ದರು. ಅವನು ಮದೀನದ ಕಪಟ ವಿಶ್ವಾಸಿಗಳೊಂದಿಗೆ ಸೇರಿ ಹೀಗೆ ನಿರ್ಧರಿಸಿದನು: “ನಾನು ಸಿರಿಯಾಕ್ಕೆ ಹೋಗಿ ಕ್ರೈಸ್ತರ ಸರಕಾರವನ್ನು ಮತ್ತು ಕ್ರೈಸ್ತರಾದ ಅರಬಿ ಗೋತ್ರಗಳನ್ನು ಮುಹಮ್ಮದರ ವಿರುದ್ಧ ಪ್ರಚೋದಿಸುವೆನು ಮತ್ತು ಅವರನ್ನು ಮದೀನವನ್ನು ಆಕ್ರಮಣ ಮಾಡಬೇಕೆಂದು ಆಗ್ರಹಪಡಿಸುವೆನು.”

ಅವನು ಕಪಟ ವಿಶ್ವಾಸಿಗಳೊಂದಿಗೆ ಹೇಳಿದನು: “ನಾನು ಅಲ್ಲಿ ಕಾರ್ಯನಿರತನಾಗುವಾಗ ನೀವು ಇಲ್ಲಿ, ಸಿರಿಯಾದ ಸೈನ್ಯ ಮದೀನವನ್ನು ಆಕ್ರಮಣ ಮಾಡುವುದು ಎಂದು ಪ್ರಚಾರ ಮಾಡಿರಿ. ನನ್ನ ಉಪಾಯವು ಫಲಿಸಿದರೆ ಮುಸ್ಲಿಮರ ಮತ್ತು ಸಿರಿಯಾದವರ ಮಧ್ಯೆ ಯುದ್ಧವಾಗುವುದು. ನನ್ನ ಉಪಾಯ ಫಲಿಸದಿದ್ದರೆ ಪ್ರಾಯಶಃ ಮುಸ್ಲಿಮರು ವದಂತಿಗಳನ್ನು ನಂಬಿ ಸಿರಿಯಾಕ್ಕೆ ಹೋಗಿ ಸಿರಿಯಾದವರನ್ನು ಆಕ್ರಮಣ ಮಾಡುವರು. ಆಗ ಖೈಸರನ ಮತ್ತು ಮುಸ್ಲಿಮರ ಮಧ್ಯೆ ಯುದ್ಧವು ಪ್ರಾರಂಭವಾಗುವುದು. ನಮ್ಮ ಉದ್ದೇಶವು ಸಫಲವಾಗುವುದು.”

ಹೀಗೆ ಸಮಾಲೋಚಿಸಿ ಆಮಿರನು ಸಿರಿಯಾಕ್ಕೆ ಹೋದನು. ಮದೀನದ ಕಪಟ ವಿಶ್ವಾಸಿಗಳು ಪ್ರತಿದಿನ ಹೊಸ ಹೊಸ ವದಂತಿಗಳನ್ನು ಬಿತ್ತರಿಸಲು ತೊಡಗಿದರು. ಒಂದು ದಿನ ಅವರು ಹೀಗೆ ಹೇಳುತ್ತಿದ್ದರು: “ನಮಗೊಂದು ವ್ಯಾಪಾರಿ ತಂಡ ಕಾಣಲು ಸಿಕ್ಕಿತು. ಸಿರಿಯಾದ ಸೈನ್ಯ ಮದೀನವನ್ನು ಆಕ್ರಮಿಸಲು ಸಿದ್ದತೆಗಳನ್ನು ಮಾಡುತ್ತಾ ಇದೆ ಎಂದು ಅವರು ಹೇಳಿದರು.”

ಮರುದಿನ ಸಹ ಕಪಟ ವಿಶ್ವಾಸಿಗಳು ಹೀಗೆ ಹೇಳುತ್ತಿದ್ದರು: “ಸಿರಿಯಾದ ಸೈನ್ಯ ಮದೀನವನ್ನು ಆಕ್ರಮಣ ಮಾಡಲು ಸಿದ್ಧತೆ ನಡೆಸುತ್ತಿರುವುದಾಗಿ ನಾವು ಕಂಡ ಇನ್ನೊಂದು ವ್ಯಾಪಾರಿ ತಂಡ ಹೇಳಿದೆ.”

ಕಪಟ ವಿಶ್ವಾಸಿಗಳು ಈ ರೀತಿ ವದಂತಿಗಳನ್ನು ಪ್ರತಿದಿನ ಹಬ್ಬಿಸುತ್ತಾ ಇದ್ದರು. ಈ ವದಂತಿಗಳು ಎಷ್ಟು ವ್ಯಾಪಕವಾಗಿ ಹಬ್ಬಿತೆಂದರೆ ಹಝ್ರತ್ ಪೈಗಂಬರ್(ಸ) ಸಿರಿಯಾದ ಸೈನ್ಯವನ್ನು ಎದುರಿಸಲು ಸ್ವತಃ ಇಸ್ಲಾಮೀ ಸೈನ್ಯಕ್ಕೆ ನೇತೃತ್ವ ವಹಿಸಿಕೊಂಡು ಹೋಗುವುದು ಉತ್ತಮವೆಂದು ನಿರ್ಧರಿಸಿದರು.

ಅದು ಮುಸ್ಲಿಮರಿಗೆ ಅತ್ಯಂತ ಕಷ್ಟದ ಕಾಲವಾಗಿತ್ತು. ಅದು ಕ್ಷಾಮದ ವರ್ಷವೂ ಆಗಿತ್ತು. ಹಿಂದಿನ ವರ್ಷ ಧಾನ್ಯ ಮತ್ತು ಹಣ್ಣು ಹಂಪಲುಗಳು ಕಡಿಮೆ ಉತ್ಪಾದನೆ ಆಗಿದ್ದವು. ಈ ವರ್ಷದ ಬೆಳೆ ಇನ್ನೂ ಕೈಗೆ ಬಂದಿರಲಿಲ್ಲ. ಅದು ಸೆಪ್ಟೆಂಬರ್ ತಿಂಗಳ ಕೊನೆಯ ಅಥವಾ ಅಕ್ಟೋಬರ್ ತಿಂಗಳ ಆರಂಭದ ಸಮಯವಾಗಿತ್ತು. ಈ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಹೋರಾಟಕ್ಕೆ ಹೊರಟರು. ಕಪಟ ವಿಶ್ವಾಸಿಗಳಿಗೆ ತಮ್ಮ ಕುತಂತ್ರಗಳ ಬಗ್ಗೆ ತಿಳಿದಿತ್ತು. ಮದೀನವನ್ನು ಸಿರಿಯಾದವರು

ಆಕ್ರಮಣ ಮಾಡಲು ಬರದಿದ್ದರೂ ಮುಸ್ಲಿಮರು ಹೋಗಿ ಸಿರಿಯಾದವರನ್ನು ಆಕ್ರಮಣ ಮಾಡಿ ನಾಶ ಹೊಂದಲಿ ಎಂದು ಕಪಟ ವಿಶ್ವಾಸಿಗಳು ಆ ರೀತಿ ಉಪಾಯ ಹೂಡಿದರು. ಮೂತ ಯುದ್ಧದ ಪರಿಣಾಮ ಅವರ ಮುಂದಿತ್ತು. ಆಗ ಮುಸ್ಲಿಮರು ಎಷ್ಟು ದೊಡ್ಡ ಸೈನ್ಯವನ್ನು ಎದುರಿಸಬೇಕಾಯಿತೆಂದರೆ, ಅವರು ಬಹಳ ಹಾನಿಯನ್ನು ಅನುಭವಿಸಿ ಉಳಿದವರು ಬಹಳ ಪ್ರಯಾಸದಿಂದ ಮರಳಿ ಬಂದಿದ್ದರು. ಕಪಟ ವಿಶ್ವಾಸಿಗಳು ದ್ವಿತೀಯ ಮೂತವನ್ನು ತಮ್ಮ ಕಣ್ಣುಗಳಿಂದ ಕಾಣಲು ಬಯಸುತ್ತಿದ್ದರು. ಅದರಲ್ಲಿ ಹಝ್ರತ್ ಪೈಗಂಬರರು ಸಹ ಹುತಾತ್ಮರಾಗಲಿ ಎಂದು ಅವರು ಇಚ್ಛಿಸುತ್ತಿದ್ದರು. ಆದುದರಿಂದ ಅವರು ಪ್ರತಿದಿನ ಹೀಗೆ ವದಂತಿಗಳನ್ನು ಹಬ್ಬಿಸುತ್ತಿದ್ದರು. "ಶತ್ರುಗಳು ಆಕ್ರಮಣ ಮಾಡಲಿರುವರೆಂದು ನಮಗೆ ಇಂತಿಂತಹ ಮೂಲಗಳಿಂದ ತಿಳಿದು ಬಂದಿದೆ. ಸಿರಿಯಾದ ಸೈನ್ಯ ಆಕ್ರಮಣ ಮಾಡಲಿದೆಯೆಂದು ನಮಗೆ ತಿಳಿದು ಬಂದಿದೆ."

ಇನ್ನೊಂದು ಕಡೆಯಲ್ಲಿ ಅವರು ಜನರನ್ನು ಹೆದರಿಸುತ್ತಾ: "ಅಷ್ಟು ದೊಡ್ಡ ಸೈನ್ಯವನ್ನು ಎದುರಿಸುವುದು ಸುಲಭವಲ್ಲ, ನೀವು ಯುದ್ಧಕ್ಕೆ ಹೋಗದಿರುವುದೇ ಉತ್ತಮ" ಎಂದು ಸಹ ಉಪದೇಶಿಸುತ್ತಾ ಇದ್ದರು. ಸಿರಿಯಾಕ್ಕೆ ದಂಡೆಯಾತ್ರೆಗೆ ಹೋಗುವ ಸೈನ್ಯದಲ್ಲಿ ಆದಷ್ಟು ಕಡಿಮೆ ಜನರಿರಲಿ ಎಂಬುದೂ ಮುಸ್ಲಿಮರ ಸೋಲನ್ನು ಖಚಿತಪಡಿಸುವುದೂ ಅವರ ಉದ್ದೇಶವಾಗಿತ್ತು.

ಆದರೆ ಹಝ್ರತ್ ಪೈಗಂಬರ್(ಸ) ಸಿರಿಯಾ ದೇಶಕ್ಕೆ ದಂಡೆಯಾತ್ರೆ ಕೈಗೊಳ್ಳುವುದನ್ನು ಪ್ರಕಟಿಸಿದಾಗ ಮುಸ್ಲಿಮರು ಅದಕ್ಕಾಗಿ ನಿಷ್ಠೆಯಿಂದಲೂ ಉತ್ಸಾಹದಿಂದಲೂ ತ್ಯಾಗಗಳನ್ನು ಮಾಡಲು ಮುಂದೆ ಬರುತ್ತಿದ್ದರು. ಆದರೆ ಬಡ ಮುಸ್ಲಿಮರ ಬಳಿಯಲ್ಲಿ ಯುದ್ಧ ಸಾಮಗ್ರಿಗಳಾದರೂ ಎಲ್ಲಿದ್ದವು? ಸರಕಾರದ ಖಜಾನೆ ಸಹ ಬರಿದಾಗಿತ್ತು. ಮುಸ್ಲಿಮರಲ್ಲಿ ಉತ್ತಮ ಸ್ಥಿತಿಯಲ್ಲಿರುವವರು ಮಾತ್ರ ಯುದ್ಧಕ್ಕೆ ಸಹಾಯ ಮಾಡಲು ಸಾಮರ್ಥ್ಯ ಹೊಂದಿದ್ದರು. ಪ್ರತಿಯೊಬ್ಬ ವ್ಯಕ್ತಿ ತ್ಯಾಗ ಮಾಡಲು ಒಬ್ಬನಿಗಿಂತ ಇನ್ನೊಬ್ಬ ಮುಂದಾಗುವಂತೆ ಪ್ರಯತ್ನ ಮಾಡುತ್ತಿದ್ದರು. ಹಝ್ರತ್ ಉಸ್ಮಾನ್(ರ) ತನ್ನ ಸಂಪತ್ತಿನ ಬಹುಭಾಗವನ್ನು ಹಝ್ರತ್ ಪೈಗಂಬರ್‌ರಿಗೆ ಸಮರ್ಪಿಸಿದರು. ಅದು ಒಂದು ಸಾವಿರ ಚಿನ್ನದ ನಾಣ್ಯಗಳಾಗಿದ್ದುವು. ಇದೇ ರೀತಿ ಇತರ ಶಿಷ್ಯರು ತಮ್ಮ ಸಾಮರ್ಥ್ಯಗಳಿಗೆ ಅನುಸಾರವಾಗಿ ದೇಣಿಗೆಗಳನ್ನು ಕೊಟ್ಟರು. ಬಡಮುಸ್ಲಿಮರಿಗೆ ಸವಾರಿ ಮೃಗಗಳನ್ನು, ಖಡ್ಗಗಳನ್ನು ಮತ್ತು ಈಟಿಗಳನ್ನು ಪೂರೈಸಲಾಯಿತು.

ಶಿಷ್ಯರಲ್ಲಿ ತ್ಯಾಗ ಮಾಡಲು ಎಂತಹ ಉತ್ಸಾಹವಿದ್ದಿತೆಂದರೆ, ಯೆಮನಿನ ಕೆಲವು ಮುಸ್ಲಿಮರು ಮದೀನಕ್ಕೆ ವಲಸೆ ಬಂದಿದ್ದರು. ಅವರು ಬಹಳ ದರಿದ್ರಾವಸ್ಥೆಯಲ್ಲಿ ಇದ್ದರು. ಅವರಲ್ಲಿ ಕೆಲವರು ಹಝ್ರತ್ ಪೈಗಂಬರರ ಹತ್ತಿರ ಹೋಗಿ ಹೇಳಿದರು: "ನಮ್ಮನ್ನು ನಿಮ್ಮ ಜೊತೆಗೆ ಹೋರಾಟಕ್ಕೆ ಕರೆದುಕೊಂಡು ಹೋಗಿರಿ. ನಮ್ಮನ್ನು ಅಲ್ಲಿಗೆ ತಲಪಿಸುವ ವ್ಯವಸ್ಥೆ ಮಾಡಿದರೆ ಸಾಕು, ಬೇರೇನೂ



ಬೇಡ." ಪವಿತ್ರ ಖುರ್‌ಆನ್ ಈ ಜನರ ಕುರಿತು ಹೀಗೆ ಹೇಳಿದೆ:

**ಯುದ್ಧದಲ್ಲಿ ಭಾಗವಹಿಸದ ಈ ಜನರ ಮೇಲೆ ದೋಷಾರೋಪವಿಲ್ಲ, ಅವರು ಯುದ್ಧ ಕ್ಷೇತ್ರಕ್ಕೆ ತಲಪಲು ಬೇಕಾದ ವ್ಯವಸ್ಥೆ ಮಾಡಲು ನಿಮ್ಮನ್ನು ಸಮೀಪಿಸಿದ್ದರು. ನಿಮ್ಮನ್ನು ಅಲ್ಲಿಗೆ ತಲಪಿಸುವ ಸಾಮಗ್ರಿ ನನ್ನ ಹತ್ತಿರ ಇಲ್ಲವೆಂದು ನೀವು ಹೇಳಿದಿರಿ. ಆಗ ಅವರು ಎದ್ದು ಹೋದರು. ಅವರ ಕಣ್ಣುಗಳು ಅಶ್ರುಭರಿತವಾಗಿದ್ದುವು. ಅವರ ಹತ್ತಿರ ಇಸ್ಲಾಮಿನ ಸೇವೆಗಾಗಿ ಖರ್ಚು ಮಾಡಲು ಏನೂ ಇಲ್ಲವೆಂದು ಅವರು ದುಃಖಭರಿತರಾಗಿದ್ದರು.** (9 : 92)

ಅಬೂ ಮೂಸಾ ಆ ಜನರ ಮುಂದಾಳುವಾಗಿದ್ದರು. ಅವರೊಂದಿಗೆ ಹೀಗೆ ವಿಚಾರಿಸಲಾಯಿತು:

"ನೀವು ಹಝ್ರತ್ ಪೈಗಂಬರರೊಂದಿಗೆ ಆವಶ್ಯಪಟ್ಟಿದ್ದು ಏನು?"

ಅವರು ಹೇಳಿದರು:

"ಅಲ್ಲಾಹನಾಣೆ, ನಾವು ಒಂಟೆಗಳನ್ನು ಕೇಳಲಿಲ್ಲ. ನಾವು ಕುದುರೆಗಳನ್ನು ಕೇಳಲಿಲ್ಲ, ನಾವು ಹೇಳಿದೆವು: ನಾವು ಬರಿಗಾಲಲ್ಲಿ ದೀರ್ಘ ದೂರ ನಡೆದು ಹೋಗಲಾರೆವು. ನಮಗೆ ಪಾದರಕ್ಷೆಗಳನ್ನು ಕೊಡುವುದಾದರೆ ನಾವು ಅವುಗಳನ್ನು ಧರಿಸಿ ಓಡುತ್ತಾ ನಮ್ಮ ಸಹೋದರರ ಜೊತೆಗೂಡಿ ಯುದ್ಧದಲ್ಲಿ ಭಾಗವಹಿಸುತ್ತಿದ್ದೆವು."

ಸೈನ್ಯ ಸಿರಿಯಾದ ಕಡೆಗೆ ಸಾಗುತ್ತಿದ್ದುದರಿಂದ ಮತ್ತು ಮೂತ ಯುದ್ಧದ ದೃಶ್ಯಗಳು ಮುಸ್ಲಿಮರ ಕಣ್ಣುಗಳ ಮುಂದೆ ಇದ್ದುದರಿಂದ ಪ್ರತಿಯೊಬ್ಬ ಮುಸ್ಲಿಮನ ಹೃದಯದಲ್ಲಿ ಹಝ್ರತ್ ಪೈಗಂಬರರನ್ನು ಸಂರಕ್ಷಿಸಬೇಕೆಂಬ ಯೋಚನೆ ಬೇರೆ ಎಲ್ಲಾ ಯೋಚನೆಗಳಿಗಿಂತ ಅಗ್ರಸ್ಥಾನ ಪಡೆದಿತ್ತು. ಮಹಿಳೆಯರು ಸಹ ಈ ಅಪಾಯವನ್ನು ಮನವರಿಕೆ ಮಾಡಿದ್ದರು. ಅವರು ತಮ್ಮ ಪತಿ ಮತ್ತು ಪುತ್ರರನ್ನು ಯುದ್ಧಕ್ಕೆ ಹೋಗಲು ಒತ್ತಾಯಪಡಿಸುತ್ತಿದ್ದರು. ಅವರ ನಿಷ್ಠೆ ಮತ್ತು ಉತ್ಸಾಹ ಹೇಗಿತ್ತೆಂದು ಈ ಕೆಳಗಿನ ಉದಾಹರಣೆ ಮೂಲಕ ತಿಳಿಯಬಹುದು:

ಒಬ್ಬ ಶಿಷ್ಯ ದೀರ್ಘ ಕಾಲದ ನಂತರ ತನ್ನ ಮನೆಗೆ ಹಿಂದಿರುಗಿ ಬಂದಾಗ ಹಝ್ರತ್ ಪೈಗಂಬರ್(ಸ) ದಂಡ ಯಾತ್ರೆಗೆ ಹೊರಟಾಗಿತ್ತು. ಅವರು ತನ್ನ ಪ್ರಿಯ ಪತ್ನಿಯನ್ನು ಕಂಡು ಸಂತೋಷಗೊಳ್ಳಬೇಕೆಂಬ ಆಶೆಯನ್ನು ಹೊಂದಿದ್ದರು. ಅವರು ತನ್ನ ಪತ್ನಿಯನ್ನು ಚಾವಡಿಯಲ್ಲಿ ಕಂಡು ಆಕೆಯನ್ನು ಪ್ರೀತಿಯಿಂದ ಆಲಿಂಗನ ಮಾಡಲು ಮತ್ತು ಪ್ರೇಮವನ್ನು ಪ್ರಕಟಿಸಲು ಅವರ ಕಡೆಗೆ ವೇಗದಿಂದ ಹೋದಾಗ ಪತ್ನಿ ತನ್ನೆರಡು ಕೈಗಳಿಂದ ಅವರನ್ನು ಹಿಂದಕ್ಕೆ ತಳ್ಳಿದರು. ಆಗ ಆ ಪತಿ ಕೇಳಿದರು: "ನಾನು ದೀರ್ಘ ಕಾಲಾವಧಿಯ ನಂತರ ಆಗಮಿಸಿರುವೆನು. ನೀನು ಹೀಗೇಕೆ ವರ್ತಿಸುತ್ತಿರುವೆ?"

ಆಗ ಪತ್ನಿ ಹೇಳಿದರು: "ನಿಮಗೆ ನಾಚಿಕೆ ಆಗುವುದಿಲ್ಲವೇ? ಹಝ್ರತ್ ಪೈಗಂಬರ್(ಸ) ಅಪಾಯದ ಸ್ಥಳಕ್ಕೆ ಹೋಗುತ್ತಿದ್ದಾರೆ. ನೀವು ನಿಮ್ಮ ಪತ್ನಿಯೊಂದಿಗೆ

ಪ್ರೇಮ ಸಲ್ಲಾಪ ಮಾಡುವ ಧೈರ್ಯ ತೋರಿಸುತ್ತಿರುವಿರಿ! ನೀವು ಮೊದಲು ಹೋಗಿ ನಿಮ್ಮ ಕರ್ತವ್ಯವನ್ನು ಈಡೇರಿಸಿರಿ. ಅನಂತರ ಈ ವಿಚಾರ ನೋಡೋಣ.”

ಆ ಶಿಷ್ಯರು ಕೂಡಲೆ ತನ್ನ ಸವಾರಿ ಮೃಗವನ್ನೇರಿ ಮೂರು ತಂಗುದಾಣಗಳನ್ನು ದಾಟಿ ಹಝ್‌ರತ್ ಪೈಗಂಬರರ ಸೈನ್ಯವನ್ನು ಸೇರಿಕೊಂಡರು.

ಹಝ್‌ರತ್ ಪೈಗಂಬರ್(ಸ) ವದಂತಿಗಳ ಆಧಾರದಲ್ಲಿ ಮುಂದಾಲೋಚನೆಯಿಲ್ಲದೆ ಸಿರಿಯಾದ ಸೈನ್ಯವನ್ನು ಆಕ್ರಮಿಸುವರೆಂದು ಅವಿಶ್ವಾಸಿಗಳೂ ಕಪಟ ವಿಶ್ವಾಸಿಗಳೂ ಯೋಚಿಸಿದ್ದರು. ಹಝ್‌ರತ್ ಪೈಗಂಬರ್ ಉತ್ಕೃಷ್ಟ ಇಸ್ಲಾಮೀ ಸ್ವಭಾವಗುಣಗಳನ್ನು ಹೊಂದಿದ್ದರು. ಅವರು ಸಿರಿಯಾದ ಸಮೀಪ ತಬೂಕ್ ಎಂಬಲ್ಲಿಗೆ ತಲಪಿದಾಗ ಅತ್ತಿತ್ತ ಜನರನ್ನು ಕಳುಹಿಸಿ ವಾಸ್ತವಿಕ ಸಂಗತಿ ಏನೆಂದು ತಿಳಿದುಕೊಳ್ಳಲು ಬಯಸಿದರು. ಅವರು ಕಳುಹಿಸಿದ ಎಲ್ಲಾ ದೂತರು ಒಂದೇ ರೀತಿಯ ಸಮಾಚಾರವನ್ನು ತಂದರು– ಸಿರಿಯಾದ ಯಾವುದೇ ಸೈನ್ಯ ಯುದ್ಧಕ್ಕಾಗಿ ಜಮಾವಣೆಯಾಗುತ್ತಾ ಇಲ್ಲವೆಂದು.

ಹಝ್‌ರತ್ ಪೈಗಂಬರ್(ಸ) ತಬೂಕ್‌ನಲ್ಲಿ ಕೆಲವು ದಿವಸ ತಂಗಿದರು. ಅಲ್ಲಿ ಸುತ್ತು ಮುತ್ತಲಿನ ಕೆಲವು ಗೋತ್ರಗಳೊಂದಿಗೆ ಶಾಂತಿ ಒಪ್ಪಂದವನ್ನು ಮಾಡಿ ಯಾವುದೇ ಯುದ್ಧ ಮಾಡದೆ ಮದೀನಕ್ಕೆ ಮರಳಿದರು.

ಈ ಪ್ರಯಾಣ ಎರಡೂವರೆ ತಿಂಗಳದ್ದು ಆಗಿತ್ತು. ಹಝ್‌ರತ್ ಪೈಗಂಬರ್(ಸ) ಯುದ್ಧ ಮಾಡದೆ ಸುರಕ್ಷಿತರಾಗಿ ಹಿಂದಿರುಗಿ ಬರುತ್ತಿದ್ದಾರೆಂದು ಕಪಟ ವಿಶ್ವಾಸಿಗಳಿಗೆ ತಿಳಿದಾಗ, ತಮ್ಮ ಕಪಟ ವರ್ತನೆಗಳ ರಹಸ್ಯ ಹಝ್‌ರತ್ ಪೈಗಂಬರರಿಗೆ ತಿಳಿದಿದೆ; ಶಿಕ್ಷೆಯಿಂದ ಪ್ರಾಯಶಃ ತಾವು ರಕ್ಷಿಸಲ್ಪಡಲಾರೆವು ಎಂದು ಅವರು ಭಾವಿಸಿದರು. ಅವರು ಒಂದು ಉಪಾಯ ಹೂಡಿದರು, ಮದೀನದ ಸ್ವಲ್ಪ ದೂರದಲ್ಲಿ ಮಾರ್ಗವು ಅತ್ಯಂತ ಇಕ್ಕಾಟ್ಟಾಗಿರುವ ಪ್ರದೇಶದಲ್ಲಿ, ಎಂದರೆ ಸವಾರರು ಒಬ್ಬೊಬ್ಬರಾಗಿ ಮಾತ್ರ ದಾಟಿ ಹೋಗಬಹುದಾದ ಸ್ಥಳದಲ್ಲಿ ಕೆಲವು ಜನರನ್ನು ಹೊಂಚುಹಾಕಿ ಕುಳಿತುಕೊಳ್ಳಲು ನೇಮಿಸಿದರು.

ಹಝ್‌ರತ್ ಪೈಗಂಬರ್(ಸ) ಈ ಸ್ಥಳದ ಸಮೀಪ ತಲಪಿದಾಗ ಅಲ್ಲಾಹನು ಅವರಿಗೆ ಶತ್ರುಗಳು ಅಲ್ಲಿ ಮಾರ್ಗದ ಇಕ್ಕಡೆಗಳಲ್ಲೂ ಅವಿತುಕೊಂಡಿದ್ದಾರೆಂದು ತಿಳಿಸಿದನು. ಹಝ್‌ರತ್ ಪೈಗಂಬರ್(ಸ) ತನ್ನ ಒಬ್ಬ ಶಿಷ್ಯರನ್ನು, ಅಲ್ಲಿಗೆ ಹೋಗಿ ಪರಿಶೀಲಿಸಲು ಕಳುಹಿಸಿದರು. ಆ ಶಿಷ್ಯ ತನ್ನ ಸವಾರಿ ಮೃಗವನ್ನು ವೇಗವಾಗಿ ಓಡಿಸುತ್ತಾ ಅಲ್ಲಿಗೆ ತಲಪಿದಾಗ ಅಲ್ಲಿ ಕೆಲವು ಜನರು ಆಕ್ರಮಣ ಮಾಡಲು ಅಡಗಿ ಕುಳಿತಿರುವುದಾಗಿ ಕಂಡರು. ಆ ಜನರು ಕೂಡಲೆ ಅಲ್ಲಿಂದ ಓಡಿಹೋದರು. ಅವರನ್ನು ಬೆನ್ನಟ್ಟುವುದು ಬೇಡ ಎಂದು ಹಝ್‌ರತ್ ಪೈಗಂಬರ್ ನಿರ್ಧರಿಸಿದರು.

ಹಝ್‌ರತ್ ಪೈಗಂಬರ್(ಸ) ಮದೀನವನ್ನು ತಲಪಿದಾಗ ಕಪಟ ವಿಶ್ವಾಸಿಗಳು ತಾವು ಯುದ್ಧದಲ್ಲಿ ಭಾಗವಹಿಸಲು ಹೊರಡದಿದ್ದುದಕ್ಕೆ ನಾನಾ ನೆವನಗಳನ್ನು



ಹೇಳಲು ತೊಡಗಿದರು. ಹಝ್‌ರತ್ ಪೈಗಂಬರ್ ಅವರ ನೆವನಗಳನ್ನು ತಿರಸ್ಕರಿಸಲಿಲ್ಲ. ಆದರೆ ಕಪಟ ವಿಶ್ವಾಸಿಗಳ ವಾಸ್ತವಿಕ ಸ್ಥಿತಿಯನ್ನು ಮುಸ್ಲಿಮರಿಗೆ ಬಹಿರಂಗಪಡಿಸಬೇಕಾಗಿತ್ತು.

ಅಲ್ಲಾಹನು ತನ್ನ ಸಂದೇಶವಾಣಿ ಮೂಲಕ ಹಝ್‌ರತ್ ಪೈಗಂಬರ್‌ರಿಗೆ ಹೀಗೆ ಆಜ್ಞಾಪಿಸಿದನು:

“ನಮಾಝ್ ಮಾಡುವ ನೆವನದಿಂದ ಒಟ್ಟಿಗೆ ಸೇರಿ ಕಾಪಟ್ಯಭರಿತ ಸಮಾಲೋಚನೆ ನಡೆಸಲಿಕ್ಕೋಸ್ಕರ ಕಪಟ ವಿಶ್ವಾಸಿಗಳು ಖುಬಾದಲ್ಲಿ ನಿರ್ಮಿಸಿದ ಮಸ್‌ಜಿದನ್ನು ಕೆಡವಿ ಹಾಕಬೇಕು. ಅವರಿಗೆ ಮುಸ್ಲಿಮರ ಬೇರೆ ಮಸ್‌ಜಿದ್‌ಗಳಲ್ಲಿ ಪ್ರಾರ್ಥನೆ ಮಾಡಬೇಕೆಂದು ಆದೇಶಿಸಬೇಕು.”

ಆದರೆ ಕಪಟ ವಿಶ್ವಾಸಿಗಳು ಇಷ್ಟು ದೊಡ್ಡ ದುಷ್ಕೃತ್ಯವನ್ನು ಆಯೋಜಿಸಿದ್ದರೂ ಹಝ್‌ರತ್ ಪೈಗಂಬರ್(ಸ) ಅವರಿಗೆ ಯಾವುದೇ ದೈಹಿಕ ಅಥವಾ ಆರ್ಥಿಕ ಶಿಕ್ಷೆ ನೀಡಲಿಲ್ಲ.

ತಬೂಕ್‌ನಿಂದ ಹಝ್‌ರತ್ ಪೈಗಂಬರ್(ಸ) ಮರಳಿ ಬಂದ ನಂತರ ತಾಯಿಫ್ ನಗರದ ಜನರು ಬಂದು ವಿಧೇಯತೆಯನ್ನು ಪ್ರಕಟಿಸಿದರು. ಅನಂತರ ಅರಬ್ ದೇಶದ ವಿವಿಧ ಗೋತ್ರಗಳು ಸರದಿಯ ಪ್ರಕಾರ ಬಂದು ಇಸ್ಲಾಮೀ ಆಡಳಿತೆಯಲ್ಲಿ ಪ್ರವೇಶಿಸಲು ಅನುಮತಿಯನ್ನು ಯಾಚಿಸಿದರು. ಸ್ವಲ್ಪ ಸಮಯದೊಳಗೆ ಅರಬ್ ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಇಸ್ಲಾಮೀ ಪತಾಕೆ ಹಾರತೊಡಗಿತು.

## ಹಜ್ಜತುಲ್ ವಿದಾ – ಹಝ್‌ರತ್ ಪೈಗಂಬರರ(ಸ) ಪ್ರವಚನ

ಹಿಜರಿ ಒಂಬತ್ತನೆಯ ವರ್ಷ ಹಝ್‌ರತ್ ಪೈಗಂಬರ್(ಸ) ಮಕ್ಕಕ್ಕೆ ಹೋಗಿ ಹಜ್ಜ್ ಕರ್ಮಾನುಷ್ಠಾನ ಮಾಡಿದರು. ಅಲ್ಲಿ ಅವರಿಗೆ ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣಗೊಂಡಿತು:

**ಈ ದಿನ ನಾನು ನಿಮ್ಮ ಧರ್ಮವನ್ನು ನಿಮಗೋಸ್ಕರ ಪರಿಪೂರ್ಣಗೊಳಿಸಿರುವೆನು. ದೇವನಿಂದ ಮನುಷ್ಯರಿಗೆ ಸುರಿಸಲ್ಪಡಬಹುದಾದ ಎಲ್ಲಾ ಆಧ್ಯಾತ್ಮಿಕ ಅನುಗ್ರಹಗಳನ್ನು ನಿಮ್ಮ ಸಮುದಾಯಕ್ಕೆ ನಾನು ದಯಪಾಲಿಸಿರುವೆನು. ನಿಮ್ಮ ಧರ್ಮವು ಅನುಸರಣೆಯನ್ನು ಅಲ್ಲಾಹನಿಗಾಗಿ ಸೀಮಿತಗೊಳಿಸುವುದರಲ್ಲಿದೆ ಎಂಬ ವಿಷಯ ನಿರ್ಧರಿಸಲ್ಪಟ್ಟಿದೆ. (5 : 4)**

ಈ ವಚನವನ್ನು ಹಝ್‌ರತ್ ಪೈಗಂಬರ್(ಸ) ಹಜ್ಜ್ ವೇಳೆಯಲ್ಲಿ ಯಾತ್ರಿಕರು ಜಮಾಯಿಸುತ್ತಿದ್ದ ಮುಝ್‌ದಲಿಫದ ಮೈದಾನದಲ್ಲಿ ಉಚ್ಚ ಸ್ವರದಿಂದ ಓದಿ ಹೇಳಿದರು: ಮುಝ್‌ದಲಿಫದಿಂದ ಹಿಂದಿರುಗಿ ಅವರು ಹಜ್ಜ್ ಯಾತ್ರೆಯ ನಿಯಮಗಳ ಪ್ರಕಾರ ಮಿನಾದಲ್ಲಿ ತಂಗಿದರು. ಝುಲ್‌ಹಿಜ್ಜ ಹನ್ನೊಂದನೆಯ ದಿನಾಂಕದಂದು ಅವರು ಮುಸ್ಲಿಮರನ್ನು ಸಂಬೋಧಿಸಿ ಒಂದು ಪ್ರವಚನ ನೀಡಿದರು. ಅದು ಈ ರೀತಿ ಇತ್ತು:

*ಓ ಜನರೇ, ನೀವು ನನ್ನ ಮಾತುಗಳನ್ನು ಗಮನಕೊಟ್ಟು ಆಲಿಸಿರಿ. ಈ ವರ್ಷದ ನಂತರ ಎಂದಾದರೂ ನಾನು ನಿಮ್ಮ ಮಧ್ಯದಲ್ಲಿ ಈ ಮೈದಾನದಲ್ಲಿ ನಿಂತುಕೊಂಡು ಪ್ರವಚನ ನೀಡಲು ಸಾಧ್ಯವಾಗುವುದೋ ಎಂದು ನಾನರಿಯೆನು. ನಿಮ್ಮ ಜೀವಗಳನ್ನೂ ನಿಮ್ಮ ಸಂಪತ್ತನ್ನೂ ಪರಸ್ಪರ ಆಕ್ರಮಣ ಮಾಡುವುದರಿಂದ ಪುನರುತ್ಥಾನ ದಿನದ ತನಕ ಸಂರಕ್ಷಿಸಿರುವುದಾಗಿ ಅಲ್ಲಾಹನು ವಿಧಿಸಿರುವನು. ಅಲ್ಲಾಹನು ಪ್ರತಿಯೊಬ್ಬನಿಗೆ ವಾರೀಸು ಹಕ್ಕಾಗಿ ದೊರಕುವ ಪಾಲನ್ನು ನಿಗದಿಪಡಿಸಿರುವನು. ವಾರೀಸುದಾರರ ಹಕ್ಕುಗಳಿಗೆ ಹಾನಿಯನ್ನುಂಟುಮಾಡುವ ಯಾವುದೇ ಮರಣಶಾಸನ (ವಸಿಯ್ಯತ್) ನ್ಯಾಯಬದ್ಧವಲ್ಲ. ಒಂದು ಮನೆಯಲ್ಲಿ ಜನಿಸಿದ ಮಗು ಆ ಮನೆಯವರದೆಂದು ಗಣಿಸಲಾಗುವುದು. ಯಾರಾದರೂ ಅನೈತಿಕ ವರ್ತನೆಯ ಆಧಾರದಿಂದ ಆ ಮಗು ತನ್ನದೆಂದು ವಾದಿಸುವುದಾದರೆ ಅಂತಹ ವ್ಯಕ್ತಿ ಶರೀಅತಿನ ಶಿಕ್ಷೆಗೆ ಅರ್ಹನಾಗುವನು. ಯಾರಾದರೂ ಬೇರೆ ಒಬ್ಬನ ಪಿತನನ್ನು ತನ್ನ ಪಿತನೆಂದು ಹೇಳುವುದಾದರೆ ಮತ್ತು ಯಾರನ್ನಾದರೂ ಸುಳ್ಳು ಸುಳ್ಳಾಗಿ ತನ್ನ ಯಜಮಾನನೆಂದು ಹೇಳುತ್ತಾನೋ ಅವನ ಮೇಲೆ ಅಲ್ಲಾಹನ, ಅವನ ದಿವ್ಯದೂತರ ಮತ್ತು ಜನರ ಶಾಪ ಬಂದೆರಗುವುದು.*

*ಓ ಜನರೇ, ನಿಮ್ಮ ಪತ್ನಿಯರ ಮೇಲೆ ನಿಮಗೆ ಕೆಲವು ಹಕ್ಕುಗಳಿವೆ. ಹಾಗೆಯೇ ನಿಮ್ಮ ಮೇಲೆ ನಿಮ್ಮ ಪತ್ನಿಯರಿಗೆ ಕೆಲವು ಹಕ್ಕುಗಳಿವೆ. ನಿಮಗೆ ನಿಮ್ಮ ಪತ್ನಿಯರಿಂದ ದೊರಕಬೇಕಾದ ಹಕ್ಕುಗಳು ಇವುಗಳಾಗಿವೆ: ಅವರು ಸುಶೀಲೆಯರಾಗಿ ಜೀವಿಸಬೇಕು. ಪತಿಯ ಕುಟುಂಬಕ್ಕೆ ಮಾನ ಹಾನಿಯಾಗುವ ರೀತಿಯಲ್ಲಿ ಕೀಳು ಕೆಲಸಗಳನ್ನು ಮಾಡಬಾರದು, ಹಾಗೆ ಮಾಡಿದರೆ (ಪವಿತ್ರ ಖುರ್‌ಆನಿನ ಮಾರ್ಗದರ್ಶನದ ಪ್ರಕಾರ ತಪಾಸಣೆ ನಡೆಸಿ ನ್ಯಾಯಾಲಯದ ತೀರ್ಪು ಪ್ರಕಾರ) ಶಿಕ್ಷೆ ನೀಡಬಹುದು. ಆದರೆ ಅದರಲ್ಲೂ ಕಠೋರತೆ ತೋರಿಸಬಾರದು. ಪತಿಗೆ ಮತ್ತು ಕುಟುಂಬಕ್ಕೆ ಅಪಮಾನ ಉಂಟುಮಾಡುವ ಕೆಲಸಗಳಲ್ಲಿ ಪತ್ನಿ ನಿರತಳಾಗದಿದ್ದರೆ ನಿಮ್ಮ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಆಕೆಗೆ ಆಹಾರ ಮತ್ತು ಉಡುಗೆ ತೊಡುಗೆಗಳ ವ್ಯವಸ್ಥೆಯನ್ನು ಮಾಡಬೇಕು. ನೀವು ನಿಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಬೇಕು. ಏಕೆಂದರೆ ಅವರನ್ನು ಅಲ್ಲಾಹನು ನಿಮ್ಮ ಮೇಲ್ವಿಚಾರಣೆಗೆ ನೀಡಿರುವನು. ಮಹಿಳೆ ಬಲಹೀನಳಾಗಿರುತ್ತಾಳೆ. ಅವಳು ಸ್ವತಃ ತನ್ನ ಹಕ್ಕುಗಳನ್ನು ಸಂರಕ್ಷಿಸಲಾರಳು. ನೀವು ಅವರನ್ನು ವಿವಾಹವಾದಾಗ ಅಲ್ಲಾಹನನ್ನು ಅವರ ಹಕ್ಕುಗಳ ಜಾಮೀನುದಾರನನ್ನಾಗಿ ಮಾಡಲಾಗಿತ್ತು ಮತ್ತು ಅಲ್ಲಾಹನ ನಿಯಮಗಳ ಪ್ರಕಾರ ಅವರನ್ನು ನಿಮ್ಮ ಮನೆಗೆ ಕರೆದು ತರಲಾಗಿತ್ತು. (ಅಲ್ಲಾಹನ ಖಾತರಿಯನ್ನು ತಾತ್ಸಾರ ಮಾಡಬೇಡಿರಿ. ಮಹಿಳೆಯರ ಹಕ್ಕುಗಳ ಬಗ್ಗೆ ಯಾವಾಗಲೂ ಕಾಳಜಿ ವಹಿಸಬೇಕು.)*

*ಓ ಜನರೇ, ನಿಮ್ಮ ಅಧೀನದಲ್ಲಿ ಕೆಲವು ಯುದ್ಧ ಕೈದಿಗಳಿದ್ದಾರೆ. ಅವರಿಗೆ ನೀವು ತಿನ್ನುವುದನ್ನೇ ತಿನ್ನಲು ಕೊಡಿರಿ. ನೀವು ಧರಿಸುವುದನ್ನೇ ಅವರಿಗೆ ಧರಿಸಲು ಕೊಡಿರಿ. ನೀವು ಕ್ಷಮಿಸಲಾರದ ತಪ್ಪು ಅವರು ಮಾಡಿದ್ದರೆ ಅವರನ್ನು ಅನ್ಯರಿಗೆ*



*ಒಪ್ಪಿಸಿರಿ. ಏಕೆಂದರೆ ಅವರು ಸಹ ಅಲ್ಲಾಹನ ದಾಸರಾಗಿದ್ದಾರೆ. ಅವರಿಗೆ ಕಷ್ಟ ಕೊಡುವುದು ನ್ಯಾಯಬದ್ಧವಲ್ಲ. ಓ ಜನರೇ, ನಾನು ಹೇಳುವುದನ್ನು ಆಲಿಸಿರಿ ಮತ್ತು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಪ್ರತಿಯೊಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ನೀವೆಲ್ಲರೂ ಒಂದೇ ಅಂತಸ್ತನ್ನು ಪಡೆದಿರುವಿರಿ. ನೀವೆಲ್ಲರೂ ಯಾವ ಜನಾಂಗಕ್ಕೆ ಸೇರಿದವರಾಗಿದ್ದರೂ ಯಾವ ಸ್ಥಾನವನ್ನು ಹೊಂದಿದವರಾಗಿದ್ದರೂ ಮನುಷ್ಯರೆಂಬ ಸ್ಥಿತಿಯಲ್ಲಿ ಸಮಾನ ಸ್ಥಾನವನ್ನು ಹೊಂದಿರುವಿರಿ. (ಅವರು ಹೀಗೆ ಹೇಳುತ್ತಾ ಎರಡು ಕೈಗಳನ್ನೂ ಎತ್ತಿ ಹಿಡಿದು ಎರಡು ಕೈಗಳ ಬೆರಳುಗಳನ್ನು ಪರಸ್ಪರ ಜೋಡಿಸಿ ಹೇಳಿದರು:) ಎರಡು ಕೈಗಳ ಬೆರಳುಗಳು ಪರಸ್ಪರ ಸಮವಾಗಿರುವ ಹಾಗೆ ನೀವು ಮಾನವ ವರ್ಗಕ್ಕೆ ಸೇರಿದವರು ಪರಸ್ಪರ ಸಮಾನರಾಗಿದ್ದೀರಿ. ನೀವು ಪರಸ್ಪರ ಒಬ್ಬರಿಗಿಂತ ಇನ್ನೊಬ್ಬರು ಶ್ರೇಷ್ಠರೆಂದು ಹೇಳಲು ನಿಮಗೆ ಯಾವ ಅಧಿಕಾರವೂ ಇಲ್ಲ, ನೀವು ಪರಸ್ಪರ ಸಹೋದರರ ಹಾಗೆ ಇದ್ದೀರಿ.*

*ಅನಂತರ ಹಝ್ರತ್ ಪೈಗಂಬರ್(ಸ) ಕೇಳಿದರು: "ಇದು ಯಾವ ತಿಂಗಳು ಎಂದು ನಿಮಗೆ ತಿಳಿದಿದೆಯೋ? ಇದು ಯಾವ ಪ್ರದೇಶವೆಂದು ನಿಮಗೆ ತಿಳಿದಿದೆಯೋ? ಈ ದಿನ ಯಾವುದೆಂದು ನಿಮಗೆ ತಿಳಿದಿದೆಯೋ? ಜನರು ಹೇಳಿದರು: "ನಮಗೆ ತಿಳಿದಿದೆ, ಇದು ಪರಿಶುದ್ಧ ತಿಂಗಳಾಗಿದೆ. ಇದು ಪರಿಶುದ್ಧ ಪ್ರದೇಶವಾಗಿದೆ, ಇದು ಪರಿಶುದ್ಧ ಹಜ್ಜ್ ದಿನವಾಗಿದೆ.*

*ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವ ರೀತಿ ಇದು ಪರಿಶುದ್ಧ ತಿಂಗಳಾಗಿದೆಯೋ, ಇದು ಪರಿಶುದ್ಧ ಪ್ರದೇಶವಾಗಿದೆಯೋ, ಇದು ಪರಿಶುದ್ಧ ದಿನವಾಗಿದೆಯೋ ಅದೇ ರೀತಿ ಅಲ್ಲಾಹನು ಪ್ರತಿಯೊಬ್ಬ ಮನುಷ್ಯನ ಜೀವವನ್ನೂ ಅವನ ಸಂಪತ್ತನ್ನೂ ಪರಿಶುದ್ಧವೆಂದು ಘೋಷಿಸಿರುವನು. ಯಾರದಾದರೂ ಜೀವ ಅಥವಾ ಸಂಪತ್ತಿನ ಮೇಲೆ ಆಕ್ರಮಣ ಮಾಡುವುದು ಈ ತಿಂಗಳು, ಈ ಪ್ರದೇಶ ಮತ್ತು ಈ ದಿನಕ್ಕೆ ಅಪಮಾನ ಮಾಡುವ ಹಾಗಿದೆ. ಈ ಆಜ್ಞೆ ಇಂದಿನ ದಿನಕ್ಕೆ ಮಾತ್ರವಾಗಿರುವುದಲ್ಲ; ನಾಳೆಯ ದಿನಕ್ಕೆ ಮಾತ್ರವಾಗಿ ಇರುವುದಲ್ಲ; ನೀವು ಅಲ್ಲಾಹನನ್ನು ಕಾಣುವ ದಿನದ ತನಕ ಈ ಆಜ್ಞೆ ಜಾರಿಯಲ್ಲಿರುವುದು.*

*ನಾನು ಹೇಳುವ ಮಾತುಗಳನ್ನು ಲೋಕದಲ್ಲಿ ಎಲ್ಲಾ ಕಡೆಗಳಿಗೂ ತಲಪಿಸಿರಿ. ಪ್ರಾಯಶಃ ಈ ದಿನ ನನ್ನಿಂದ ಈ ಮಾತುಗಳನ್ನು ಆಲಿಸುವವರಿಗಿಂತ ನನ್ನಿಂದ ಈಗ ಆಲಿಸದವರು ಅವುಗಳನ್ನು ಹೆಚ್ಚು ಕೃತಿರೂಪಕ್ಕೆ ಇಳಿಸಬಹುದು.*

ಈ ಸಂಕ್ಷಿಪ್ತ ಪ್ರವಚನವು ಹಝ್ರತ್ ಪೈಗಂಬರರಿಗೆ(ಸ) ಮಾನವರ ಕಲ್ಯಾಣದ ಬಗ್ಗೆ ಮತ್ತು ಅವರ ಶಾಂತಮಯ ಜೀವಿತದ ಬಗ್ಗೆ ಎಷ್ಟು ಕಾಳಜಿ ಇತ್ತೆಂದು ಸ್ಪಷ್ಟಗೊಳಿಸುತ್ತದೆ. ಅವರಿಗೆ ಮಹಿಳೆಯರ ಮತ್ತು ಬಲಹೀನರ ಹಕ್ಕುಗಳ ಬಗ್ಗೆ ಎಷ್ಟು ಚಿಂತೆ ಇತ್ತು ಎಂಬುದನ್ನೂ ಅದು ಸೂಚಿಸುತ್ತದೆ.

ಹಝ್ರತ್ ಪೈಗಂಬರರಿಗೆ(ಸ) ತನ್ನ ಮರಣವು ಸಮೀಪಿಸಿದುದು ಮನವರಿಕೆಯಾಗುತ್ತಿತ್ತು. ಅಲ್ಲಾಹನು ಅವರಿಗೆ ಅವರ ಜೀವಿತದ ಉಳಿದ ಕಾಲಾವಧಿ ಸ್ವಲ್ಪವೆಂದು ಪ್ರಾಯಶಃ ತಿಳಿಸಿರಲೂಬಹುದು.

ಮನುಷ್ಯನ ಸೃಷ್ಟಿಯ ಆರಂಭದಿಂದ ಮೊದಲುಗೊಂಡು ಪುರುಷನ ದಾಸಿಯಾಗಿದ್ದ ಮಹಿಳೆಯ ಹಕ್ಕುಗಳನ್ನು ಸಂರಕ್ಷಿಸುವ ಆಜ್ಞೆಯನ್ನು ತಾನು ಇಹಲೋಕ ಬಿಡುವ ಮೊದಲೇ ನೀಡಬೇಕೆಂದು ಅವರು ಇಚ್ಛಿಸಿದರು. ಜನರು ಗುಲಾಮರೆಂದು ಕರೆದು ವಿವಿಧ ಹಿಂಸಾಚಾರಗಳಿಗೆ ಗುರಿಪಡಿಸುತ್ತಿದ್ದ ಯುದ್ಧ ಕೈದಿಗಳ ಹಕ್ಕುಗಳ ಸಂರಕ್ಷಣೆಯ ಆಜ್ಞೆ ನೀಡುವ ಮೊದಲು ಈ ಲೋಕವನ್ನು ಬಿಟ್ಟು ಹೋಗಬಾರದೆಂದು ಅವರು ಬಯಸಿದರು.

ಮನುಷ್ಯರ ಮಧ್ಯೆ ಇದ್ದ ತಾರತಮ್ಯತೆಯ ಪರಿಣಾಮವಾಗಿ ಕೆಲವರು ಆಕಾಶಕ್ಕೇರಿಸಲ್ಪಡುತ್ತಿದ್ದು, ಬೇರೆ ಕೆಲವರು ಪಾತಾಳಕ್ಕೆ ತಳ್ಳಲ್ಪಡುತ್ತಿದ್ದುದು ಜನಾಂಗಗಳ ಮತ್ತು ದೇಶಗಳ ಮಧ್ಯೆ ಭಿನ್ನತೆ ಮತ್ತು ಜಗಳಗಳನ್ನು ಉಂಟುಮಾಡಲು ಮತ್ತು ಅವುಗಳನ್ನು ಜಾರಿಯಲಿರ್ಲಿಸಲು ಮೂಲ ಕಾರಣವಾಗಿದ್ದು, ಈ ತಾರತಮ್ಯತೆಯನ್ನು ತಾನು ಈ ಲೋಕ ಬಿಟ್ಟು ಹೋಗುವ ಮೊದಲೇ ಅಳಿಸಬೇಕೆಂದು ಅವರ ಅಭಿಲಾಷೆಯಾಗಿತ್ತು.

ಒಬ್ಬ ಇನ್ನೊಬ್ಬನ ಹಕ್ಕುಗಳನ್ನು ಅಪಹರಿಸುವುದು, ಒಬ್ಬ ಇನ್ನೊಬ್ಬನ ಜೀವ ಹಾನಿಯನ್ನು ಮಾಡುವುದು ಮತ್ತು ಸಂಪತ್ತನ್ನು ಕೈವಶಪಡಿಸುವುದು ಸರಿಯೆಂದು ಭಾವಿಸುವುದು ದುಸ್ವಭಾವದ ಕಾಲಘಟ್ಟದಲ್ಲಿ ಮನುಷ್ಯನಿಗೆ ಯಾವಾಗಲೂ ಶಾಪಗ್ರಸ್ತವಾಗಿರುವ ಸ್ಥಿತಿಯಾಗಿದೆ. ಮನುಷ್ಯನ ಈ ಪರಧನ ವ್ಯಾಮೋಹವನ್ನು ದಮನಗೊಳಿಸಿ ಮನುಷ್ಯರ ಜೀವಗಳಿಗೆ ಮತ್ತು ಸಂಪತ್ತಿಗೆ ಅಲ್ಲಾಹನು ಪವಿತ್ರ ತಿಂಗಳಿಗೆ, ಪವಿತ್ರ ಪ್ರದೇಶಕ್ಕೆ ನೀಡುವಂತಹ ಪಾವಿತ್ರ್ಯವನ್ನು ಅವುಗಳಿಗೂ ನೀಡುವ ತನಕ ತಾನು ಈ ಲೋಕದಿಂದ ಅಗಲಿ ಹೋಗಬಾರದು ಎಂದು ಹಝ್ರತ್ ಪೈಗಂಬರ್(ಸ) ಇಚ್ಛಿಸಿದ್ದರು.

ಮಹಿಳೆಯರ ಬಗ್ಗೆ ಸಹಾನುಭೂತಿ, ಕೈಕೆಳಗೆ ಕೆಲಸ ಮಾಡುವವರ ಬಗ್ಗೆ ಸಹಾನುಭೂತಿ, ಮಾನವರಲ್ಲೆಲ್ಲಾ ಶಾಂತಿ ಸಮಾಧಾನವು ಸ್ಥಾಪಿತವಾಗಬೇಕೆಂಬ ಇಚ್ಛೆ, ಮಾನವರಲ್ಲೆಲ್ಲಾ ಸಮಾನತೆ ಸ್ಥಾಪಿತವಾಗಬೇಕೆಂಬ ಇಚ್ಛೆ, ಲೋಕದಲ್ಲಿ ಬೇರೆ ಯಾವ ಮನುಷ್ಯನಲ್ಲಿಯೂ ಇದ್ದಿತೇ? ಆದಮರ ಸೃಷ್ಟಿಯ ನಂತರ ಇಷ್ಟರ ತನಕ ಯಾವುದೇ ಮನುಷ್ಯನು ಸಕಲ ಮಾನವರಿಗೋಸ್ಕರ ಇಷ್ಟು ತೀವ್ರವಾಗಿ ಉತ್ಸಾಹಭರಿತ ಸಹಾನುಭೂತಿಯ ಭಾವನೆಯನ್ನು ಹೊಂದಿದ್ದನೇ?

ಇದೇ ಕಾರಣದಿಂದ ಇಂದಿನ ತನಕ ಇಸ್ಲಾಮ್ ಧರ್ಮದ ಪ್ರಕಾರ ಮಹಿಳೆ ತನ್ನ ಸ್ವಂತ ಸ್ವತ್ತಿನ ಮಾಲಿಕಳಾಗಿದ್ದಾಳೆ. ಆದರೆ ಯುರೋಪಿನ ಮಹಿಳೆಯರು ಇಸ್ಲಾಮ್ ಧರ್ಮ ಆಗಮಿಸಿ ಹದಿಮೂರು ನೂರು ವರ್ಷಗಳು ದಾಟಿ ಹೋದ ನಂತರ ಈ ಹಕ್ಕನ್ನು ಪಡೆದರು. ಯಾವುದೇ ಕೆಳಜಾತಿಗೆ ಸೇರಿದವನೆಂದು ಗಣಿಸಲ್ಪಡುವ



ವ್ಯಕ್ತಿ ಇಸ್ಲಾಮಿಗೆ ಸೇರಿದಾಗ ಇತರ ಮುಸ್ಲಿಮರಿಗೆ ಇದೇ ಕಾರಣದಿಂದ ಸಮಾನನಾಗುತ್ತಾನೆ. ಸ್ವಾತಂತ್ರ್ಯ ಮತ್ತು ಸಮಾನತೆಯ ಭಾವನೆಯನ್ನು ಇಸ್ಲಾಮ್ ಮಾತ್ರ ಲೋಕದಲ್ಲಿ ಸ್ಥಾಪಿಸಿತು. ಅದು ಯಾವ ರೀತಿ ಅದನ್ನು ಲೋಕದಲ್ಲಿ ಸ್ಥಾಪಿಸಿತೆಂದರೆ, ಇಂದಿನ ತನಕ ಲೋಕದ ಅನ್ಯ ಸಮುದಾಯಗಳು ಅದಕ್ಕೆ ಸಮಾನವಾದ ಉದಾಹರಣೆಯನ್ನು ತೋರಿಸಲು ಸಮರ್ಥರಾಗಲಾರವು.

ನಮ್ಮ ಮಸ್‌ಜಿದ್‌ಗಳಲ್ಲಿ ಒಬ್ಬ ದೊರೆ, ಒಬ್ಬ ಅತ್ಯಂತ ಹಿರಿಯ ಧಾರ್ಮಿಕ ನಾಯಕ ಮತ್ತು ಒಬ್ಬ ಸಾಮಾನ್ಯ ಮನುಷ್ಯ ಸಮಾನರಾಗಿರುತ್ತಾರೆ. ಅವರ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ. ಅವರು ಸಮಾನರಾಗಿ ಸಾಲಾಗಿ ನಿಂತು ಪ್ರಾರ್ಥಿಸುತ್ತಾರೆ. ಅನ್ಯ ಧರ್ಮದವರು ಮುಸ್ಲಿಮರಿಗಿಂತ ಉಚ್ಚ ಸ್ವರದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯ ಶಬ್ದವನ್ನು ಮೊಳಗಿಸುತ್ತಾ ಇರುವರಾದರೂ ಅವರ ಆರಾಧನಾಲಯಗಳಲ್ಲಿ ಇಂದು ಸಹ ಉಚ್ಚ–ನೀಚ ವ್ಯತ್ಯಾಸಗಳನ್ನು ಕಾಣಬಹುದಾಗಿದೆ.

## ಹಝ್ರತ್ ಪೈಗಂಬರರ(ಸ) ನಿಧನ

ಹಝ್ರತ್ ಪೈಗಂಬರ್(ಸ) ಹಜ್ಜ್ ಕರ್ಮಾನುಷ್ಠಾನ ಮಾಡಿ ಹಿಂದಿರುಗಿ ಬರುವಾಗ ಮಾರ್ಗ ಮಧ್ಯದಲ್ಲಿ ಅವರು ತನ್ನ ಶಿಷ್ಯರಿಗೆ ತನ್ನ ಮರಣವು ಸಮೀಪವಾಗಿರುವ ಕುರಿತು ಸೂಚನೆ ನೀಡುತ್ತಾ ಹೀಗೆಂದರು: "ನಾನು ನಿಮ್ಮ ಹಾಗೆಯೇ ಇರುವ ಒಬ್ಬ ಮನುಷ್ಯನಾಗಿದ್ದೇನೆ. ಅಲ್ಲಾಹನ ಒಬ್ಬ ದಿವ್ಯದೂತ ಬೇಗನೆ ನನ್ನನ್ನು ಕರೆದೊಯ್ಯಲು ಬಂದರೆ ನಾನು ಅವರ ಕರೆಗೆ ಓಗೊಡಬೇಕಾಗಬಹುದು."

ಅನಂತರ ಅವರು ಹೀಗೆಂದರು: "ಒಬ್ಬ ಪ್ರವಾದಿ ತನಗಿಂತ ಮೊದಲು ಆಗಮಿಸಿದ ಪ್ರವಾದಿಗಿಂತ ಕನಿಷ್ಠ ಅರ್ಧ ಆಯುಸ್ಸನ್ನು ಪಡೆಯುತ್ತಾರೆ." (ಹಝ್ರತ್ ಪೈಗಂಬರ್‌ರಿಗೆ(ಸ) ಹಝ್ರತ್ ಈಸಾ ಪ್ರವಾದಿಯ ಆಯುಸ್ಸು 120 ವರ್ಷವೆಂದು ತಿಳಿಸಲಾಗಿತ್ತು. ಆದುದರಿಂದ ತನ್ನ ಆಯುಸ್ಸು ಕನಿಷ್ಠ ಅರುವತ್ತು ವರ್ಷಗಳಾಗಬಹುದೆಂದು ಅವರು ಅದರಿಂದ ನಿಷ್ಕರ್ಷಿಸಿದ್ದರು. ಹಝ್ರತ್ ಪೈಗಂಬರ್ ಈ ಮಾತು ಹೇಳುವಾಗ ಅವರ ಪ್ರಾಯ ಅರುವತ್ತೆರಡು ಅರುವತ್ತು ಮೂರು ಆಗಿತ್ತು. ಆದುದರಿಂದ ತನ್ನ ಆಯುಸ್ಸು ಅಂತ್ಯವಾಗಲಿದೆ ಎಂದು ಅವರು ಸೂಚಿಸಿದರು. ಹಝ್ರತ್ ಪೈಗಂಬರ್ ಹೇಳಿದುದರ ಅರ್ಥ ಪ್ರತಿಯೊಬ್ಬ ಪ್ರವಾದಿ ತನಗಿಂತ ಮೊದಲಿನ ಪ್ರವಾದಿಯ ಅರ್ಧ ಆಯುಸ್ಸನ್ನು ಪಡೆಯುತ್ತಾರೆ ಎಂದಲ್ಲ. ಹಝ್ರತ್ ಪೈಗಂಬರ್ ತನ್ನ ಮತ್ತು ಹಝ್ರತ್ ಈಸಾ(ಅ) ಪ್ರಾಯದ ತುಲನೆ ಮಾಡಿ ಹೇಳಿದ್ದಾರೆ.)

ಹಝ್ರತ್ ಪೈಗಂಬರ್(ಸ) ಹೀಗೆ ಮುಂದುವರಿಸಿದರು: "ನಾನು ಬೇಗನೆ ಕರೆಯಲ್ಪಡುವೆನು ಮತ್ತು ಮೃತನಾಗುವೆನು ಎಂದು ನನಗೆ ತೋರುತ್ತದೆ. ಓ ನನ್ನ ಶಿಷ್ಯರೇ, ನನ್ನನ್ನು ಅಲ್ಲಾಹನ ಮುಂದೆ ಪ್ರಶ್ನಿಸಲಾಗುವುದು. ನಿಮ್ಮನ್ನು ಸಹ ಪ್ರಶ್ನಿಸಲಾಗುವುದು. ಆಗ ನೀವು ಏನು ಹೇಳುವಿರಿ?"

ಶಿಷ್ಯರು ಹೇಳಿದರು: "ಓ ಪೈಗಂಬರರೇ, ನಾವು ಹೀಗೆ ಹೇಳುವೆವು: ತಾವು ಇಸ್ಲಾಮಿನ ಪ್ರಚಾರವನ್ನು ಚೆನ್ನಾಗಿ ಮಾಡಿದಿರೆಂದೂ ನೀವು ನಿಮ್ಮ ಜೀವಿತವನ್ನು ಅಲ್ಲಾಹನ ಧರ್ಮದ ಸೇವೆಗೋಸ್ಕರ ಸಂಪೂರ್ಣವಾಗಿ ಸಮರ್ಪಿಸಿದಿರೆಂದೂ ನೀವು ಮಾನವರ ಶ್ರೇಯಸ್ಸನ್ನು ಪರಿಪೂರ್ಣತೆಗೆ ತಲಪಿಸಿದಿರೆಂದೂ. ಅಲ್ಲಾಹನು ನಿಮಗೆ ಅತ್ಯುತ್ತಮ ಪ್ರತಿಫಲವನ್ನು ನಮಗೆ ನೀವು ಮಾಡಿದ ಉತ್ತಮ ಸೇವೆಗಾಗಿ ನೀಡಲಿ ಎಂದು ನಾವು ಆಶಿಸುತ್ತೇವೆ."

ಹಝ್ರತ್ ಪೈಗಂಬರ್ ಹೇಳಿದರು: "ನೀವು ಈ ಎಲ್ಲಾ ವಿಷಯಗಳ ಸಾಕ್ಷ ನೀಡುವುದಿಲ್ಲವೇ?: ಅಲ್ಲಾಹನು ಏಕನಾಗಿದ್ದಾನೆ. ಮುಹಮ್ಮದ್ ಅವನ ದಾಸ ಮತ್ತು ಪೈಗಂಬರ್ ಆಗಿದ್ದಾರೆ. ಸ್ವರ್ಗವೂ ಸತ್ಯ, ನರಕವೂ ಸತ್ಯ, ಪ್ರತಿಯೊಬ್ಬನಿಗೆ ಮರಣವು ಖಂಡಿತವಾಗಿಯೂ ಬರಲಿದೆ. ಪ್ರತಿಯೊಬ್ಬ ಮನುಷ್ಯನಿಗೆ ಮರಣಾನಂತರ ಜೀವನವಿದೆ. ಖಿಯಾಮತ್ ಸಹ ಬರಲಿದೆ. ಅಲ್ಲಾಹನು ಎಲ್ಲಾ ಮಾನವರನ್ನು ಗೋರಿಯಿಂದ ಪುನರುಜ್ಜೀವನಗೊಳಿಸಿ ಜಮಾಯಿಸುವನು."

ಶಿಷ್ಯರು ಹೇಳಿದರು:

"ನಾವು ಈ ಎಲ್ಲಾ ವಿಷಯಗಳ ಬಗ್ಗೆ ಸಾಕ್ಷ್ಯ ಹೇಳುತ್ತೇವೆ."

ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು:

"ಓ ಅಲ್ಲಾಹ್, ನಾನು ಇಸ್ಲಾಮಿನ ತತ್ವಾದರ್ಶಗಳ ಸಂದೇಶ ಇವರಿಗೆ ತಲಪಿಸಿರುವುದಕ್ಕೆ ನೀನು ಸಾಕ್ಷಿಯಾಗು."

ಹಝ್ರತ್ ಪೈಗಂಬರ್(ಸ) ಹಜ್ಜ್‌ನಿಂದ ಮರಳಿ ಬಂದ ನಂತರ ಮುಸ್ಲಿಮರ ಸ್ವಭಾವ ಗುಣಗಳ ಮತ್ತು ಅವರ ನಡೆತಗಳ ಪರಿಷ್ಕರಣೆಯಲ್ಲಿ ಮಗ್ನರಾದರು. ತನ್ನ ಸಂಭಾವ್ಯ ಮರಣವನ್ನು ನಿರೀಕ್ಷಿಸಲು ಅವರನ್ನು ಸಿದ್ಧಗೊಳಿಸುತ್ತಿದ್ದರು. ಅವರು ಒಂದು ದಿನ ಪ್ರವಚನ ಮಾಡುತ್ತಾ ಹೇಳಿದರು:

"ಇಂದು ನನಗೆ ಅಲ್ಲಾಹನಿಂದ ಹೀಗೆ ಸಂದೇಶವಾಣಿ ಲಭಿಸಿದೆ: ಮುಂದಿನ ಆ ದಿನವನ್ನು ನೆನಪಿಸಿರಿ, ಆ ದಿನ ಅಲ್ಲಾಹನ ಸಹಾಯ ಮತ್ತು ಅವನ ಕಡೆಯಿಂದ ವಿಜಯಗಳು ಹಿಂದಿನ ಕಾಲಕ್ಕಿಂತ ಹೆಚ್ಚು ರಭಸದಿಂದ ಬರುವುವು. ಪ್ರತಿಯೊಂದು ಜನಾಂಗದ ಜನರು ಇಸ್ಲಾಮ್ ಧರ್ಮದಲ್ಲಿ ಗುಂಪು ಗುಂಪಾಗಿ ಪ್ರವೇಶಿಸಲು ತೊಡಗುವರು. ಓ ಮುಹಮ್ಮದ್, ನೀವು ಅಲ್ಲಾಹನನ್ನು ಸ್ತುತಿಸಿರಿ. ನೀವು ಬೇಡಿಕೊಳ್ಳಿರಿ. ನೀವು ಅಸ್ತಿಭಾರ ಹಾಕಿದ ಧರ್ಮದಿಂದ ಅವನು ಎಲ್ಲಾ ಕುಂದು ಕೊರತೆಗಳನ್ನು ದೂರ ಸರಿಸುವವನಾಗಲಿ. ನೀವು ಈ ಪ್ರಾರ್ಥನೆಗಳನ್ನು ಮಾಡಿದರೆ ಅಲ್ಲಾಹನು ನಿಶ್ಚಯವಾಗಿಯೂ ನಿಮ್ಮ ಪ್ರಾರ್ಥನೆಗಳನ್ನು ಆಲಿಸುವನು."

ಹಝ್ರತ್ ಪೈಗಂಬರ್(ಸ) ಹೀಗೆ ಸಹ ಹೇಳಿದರು: "ಅಲ್ಲಾಹನು ತನ್ನ ದಾಸನೊಂದಿಗೆ ಹೇಳಿದನು. 'ನೀನು ನನ್ನ ಸಮೀಪಕ್ಕೆ ಬರಬಹುದು ಅಥವಾ ಲೋಕದ ಉದ್ದಾರಕ್ಕಾಗಿ ಇನ್ನಷ್ಟು ಕಾಲವನ್ನು ವ್ಯಯಿಸಬಹುದು.' ಆಗ ಅಲ್ಲಾಹನ



ದಾಸನು ಹೇಳಿದನು: 'ನನಗೆ ನಿನ್ನ ಬಳಿಗೆ ಬರುವುದು ಹೆಚ್ಚು ಪ್ರಿಯವಾಗಿದೆ.' "

ಈ ಪ್ರವಚನವನ್ನು ಆಲಿಸಿ ಹಝ್ರತ್ ಅಬೂಬಕರ್(ರ) ಅಳಲು ತೊಡಗಿದರು. ಆಗ ಶಿಷ್ಯರಿಗೆ ಆಶ್ಚರ್ಯವಾಯಿತು. ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ವಿಜಯಗಳ ಕುರಿತು ಹೇಳುವಾಗ ಹಝ್ರತ್ ಅಬೂಬಕರ್(ರ) ಅಳುವುದೇಕೆಂದು ಅವರಿಗೆ ಅರ್ಥವಾಗಲಿಲ್ಲ.

ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ:

"ನಾನು ಹೀಗೆ ಹೇಳಿದೆ – ಈ ಮುದುಕನಿಗೇನಾಗಿದೆ? ಸಂತೋಷದ ಸಮಾಚಾರವನ್ನು ಆಲಿಸಿ ಅಳುತ್ತಾರೆ."

ಹಝ್ರತ್ ಪೈಗಂಬರ್(ಸ) ಹೀಗೆ ತಿಳಿದುಕೊಂಡರು: ಹಝ್ರತ್ ಅಬೂಬಕರ್ ಮಾತ್ರ ನನ್ನ ಮಾತುಗಳನ್ನು ಸರಿಯಾಗಿ ಅರ್ಥಮಾಡಿ ಕೊಂಡಿದ್ದಾರೆ. ನನಗೆ ಅವತೀರ್ಣವಾದ ವಚನಗಳಲ್ಲಿ ನನ್ನ ಮರಣವು ಸಮೀಪಿಸಿರುವ ಬಗ್ಗೆ ಸೂಚನೆ ಇದೆ ಎಂದು ಅವರು ಮನವರಿಕೆ ಮಾಡಿರುವರು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಅಬೂಬಕರ್ ನನಗೆ ಬಹಳ ಪ್ರಿಯರಾಗಿದ್ದಾರೆ. ಅಲ್ಲಾಹನ ಹೊರತು ಬೇರೆ ಯಾರನ್ನಾದರೂ ಅಮಿತವಾಗಿ ಪ್ರೀತಿಸುವುದು ಅನುಮತಿಸಲ್ಪಡುವುದಾದರೆ ನಾನು ಅಬೂಬಕರ್‌ರನ್ನು ಪ್ರೀತಿಸುತ್ತಿದ್ದೆ. ಈ ಮಸ್‌ಜಿದ್‌ಗೆ ಪ್ರವೇಶಿಸಲು ಯಾರದೆಲ್ಲಾ ಮನೆಗಳಿಂದ ಬಾಗಿಲುಗಳು ತೆರೆಯಲ್ಪಟ್ಟಿವೆಯೋ ಆ ಬಾಗಿಲುಗಳಲ್ಲಿ ಅಬೂಬಕರ್‌ರ ಮನೆಯ ಬಾಗಿಲನ್ನು ಹೊರತುಪಡಿಸಿ ಉಳಿದೆಲ್ಲಾ ಬಾಗಿಲುಗಳನ್ನು ಮುಚ್ಚಿ ಬಿಡಿರಿ."

ಹಝ್ರತ್ ಪೈಗಂಬರರ ಈ ಆದೇಶದಲ್ಲಿ ಒಂದು ಭವಿಷ್ಯವಾಣಿಯು ಅಡಕವಾಗಿತ್ತು. ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಹಝ್ರತ್ ಅಬೂಬಕರ್(ರ) ಖಲೀಫರಾಗುವರೆಂದೂ ನಮಾಝ್‌ಗಾಗಿ ಅವರು ಈ ಬಾಗಿಲಿನ ಮೂಲಕ ಮಸ್‌ಜಿದನ್ನು ಪ್ರವೇಶಿಸುವರೆಂದೂ ಅದರಲ್ಲಿ ಸೂಚನೆ ಇತ್ತು.

ಹಝ್ರತ್ ಉಮರ್(ರ) ಈ ಘಟನೆಯ ನಂತರ ಕೆಲವು ವರ್ಷಗಳು ಕಳೆದು ಖಲೀಫರಾದಾಗ ಅವರು ತನ್ನ ಸುತ್ತು ಮುತ್ತಲು ಕುಳಿತ್ತಿದ್ದವರೊಂದಿಗೆ ಕೇಳಿದರು:

"ಪವಿತ್ರ ಖುರ್‌ಆನಿನ, 'ಅಲ್ಲಾಹನ ಸಹಾಯ ಮತ್ತು ವಿಜಯಗಳು ಬರುವಾಗ' ಎಂದು ಪ್ರಾರಂಭವಾಗುವ ಅಧ್ಯಾಯದಲ್ಲಿ ಯಾವ ವಿಷಯವು ಸೂಚಿಸಲ್ಪಟ್ಟಿದೆ?" ಅವರು ಈ ಅಧ್ಯಾಯದ ಕುರಿತು ತನ್ನ ಸಂಗಡಿಗರನ್ನು ಪರೀಕ್ಷಿಸಲು ಉದ್ದೇಶಿಸಿದ್ದರು. ಆ ಅಧ್ಯಾಯ ಅವತೀರ್ಣವಾದಾಗ ಅದರ ಒಳಾರ್ಥವನ್ನು ಮನವರಿಕೆ ಮಾಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಇಬ್ನು ಅಬ್ಬಾಸ್ ಆ ಅಧ್ಯಾಯದ ಅವತೀರ್ಣದ ಕಾಲದಲ್ಲಿ ಹತ್ತು, ಹನ್ನೊಂದು ವರ್ಷ ಪ್ರಾಯದವರಾಗಿದ್ದರು. ಅವರು ಈ ಸಂದರ್ಭದಲ್ಲಿ 17–18ರ ತರುಣರಾಗಿದ್ದರು. ಉಳಿದ ಶಿಷ್ಯರಿಗೆ ಏನೂ ಹೇಳಲಾಗಲಿಲ್ಲ.

ಆದರೆ ಇಬ್ನು ಅಬ್ಬಾಸ್ ಹೀಗೆ ಉತ್ತರ ನೀಡಿದರು:

“ಓ ಅಮೀರುಲ್‌ಮೂಮಿನೀನ್, (ಸತ್ಯ ವಿಶ್ವಾಸಿಗಳ ನೇತಾರರೇ) ಈ ಅಧ್ಯಾಯದಲ್ಲಿ ಹಝ್‌ರತ್ ಪೈಗಂಬರ್(ಸ) ನಿಧನ ಹೊಂದುವ ಕುರಿತು ಸಮಾಚಾರವನ್ನು ನೀಡಲಾಗಿತ್ತು. ಪೈಗಂಬರ್(ಸ) ತನ್ನ ಕೆಲಸವನ್ನು ಈಡೇರಿಸಿದ ನಂತರ ಇಹ ಲೋಕದಲ್ಲಿ ಇನ್ನಷ್ಟು ಕಾಲ ಜೀವಿಸಲು ಬಯಸುವುದಿಲ್ಲ.”

ಹಝ್‌ರತ್ ಉಮರ್(ರ) ಹೇಳಿದರು: “ನೀವು ಹೇಳಿದುದು ಸತ್ಯವಾಗಿದೆ. ನಾನು ನಿಮ್ಮ ಬುದ್ದಿ ಶಕ್ತಿಯನ್ನು ಅಭಿನಂದಿಸುತ್ತೇನೆ. ಈ ಅಧ್ಯಾಯ ಅವತೀರ್ಣವಾದಾಗ ಹಝ್‌ರತ್ ಅಬೂಬಕರ್(ರ) ಅದರ ಒಳಾರ್ಥವನ್ನು ಗ್ರಹಿಸಿದರು. ಆದರೆ ನನಗೆ ಗ್ರಹಿಸಲು ಸಾಧ್ಯವಾಗಲಿಲ್ಲ.”

ಕೊನೆಗೆ ಎಲ್ಲಾ ಮನುಷ್ಯರ ಜೀವಿತದಲ್ಲಿಯೂ ಬರುವ ಆ ದಿನವು ಹಝ್‌ರತ್ ಪೈಗಂಬರರ(ಸ) ಜೀವಿತದಲ್ಲಿಯೂ ಬಂದಿತು. ಅವರು ಇಹಲೋಕದಲ್ಲಿ ತನ್ನ ಕೆಲಸಗಳನ್ನೆಲ್ಲಾ ಈಡೇರಿಸಿದ್ದರು. ಅಲ್ಲಾಹನ ಸಂದೇಶ ವಚನಗಳು ಪರಿಪೂರ್ಣವಾಗಿ ಅವತೀರ್ಣವಾಗಿದ್ದುವು. ಹಝ್‌ರತ್ ಪೈಗಂಬರರ(ಸ) ಪರಿಶುದ್ದ ಶಕ್ತಿಯಿಂದ ಹೊಸದಾದೊಂದು ಸಮುದಾಯ, ಹೊಸ ಆಕಾಶ ಮತ್ತು ಹೊಸ ಭೂಮಿಯ ಅಸ್ತಿಭಾರವು ಹಾಕಲಾಗಿತ್ತು. ಬೀಜ ಬಿತ್ತುವವರಾದ ಅವರು ಭೂಮಿಯನ್ನು ಉಳುವ ಕೆಲಸ ಮಾಡಿದರು, ನೀರು ಹಾಯಿಸಿದರು, ಬೀಜ ಬಿತ್ತಿದರು ಮತ್ತು ಫಸಲು ಕಟಾವಿಗೆ ಬಂತು. ಆದರೆ ಬೆಳೆಯನ್ನು ಕಟಾವು ಮಾಡುವುದು ಅವರ ಜವಾಬ್ದಾರಿಗೆ ಸೇರಿರಲಿಲ್ಲ. ಅವರು ಒಬ್ಬ ಕೂಲಿಕಾರನ ಹಾಗೆ ಬಂದರು. ಕೂಲಿಕಾರನ ಹಾಗೆ ದುಡಿದು ಕೂಲಿಕಾರನ ಹಾಗೆ ಇಹಲೋಕದಿಂದ ಹೋದರು. ಅವರಿಗೆ ಸಿಗಬೇಕಾದ ಪಾರಿತೋಷಕ ಇಹಲೋಕದ ಸಾಮಗ್ರಿಗಳ ಮೂಲಕವಾಗಿರಲಿಲ್ಲ. ಅವರಿಗೆ ಸಿಗುವ ಪಾರಿತೋಷಕ ತನ್ನನ್ನು ಸೃಷ್ಟಿಸಿದವನ ಮತ್ತು ತನ್ನನ್ನು ಕಳುಹಿಸಿದವನ ಸಂಪ್ರೀತಿಯಾಗಿತ್ತು. ತಾನು ಬಿತ್ತಿದ ಬೀಜದ ಬೆಳೆಯು ಕೊಯ್ಲಿಗೆ ಬಂದಾಗ ಹಝ್‌ರತ್ ಪೈಗಂಬರ್(ಸ) ಅಲ್ಲಾಹನೊಂದಿಗೆ ಹೀಗೆ ಅಪೇಕ್ಷಿಸಿದರು: ನನ್ನನ್ನು ಇಹಲೋಕದಿಂದ ಕರೆದುಕೊಳ್ಳು, ಕೊಯ್ಲಿಗೆ ಬಂದ ಬೆಳೆಯನ್ನು ಬೇರೆ ಜನರು ಕೊಯ್ಯಲಿ.

ಹಝ್‌ರತ್ ಪೈಗಂಬರ್(ಸ) ಅಸ್ವಸ್ಥರಾದರು. ಕೆಲವು ದಿವಸ ಅವರು ಕಷ್ಟದಿಂದ ಮಸ್‌ಜಿದ್‌ಗೆ ನಮಾಝ್‌ಗೋಸ್ಕರ ಬರುತ್ತಾ ಇದ್ದರು. ಅನಂತರ ಅವರು ಹೆಚ್ಚು ಬಲಗುಂದಿದವರಾದಾಗ ಮಸ್‌ಜಿದ್‌ಗೆ ಬರಲು ಸಾಧ್ಯವಾಗಲಿಲ್ಲ.

ಹಝ್‌ರತ್ ಪೈಗಂಬರ್(ಸ) ಮೃತರಾಗುವರೆಂದು ಶಿಷ್ಯರು ಎಂದೂ ಯೋಚಿಸಲು ಸಾಧ್ಯವಿರಲಿಲ್ಲ. ಆದರೆ ಅವರು ತನ್ನ ಮರಣ ಸಮೀಪವಾಗಿರುವುದನ್ನುಪದೇಪದೇ ಸೂಚಿಸುತ್ತಾ ಇದ್ದರು.

ಒಂದು ದಿನ ಶಿಷ್ಯರು ಸೇರಿದ್ದಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು:



“ಒಬ್ಬನು ತಪ್ಪು ಕೆಲಸ ಮಾಡಿದ್ದರೆ ಆತನು ಈ ಲೋಕದಲ್ಲಿಯೇ ಅದಕ್ಕೆ ಪರಿಹಾರ ಮಾಡಿಕೊಳ್ಳುವುದು ಉತ್ತಮವಾಗಿದೆ. ಹಾಗೆ ಮಾಡಿದರೆ ಅವನು ಅಲ್ಲಾಹನ ಮುಂದೆ ಲಜ್ಜಿತನಾಗಲಾರನು. ನಾನು ತಿಳಿಯದೆ ಯಾರದಾದರೂ ಹಕ್ಕನ್ನು ಅಪಹರಿಸಿದ್ದರೆ ತನ್ನ ಹಕ್ಕಿನಿಂದ ವಂಚಿತನಾದವನು ನನ್ನಿಂದ ತನ್ನ ಹಕ್ಕನ್ನು ಕೇಳಿ ಪಡೆದುಕೊಳ್ಳಲಿ. ನನಗೆ ತಿಳಿಯದೆ ನಾನು ಯಾರಿಗಾದರೂ ಕಷ್ಟ ಕೊಟ್ಟಿದ್ದರೆ ಹಾಗೆ ಕಷ್ಟವನ್ನು ಅನುಭವಿಸಿದವನು ನನಗೆ ಪ್ರತೀಕಾರ ಮಾಡಲಿ. ಏಕೆಂದರೆ ನಾನು ಅಲ್ಲಾಹನ ಮುಂದೆ ನನ್ನ ತಪ್ಪುಗಳ ಕಾರಣದಿಂದ ಲಜ್ಜಿತನಾಗಲು ಇಚ್ಛಿಸುವುದಿಲ್ಲ.”

ಹಝ್‌ರತ್ ಪೈಗಂಬರರ(ಸ) ಈ ಮಾತುಗಳನ್ನು ಆಲಿಸಿದಾಗ ಶಿಷ್ಯರಿಗೆ ದುಃಖ ಉಮ್ಮಳಿಸಿ ಬಂದಿತು. ಅವರ ಹೃದಯದಲ್ಲಿ ಈ ಯೋಚನೆಗಳು ಹಾದು ಹೋದುವು: ಹಝ್‌ರತ್ ಪೈಗಂಬರರು(ಸ) ಎಷ್ಟೆಲ್ಲಾ ಕಷ್ಟಪಟ್ಟು ನಮಗೆ ಸುಖವುಂಟಾಗಲು ಪ್ರಯತ್ನಿಸುತ್ತಾ ಇದ್ದರು. ಸ್ವತಃ ಹಸಿವೆಯಿಂದ ಇದ್ದು ನಮಗೆ ಉಣಬಡಿಸುತ್ತಾ ಇದ್ದರು. ತೇಪೆ ಹಾಕಿದ ಬಟ್ಟೆಗಳನ್ನು ಅವರು ಧರಿಸಿ ನಮಗೆ ಒಳ್ಳೆಯ ಬಟ್ಟೆಗಳನ್ನು ಧರಿಸಲು ಕೊಡುತ್ತಿದ್ದರು. ಹೀಗಿದ್ದರೂ ಅನ್ಯರ ಹಕ್ಕುಗಳ ಕುರಿತು ಅವರಿಗೆ ಎಷ್ಟು ಕಾಳಜಿ ಇದೆ ಎಂದರೆ ಯಾರಿಗಾದರೂ ತನ್ನ ತಿಳುವಳಿಕೆಗೆ ಬಾರದೆ ತನ್ನಿಂದ ಕಷ್ಟ ಉಂಟಾಗಿದ್ದರೆ ಅದಕ್ಕೆ ಪ್ರತೀಕಾರ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ.

ಆಗ ಒಬ್ಬ ಶಿಷ್ಯ ಮುಂದೆ ಬಂದು ಹೀಗೆಂದರು: “ನನಗೆ ನಿಮ್ಮಿಂದ ಒಂದು ಸಾರಿ ಕಷ್ಟ ಉಂಟಾಗಿತ್ತು. ಸೈನಿಕರನ್ನು ಸಾಲಾಗಿ ನಿಲ್ಲಿಸುತ್ತಾ ಇರುವಾಗ ನೀವು ಸಾಲಿನ ಮಧ್ಯೆ ಹೋಗುವಾಗ ನಿಮ್ಮ ಮೊಣಕೈ ನನ್ನ ಶರೀರಕ್ಕೆ ತಗಲಿತ್ತು. ನಿಮಗೆ ತಿಳಿಯದೆ ನಿಮ್ಮಿಂದ ಯಾರಿಗಾದರೂ ಕಷ್ಟ ಉಂಟಾಗಿದ್ದರೆ ಅದಕ್ಕೆ ಪ್ರತೀಕಾರ ಮಾಡಬಹುದೆಂದು ನೀವು ಹೇಳಿದಿರಿ. ನಾನು ನಿಮ್ಮಿಂದ ಉಂಟಾದ ಆ ಕಷ್ಟಕ್ಕೆ ಈಗ ಪ್ರತೀಕಾರ ಮಾಡಲು ಬಯಸುತ್ತೇನೆ.” ಈ ಮಾತುಗಳನ್ನು ಕೇಳಿ ದುಃಖದ ಕಡಲಲ್ಲಿ ಮುಳುಗುತ್ತಾ ಇದ್ದ ಶಿಷ್ಯರ ಸ್ಥಿತಿ ಕೂಡಲೆ ಪರಿವರ್ತನೆಗೊಂಡಿತು. ಅವರ ಕಣ್ಣುಗಳು ರಕ್ತಮಯವಾಗಲು ತೊಡಗಿದುವು. ಇಂತಹ ಸಂದರ್ಭದಲ್ಲಿ ಹಝ್‌ರತ್ ಪೈಗಂಬರರಿಂದ ಉಪದೇಶ ಪಡೆಯುವುದಕ್ಕೆ ಬದಲಾಗಿ ಈ ವ್ಯಕ್ತಿ ಇಂತಹ ಮಾತುಗಳನ್ನು ಹೇಳುತ್ತಾನಲ್ಲ. ಈ ವ್ಯಕ್ತಿ ಕಠಿಣ ಶಿಕ್ಷೆಗೆ ಅರ್ಹನಾಗಿದ್ದಾನೆ ಎಂದು ಶಿಷ್ಯರು ಭಾವಿಸಲು ತೊಡಗಿದರು. ಆದರೆ ಆ ಶಿಷ್ಯ ಅವರನ್ನು ನಿರ್ಲಕ್ಷಿಸುತ್ತಾ ಇದ್ದರು. ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು:

“ನೀವು ಹೇಳಿದುದು ಸರಿಯೇ ಆಗಿದೆ. ನಿಮಗೆ ಪ್ರತೀಕಾರ ಮಾಡುವ ಹಕ್ಕಿದೆ.”

ಹಝ್‌ರತ್ ಪೈಗಂಬರ್(ಸ) ಬೆನ್ನು ತೋರಿಸಿ ಹೇಳಿದರು: “ನೀವು ನಿಮ್ಮ ಮೊಣಕೈಯಿಂದ ಗುದ್ದಿರಿ.”

ಆಗ ಆ ಶಿಷ್ಯ ಹೇಳಿದರು: “ನಿಮ್ಮ ಮೊಣಕೈ ತಗಲಿದಾಗ ನನ್ನ ಶರೀರ

ನಗ್ನವಾಗಿತ್ತು, ನನಗೆ ಧರಿಸಲು ಅಂಗಿ ಇರಲಿಲ್ಲ.”

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: “ನನ್ನ ಅಂಗಿಯನ್ನು ಎತ್ತಿ ಬರಿ ಮೈ ಮೇಲೆ ಮೊಣಕೈಯಿಂದ ಗುದ್ದಿರಿ.”

ಆಗ ಆ ಶಿಷ್ಯ ಹಝ್ರತ್ ಪೈಗಂಬರರ(ಸ) ಅಂಗಿಯನ್ನು ಎತ್ತಿ ಹಿಡಿದು ನಡುಗುತ್ತಿರುವ ತುಟಿಗಳಿಂದಲೂ ಅಶ್ರುಭರಿತ ನಯನಗಳಿಂದಲೂ ತಲೆ ಬಾಗಿ ಹಝ್ರತ್ ಪೈಗಂಬರರ ಬೆನ್ನನ್ನು ಚುಂಬಿಸಿದರು.

ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: “ಇದೇನು?”

ಆಗ ಆ ಶಿಷ್ಯ ಹೇಳಿದರು: “ಓ ಅಲ್ಲಾಹನ ಪೈಗಂಬರರೇ, ನೀವು ನಮ್ಮಿಂದ ಬೇಗನೆ ಅಗಲಿ ಹೋಗುವುದಾಗಿ ಹೇಳುತ್ತಿರುವಿರಿ. ಹೀಗಿರುವಾಗ ತಮ್ಮನ್ನು ಸ್ಪರ್ಶಿಸಲು ಮತ್ತು ಪ್ರೀತಿಯನ್ನು ಸೂಚಿಸಲು ಸಂದರ್ಭ ಇನ್ನೆಷ್ಟು ಕಾಲ ನಮಗೆ ಸಿಗುವುದು? ಯುದ್ಧದ ಸಮಯದಲ್ಲಿ ನಿಶ್ಚಯವಾಗಿಯೂ ನಿಮ್ಮ ಮೊಣಕೈ ನನ್ನ ಮೈಗೆ ತಗಲಿತ್ತು. ಆದರೆ ಅದಕ್ಕೆ ಪ್ರತೀಕಾರ ಮಾಡಲು ಯಾವುದಾದರೂ ಹೃದಯದಲ್ಲಿ ಆಲೋಚನೆ ಸ್ಫುರಿಸಲು ಸಾಧ್ಯವಿದೆಯೋ? ಹಝ್ರತ್ ಪೈಗಂಬರರು ತನ್ನಿಂದ ಕಷ್ಟಕ್ಕೊಳಗಾದವರು ತನಗೆ ಪ್ರತೀಕಾರ ಮಾಡಬಹುದೆಂದು ಹೇಳಿದಾಗ ನಾನು ಈ ನೆವನದಿಂದಾದರೂ ನನ್ನ ಪ್ರೇಮಾದರಗಳನ್ನು ಸೂಚಿಸಬಹುದೆಂದು ಯೋಚಿಸಿದೆನು.”[83]

ಕೋಪಾವೇಶದಿಂದ ಕುದಿಯುತ್ತಿದ್ದ ಶಿಷ್ಯರು ಆ ಶಿಷ್ಯರ ಮಾತುಗಳನ್ನು ಕೇಳಿದಾಗ ಅವರ ಕೋಪ ತಣ್ಣಗಾಗಿ, “ಅಯ್ಯೋ, ನಮಗೆ ಸಹ ಇಂತಹ ಸದವಕಾಶ ಲಭಿಸಿದ್ದರೆ ಎಷ್ಟು ಚೆನ್ನಾಗಿತ್ತು!” ಎಂದು ಭಾವಿಸಲು ತೊಡಗಿದರು.

ಹಝ್ರತ್ ಪೈಗಂಬರರ(ಸ) ರೋಗ ಉಲ್ಬಣಿಸಿತು. ಮರಣವು ಸನ್ನಿಹಿತವಾಯಿತು. ಮದೀನದ ಸೂರ್ಯ ಎಂದಿನಂತೆ ಪ್ರಜ್ವಲಿಸುತ್ತಾ ಇದ್ದರೂ ಹಝ್ರತ್ ಪೈಗಂಬರರ ಶಿಷ್ಯರಿಗೆ ಕಳಾಹೀನನಾಗಿ ಕಾಣಿಸಿತು. ಸೂರ್ಯ ಉದಿಸಿ ಮೇಲೇರುತ್ತಿದ್ದರೂ ಹಝ್ರತ್ ಪೈಗಂಬರರ ಶಿಷ್ಯರ ಕಣ್ಣುಗಳಿಗೆ ಅಂಧಕಾರದ ಮುಸುಕು ಬೀಳುತ್ತಿತ್ತು.

ಕೊನೆಗೆ ಅಲ್ಲಾಹನ ಪೈಗಂಬರರ(ಸ) ಆತ್ಮವು ಇಹಲೋಕವನ್ನು ಬಿಟ್ಟು ತನ್ನ ಸೃಷ್ಟಿಕರ್ತನ ಸನ್ನಿಧಿಯಲ್ಲಿ ಹಾಜರಾಗುವ ಸಮಯ ಬಂದಿತು. ಹಝ್ರತ್ ಪೈಗಂಬರರ(ಸ) ಶ್ವಾಸೋಚ್ಛ್ವಾಸ ತೀವ್ರಗತಿ ಪಡೆಯಲು ಪ್ರಾರಂಭವಾಯಿತು. ಶ್ವಾಸೋಚ್ಛ್ವಾಸ ಕಷ್ಟಕರವಾಯಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು:

“ಆಯಿಶಾ, ನನ್ನ ತಲೆಯನ್ನು ಎತ್ತಿಹಿಡಿದು ನಿನ್ನ ಎದೆಗೆ ಆನಿಸಿ ಇಟ್ಟುಕೊಳ್ಳು. ಏಕೆಂದರೆ ಮಲಗಿ ಉಸಿರಾಡಲು ಆಗುವುದಿಲ್ಲ. ಹಝ್ರತ್ ಆಯಿಶಾ(ರ) ಪೈಗಂಬರರ(ಸ) ತಲೆಯನ್ನು ತನ್ನ ಎದೆಗೆ ಆನಿಸಿ ಇಟ್ಟುಕೊಂಡು ಕುಳಿತುಕೊಂಡರು.

83. ಬುಖಾರಿ ಕಿತಾಬುಲ್ ಮಘಾಝಿ ಬಾಬ್ ಮರ್‌ಝುನ್ನಬೀ ವ ವಫಾತಹು.



ಆಗ ಹಝ್ರತ್ ಪೈಗಂಬರರಿಗೆ(ಸ) ಮರಣಾಂತಿಕ ಸಂಕಟವುಂಟಾಗುತ್ತಿತ್ತು. ಅವರು ಅಸ್ವಸ್ಥತೆಯಿಂದ ಕುಳಿತುಕೊಂಡು ಒಮ್ಮೆ ಆ ಬದಿಗೆ ಬಾಗುತ್ತಾ ಇನ್ನೊಮ್ಮೆ ಈ ಬದಿಗೆ ಬಾಗುತ್ತಾ ಹೀಗೆ ಹೇಳುತ್ತಿದ್ದರು: “ಯಹೂದಿಯರಿಗೆ ಮತ್ತು ಕ್ರೈಸ್ತರಿಗೆ ಅಲ್ಲಾಹನು ಕೇಡುಕನ್ನು ಮಾಡಲಿ. ಅವರು ತಮ್ಮ ಪ್ರವಾದಿಗಳು ಮೃತರಾದ ನಂತರ ಅವರ ಗೋರಿಗಳನ್ನು ತಮ್ಮ ಪ್ರಾರ್ಥನಾಲಯಗಳನ್ನಾಗಿ ಮಾಡಿರುವರು.”[84]

ಇದು ಮುಸ್ಲಿಮರಿಗೆ ಅವರ ಕೊನೆಯ ಉಪದೇಶವಾಗಿತ್ತು. ಅವರು ಹೀಗೆ ಉದ್ದೇಶಿಸಿದ್ದರು: ನೀವು ನನ್ನನ್ನು ಎಲ್ಲಾ ಪ್ರವಾದಿಗಳಿಗಿಂತ ಹೆಚ್ಚು ವೈಭವಶಾಲಿಯೂ ಹೆಚ್ಚು ಜಯಶಾಲಿಯೂ ಆಗಿ ಕಾಣುವಿರಿ. ಆದರೆ ನಾನು ಅಲ್ಲಾಹನ ದಾಸನೆಂಬುದನ್ನು ನೀವು ಎಂದೂ ಮರೆತು ಬಿಡಬಾರದು. ದೇವನ ಸ್ಥಾನವನ್ನು ದೇವನಿಗೆಯೇ ನೀಡಬೇಕು. ನನ್ನ ಗೋರಿಗೆ ಒಂದು ಗೋರಿಗಿಂತ ಹೆಚ್ಚಿನ ಸ್ಥಾನವನ್ನು ನೀಡಬಾರದು. ಇತರ ಸಮುದಾಯಗಳು ತಮ್ಮ ಪ್ರವಾದಿಗಳ ಗೋರಿಗಳನ್ನು ನಿಶ್ಚಯವಾಗಿಯೂ ಆರಾಧನಾಲಯಗಳನ್ನಾಗಿ ಮಾಡಿರುವರು. ಅವರು ಅಲ್ಲಿ ಕುಳಿತು ಧ್ಯಾನಾಸಕ್ತರಾಗುತ್ತಾರೆ. ಅವರು ಗೋರಿಗಳ ಮೇಲೆ ಆದರ ಸೂಚಕವಾಗಿ ಚಾದರಗಳನ್ನು ಹೊದಿಸುತ್ತಾರೆ ಅಥವಾ ಹರಕೆಗಳು ಅರ್ಪಿಸುತ್ತಾರೆ. ಆದರೆ ನೀವು ಹಾಗೆ ಮಾಡಬಾರದು. ನೀವು ಏಕದೇವನ ಆರಾಧನೆಗಾಗಿ ಎದ್ದೇಳಿಸಲ್ಪಟ್ಟವರಾಗಿರುವಿರಿ.

ಹಝ್ರತ್ ಪೈಗಂಬರ್(ಸ) ಕೊನೆಯ ಉಪದೇಶ ಮಾಡಿದ ನಂತರ ಅವರ ಕಣ್ಣುಗಳು ಮೇಲಕ್ಕೆದ್ದುವು. ಅವರು ಈ ಮಾತುಗಳನ್ನು ನಾಲಗೆಯಿಂದ ಉಚ್ಚರಿಸುತ್ತಿದ್ದರು:

“ಇಲಾ ರಫೀಕಿಲ್ ಅಅ್‌ಲಾ, ಇಲಾ ರಫೀಕಿಲ್ ಅಅ್‌ಲಾ.” ಅಂದರೆ ಸಿಂಹಾಸನದಲ್ಲಿ ಆರೂಢನಾಗಿರುವ ನನ್ನ ಪ್ರಿಯ ಸ್ನೇಹಿತನ ಬಳಿಗೆ ನಾನು ಹೋಗುತ್ತಿದ್ದೇನೆ. ಹೀಗೆ ಹೇಳುತ್ತಾ, ಹೇಳುತ್ತಾ, ಅವರ ಆತ್ಮ ಶರೀರವನ್ನು ಬಿಟ್ಟು ಹೋಯಿತು.

## ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದಾಗ ಅವರ ಶಿಷ್ಯರ ಸ್ಥಿತಿ

ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ವಾರ್ತೆ ಮದೀನದ ಮಸ್‌ಜಿದ್‌ನಲ್ಲಿದ್ದ ಶಿಷ್ಯರಿಗೆ ತಲಪಿದಾಗ, ಅವರಲ್ಲಿ ಬಹುತೇಕ ಜನರು ತಮ್ಮ ಕೆಲಸಗಳನ್ನು ಬಿಟ್ಟು ಹಝ್ರತ್ ಪೈಗಂಬರರ ಸ್ವಾಸ್ಥ್ಯದ ಶುಭವಾರ್ತೆ ಆಲಿಸಲು ಪ್ರತೀಕ್ಷಿಸುತ್ತಾ ಕುಳಿತಿದ್ದಾಗ ಅವರ ಮೇಲೆ ಒಂದು ಪರ್ವತವೇ ಕುಸಿದು ಬಿದ್ದಂತೆ ಅವರಿಗೆ ಭಾಸವಾಯಿತು.

ಆ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಯಾವುದೋ ಕೆಲಸಕ್ಕಾಗಿ ಸ್ವಲ್ಪ ಹೊತ್ತು ಹೊರಗೆ ಹೋಗಿದ್ದರು. ಆದರೆ ಹಝ್ರತ್ ಉಮರ್(ರ) ಮಸ್‌ಜಿದ್‌ನಲ್ಲಿ

84. ಬುಖಾರಿ ಕಿತಾಬುಲ್ ಮಘಾಝಿ ಬಾಬ್ ಮರ್‌ಝುನ್ನಬೀ ವ ವಫಾತಹು.

ಇದ್ದರು. ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದರು ಎಂದು ಜನರು ಮಸ್‌ಜಿದ್ ಒಳಗೆ ಹೇಳುತ್ತಾ ಇರುವುದನ್ನು ಅವರು ಆಲಿಸಿದಾಗ ಅವರು ತನ್ನ ಖಡ್ಗವನ್ನು ಒರೆಯಿಂದ ತೆಗೆದು ಎತ್ತಿಹಿಡಿದು ಹೇಳಿದರು: "ಅಲ್ಲಾಹನಾಣೆ! ಹಝ್ರತ್ ಪೈಗಂಬರ್(ಸ) ಮೃತರಾದರೆಂದು ಯಾರು ಹೇಳುತ್ತಾರೋ ಅವರ ತಲೆಯನ್ನು ನಾನು ಕಡಿದು ಹಾಕುವೆನು. ಕಪಟವಿಶ್ವಾಸಿಗಳು ಈಗ ಸಹ ಬಾಕಿಯಾಗಿ ಉಳಿದಿರುವರು. ಆದುದರಿಂದ ಹಝ್ರತ್ ಪೈಗಂಬರ್(ಸ) ಈಗ ಮೃತರಾಗಲಾರರು. ಅವರ ಆತ್ಮವು ಶರೀರವನ್ನು ಬಿಟ್ಟು ಹೋಗಿದ್ದರೆ ಅದು ಹಝ್ರತ್ ಮೂಸಾ ಪ್ರವಾದಿಯ(ಅ) ಹಾಗೆ ಅಲ್ಲಾಹನ ಭೇಟಿಗಾಗಿ ಹೋಗಿರಬಹುದು. ಅದು ಪುನಃ ಮರಳಿ ಬರುವುದು. ಅವರು ಮರಳಿ ಬಂದು ಲೋಕದಿಂದ ಕಪಟ ವಿಶ್ವಾಸಿಗಳನ್ನು ನಾಶಪಡಿಸುವರು."

ಹೀಗೆ ಹೇಳುತ್ತಾ ಹಝ್ರತ್ ಉಮರ್ ಹಝ್ರತ್ ಪೈಗಂಬರರ ನಿಧನ ವಾರ್ತೆಯಿಂದ ಅತ್ಯಂತ ದುಃಖಿತನಾಗಿ ಒರೆಗಳೆದ ಖಡ್ಗ ಎತ್ತಿ ಹಿಡಿದು ಭ್ರಾಂತನ ಹಾಗೆ ಅತ್ತಿತ್ತ ತಿರುಗಾಡುತ್ತಾ, "ಹಝ್ರತ್ ಪೈಗಂಬರ್(ಸ) ಮೃತರಾದರೆಂದು ಯಾರಾದರೂ ಹೇಳುವುದಾದರೆ ನಾನು ಅವನನ್ನು ಕೊಲ್ಲುವೆನು" ಎಂದು ಹೇಳುತ್ತಾ ಇದ್ದರು.

ಶಿಷ್ಯರು ಹೀಗೆ ಹೇಳುತ್ತಾರೆ: "ಹಝ್ರತ್ ಉಮರ್ ಹೀಗೆ ಹೇಳುತ್ತಾ ತಿರುಗಾಡುತ್ತಾ ಇದ್ದಾಗ ನಮ್ಮ ಹೃದಯಗಳಲ್ಲೂ ಶಂಕೆಗಳು ತಲೆದೋರಿದುವು. ನಾವು ಹೇಳತೊಡಗಿದೆವು – ಹಝ್ರತ್ ಉಮರ್ ಸತ್ಯ ಹೇಳುತ್ತಿದ್ದಾರೆ, ಹಝ್ರತ್ ಪೈಗಂಬರ್ ನಿಧನ ಹೊಂದಿಲ್ಲ. ಹಝ್ರತ್ ಪೈಗಂಬರ್ ಮೃತರಾದರೆಂದು ಹೇಳುವವರಿಗೆ ನಿಶ್ಚಯವಾಗಿಯೂ ಈ ವಿಷಯದ ಬಗ್ಗೆ ತಪ್ಪುಗ್ರಹಿಕೆಯಾಗಿದೆ. ಹೀಗೆ ಹೇಳುತ್ತಾ ನಾವು ಹಝ್ರತ್ ಉಮರರ ಮಾತಿಗೆ ಸಹಮತವನ್ನು ಸೂಚಿಸುತ್ತಾ ನಮ್ಮ ಹೃದಯಗಳಿಗೆ ಸಾಂತ್ವನ ನೀಡಲು ತೊಡಗಿದೆವು."

ಅಷ್ಟರೊಳಗೆ ಕೆಲವರು ಓಡಿಹೋಗಿ ಹಝ್ರತ್ ಅಬೂಬಕರ್‌ರಿಗೆ(ರ) ಈ ಸನ್ನಿವೇಶಗಳನ್ನು ವಿವರಿಸಿದರು. ಅವರು ಮಸ್‌ಜಿದ್‌ಗೆ ಆಗಮಿಸಿದರು. ಅವರು ಯಾರೊಂದಿಗೂ ಮಾತನಾಡದೆ ಮನೆಗೆ ಹೋಗಿ ಹಝ್ರತ್ ಆಯಿಶಾರೊಂದಿಗೆ ವಿಚಾರಿಸಿದರು: "ಹಝ್ರತ್ ಪೈಗಂಬರರು ನಿಧನ ಹೊಂದಿರುವರೋ?"

ಹಝ್ರತ್ ಆಯಿಶಾ(ರ) ಹೇಳಿದರು: "ಹಝ್ರತ್ ಪೈಗಂಬರ್(ಸ) ನಿಧನ ಹೊಂದಿರುವರು." ಹಝ್ರತ್ ಅಬೂಬಕರ್ ಹಝ್ರತ್ ಪೈಗಂಬರರ ಮೃತ ದೇಹದ ಸಮೀಪಕ್ಕೆ ಹೋಗಿ ಅವರ ಮುಖದಿಂದ ಬಟ್ಟೆಯನ್ನು ಬದಿಗೆ ಸರಿಸಿ ಹಣೆಗೆ ಮುತ್ತನ್ನು ಕೊಟ್ಟರು. ಅವರ ಕಣ್ಣುಗಳಿಂದ ಪ್ರೀತಿಯ ಹೊಳಪುಳ್ಳ ಕಣ್ಣೀರು ಸುರಿಯುತ್ತಾ ಇತ್ತು, ಅವರು ಹೇಳಿದರು: "ಅಲ್ಲಾಹನಾಣೆ! ಅಲ್ಲಾಹನು ನಿಮಗೆ ಎರಡು ಮೃತ್ಯುಗಳು ಸಂಭವಿಸುವಂತೆ ಮಾಡಲಾರನು." ಇದರ ಅರ್ಥವೇನೆಂದರೆ, ನಿಮ್ಮನ್ನು ಶಾರೀರಿಕವಾಗಿ ಮೃತಪಡಿಸಿದ ನಂತರ ನಿಮ್ಮ ಅನುಯಾಯಿಗಳು ತಪ್ಪು



ನಂಬಿಕೆ ಮತ್ತು ತಪ್ಪು ಯೋಚನೆಗಳಲ್ಲಿ ಮುಳುಗಿ ನಿಮಗೆ ಎರಡನೆಯ ಮೃತ್ಯು ಬಂದೆರಗುವಂತೆ ಅಲ್ಲಾಹನು ಮಾಡಲಾರನು.

ಹೀಗೆ ಹೇಳಿದ ನಂತರ ಹಝ್ರತ್ ಅಬೂಬಕರ್(ರ) ಮನೆಯಿಂದ ಮಸ್‌ಜಿದನ್ನು ಪ್ರವೇಶಿಸಿ ಅಲ್ಲಿ ನೆರೆದು ಕುಳಿತಿದ್ದ ಜನರ ಸಾಲುಗಳ ಮಧ್ಯೆ ಮೌನವಾಗಿ ಮುಂದೆ ಹೋಗಿ ಪ್ರವಚನ ವೇದಿಕೆಯನ್ನೇರಿದರು. ಆಗ ಹಝ್ರತ್ ಉಮರ್(ರ) ಖಡ್ಗ ಹಿರಿದು ಅವರ ಸಮೀಪ ನಿಂತುಕೊಂಡಿದ್ದರು. ಹಝ್ರತ್ ಅಬೂಬಕರ್ ಹಝ್ರತ್ ಪೈಗಂಬರರ(ಸ) ಬಗ್ಗೆ ಅವರು ನಿಧನ ಹೊಂದಿರುವರು ಎಂದು ಹೇಳಿದರೆ ಅವರ ತಲೆಯನ್ನು ಕಡಿದು ಹಾಕುವೆನೆಂದು ಅವರು ನಿರ್ಧರಿಸಿದ್ದರು.

ಹಝ್ರತ್ ಅಬೂಬಕರ್(ರ) ಮಾತನಾಡಲು ಪ್ರಾರಂಭಿಸುವಾಗ ಹಝ್ರತ್ ಉಮರ್(ರ) ಅವರ ಬಟ್ಟೆಯನ್ನು ಎಳೆದು ಅವರನ್ನು ಮಾತನಾಡದಿರುವಂತೆ ಮಾಡಲು ಪ್ರಯತ್ನಿಸಿದರು. ಆಗ ಹಝ್ರತ್ ಅಬೂಬಕರ್(ರ) ತನ್ನ ಬಟ್ಟೆಯನ್ನು ಕೊಡವಿ ಅವರ ಕೈಯಿಂದ ಬಿಡಿಸಿಕೊಂಡರು ಮತ್ತು ಪವಿತ್ರ ಖುರ್‌ಆನಿನ ಈ ವಚನಗಳನ್ನು ಓದಿದರು:

**"(ಓ ಜನರೇ,) ಮುಹಮ್ಮದ್ ಅಲ್ಲಾಹನ ಒಬ್ಬ ಸಂದೇಹವಾಹಕ ಮಾತ್ರವಾಗಿದ್ದರು. ಅವರಿಗಿಂತ ಮೊದಲು ಬಂದ ಸಂದೇಶವಾಹಕರೆಲ್ಲರೂ ಮೃತರಾಗಿರುವರು. ಏನು ಅವರು (ಮುಹಮ್ಮದ್) ಮೃತರಾದರೆ ಅಥವಾ ಕೊಲ್ಲಲ್ಪಟ್ಟರೆ ನೀವು ನಿಮ್ಮ ಧರ್ಮವನ್ನು ಬಿಟ್ಟು ಹಿಂದಿರುಗಿ ಹೋಗುವಿರೇನು?"** (3 : 145)

ಧರ್ಮವು ಅಲ್ಲಾಹನದ್ದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರದಲ್ಲ ಎಂದು ಈ ವಚನದ ಆಶಯವಾಗಿದೆ. ಪವಿತ್ರ ಖುರ್‌ಆನಿನ ಈ ವಚನ ಉಹುದ್ ಯುದ್ಧದ ವೇಳೆಯಲ್ಲಿ, ಹಝ್ರತ್ ಪೈಗಂಬರ್(ಸ) ಹುತಾತ್ಮರಾದರೆಂದು ವದಂತಿಗಳನ್ನು ಕೇಳಿ ಕೆಲವರು ಧೈರ್ಯಗುಂದಿದವರಾಗಿ ಕುಳಿತುಕೊಂಡಿದ್ದಾಗ ಅವತೀರ್ಣವಾಗಿತ್ತು.

ಈ ವಚನವನ್ನು ಓದಿದ ನಂತರ ಹಝ್ರತ್ ಅಬೂಬಕರ್(ರ) ಹೇಳಿದರು: "ಯಾರು ಅಲ್ಲಾಹನನ್ನು ಆರಾಧಿಸುತ್ತಾ ಇದ್ದಾರೋ ಅವರು ತಿಳಿದುಕೊಳ್ಳಲಿ, ಅಲ್ಲಾಹನು ಜೀವಂತವಾಗಿರುವನು. ಅವನಿಗೆ ಮೃತ್ಯು ಬಂದೆರಗಲು ಎಂದೂ ಸಾಧ್ಯವಿಲ್ಲ. ಯಾರಾದರೂ ಮುಹಮ್ಮದರನ್ನು ಆರಾಧಿಸುತ್ತಾ ಇರುವರಾದರೆ ನಾನು ಅವರಿಗೆ ಹೇಳಲು ಬಯಸುತ್ತೇನೆ– ಮುಹಮ್ಮದ್ ಮೃತರಾಗಿರುವರು."

ಹಝ್ರತ್ ಉಮರ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಪವಿತ್ರ ಖುರ್‌ಆನಿನ ವಚನವನ್ನು ಓದಲು ಪ್ರಾರಂಭಿಸಿದಾಗ ನನ್ನ ವಿವೇಚನೆಯ ಶಕ್ತಿ ಜಾಗ್ರತವಾಗತೊಡಗಿತು. ಆ ವಚನವನ್ನು ಅವರು ಓದಿ ಮುಗಿಸಿದಾಗ ನನ್ನ ಆಧ್ಯಾತ್ಮಿಕ ಕಣ್ಣು ತೆರೆದುಕೊಂಡಿತು ಮತ್ತು ಹಝ್ರತ್ ಪೈಗಂಬರ್(ಸ) ವಾಸ್ತವಿಕವಾಗಿಯೂ ಮೃತರಾದರೆಂದು ನಾನು ಮನವರಿಕೆ ಮಾಡಿಕೊಂಡೆನು. ಆಗ ನನ್ನ ಮೊಣಕಾಲುಗಳು ನಡುಗಲು ತೊಡಗಿದುವು. ನಾನು ಬಲಗುಂದಿದವನಾಗಿ

ನೆಲಕ್ಕೆ ಬಿದ್ದು ಬಿಟ್ಟೆನು."

ಹಝ್ರತ್ ಅಬೂಬಕರರನ್ನು ಕೊಲ್ಲಲು ಬಯಸುತ್ತಿದ್ದ ವ್ಯಕ್ತಿ ಹಝ್ರತ್ ಅಬೂಬಕರರ(ರ) ಸತ್ಯಭರಿತ ಮಾತುಗಳ ಮೂಲಕ ಸ್ವತಃ ಹತರಾದರು.

ಶಿಷ್ಯರು ಹೀಗೆ ಹೇಳುತ್ತಾರೆ: "ಪವಿತ್ರ ಖುರ್‌ಆನಿನ ಈ ವಚನ ಇಂದೇ ಅವತೀರ್ಣವಾದಂತೆ ನಮಗೆ ಭಾಸವಾಯಿತು. ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ದುಃಖದ ಕಾರಣದಿಂದ ನಮಗೆ ಈ ವಚನ ಮರೆತುಹೋಗಿತ್ತು."

ಆ ಸಂದರ್ಭದಲ್ಲಿ ಮದೀನದ ಮಹಾಕವಿಯಾಗಿದ್ದ ಹಸ್ಸಾನ್ ಬಿನ್ ಸಾಬಿತ್ ಹೀಗೆ ಹಾಡಿದರು:

ಕುನ್‌ತ ಸ್ಸವಾದು ಲಿನಾಝಿರಿ,
ಫ ಅಮಿಯ ಅಲೈಕನ್ನಾಝಿರು
ಮನ್ ಶಾಅ ಬಅದಕ ಫಲ್‌ಯಮುತ್,
ಫಅಲೈಕ ಕುನ್‌ತು ಉಹಾಝಿರು.

"ಓ ಮುಹಮ್ಮದ್. ನೀವು ನನ್ನ ಕಣ್ಮಣಿಯಾಗಿದ್ದಿರಿ. ಇಂದು ನೀವು ಮೃತರಾದುದರಿಂದ ನನ್ನ ಕಣ್ಣುಗಳು ಕುರುಡಾದುವು. ನೀವು ಮೃತರಾದ ನಂತರ ಯಾರು ಬೇಕಾದರೂ ಸಾಯಲಿ. (ನನ್ನ ತಂದೆ ಸಾಯಲಿ, ನನ್ನ ಸಹೋದರ ಸಾಯಲಿ, ನನ್ನ ಪುತ್ರ ಸಾಯಲಿ, ನನ್ನ ಪತ್ನಿ ಸಾಯಲಿ ನನಗೆ ಇವರಲ್ಲಿ ಯಾರ ಸಾಯುವಿಕೆ ಬಗ್ಗೆಯೂ ಕಾಳಜಿ ಇಲ್ಲ.) ನಾನು ಹೆದರುತ್ತಾ ಇದ್ದುದು ನಿಮ್ಮ ಮೃತ್ಯುವಿನ ಬಗ್ಗೆ ಮಾತ್ರವಾಗಿತ್ತು."[85]

ಈ ಪದ್ಯವು ಪ್ರತಿಯೊಬ್ಬ ಮುಸ್ಲಿಮನ ಹೃದಯದ ಧ್ವನಿಯಾಗಿತ್ತು. ಅನಂತರ ಎಷ್ಟೋ ದಿನಗಳ ತನಕ ಮುಸ್ಲಿಮ್ ಪುರುಷರು, ಮುಸ್ಲಿಮ್ ಮಹಿಳೆಯರು ಮತ್ತು ಮುಸ್ಲಿಮ್ ಮಕ್ಕಳು ಇದೇ ಪದ್ಯವನ್ನು ಹಾಡುತ್ತಾ ನಗರವಿಡೀ ಸುತ್ತುತ್ತಾ ಇದ್ದರು.

"ಓ ಮುಹಮ್ಮದ್, ನೀವು ನಮ್ಮ ಕಣ್ಮಣಿಯಾಗಿದ್ದಿರಿ. ನೀವು ಮೃತರಾದುದರಿಂದ ನಾವು ಕುರುಡರಾದೆವು. ನಮ್ಮ ನಿಕಟ ಸಂಬಂಧಿಕರಲ್ಲಿ ಯಾರಾದರೂ ಮೃತರಾದರೆ ನಮಗೆ ಆ ಬಗ್ಗೆ ಕಾಳಜಿ ಇಲ್ಲ. ನಮಗೆ ತಮ್ಮ ಮೃತ್ಯುವಿನ ಬಗ್ಗೆ ಮಾತ್ರ ಭಯವಿತ್ತು."

85. ಅಸ್ಸೀರತುನ್ನಬವಿಯ್ಯ ಬರ್ ಹಾಶಿಯ ಅಸ್ಸೀರತುಲ್ ಹಲ್‌ಬಿಯ್ಯ.



# ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣಗಳು

ಹಝ್ರತ್ ಪೈಗಂಬರರ(ಸ) ಜೀವನ ಚರಿತ್ರೆ ಬರೆದ ನಂತರ ಅವರ ಸ್ವಭಾವ ಗುಣಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಲು ಬಯಸುತ್ತೇನೆ.

ಹಝ್ರತ್ ಪೈಗಂಬರರ(ಸ) ಸದ್ಗುಣಗಳಿಗೆ ಅವರ ಸಮುದಾಯದ ಜನರು ಸಾಮೂಹಿಕವಾಗಿ ಸಾಕ್ಷ್ಯ ನೀಡುತ್ತಾ, ಅವರು ತಾನು ಪ್ರವಾದಿ ಎಂದು ವಾದಿಸುವಮೊದಲೇ ಅಲ್ ಅಮೀನ್ (ಅತ್ಯಂತ ಪ್ರಮಾಣಿಕ) ಎಂದೂ ಸಿದ್ದೀಖ್ (ಅತ್ಯಂತ ಸತ್ಯವಂತ) ಎಂದೂ ಅವರಿಗೆ ಪ್ರಶಸ್ತಿಯನ್ನು ನೀಡಿದ್ದರು. (ಸೀರತ್ ಇಬ್ನು ಹಿಶಾಮ್ ಸಂಪುಟ–1 ಪುಟ 64)

ಲೋಕದಲ್ಲಿ ಅನೇಕ ಜನರು ಹೇಗಿರುತ್ತಾರೆಂದರೆ, ಅವರ ಭ್ರಷ್ಟತೆಯ ಕುರಿತು ಸಾಕ್ಷ್ಯಾಧಾರಗಳು ದೊರಕುವುದಿಲ್ಲ. ಲೋಕದಲ್ಲಿ ಅನೇಕ ಜನರಿಗೆ ಯಾವುದೇ ಕಠಿಣ ಪರೀಕ್ಷೆಗೆ ಗುರಿಯಾಗುವ ಸಂದರ್ಭ ಅವರ ಜೀವಿತದಲ್ಲಿ ಉಂಟಾಗುವುದಿಲ್ಲ. ಅವರು ಸಾಮಾನ್ಯ ಪರೀಕ್ಷೆಗಳನ್ನು ದಾಟಿ ಹೋಗುತ್ತಾರೆ ಮತ್ತು ಅವರ ಪ್ರಾಮಾಣಿಕತೆಗೆ ಭಂಗ ಉಂಟಾಗುವುದಿಲ್ಲ. ಆದರೆ ಅಂತಹ ಜನರಿಗೆ ಅವರ ಸಮುದಾಯದ ಜನರು ಮೆಚ್ಚುಗೆಯ ನಾಮಕರಣ ಮಾಡುವುದಿಲ್ಲ. ಹೀಗಿರುವಾಗ ಒಬ್ಬ ವ್ಯಕ್ತಿಗೆ ಒಂದು ವಿಶಿಷ್ಟ ಗುಣನಾಮ ಆ ವ್ಯಕ್ತಿಯ ಸಮುದಾಯ ನೀಡಬೇಕಾದರೆ ಆ ವ್ಯಕ್ತಿ ಇತರ ಎಲ್ಲಾ ಜನರಿಗಿಂತ ಆ ಸದ್ಗುಣದಲ್ಲಿ ಉತ್ತುಂಗ ಸ್ಥಾನವನ್ನು ಪಡೆದವರೆಂದು ಅವರ ಸಮುದಾಯ ಅಂಗೀಕರಿಸಿರಬೇಕು.

ಯುದ್ಧದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಸೈನಿಕ ತನ್ನ ಜೀವವನ್ನು ಅಪಾಯಕ್ಕೆ ಒಡ್ಡುತ್ತಾನೆ. ಆದರೆ ಬ್ರಿಟಿಷ್ ಸರಕಾರ ಪ್ರತಿಯೊಬ್ಬ ಸೈನಿಕನಿಗೆ 'ವಿಕ್ಟೋರಿಯಾ ಕ್ರಾಸ್' ನೀಡುವುದಿಲ್ಲ. ಇದೇ ರೀತಿ ಜರ್ಮನ್ ಸರಕಾರ ತನ್ನ ಪರಮೋಚ್ಚ ಸೈನಿಕ ಪ್ರಶಸ್ತಿಯಾದ 'ಐಅರ್ನ್ ಕ್ರಾಸ್' ಪ್ರತಿಯೊಬ್ಬ ಸೈನಿಕನಿಗೆ ಕೊಡುವುದಿಲ್ಲ. ಫ್ರಾನ್ಸಿನಲ್ಲಿ ಬುದ್ಧಿ ಜೀವಿಗಳು ಲಕ್ಷಾಂತರ ಮಂದಿ ಇದ್ದರೂ ಅವರ ಪರಮೋಚ್ಚ ಪ್ರಶಸ್ತಿ 'ಲೀಜನ್ ಆಫ್ ಆನರ್' ಅವರಲ್ಲಿ ಪ್ರತಿಯೊಬ್ಬರಿಗೆ ಕೊಡುವುದಿಲ್ಲ. ಒಬ್ಬನು ಕೇವಲ ಪ್ರಾಮಾಣಿಕನೂ ಸತ್ಯವಂತನೂ ಆಗಿರುವುದು ಅವನ ವಿಶಿಷ್ಟ ಶ್ರೇಷ್ಠತೆಗೆ ಬೆಳಕನ್ನು ಬೀರುವುದಿಲ್ಲ. ಆದರೆ ಒಬ್ಬರಿಗೆ ಅವರ ಸಮುದಾಯದವರೆಲ್ಲರೂ ಒಗ್ಗೂಡಿ ಅಲ್ ಅಮೀನ್ ಮತ್ತು ಸಿದ್ದೀಖ್ ಎಂದು ಪ್ರಶಸ್ತಿ ನೀಡುವುದು ಅಸಾಧಾರಣ ವಿಷಯವಾಗಿದೆ.

ಮಕ್ಕದ ಜನರು ತಮ್ಮ ಪ್ರತಿಯೊಂದು ಪೀಳಿಗೆಯಲ್ಲಿ ಯಾರದರೊಬ್ಬನಿಗೆ 'ಅಲ್ ಅಮೀನ್' ಎಂದೂ 'ಸಿದ್ದೀಖ್' ಎಂದೂ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಹೊಂದಿದ್ದರೂ ಹೀಗೆ ಪ್ರಶಸ್ತಿ ಪಡೆದವನು ಬಹಳ ದೊಡ್ಡ ಮನುಷ್ಯನೆಂದು ಪರಿಗಣಿಸಲ್ಪಡುತ್ತಿದ್ದನು.

ಆದರೆ ಅರಬಿಗಳು ತಮ್ಮ ಪ್ರತಿಯೊಂದು ಪೀಳಿಗೆಯಲ್ಲಿ ಒಬ್ಬನಿಗೆ ಈ ರೀತಿ ಪ್ರಶಸ್ತಿ ನೀಡುವ ಸಂಪ್ರದಾಯವನ್ನು ಹೊಂದಿರಲಿಲ್ಲವೆಂದು ಚರಿತ್ರೆಯಿಂದ

ಸಾಬೀತಾಗುತ್ತದೆ. ಅರಬಿಗಳ ನೂರಾರು ವರ್ಷಗಳ ಚರಿತ್ರೆಯಲ್ಲಿ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಉದಾಹರಣೆ ಮಾತ್ರ ದೊರಕುತ್ತದೆ. ಅವರಿಗೆ ಮಾತ್ರ ಅರಬ್ ದೇಶದ ಜನರು ಅಲ್ ಅಮೀನ್ ಮತ್ತು ಸಿದ್ದೀಖ್ ಎಂಬ ಪ್ರಶಸ್ತಿಗಳನ್ನು ನೀಡಿದರು.

ಅರಬಿಗಳ ನೂರಾರು ವರ್ಷಗಳ ಚರಿತ್ರೆಯಲ್ಲಿ ಅವರ ಸಮುದಾಯದ ಒಬ್ಬನೇ ಒಬ್ಬ ವ್ಯಕ್ತಿಗೆ ಅಲ್ ಅಮೀನ್ ಮತ್ತು ಸಿದ್ದೀಖ್ ಎಂಬ ಪ್ರಶಸ್ತಿಗಳನ್ನು ನೀಡಿದುದರಿಂದ ಹಿಂದಿನ ಕಾಲದ ಜನರಲ್ಲಿ, ಅವರಿಗೆ ತಿಳಿದಂತೆ ಈ ಪ್ರಶಸ್ತಿಗೆ ಅರ್ಹರಾಗುವಂತಹ ಶ್ರೇಷ್ಠ ಮಟ್ಟದ ಗುಣವನ್ನು ಹಝ್‌ರತ್ ಪೈಗಂಬರ್(ಸ) ಹೊರತು ಬೇರೆ ಯಾರೂ ಹೊಂದಿರಲಿಲ್ಲ ಎಂದು ಸ್ಪಷ್ಟವಾಗುತ್ತದೆ. ಅರಬಿಗಳು ತಮ್ಮ ಸೂಕ್ಷ್ಮ ದೃಷ್ಟಿಯ ಕಾರಣದಿಂದ ಲೋಕದಲ್ಲಿ ವಿಶಿಷ್ಟ ಜನಾಂಗವಾಗಿದ್ದರು. ಅವರು ಅಪೂರ್ವವೆಂದು ಬಗೆದುದು ಲೋಕದಲ್ಲಿ ಅಪೂರ್ವ ಎಂದು ಗಣಿಸಲ್ಪಡಲು ಅರ್ಹವಾಗಿತ್ತು.

ಇನ್ನೊಂದು ಐಕ್ಯಮತ್ಯದ ಸಾಕ್ಷ್ಯವನ್ನು ಹಝ್‌ರತ್ ಖದೀಜ(ರ) ಹಝ್‌ರತ್ ಪೈಗಂಬರರ(ಸ) ಪ್ರವಾದಿತ್ವದ ಆರಂಭ ಕಾಲದಲ್ಲಿ ನೀಡಿದ್ದರು. ಅದನ್ನು ಹಝ್‌ರತ್ ಪೈಗಂಬರರ(ಸ) ಜೀವಿತದ ವಿವರಣೆಯಲ್ಲಿ ನಾನು ಉಲ್ಲೇಖಿಸಿರುವೆನು. ಹಝ್‌ರತ್ ಪೈಗಂಬರರ ಸ್ವಭಾವ ಗುಣಗಳನ್ನು ಚಿತ್ರಿಸುವ ಕೆಲವು ಉದಾಹರಣೆಗಳನ್ನು ಈಗ ನಿಮ್ಮ ಮುಂದಿರಿಸಲು ಬಯಸುತ್ತೇನೆ. ಹಝ್‌ರತ್ ಪೈಗಂಬರರ(ಸ) ಸ್ವಭಾವದ ರಹಸ್ಯ ಕೋನಗಳ ಮೇಲೆಯೂ ಈ ಗ್ರಂಥದ ವಾಚಕರ ದೃಷ್ಟಿ ಹಾಯಲಿ ಎಂದು ನಾನು ಉದ್ದೇಶಿಸುತ್ತೇನೆ.

## ಹಝ್‌ರತ್ ಪೈಗಂಬರರ(ಸ) ಆಂತರಿಕ ಮತ್ತು ಬಾಹ್ಯ ಪರಿಶುದ್ಧಿ

ಹಝ್‌ರತ್ ಪೈಗಂಬರ್(ಸ) ಎಂದೂ ಯಾರನ್ನೂ ಬೈಯ್ಯುತ್ತಿರಲಿಲ್ಲ. ಅವರು ಅನಾವಶ್ಯಕವಾಗಿ ಆಣೆ ಹಾಕುತ್ತಲೂ ಇರಲಿಲ್ಲ. (ಬುಖಾರಿ).

ಅರಬ್ ದೇಶದಲ್ಲಿ ವಾಸಿಸುವ ಒಬ್ಬರಿಗೆ ಇಂತಹ ಸುಸ್ವಭಾವ ಇರುವುದು ಅಸಾಧಾರಣವಾಗಿತ್ತು. ಅರಬ್ ಜನರು ಯಾವಾಗಲೂ ಅಶ್ಲೀಲ ಮಾತುಗಳನ್ನು ಆಡುತ್ತಿದ್ದುದು ಅವರ ಸ್ವಭಾವ ಗುಣವಾಗಿತ್ತೆಂದು ನಾವು ಹೇಳಲಾರೆವಾದರೂ ಅರಬಿಗಳು ಮಾತುಮಾತಿಗೆ ಪ್ರಮಾಣ ವಾಕ್ಯಗಳನ್ನು ಉಚ್ಚರಿಸುತ್ತಾ ಇದ್ದರೆಂಬುದು ಸಂಶಯಾತೀತವಾಗಿದೆ. ಇಂದಿನ ತನಕ ಸಹ ಅರಬಿಗಳಲ್ಲಿ ಈ ಸ್ವಭಾವ ಕಂಡು ಬರುತ್ತದೆ. ಆದರೆ ಹಝ್‌ರತ್ ಪೈಗಂಬರರಿಗೆ(ಸ) ಅಲ್ಲಾಹನ ಕುರಿತು ಎಂತಹ ಗೌರವಾದರಗಳು ಇದ್ದುವೆಂದರೆ, ಅಲ್ಲಾಹನ ಹೆಸರಲ್ಲಿ ಪ್ರಮಾಣವನ್ನು ಅನುಚಿತ ಸಂದರ್ಭಗಳಲ್ಲಿ ಮಾಡುವುದನ್ನು ಅವರು ಇಷ್ಟಪಡುತ್ತಿರಲಿಲ್ಲ.

ಹಝ್‌ರತ್ ಪೈಗಂಬರರಿಗೆ(ಸ) ಶುಚಿತ್ವದ ಕುರಿತು ವಿಶೇಷ ಕಾಳಜಿ ಇತ್ತು. ಅವರು ಯಾವಾಗಲೂ ಹಲ್ಲನ್ನು ಶುಚಿಯಾಗಿ ಇಡುತ್ತಿದ್ದರು. ಅವರು ಹಲ್ಲುಜ್ಜುವ



ಕುರಿತು ಎಷ್ಟು ಆಗ್ರಹಪಡಿಸುತ್ತಿದ್ದರೆಂದರೆ ಅವರು ಹೀಗೆ ಹೇಳುತ್ತಿದ್ದರು:

"ಮುಸ್ಲಿಮರಿಗೆ ಕಷ್ಟ ಆಗುವುದೆಂಬ ಭಯ ನನಗೆ ಇಲ್ಲದಿರುತ್ತಿದ್ದರೆ, ಪ್ರತಿಯೊಂದು ನಮಾಝ್ ಅನುಷ್ಠಿಸುವ ಮೊದಲು ಹಲ್ಲುಜ್ಜಬೇಕೆಂಬ ಆಜ್ಞೆ ಯನ್ನು ನಾನು ನೀಡುತ್ತಿದ್ದೆನು." (ಮಿಶ್ಕಾತ್)

ಆಹಾರ ತಿನ್ನುವ ಮೊದಲು ಅವರು ಕೈಯನ್ನು ತೊಳೆಯುತ್ತಿದ್ದರು. ಆಹಾರ ತಿಂದ ನಂತರ ಸಹ ಕೈಯನ್ನು ತೊಳೆದು ಬಾಯಿಯಲ್ಲಿ ನೀರು ಹಾಕಿ ಮುಕ್ಕಳಿಸಿ ಉಗಿಯುತ್ತಿದ್ದರು. ಬೇಯಿಸಲಾದ ಆಹಾರವನ್ನು ತಿಂದ ನಂತರ ಬಾಯಿಯನ್ನು ಶುದ್ಧಿಗೊಳಿಸದೆ ನಮಾಝ್ ಅನುಷ್ಠಿಸುವುದನ್ನು ಅವರು ಇಷ್ಟಪಡುತ್ತಿರಲಿಲ್ಲ.(ಬುಖಾರಿ)

ಮಸ್‌ಜಿದ್‌ಗಳು ಮುಸ್ಲಿಮರು ಒಗ್ಗೂಡಿ ನಮಾಝ್ ಮಾಡುವ ಸ್ಥಳವಾಗಿವೆ. ಅವುಗಳ ಶುಚಿತ್ವದ ಕುರಿತು ಹಝ್‌ರತ್ ಪೈಗಂಬರ್(ಸ) ವಿಶಿಷ್ಟವಾಗಿ ನಿಗಾ ವಹಿಸುತ್ತಿದ್ದರು. ಅಲ್ಲದೆ ಮುಸ್ಲಿಮರು ಹೆಚ್ಚು ಹೆಚ್ಚಾಗಿ ಜಮಾಯಿಸುವ ವಿಶಿಷ್ಟ ಸಂದರ್ಭಗಳಲ್ಲಿ ಮಸ್‌ಜಿದ್ ಶುದ್ಧವಾಗಿರಿಸುವ ಬಗ್ಗೆ ಗಮನಿಸಿ ಸುಗಂಧ ಸೂಸುವ ವಸ್ತುಗಳನ್ನು ಉರಿಸಿ ಅಲ್ಲಿನ ಗಾಳಿ ಸುಗಂಧಯುಕ್ತವೂ ಶುದ್ಧವೂ ಆಗಿರುವಂತೆ ನೋಡಿಕೊಳ್ಳಬೇಕೆಂದು ಹಝ್‌ರತ್ ಪೈಗಂಬರ್(ಸ) ಆಗ್ರಪಡಿಸುತ್ತಿದ್ದರು. (ಮಿಶ್ಕಾತ್)

ಮುಸ್ಲಿಮರು ಜಮಾಯಿಸುವ ಸಂದರ್ಭದಲ್ಲಿ ದುರ್ಗಂಧ ಬೀರುವ ವಸ್ತುಗಳನ್ನು ತಿಂದು ಮಸ್‌ಜಿದ್‌ಗೆ ಬರಬಾರದೆಂದು ಯಾವಾಗಲೂ ತನ್ನ ಶಿಷ್ಯರಿಗೆ ಹಝ್‌ರತ್ ಪೈಗಂಬರ್(ಸ) ಉಪದೇಶಿಸುತ್ತಾ ಇದ್ದರು. (ಬುಖಾರಿ)

ಮಾರ್ಗಗಳನ್ನು ಶುಚಿಯಾಗಿರಿಸಲು ಹಝ್‌ರತ್ ಪೈಗಂಬರ್(ಸ) ವಿಶಿಷ್ಟವಾಗಿ ಉಪದೇಶಿಸುತ್ತಿದ್ದರು. ಮಾರ್ಗದಲ್ಲಿ ಪೊದೆ ಗಿಡಗಳು, ಕಲ್ಲು ಮುಳ್ಳು ಅಥವಾ ಕೊಳಕು ವಸ್ತುಗಳು ಇದ್ದರೆ ಅವುಗಳನ್ನು ಕಂಡವರು ಸ್ವತಃ ಅವುಗಳನ್ನು ಮಾರ್ಗದಿಂದ ದೂರ ಸರಿಸಬೇಕೆಂದು ಅವರು ಉಪದೇಶಿಸುತ್ತಿದ್ದರು. ಯಾರು ಮಾರ್ಗದ ಶುಚಿತ್ವದ ಕುರಿತು ಗಮನಿಸುತ್ತಾನೋ ಅವನ ಬಗ್ಗೆ ಅಲ್ಲಾಹನು ಮೆಚ್ಚಿಗೆ ಸೂಚಿಸಿ ಅವನಿಗೆ ಉತ್ತಮ ಪ್ರತಿಫಲ ನೀಡುತ್ತಾನೆ ಎಂದು ಸಹ ಹಝ್‌ರತ್ ಪೈಗಂಬರ್(ಸ) ಹೇಳುತ್ತಾ ಇದ್ದರು. (ಮುಸ್ಲಿಮ್)

ಮಾರ್ಗವನ್ನು ತಡೆಗಟ್ಟಬಾರದೆಂದು ಹಝ್‌ರತ್ ಪೈಗಂಬರ್(ಸ) ಹೇಳಿದ್ದರು. ಮಾರ್ಗದಲ್ಲಿ ಕುಳಿತುಕೊಳ್ಳುವುದು, ಪ್ರಯಾಣಿಕರಿಗೆ ಕಷ್ಟವುಂಟಾಗುವ ವಸ್ತುಗಳನ್ನು ಮಾರ್ಗಕ್ಕೆ ಹಾಕುವುದು, ಮಾರ್ಗದಲ್ಲಿ ಮಲ ಮೂತ್ರ ವಿಸರ್ಜನೆ ಮಾಡುವುದು ಅಲ್ಲಾಹನಿಗೆ ಮೆಚ್ಚಿಗೆಯಾಗದ ವಿಷಯಗಳೆಂದು ಅವರು ಹೇಳಿದ್ದರು. (ಮಿಶ್ಕಾತ್)

ನೀರಿನ ಸ್ವಚ್ಛತೆ ಕುರಿತು ಹಝ್‌ರತ್ ಪೈಗಂಬರರಿಗೆ(ಸ) ಬಹಳ ಕಾಳಜಿ ಇತ್ತು. ನಿಂತ ನೀರಲ್ಲಿ ಯಾವುದೇ ಮಲೀನ ವಸ್ತು ಹಾಕಬಾರದೆಂದೂ ಮಲ ಮೂತ್ರ ವಿಸರ್ಜನೆ ಮಾಡಬಾರದೆಂದೂ ಹಝ್‌ರತ್ ಪೈಗಂಬರ್(ಸ) ಕಟ್ಟಾಜ್ಞೆ ನೀಡಿದ್ದರು. (ಬುಖಾರಿ)

## ಆಹಾರ ಪಾನೀಯಗಳಲ್ಲಿ ಸರಳತೆ ಮತ್ತು ಭಯಭಕ್ತಿ

ಹಝ್ರತ್ ಪೈಗಂಬರ್(ಸ) ಆಹಾರ ಪಾನೀಯಗಳಲ್ಲಿ ಯಾವಾಗಲೂ ಸರಳತೆಯನ್ನು ಅವಲಂಬಿಸಿದ್ದರು. ಊಟಕ್ಕೆ ಉಪ್ಪು ಹಾಕಿದುದು ಹೆಚ್ಚಾಗಿದ್ದರೂ ಕಡಿಮೆಯಾಗಿದ್ದರೂ ಅಥವಾ ಆಹಾರ ಬೇಯಿಸಿದುದರಲ್ಲಿ ಹೆಚ್ಚು ಕಮ್ಮಿಯಾಗಿ ಆಹಾರ ಹಾಳಾಗಿದ್ದರೂ ಅವರು ಎಂದೂ ಕೋಪವನ್ನು ಪ್ರಕಟಿಸುತ್ತಿರಲಿಲ್ಲ. ಅವರು ಸಾಧ್ಯವಿದ್ದರೆ ಅಂತಹ ಆಹಾರ ತಿಂದು ಅದನ್ನು ತಯಾರಿಸಿದವರ ಮನಸ್ಸಿಗೆ ನೋವಾಗುವುದನ್ನು ತಡೆಯಲೆತ್ನಿಸುತ್ತಿದ್ದರು. ಆದರೆ ಯಾವುದಾದರೂ ಆಹಾರ ಅವರಿಗೆ ತಿನ್ನಲು ಅಸಾಧ್ಯವಾಗಿದ್ದರೆ ಅವರು ಅದನ್ನು ತಿನ್ನುವುದನ್ನು ನಿಲ್ಲಿಸುತ್ತಿದ್ದರು. ನನಗೆ ಈ ಆಹಾರದಿಂದ ತೊಂದರೆ ಆಗುತ್ತಿದೆ ಎಂದು ಅವರು ಎಂದೂ ದೂರುತ್ತಿರಲಿಲ್ಲ. (ಬುಖಾರಿ)

ಅವರು ಊಟಕ್ಕೆ ಕುಳಿತಾಗ ಆಹಾರ ಪದಾರ್ಥದ ಕಡೆಗೆ ಲಕ್ಷ್ಯವಿರಿಸಿ ಕುಳಿತುಕೊಳ್ಳುತ್ತಿದ್ದರು. ಅವರು ಹೇಳುತ್ತಿದ್ದರು: ಕೆಲವರು ಊಟಕ್ಕೆ ಕುಳಿತಾಗ ಒರಗಿಕೊಂಡು ಕುಳಿತು ತಮಗೆ ಆಹಾರದ ಆವಶ್ಯಕತೆ ಇಲ್ಲವೋ ಎಂಬಂತೆ ನಿರ್ಲಕ್ಷ್ಯದಿಂದ ವರ್ತಿಸುತ್ತಾರೆ. ನನಗೆ ಅಂತಹ ಅಹಂಕಾರಭರಿತ ನಡೆವಳಿಕೆ ಇಷ್ಟವಿಲ್ಲ. (ಬುಖಾರಿ)

ಅವರಿಗೆ ಯಾರಾದರೂ ಆಹಾರ ಪದಾರ್ಥಗಳನ್ನು ಕೊಡುಗೆಯಾಗಿ ನೀಡಿದರೆ ಅವರು ಅದನ್ನು ಶಿಷ್ಯರಿಗೂ ಹಂಚಿಕೊಟ್ಟು ತಿನ್ನುತ್ತಿದ್ದರು. ಒಮ್ಮೆ ಅವರಿಗೆ ಖರ್ಜೂರದ ಪಾರಿತೋಷಕ ಬಂದಾಗ ಅವರು ಪ್ರತಿಯೊಬ್ಬ ಶಿಷ್ಯರಿಗೆ ಏಳು–ಏಳು ಖರ್ಜೂರ ಸಿಗಬಹುದೆಂದು ಲೆಕ್ಕಹಾಕಿ ಹಾಗೆಯೇ ವಿತರಣೆ ಮಾಡಿದರು. (ಬುಖಾರಿ)

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಜೋಳದ ರೊಟ್ಟಿಯನ್ನಾಗಲಿ ಎಂದೂ ಹೊಟ್ಟೆ ತುಂಬಾ ತಿಂದಿರಲಿಲ್ಲ. (ಬುಖಾರಿ)

ಒಮ್ಮೆ ಹಝ್ರತ್ ಪೈಗಂಬರ್(ಸ) ಮಾರ್ಗದಲ್ಲಿ ನಡೆದು ಹೋಗುತ್ತಿದ್ದಾಗ, ಕೆಲವರು ಒಂದು ಆಡನ್ನು ಸುಟ್ಟು ಬೇಯಿಸಿ ಸತ್ಕಾರ ಕೂಟ ನಡೆಸುತ್ತಿರುವುದನ್ನು ಕಂಡರು. ಅವರು ಹಝ್ರತ್ ಪೈಗಂಬರರನ್ನು ಸತ್ಕಾರ ಕೂಟದಲ್ಲಿ ಭಾಗವಹಿಸಲು ಆಹ್ವಾನಿಸಿದಾಗ ಅವರು ನಿರಾಕರಿಸಿದರು. (ಬುಖಾರಿ)

ಇದಕ್ಕೆ ಕಾರಣ ಸುಟ್ಟು ಬೇಯಿಸಿದ ಆಡಿನ ಮಾಂಸ ಅವರಿಗೆ ಇಷ್ಟಕರವಾಗಿರಲಿಲ್ಲವಾದುದರಿಂದ ಅಲ್ಲ. ಅವರು ಆ ಸತ್ಕಾರ ಕೂಟದಲ್ಲಿ ಭಾಗವಹಿಸದುದರ ಕಾರಣವೇನೆಂದರೆ, ಬಡಜನರು ಹಸಿದು ಅಲ್ಲಿ ತಿರುಗಾಡುತ್ತಿರುವಾಗ ಅವರ ಕಣ್ಣಮುಂದೆಯೇ ಜನರು ಆಡುಗಳನ್ನು ಸುಟ್ಟು ಬೇಯಿಸಿ ತಿನ್ನುತ್ತಿರುವುದು ಅವರಿಗೆ ಇಷ್ಟವಾಗಲಿಲ್ಲ. ಅವರು ಸುಟ್ಟು ಬೇಯಿಸಿದ ಆಡಿನ ಮಾಂಸವನ್ನು ತಿನ್ನುತ್ತಿದ್ದರೆಂದು ಬೇರೆ ಹದೀಸುಗಳಿಂದ ಸ್ಪಷ್ಟವಾಗುತ್ತದೆ.

ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನಿರಂತರವಾಗಿ ಮೂರು ದಿನಗಳ ಕಾಲ ಎಂದೂ ಹೊಟ್ಟೆ ತುಂಬಾ ಆಹಾರ ತಿಂದಿರಲಿಲ್ಲ. ಇದೇ ಸ್ಥಿತಿ ಅವರು ನಿಧನ ಹೊಂದುವ ತನಕ ಇದ್ದಿತು. (ಬುಖಾರಿ)



ಯಾವುದೇ ವ್ಯಕ್ತಿ ಆಮಂತ್ರಣವಿಲ್ಲದೆ ಯಾವುದೇ ಸತ್ಕಾರ ಕೂಟಕ್ಕೆ ಹೋಗಬಾರದೆಂದು ಅವರು ಬಯಸುತ್ತಿದ್ದರು. ಒಮ್ಮೆ ಒಬ್ಬರು ಹಝ್ರತ್ ಪೈಗಂಬರರನ್ನು ಊಟಕ್ಕೆ ಆಮಂತ್ರಿಸಿದರು ಮತ್ತು ಬೇರೆ ನಾಲ್ವರನ್ನು ಕರೆದುಕೊಂಡು ಬರಲು ಹೇಳಿದರು: ಹಝ್ರತ್ ಪೈಗಂಬರ್(ಸ) ಆತಿಥೇಯನ ಮನೆ ಬಾಗಿಲಿಗೆ ತಲಪಿದಾಗ ತಮ್ಮೊಂದಿಗೆ ಇದ್ದ ನಾಲ್ವರ ಜೊತೆಗೆ ಇನ್ನೊಬ್ಬರು ಸೇರಿಕೊಂಡುದಾಗಿ ತಿಳಿಯಿತು. ಮನೆಯ ಒಡೆಯ ಹೊರಗೆ ಬಂದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಐವರನ್ನು ಊಟಕ್ಕೆ ಕರೆದಿರುವಿರಿ. ನೀವು ಇಚ್ಛಿಸುವುದಾದರೆ ಈ ಆರನೆಯ ವ್ಯಕ್ತಿಯನ್ನು ಊಟಕ್ಕೆ ಕರೆಯಬಹುದು ಅಥವಾ ಅವರನ್ನು ಬಿಡಬಹುದು." ಆಗ ಆ ಆತಿಥೇಯ ಹೇಳಿದರು: "ನಾನು ಅವರನ್ನು ಸಹ ಆಮಂತ್ರಿಸುತ್ತೇನೆ. ಅವರು ಸಹ ಮನೆಯೊಳಗೆ ಬರಲಿ." (ಬುಖಾರಿ)

ಹಝ್ರತ್ ಪೈಗಂಬರ್(ಸ) 'ಬಿಸ್ಮಿಲ್ಲಾಹ್' (ಅಲ್ಲಾಹನ ನಾಮದಿಂದ) ಎಂದು ಹೇಳಿ ಬಲಗೈಯಿಂದ ಊಟ ಮಾಡಲು ಪ್ರಾರಂಭಿಸುತ್ತಿದ್ದರು. ಅವರು ಊಟ ಮಾಡಿದ ನಂತರ ಹೀಗೆ ಪ್ರಾರ್ಥಿಸುತ್ತಾ ಇದ್ದರು: "ಅಲ್ ಹಮ್ದು ಲಿಲ್ಲಾಹ್ ಹಮ್‌ದನ್ ಕಸೀರನ್ ತಯ್ಯಿಬನ್ ಮುಬಾರಕನ್ ಫೀಹಿ ಗೈರ ಮುಕ್‌ಫೀ ವಲಾ ಮವ್‌ದಅ್ ವಲಾ ಮುಸ್ತಗ್‌ನೀ ಅನ್‌ಹು ರಬ್ಬನಾ." ಅಂದರೆ, ಎಲ್ಲಾ ಸ್ತುತಿಗಳು ಅಲ್ಲಾಹನಿಗೆ. ಅವನು ನಮಗೆ ಆಹಾರ ನೀಡಿದನು. ಬಹಳ ಬಹಳ ಸ್ತುತಿಗಳು, ಕಲಬೆರಕೆ ರಹಿತವಾಗಿ ವರ್ಧಿಸುತ್ತಾ ಇರುವ ಸ್ತುತಿ, ಸ್ತುತಿಸಿದ ನಂತರ ನಾನು ಸಾಕಷ್ಟು ಸ್ತುತಿ ಮಾಡಿರುವೆನು ಎಂದು ಹೇಳಲಾಗದಂತಹ ಸ್ತುತಿ. ಬದಲು, ನಾನು ಅರ್ಹವಾದ ರೀತಿಯಲ್ಲಿ ಸ್ತುತಿಸಲಿಲ್ಲ ಎಂದು ಭಾವಿಸುವ ಸ್ತುತಿ, ನಾನು ಎಂದೂ ಸ್ತುತಿ ಮಾಡುವುದನ್ನು ನಿಲ್ಲಿಸುವವನಾಗದಿರಲಿ. ಅಲ್ಲಾಹನ ಯಾವುದಾದರೂ ಕೆಲಸವನ್ನು ಸ್ತುತಿಸುವ ಅವಶ್ಯಕತೆ ಇಲ್ಲವೆಂದೂ ಅದು ಸ್ತುತಿಗೆ ಅರ್ಹವಲ್ಲವೆಂದೂ ನಾನು ಭಾವಿಸುವ ಹಾಗೆ ಆಗದಿರಲಿ. ಓ ಅಲ್ಲಾಹ್ ನೀನು ನಮ್ಮನ್ನು ಹೀಗೆ ವರ್ತಿಸುವವರನ್ನಾಗಿ ಮಾಡು.

ಬೇರೆ ಕೆಲವು ವರದಿಗಳಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸುತ್ತಿದ್ದುದಾಗಿ ಉಲ್ಲೇಖಿಸಲಾಗಿದೆ: "ಅಲ್ ಹಮ್‌ದು ಲಿಲ್ಲಾಹಿಲ್ಲಝೀ ಕಫಾನಾ ವ ಅರ್‌ವಾನಾ ಗೈರ ಮುಕ್‌ಫೀ ವಲಾ ಮಕ್‌ಫೂರ್." ಅಂದರೆ, ನಮ್ಮ ಹಸಿವನ್ನೂ ಬಾಯಾರಿಕೆಯನ್ನೂ ದೂರೀಕರಿಸಿದ ಅಲ್ಲಾಹನಿಗೆ ಸರ್ವ ಸ್ತುತಿಗಳು. ನಮ್ಮ ಹೃದಯಗಳು ಅವನ ಸ್ತುತಿಯಿಂದ ಎಂದೂ ತುಂಬಿ ಹೋಗುವಂತಾಗದಿರಲಿ. ನಾವು ಅವನಿಗೆ ಎಂದೂ ಕೃತಘ್ನತೆ ತೋರಿಸದವರಾಗಲಿ. (ಬುಖಾರಿ)

ಹಝ್ರತ್ ಪೈಗಂಬರ್(ಸ) ತನ್ನ ಶಿಷ್ಯರಿಗೆ, "ನೀವು ನಿಮ್ಮ ಹೊಟ್ಟೆ ತುಂಬುವ ಮೊದಲೇ ಆಹಾರ ತಿನ್ನುವುದನ್ನು ನಿಲ್ಲಿಸಿರಿ" ಎಂದು ಯಾವಾಗಲೂ

ಉಪದೇಶಿಸುತ್ತಿದ್ದರು. ಅವರು ಹೇಳುತ್ತಾ ಇದ್ದರು: "ಒಬ್ಬ ಮನುಷ್ಯನ ಆಹಾರ ಇಬ್ಬರಿಗೆ ಸಾಕಾಗುವಂತಾಗಬೇಕು." (ಬುಖಾರಿ)

ಹಝ್‌ರತ್ ಪೈಗಂಬರರ ಮನೆಯಲ್ಲಿ ಯಾವುದಾದರೂ ಉತ್ತಮ ಆಹಾರ ತಯಾರಿಸುವಾಗ ಅವರು ತಮ್ಮ ಮನೆಯವರಿಗೆ, "ನೀವು ನಿಮ್ಮ ನೆರೆಹೊರೆಯವರ ಬಗ್ಗೆಯೂ ಗಮನಿಸಿರಿ" ಎಂದು ಯಾವಾಗಲೂ ಉಪದೇಶಿಸುತ್ತಿದ್ದರು. (ಮುಸ್ಲಿಮ್)

ಹಝ್‌ರತ್ ಪೈಗಂಬರ್(ಸ) ತನ್ನ ನೆರೆಹೊರೆಯ ಜನರಿಗೆ ಯಾವಾಗಲೂ ಉಡುಗೊರೆಗಳನ್ನು ಕಳುಹಿಸಿ ಕೊಡುತ್ತಾ ಇದ್ದರು. (ಬುಖಾರಿ)

ಅವರು ತಮ್ಮ ಬಡ ಶಿಷ್ಯರ ಮುಖ ಚಹರೆಗಳಿಂದ ಅವರಲ್ಲಿ ಯಾರಾದರೂ ಹಸಿವೆಯಿಂದ ಇರುವರೋ ಎಂದು ಮನವರಿಕೆ ಮಾಡಿಕೊಳ್ಳುತ್ತಾ ಇದ್ದರು.

ಹಝ್‌ರತ್ ಅಬೂ ಹುರ್ೈರ(ರ) ಹೀಗೆ ವರದಿ ಮಾಡುತ್ತಾರೆ: ಒಮ್ಮೆ ಅವರು ಸರಿಯಾದ ಆಹಾರ ದೊರಕದೆ ಹಲವು ದಿನ ಹಸಿವೆಯಿಂದ ಬಳಲುತ್ತಿದ್ದರು. ಒಂದು ದಿನ ಅವರು ಹಸಿವೆಯಿಂದ ಬಸವಳಿದು ಮಸ್‌ಜಿದ್‌ನ ಬಾಗಿಲಿನ ಮುಂದೆ ನಿಂತರು. ಆಗ ಅಲ್ಲಿಂದ ದಾಟಿ ಹೋಗುತ್ತಿದ್ದ ಹಝ್‌ರತ್ ಅಬೂಬಕರ್‌ರೊಂದಿಗೆ ಪವಿತ್ರ ಖುರ್‌ಆನಿನಲ್ಲಿ ಬಡವರಿಗೆ ಆಹಾರ ನೀಡುವ ಬಗ್ಗೆ ಆಜ್ಞಾಪಿಸಿರುವ ವಚನದ ಅರ್ಥ ವಿವರಣೆ ಕೇಳಿದರು. ಹಝ್‌ರತ್ ಅಬೂಬಕರ್(ರ) ಹಝ್‌ರತ್ ಅಬೂ ಹುರೈರರಿಗೆ ಆ ವಚನದ ಅರ್ಥವಿವರಣೆ ತಿಳಿದಿಲ್ಲ ಎಂದು ಭಾವಿಸಿ ಅದನ್ನು ವಿವರಿಸಿ ಮುಂದೆ ಸಾಗಿದರು. ಹಝ್‌ರತ್ ಅಬೂಹುರೈರ ಈ ಸಂಧರ್ಭವನ್ನು ವಿವರಿಸುವಾಗ ಸಿಟ್ಟಿನಿಂದ ಹೀಗೆ ಹೇಳುತ್ತಿದ್ದರು – ಏನು ಅಬೂಬಕರ್‌ರಿಗೆ ನನಗಿಂತ ಹೆಚ್ಚು ಖುರ್‌ಆನ್ ಬಗ್ಗೆ ತಿಳಿದಿತ್ತೇ? ನಾನು ಆ ವಚನದ ಬಗ್ಗೆ ಕೇಳಿದುದು ಅಬೂಬಕರ್ ಅದರ ವಿಷಯವನ್ನು ಮನವರಿಕೆ ಮಾಡಿಕೊಂಡು ನನ್ನ ಸ್ಥಿತಿಯನ್ನು ಗಮನಿಸಿ ನನಗೆ ಆಹಾರ ನೀಡಲಿ ಎಂಬ ಉದ್ದೇಶದಿಂದಾಗಿತ್ತು.

ಅನಂತರ, ಹಝ್‌ರತ್ ಉಮರ್(ರ) ಸಹ ಅಲ್ಲಿಂದ ದಾಟಿ ಹೋಗುವಾಗ ಅವರೊಂದಿಗೆ ಸಹ ಹಝ್‌ರತ್ ಅಬೂಹುರೈರ(ರ) ಪವಿತ್ರ ಖುರ್‌ಆನಿನ ವಚನದ ಅರ್ಥವಿವರಣೆ ಕೇಳಿದರು. ಹಝ್‌ರತ್ ಉಮರ್ ಸಹ ಅರ್ಥ ವಿವರಣೆ ನೀಡಿ ಮುಂದೆ ಸಾಗಿದರು.

ಹಝ್‌ರತ್ ಪೈಗಂಬರರ(ಸ) ಶಿಷ್ಯರು ಜನರಿಂದ ಕೇಳಿ ಪಡೆದು ಕೊಳ್ಳುವುದನ್ನು ತೀವ್ರವಾಗಿ ಅಸಹ್ಯ ಪಡುತ್ತಿದ್ದರು. ಕೇಳದೆ ಆಹಾರ ಸಿಗುವ ಹಾಗಿಲ್ಲ ಎಂದು ಹಝ್‌ರತ್ ಅಬೂಹುರೈರ(ರ) ಮನವರಿಕೆ ಮಾಡಿದಾಗ, ಅವರು ಹೇಳುತ್ತಾರೆ:

ನಾನು ಬಲಗುಂದಿ ಕುಸಿದು ಬೀಳುವ ಸ್ಥಿತಿಗೆ ತಲಪಿದೆ. ಹಸಿವೆಯನ್ನು ಸಹಿಸುವ ಶಕ್ತಿ ನನಗೆ ಆಗ ಇರಲಿಲ್ಲ. ನಾನು ಮಸ್‌ಜಿದ್‌ನ ಬಾಗಿಲಿನಿಂದ ಮುಖ ತಿರುಗಿಸುವಷ್ಟರಲ್ಲಿ ನನ್ನ ಕಿವಿಗೆ ಅತ್ಯಂತ ಪ್ರೇಮ ಭರಿತ ಶಬ್ದವು ಕೇಳಿಸಿತು. ಯಾರೋ ನನ್ನ ಹೆಸರು ಹೇಳಿ, ಅಬೂಹುರೈರ, ಅಬೂಹುರೈರ, ಎಂದು



ಕರೆಯುತ್ತಿದ್ದಾರೆ. ನಾನು ತಲೆ ಎತ್ತಿ ನೋಡಿದಾಗ ಹಝ್‌ರತ್ ಪೈಗಂಬರ್(ಸ) ತನ್ನ ಮನೆಯ ಕಿಟಕಿಯನ್ನು ತೆರೆದು ನಿಂತು ಮುಗುಳು ನಗುತ್ತಾ ಇದ್ದರು. ಅವರು ನನ್ನನ್ನು ನೋಡಿ ಹೇಳಿದರು:

"ಅಬೂಹುರೈರ, ನೀವು ಹಸಿದಿರುವಿರಲ್ಲವೇ?"

ನಾನು ಹೇಳಿದೆ: "ಹೌದು ಓ ಅಲ್ಲಾಹನ ಪೈಗಂಬರರೇ, ನಾನು ಹಸಿದಿರುವೆನು."

ಹಝ್‌ರತ್ ಪೈಗಂಬರ್(ಸ) ಹೇಳಿದರು: "ನಮ್ಮ ಮನೆಯಲ್ಲಿಯೂ ತಿನ್ನಲು ಏನೂ ಇರಲಿಲ್ಲ. ಈಗ ತಾನೆ ಒಬ್ಬರು ಬಂದು ಪಾತ್ರೆ ತುಂಬಾ ಹಾಲನ್ನು ಕಳುಹಿಸಿ ಕೊಟ್ಟಿದ್ದಾರೆ. ನೀವು ಮಸ್‌ಜಿದ್‌ಗೆ ಹೋಗಿ ನಿಮ್ಮ ಹಾಗೆ ಹಸಿದಿರುವವರು ಅಲ್ಲಿದ್ದಾರೋ ನೋಡಿರಿ. ಅವರಿಗೆ ಸಹ ಆಹಾರದ ಆವಶ್ಯಕತೆ ಇರಬಹುದು." ಹಝ್‌ರತ್ ಅಬೂಹುರೈರ ಹೇಳುತ್ತಾರೆ: "ನಾನು ಮನಸ್ಸಿನಲ್ಲಿ ಹೇಳಿದೆ – ನಾನು ಎಷ್ಟು ಹಸಿವೆ ಹೊಂದಿರುವೆನೆಂದರೆ, ಈ ಹಾಲಿನ ಪಾತ್ರೆಯನ್ನು ಪೂರ್ಣವಾಗಿ ಕುಡಿದು ಮುಗಿಸುತ್ತಿದ್ದೆನು. ಹಝ್‌ರತ್ ಪೈಗಂಬರ್(ಸ) ಬೇರೆ ಜನರನ್ನು ಸಹ ಕರೆಯಲು ಹೇಳಿದುದರಿಂದ ನನಗೆ ಸಿಗುವ ಹಾಲಿನ ಪಾಲು ಬಹಳ ಕಡಿಮೆ ಬಾಕಿಯಾಗಿ ಉಳಿಯುವುದು." ಹೀಗೆ ಯೋಚಿಸುತ್ತಾ ಹಝ್‌ರತ್ ಪೈಗಂಬರರ ಆಜ್ಞೆಯಂತೆ ಮಸ್‌ಜಿದ್‌ನ ಒಳಗೆ ಹೋದಾಗ ಅಲ್ಲಿ ಆರು ಜನರು ಕುಳಿತಿದ್ದರು. ಅವರನ್ನು ಕರೆದುಕೊಂಡು ಹಝ್‌ರತ್ ಅಬೂಹುರೈರ ಹಝ್‌ರತ್ ಪೈಗಂಬರರ ಮನೆ ಬಾಗಿಲಿಗೆ ಬಂದರು. ಆಗ ಹಝ್‌ರತ್ ಪೈಗಂಬರ್(ಸ) ಹಾಲಿನ ಪಾತ್ರೆಯನ್ನು ಹೊಸದಾಗಿ ಆಗಮಿಸಿದ ಆರು ಜನರಲ್ಲಿ ಒಬ್ಬರ ಕೈಗೆ ಕೊಟ್ಟು ಹಾಲನ್ನು ಕುಡಿಯಲು ಹೇಳಿದರು. ಆ ವ್ಯಕ್ತಿ ಹಾಲನ್ನು ಸಾಕಷ್ಟು ಕುಡಿದು ಹಾಲಿನ ಪಾತ್ರೆಯನ್ನು ಇನ್ನೊಬ್ಬರಿಗೆ ಕೊಡಲು ಹೊರಟಾಗ ಹಝ್‌ರತ್ ಪೈಗಂಬರ್, "ಇನ್ನೂ ಕುಡಿಯಿರಿ" ಎಂದು ಒತ್ತಾಯ ಪೂರ್ವಕವಾಗಿ ಹೇಳಿದರು. ಮೂರು ಸಾರಿ ಒತ್ತಾಯಪಡಿಸಿ ಆ ವ್ಯಕ್ತಿಗೆ ಹಾಲನ್ನು ಕುಡಿಸಿದರು. ಇದೇ ರೀತಿ ಆರು ಜನರಿಗೆ ಒಬ್ಬರ ನಂತರ ಇನ್ನೊಬ್ಬರಂತೆ ಹಾಲನ್ನು ಕುಡಿಯಲು ಹೇಳಿದರು.

ಹಝ್‌ರತ್ ಅಬೂಹುರೈರ ಹೇಳುತ್ತಾರೆ: "ಪ್ರತಿಯೊಬ್ಬ ಹಾಲು ಕುಡಿಯುವಾಗ ನಾನು ಯೋಚಿಸುತ್ತಿದ್ದೆ – ನಾನು ಸತ್ತೇಹೋಗುವೆನು. ನನಗೆ ಹಾಲಿನ ಏನು ಪಾಲು ಸಿಗುವುದು?

"ಆ ಆರು ಜನರು ಹಾಲನ್ನು ಕುಡಿದ ನಂತರ ಹಾಲಿನ ಪಾತ್ರೆಯನ್ನು ಹಝ್‌ರತ್ ಪೈಗಂಬರ್(ಸ) ನನಗೆ ಕೊಟ್ಟರು. ಆ ಪಾತ್ರೆಯಲ್ಲಿ ಇನ್ನೂ ಬಹಳ ಹಾಲು ಬಾಕಿಯಾಗಿ ಉಳಿದಿರುವುದನ್ನು ನಾನು ಕಂಡೆನು. ನಾನು ಹಾಲನ್ನು ಕುಡಿಯಲು ಪ್ರಾರಂಭಿಸಿದಾಗ ಹಝ್‌ರತ್ ಪೈಗಂಬರ್(ಸ) ನನಗೆ ಆಗ್ರಹ ಪೂರ್ವಕವಾಗಿ ಮೂರು ಸಾರಿ ಹಾಲನ್ನು ಕುಡಿಸಿದರು. ಅನಂತರ ಉಳಿದ ಹಾಲನ್ನು ಹಝ್‌ರತ್ ಪೈಗಂಬರ್(ಸ) ಕುಡಿದರು ಮತ್ತು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾ ಮನೆ ಬಾಗಿಲನ್ನು ಮುಚ್ಚಿದರು."

ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂ ಹುರೈರರಿಗೆ ಹಾಲನ್ನು ಕೊನೆಗೆ ನೀಡಿದುದು ಅವರಿಗೆ ಪ್ರಾಯಶಃ ಈ ನೀತಿ ಪಾಠ ಕಲಿಸಲಿಕ್ಕಾಗಿತ್ತು: ಅವರು ಅಲ್ಲಾಹನ ಮೇಲೆ ಭರವಸೆ ಇಟ್ಟು ಹಸಿವೆಯಿಂದ ಕುಳಿತಿರಬೇಕಾಗಿತ್ತು. ಅವರು ಸೂಚ್ಯವಾಗಿ ಸಹ ಅನ್ಯರಿಂದ ಆಹಾರ ಕೇಳಬಾರದಿತ್ತು.

ಹಝ್ರತ್ ಪೈಗಂಬರ್(ಸ) ಯಾವಾಗಲೂ ಬಲಗೈಯಿಂದ ಆಹಾರ ತಿನ್ನುತ್ತಿದ್ದರು ಮತ್ತು ನೀರನ್ನು ಸಹ ಬಲಗೈಯಿಂದಲೇ ಕುಡಿಯುತ್ತಿದ್ದರು. ನೀರು ಕುಡಿಯುವಾಗ ಮಧ್ಯದಲ್ಲಿ ನಿಲ್ಲಿಸಿ ಮೂರು ಸಲ ಶ್ವಾಸೋಚ್ಛ್ವಾಸ ಮಾಡುತ್ತಿದ್ದರು. ಇದರಲ್ಲಿ ಒಂದು ವೈದ್ಯಕೀಯ ತತ್ವವೂ ಅಡಕವಾಗಿದೆ. ನೀರನ್ನು ಒಂದೇ ಬಾರಿ ಎಡೆಬಿಡದೆ ಕುಡಿದರೆ ಹೆಚ್ಚು ನೀರು ಕುಡಿದು ಹೊಟ್ಟೆ ಕೆಟ್ಟು ಹೋಗಲೂಬಹುದಾಗಿದೆ.

ಆಹಾರದ ಕುರಿತು ಅವರ ನಿಲುವು ಹೀಗೆ ಇತ್ತು: ಪರಿಶುದ್ಧವೂ ಸ್ವಚ್ಛವೂ ಆಗಿರುವ ಆಹಾರವನ್ನು ತಿನ್ನಬೇಕು. ಆದರೆ ಬಡವರ ಹಕ್ಕುಗಳನ್ನು ಅಪಹರಿಸಿ ಭೋಗಲಾಲಸೆಯ ಅಭ್ಯಾಸ ಮಾಡಿಕೊಂಡು ಆಹಾರ ತಿನ್ನಬಾರದು. ಅವರ ಆಹಾರ ನಾವು ಹಿಂದೆ ವಿವರಿಸಿದ ಹಾಗೆ ಬಹಳ ಸರಳವಾಗಿತ್ತು. ಆದರೆ ಯಾರಾದರೂ ಅವರಿಗೆ ಮೃಷ್ಟಾನ್ನವನ್ನು ಉಡುಗೊರೆಯಾಗಿ ನೀಡಿದರೆ ಅವರು ಅದನ್ನು ತಿರಸ್ಕರಿಸುತ್ತಿರಲಿಲ್ಲ. ಅವರು ತಿನ್ನಲು ಸಮೃದ್ಧ ಆಹಾರವನ್ನು ಎಂದೂ ಹುಡುಕುತ್ತಿರಲಿಲ್ಲ.

ಅವರಿಗೆ ಜೇನು ಬಹಳ ಪ್ರಿಯಕರವಾಗಿತ್ತು. ಇದೇ ರೀತಿ ಖರ್ಜೂರವನ್ನು ಅವರು ಇಷ್ಟಪಡುತ್ತಿದ್ದರು. ಅವರು ಹೇಳುತ್ತಿದ್ದರು: "ಖರ್ಜೂರ ಮತ್ತು ಸತ್ಯ ವಿಶ್ವಾಸಿಯ ಮಧ್ಯೆ ಒಂದು ಸಂಬಂಧವಿದೆ. ಖರ್ಜೂರದ ಮರದ ಸೋಗೆ, ಅದರ ಸಿಪ್ಪೆ, ಅದರ ಕಾಯಿಗಳು, ಅದರ ಹಣ್ಣುಗಳು, ಅದರ ಬೀಜಗಳು ಇವುಗಳೆಲ್ಲಾ ಮನುಷ್ಯರಿಗೆ ಉಪಯೋಗಕರವಾಗಿವೆ. ಖರ್ಜೂರದ ಮರದ ಯಾವ ವಸ್ತುವೂ ನಿಷ್ಪ್ರಯೋಜಕವಾಗಿಲ್ಲ. ಇದೇ ರೀತಿ ಪರಿಪೂರ್ಣ ಸತ್ಯ ವಿಶ್ವಾಸಿಯ ಸ್ಥಿತಿಯಾಗಿರುತ್ತದೆ. ಆತನ ಯಾವುದೇ ಕೆಲಸ ನಿಷ್ಪ್ರಯೋಜಕವಾಗಿರುವುದಿಲ್ಲ. ಸತ್ಯ ವಿಶ್ವಾಸಿಯ ಪ್ರತಿಯೊಂದು ಕೆಲಸ ಮಾನವರ ಹಿತಕ್ಕಾಗಿರುತ್ತದೆ. (ಬುಖಾರಿ)

## ಉಡುಗೆ ತೊಡುಗೆಗಳಲ್ಲಿ ಮತ್ತು ಆಭರಣಗಳಲ್ಲಿ ಸರಳತೆ ಹಾಗೂ ಭಯ ಭಕ್ತಿ

ಉಡುಗೆ ತೊಡುಗೆಗಳ ಕುರಿತು ಹಝ್ರತ್ ಪೈಗಂಬರ್(ಸ) ಬಹಳ ಸರಳತೆಯನ್ನು ಇಷ್ಟಪಡುತ್ತಿದ್ದರು. ಅವರು ಸಾಧಾರಣವಾಗಿ ಅಂಗಿ ಮತ್ತು ಉಡುವಸ್ತ್ರವನ್ನು ಅಥವಾ ಅಂಗಿ ಮತ್ತು ಪೈಜಾಮ ಧರಿಸುತ್ತಿದ್ದರು. ಅವರು ತಮ್ಮ ಉಡುವಸ್ತ್ರ ಅಥವಾ ಪೈಜಾಮ ಕಣಗಾಲು ಗಂಟಿನ ಮೇಲ್ಗಡೆ ಮತ್ತು ಮೊಣಕಾಲು ಗಂಟಿನ ಕೆಳಗೆ ಇರುವಂತೆ ಧರಿಸುತ್ತಿದ್ದರು. ಮೊಣಕಾಲು ಅಥವಾ ಅದರ ಮೇಲ್ಭಾಗ ನಗ್ನವಾಗಿರಿಸುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಅನಿವಾರ್ಯ ಪರಿಸ್ಥಿತಿಯಲ್ಲಿ ಹೊರತು ಬೇರೆ ಯಾವಾಗಲೂ ಚಿತ್ರಗಳಿರುವ ಬಟ್ಟೆಯನ್ನು ಮನುಷ್ಯರು



ಧರಿಸುವುದಾಗಲಿ, ಪರದೆಗಳಿಗಾಗಿ ಉಪಯೋಗಿಸುವುದಾಗಲಿ ಅವರು ಇಷ್ಟಪಡುತ್ತಿರಲಿಲ್ಲ. ಬಹುದೇವಾರಾಧನೆಯ ಚಿಹ್ನೆಗಳನ್ನು ಹೊಂದಿರುವ ಬಟ್ಟೆಗಳನ್ನು ಉಪಯೋಗಿಸಲು ಅವರು ಎಂದೂ ಅನುಮತಿ ನೀಡುತ್ತಿರಲಿಲ್ಲ. ಒಮ್ಮೆ ಅವರ ಮನೆಯಲ್ಲಿ ಅಂತಹ ಒಂದು ಬಟ್ಟೆಯನ್ನು ಪರದೆಯಾಗಿ ತೂಗಾಡಿಸಿದ್ದಾಗ ಅವರು ಅದನ್ನು ತೆಗೆದು ಬಿಡಲು ಆಜ್ಞಾಪಿಸಿದರು. (ಬುಖಾರಿ)

ಚಿಕ್ಕಪುಟ್ಟ ಚಿತ್ರಗಳಿದ್ದ ಬಟ್ಟೆಗಳಿಂದ ಬಹುದೇವಾರಾಧನೆಯು ಪೋಷಿಸಲ್ಪಡುವುದಿಲ್ಲವಾದುದುದರಿಂದ ಅವುಗಳನ್ನು ಉಪಯೋಗಿಸು ವುದರಿಂದ ತೊಂದರೆ ಇಲ್ಲ ಎಂದು ಅವರು ಗ್ರಹಿಸುತ್ತಿದ್ದರು.

ಹಝ್ರತ್ ಪೈಗಂಬರ್(ಸ) ರೇಷ್ಮೆಯ ಬಟ್ಟೆ ಎಂದೂ ಧರಿಸುತ್ತಿರಲಿಲ್ಲ, ಪುರುಷರು ರೇಷ್ಮೆಯ ಬಟ್ಟೆ ಧರಿಸುವುದಕ್ಕೆ ಅವರು ಅನುಮತಿ ನೀಡುತ್ತಿರಲಿಲ್ಲ.

ದೊರೆಗಳಿಗೆ ಪತ್ರ ಬರೆಯುವಾಗ ಅದರ ಮೇಲೆ ಮುದ್ರೆಯೊತ್ತಲು ಅವರು ಒಂದು ಉಂಗುರವನ್ನು ಮಾಡಿಸಲು ಉದ್ದೇಶಿಸಿದಾಗ ಅದನ್ನು ಚಿನ್ನದಿಂದ ಮಾಡಿಸಬಾರದೆಂದೂ ಬೆಳ್ಳಿಯಿಂದ ಮಾಡಿಸಬೇಕೆಂದೂ ಅವರು ಆಜ್ಞಾಪಿಸಿದರು. ತನ್ನ ಅನುಯಾಯಿಗಳಲ್ಲಿ ಪುರುಷರು ಚಿನ್ನವನ್ನು ಧರಿಸಬಾರದೆಂದು ಅಲ್ಲಾಹನು ಆಜ್ಞಾಪಿಸಿರುವನು ಎಂದು ಅವರು ಹೇಳಿದರು. ಮಹಿಳೆಯರು ಚಿನ್ನ ಮತ್ತು ರೇಷ್ಮೆ ಬಟ್ಟೆ ಧರಿಸಲು ಅವರು ಅನುಮತಿ ನೀಡಿದ್ದರು. ಅದರಲ್ಲಿ ಮಿತಿ ಮೀರಬಾರದೆಂದು ಅವರು ಉಪದೇಶಿಸಿದ್ದರು. ಒಮ್ಮೆ ಅವರು ಬಡವರಿಗೋಸ್ಕರ ಹಣ ಸಂಗ್ರಹಿಸಲು ತೊಡಗಿದಾಗ ಒಬ್ಬ ಮಹಿಳೆ ತನ್ನ ಒಂದು ಕೈಬಳೆಯನ್ನು ತೆಗೆದು ಹಝ್ರತ್ ಪೈಗಂಬರರ(ಸ) ಮುಂದಿರಿಸಿದರು. ಆಗ ಅವರು ಕೇಳಿದರು: "ಏನು ನಿಮ್ಮ ಇನ್ನೊಂದು ಕೈ ನರಕಾಗ್ನಿಯಿಂದ ರಕ್ಷಿಸಲ್ಪಡಲು ಅರ್ಹವಾಗಿಲ್ಲವೇ?" ಆ ಮಹಿಳೆ ತನ್ನ ಇನ್ನೊಂದು ಕೈಯಲ್ಲಿದ್ದ ಚಿನ್ನದ ಬಳೆಯನ್ನೂ ದೇಣಿಗೆಯಾಗಿ ನೀಡಿದರು.

ಹಝ್ರತ್ ಪೈಗಂಬರರ(ಸ) ಪತ್ನಿಯರಲ್ಲಿ ಆಭರಣಗಳು ಇರಲಿಲ್ಲವೆಂದೇ ಹೇಳಬಹುದು. ಅವರ ಮಹಿಳೆಯರಾದ ಶಿಷ್ಯೆಯರು ಸಹ ಅವರ ಉಪದೇಶಗಳನ್ನು ಅನುಸರಿಸಿ ಆಭರಣಗಳನ್ನು ಧರಿಸುವ ಬಗ್ಗೆ ನಿರಾಸಕ್ತಿ ಹೊಂದಿದ್ದರು.

ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್ಆನಿನ ಉಪದೇಶ ಪ್ರಕಾರ ಹೀಗೆ ಹೇಳುತ್ತಿದ್ದರು: "ಹಣವನ್ನು ಬಳಸದೆ ಶೇಖರಿಸಿ ಇಟ್ಟುಕೊಳ್ಳುವುದರಿಂದ ಬಡವರ ಹಕ್ಕುಗಳಿಗೆ ಭಂಗವುಂಟಾಗುವುದು. ಚಿನ್ನ ಬೆಳ್ಳಿಗಳನ್ನು ಮನೆಯಲ್ಲಿ ಶೇಖರಿಸಿ ಇಟ್ಟುಕೊಂಡರೆ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಅದು ನಾಶ ಮಾಡುವುದು. ಅದು ಪಾಪದೋಷ ಉಂಟುಮಾಡುವುದು."

ಒಮ್ಮೆ ಹಝ್ರತ್ ಉಮರ್(ರ) ಹೇಳಿದರು: "ಈಗ ನಿಮ್ಮ ಬಳಿಗೆ ದೊಡ್ಡ ದೊಡ್ಡ ಅರಸರಿಂದ ರಾಯಭಾರಿಗಳು ಬರುತ್ತಾ ಇದ್ದಾರೆ. ನೀವು ಒಂದು ಬೆಲೆಬಾಳುವ ನಿಲುವಂಗಿಯನ್ನು ಹೊಲಿಸಿ ಅಂತಹ ಸಂದರ್ಭಗಳಲ್ಲಿ ಧರಿಸಿರಿ."

ಹಝ್ರತ್ ಉಮರರ(ರ) ಮಾತುಗಳನ್ನು ಕೇಳಿ ಹಝ್ರತ್ ಪೈಗಂಬರ್(ಸ) ಕೋಪಗೊಂಡರು. ಅವರು ಹೇಳಿದರು: “ಅಲ್ಲಾಹನು ನನ್ನನ್ನು ಇಂತಹ ವಿಷಯಗಳಿಗಾಗಿ ಸೃಷ್ಟಿಸಿಲ್ಲ. ಇವು ಆಡಂಬರದ ಸಂಗತಿಗಳಾಗಿವೆ. ನಮ್ಮ ಉಡುಗೆ ತೊಡುಗೆ ಹೇಗಿದೆಯೋ ಅದನ್ನು ಧರಿಸಿಯೇ ನಾವು ಲೋಕದ ಜನರನ್ನು ಕಾಣುವೆವು.”

ಒಮ್ಮೆ ಹಝ್ರತ್ ಪೈಗಂಬರರಿಗೆ(ಸ) ರೇಷ್ಮೆಯ ಒಂದು ನಿಲುವಂಗಿಯನ್ನು ಯಾರೋ ಬಹುಮಾನವಾಗಿ ಕಳುಹಿಸಿದ್ದರು. ಅವರು ಅದನ್ನು ಹಝ್ರತ್ ಉಮರ್‌ರಿಗೆ ಉಡುಗೊರೆಯಾಗಿ ಕೊಟ್ಟರು. ಮರುದಿನ ಹಝ್ರತ್ ಉಮರ್(ರ) ಅದನ್ನು ಧರಿಸಿ ತಿರುಗಾಡಲು ತೊಡಗಿದರು. ಆಗ ಹಝ್ರತ್ ಪೈಗಂಬರ್(ಸ) ಅದರ ಬಗ್ಗೆ ತನ್ನ ಕೋಪವನ್ನು ಸೂಚಿಸಿದರು. ಆಗ ಹಝ್ರತ್ ಉಮರ್ ಹೇಳಿದರು: “ಓ ಅಲ್ಲಾಹನ ಪೈಗಂಬರ್‌ರೇ, ನೀವೇ ಅದನ್ನು ನನಗೆ ಪಾರಿತೋಷಕವಾಗಿ ಕೊಟ್ಟಿರುವಿರಿ.” ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: “ಒಂದು ಬಹುಮಾನವನ್ನು ಒಬ್ಬನಿಗೆ ನೀಡಿದರೆ ಅದನ್ನು ಅವನೇ ಉಪಯೋಗಿಸಬೇಕೆಂದಿಲ್ಲ.” ಹಝ್ರತ್ ಪೈಗಂಬರ್(ಸ) ಹೀಗೆ ಉದ್ದೇಶಿಸಿದ್ದರು: ಆ ನಿಲುವಂಗಿ ರೇಷ್ಮೆಯದು ಆಗಿರುವ ಕಾರಣ ನೀವು ಅದನ್ನು ನಿಮ್ಮ ಪತ್ನಿಗಾಗಲಿ ಮಗಳಿಗಾಗಲಿ ಕೊಡಬೇಕಾಗಿತ್ತು ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಉಪಯೋಗಿಸಬೇಕಾಗಿತ್ತು. ನೀವು ಅದನ್ನು ನಿಮ್ಮ ಧರಿಸುವ ಬಟ್ಟೆಯನ್ನಾಗಿ ಮಾಡಿಕೊಂಡಿದ್ದು ಸರಿಯಲ್ಲ. (ಬುಖಾರಿ)

## ಹಾಸಿಗೆಯ ಸರಳತೆ

ಹಝ್ರತ್ ಪೈಗಂಬರ್(ಸ) ಮಲಗಲು ಬಹಳ ಸರಳವಾದ ಹಾಸಿಗೆಯನ್ನು ಉಪಯೋಗಿಸುತ್ತಿದ್ದರು. ಚರ್ಮ ಅಥವಾ ಒಂಟೆಯ ಕೂದಲುಗಳಿಂದ ನೇಯ್ದ ಒಂದು ಬಟ್ಟೆಯನ್ನು ಅವರು ಹಾಸಿ ಮಲಗುತ್ತಿದ್ದರು. ಹಝ್ರತ್ ಆಯಿಶಾ(ರ) ಹೀಗೆ ವರದಿ ಮಾಡುತ್ತಾರೆ: “ನಾವು ಹಾಸುವ ಬಟ್ಟೆ ಎಷ್ಟು ಕಿರಿದಾಗಿತ್ತೆಂದರೆ ಹಝ್ರತ್ ಪೈಗಂಬರ್(ಸ) ನಮಾಝ್ ಮಾಡಲು ರಾತ್ರಿ ಏಳುತ್ತಿದ್ದಾಗ ನಾನು ಒಂದು ಬದಿಗೆ ಸರಿದು ಮಲಗುತ್ತಿದ್ದೆ. ಹಾಸಿಗೆ ಚಿಕ್ಕದಾದ ಕಾರಣ ಹಝ್ರತ್ ಪೈಗಂಬರ್(ಸ) ಪ್ರಾರ್ಥನೆಗೋಸ್ಕರ ನಿಂತಿರುವಾಗ ನಾನು ಕಾಲುಗಳನ್ನು ಉದ್ದಕ್ಕೆ ಚಾಚುತ್ತಿದ್ದೆ. ಅವರು ಸಾಷ್ಟಾಂಗ ಪ್ರಣಾಮ (ಸುಜೂದ್) ಮಾಡುವಾಗ ನಾನು ಕಾಲುಗಳನ್ನು ಮಡಚಿಕೊಳ್ಳುತ್ತಿದ್ದೆನು. (ಬುಖಾರಿ)

## ಮನೆ ಮತ್ತು ವಾಸ ಸ್ಥಳದ ಸರಳತೆ

ಹಝ್ರತ್ ಪೈಗಂಬರ್(ಸ) ಮನೆಯು ಬಗ್ಗೆ ಅದು ಸಾಮಾನ್ಯ ರೀತಿಯದಾಗಿರಬೇಕೆಂದು ಬಯಸುತ್ತಿದ್ದರು. ಅವರ ಮನೆಯಲ್ಲಿ ಒಂದು ಕೋಣೆ, ಒಂದು ಚಿಕ್ಕ ಚಾವಡಿ ಇರುತ್ತಿತ್ತು. ಕೋಣೆಯ ಮಧ್ಯೆ ಒಂದು ಹಗ್ಗವನ್ನು ಕಟ್ಟಿ ಅದರಲ್ಲೊಂದು ಪರದೆ ಹಾಕಿದ್ದರು. ಯಾರಾದರೂ ಸಂದರ್ಶಕರು ಬಂದರೆ ಸ್ತ್ರೀಯರು ಪರದೆಯ ಹಿಂಭಾಗಕ್ಕೆ ಹೋಗುತ್ತಿದ್ದರು. ಪುರುಷರು ಮುಂಭಾಗದಲ್ಲಿ ಮಾತನಾಡುತ್ತಿದ್ದರು.



ಹಝ್ರತ್ ಪೈಗಂಬರ್(ಸ) ಮಂಚವನ್ನು ಉಪಯೋಗಿಸುತ್ತಿರಲಿಲ್ಲ. ಅವರು ನೆಲದಲ್ಲಿಯೇ ಬಟ್ಟೆ ಹಾಸಿ ಮಲಗಿ ನಿದ್ರಿಸುತ್ತಿದ್ದರು. ಅವರ ಜೀವಿತವು ಎಷ್ಟು ಸರಳವಾಗಿತ್ತೆಂದರೆ ಹಝ್ರತ್ ಆಯಿಶಾ(ರ) ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಹೀಗೆ ಹೇಳಿದರು:

“ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಅನೇಕ ಬಾರಿ ನಾವು ಖರ್ಜೂರ ತಿಂದು ನೀರು ಕುಡಿದು ದಿನಗಳೆಯುತ್ತಿದ್ದೆವು. ಹಝ್ರತ್ ಪೈಗಂಬರ್(ಸ) ಮೃತರಾದ ದಿನ ನಮ್ಮ ಮನೆಯಲ್ಲಿ ಖರ್ಜೂರ ಮತ್ತು ನೀರಿನ ಹೊರತು ಬೇರೆ ಯಾವ ಆಹಾರ ಪದಾರ್ಥವೂ ಇರಲಿಲ್ಲ.” (ಬುಖಾರಿ)

## ಅಲ್ಲಾಹನೊಂದಿಗೆ ಪ್ರೇಮ ಮತ್ತು ಅವನ ಆರಾಧನೆ

ಹಝ್ರತ್ ಪೈಗಂಬರರ(ಸ) ಪರಿಪೂರ್ಣ ಜೀವಿತವು ದೈವಿಕ ಪ್ರೇಮದಲ್ಲಿ ಮುಳುಗಿರುವುದಾಗಿ ಕಾಣಿಸುತ್ತದೆ. ಅವರಿಗೆ ಬಹಳ ದೊಡ್ಡ ಸಾಮಾಜಿಕ ಜವಾಬ್ದಾರಿ ಇದ್ದರೂ ಅವರು ಹಗಲು ರಾತ್ರಿ ದೇವಾರಾಧನೆಯಲ್ಲಿ ಮಗ್ನರಾಗುತ್ತಿದ್ದರು. ಮಧ್ಯರಾತ್ರಿ ಕಳೆದ ನಂತರ ಅವರು ಅಲ್ಲಾಹನ ಆರಾಧನೆಗೋಸ್ಕರ ಎದ್ದು ನಿಲ್ಲುತ್ತಿದ್ದರು ಮತ್ತು ಬೆಳಗಿನ ತನಕ ಪ್ರಾರ್ಥನೆ ಮಾಡುತ್ತಿದ್ದರು. ಕೆಲವು ಸಾರಿ ಅವರ ಪಾದಗಳು ಬೀಗುತ್ತಿದ್ದುವು. ಅವರನ್ನು ನೋಡುತ್ತಿದ್ದವರಿಗೆ ಅವರ ಸ್ಥಿತಿಯನ್ನು ಕಂಡು ಹೃದಯ ಕರಗುತ್ತಿತ್ತು. ಹಝ್ರತ್ ಆಯಿಶಾ(ರ) ಹೀಗೆ ಹೇಳುತ್ತಾರೆ: ನಾನು ಇಂತಹ ಸ್ಥಿತಿಯನ್ನು ನೋಡಿ ಹಝ್ರತ್ ಪೈಗಂಬರರೊಂದಿಗೆ ಹೇಳಿದೆ – “ಓ ಅಲ್ಲಾಹನ ಪೈಗಂಬರರೇ, ನೀವು ಅಲ್ಲಾಹನ ಸಾಮೀಪ್ಯವನ್ನು ಗಳಿಸಿದವರಾಗಿರುವಿರಿ. ಹೀಗಿರುವಾಗ ನೀವು ನಿಮ್ಮ ಶರೀರಕ್ಕೆ ಇಷ್ಟು ಕಷ್ಟಕೊಡುವುದೇಕೆ?”

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: “ಓ ಆಯಿಶಾ, ನಾನು ಅಲ್ಲಾಹನ ಸಾಮೀಪ್ಯ ಗಳಿಸಿದವನೆಂಬುದು ಸತ್ಯವಾಗಿದೆ. ಅಲ್ಲಾಹನು ನನ್ನ ಮೇಲೆ ದಯೆದೋರಿ ನನಗೆ ಅವನ ಸಾಮೀಪ್ಯವನ್ನು ಪ್ರದಾನ ಮಾಡಿರುವನು. ಹೀಗಿರುವಾಗ ನನಗೆ ಸಾಧ್ಯವಿರುವಷ್ಟು ಅವನಿಗೆ ಕೃತಜ್ಞತೆ ಅರ್ಪಿಸುತ್ತಾ ಇರುವುದು ನನ್ನ ಕರ್ತವ್ಯವಾಗಿರುವುದಿಲ್ಲವೇ? ಉಪಕಾರ ಸ್ಮರಣೆಗಾಗಿಯೇ ಕೃತಜ್ಞತೆಯನ್ನು ಅರ್ಪಿಸಲಾಗುತ್ತಿದೆ.” (ಬುಖಾರಿ)

ಹಝ್ರತ್ ಪೈಗಂಬರ್(ಸ) ಅಲ್ಲಾಹನ ಅನುಮತಿ ಪಡೆಯದೆ ಯಾವುದೇ ಮಹತ್ತಾದ ಕೆಲಸವನ್ನು ಪ್ರಾರಂಭಿಸುತ್ತಿರಲಿಲ್ಲ, ಅವರ ಜೀವಿತದ ವಿವರಣೆಯಲ್ಲಿ ಅವರ ವಲಸೆ ಹೋಗುವಿಕೆ ಬಗ್ಗೆ ಬರೆಯಲಾಗಿದೆ. ಮಕ್ಕದ ಜನರು ಅವರನ್ನು ತೀವ್ರ ಹಿಂಸಾಚಾರಗಳಿಗೆ ಗುರಿಪಡಿಸಿದರೂ ಮಕ್ಕವನ್ನು ಬಿಟ್ಟು ಹೋಗಲು ಅಲ್ಲಾಹನು ಅವರಿಗೆ ಅನುಮತಿ ನೀಡುವ ಸಂದೇಶವಾಣಿಯನ್ನು ಅವತೀರ್ಣಗೊಳಿಸುವ ತನಕ ಅವರು ಮಕ್ಕವನ್ನು ಬಿಟ್ಟು ಹೋಗಲಿಲ್ಲ. ಮಕ್ಕದವರು ಮಾಡುತ್ತಿದ್ದ ದೌರ್ಜನ್ಯಗಳ ಕಾರಣದಿಂದ ಹಝ್ರತ್ ಪೈಗಂಬರ್(ಸ) ತನ್ನ ಶಿಷ್ಯರಿಗೆ ಅಬಿಸೀನಿಯಾ ದೇಶಕ್ಕೆ ಹೋಗುವ ಅನುಮತಿ ನೀಡಿದಾಗ ಆ ಶಿಷ್ಯರು

ಹಝ್‌ರತ್ ಪೈಗಂಬರ್(ಸ) ತಮ್ಮೊಂದಿಗೆ ಬರಬೇಕೆಂದು ಅಪೇಕ್ಷಿಸಿದಾಗ ಹಝ್‌ರತ್ ಪೈಗಂಬರ್(ಸ) "ನನಗೆ ಅಲ್ಲಾಹನಿಂದ ಅನುಮತಿ ದೊರೆತಿಲ್ಲ" ಎಂದು ಹೇಳಿದರು.

ಕಷ್ಟದ ಕಾಲದಲ್ಲಿ ಜನರು ತಮ್ಮ ಸಂಬಂಧಿಕರನ್ನೂ ಸ್ನೇಹಿತರನ್ನೂ ತಮ್ಮ ಜೊತೆಗೆ ಇರಬೇಕೆಂದು ಬಯಸುತ್ತಾರೆ. ಆದರೆ ಹಝ್‌ರತ್ ಪೈಗಂಬರ್(ಸ) ತಮ್ಮ ಸಂಗಡಿಗರ ಸಂರಕ್ಷಣೆಗಾಗಿ ಅವರನ್ನು ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಲು ಉಪದೇಶಿಸಿ ಅವರು ಸ್ವತಃ ಮಕ್ಕದಲ್ಲಿ ಉಳಿದರು. ಅವರಿಗೆ ಅಷ್ಟರ ತನಕ ಮಕ್ಕದಿಂದ ವಲಸೆ ಹೋಗಬೇಕೆಂಬ ಆಜ್ಞೆ ಅಲ್ಲಾಹನಿಂದ ದೊರಕದ ಕಾರಣ ಹಾಗೆ ಮಾಡಿದರು.

ದೇವ ವಚನಗಳನ್ನು ಹಝ್‌ರತ್ ಪೈಗಂಬರ್(ಸ) ಆಲಿಸುವಾಗ ಅವರ ಕಣ್ಣುಗಳಿಂದ ತಾನಾಗಿಯೇ ಕಣ್ಣೀರು ಸುರಿಯುತ್ತಿತ್ತು. ವಿಶಿಷ್ಟವಾಗಿ ಅವರ ಕರ್ತವ್ಯಗಳ ಕಡೆಗೆ ಗಮನಹರಿಸುವಂತಹ ವಚನಗಳನ್ನು ಆಲಿಸುವಾಗ ಹೀಗೆ ಆಗುತ್ತಿತ್ತು. ಹಝ್‌ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೀಗೆ ವರದಿ ಮಾಡುತ್ತಾರೆ:

"ಒಮ್ಮೆ ಹಝ್‌ರತ್ ಪೈಗಂಬರ್(ಸ) ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ತನ್ನ ಮುಂದೆ ಪಠಿಸಲು ನನ್ನೊಂದಿಗೆ ಹೇಳಿದರು. ಆಗ ನಾನು ಹೇಳಿದೆ – "ಓ ಅಲ್ಲಾಹನ ಪೈಗಂಬರರೇ, ಪವಿತ್ರ ಖುರ್‌ಆನ್ ನಿಮಗೆ ಅವತೀರ್ಣವಾದುದಾಗಿದೆ. ನಾನು ಅದನ್ನು ನಿಮಗೆ ಹೇಗೆ ಓದಿ ಕೇಳಿಸಬಲ್ಲೆನು?" ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಪವಿತ್ರ ಖುರ್‌ಆನನ್ನು ಬೇರೆಯವರಿಂದ ಓದಿಸಿ ಆಲಿಸಲು ನಾನು ಇಷ್ಟಪಡುತ್ತೇನೆ." ಆಗ ನಾನು ಪವಿತ್ರ ಖುರ್‌ಆನಿನ ನಾಲ್ಕನೆಯ ಅಧ್ಯಾಯ (ಅನ್ನಿಸಾ) ಪಠಿಸಲು ಪ್ರಾರಂಭಿಸಿದೆನು. ನಾನು ಈ ಕೆಳಗಿನ ವಚನವನ್ನು ತಲಪಿದೆನು: "ಆ ದಿನದ ಸ್ಥಿತಿ ಹೇಗಿರುವುದು – ಪ್ರತಿಯೊಂದು ಜನಾಂಗಕ್ಕೆ ಆಗಮಿಸಿದ ಪ್ರವಾದಿಯನ್ನು ಅವರ ಮುಂದೆ ನಿಲ್ಲಿಸಿ ಅವರ ಕೃತ್ಯಗಳ ಲೆಕ್ಕಾಚಾರ ಮಾಡುವೆವು. ನಿನ್ನನ್ನೂ ನಿನ್ನ ಜನಾಂಗದ ಮುಂದೆ ನಿಲ್ಲಿಸಿ ಅವರ ಕೃತ್ಯಗಳ ಲೆಕ್ಕಾಚಾರ ಮಾಡುವೆವು." (4:42)

ಈ ವಚನವನ್ನು ಪಠಿಸಿದಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಓದಿದುದು ಸಾಕು. ನಿಲ್ಲಿಸು, ನಿಲ್ಲಿಸು" ನಾನು ಅವರ ಕಡೆಗೆ ನೋಡಿದಾಗ ಅವರ ಎರಡು ಕಣ್ಣುಗಳಿಂದಲೂ ಅಶ್ರು ಧಾರಾಕಾರವಾಗಿ ಸುರಿಯುತ್ತಿತ್ತು. (ಬುಖಾರಿ)

ಹಝ್‌ರತ್ ಪೈಗಂಬರರಿಗೆ(ಸ) ನಮಾಝ್ ಬಗ್ಗೆ ಎಷ್ಟು ಕಾಳಜಿ ಇತ್ತೆಂದರೆ ಅವರು ಕಠಿಣವಾಗಿ ಅಸ್ವಸ್ಥರಾಗಿದ್ದಾಗ ಅವರಿಗೆ ಮನೆಯಲ್ಲಿಯೇ ಕುಳಿತು ಅಥವಾ ಮಲಗಿ ನಮಾಝ್ ಮಾಡಲು ಅನುಮತಿ ಇದ್ದರೂ ಅವರು ಬೇರೆಯವರ ಸಹಾಯದಿಂದ ಮಸ್‌ಜಿದ್‌ಗೆ ನಮಾಝ್‌ಗೆ ನೇತೃತ್ವ ವಹಿಸಲು ಹೋಗುತ್ತಿದ್ದರು.

ಒಂದು ದಿನ ಹಝ್‌ರತ್ ಪೈಗಂಬರ್(ಸ) ಮಸ್‌ಜಿದ್‌ನಲ್ಲಿ ನಮಾಝ್‌ಗೆ ನೇತೃತ್ವವಹಿಸಲು ತನಗೆ ಸಾಧ್ಯವಾಗದೆಂದು ಗ್ರಹಿಸಿ ಹಝ್‌ರತ್ ಅಬೂಬಕರ್(ರ) ನಮಾಝ್‌ಗೆ ನೇತೃತ್ವ ವಹಿಸಲು ಹೇಳಿ ಕಳುಹಿಸಿದರು. ಆದರೆ ಅಷ್ಟರೊಳಗೆ ಅವರಿಗೆ ತನ್ನ ಆರೋಗ್ಯ ಸ್ವಲ್ಪ ಸುಧಾರಣೆ ಹೊಂದಿದ ಹಾಗೆ ತೋರಿತು. ಆಗ



ಅವರು ಕೂಡಲೆ ಇಬ್ಬರು ಶಿಷ್ಯರ ಸಹಾಯದಿಂದ ಮಸ್‌ಜಿದ್‌ಗೆ ಹೊರಟರು. ಅವರು ಎಷ್ಟು ನಿಶ್ಶಕ್ತರಾಗಿದ್ದರೆಂದರೆ ಹಝ್‌ರತ್ ಆಯಿಶಾ(ರ) ಹೇಳುತ್ತಾರೆ: ಹಝ್‌ರತ್ ಪೈಗಂಬರರ(ಸ) ಎರಡು ಕಾಲುಗಳು ಆಗ ಹೆಜ್ಜೆಯೂರದೆ ಜಾರಿಕೊಂಡು ಹೋಗುತ್ತಿದ್ದುವು.

ಲೋಕದಲ್ಲಿ ಸಂತೋಷ ಪ್ರಕಟಿಸಲು ಮತ್ತು ಇತರರ ಗಮನ ಸೆಳೆಯಲು ಚಪ್ಪಾಳೆ ಹೊಡೆಯುವ ಕ್ರಮವಿದೆ. ಅರಬಿಗಳಲ್ಲೂ ಈ ಕ್ರಮ ಜಾರಿಯಲ್ಲಿತ್ತು. ಆದರೆ ಹಝ್‌ರತ್ ಪೈಗಂಬರರಿಗೆ ಅಲ್ಲಾಹನ ನಾಮ ಸ್ಮರಣೆ ಎಷ್ಟು ಪ್ರಿಯವಾಗಿದ್ದಿತೆಂದರೆ ಅವರು ಇಂತಹ ಸಂದರ್ಭಗಳಲ್ಲಿ ಚಪ್ಪಾಳೆ ತಟ್ಟುವುದಕ್ಕೆ ಬದಲು ಅಲ್ಲಾಹನ ನಾಮ ಸ್ಮರಣೆ ಮಾಡಬೇಕೆಂದು ಆಜ್ಞಾಪಿಸಿದರು.

ಈ ವಿಷಯಕ್ಕೆ ಸಂಬಂಧಿಸಿ ಒಂದು ವರದಿ ಹೀಗಿದೆ: ಒಮ್ಮೆ ಹಝ್‌ರತ್ ಪೈಗಂಬರ್(ಸ) ಯಾವುದೋ ಕೆಲಸದಲ್ಲಿ ನಿರತರಾಗಿದ್ದರು. ಆಗ ನಮಾಝ್‌ಗೆ ಸಮಯವಾಯಿತು. ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು:

"ಅಬೂಬಕರ್ ನಮಾಝ್ ನೇತೃತ್ವ ವಹಿಸಲಿ" ಹಝ್‌ರತ್ ಪೈಗಂಬರರು ತನ್ನ ಕೆಲಸ ಮುಗಿಸಿ ಕೂಡಲೆ ಮಸ್‌ಜಿದ್ ಕಡೆಗೆ ಹೋದರು. ಆಗ ನಮಾಝ್‌ನ ನೇತೃತ್ವ ಹಝ್‌ರತ್ ಅಬೂಬಕರ್(ರ) ವಹಿಸಿ ನಮಾಝ್ ಅನುಷ್ಠಿಸುತ್ತಿದ್ದರು. ಹಝ್‌ರತ್ ಪೈಗಂಬರ್(ಸ) ಮಸ್‌ಜಿದನ್ನು ಪ್ರವೇಶಿಸಿದಾಗ ನಮಾಝ್ ಮಾಡುತ್ತಿದ್ದವರು ಚಪ್ಪಾಳೆ ಹೊಡೆಯಲು ಪ್ರಾರಂಭಿಸಿದರು. ಹಝ್‌ರತ್ ಪೈಗಂಬರರ(ಸ) ಆಗಮನದಿಂದ ತಾವು ಸಂತೋಷಗೊಂಡಿರುವೆವು ಎಂದು ಸೂಚಿಸಲು ಮತ್ತು ಹಝ್‌ರತ್ ಅಬೂಬಕರರಿಗೆ "ನಿಮ್ಮ ನೇತೃತ್ವ ಬಿಟ್ಟು ಕೊಡಿರಿ. ಹಝ್‌ರತ್ ಪೈಗಂಬರ್(ಸ) ಆಗಮಿಸಿರುವರು" ಎಂದು ತಿಳಿಸಲಿಕ್ಕಾಗಿ ಅವರು ಹಾಗೆ ಮಾಡಿದ್ದರು.

ಆಗ ಹಝ್‌ರತ್ ಅಬೂಬಕರ್(ರ) ನಮಾಝ್ ನೇತಾರನ (ಇಮಾಮ್) ಸ್ಥಾನದಿಂದ ಹಿಂದೆ ಸರಿದು ಹಝ್‌ರತ್ ಪೈಗಂಬರರಿಗೆ ನೇತೃತ್ವ ಸ್ಥಾನ ಬಿಟ್ಟುಕೊಟ್ಟರು. ನಮಾಝ್ ಅನುಷ್ಠಾನವು ಪೂರ್ಣಗೊಂಡಾಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಅಬೂಬಕರ್, ನಾನು ನಿಮಗೆ ನಮಾಝ್‌ಗೆ ನೇತೃತ್ವ ವಹಿಸಲು ಹೇಳಿದ್ದೆ. ಹೀಗಿರುವಾಗ ನಾನು ನಮಾಝ್‌ಗೆ ಆಗಮಿಸಿದಾಗ ನೀವು ಏಕೆ ನೇತೃತ್ವ ಸ್ಥಾನದಿಂದ ಹಿಂದೆ ಸರಿದಿರಿ?"

ಹಝ್‌ರತ್ ಅಬೂಬಕರ್(ರ) ಹೇಳಿದರು: "ಅಲ್ಲಾಹನ ಪೈಗಂಬರರೇ, ಅಲ್ಲಾಹನ ಪೈಗಂಬರರು ಉಪಸ್ಥಿತರಿರುವಾಗ ಅಬೂ ಖುಹಾಫರ ಮಗನಾದ ನನಗೆ ನಮಾಝಿನ ನೇತೃತ್ವ ವಹಿಸಲು ಇರುವ ಅರ್ಹತೆಯಾದರೂ ಏನು?"

ಹಝ್‌ರತ್ ಪೈಗಂಬರ್(ಸ) ತನ್ನ ಶಿಷ್ಯರೊಂದಿಗೆ ಹೇಳಿದರು: "ನೀವು ಚಪ್ಪಾಳೆ ಏಕೆ ಹೊಡೆದಿರಿ? ಅಲ್ಲಾಹನನ್ನು ಸ್ಮರಿಸುತ್ತಾ ಇರುವಾಗ ಚಪ್ಪಾಳೆ ಹೊಡೆಯುವುದು ಯೋಗ್ಯವಲ್ಲ. ನಮಾಝ್ ಮಾಡುವಾಗ ಯಾವುದಾದರೂ

ವಿಷಯದ ಬಗ್ಗೆ ಗಮನ ಸೆಳೆಯವುದು ಆವಶ್ಯಕವಾದರೆ ಚಪ್ಪಾಳೆ ಹೊಡೆಯುವುದಕ್ಕೆ ಬದಲಾಗಿ ಉಚ್ಚಸ್ವರದಲ್ಲಿ ಅಲ್ಲಾಹನ ಪರಿಶುದ್ಧಿಯನ್ನು ಘೋಷಿಸಿರಿ. ನೀವು ಹೀಗೆ ಮಾಡಿದರೆ ಪ್ರಾರ್ಥನೆಗೆ ನೇತೃತ್ವ ವಹಿಸುವವರು ನೀವು ಉದ್ದೇಶಿಸಿದ ವಿಷಯವನ್ನು ತಿಳಿದುಕೊಳ್ಳುವರು."(ಬುಖಾರಿ)

ದೇಹವನ್ನು ಕಷ್ಟಕ್ಕೊಳಪಡಿಸಿ ಆರಾಧನೆ ಮಾಡುವುದನ್ನು ಹಝ್‌ರತ್ ಪೈಗಂಬರ್(ಸ) ಇಷ್ಟಪಡುತ್ತಿರಲಿಲ್ಲ. ಅವರು ಒಮ್ಮೆ ತಮ್ಮ ಮನೆಗೆ ಹೋದಾಗ ಎರಡು ಕಂಭಗಳ ಮಧ್ಯೆ ಒಂದು ಹಗ್ಗವನ್ನು ಕಟ್ಟಿರುವುದನ್ನು ಕಂಡರು. ಆ ಹಗ್ಗವನ್ನು ಏಕೆ ಕಟ್ಟಲಾಗಿದೆ? ಎಂದು ಅವರು ವಿಚಾರಿಸಿದರು. ಅದು ಅವರ ಪತ್ನಿ ಹಝ್‌ರತ್ ಝೈನಬ(ರ) ಕಟ್ಟಿದ ಹಗ್ಗವೆಂದೂ ಅವರು ಆರಾಧನೆ ಮಾಡುತ್ತಾ ಆಯಾಸಗೊಂಡಾಗ ಆ ಹಗ್ಗವನ್ನು ಹಿಡಿದು ದಣಿವಾರಿಸಿ ಕೊಳ್ಳುತ್ತಿದ್ದರೆಂದೂ ಅವರಿಗೆ ತಿಳಿಸಲಾಯಿತು. ಆಗ ಹಝ್‌ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಆ ಹಗ್ಗವನ್ನು ಬಿಚ್ಚಿ ಬಿಡಿರಿ. ಒಬ್ಬ ವ್ಯಕ್ತಿ ಹೃತ್ಪೂರ್ವಕವಾಗಿ ಸಂತೋಷ ಪಡುತ್ತಾ ಆರಾಧನೆ ನಡೆಸಿದರೆ ಸಾಕು, ಆರಾಧನೆ ನಡೆಸುವಾಗ ಆಯಾಸವಾದರೆ ಸುಮ್ಮನೆ ಕುಳಿತುಕೊಳ್ಳಲಿ. ಈ ರೀತಿ ಕಷ್ಟಪಟ್ಟು ಮಾಡುವ ಪ್ರಾರ್ಥನೆ ಯಾವುದೇ ಪ್ರಯೋಜನ ನೀಡಲಾರದು." (ಬುಖಾರಿ)

ಹಝ್‌ರತ್ ಪೈಗಂಬರರಿಗೆ(ಸ) ಬಹುದೇವಾರಾಧನೆ ಬಗ್ಗೆ ಎಷ್ಟು ಅತೃಪ್ತಿ ಇತ್ತೆಂದರೆ ಅವರು ಮರಣಾಸನ್ನ ಸ್ಥಿತಿಯಲ್ಲಿ ಒಮ್ಮೆ ಬಲಮಗ್ಗುಲಿಗೂ ಇನ್ನೊಮ್ಮೆ ಎಡ ಮಗ್ಗುಲಿಗೂ ಹೊರಳಾಡುತ್ತಾ ಅತ್ಯಂತ ಕಷ್ಟಪಡುತ್ತಾ ಇದ್ದಾಗ ಹೇಳಿದರು: "ತಮ್ಮ ಪ್ರವಾದಿಗಳ ಗೋರಿಗಳನ್ನು ಆರಾಧನಾ ಸ್ಥಳಗಳನ್ನಾಗಿ ಮಾಡಿದ ಯಹೂದಿಯರನ್ನೂ ಕ್ರೈಸ್ತ ಧರ್ಮೀಯರನ್ನೂ ಅಲ್ಲಾಹನು ಶಪಿಸಲಿ." (ಬುಖಾರಿ)

ಹಝ್‌ರತ್ ಪೈಗಂಬರರು(ಸ) ಹೇಳಿದುದರ ಅರ್ಥವೇನೆಂದರೆ, ಆ ಜನರು ಪ್ರವಾದಿಗಳ ಗೋರಿಗಳಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾರೆ ಮತ್ತು ಅವರನ್ನು ಪ್ರಾರ್ಥಿಸುತ್ತಾರೆ. ಆದರೆ ನನ್ನ ಸಮುದಾಯದ ಜನರು ನಾನು ನಿಧನ ಹೊಂದಿದ ನಂತರ ಹೀಗೆ ವರ್ತಿಸುವುದಾದರೆ, ಅವರು ನನ್ನ ಪ್ರಾರ್ಥನೆಗಳ ಲಾಭ ಪಡೆಯಲು ಅರ್ಹರಾಗುವರು ಎಂದು ಗ್ರಹಿಸದಿರಲಿ. ನಾನು ಆ ಬಗ್ಗೆ ಸಂಪೂರ್ಣವಾಗಿ ವಿರೋಧ ಭಾವನೆಯನ್ನು ಹೊಂದಿದ್ದೇನೆ.

ಹಝ್‌ರತ್ ಪೈಗಂಬರರಿಗೆ(ಸ) ಅಲ್ಲಾಹನ ಬಗ್ಗೆ ಇದ್ದ ಆಭಿಮಾನದ ಕುರಿತು ಅವರ ಜೀವನ ಚರಿತ್ರೆಯಲ್ಲಿ ವಿವರಿಸಲಾಗಿದೆ. ಹಝ್‌ರತ್ ಪೈಗಂಬರರು ವಿಗ್ರಹಾರಾಧನೆಯನ್ನು ಖಂಡಿಸುವುದನ್ನು ಬಿಡುವುದಾದರೆ ಅವರಿಗೆ ಹಲವಾರು ರೀತಿಯ ಬಹುಮಾನಗಳನ್ನು ನೀಡುವುದಾಗಿ ಮಕ್ಕದ ಅವಿಶ್ವಾಸಿಗಳು ಪ್ರಲೋಭನೆ ನೀಡಿದ್ದರು. ಅವರ ಚಿಕ್ಕಪ್ಪ ಅಬೂತಾಲಿಬ್ ಸಹ ಈ ಬಗ್ಗೆ ಅವಿಶ್ವಾಸಿಗಳ ಪರವಾಗಿ ಶಿಫಾರಸು ಮಾಡಿ ಹೀಗೆ ಹೇಳಿದ್ದರು: "ನೀನು ಮಕ್ಕದ ಜನರ ಮಾತಿಗೆ ಒಪ್ಪಿಗೆ ನೀಡದಿದ್ದರೆ ಮತ್ತು ನಾನು ನಿನಗೆ ಸಹಾಯಮಾಡುವುದನ್ನು ಬಿಟ್ಟು ಬಿಡದಿದ್ದರೆ



ನನ್ನ ಸಮುದಾಯದ ಜನರು ನನ್ನನ್ನು ಬಿಟ್ಟು ಬಿಡುವರು."

ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: "ಓ ನನ್ನ ಚಿಕ್ಕಪ್ಪನವರೇ, ಈ ಜನರು ಸೂರ್ಯನನ್ನು ನನ್ನ ಬಲಭಾಗದಲ್ಲೂ ಚಂದ್ರನನ್ನು ನನ್ನ ಎಡಭಾಗದಲ್ಲೂ ತಂದು ನಿಲ್ಲಿಸಿದರೂ ನಾನು ಏಕದೇವನ ಏಕತ್ವವನ್ನು ಪ್ರಚಾರಗೊಳಿಸುವ ಕೆಲಸವನ್ನು ಕೈಬಿಡಲಾರೆನು."

ಉಹುದ್ ಯುದ್ಧದ ಕಾಲದಲ್ಲಿ ಮುಸ್ಲಿಮರು ಗಾಯದಿಂದ ಜರ್ಝರಿತರಾಗಿ ಮತ್ತು ಚಲ್ಲಾಪಿಲ್ಲಿಯಾಗಿ ಒಂದು ಬೆಟ್ಟದ ಕೆಳಗೆ ನಿಂತಿದ್ದಾಗ, ಶತ್ರುಗಳು ತಮ್ಮ ಎಲ್ಲಾ ಆಯುಧಗಳೊಂದಿಗೆ ಮತ್ತು ಸಾಮರ್ಥ್ಯದೊಂದಿಗೆ ಸಂತೋಷ ಪಡುತ್ತಾ, "ನಾವು ಮುಸ್ಲಿಮರ ಶಕ್ತಿಯನ್ನು ಮುರಿದು ಹಾಕಿರುವೆವು" ಎಂದು ಘೋಷಿಸುತ್ತಾ ಇದ್ದಾಗ ಅಬೂ ಸುಫ್‌ಯಾನ್, 'ಉಅ್‌ಲು ಹುಬಲ್, ಉಅ್‌ಲು ಹುಬಲ್' – ಹುಬಲಿಗೆ ಜಯವಾಗಲಿ, ಹುಬಲಿಗೆ ಜಯವಾಗಲಿ ಎಂದು ಜಯಕಾರ ಮಾಡಲು ಪ್ರಾರಂಭಿಸಿದಾಗ ಶತ್ರುಗಳಿಗೆ ಕಾಣಿಸದಂತೆ ಅಡಗಿಕೊಂಡಿದ್ದ ಮುಸ್ಲಿಮರಿಗೆ, ಹಾಗೆ ಅಡಗಿಕೊಂಡಿರುವುದೇ ಅವರಿಗೆ ಆಗ ಹಿತಕರವಾಗಿದ್ದರೂ

'ಅಲ್ಲಾಹು ಅಅ್‌ಲಾ ವ ಅಜಲ್ಲು, ಅಲ್ಲಾಹು ಅಅ್‌ಲಾ ವ ಅಜಲ್ಲು' – ಅಲ್ಲಾಹನೇ ಸರ್ವೋನ್ನತನೂ ಅತ್ಯಧಿಕ ಶಕ್ತಿಶಾಲಿಯೂ ಆಗಿದ್ದಾನೆ; ಅಲ್ಲಾಹನೇ ಸರ್ವೋನ್ನತನೂ ಅತ್ಯಧಿಕ ಶಕ್ತಿಶಾಲಿಯೂ ಆಗಿದ್ದಾನೆ ಎಂದು ಉಚ್ಚ ಧ್ವನಿಯಿಂದ ಘೋಷಿಸಲು ಹಝ್‌ರತ್ ಪೈಗಂಬರ್(ಸ) ಆಜ್ಞಾಪಿಸಿದರು.

ಹಝ್‌ರತ್ ಪೈಗಂಬರರಿಗೆ(ಸ) ಏಕದೇವನ ಬಗ್ಗೆ ಇದ್ದ ಅಭಿಮಾನದ ಒಂದು ಮಹತ್ವಪೂರ್ಣ ಉದಾಹರಣೆ ಅವರ ಜೀವಿತದ ಇನ್ನೊಂದು ಘಟನೆಯಿಂದಲೂ ಸ್ಪಷ್ಟವಾಗುತ್ತದೆ:

ಇಸ್ಲಾಮ್ ಧರ್ಮ ಸ್ಥಾಪನೆಯಾಗುವ ಮೊದಲು ಜನರು ಹೀಗೆ ಸಾಮಾನ್ಯವಾಗಿ ನಂಬುತ್ತಿದ್ದರು: ಪ್ರವಾದಿಗಳ ಸಂತೋಷ ಮತ್ತು ದುಃಖಗಳಿಗೆ ಅನುಸಾರವಾಗಿ ಭೂಮಿಯಲ್ಲೂ ಆಕಾಶದಲ್ಲೂ ಪರಿವರ್ತನೆಗಳು ಪ್ರಕಟವಾಗುತ್ತವೆ. ಆಕಾಶಕಾಯಗಳು ಅವರ ಇಚ್ಛಾನುಸಾರವಾಗಿ ವರ್ತಿಸುತ್ತವೆ. ಇದಕ್ಕೆ ಸಂಬಂಧಿಸಿ ಒಬ್ಬ ಪ್ರವಾದಿಯ ಬಗ್ಗೆ ಹೀಗೆ ಹೇಳಲಾಗುತ್ತಿದೆ: ಸೂರ್ಯನಿಗೆ ಆ ಪ್ರವಾದಿ "ನಿಲ್ಲು" ಎಂದಾಗ ಸೂರ್ಯನು ತನ್ನ ಚಲನೆಯನ್ನು ನಿಲ್ಲಿಸಿದನು. ಬೇರೊಬ್ಬ ಪ್ರವಾದಿ ಚಂದ್ರನ ಚಲನೆಯನ್ನು ತಡೆದಾಗ ಚಂದ್ರನು ನಿಶ್ಚಲನಾದನು. ಬೇರೊಬ್ಬ ಪ್ರವಾದಿ ಹರಿಯುವ ನೀರಿನ ಪ್ರವಾಹವನ್ನು ತಡೆದಾಗ ಪ್ರವಾಹ ಸ್ಥಗಿತಗೊಂಡಿತು. ಹೀಗೆಲ್ಲಾ ಐತಿಹ್ಯಗಳನ್ನು ಹೆಣೆಯಲಾಗಿದೆ.

ಆದರೆ ಇಸ್ಲಾಮ್ ಧರ್ಮವು ಈ ರೀತಿಯ ಯೋಚನೆಗಳ ತಪ್ಪುಗಳನ್ನು ಬಹಿರಂಗಗೊಳಿಸಿತು. ಯಾವುದಾದರೂ ಪ್ರವಾದಿಯ ಬಗ್ಗೆ ಇಂತಹ ಉಲ್ಲೇಖಗಳು ಬಂದಿದ್ದರೆ ಅವುಗಳೆಲ್ಲಾ ಆಲಂಕಾರಿಕ ಭಾಷಾ ಪ್ರಯೋಗಗಳೆಂದೂ ಅವುಗಳ

ಒಳಾರ್ಥ ಹುಡುಕಿ ಅವುಗಳಿಂದ ಲಾಭ ಪಡೆಯಲು ಪ್ರಯತ್ನಿಸದೆ ಅವುಗಳು ಹಾಗೆಯೇ ಸಂಭವಿಸಿತೆಂದು ಜನರು ತಪ್ಪು ಗ್ರಹಿಕೆಗಳಿಗೆ ಒಳಗಾಗುತ್ತಾರೆಂದೂ ಇಸ್ಲಾಮ್ ಕಲಿಸಿತು. ಇಸ್ಲಾಮ್ ಧರ್ಮವು ಹೀಗೆಲ್ಲಾ ವ್ಯಾಖ್ಯಾನ ನೀಡಿದರೂ ಕೆಲವು ಜನರ ಹೃದಯಗಳಲ್ಲಿ ಇಂತಹ ಯೋಚನೆಗಳ ಪ್ರಭಾವ ಬಾಕಿಯಾಗಿ ಉಳಿದಿತ್ತು.

ಹಝ್ರತ್ ಪೈಗಂಬರರ(ಸ) ಜೀವಿತದ ಕೊನೆಯ ಕಾಲಘಟ್ಟದಲ್ಲಿ ಅವರ ಏಕಮಾತ್ರ ಪುತ್ರ ಇಬ್ರಾಹೀಮ್ ಎರಡೂವರೆ ವರ್ಷ ಪ್ರಾಯದವರಾಗಿದ್ದಾಗ ಮೃತರಾದರು. ಆ ದಿನ ಸಂದರ್ಭವಶಾತ್ ಸೂರ್ಯನಿಗೆ ಗ್ರಹಣವಾಗಿತ್ತು. ಆಗ ಮದೀನದಲ್ಲಿ ಕೆಲವರು ಹಝ್ರತ್ ಪೈಗಂಬರರ ಪುತ್ರನ ಮರಣದ ಕಾರಣದಿಂದ ಸೂರ್ಯನೂ ಕಗ್ರಾಗಿರುವನು ಎಂದು ಹೇಳತೊಡಗಿದರು. ಹಝ್ರತ್ ಪೈಗಂಬರರಿಗೆ ಇದರ ಬಗ್ಗೆ ಸಮಾಚಾರ ತಲಪಿದಾಗ ಅವರು ಸಂತೋಷಪಡಲಿಲ್ಲ. ಅವರು ಮೌನವಾಗಿಯೂ ಕುಳಿತುಕೊಳ್ಳಲಿಲ್ಲ. ಅವರು ಜನರ ಹೇಳಿಕೆಗಳನ್ನು ತೀವ್ರವಾಗಿ ಖಂಡಿಸಿದರು. ಅವರು ಹೇಳಿದರು: "ಸೂರ್ಯ ಚಂದ್ರರು ಅಲ್ಲಾಹನು ವಿಧಿಸಿದ ನಿಯಮಗಳ ಪ್ರಕಾರ ಚಲಿಸುವ ಆಕಾಶಕಾಯಗಳು ಆಗಿವೆ. ಅವುಗಳ ಚಲನೆಗೂ ಯಾವುದೇ ಹಿರಿಯ ಅಥವಾ ಕಿರಿಯ ಮನುಷ್ಯನ ಜೀವಿತ ಮತ್ತು ಮರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ." (ಬುಖಾರಿ).

ಯಾರಾದರೂ ಅರಬಿಗಳ ನುಡಿಗಟ್ಟಿನ ಪ್ರಕಾರ "ಇಂತಹ ನಕ್ಷತ್ರ ಇಂತಹ ರಾಶಿಯಲ್ಲಿರುವ ಕಾರಣ ನಮಗೆ ಮಳೆ ಸುರಿಯಿತು" ಎಂದು ಹೇಳಿದರೆ ಹಝ್ರತ್ ಪೈಗಂಬರರ(ಸ) ಮುಖಭಾವವು ಅತೃಪ್ತಿ ಸೂಚಿಸುತ್ತಾ ಬದಲಾವಣೆ ಹೊಂದುತ್ತಿತ್ತು. ಅವರು ಹೇಳುತ್ತಿದ್ದರು:

"ಓ ಜನರೇ, ಅಲ್ಲಾಹನು ದಯಪಾಲಿಸುತ್ತಿರುವ ಅನುಗ್ರಹಗಳನ್ನು ಬೇರೆಯವರಿಗೆ ಅನ್ವಯಿಸಿ ನೀವು ಏಕೆ ಹೇಳುತ್ತಿರುವಿರಿ? ಮಳೆ ಮೊದಲಾದುವುಗಳು ಅಲ್ಲಾಹನ ನಿಶ್ಚಿತ ನಿಯಮಗಳ ಪ್ರಕಾರ ಸಂಭವಿಸುತ್ತವೆ. ಯಾವುದೇ ದೈವ, ದೇವತೆ ಅಥವಾ ಬೇರೆ ಯಾವುದಾದರೂ ಆಧ್ಯಾತ್ಮಿಕ ಶಕ್ತಿಯ ಅನುಗ್ರಹದಿಂದಲೋ ವರದಾನಗಳಿಂದಲೋ ಮಳೆ ಸುರಿಸಲ್ಪಡುವುದಿಲ್ಲ." (ಮುಸ್ಲಿಮ್)

## ಅಲ್ಲಾಹನ ಬಗ್ಗೆ ಭರವಸೆ

ಹಝ್ರತ್ ಪೈಗಂಬರರಿಗೆ(ಸ) ಅಲ್ಲಾಹನ ಬಗ್ಗೆ ಇದ್ದ ಭರವಸೆಯ ಕುರಿತು ಈ ಕೆಳಗೆ ವಿವರಿಸುವ ಸಂಭವದಿಂದ ತಿಳಿಯಬಹುದು.

ಒಮ್ಮೆ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿ ಮಲಗಿದ್ದಾಗ ಅವರ ಮೇಲೆ ಒಬ್ಬ ಶತ್ರುವು ಖಡ್ಗ ಹಿರಿದು ಕೇಳಿದನು: "ಈಗ ನನ್ನಿಂದ ನಿಮ್ಮನ್ನು ರಕ್ಷಿಸಬಲ್ಲವನು ಯಾರು?"

ಆಗ ಹಝ್ರತ್ ಪೈಗಂಬರ್(ಸ) ನಿರಾಯುಧರಾಗಿದ್ದರು. ಅವರು ಮಲಗಿದ್ದ



ಕಾರಣ ಆತ್ಮರಕ್ಷಣೆಗೆ ಏನನ್ನೂ ಮಾಡಲು ಅವರಿಗೆ ಸಾಧ್ಯವಿರಲಿಲ್ಲ. ಆಗ ಅವರು ನಿರ್ಭಯರಾಗಿಯೂ ಶಾಂತ ಚಿತ್ತರಾಗಿಯೂ "ಅಲ್ಲಾಹ್" (ನನ್ನನ್ನು ರಕ್ಷಿಸುವನು) ಎಂದು ಹೇಳಿದರು.

ಹಝ್ರತ್ ಪೈಗಂಬರ್(ಸ) "ಅಲ್ಲಾಹ್" ಎಂದು ಎಷ್ಟು ದೃಢವಿಶ್ವಾಸದಿಂದಲೂ ಆತ್ಮ ಧೈರ್ಯದಿಂದಲೂ ಹೇಳಿದರೆಂದರೆ, ಖಡ್ಗವೆತ್ತಿದ ಆ ಅವಿಶ್ವಾಸಿಯ ಹೃದಯ ಹಝ್ರತ್ ಪೈಗಂಬರರ(ಸ) ವಿಶ್ವಾಸದ ಔನ್ನತ್ಯ ಮತ್ತು ಅವರ ದೃಢ ನಂಬಿಕೆಯ ಪ್ರಭಾವಕೊಳ್ಳಗಾಗಿ ಅವನ ಕೈಯಿಂದ ಖಡ್ಗವು ಕೆಳಗೆ ಬಿದ್ದಿತು. ಹಝ್ರತ್ ಪೈಗಂಬರರನ್ನು ಕೊಲ್ಲಲು ಬಂದಿದ್ದ ಆ ಮನುಷ್ಯ ಅವರ ಮುಂದೆ ಅಪರಾಧಿಯ ಹಾಗೆ ನಿಂತನು. (ಮುಸ್ಲಿಮ್)

ಅಲ್ಲಾಹನ ಮುಂದೆ ಹಝ್ರತ್ ಪೈಗಂಬರ್(ಸ) ಎಷ್ಟು ವಿನೀತರಾಗಿದ್ದರೆಂದರೆ ಅವರ ಶಿಷ್ಯರು ಅವರೊಂದಿಗೆ, "ನೀವು ನಿಮ್ಮ ಸದಾಚಾರಗಳ ಆಧಿಕ್ಯದ ಕಾರಣದಿಂದ ಅಲ್ಲಾಹನ ಅನುಗ್ರಹಗಳನ್ನು ಗಳಿಸುವಿರಿ" ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಇಲ್ಲ, ಇಲ್ಲ. ನಾನು ಅಲ್ಲಾಹನ ಔದಾರ್ಯದ ಮೂಲಕವೇ ಕ್ಷಮಿಸಲ್ಪಡುವೆನು."

ಹಝ್ರತ್ ಅಬೂ ಹುರೈರ(ರ) ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದುದನ್ನು ನಾನು ಆಲಿಸಿದೆ – "ಯಾರೊಬ್ಬನೂ ಕೇವಲ ತನ್ನ ಸದಾಚಾರಗಳ ಕಾರಣದಿಂದ ಸ್ವರ್ಗವನ್ನು ಪ್ರವೇಶಿಸಲಾರನು." ಆಗ ನಾನು ಕೇಳಿದೆ – "ಓ ಅಲ್ಲಾಹನ ಪೈಗಂಬರರೇ, ತಾವು ಸಹ ತಮ್ಮ ಸದಾಚಾರಗಳ ಕಾರಣದಿಂದ ಸ್ವರ್ಗವನ್ನು ಪ್ರವೇಶಿಸಲಾರರೇನು?" ಹಝ್ರತ್ ಪೈಗಂಬರ್(ಸ) ಆಗ ಹೇಳಿದರು: "ನಾನು ಸಹ ನನ್ನ ಸದಾಚಾರಗಳ ಆಧಿಕ್ಯದ ಕಾರಣದಿಂದ ಸ್ವರ್ಗವನ್ನು ಪ್ರವೇಶಿಸಲಾರೆನು. ಅಲ್ಲಾಹನ ಅನುಗ್ರಹ ಮತ್ತು ಅವನ ಕೃಪೆಯು ನನ್ನನ್ನು ಸುತ್ತುವರಿದರೆ ಮಾತ್ರ ನನಗೆ ಸ್ವರ್ಗವು ದೊರಕುವುದು." (ಬುಖಾರಿ)

ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದರು: "ನೀವು ನಿಮ್ಮ ಕೆಲಸಗಳಲ್ಲಿ ಒಳಿತನ್ನು ಅವಲಂಬಿಸಿರಿ. ಅಲ್ಲಾಹನ ಸಾಮೀಪ್ಯ ಗಳಿಸಬಹುದಾದ ದಾರಿಗಳನ್ನು ಹುಡುಕಿರಿ. ನಿಮ್ಮಲ್ಲಿ ಯಾರೊಬ್ಬನೂ ತಾನು ಮೃತನಾಗಬೇಕೆಂದು ಆಶಿಸಬಾರದು. ಏಕೆಂದರೆ ಒಬ್ಬನು ಒಳ್ಳೆಯವನಾದರೆ ಅವನು ಜೀವಿಸುತ್ತಾ ಇನ್ನಷ್ಟು ಒಳಿತನ್ನು ಗಳಿಸಬಹುದಾಗಿದೆ. ಅವನು ಕೆಟ್ಟವನಾದರೆ ಜೀವಿಸುತ್ತಾ ತನ್ನ ಪಾಪ ಕೃತ್ಯಗಳಿಗೆ ಪಶ್ಚಾತ್ತಾಪಗೊಂಡು ದೇವನ ಕಡೆಗೆ ತಿರುಗುವ ಭಾಗ್ಯಗಳಿಸಬಹುದಾಗಿದೆ." (ಬುಖಾರಿ)

ಹಝ್ರತ್ ಪೈಗಂಬರರಿಗೆ(ಸ) ಅಲ್ಲಾಹನೊಂದಿಗೆ ಎಂತಹ ಪ್ರೇಮಭಾವನೆ ಇತ್ತೆಂದರೆ, ಮಳೆಬಾರದ ಒಂದು ಕಾಲಾವಧಿಯ ನಂತರ ಮಳೆ ಸುರಿಯಲು ತೊಡಗಿದರೆ ಅವರು ತನ್ನ ನಾಲಗೆ ಚಾಚಿ ಮಳೆ ನೀರ ಬಿಂದುಗಳನ್ನು ಹೀರಿ ಹೀಗೆ ಹೇಳುತ್ತಿದ್ದರು: "ನೋಡಿರಿ ನನ್ನ ಪ್ರಭುವಿನ ಹೊಸದಾದ ಕೃಪೆ." ಅವರು ಸಭೆಯಲ್ಲಿ ಕುಳಿತಿರುವಾಗ, ಅಲ್ಲಾಹನಿಂದ ಕ್ಷಮೆಯನ್ನು ಯಾಚಿಸುವ ಮತ್ತು

ಕುಂದುಕೊರತೆಗಳನ್ನು ನೀಗಿಸಲು ಮೊರೆಯಿಡುವ ಪ್ರಾರ್ಥನೆ (ಇಸ್ತಿಗ್‌ಫಾರ್) ಮಾಡುತ್ತಿದ್ದರು. ಅವರು ಬೇರೆ ಸಮಯಗಳಲ್ಲೂ ಈ ಪ್ರಾರ್ಥನೆಯನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಿದ್ದರು. ತನ್ನ ಸಮುದಾಯ ಮತ್ತು ತನ್ನೊಂದಿಗೆ ಸಂಬಂಧ ಹೊಂದಿದ ಎಲ್ಲರೂ ಅಲ್ಲಾಹನ ಕೋಪಕ್ಕೆ ಗುರಿಯಾಗುವುದರಿಂದ ರಕ್ಷಿಸಲ್ಪಡಲಿ ಮತ್ತು ಅವನ ಕ್ಷಮೆಗೆ ಅರ್ಹರಾಗಲಿ ಎಂದು ಉದ್ದೇಶಿಸಿ ಹಾಗೆ ಅವರು ಪ್ರಾರ್ಥಿಸುತ್ತಿದ್ದರು. (ಬುಖಾರಿ)

ಅಲ್ಲಾಹನ ಮುಂದೆ ತನಗೆ ಹಾಜರಾಗಲಿಕ್ಕಿದೆ ಎಂದು ಅವರು ಯಾವಾಗಲೂ ನೆನಪಿಟ್ಟುಕೊಳ್ಳುತ್ತಿದ್ದರು. ಅವರು ನಿದ್ರಿಸಲು ಮಲಗಿದಾಗ ಹೀಗೆ ಪ್ರಾರ್ಥಿಸುತ್ತಾ ಇದ್ದರು: "ಬಿಸ್ಮಿಕ ಅಲ್ಲಾಹುಮ್ಮ ಅಮೂತು ವ ಅಹ್‌ಯಾ" (ಓ ಅಲ್ಲಾಹ್, ನಾನು ನಿನ್ನ ಹೆಸರು ಹೇಳುತ್ತಾ ಮೃತನಾಗುತ್ತೇನೆ. ನಿನ್ನ ಹೆಸರು ಹೇಳುತ್ತಾ ಚೈತನ್ಯ ಪಡೆದು ಎದ್ದೇಳುತ್ತೇನೆ)

ಹಝ್ರತ್ ಪೈಗಂಬರ್(ಸ) ಬೆಳಗ್ಗೆ ನಿದ್ರೆಯಿಂದ ಏಳುವಾಗ ಹೀಗೆ ಪ್ರಾರ್ಥಿಸುತ್ತಿದ್ದರು: "ಅಲ್ ಹಮ್‌ದು ಲಿಲ್ಲಾಹಿಲ್ಲಝೀ ಅಹ್‌ಯಾನಾ ಬಅ್‌ದ ಮಾ ಅಮಾತನಾ ವ ಇಲೈಹಿನ್ನುಶೂರ್." ಎಂದರೆ, ಎಲ್ಲಾ ಸ್ತುತಿಗಳು ಅಲ್ಲಾಹನಿಗೋಸ್ಕರ ಆಗಿವೆ. ಅವನು ನಮ್ಮನ್ನು ಮೃತಪಡಿಸಿದ ನಂತರ ನಮ್ಮನ್ನು ಪುನರುಜ್ಜೀವಿಸಿದನು. ನಾವು ಅವನ ಬಳಿಗೆ ಮರಳಿ ಹೋಗಲಿರುವೆವು. (ಬುಖಾರಿ)

ಹಝ್ರತ್ ಪೈಗಂಬರ್(ಸ) ಅಲ್ಲಾಹನ ಸಾಮೀಪ್ಯಗಳಿಸುವ ಉತ್ಕಟಾಭಿಲಾಷೆಯಿಂದ ಯಾವಾಗಲೂ ಹೀಗೆ ಪ್ರಾರ್ಥಿಸುತ್ತಾ ಇದ್ದರು: 'ಅಲ್ಲಾಹುಮ್ಮ ಇಜ್‌ಅಲ್ ಫೀ ಖಲ್‌ಬೀ ನೂರ ವ ಫೀ ಬಸರೀ ನೂರ ವ ಫೀ ಸಮ್‌ಈ ನೂರ ವ ಅನ್ ಯಮೀನೀ ನೂರ ವ ಅನ್ ಯಸಾರೀ ನೂರ ವ ಫೌಖೀ ನೂರ ವ ತಹ್‌ತೀ ನೂರ ವ ಅಮಾಮಿ ನೂರ ವ ಖಲ್‌ಫೀ ನೂರ ವಜ್‌ಅಲ್‌ಲೀ ನೂರ.' (ಬುಖಾರಿ)

ಅಂದರೆ, "ಓ ನನ್ನ ಅಲ್ಲಾಹ್, ನನ್ನ ಹೃದಯದಲ್ಲಿ ನಿನ್ನ ಪ್ರಕಾಶವನ್ನು ತುಂಬಿಸು. ನನ್ನ ಕಣ್ಣುಗಳಲ್ಲೂ ನಿನ್ನ ಪ್ರಕಾಶವನ್ನು ತುಂಬಿಸು. ನನ್ನ ಕಿವಿಗಳಲ್ಲೂ ನಿನ್ನ ಪ್ರಕಾಶವನ್ನು ತುಂಬಿಸು. ನನ್ನ ಬಲಭಾಗದಲ್ಲಿ ನಿನ್ನ ಪ್ರಕಾಶ ಇರಲಿ. ನನ್ನ ಎಡಭಾಗದಲ್ಲೂ ನಿನ್ನ ಪ್ರಕಾಶ ಇರಲಿ. ನನ್ನ ಮೇಲ್ಭಾಗದಲ್ಲಿ ನಿನ್ನ ಪ್ರಕಾಶವಿರಲಿ. ನನ್ನ ಕೆಳಗೆ ಸಹ ನಿನ್ನ ಪ್ರಕಾಶವಿರಲಿ. ನನ್ನ ಮುಂಭಾಗದಲ್ಲಿ ನಿನ್ನ ಪ್ರಕಾಶವಿರಲಿ. ನನ್ನ ಹಿಂಭಾಗಲ್ಲೂ ನಿನ್ನ ಪ್ರಕಾಶವಿರಲಿ. ಓ ನನ್ನ ದೇವಾ, ನನ್ನ ಅಸ್ತಿತ್ವವನ್ನೇ ನಿನ್ನ ಪ್ರಕಾಶದಿಂದ ತುಂಬಿಸು."

ಹಝ್ರತ್ ಇಬ್ನು ಅಬ್ಬಾಸ್(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಮೃತರಾಗುವುದಕ್ಕೆ ಸ್ವಲ್ಪ ಕಾಲ ಮೊದಲು ಮುಸೈಲಿಮ ಎಂಬ ಮಿಥ್ಯ ಪ್ರವಾದಿ ಮದೀನಕ್ಕೆ ಬಂದು ಹೀಗೆ ಹೇಳಿದನು: "ಹಝ್ರತ್ ಪೈಗಂಬರರು



ತನ್ನ ನಿಧನದ ನಂತರ ನನ್ನನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸುವುದಾದರೆ ನಾನು ಅವರ ಅನುಯಾಯಿಯಾಗಲು ಸಿದ್ಧನಾಗಿದ್ದೇನೆ." ಆಗ ಅವನ ಜೊತೆಗೆ ಅವನ ಹಿಂಬಾಲಕರ ಬಹಳ ದೊಡ್ಡ ಒಂದು ಗುಂಪು ಇತ್ತು. ಅವನು ಯಾವ ಗೋತ್ರದವನಾಗಿದ್ದನೋ ಆ ಗೋತ್ರ ಅರಬ್ ದೇಶದಲ್ಲಿ ಇತರ ಎಲ್ಲಾ ಗೋತ್ರಗಳಿಗಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿತ್ತು.

ಮುಸೈಲಿಮ ಮದೀನಕ್ಕೆ ಆಗಮಿಸಿದ ಸಮಾಚಾರವನ್ನು ತಿಳಿದು ಹಝ್ರತ್ ಪೈಗಂಬರ್(ಸ) ಅವನನ್ನು ಕಾಣಲು ಹೋದರು. ಸಾಬಿತ್ ಬಿನ್ ಖೈಸ್ ಬಿನ್ ಶಮಾಸ್ ಅವರ ಜೊತೆಗಿದ್ದರು. ಹಝ್ರತ್ ಪೈಗಂಬರರ(ಸ) ಕೈಯಲ್ಲಿ ಖರ್ಜೂರ ಮರದ ಒಂದು ಸೋಗೆ ಇತ್ತು. ಅವರು ಮುಸೈಲಿಮ ಮತ್ತು ಅವನ ಹಿಂಬಾಲಕರ ಗುಂಪಿನ ಮುಂದೆ ನಿಂತರು. ಅಷ್ಟರೊಳಗೆ ಹಝ್ರತ್ ಪೈಗಂಬರರ(ಸ) ಅನೇಕ ಶಿಷ್ಯರು ಸಹ ಅಲ್ಲಿಗೆ ಬಂದು ಅವರ ಸಮೀಪ ನಿಂತುಕೊಂಡರು.

ಹಝ್ರತ್ ಪೈಗಂಬರ್(ಸ) ಮುಸೈಲಿಮನನ್ನು ಸಂಬೋಧಿಸಿ ಹೀಗೆಂದರು: ಮುಹಮ್ಮದ್ ತನ್ನ ನಿಧನದ ನಂತರ ನನ್ನನ್ನು ತನ್ನ ಉತ್ತರಾಧಿಕಾರಿಯನ್ನಾಗಿ (ಖಲೀಫ ಆಗಿ) ನೇಮಿಸುವುದಾದರೆ ನಾನು ಅವರ ಹಿಂಬಾಲಕನಾಗಲು ಸಿದ್ಧನಾಗಿರುವೆನು ಎಂದು ನೀವು ಹೇಳಿದ್ದೀರಿ. ಆದರೆ ನಾನು ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ಈ ಸೋಗೆಯನ್ನಾಗಲಿ ನಿಮಗೆ ಕೊಡಲು ಸಿದ್ಧನಾಗಲಾರೆನು. ಅಲ್ಲಾಹನು ನಿಮಗೆ ಯಾವ ಅಂತಿಮ ಗತಿಯನ್ನು ನಿರ್ಧರಿಸಿರುವನೋ ಅದನ್ನೇ ನೀವು ಹೊಂದುವಿರಿ. ನೀವು ಸತ್ಯದ ಕಡೆಗೆ ಬೆನ್ನು ತಿರುಗಿಸಿ ಮರಳಿ ಹೋಗುವುದಾದರೆ ಅಲ್ಲಾಹನು ನಿಮ್ಮ ಕಾಲುಗಳನ್ನು ಕಡಿದುಹಾಕುವನು. ಅಲ್ಲಾಹನು ನಿಮ್ಮ ಬಗ್ಗೆ ನನಗೆ ಏನನ್ನು ತೋರಿಸಿಕೊಟ್ಟಿರುವನೋ ಅದೇ ನಿಮಗೆ ಸಂಭವಿಸುವುದು.

ಅನಂತರ ಹಝ್ರತ್ ಪೈಗಂಬರ್(ಸ) ಕೊನೆಯದಾಗಿ ಹೇಳಿದರು: "ನಾನು ಇಲ್ಲಿಂದ ಹೋಗುತ್ತೇನೆ. ನನ್ನೊಂದಿಗೆ ನಿಮಗೆ ಹೇಳಲಿಕ್ಕಿರುವುದನ್ನು ನನ್ನ ಪ್ರತಿನಿಧಿಯಾಗಿರುವ ಸಾಬಿತ್ ಬಿನ್ ಖೈಸ್ ಬಿನ್ ಶಮಾಸ್‌ರೊಡನೆ ಹೇಳಬಹುದು."

ಹೀಗೆ ಹೇಳಿ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟು ಹೋದರು. ಅವರ ಜೊತೆಗೆ ಹಝ್ರತ್ ಅಬೂ ಹುರೈರ(ರ) ಸಹ ಇದ್ದರು. ಮಾರ್ಗದಲ್ಲಿ ನಡೆದು ಹೋಗುತ್ತಿದ್ದಾಗ ಒಬ್ಬರು ಕೇಳಿದರು: "ಓ ಅಲ್ಲಾಹನ ಪೈಗಂಬರರೇ, ನೀವು ಮುಸೈಲಿಮನೊಂದಿಗೆ ಹೇಳಿದಿರಿ ಅಲ್ಲಾಹನು ನಿನ್ನ ಬಗ್ಗೆ ಏನನ್ನು ತೋರಿಸಿಕೊಟ್ಟಿರುವನೋ ಅದೇ ನಿನಗೆ ಸಂಭವಿಸುವುದೆಂದು. ಅದೇನೆಂದು ನಮಗೆ ವಿವರಿಸಿರಿ,"

ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಸ್ವಪ್ನದಲ್ಲಿ ನನ್ನ ಕೈಗಳಲ್ಲಿ ಎರಡು ಬಳೆಗಳಿರುವುದಾಗಿ ಕಂಡೆನು. ನಾನು ಆ ಬಳೆಗಳನ್ನು ನೋಡಿ ನನ್ನ ಅಸಂತೃಪ್ತಿಯನ್ನು ಸೂಚಿಸಿದೆನು. ಆಗ ಸ್ವಪ್ನದಲ್ಲಿಯೇ ನನಗೆ ದೇವ ಸಂದೇಶವಾಣಿಯು ಲಭಿಸಿತು – ನಾನು ಆ ಬಳೆಗಳ ಮೇಲೆ ಊದಬೇಕೆಂದು. ನಾನು ಆ ಬಳೆಗಳ

ಮೇಲೆ ಊದಿದಾಗ ಅವೆರಡು ಬಳೆಗಳೂ ಹಾರಿಹೋದುವು. ನಾನು ಈ ಸ್ವಪ್ನವನ್ನು ಹೀಗೆ ವ್ಯಾಖ್ಯಾನಿಸಿದೆನು: ನನ್ನ ಅನಂತರ ಇಬ್ಬರು ಮಿಥ್ಯ ಪ್ರವಾದಿಗಳು ಪ್ರಕಟವಾಗುವರು." (ಬುಖಾರಿ)

ಅದು ಹಝ್ರತ್ ಪೈಗಂಬರರ(ಸ) ಜೀವಿತದ ಕೊನೆಯ ಕಾಲಘಟ್ಟವಾಗಿತ್ತು. ಅರಬ್ ದೇಶದ ಎಲ್ಲದಕ್ಕಿಂತಲೂ ದೊಡ್ಡದಾದ ಒಂದು ಗೋತ್ರ ಮಾತ್ರ ಅವರಿಗೆ ವಿಧೇಯವಾಗಿರಲಿಲ್ಲ. ಅದು ಈಗ ವಿಧೇಯತೆ ಪ್ರಕಟಿಸಲು ಸಿದ್ಧವಾಗಿತ್ತು. ಆದರೆ ಅವರ ಒಂದೇ ಒಂದು ಶರ್ತವಿತ್ತು. ಅವರ ಗೋತ್ರದ ನಾಯಕನನ್ನು ಹಝ್ರತ್ ಪೈಗಂಬರರ(ಸ) ನಿಧನದ ನಂತರ ಅವರ ಉತ್ತರಾಧಿಕಾರಿ (ಖಲೀಫ) ಆಗಿ ಮಾಡಬೇಕೆಂದು ಆ ಶರ್ತವಾಗಿತ್ತು. ಹಝ್ರತ್ ಪೈಗಂಬರರಿಗೆ(ಸ) ಸ್ವಂತ ಹಿರಿಮೆಯ ಅಥವಾ ಸ್ವಾರ್ಥದ ಚಿಂತೆ ಇದ್ದಿದ್ದರೆ, ಅವರಿಗೆ ಸ್ವಂತ ಪುತ್ರ ಸಂತಾನವಿರದ ಕಾರಣ ಅರಬ್ ದೇಶದ ದೊಡ್ಡ ಗೋತ್ರದ ನಾಯಕನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಲು ತನ್ನ ಇಚ್ಛೆ ಸೂಚಿಸುತ್ತಿದ್ದರು ಮತ್ತು ಆಗ ಅರಬ್ ದೇಶದ ಎಲ್ಲಾ ಗೋತ್ರಗಳ ಐಕ್ಯದ ಮಾರ್ಗವನ್ನು ತೆರೆದುಕೊಟ್ಟಂತೆ ಆಗುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಚಿಕ್ಕದಲ್ಲಿ ಚಿಕ್ಕದಾದ ವಸ್ತುವನ್ನಾದರೂ ತನ್ನ ಸ್ವಂತ ಸೊತ್ತು ಎಂದು ಭಾವಿಸುತ್ತಿರಲಿಲ್ಲ. ಇಸ್ಲಾಮೀ ಆಡಳಿತ ವ್ಯವಸ್ಥೆಯ ನಾಯಕತ್ವವು ತನ್ನದೆಂದು ಅವರು ಹೇಗೆ ತಾನೆ ಭಾವಿಸಲು ಸಾಧ್ಯ? ಅವರ ದೃಷ್ಟಿಯಲ್ಲಿ ಇಸ್ಲಾಮೀ ಆಡಳಿತೆಯ ನಾಯಕತ್ವವು ಅಲ್ಲಾಹನು ಅವರಿಗೆ ವಹಿಸಿಕೊಟ್ಟ ಒಂದು ವಿಶ್ವಸ್ತ ನಿಧಿಯಾಗಿತ್ತು. ಆ ವಿಶ್ವಸ್ತ ನಿದಿಯನ್ನು ಯಾವುದೇ ಕುಂದುಕೊರತೆ ಇಲ್ಲದೆ ಅಲ್ಲಾಹನಿಗೆಯೇ ಮರಳಿ ಕೊಡಬೇಕಾಗಿತ್ತು. ಅನಂತರ ಅಲ್ಲಾಹನು ತಾನು ಇಚ್ಛಿಸುವವರಿಗೆ ಅದನ್ನು ಪುನಃ ಕೊಡುವನು ಎಂದು ಹಝ್ರತ್ ಪೈಗಂಬರ್(ಸ) ಗಣಿಸಿದ್ದರು. ಆದುದರಿಂದ ಮುಸೈಲಿಮನ ಪ್ರಸ್ತಾವನೆಯನ್ನು ಹಝ್ರತ್ ಪೈಗಂಬರ್(ಸ) ಅತೃಪ್ತಿ ಸೂಚಿಸುತ್ತಾ ತಿರಸ್ಕರಿಸಿದರು. ಅವರು ಹೀಗೆ ಹೇಳಿದರು: ದೇಶದ ಆಡಳಿತಾಧಿಕಾರದ ವಿಷಯ ಬಿಡಿ, ಖರ್ಜೂರದ ಈ ಒಂದು ಸೋಗೆಯನ್ನು ಕೂಡ ಅಲ್ಲಾಹನ ಆಜ್ಞೆ ಪಡೆಯದೆ ನಾನು ನಿಮಗೆ ಕೊಡಲು ಸಿದ್ಧನಾಗಿಲ್ಲ.

ಹಝ್ರತ್ ಪೈಗಂಬರ್(ಸ) ಅಲ್ಲಾಹನ ಕುರಿತು ಮಾತನಾಡುವಾಗ ಅತ್ಯಂತ ಉತ್ಸಾಹ ಭರಿತರಾಗುತ್ತಿದ್ದರು. ಅವರ ದೇಹವನ್ನು ಒಳಗಿನಿಂದಲೂ ಹೊರಗಿನಿಂದಲೂ ಅಲ್ಲಾಹನ ಬಗ್ಗೆ ಪ್ರೇಮವು ಸ್ವಾಧೀನಪಡಿಸಿಕೊಂಡಿದೆ ಎಂಬಂತೆ ಭಾಸವಾಗುತ್ತಿತ್ತು. ಅವರಿಗೆ ಅಲ್ಲಾಹನ ಆರಾಧನೆಯಲ್ಲಿ ಸರಳತೆಯು ಬಹಳ ಇಷ್ಟಕರವಾಗಿತ್ತು. ನೆಲದಲ್ಲಿ ಚಾಪೆ ಅಥವಾ ಹಾಸುಬಟ್ಟೆ ಇಲ್ಲದೆ ಮಸ್‌ಜಿದ್‌ನಲ್ಲಿ ಅವರು ನಮಾಝ್ ಮಾಡುತ್ತಿದ್ದರು ಮತ್ತು ನಮಾಝಿಗೆ ನೇತೃತ್ವವಹಿಸುತ್ತಿದ್ದರು. ಹಲವು ಸಾರಿ ಮಳೆಯ ಕಾರಣದಿಂದ ಮಸ್‌ಜಿದಿನ ಛಾವಣಿಯಿಂದ ನೀರು ತೊಟ್ಟಿಕ್ಕುತ್ತಿತ್ತು ಮತ್ತು ಹಝ್ರತ್ ಪೈಗಂಬರರ ಶರೀರ ಛಾವಣಿಗೆ ಹಾಕಿದ ಗಾರೆ ಮತ್ತು ಮಳೆ ನೀರಿನಿಂದ ತೊಯ್ದು ಹೋಗುತ್ತಿತ್ತು, ಇಂತಹ ಸ್ಥಿತಿಯಲ್ಲೂ ಹಝ್ರತ್ ಪೈಗಂಬರ್(ಸ) ನಮಾಝ್‌ನಲ್ಲಿ



ಮಗ್ನರಾಗುತ್ತಿದ್ದರು. ಅವರು ತಮ್ಮ ಶರೀರ ಮತ್ತು ಬಟ್ಟೆಗಳನ್ನು ಸಂರಕ್ಷಿಸಲು ನಮಾಝನ್ನು ಆಗ ಸ್ಥಗಿತಗೊಳಿಸಿ ಬೇರೆ ಸ್ಥಳಕ್ಕೆ ಹೋಗಿ ನಮಾಝ್ ಮಾಡುವ ಬಗ್ಗೆ ಅವರ ಹೃದಯದಲ್ಲಿ ಅಲ್ಪ ಮಾತ್ರವಾದರೂ ಯೋಚನೆ ಉಂಟಾಗುತ್ತಿರಲಿಲ್ಲ. (ಬುಖಾರಿ)

ಅವರು ತಮ್ಮ ಶಿಷ್ಯರು ಮಾಡುತ್ತಿದ್ದ ಆರಾಧನೆಗಳ ಬಗ್ಗೆ ಸಹ ಲಕ್ಷ್ಯ ಕೊಡುತ್ತಿದ್ದರು. ಅತ್ಯಂತ ಸುಸ್ವಭಾವಿಯೂ ಪರಿಶುದ್ಧರೂ ಆಗಿದ್ದ ಹಝ್ರತ್ ಅಬ್ದುಲ್ಲಾ ಬಿನ್ ಉಮರ್ ಕುರಿತು ಅವರು ಹೀಗೆಂದರು: ಅಬ್ದುಲ್ಲಾ ಬಿನ್ ಉಮರ್ ತಹಜ್ಜುದ್ (ಮಧ್ಯ ರಾತ್ರಿಯ ನಂತರ ಮಾಡುವ ನಮಾಝ್) ನಿತ್ಯವೂ ಅನುಷ್ಠಿಸುತ್ತಾ ಇದ್ದರೆ ಎಷ್ಟು ಉತ್ತಮ ಮನುಷ್ಯರಾಗುತ್ತಿದ್ದರು! (ಮುಸ್ಲಿಮ್)

ಹಝ್ರತ್ ಅಬ್ದುಲ್ಲಾ ಬಿನ್ ಉಮರರಿಗೆ ಹಝ್ರತ್ ಪೈಗಂಬರ್(ಸ) ಹೇಳಿದ ಮಾತುಗಳ ವಿಷಯ ತಿಳಿದಾಗ ಅವರು ನಿತ್ಯವೂ ತಹಜ್ಜುದ್ ನಮಾಝ್ ಅನುಷ್ಠಿಸಲು ಆರಂಭಿಸಿದರು.

ಒಂದು ದಿವಸ ರಾತ್ರಿ ಹಝ್ರತ್ ಪೈಗಂಬರ್(ಸ) ತನ್ನ ಮಗಳು ಹಝ್ರತ್ ಫಾತಿಮ(ರ) ಮತ್ತು ಅಳಿಯ ಹಝ್ರತ್ ಅಲಿ(ರ) ವಾಸಿಸುತ್ತಿದ್ದ ಮನೆಗೆ ಹೋದಾಗ ಕೇಳಿದರು: "ನೀವು ತಹಜ್ಜುದ್ ನಮಾಝ್ ಅನುಷ್ಠಿಸುತ್ತಾ ಇರುತ್ತೀರೋ?" ಆಗ ಹಝ್ರತ್ ಅಲಿ ಹೇಳಿದರು: "ನಾವು ತಹಜ್ಜುದ್ ನಮಾಝ್ ಅನುಷ್ಠಿಸಲು ಪ್ರಯತ್ನ ಮಾಡುತ್ತೇವೆ. ಆದರೆ ಅಲ್ಲಾಹನ ಇಚ್ಚೆ ಪ್ರಕಾರ ಯಾವಾಗಲಾದರೂ ನಮ್ಮ ಕಣ್ಣು ಮುಚ್ಚಿಕೊಂಡಿದ್ದರೆ ತಹಜ್ಜುದ್ ನಮಾಝ್ ಮಾಡಲಾಗುವುದಿಲ್ಲ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ತಹಜ್ಜುದ್ ನಮಾಝ್ ಅನುಷ್ಠಿಸುತ್ತಾ ಇರಬೇಕು."

ಅನಂತರ ಹಝ್ರತ್ ಪೈಗಂಬರ್(ಸ) ಅಲ್ಲಿಂದ ಹೊರಟು ತನ್ನ ಮನೆಯ ಕಡೆಗೆ ನಡೆಯುತ್ತಾ ಇದ್ದಾಗ ಪದೇ ಪದೇ ಹೀಗೆ ಹೇಳುತ್ತಿದ್ದರು: 'ವ ಕಾನಲ್ ಇನ್‌ಸಾನ ಅಕ್‌ಸರ ಶೈಯಿನ್ ಜದಲ' (ಬುಖಾರಿ). ಇದು ಪವಿತ್ರ ಖುರ್‌ಆನಿನ ಒಂದು ವಚನವಾಗಿದೆ. ಇದರ ಭಾವಾರ್ಥ ಹಿಗಿದೆ: ಮನುಷ್ಯನು ತನ್ನ ತಪ್ಪನ್ನು ಒಪ್ಪಿಕೊಳ್ಳುವ ಬಗ್ಗೆ ಗಾಬರಿಗೊಳ್ಳುತ್ತಾನೆ. ಅವನು ವಿವಿಧ ಕಾರಣಗಳನ್ನು ನೀಡಿ ತನ್ನ ತಪ್ಪಿನ ಮೇಲೆ ಪರದೆ ಹಾಕಲು ಯತ್ನಿಸುತ್ತಾನೆ.

ಹಝ್ರತ್ ಪೈಗಂಬರ್(ಸ) ಉದ್ದೇಶಿಸಿದುದು ಹೀಗೆ: ಹಝ್ರತ್ ಆಲಿ ಮತ್ತು ಹಝ್ರತ್ ಫಾತಿಮ "ನಮ್ಮಿಂದ ಕೆಲವು ಸಾರಿ ತಪ್ಪಾಗುತ್ತದೆ" ಎಂದು ಹೇಳುವುದಕ್ಕೆ ಬದಲಾಗಿ "ನಾವು ಏಳಬಾರದೆಂದು ಅಲ್ಲಾಹನು ಇಷ್ಟಪಡುವಾಗ ನಾವು ಎದ್ದೇಳದೆ ನಿದ್ರಿಸುತ್ತೇವೆ" ಎಂದು ಹೇಳಿ ತಮ್ಮ ತಪ್ಪನ್ನು ಅಲ್ಲಾಹನ ಮೇಲೆ ಹೊರಿಸಿದುದು ಸರಿಯಲ್ಲ.

ಹಝ್ರತ್ ಪೈಗಂಬರರಿಗೆ ಅಲ್ಲಾಹನ ಬಗ್ಗೆ ಅತ್ಯಧಿಕ ಪ್ರೇಮವಿದ್ದರೂ

ಅವರು ಆಡಂಬರದ ಪ್ರಾರ್ಥನಾ ವಿಧಿಗಳನ್ನು ಮತ್ತು ದೇಹ ದಂಡನೆಯನ್ನು ಕಠಿಣವಾಗಿ ಅಸಹ್ಯಪಡುತ್ತಿದ್ದರು.

ಮನುಷ್ಯನೊಳಗೆ ಅಲ್ಲಾಹನು ಇರಿಸಿರುವ ಶಕ್ತಿ ಸಾಮರ್ಥ್ಯಗಳ ಸದ್ವಿನಿಯೋಗವೇ ನಿಜವಾದ ಆರಾಧನೆ ಎಂಬ ತತ್ವವನ್ನು ಹಝ್ರತ್ ಪೈಗಂಬರ್(ಸ) ಪ್ರತಿಪಾದಿಸಿದರು. ಕಣ್ಣುಗಳಿರುವಾಗ ಅವುಗಳನ್ನು ಮುಚ್ಚಿ ಆರಾಧಿಸುವುದು ಅಥವಾ ಅಲ್ಲಾಹನ ಪ್ರೀತಿಯನ್ನು ಬಯಸಿ ಕಣ್ಣುಗಳನ್ನು ಕೀಳುವುದು ಆರಾಧನೆ ಆಗಲಾರದು. ಹಾಗೆ ಮಾಡುವುದು ದೇವ ನಿಂದೆಯಾಗಿದೆ. ಆದರೆ ಕಣ್ಣುಗಳನ್ನು ದುರುಪಯೋಗಪಡಿಸುವುದು ಪಾಪಕರವಾಗಿದೆ. ಕಿವಿಗಳ ಶ್ರವಣ ಶಕ್ತಿಯನ್ನು ಯಾವುದಾದರೂ ಶಸ್ತ್ರ ಕ್ರಿಯೆ ಮೂಲಕ ನಾಶಪಡಿಸುವುದು ದೇವ ನಿಂದೆಯಾಗಿದೆ. ಆದರೆ ಅದೇ ಕಿವಿಯ ಮೂಲಕ ಜನರ ಬಗ್ಗೆ ಅಪವಾದಗಳನ್ನೂ ಚಾಡಿ ಮಾತುಗಳನ್ನೂ ಕೇಳುವುದು ಪಾಪಕರವಾಗಿದೆ. ಆಹಾರವನ್ನು ಭಕ್ಷಿಸದೆ ಇರುವುದು ಆತ್ಮಹತ್ಯೆಯೂ ದೇವ ನಿಂದೆಯೂ ಆಗಿದೆ. ಆದರೆ ತಿನ್ನುವುದರಲ್ಲಿಯೂ ಕುಡಿಯುವುದರಲ್ಲಿಯೂ ಮಗ್ನನಾಗುವುದು ಮತ್ತು ನಿಷಿದ್ಧವೂ ಅಯೋಗ್ಯವೂ ಆಗಿರುವ ಪದಾರ್ಥಗಳನ್ನು ತಿನ್ನುವುದು ಪಾಪಕರವಾಗಿದೆ.

ಇದು ಹಝ್ರತ್ ಪೈಗಂಬರ್(ಸ) ಲೋಕದ ಮುಂದಿರಿಸಿದ ಬಹಳ ಮಹತ್ವಪೂರ್ಣವಾದ ತತ್ವವಾಗಿದೆ. ಈ ತತ್ವವನ್ನು ಅವರಿಗಿಂತ ಮೊದಲು ಆಗಮಿಸಿದ ಯಾವ ಪ್ರವಾದಿಯೂ ಲೋಕದ ಮುಂದಿರಿಸಲಿಲ್ಲ. ಮನುಷ್ಯನ ಸಹಜ ಶಕ್ತಿಗಳ ಸರಿಯಾದ ಉಪಯೋಗವೇ ಸತ್ಕರ್ಮವಾಗಿದೆ. ಮನುಷ್ಯನ ಸಹಜ ಶಾರೀರಿಕ ಶಕ್ತಿಗಳನ್ನು ನಾಶಪಡಿಸುವುದು ಮೌಢ್ಯವಾಗಿದೆ. ಅವುಗಳನ್ನು ನಿಷಿದ್ಧ ಕೆಲಸಗಳಿಗೆ ಬಳಸುವುದು ದುಷ್ಕರ್ಮವಾಗಿದೆ. ಅವುಗಳನ್ನು ಸರಿಯಾಗಿ ಉಪಯೋಗಿಸುವುದೇ ಪುಣ್ಯದಾಯಕವಾಗಿದೆ. ಇದು ಹಝ್ರತ್ ಪೈಗಂಬರರ ಉಪದೇಶಗಳ ಸಾರಾಂಶವಾಗಿದೆ. ಇದು ಅವರ ಜೀವಿತದ ಮತ್ತು ಅವರ ನಡವಳಿಕೆಗಳ ಸಾರಾಂಶವೂ ಆಗಿದೆ. ಹಝ್ರತ್ ಪೈಗಂಬರರ ಕುರಿತು ಹಝ್ರತ್ ಆಯಿಶಾ ಹೀಗೆ ಹೇಳಿರುತ್ತಾರೆ:

"ಹಝ್ರತ್ ಪೈಗಂಬರರ(ಸ) ಜೀವಿತದಲ್ಲಿ ಅವರ ಮುಂದೆ ಎರಡು ಮಾರ್ಗಗಳು ತೆರೆದಿದ್ದಾಗ ಅವರು ಆ ಮಾರ್ಗಗಳಲ್ಲಿ ಸುಲಭವಾದ ಮಾರ್ಗವನ್ನು ಆಯ್ಕೆ ಮಾಡದೆ ಇದ್ದ ಸಂದರ್ಭ ಎಂದೂ ಇರಲಿಲ್ಲ. ಆದರೆ ಸುಲಭದ ಮಾರ್ಗವನ್ನು ಅವಲಂಬಿಸುವಾಗ ಪಾಪ ದೋಷವು ಸ್ವಲ್ಪ ಮಾತ್ರವೂ ಇಲ್ಲದಾಗ ಮಾತ್ರ ಅವರು ಸುಲಭದ ಮಾರ್ಗವನ್ನು ಅವಲಂಬಿಸುತ್ತಿದ್ದರು. ಆದರೆ ಒಂದು ಮಾರ್ಗವನ್ನು ಅವಲಂಬಿಸುವುದರಿಂದ ಒಂದಿನಿತು ಪಾಪ ದೋಷವು ಸಂಭಾವ್ಯವಾಗಿದ್ದರೆ ಅವರು ಆ ಮಾರ್ಗದಿಂದ ಎಲ್ಲಾ ಜನರಿಗಿಂತಲೂ ಹೆಚ್ಚು ದೂರ ಓಡಿ ದೂರ ಸರಿಯುತ್ತಿದ್ದರು." (ಮುಸ್ಲಿಮ್)

ಇದೆಷ್ಟು ಸೂಕ್ಷ್ಮ ಮತ್ತು ಶ್ರೇಷ್ಠ ನಡವಳಿಕೆಯಾಗಿದೆ! ಜನರನ್ನು ವಂಚಿಸಲು ಕೆಲವರು ತಮ್ಮ ಶರೀರಗಳನ್ನು ನಿಷ್ಕಾರಣವಾಗಿ ಕಷ್ಟಗಳಿಗೆ ಮತ್ತು ಯಾತನೆಗೆ



ಗುರಿಪಡಿಸುತ್ತಾರೆ. ಅವರು ತಮ್ಮ ದೇಹಗಳನ್ನು ಕಷ್ಟಗಳಿಗೂ ಯಾತನೆಗಳಿಗೂ ಗುರಿಪಡಿಸುವುದು ಅಲ್ಲಾಹನ ತೃಪ್ತಿಗಳಿಸಲಿಕ್ಕಾಗಿರುವುದಿಲ್ಲ, ಏಕೆಂದರೆ ಅಲ್ಲಾಹನಿಗೋಸ್ಕರ ಯಾವುದೇ ನಿಷ್ಪ್ರಯೋಜಕ ಕೆಲಸ ಮಾಡಬೇಕಾಗಿಲ್ಲ. ಕೆಲವರು ತಮ್ಮ ಶರೀರಗಳನ್ನೇ ಕಷ್ಟಗಳಿಗೂ ಯಾತನೆಗಳಿಗೂ ಗುರಿಪಡಿಸುವುದು ಜನರಿಗೆ ವಂಚನೆ ಮಾಡಲಿಕ್ಕೋಸ್ಕರವಾಗಿರುತ್ತದೆ. ಅಂತಹ ಜನರ ಸತ್ಯವಾದ ಒಳಿತುಗಳು ಬಹಳ ಕಡಿಮೆ ಇರುವುದರಿಂದ ಅವರು ಸುಳ್ಳು ಒಳಿತುಗಳಿಂದ ಜನರನ್ನು ಪ್ರಭಾವಿತರನ್ನಾಗಿ ಮಾಡಲು ಬಯಸುತ್ತಾರೆ. ಅವರು ತಮ್ಮ ನ್ಯೂನತೆಗಳನ್ನು ಮರೆ ಮಾಡಲು ಜನರ ಕಣ್ಣಿಗೆ ಮಂಕುಬೂದಿ ಎರಚಲು ಪ್ರಯತ್ನಿಸುತ್ತಾರೆ.

ಹಝ್ರತ್ ಪೈಗಂಬರರ(ಸ) ಜೀವಿತೋದ್ದೇಶ ಅಲ್ಲಾಹನ ತೃಪ್ತಿಯನ್ನು ಗಳಿಸುವುದಾಗಿತ್ತು. ಅವರು ನೈಜ ಒಳಿತುಗಳನ್ನು ಸಂಪಾದಿಸಲು ಬಯಸುತ್ತಿದ್ದರು. ಅವರಿಗೆ ಇಂತಹ ಕೃತ್ರಿಮ ಮತ್ತು ಮಿಥ್ಯ ಸತ್ಕಾರ್ಯಗಳ ಆವಶ್ಯಕತೆ ಇರಲಿಲ್ಲ. ಲೋಕದ ಜನರು ಹಝ್ರತ್ ಪೈಗಂಬರರನ್ನು ಒಳ್ಳೆಯವರೆಂದು ಪರಿಗಣಿಸಿದರೂ ಒಳ್ಳೆಯವರಲ್ಲವೆಂದು ಪರಿಗಣಿಸಿದರೂ ಅವರಿಗೆ ಅದು ಸಮವಾಗಿತ್ತು. ನನ್ನ ದೇವನು ನನ್ನ ಬಗ್ಗೆ ಹೇಗೆ ಗ್ರಹಿಸಿರುವನು. ನನ್ನ ಸ್ವಂತ ಮನಸ್ಸಾಕ್ಷಿ ನನ್ನನ್ನು ಹೇಗೆ ಕಾಣುತ್ತಿದೆ ಎಂದು ಮಾತ್ರ ಅವರು ನೋಡುತ್ತಿದ್ದರು. ಅಲ್ಲಾಹನು ಮತ್ತು ಅವರ ಮನಸ್ಸಾಕ್ಷಿ ಸಾಕ್ಷ್ಯ ನೀಡಿದ ನಂತರ ಜನರು ಸಹ ಸತ್ಯವಾದ ಸಾಕ್ಷ್ಯ ನೀಡಿದರೆ ಅವರು ಅವರಿಗೆ ಕೃತಜ್ಞರಾಗುತ್ತಿದ್ದರು. ಜನರು ವಕ್ರ ದೃಷ್ಟಿಯಿಂದ ನೋಡುತ್ತಾ ಇದ್ದರೆ ಹಝ್ರತ್ ಪೈಗಂಬರ್(ಸ) ಅವರ ದೃಷ್ಟಿದೋಷದ ಬಗ್ಗೆ ಖೇದ ಸೂಚಿಸುತ್ತಿದ್ದರು. ಆದರೆ ಅವರ ಅಭಿಪ್ರಾಯಗಳಿಗೆ ಯಾವುದೇ ಲಕ್ಷ್ಯ ನೀಡುತ್ತಿರಲಿಲ್ಲ.

## ಹಝ್ರತ್ ಪೈಗಂಬರ್(ಸ) ಸ್ವಜನರೊಂದಿಗೆ ವರ್ತಿಸುತ್ತಿದ್ದ ರೀತಿ

ಹಝ್ರತ್ ಪೈಗಂಬರ್(ಸ) ತಮ್ಮ ಪತ್ನಿಯರೊಂದಿಗೆ ಅತ್ಯಂತ ವಾತ್ಸಲ್ಯದಿಂದಲೂ ಸಮಭಾವನೆಯಿಂದಲೂ ವರ್ತಿಸುತ್ತಿದ್ದರು. ಕೆಲವು ಸಾರಿ ಹಝ್ರತ್ ಪೈಗಂಬರರ ಪತ್ನಿಯರು ಅವರೊಂದಿಗೆ ಕಟುವಾಗಿ ವರ್ತಿಸಿದರೂ ಅವರು ಮೌನವಾಗಿದ್ದು ಆ ವಿಷಯವನ್ನು ನಗುತ್ತಾ ನಿರ್ಲಕ್ಷಿಸುತ್ತಿದ್ದರು. ಒಂದು ದಿನ ಹಝ್ರತ್ ಪೈಗಂಬರ್(ಸ) ತನ್ನ ಪತ್ನಿ ಹಝ್ರತ್ ಆಯಿಶಾರೊಂದಿಗೆ ಹೇಳಿದರು: "ನೀನು ನನ್ನ ಮೇಲೆ ಕೋಪಗೊಂಡರೆ ಅದು ನನಗೆ ತಿಳಿಯುತ್ತದೆ." ಆಗ ಹಝ್ರತ್ ಆಯಿಶಾ ಕೇಳಿದರು: "ನಿಮಗೆ ಅದು ಹೇಗೆ ತಿಳಿಯುತ್ತದೆ?"

ಹಝ್ರತ್ ಪೈಗಂಬರ್(ಸ) ಹೇಳಿದರು: "ನೀನು ನನ್ನ ಮೇಲೆ ಕೋಪಗೊಳ್ಳದೆ ಸಂತೋಷದಲ್ಲಿರುವಾಗ ಯಾವುದಾದರೂ ವಿಷಯದ ಬಗ್ಗೆ ಪ್ರಮಾಣ ಮಾಡುವಾಗ ನೀನು ಯಾವಾಗಲೂ 'ಮುಹಮ್ಮದರ ಪ್ರಭುವಿನಾಣೆ ವಿಷಯ ಹೀಗೆ ಇದೆ' ಎಂದು ಹೇಳುತ್ತಿರುವೆ. ನೀನು ನನ್ನೊಂದಿಗೆ ಕೋಪಗೊಂಡಾಗ ಯಾವುದಾದರೂ ವಿಷಯದ ಬಗ್ಗೆ ಪ್ರಮಾಣ ಮಾಡುವ ಆವಶ್ಯಕತೆ ಉಂಟಾದರೆ ನೀನು 'ಇಬ್ರಾಹೀಮರ ಪ್ರಭುವಿನಾಣೆ ವಿಷಯ ಹೀಗೆ ಇದೆ' ಎಂದು ಹೇಳುತ್ತಿರುವೆ."

ಹಝ್ರತ್ ಆಯಿಶಾ(ರ) ಹಝ್ರತ್ ಪೈಗಂಬರರ ಮಾತುಗಳನ್ನು ಆಲಿಸಿ ನಗುತ್ತಾ ಅವರ ಮಾತುಗಳನ್ನು ದೃಢೀಕರಿಸುತ್ತಾ, "ನೀವು ವಿಷಯವನ್ನು ಸರಿಯಾಗಿ ಮನವರಿಕೆ ಮಾಡುತ್ತಿರುವಿರಿ." ಎಂದು ಹೇಳಿದರು. (ಬುಖಾರಿ)

ಹಝ್ರತ್ ಖದೀಜ(ರ) ಹಝ್ರತ್ ಪೈಗಂಬರರ ಪ್ರಥಮ ಪತ್ನಿಯಾಗಿದ್ದರು. ಅವರು ಹಝ್ರತ್ ಪೈಗಂಬರರಿಗೋಸ್ಕರ ಅನೇಕ ದೊಡ್ಡ ದೊಡ್ಡ ತ್ಯಾಗಗಳನ್ನು ಮಾಡಿದ್ದರು. ಹಝ್ರತ್ ಖದೀಜರು ನಿಧನ ಹೊಂದಿದ ನಂತರ ಹಝ್ರತ್ ಪೈಗಂಬರ್(ಸ) ತರುಣಿಯರನ್ನು ವಿವಾಹವಾಗಿದ್ದರು. ಹೀಗಿದ್ದರೂ ಹಝ್ರತ್ ಪೈಗಂಬರ್(ಸ) ತನ್ನ ಪ್ರಥಮ ಪತ್ನಿಯೊಂದಿಗೆ ಇದ್ದ ಸಂಬಂಧವನ್ನು ಎಂದೂ ಮರೆತುಬಿಡಲಿಲ್ಲ. ಅವರು ಹಝ್ರತ್ ಖದೀಜರ ಸ್ನೇಹಿತೆಯರೂ ಬಂಧುಗಳೂ ಬಂದಾಗ ಅವರನ್ನು ಸ್ವಾಗತಿಸಲು ಎದ್ದು ನಿಲ್ಲುತ್ತಿದ್ದರು. (ಮುಸ್ಲಿಮ್)

ಹಝ್ರತ್ ಖದೀಜರಿಗೆ ಸಂಬಂಧಿಸಿದ ಯಾವುದಾದರೂ ವಸ್ತುವನ್ನು ಹಝ್ರತ್ ಪೈಗಂಬರರ ಮುಂದೆ ತಂದಾಗ ಅವರ ಕಣ್ಣುಗಳು ಕಣ್ಣೀರಿನಿಂದ ತುಂಬುತ್ತಿದ್ದವು.

ಬದ್ರ್ ಯುದ್ಧದಲ್ಲಿ ಹಝ್ರತ್ ಪೈಗಂಬರರ ಒಬ್ಬ ಅಳಿಯ ಸಹ ಯುದ್ಧ ಕೈದಿಯಾಗಿದ್ದರು. ತನ್ನ ಬಿಡುಗಡೆಗೋಸ್ಕರ ಪರಿಹಾರ ನೀಡಲು ಅವರ ಕೈಯಲ್ಲಿ ಹಣವಿರಲಿಲ್ಲ. ಆಗ ಆ ಕೈದಿಯ ಪತ್ನಿ ಎಂದರೆ ಹಝ್ರತ್ ಪೈಗಂಬರರ ಮಗಳು ತನ್ನ ಪತಿಯ ಬಿಡುಗಡೆಗೆ ಪರಿಹಾರ ಕೊಡಲು ಹಣವಿಲ್ಲವೆಂದು ತಿಳಿದುಕೊಂಡಾಗ ತನ್ನ ತಾಯಿಯ ಕೊನೆಯ ಸ್ಮಾರಕವಾಗಿ ತನ್ನ ಬಳಿಯಲ್ಲಿದ್ದ ಹಾರವನ್ನು ತನ್ನ ಪತಿಗೆ ಪರಿಹಾರ ದ್ರವ್ಯವಾಗಿ ಕೊಡಲು ಮದೀನಕ್ಕೆ ಕಳುಹಿಸಿಕೊಟ್ಟರು. ಆ ಹಾರವನ್ನು ಹಝ್ರತ್ ಪೈಗಂಬರರ ಮುಂದೆ ತಂದಾಗ ಅದು ತನ್ನ ಪತ್ನಿ ಖದೀಜರದೆಂದು ಗುರುತಿಸಿದರು. ಅವರ ಕಣ್ಣುಗಳು ಅಶ್ರುಭರಿತವಾದುವು. ಅವರು ಶಿಷ್ಯರೊಂದಿಗೆ ಹೇಳಿದರು:

"ನಾನು ಈ ಬಗ್ಗೆ ನಿಮಗೆ ಆಜ್ಞೆಯನ್ನು ನೀಡುವುದಿಲ್ಲ. ಏಕೆಂದರೆ ಹಾಗೆ ಆಜ್ಞೆ ನೀಡುವುದು ನನಗೆ ಸಮಂಜಸವಾಗಿರುವುದಿಲ್ಲ. ಆದರೆ ಈ ಹಾರ ನನ್ನ ಮಗಳು ಝೈನಬಳಿಗೆ ಅವಳ ತಾಯಿಯಿಂದ ದೊರೆತ ಕೊನೆಯ ಸ್ಮರಣಿಕೆಯಾಗಿದೆ. ನೀವು ಸಂತೋಷದಿಂದ ಒಪ್ಪಿಕೊಳ್ಳುವುದಾದರೆ ನಾನು ನಿಮಗೆ ಶಿಫಾರಸ್ಸು ಮಾಡುತ್ತೇನೆ. ಮಗಳನ್ನು ಅವಳ ತಾಯಿಯ ಕೊನೆಯ ಸ್ಮರಣಿಕೆಯಿಂದ ವಂಚಿತಳನ್ನಾಗಿ ಮಾಡಬೇಡಿರಿ."

ಆಗ ಶಿಷ್ಯರು ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನಮಗೆ ಅದಕ್ಕಿಂತ ಹೆಚ್ಚು ಸಂತೋಷದಾಯಕವಾದುದು ಬೇರೆ ಏನಿದೆ?"

ಹಝ್ರತ್ ಪೈಗಂಬರ್(ಸ) ಆ ಹಾರವನ್ನು ತನ್ನ ಮಗಳು ಝೈನಬರಿಗೆ ಮರಳಿ ಕಳುಹಿಸಿದರು. (ಸೀರತ್ ಹಲ್‌ಬಿಯ್ಯ)



ಹಝ್ರತ್ ಪೈಗಂಬರ್(ಸ) ತನ್ನ ಪತ್ನಿ ಖದೀಜ ತನಗೋಸ್ಕರ ಮಾಡಿದ ತ್ಯಾಗಗಳಿಂದ ತುಂಬಾ ಪ್ರಭಾವಿತರಾಗಿದ್ದುದರಿಂದ ಅವರು ತನ್ನ ಪತ್ನಿಯರ ಮುಂದೆ ಅವರ ಸದ್ಗುಣಗಳನ್ನು ಹಲವಾರು ಸಾರಿ ಸ್ಮರಿಸುತ್ತಿದ್ದರು. ಒಮ್ಮೆ ಹಝ್ರತ್ ಆಯಿಶಾರ ಮುಂದೆ ಹಝ್ರತ್ ಪೈಗಂಬರರು ಹಝ್ರತ್ ಖದೀಜರ ಯಾವುದೋ ಸದ್ಗುಣವನ್ನು ವಿವರಿಸುತ್ತಿದ್ದಾಗ ಹಝ್ರತ್ ಆಯಿಶಾ ಸಿಡುಕಿನಿಂದ ಹೀಗೆಂದರು: "ಓ ಅಲ್ಲಾಹನ ಪೈಗಂಬರರೇ, ನೀವು ಆ ಮುದುಕಿಯನ್ನು ಸ್ಮರಿಸುವುದನ್ನು ಬಿಟ್ಟುಬಿಡಿರಿ. ಅಲ್ಲಾಹನು ಅವರಿಗಿಂತ ಯೌವ್ವನಸ್ಥೆಯರಾದ ಮತ್ತು ಸುಂದರಿಯರಾದ ಪತ್ನಿಯರನ್ನು ನಿಮಗೆ ನೀಡಿರುವನು." ಈ ಮಾತುಗಳನ್ನು ಆಲಿಸಿದಾಗ ಹಝ್ರತ್ ಪೈಗಂಬರರಿಗೆ ದುಃಖವು ಉಮ್ಮಳಿಸಿ ಬಂದಿತು. ಅವರು ಹೇಗೆಂದರು: "ಆಯಿಶಾ, ಖದೀಜ ನನ್ನ ಸೇವೆಯನ್ನು ಎಷ್ಟರ ಮಟ್ಟಿಗೆ ಮಾಡಿರುವರೆಂದು ನಿನಗೆ ತಿಳಿದಿಲ್ಲ." (ಬುಖಾರಿ)

## ಶ್ರೇಷ್ಠ ಸ್ವಭಾವ ಗುಣಗಳು

ಹಝ್ರತ್ ಪೈಗಂಬರರ(ಸ) ಪ್ರಕೃತಿ ಅತ್ಯಂತ ಸರಳವಾಗಿತ್ತು. ಅವರು ಯಾವುದಾದರೂ ದುಃಖದಿಂದ ಗಾಬರಿಗೊಳ್ಳುತ್ತಿರಲಿಲ್ಲ. ಅವರು ಯಾವುದೇ ಆಶೆಯಿಂದ ಮಿತಿಮೀರಿ ಪ್ರಭಾವಿತರಾಗುತ್ತಿರಲಿಲ್ಲ. ಅವರ ಪಿತ ಅವರು ಜನಿಸುವ ಮೊದಲೇ ಮೃತರಾಗಿದ್ದರೆಂದೂ ಅವರ ತಾಯಿ ಅವರ ಬಾಲ್ಯ ಕಾಲದಲ್ಲೇ ಮೃತರಾಗಿದ್ದರೆಂದೂ ಇದರ ಮೊದಲು ಬರೆಯಲಾಗಿದೆ. ಅವರು ತನ್ನ ಪ್ರಾರಂಭದ ಎಂಟು ವರ್ಷಗಳನ್ನು ತಮ್ಮ ತಾತನವರ ಸಂರಕ್ಷಣೆಯಲ್ಲಿ ಕಳೆದರು. ಅನಂತರ ಅವರು ತನ್ನ ಚಿಕ್ಕಪ್ಪ ಅಬೂತಾಲಿಬರ ಸಂರಕ್ಷಣೆಯಲ್ಲಿ ಬೆಳೆದರು. ಚಿಕ್ಕಪ್ಪನವರೊಂದಿಗೆ ರಕ್ತ ಸಂಬಂಧ ಇದ್ದುದರ ಜೊತೆಗೆ ಚಿಕ್ಕಪ್ಪನವರ ಪಿತ ತಾನು ಮೃತನಾಗುವ ಸಮಯದಲ್ಲಿ ಹಝ್ರತ್ ಪೈಗಂಬರರ ಸಂರಕ್ಷಣೆಯ ಕುರಿತು ವಿಶಿಷ್ಟವಾಗಿ ಒತ್ತಿ ಹೇಳಿದ್ದರು. ಆದುದರಿಂದ ಅವರು ಹಝ್ರತ್ ಪೈಗಂಬರರನ್ನು ಬಹಳ ಪ್ರೀತಿಸುತ್ತಾ ಇದ್ದರು ಮತ್ತು ಅವರ ಬಗ್ಗೆ ಯಾವಾಗಲೂ ಲಕ್ಷ್ಯ ನೀಡುತ್ತಾ ಇದ್ದರು. ಆದರೆ ಚಿಕ್ಕಮ್ಮನಿಗೆ ಅವರ ಬಗ್ಗೆ ಪ್ರೀತಿ ವಾತ್ಸಲ್ಯವಾಗಲಿ, ತಮ್ಮ ಕೌಟುಂಬಿಕ ಜವಾಬ್ದಾರಿಯ ಬಗ್ಗೆ ಕಾಳಜಿಯಾಗಲಿ ಇರಲಿಲ್ಲ. ಮನೆಗೆ ಯಾವುದಾದರೂ ತಿನ್ನುವ ವಸ್ತು ಬಂದರೆ ಆಕೆ ತನ್ನ ಮಕ್ಕಳಿಗೆ ಹಂಚಿಕೊಡುತ್ತಿದ್ದಳು ಮತ್ತು ಹಝ್ರತ್ ಪೈಗಂಬರರ ಬಗ್ಗೆ ಅನಾಸ್ಥೆ ತೋರಿಸುತ್ತಿದ್ದಳು. ಇಂತಹ ಸಂದರ್ಭಗಳಲ್ಲಿ ಅಬೂತಾಲಿಬ್ ಮನೆಗೆ ಬಂದಾಗ ಚಿಕ್ಕವನಾದ ತನ್ನ ಸಹೋದರ ಪುತ್ರ ಅಳುತ್ತಾ ದೂರುತ್ತಾ ಇರುವುದಾಗಿ ಅವರು ಕಾಣುತ್ತಿರಲಿಲ್ಲ. ಅವರ ಸ್ವಂತ ಮಕ್ಕಳು ಯಾವುದಾದರೂ ತಿಂಡಿಯನ್ನು ತಿನ್ನುತ್ತಿರುವಾಗ ಚಿಕ್ಕ ಪ್ರಾಯದವನಾದ ಅವರ ಸಹೋದರ ಪುತ್ರ ಕೋಣೆಯ ಒಂದು ಬದಿಯಲ್ಲಿ ಅಭಿಮಾನದಿಂದ ಸುಮ್ಮನೆ ಕುಳಿತಿರುವುದಾಗಿ ಅವರು ಕಾಣುತ್ತಿದ್ದರು. ಚಿಕ್ಕಪ್ಪ ತನ್ನ ಸಹಜವಾದ ಪ್ರೀತಿ ಮತ್ತು ಕೌಟುಂಬಿಕ ಜವಾಬ್ದಾರಿಗಳ ಪ್ರಜ್ಞೆಯಿಂದ ಓಡಿಹೋಗಿ ತಮ್ಮ ಸಹೋದರ ಪುತ್ರನನ್ನು ತಬ್ಬಿಕೊಳ್ಳುತ್ತಿದ್ದರು ಮತ್ತು ಪತ್ನಿಯೊಂದಿಗೆ, "ನನ್ನ ಮಗುವನ್ನು ಗಮನಿಸು, ನನ್ನ ಮಗುವನ್ನು ಗಮನಿಸು"

ಎಂದು ಹೇಳುತ್ತಿದ್ದರು. ಹೀಗೆ ಆಗಾಗ ಸಂಭವಿಸುತ್ತಿತ್ತು. ಆದರೆ ಆ ಸಂಭವಗಳನ್ನು ನೋಡಿದವರು ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಎಂದೂ ದೂರು ನೀಡುತ್ತಿರಲಿಲ್ಲ. ಅವರ ಮುಖವು ಎಂದೂ ತಮ್ಮ ಅತೃಪ್ತಿಯನ್ನು ಸೂಚಿಸುತ್ತಲೂ ಇರಲಿಲ್ಲ. ಅವರಿಗೆ ತಮ್ಮ ಚಿಕ್ಕಪ್ಪನ ಮಕ್ಕಳ ಬಗ್ಗೆ ಎಂದೂ ದ್ವೇಷ ಉಂಟಾಗಲಿಲ್ಲ. ಅವರ ಮುಂದಿನ ಜೀವಿತದ ಬದಲಾದ ಪರಿಸ್ಥಿತಿಯಲ್ಲಿ ಅವರು ತಮ್ಮ ಚಿಕ್ಕಪ್ಪನ ಮಕ್ಕಳಾದ ಹಝ್ರತ್ ಅಲಿ ಮತ್ತು ಹಝ್ರತ್ ಜಅಫರ್‌ರನ್ನು ತಮ್ಮ ತರಬೇತಿಗೆ ಒಳಪಡಿಸಿ ಎಲ್ಲಾ ರೀತಿಗಳಲ್ಲೂ ಅವರ ಅಭಿವೃದ್ಧಿಗೆ ಬೇಕಾದ ಯೋಜನೆಗಳನ್ನು ರೂಪಿಸಿದರು.

ಹಝ್ರತ್ ಪೈಗಂಬರರ(ಸ) ಜೀವಿತವು ಪ್ರಾಪಂಚಿಕ ದೃಷ್ಟಿಯಿಂದ ನೋಡಿದರೆ ಅತ್ಯಂತ ಕ್ಲೇಶದಾಯಕವಾಗಿತ್ತು. ಅವರು ಜನಿಸುವ ಮೊದಲೇ ಅವರ ಪಿತ ನಿಧನ ಹೊಂದಿದರು. ಅನಂತರ ತಾಯಿ ಮತ್ತು ತಾತ ಒಬ್ಬರ ನಂತರ ಇನ್ನೊಬ್ಬರು ಮೃತರಾದರು. ಅವರು ವಿವಾಹವಾದ ನಂತರ ಅವರ ಮಕ್ಕಳು ಒಬ್ಬರ ನಂತರ ಇನ್ನೊಬ್ಬರಂತೆ ಮೃತರಾಗುತ್ತಾ ಇದ್ದರು. ಅನಂತರ ಅವರ ಕೆಲವು ಪತ್ನಿಯರು ಒಬ್ಬರ ನಂತರ ಇನ್ನೊಬ್ಬರಂತೆ ಮೃತರಾದರು. ಅವರಲ್ಲಿ ಹಝ್ರತ್ ಖದೀಜರಂತಹ ನಿಷ್ಠಾವಂತ ಸೇವಾ ಮನೋಭಾವದ ಪತ್ನಿಯರೂ ಇದ್ದರು. ಪೈಗಂಬರ್(ಸ) ಎಲ್ಲಾ ವಿಪತ್ತುಗಳನ್ನು ತಾಳ್ಮೆಯಿಂದ ಎದುರಿಸಿದರು. ಈ ದುಃಖಗಳು ಅವರ ಧೈರ್ಯವನ್ನು ಕುಂದಿಸಲಿಲ್ಲ. ಅವರ ಮಧುರ ವರ್ತನೆಯ ಮೇಲೆ ಎಂದೂ ಪ್ರಭಾವ ಬೀರಲಿಲ್ಲ. ಅವರ ಹೃದಯಕ್ಕಾದ ನೋವು ಕಣ್ಣುಗಳಿಂದ ಪ್ರಕಟಗೊಳ್ಳಲಿಲ್ಲ. ಅವರು ಎಲ್ಲರನ್ನೂ ಆಹ್ಲಾದ ಸೂಚಕ ವದನದಿಂದ ಸ್ವಾಗತಿಸುತ್ತಿದ್ದರು. ಅವರು ಅತ್ಯಪೂರ್ವ ಸಂದರ್ಭಗಳಲ್ಲಿ ಮಾತ್ರ ತಮ್ಮ ಹೃದಯ ವೇದನೆಯನ್ನು ಪ್ರಕಟಿಸುತ್ತಿದ್ದರು.

ಒಮ್ಮೆ ಒಬ್ಬ ಮಹಿಳೆಯ ಪುತ್ರ ಮೃತನಾದಾಗ ಆಕೆ ಅವನ ಗೋರಿಯ ಬಳಿ ವಿಲಾಪಿಸುತ್ತಾ ಕುಳಿತಿದ್ದರು. ಹಝ್ರತ್ ಪೈಗಂಬರ್(ಸ) ಅಲ್ಲಿಂದ ದಾಟಿ ಹೋಗುವಾಗ ಹೀಗೆ ಹೇಳಿದರು: "ನೀನು ತಾಳ್ಮೆದೋರು, ಅಲ್ಲಾಹನ ಇಚ್ಛೆಯು ಎಲ್ಲಾ ವಸ್ತುಗಳ ಮೇಲೆ ಕಾರ್ಯಪ್ರವೃತ್ತವಾಗುತ್ತದೆ."

ಆ ಮಹಿಳೆ ಹಝ್ರತ್ ಪೈಗಂಬರರನ್ನು ಗುರುತಿಸಲಿಲ್ಲ. ಆಕೆ ಹೇಳಿದಳು: "ನನ್ನ ಮಗನ ಹಾಗೆ ನಿಮ್ಮ ಮಗನೂ ಮೃತನಾಗುತ್ತಿದ್ದರೆ ತಾಳ್ಮೆ ಎಂದರೇನೆಂದು ನೀವು ಸಹ ತಿಳಿದುಕೊಳ್ಳುತ್ತಿದ್ದಿರಿ." ಆಗ ಹಝ್ರತ್ ಪೈಗಂಬರ್(ಸ), "ನನ್ನ ಒಂದು ಮಗುವಲ್ಲ, ಏಳು ಮಕ್ಕಳು ಮೃತರಾಗಿರುವರು" ಎಂದು ಹೇಳಿ ಅಲ್ಲಿಂದ ಹೊರಟು ಹೋದರು. (ಅಬೂ ದಾವೂದ್)

ಇಂತಹ ಸಂದರ್ಭಗಳಲ್ಲಿ ಹಝ್ರತ್ ಪೈಗಂಬರ್(ಸ) ತನಗೆ ಸಂಭವಿಸಿದ ವಿಪತ್ತುಗಳ ಕುರಿತು ಇಷ್ಟು ಮಾತ್ರ ಸಂಕ್ಷಿಪ್ತವಾಗಿ ಹೇಳುತ್ತಿದ್ದರು. ಆದರೆ ಆ ವಿಪತ್ತುಗಳ ಕಾರಣದಿಂದ ಅವರು ಮಾಡುತ್ತಿದ್ದ ಮಾನವ ಸೇವೆಯಲ್ಲಿ ಯಾವುದೇ ಕೊರತೆ ಉಂಟಾಗಲಿಲ್ಲ. ಅವರ ಪ್ರಸನ್ನ ಮನೋಭಾವದಲ್ಲಿ ಯಾವುದೇ ವ್ಯತ್ಯಾಸವೂ ಉಂಟಾಗಲಿಲ್ಲ.



## ಆತ್ಮ ನಿಯಂತ್ರಣ

ಹಝ್ರತ್ ಪೈಗಂಬರರಿಗೆ(ಸ) ಆತ್ಮ ನಿಯಂತ್ರಣ ಎಷ್ಟಿದ್ದಿತೆಂದರೆ ಅವರಿಗೆ ಅಲ್ಲಾಹನು ದೊರೆತನವನ್ನು ನೀಡಿದಾಗಲೂ ಅವರು ಪ್ರತಿಯೊಬ್ಬನ ಮಾತನ್ನು ಕಿವಿಗೊಟ್ಟು ಆಲಿಸುತ್ತಿದ್ದರು. ಯಾರಾದರೂ ಅವರೊಂದಿಗೆ ಕಟುವಾಗಿ ಮಾತನಾಡಿದರೂ ಅವರು ಎಂದೂ ಕಟುವಾಗಿ ಉತ್ತರ ನೀಡದೆ ಮೌನವನ್ನು ಅವಲಂಬಿಸುತ್ತಿದ್ದರು.

ಮುಸ್ಲಿಮರು ಹಝ್ರತ್ ಪೈಗಂಬರರನ್ನು(ಸ) ಅವರ ಹೆಸರು ಹೇಳಿ ಕರೆಯುತ್ತಿರಲಿಲ್ಲ; ಅವರ ಆಧ್ಯಾತ್ಮಿಕ ಪದವಿಯ ಪ್ರಕಾರ ಅವರನ್ನು "ಯಾ ರಸೂಲಲ್ಲಾಹ್" (ಓ ಅಲ್ಲಾಹನ ಪೈಗಂಬರರೇ) ಎಂದು ಕರೆಯುತ್ತಿದ್ದರು. ಅನ್ಯ ಮತಾವಲಂಬಿಗಳು ಏಶ್ಯದಲ್ಲಿ ಇರುವ ಸಂಪ್ರದಾಯದ ಪ್ರಕಾರ ಅವರನ್ನು ಅಬುಲ್ ಖಾಸಿಮ್ (ಖಾಸಿಮನ ಪಿತ) ಎಂದು ಕರೆಯುತ್ತಿದ್ದರು. (ಅವರ ಒಬ್ಬ ಪುತ್ರನ ಹೆಸರು ಖಾಸಿಮ್ ಎಂದಾಗಿತ್ತು.)

ಒಮ್ಮೆ ಒಬ್ಬ ಯಹೂದಿ ಮದೀನಕ್ಕೆ ಬಂದು ಹಝ್ರತ್ ಪೈಗಂಬರರೊಂದಿಗೆ ವಾಗ್ವಾದ ಮಾಡಲು ತೊಡಗಿದನು. ಅವನು ತನ್ನ ವಾದವನ್ನು ಮಂಡಿಸುವಾಗ "ಓ ಮುಹಮ್ಮದ್, ವಿಷಯ ಹೀಗೆ, ಓ ಮುಹಮ್ಮದ್, ವಿಷಯ ಹಾಗೆ" ಎಂದು ಪುನರಾವರ್ತಿಸಿ ಹೇಳುತ್ತಿದ್ದನು. ಹಝ್ರತ್ ಪೈಗಂಬರ್(ಸ) ಯಾವುದೇ ಸಂಕೋಚವಿಲ್ಲದೆ ಅವನ ಮಾತಿಗೆ ಉತ್ತರ ನೀಡುತ್ತಿದ್ದರು. ಆದರೆ ಯಹೂದಿಯು ಪೈಗಂಬರರಿಗೆ ತೋರಿಸುತ್ತಿದ್ದ ಅನಾದರ ಶಿಷ್ಯರಿಗೆ ಸಹಿಸಲಾಗಲಿಲ್ಲ. ಆಗ ಒಬ್ಬ ಶಿಷ್ಯ ಯಹೂದಿಯ ವರ್ತನೆಯಿಂದ ಬೇಸತ್ತು ಹೇಳಿದರು: "ಎಚ್ಚರಿಕೆ! ನೀವು ಹಝ್ರತ್ ಪೈಗಂಬರರ ಹೆಸರೆತ್ತಿ ಕರೆದು ಮಾತನಾಡಬೇಡಿರಿ. ಅಲ್ಲಾಹನ ಪೈಗಂಬರ್ ಎಂದು ನಿಮಗೆ ಸಂಭೋಧಿಸಲು ಸಾಧ್ಯವಿಲ್ಲವಾದರೆ ಕನಿಷ್ಠ ಪಕ್ಷ ಅಬುಲ್ ಖಾಸಿಮ್ ಎಂದಾದರೂ ಹೇಳಿರಿ." ಆಗ ಆ ಯಹೂದಿ ಹೇಳಿದನು: "ನಾನು ಅವರನ್ನು ಅವರ ತಂದೆ ತಾಯಂದಿರು ಇಟ್ಟ ಹೆಸರಿನಿಂದಲೇ ಕರೆಯುವೆನು." ಹಝ್ರತ್ ಪೈಗಂಬರ್(ಸ) ಆಗ ಮುಗುಳು ನಗುತ್ತಾ ಹೇಳಿದರು: "ಯಹೂದಿ ಹೇಳುವುದು ಸರಿ. ನನ್ನ ತಂದೆ ತಾಯಂದಿರು ನನಗೆ ಮುಹಮ್ಮದ್ ಎಂದೇ ಹೆಸರಿಟ್ಟಿದ್ದಾರೆ. ಯಹೂದಿ ಯಾವ ಹೆಸರನ್ನು ಬಳಸಲು ಇಷ್ಟಪಡುತ್ತಾರೋ ಅದನ್ನೇ ಬಳಸಲಿ. ಅದರ ಬಗ್ಗೆ ನೀವು ಯಾವುದೇ ಸಿಟ್ಟು ತೋರ್ಪಡಿಸಬೇಡಿರಿ."

ಹಝ್ರತ್ ಪೈಗಂಬರ್(ಸ) ಯಾವುದಾದರೂ ಆವಶ್ಯಕ್ಕಾಗಿ ಹೊರಗೆ ಹೊರಟಾಗ ಕೆಲವರು ಅವರನ್ನು ಮಾರ್ಗ ಮಧ್ಯದಲ್ಲಿ ತಡೆದು ನಿಲ್ಲಿಸಿ ತಮ್ಮ ಅವಶ್ಯಕತೆಗಳನ್ನು ಹೇಳಲು ತೊಡಗುತ್ತಿದ್ದರು. ಆ ಜನರು ತಮ್ಮ ಅವಶ್ಯಕತೆಗಳನ್ನು ವಿವರಿಸಿ ಮುಗಿಸುವ ತನಕ ಹಝ್ರತ್ ಪೈಗಂಬರ್(ಸ) ನಿಂತು ಆಲಿಸುತ್ತಿದ್ದರು. ಅವರು ತಮ್ಮ ಮಾತನ್ನು ಮುಕ್ತಾಯಗೊಳಿಸಿದ ನಂತರ ಅವರು ಅಲ್ಲಿಂದ

ಮುಂದುವರಿಯುತ್ತಿದ್ದರು. ಇದೇ ರೀತಿ ಬೇರೆ ಕೆಲವರು ಹಸ್ತಲಾಘವ ಮಾಡುತ್ತಾ ಅವರ ಹಸ್ತವನ್ನು ದೀರ್ಘ ಕಾಲ ಹಿಡಿದಿಟ್ಟುಕೊಳ್ಳುತ್ತಿದ್ದರು. ಇದು ಒಳ್ಳೆಯ ಕ್ರಮವಲ್ಲವಾದರೂ ಹಝ್ರತ್ ಪೈಗಂಬರರು ತನ್ನ ಕಾರ್ಯ ನಿರ್ವಹಿಸಲು ಅಡ್ಡಿಯಾಗುತ್ತಿದ್ದರೂ ಅವರು, ತನ್ನ ಕೈ ಹಿಡಿದ ವ್ಯಕ್ತಿ ಕೈಯನ್ನು ಸ್ವತಃ ಬಿಡುವ ತನಕ ತಮ್ಮ ಹಸ್ತವನ್ನು ಹಿಂದಕ್ಕೆಳೆಯುತ್ತಿರಲಿಲ್ಲ; ಕೈ ಹಿಡಿದವನು ಸ್ವತಃ ಕೈಯನ್ನು ಬಿಡುವ ತನಕ ಹಝ್ರತ್ ಪೈಗಂಬರ್(ಸ) ತನ್ನ ಹಸ್ತವು ಆ ವ್ಯಕ್ತಿಯ ಹಸ್ತದೊಂದಿಗೆ ಇರಲು ಬಿಡುತ್ತಿದ್ದರು.

ಎಲ್ಲಾ ವಿಧಗಳ ಕೋರಿಕೆಗಳೊಂದಿಗೆ ಜನರು ಹಝ್ರತ್ ಪೈಗಂಬರರ(ಸ) ಬಳಿಗೆ ಬರುತ್ತಿದ್ದರು. ಕೆಲವು ಸಾರಿ ಅವರು ಬೇಡಿಕೊಂಡವನ ಅವಶ್ಯಕತೆಗಳಿಗೆ ಅನುಸಾರವಾಗಿ ಏನನ್ನಾದರೂ ಕೊಟ್ಟರೆ ಅದನ್ನು ಪಡೆದುಕೊಂಡವನು ದುರಾಸೆಯಿಂದ ಪೀಡಿತನಾಗಿ ಇನ್ನಷ್ಟು ಹೆಚ್ಚಿಗೆ ನೀಡಲು ಬೇಡುತ್ತಿದ್ದನು. ಆಗ ಅವರು ಆತನ ಬೇಡಿಕೆಯನ್ನು ಈಡೇರಿಸುತ್ತಿದ್ದರು. ಕೆಲವು ಜನರು ಅನೇಕ ಸಾರಿ ಬೇಡುತ್ತಾ ಇದ್ದರು. ಅಂತಹ ಜನರಿಗೆ ಅವರು ಏನನ್ನಾದರೂ ಪ್ರತಿಸಾರಿ ಕೊಡುತ್ತಾ ಇದ್ದರು. ನಿಷ್ಠಾವಂತರಾಗಿ ಕಾಣಿಸುವ ಜನರಲ್ಲಿ ಯಾರಾದರೂ ಬೇಡಿಕೊಂಡರೆ ಅವರಿಗೆ ಅವರ ಅವಶ್ಯಕತೆ ಗಳಿಗನುಸಾರವಾಗಿ ಕೊಟ್ಟ ನಂತರ ಅವರು ಇಷ್ಟು ಮಾತ್ರ ಹೇಳುತ್ತಿದ್ದರು: "ನೀವು ಅಲ್ಲಾಹನ ಮೇಲೆ ಭರವಸೆ ಇಡುತ್ತಿದ್ದರೆ ಎಷ್ಟು ಚೆನ್ನಾಗಿತ್ತು!"

ಒಮ್ಮೆ ಒಬ್ಬ ನಿಷ್ಠಾವಂತ ಶಿಷ್ಯ ತಮ್ಮ ಅವಶ್ಯಕತೆಗಳನ್ನು ಈಡೇರಿಸಲು ಅನೇಕ ಸಲ ಹಝ್ರತ್ ಪೈಗಂಬರರಿಂದ ಹಣವನ್ನು ಪಡಕೊಳ್ಳುತ್ತಿದ್ದರು. ಆ ಶಿಷ್ಯರ ಆವಶ್ಯಕತೆಯನ್ನು ಈಡೇರಿಸಿ ಒಮ್ಮೆ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೀಗೆಂದರು: "ಮನುಷ್ಯನು ಅಲ್ಲಾಹನ ಮೇಲೆ ಭರವಸೆ ಇಡುವುದು ಅತ್ಯುತ್ತಮ ಸ್ಥಾನವಾಗಿದೆ." ಆ ಶಿಷ್ಯ ನಿಷ್ಠಾವಂತರಾಗಿದ್ದರು. ಅವರು ತಾನು ಹಝ್ರತ್ ಪೈಗಂಬರರಿಂದ ಪಡೆದುಕೊಂಡದ್ದನ್ನು ಆಗಲೇ ಹಿಂದಿರುಗಿಸಿದರೆ ಅವರಿಗೆ ಅಗೌರವ ಸೂಚಿಸಿದಂತೆ ಆಗುವುದೆಂದು ಭಾವಿಸಿ ತಾನು ಪಡೆದುಕೊಂಡದ್ದನ್ನು ಮರಳಿ ಕೊಡಲಿಲ್ಲ. ಆದರೆ ಅವರು ತನ್ನ ಮುಂದಿನ ನಡವಳಿಕೆಯ ಬಗ್ಗೆ ಹೀಗೆ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ಇದು ನಾನು ಸಲ್ಲಿಸಿದ ಕೊನೆಯ ಬೇಡಿಕೆಯಾಗಿದೆ. ಇನ್ನು ಮುಂದೆ ನಾನು ಯಾರಿಂದಲೂ ಯಾವ ಪರಿಸ್ಥಿತಿಯಲ್ಲಿಯೂ ಏನನ್ನೂ ಯಾಚಿಸಲಾರೆನು."

ಒಮ್ಮೆ ಯುದ್ಧ ನಡೆಯುತ್ತಿತ್ತು. ಅದು ಘೋರವಾದೊಂದು ಯುದ್ಧವಾಗಿತ್ತು. ಈಟಿಗಳು ಎಸೆಯಲ್ಪಡುತ್ತಿದ್ದುವು. ಖಡ್ಗಗಳು ಕಟ್‌ಕಟ್ ಎಂದು ಧ್ವನಿ ಹೊರಡಿಸುತ್ತಿದ್ದವು. ಬಾಣಗಳು ಬಿಲ್ಲುಗಳಿಂದ ಹಾರಿ ಬರುತ್ತಿದ್ದುವು. ಸೈನಿಕರ ಮೇಲೆ ಸೈನಿಕರು ಆಕ್ರಮಣ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಮೇಲೆ ಸೂಚಿಸಲಾದ ಶಿಷ್ಯ, ಶತ್ರುಗಳಿಂದ ಸುತ್ತುವರಿಯಲ್ಪಟ್ಟಾಗ ಅವರ ಚಾಟಿ ಕೆಳಗೆ ಬಿತ್ತು. ಆಗ ಒಬ್ಬ



ಕಾಲಾಳು ಸೈನಿಕ ಅದನ್ನು ನೆಲದಿಂದ ಎತ್ತಿಕೊಡಲು ಮುಂದಾದರು. ಆಗ ಆ ಶಿಷ್ಯರ ದೃಷ್ಟಿ ಆ ಸೈನಿಕನ ಮೇಲೆ ಬಿತ್ತು. ಅವರು ಕೂಡಲೆ, "ಓ ನನ್ನ ಸಹೋದರ! ಅಲ್ಲಾಹನಾಣೆ, ನೀವು ಆ ಚಾಟಿಯನ್ನು ಮುಟ್ಟಬೇಡಿರಿ" ಎಂದು ಹೇಳಿ ಕುದುರೆಯಿಂದ ಕೆಳಗೆ ಹಾರಿ ಆ ಚಾಟಿಯನ್ನು ಎತ್ತಿಕೊಂಡರು. ಅನಂತರ ಅವರು ತನ್ನ ಸಂಗಡಿಗ ಸೈನಿಕನೊಂದಿಗೆ ಹೇಳಿದರು: "ನಾನು ಹಝ್ರತ್ ಪೈಗಂಬರರಿಗೆ ವಚನ ನೀಡಿದ್ದೇನೆ. ನಾನು ಯಾರಿಂದಲೂ ಏನನ್ನೂ ಯಾಚಿಸಲಾರೆನೆಂದು. ನಾನು ನಿಮ್ಮೊಂದಿಗೆ ಚಾಟಿಯನ್ನು ನನಗೆ ಎತ್ತಿಕೊಡಲು ಹೇಳಿರದಿದ್ದರೂ ನೀವು ನನಗೆ ಚಾಟಿಯನ್ನು ಎತ್ತಿಕೊಟ್ಟಿದ್ದರೆ ನಾನಿದ್ದ ಸ್ಥಿತಿಯಲ್ಲಿ ನಿಸ್ಸಂಶಯವಾಗಿ ಅದೊಂದು ಯಾಚನೆಯೇ ಆಗುತ್ತಿತ್ತು. ಇದು ಯುದ್ಧ ರಂಗವಾದರೂ ಹಾಗೆ ಮಾಡುವುದರಿಂದ ನಾನು ವಚನಭಂಗ ಮಾಡಿದ ಹಾಗೆ ಆಗುವುದು. ಆದುದರಿಂದ ನನ್ನ ಕೆಲಸವನ್ನು ನಾನೇ ಮಾಡುವೆನು."

## ನೀತಿ–ನ್ಯಾಯ

ನ್ಯಾಯ ಮತ್ತು ಸಮಭಾವ ಹಝ್ರತ್ ಪೈಗಂಬರರಲ್ಲಿ(ಸ) ಎಷ್ಟು ಅಡಕವಾಗಿತ್ತೆಂದರೆ ಹಾಗೆ ಇರುವಂತಹ ಬೇರೊಂದು ಉದಾಹರಣೆ ಲೋಕದಲ್ಲಿ ಬೇರೆ ಎಲ್ಲಿಯೂ ಕಾಣುತ್ತಿರಲಿಲ್ಲ. ದೊಡ್ಡ ಜನರ ಪ್ರತಿಷ್ಠೆ ಮತ್ತು ಅವರ ಶಿಫಾರಸುಗಳನ್ನು ಅಂಗೀಕರಿಸುವುದು ಅರಬಿಗಳಲ್ಲಿದ್ದ ಒಂದು ಸಾಮಾಜಿಕ ರೋಗವಾಗಿತ್ತು. ಅರಬಿಗಳ ವಿಷಯ ಬಿಡಿ, ಈಗಿನ ಕಾಲದಲ್ಲಿ ಸಹ ನಾಗರಿಕ ದೇಶಗಳಲ್ಲಿ ದೊಡ್ಡ ಜನರಿಗೆ ಶಿಕ್ಷೆ ನೀಡುವ ಬಗ್ಗೆ ಹಿಂಜರಿಯುತ್ತಾರೆ. ಆದರೆ ಬಡವರಿಗೆ ಶಿಕ್ಷೆ ನೀಡುವಾಗ ಯಾವುದೇ ಗಾಬರಿಗೊಳಗಾಗುವುದಿಲ್ಲ. ಒಮ್ಮೆ ಒಂದು ಮೊಕದ್ದಮೆ ಹಝ್ರತ್ ಪೈಗಂಬರರ ತೀರ್ಪಿಗೆ ಸಮರ್ಪಿಸಲಾಯಿತು. ಒಂದು ಕುಲೀನ ಕುಟುಂಬದ ಮಹಿಳೆ ಬೇರೆಯವರ ಹಣವನ್ನು ಕದ್ದಿದ್ದಳು. ಸತ್ಯವಾದ ವಿಷಯಗಳು ಬೆಳಕಿಗೆ ಬಂದಾಗ ಅರಬಿಗಳು ಬಹಳ ಆತಂಕಗೊಂಡರು. ಪ್ರತಿಷ್ಠಿತವಾದೊಂದು ಕುಟುಂಬದ ಮಾನಹಾನಿ ಆಗುವುದಾಗಿ ಅವರಿಗೆ ಕಂಡಿತು. ಆಕೆಯನ್ನು ಕ್ಷಮಿಸಬೇಕೆಂದು ಹಝ್ರತ್ ಪೈಗಂಬರರೊಂದಿಗೆ ನಿವೇದಿಸಲು ಅವರು ಬಯಸಿದರು. ಆದರೆ ಹಝ್ರತ್ ಪೈಗಂಬರರ ಸಮೀಪಕ್ಕೆ ಈ ಕೆಲಸಕ್ಕಾಗಿ ಹೋಗಲು ಯಾರಿಗೂ ಧೈರ್ಯ ಉಂಟಾಗಲಿಲ್ಲ. ಅವರು ಹಝ್ರತ್ ಪೈಗಂಬರರಿಗೆ ಆಪ್ತರಾದ ಹಝ್ರತ್ ಉಸಾಮ ಬಿನ್ ಝೈದ್‌ರನ್ನು ಆಯ್ಕೆ ಮಾಡಿ ಅವರನ್ನು ಆ ಮಹಿಳೆಯ ಪರವಾಗಿ ಶಿಫಾರಸು ಮಾಡಲು ಆಗ್ರಹಪಡಿಸಿದರು. ಹಝ್ರತ್ ಉಸಾಮ(ರ) ತನ್ನ ಮಾತನ್ನು ಪ್ರಾರಂಭಿಸಿದ ಕೂಡಲೆ ಹಝ್ರತ್ ಪೈಗಂಬರರ(ಸ) ಮುಖದಲ್ಲಿ ಸಿಟ್ಟಿನ ಚಿಹ್ನೆಗಳು ಗೋಚರಿಸಿದುವು. ಅವರು ಹೀಗೆಂದರು: "ನೀವು ಇದೇನು ಹೇಳುತ್ತಿರುವಿರಿ, ಹಿಂದಿನ ಸಮುದಾಯಗಳು ಗಣ್ಯರ ಬಗ್ಗೆ ಔದಾರ್ಯದಿಂದ ಮತ್ತು ಸಾಮಾನ್ಯರೊಂದಿಗೆ ದೌರ್ಜನ್ಯದಿಂದ ವರ್ತಿಸುತ್ತಾ ಇದ್ದ ಕಾರಣದಿಂದಲೇ ನಾಶಗೊಂಡವು. ಇಸ್ಲಾಮ್ ಇದಕ್ಕೆ ಅನುಮತಿ ನೀಡುವುದಿಲ್ಲ. ನಾನು

ಖಂಡಿತವಾಗಿಯೂ ಹಾಗೆ ಎಂದೂ ಮಾಡಲಾರೆನು. ಅಲ್ಲಾಹನಾಣೆ! ನನ್ನ ಮಗಳು ಫಾತಿಮ ಸಹ ಇಂತಹ ಅಪರಾಧ ಮಾಡಿದ್ದರೆ ನಾನು ಆಕೆಯನ್ನು ಶಿಕ್ಷಿಸದೆ ಬಿಟ್ಟು ಬಿಡುತ್ತಿರಲಿಲ್ಲ." (ಬುಖಾರಿ)

ಇನ್ನೊಂದು ಸಂಭವವನ್ನು ಈ ಮೊದಲು ವಿವರಿಸಲಾಗಿದೆ. ಬದ್ರ್ ಯುದ್ಧದ ನಂತರ ಹಝ್ರತ್ ಅಬ್ಬಾಸ್(ರ) ಕೈದಿಯಾಗಿ ಬಂಧಿಸಲ್ಪಟ್ಟಿದ್ದರು. ಅವರ ನರಳಾಟದಿಂದ ಹಝ್ರತ್ ಪೈಗಂಬರರಿಗೆ(ಸ) ದುಃಖವಾಗುತ್ತಿತ್ತು. ಹಝ್ರತ್ ಪೈಗಂಬರರು(ಸ) ಅನುಭವಿಸುತ್ತಿದ್ದ ಮಾನಸಿಕ ಯಾತನೆಯನ್ನು ಗಮನಿಸಿದ ಶಿಷ್ಯರು ಹಝ್ರತ್ ಅಬ್ಬಾಸರ(ರ) ಕೈಗಳಿಗೆ ಕಟ್ಟಿದ ಹಗ್ಗದ ಕಟ್ಟುಗಳನ್ನು ಬಿಡಿಸಿದರು. ಹಝ್ರತ್ ಪೈಗಂಬರರಿಗೆ ಈ ವಿಷಯ ತಿಳಿಯಿತು. ಅವರು ಹೇಳಿದರು: "ನನ್ನ ಸಂಬಂಧಿಕರ ಹಾಗೆಯೇ ಬೇರೆಯವರ ಸಂಬಂಧಿಕರೂ ಇದ್ದಾರೆ. ನೀವು ನನ್ನ ಚಿಕ್ಕಪ್ಪ ಅಬ್ಬಾಸರ ಕೈಗಳಿಗೆ ಬಿಗಿದ ಕಟ್ಟುಗಳನ್ನು ಬಿಗಿಪಡಿಸಬೇಕು ಅಥವಾ ಎಲ್ಲಾ ಕೈದಿಗಳಿಗೆ ಬಿಗಿದ ಕಟ್ಟುಗಳನ್ನು ಸಡಿಲಗೊಳಿಸಬೇಕು." ಶಿಷ್ಯರು ಹಝ್ರತ್ ಪೈಗಂಬರ್(ಸ) ಅನುಭವಿಸುತ್ತಿದ್ದ ಮಾನಸಿಕ ಕಷ್ಟವನ್ನು ಮನವರಿಕೆ ಮಾಡಿಕೊಂಡು ಹೇಳಿದರು: "ನಾವು ಎಲ್ಲಾ ಕೈದಿಗಳಿಗೆ ಬಿಗಿದ ಕಟ್ಟುಗಳನ್ನು ಸಡಿಲಗೊಳಿಸುವೆವು ಮತ್ತು ನಾವು ಪಹರೆಯನ್ನು ಬಿಗಿಪಡಿಸುವೆವು." ಹೀಗೆ ಹೇಳಿ ಶಿಷ್ಯರು ಎಲ್ಲಾ ಕೈದಿಗಳ ಹಗ್ಗದ ಕಟ್ಟುಗಳನ್ನು ಸಡಿಲಗೊಳಿಸಿದರು.

ಯುದ್ಧ ನಡೆಯುತ್ತಿದ್ದಾಗಲೂ ಹಝ್ರತ್ ಪೈಗಂಬರ್(ಸ) ನ್ಯಾಯ ನಿಷ್ಠೆಯಿಂದ ವರ್ತಿಸುತ್ತಿದ್ದರು. ಒಮ್ಮೆ ಅವರು ತಮ್ಮ ಕೆಲವು ಶಿಷ್ಯರನ್ನು ಶತ್ರುಗಳ ಚಲನವಲನಗಳನ್ನು ತಿಳಿಯಲು ಕಳುಹಿಸಿದರು. ಆ ಶಿಷ್ಯರು ಮಕ್ಕದ ಪರಿಶುದ್ಧ ಪ್ರದೇಶದೊಳಗೆ ಕೆಲವು ಶತ್ರುಗಳನ್ನು ಕಂಡರು. ತಾವು ಈ ಶತ್ರು ಜನರನ್ನು ಹೀಗೆಯೇ ಹೋಗಲು ಬಿಟ್ಟರೆ ಅವರು ಹೋಗಿ ಮಕ್ಕದ ಜನರಿಗೆ ತಮ್ಮ ಬಗ್ಗೆ ತಿಳಿಸುವರು ಮತ್ತು ತಾವು ಕೊಲ್ಲಲ್ಪಡುವೆವು ಎಂದು ಯೋಚಿಸಿ ಶಿಷ್ಯರು ಅವರನ್ನು ಆಕ್ರಮಿಸಿದರು. ಅವರಲ್ಲೊಬ್ಬ ಹೋರಾಟದಲ್ಲಿ ಕೊಲ್ಲಲ್ಪಟ್ಟನು.

ಮಾಹಿತಿ ಸಂಗ್ರಹಿಸಲು ಹೋದ ಶಿಷ್ಯರು ಮದೀನಕ್ಕೆ ಮರಳಿದಾಗ ಮಕ್ಕದವರ ಒಂದು ನಿಯೋಗ ದೂರಿನೊಂದಿಗೆ ಅವರ ಹಿಂದೆ ಮದೀನಕ್ಕೆ ಬಂದು ತಲಪಿತು. ಪವಿತ್ರ ಕಅ್‌ಬದ ಪರಿಶುದ್ಧ ಪ್ರದೇಶದೊಳಗೆ ನಮ್ಮ ಇಬ್ಬರು ಜನರು ನಿಮ್ಮವರಿಂದ ಕೊಲ್ಲಲ್ಪಟ್ಟಿದ್ದಾರೆ ಎಂದು ಅವರು ಹಝ್ರತ್ ಪೈಗಂಬರರಿಗೆ(ಸ) ದೂರಿತ್ತರು. ಕಅ್‌ಬದ ಪರಿಶುದ್ಧ ಪ್ರದೇಶದೊಳಗೆ ಹಝ್ರತ್ ಪೈಗಂಬರರ ಮೇಲೆ ದೌರ್ಜನ್ಯ ಮಾಡುತ್ತಾ ಇದ್ದ ಅವರಿಗೆ, "ನೀವು ಪರಿಶುದ್ಧ ಕಅ್‌ಬದ ಪರಿಶುದ್ಧತೆಯನ್ನು ಯಾವಾಗ ಕಾಪಾಡಿದಿರಿ? ನೀವು ನಮ್ಮಿಂದ ಆ ಪ್ರದೇಶದ ಪರಿಶುದ್ಧತೆಯನ್ನು ಕಾಪಾಡುವ ಪ್ರತೀಕ್ಷೆ ಹೇಗೆ ತಾನೆ ಮಾಡಬಲ್ಲಿರಿ?" ಎಂದು ಉತ್ತರ ನೀಡುವುದು ಸೂಕ್ತವಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಹಾಗೆ ಉತ್ತರ ನೀಡಲಿಲ್ಲ. ಅವರು ಹೇಳಿದರು: "ಹೌದು ಅನ್ಯಾಯ ನಡೆದಿದೆ. ಪರಿಶುದ್ಧ ಪ್ರದೇಶದೊಳಗೆ



ತಾವು ಸುರಕ್ಷಿತರೆಂದು ಬಗೆದು ಆ ಜನರು ತಮ್ಮನ್ನು ರಕ್ಷಿಸಲು ಪೂರ್ಣವಾಗಿ ಪ್ರಯತ್ನ ಮಾಡಿರಲಾರರು. ಆದುದರಿಂದ ನಿಮಗೆ ಅವರ ರಕ್ತದ ಹಣ ನೀಡಲಾಗುವುದು." ಹಝ್ರತ್ ಪೈಗಂಬರ್(ಸ) ಅರಬಿಗಳ ಸಂಪ್ರದಾಯ ಪ್ರಕಾರ ರಕ್ತದ ಹಣವನ್ನು ಕೊಲ್ಲಲ್ಪಟ್ಟವರ ವಾರೀಸುದಾರರಿಗೆ ಸಂದಾಯ ಮಾಡಿದರು.

## ಅನ್ಯರ ಭಾವನೆಗಳ ಬಗ್ಗೆ ಗೌರವ

ಹಝ್ರತ್ ಪೈಗಂಬರ್(ಸ) ತಮ್ಮವರ ಮಾತ್ರವಲ್ಲ, ಅನ್ಯರ ಭಾವನೆಗಳನ್ನೂ ಬಹಳ ಗೌರವಿಸುತ್ತಿದ್ದರು. ಒಮ್ಮೆ ಒಬ್ಬ ಯಹೂದಿ ಬಂದು ಹೀಗೆ ದೂರಿತ್ತನು: "ಅಬೂಬಕರ್ ನನ್ನ ಹೃದಯವನ್ನು ಬಹಳ ನೋವಿಗೆ ಗುರಿಪಡಿಸಿರುವರು. ಅಲ್ಲಾಹನು ಹಝ್ರತ್ ಮೂಸಾರಿಗಿಂತ ಶ್ರೇಷ್ಠರನ್ನಾಗಿ ಮಾಡಿದ ಹಝ್ರತ್ ಮುಹಮ್ಮದರ ಪ್ರಮಾಣ ಎಂದು ಅವರು ಹೇಳಿದ್ದಾರೆ. ಈ ಮಾತನ್ನು ಕೇಳಿ ನನ್ನ ಹೃದಯಕ್ಕೆ ನೋವಾಗಿದೆ."

ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರರನ್ನು(ರ) ಕರೆದು ಆ ದೂರಿನ ಬಗ್ಗೆ ವಿವರಣೆ ನೀಡಲು ಹೇಳಿದರು:

ಹಝ್ರತ್ ಅಬೂಬಕರ್(ರ) ಹೇಳಿದರು: "ಅಲ್ಲಾಹನ ಪೈಗಂಬರರೇ, ಈ ಮನುಷ್ಯನೇ ಮಾತನ್ನು ಪ್ರಾರಂಭಿಸಿದ್ದನು. ಅವನು, ಅಲ್ಲಾಹನು ಸಕಲ ಲೋಕಗಳ ಮೇಲೆ ಶ್ರೇಷ್ಠತೆಯನ್ನು ನೀಡಿದ ಹಝ್ರತ್ ಮೂಸಾರವರ ಪ್ರಮಾಣ ಮಾಡಿ ಹೇಳುತ್ತೇನೆ' ಎಂದು ಹೇಳಿದನು. ಆಗ ನಾನು, 'ಅಲ್ಲಾಹನು ಹಝ್ರತ್ ಮೂಸಾರವರಿಗಿಂತ ಶ್ರೇಷ್ಠರನ್ನಾಗಿ ಮಾಡಿದ ಹಝ್ರತ್ ಮುಹಮ್ಮದರ ಪ್ರಮಾಣ ಮಾಡಿ ಹೇಳುತ್ತೇನೆ' ಎಂದೆನು."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಹೀಗೆ ಮಾಡಬೇಡಿರಿ, ಅನ್ಯರ ಭಾವನೆಗಳಿಗೆ ಗೌರವ ನೀಡಿರಿ. ನನಗೆ ಮೂಸಾರವರಿಗಿಂತ ಶ್ರೇಷ್ಠತೆ ನೀಡಬೇಡಿರಿ." (ಬುಖಾರಿ)

ಇದರ ಅರ್ಥ ಹಝ್ರತ್ ಪೈಗಂಬರ್(ಸ) ತನ್ನನ್ನು ಹಝ್ರತ್ ಮೂಸಾರಿಗಿಂತ ಶ್ರೇಷ್ಠರೆಂದು ಗಣಿಸಿರಲಿಲ್ಲ ಎಂದಲ್ಲ. ಆದರೆ ಹಝ್ರತ್ ಮೂಸಾರಿಗಿಂತ ಹಝ್ರತ್ ಪೈಗಂಬರರಿಗೆ ಶ್ರೇಷ್ಠತೆ ಇದೆ ಎಂದು ಹೇಳಿದರೆ ಯಹೂದಿಯರ ಹೃದಯಗಳಿಗೆ ನೋವಾಗುತ್ತದೆ ಎಂದು ಮಾತ್ರ ಸೂಚಿಸಲಾಗಿದೆ.

## ಬಡವರ ಬಗ್ಗೆ ಕಾಳಜಿ ಮತ್ತು ಅವರ ಭಾವನೆಗಳಿಗೆ ಗೌರವ

ಹಝ್ರತ್ ಪೈಗಂಬರ್(ಸ) ಯಾವಾಗಲೂ ಬಡವರ ಸ್ಥಿತಿಯ ಸುಧಾರಣೆಗೆ ಮತ್ತು ಅವರಿಗೆ ಸಮಾಜದಲ್ಲಿ ಯೋಗ್ಯ ಸ್ಥಾನ ನೀಡುವ ಬಗ್ಗೆ ಸದಾ ಪ್ರಯತ್ನಿಸುತ್ತಿದ್ದರು.

ಒಮ್ಮೆ ಅವರು ಕುಳಿತಿದ್ದಾಗ ಒಬ್ಬ ಶ್ರೀಮಂತ ವ್ಯಕ್ತಿ ಅವರ ಮುಂದಿನಿಂದ

ದಾಟಿ ಹೋದನು. ಆಗ ಅವರು ತನ್ನೊಬ್ಬ ಸಂಗಡಿಗನೊಂದಿಗೆ, "ಈ ವ್ಯಕ್ತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದರು. ಆತನು ಹೀಗೆ ಉತ್ತರಿಸಿದನು:

"ಈ ವ್ಯಕ್ತಿ ಗೌರವಾರ್ಹನೂ ಶ್ರೀಮಂತರಲ್ಲೊಬ್ಬನೂ ಆಗಿರುವನು. ಅವನು ಯಾವುದಾದರೂ ಹೆಣ್ಣನ್ನು ಮುದುವೆಯಾಗಲು ಬಯಸಿದರೂ ಅವನ ಅಪೇಕ್ಷೆ ಅಂಗೀಕರಿಸಲ್ಪಡುವುದು. ಅವನು ಯಾರ ಬಗ್ಗೆಯಾದರೂ ಶಿಫಾರಸ್ಸು ಮಾಡಿದರೆ ಅವನ ಶಿಫಾರಸ್ಸು ಮನ್ನಣೆ ಪಡೆಯುವುದು."

ಹಝ್ರತ್ ಪೈಗಂಬರ್(ಸ) ಆ ಮಾತುಗಳನ್ನು ಆಲಿಸಿ ಮೌನಾವಲಂಬಿ ಯಾದರು. ಅನಂತರ ಅಲ್ಲಿಂದ ಇನ್ನೊಬ್ಬ ಬಡವ ಮತ್ತು ನಿರ್ಗತಿಕನಂತೆ ತೋರುವವನು ದಾಟಿ ಹೋದನು. ಆಗ ಹಝ್ರತ್ ಪೈಗಂಬರ್(ಸ) ತನ್ನ ಸಂಗಡಿಗನೊಂದಿಗೆ, "ಈಗ ಹೋದವನ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದು ಕೇಳಿದರು. ಆಗ ಆತನು ಹೇಳಿದನು: "ಅವನು ಬಡವನಾಗಿದ್ದಾನೆ. ಅವನು ಯಾವ ಹುಡುಗಿಯುನ್ನು ಮದುವೆಯಾಗಲು ಅಪೇಕ್ಷಿಸಿದರೂ ಅವನ ಅಪೇಕ್ಷೆ ಅಂಗೀಕರಿಸಲ್ಪಡಲಾರದು. ಅವನು ಯಾರ ಬಗ್ಗೆಯಾದರೂ ಶಿಫಾರಸ್ಸು ಮಾಡಿದರೆ ಅದಕ್ಕೆ ಮಾನ್ಯತೆ ದೊರಕಲಾರದು. ಅವನು ಏನನ್ನಾದರೂ ಹೇಳಲು ಬಯಸಿದರೆ ಅವನ ಮಾತುಗಳನ್ನು ಯಾರೂ ಗಮನಿಸಲಾರರು."

ಈ ಮಾತುಗಳನ್ನು ಕೇಳಿ ಹಝ್ರತ್ ಪೈಗಂಬರ್(ಸ) ಹೇಳಿದರು: "ಈ ಲೋಕವನ್ನು ಬಂಗಾರದಿಂದ ತುಂಬಿದರೆ ಆ ಬಂಗಾರ ಎಷ್ಟು ಬೆಲೆ ಬಾಳುವುದೋ ಅದಕ್ಕಿಂತಲೂ ಈ ಬಡ ಮನುಷ್ಯನ ಬೆಲೆ ಹೆಚ್ಚಾಗಿದೆ." (ಬುಖಾರಿ)

ಒಬ್ಬ ಬಡ ಮಹಿಳೆ ಮಸ್‌ಜಿದನ್ನು ಗುಡಿಸಿ ಶುಚಿಯಾಗಿರಿಸುತ್ತಿದ್ದಳು. ಹಝ್ರತ್ ಪೈಗಂಬರ್(ಸ) ಕೆಲವು ದಿನ ಆಕೆಯನ್ನು ಕಾಣಲಿಲ್ಲ. ಅವರು ಕೇಳಿದರು: "ಆ ಮಹಿಳೆ ಕಾಣಿಸುವುದಿಲ್ಲವಲ್ಲ?" ಆಗ ಜನರು, "ಆಕೆ ಮೃತಳಾಗಿದ್ದಾಳೆ" ಎಂದು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಆಕೆ ಮೃತಳಾದಾಗ ನನಗೇಕೆ ನೀವು ತಿಳಿಸಲಿಲ್ಲ? ನಾನು ಸಹ ಆಕೆಯ ಮೃತ ಶರೀರದ ಅಂತಿಮ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದೆ." ಅನಂತರ ಹೇಳಿದರು: "ಆಕೆ ಬಡವಳಾದ ಕಾರಣ ನೀವು ತಾತ್ಸಾರದಿಂದ ವರ್ತಿಸಿದಿರಿ, ಹೀಗೆ ಮಾಡಿದುದು ಸರಿಯಾಗಿರಲಿಲ್ಲ. ಆಕೆಯ ಗೋರಿ ಎಲ್ಲಿದೆ ಎಂದು ತೋರಿಸಿರಿ." ಅನಂತರ ಅವರು ಆ ಮಹಿಳೆಯ ಗೋರಿಯ ಬಳಿಗೆ ಹೋಗಿ ಆಕೆಗೋಸ್ಕರ ಪ್ರಾರ್ಥಿಸಿದರು. (ಬುಖಾರಿ)

ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಾ ಇದ್ದರು: "ಕೆಲವು ಜನರು ಹೇಗಿರುತ್ತಾರೆಂದರೆ, ಅವರ ತಲೆಗೂದಲು ಕೆದರಿರುತ್ತದೆ. ಅವರ ಶರೀರದಲ್ಲಿ ಮಣ್ಣು ಮುಸುಕಿರುತ್ತದೆ. ಅಂತಹ ಜನರು ಯಾರನ್ನಾದರೂ ಕಾಣಲು ಹೋದರೆ ಜನರು ತಮ್ಮ ಮನೆ ಬಾಗಿಲುಗಳನ್ನು ಮುಚ್ಚಿ ಬಿಡುತ್ತಾರೆ. ಆದರೆ ಅಂತಹ ಜನರು ಅಲ್ಲಾಹನ ಆಣೆ ಹಾಕಿ ಏನಾದರೂ ಹೇಳಿದರೆ ಅಲ್ಲಾಹನಿಗೆ ಅಂತಹ ಜನರ ಬಗ್ಗೆ ಎಷ್ಟು ಗೌರವ ಭಾವನೆ ಇರುತ್ತದೆ ಎಂದರೆ ಅವರು ಪ್ರಮಾಣ ಮಾಡಿ ಹೇಳಿದುದನ್ನು



ಅಲ್ಲಾಹನು ಈಡೇರಿಸುತ್ತಾನೆ." (ಮುಸ್ಲಿಮ್)

ಒಮ್ಮೆ, ಹಿಂದೆ ಗುಲಾಮರಾಗಿದ್ದು ಅನಂತರ ಸ್ವತಂತ್ರರಾಗಿರುವ ಕೆಲವು ಬಡವರಾದ ಶಿಷ್ಯರು ಕುಳಿತುಕೊಂಡಿದ್ದರು. ಅವರ ಮುಂದೆ ಅಬೂ ಸುಫ್‌ಯಾನ್(ರ) ದಾಟಿ ಹೋಗುವಾಗ ಅವರು ಇಸ್ಲಾಮ್ ಜಯಗಳಿಸಿದ ಬಗ್ಗೆ ಪ್ರಸ್ತಾಪಿಸಿದರು. ಅವರ ಮಾತುಗಳನ್ನು ಹಝ್ರತ್ ಅಬೂಬಕರ್(ರ) ಆಲಿಸುತ್ತಿದ್ದರು. ಅವರಿಗೆ ಆ ಜನರ ಮಾತು ಹಿಡಿಸಲಿಲ್ಲ. ಅವರು ಖುರೈಶ್ ಗೋತ್ರದ ಮುಖಂಡನನ್ನು ಅಪಮಾನಿಸಿದರು ಎಂದು ಅವರು ಭಾವಿಸಿದರು. ಅವರು ಆ ಜನರ ಮುಂದೆ ಹೋಗಿ, "ನೀವು ಖುರೈಶರ ಮುಖಂಡನನ್ನು ಮತ್ತು ಅವರ ಅಧಿಕಾರಿಯನ್ನು ಅಪಮಾನಿಸುತ್ತಿರುವಿರಿ" ಎಂದು ಹೇಳಿದರು. ಅನಂತರ ಹಝ್ರತ್ ಅಬೂಬಕರ್ ಅಲ್ಲಿಂದ ಹೋಗಿ ಹಝ್ರತ್ ಪೈಗಂಬರರಿಗೆ(ಸ) ಆ ಬಗ್ಗೆ ದೂರಿತ್ತರು. ಆಗ ಹಝ್ರತ್ ಪೈಗಂಬರ್ ಹೇಳಿದರು: "ಓ ಅಬೂಬಕರ್, ನೀವು ಪ್ರಾಯಶಃ ಅಲ್ಲಾಹನ ವಿಶಿಷ್ಟ ದಾಸರನ್ನು ಕೋಪಗೊಳ್ಳುವಂತೆ ಮಾಡಿರುವಿರಿ. ನೀವು ಹಾಗೆ ಮಾಡಿದ್ದರೆ, ನೆನಪಿಡಿರಿ. ನಿಮ್ಮ ಪ್ರಭುವಾದ ಅಲ್ಲಾಹನೂ ನಿಮ್ಮೊಂದಿಗೆ ಕೋಪಗೊಳ್ಳುವನು."

ಹಝ್ರತ್ ಅಬೂಬಕರ್(ರ) ಆಗಲೇ ಅಲ್ಲಿಂದ ಹೊರಟು ಆ ಜನರ ಸಮೀಪಕ್ಕೆ ಹೋಗಿ, "ಓ ನನ್ನ ಸಹೋದರರೇ, ನೀವು ನನ್ನ ಮಾತಿನಿಂದ ಕೋಪಗೊಂಡಿರುವಿರೇನು?" ಎಂದು ಕೇಳಿದರು: ಆ ಜನರು ಹೇಳಿದರು: "ಓ ನಮ್ಮ ಸಹೋದರ, ನಾವು ನಿಮ್ಮ ಬಗ್ಗೆ ಸಿಟ್ಟು ಹೊಂದಿಲ್ಲ. ಅಲ್ಲಾಹನು ನಿಮ್ಮ ತಪ್ಪನ್ನು ಕ್ಷಮಿಸಲಿ." (ಮುಸ್ಲಿಮ್)

ಹಝ್ರತ್ ಪೈಗಂಬರ್(ಸ) ಬಡವರ ಗೌರವವನ್ನು ಕಾಪಾಡಿ ಅವರ ಅವಶ್ಯಕತೆಗಳನ್ನು ಈಡೇರಿಸುವುದರ ಜೊತೆಗೆ ಅವರಿಗೆ ಆತ್ಮಾಭಿಮಾನದ ಬಗ್ಗೆ ಪಾಠ ಸಹ ಕಲಿಸುತ್ತಿದ್ದರು. ಏನನ್ನಾದರೂ ಇತರರಿಂದ ಬೇಡಿ ಪಡಕೊಳ್ಳಬಾರದೆಂದು ಅವರು ಉಪದೇಶಿಸುತ್ತಿದ್ದರು. ಅವರು ಯಾವಾಗಲೂ ಹೀಗೆ ಹೇಳುತ್ತಿದ್ದರು: "ಒಂದು ಖರ್ಜೂರ ಅಥವಾ ಎರಡು ಖರ್ಜೂರ, ಒಂದು ಹಿಡಿ ಅನ್ನ ಅಥವಾ ಎರಡು ಹಿಡಿ ಅನ್ನದಿಂದ ತೃಪ್ತಿಯನ್ನು ಪಡೆಯಬಲ್ಲವನಲ್ಲ ಮಿಸ್ಕೀನ್ (ನಿರ್ಗತಿಕ.) ಎಷ್ಟು ಕಷ್ಟವನ್ನನುಭವಿಸಿದರೂ ಏನನ್ನೂ ಬೇಡದವನೇ ಮಿಸ್ಕೀನ್." (ಬುಖಾರಿ)

ಹಝ್ರತ್ ಪೈಗಂಬರ್(ಸ) ತನ್ನ ಅನುಯಾಯಿಗಳೊಂದಿಗೆ ಹೇಳುತ್ತಿದ್ದರು: "ಬಡ ಜನರನ್ನು ಆಮಂತ್ರಿಸಿರದ ಸತ್ಕಾರ ಕೂಟವು ಅತ್ಯಂತ ಕೀಳು ಮಟ್ಟದ ಸತ್ಕಾರ ಕೂಟವಾಗಿದೆ." (ಬುಖಾರಿ).

ಹಝ್ರತ್ ಆಯಿಶಾ(ರ) ಹೇಳುತ್ತಾರೆ: "ಒಮ್ಮೆ ಒಬ್ಬ ಬಡ ಮಹಿಳೆ ನನ್ನ ಬಳಿಗೆ ಬಂದಳು, ಆಕೆಯ ಜೊತೆಗೆ ಇಬ್ಬರು ಹೆಮ್ಮಕ್ಕಳಿದ್ದರು. ಆಗ ನಮ್ಮ ಮನೆಯಲ್ಲಿ ಒಂದು ಖರ್ಜೂರ ಹಣ್ಣಿನ ಹೊರತು ಬೇರೆ ಏನೂ ಇರಲಿಲ್ಲ. ನಾನು ಆ

ಖರ್ಜೂರವನ್ನು ಆಕೆಗೆ ಕೊಟ್ಟೆನು. ಆಕೆ ಆ ಖರ್ಜೂರವನ್ನು ಎರಡು ಪಾಲು ಮಾಡಿ ತನ್ನ ಇಬ್ಬರು ಹೆಮ್ಮಕ್ಕಳಿಗೆ ತಿನ್ನಿಸಿ ಅಲ್ಲಿಂದ ಹೋದಳು. ಹಝ್ರತ್ ಪೈಗಂಬರ್ ಮನೆಗೆ ಬಂದಾಗ ನಾನು ಆ ವಿಷಯವನ್ನು ಅವರಿಗೆ ತಿಳಿಸಿದೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಯಾವ ಬಡವನ ಮನೆಯಲ್ಲಿ ಹೆಮ್ಮಕ್ಕಳಿದ್ದಾರೋ, ಆತನು ಅವರೊಂದಿಗೆ ಉತ್ತಮವಾಗಿ ವರ್ತಿಸಿದರೆ ಅಲ್ಲಾಹನು ಅವನನ್ನು ನರಕದ ಶಿಕ್ಷೆಯಿಂದ ರಕ್ಷಿಸುವನು." ಅನಂತರ ಹೇಳಿದರು: "ಆ ಮಹಿಳೆಯ ವರ್ತನೆಯ ಕಾರಣದಿಂದ ಅಲ್ಲಾಹನು ಆಕೆಯನ್ನು ಸ್ವರ್ಗಕ್ಕೆ ಅರ್ಹಳನ್ನಾಗಿ ಮಾಡುವನು." (ಮುಸ್ಲಿಮ್)

ಇದೇ ರೀತಿ ಹಝ್ರತ್ ಪೈಗಂಬರರಿಗೆ(ಸ) ತಮ್ಮ ಶ್ರೀಮಂತ ಶಿಷ್ಯರಾದ ಸಅದ್(ರ) ತಾನು ಬೇರೆ ಕೆಲವರಿಗಿಂತ ಶ್ರೇಷ್ಠನೆಂದು ಹೇಳುತ್ತಿರುವುದಾಗಿ ತಿಳಿಯಿತು. ಹಝ್ರತ್ ಪೈಗಂಬರ್ ಈ ವಿಷಯವನ್ನು ಅರಿತುಕೊಂಡಾಗ ಸಅದ್‌ರೊಂದಿಗೆ ಹೇಳಿದರು: "ನಿಮ್ಮ ಈ ಶಕ್ತಿ ಸಾಮರ್ಥ್ಯಗಳು ಮತ್ತು ಸಂಪತ್ತು ನಿಮ್ಮ ಭುಜಬಲದಿಂದ ನಿಮಗೆ ದೊರಕಿತು ಎಂದು ನೀವು ಭಾವಿಸುತ್ತೀರೇನು? ಹಾಗೆ ಖಂಡಿತ ಅಲ್ಲ. ನಿಮ್ಮ ಶಕ್ತಿ ಸಾಮರ್ಥ್ಯಗಳು, ನಿಮ್ಮ ಸಂಪತ್ತು ಎಲ್ಲವೂ ಬಡವರ ದುಡಿಮೆಯ ಮೂಲಕವೇ ಬರುತ್ತವೆ."

ಹಝ್ರತ್ ಪೈಗಂಬರ್(ಸ) ಈ ಪ್ರಾರ್ಥನೆ ಮಾಡುತ್ತಿದ್ದರು: "ಅಲ್ಲಾಹುಮ್ಮ ಅಹ್‌ಯೀನೀ ಮಿಸ್‌ಕೀನನ್ ವ ಅಮಿತ್‌ನೀ ಮಿಸ್‌ಕೀನನ್ ವಹ್‌ಶುರ್‌ನೀ ಫೀ ಝುಮ್ರತಿಲ್ ಮಸಾಕೀನ ಯೌಮಲ್ ಖಿಯಾಮತಿ." ಅಂದರೆ, ಓ ಅಲ್ಲಾಹ್, ನನ್ನನ್ನು ಬಡತನದಲ್ಲಿ ಜೀವಿಸುವಂತೆ ಮಾಡು, ನನ್ನನ್ನು ಬಡತನದಲ್ಲಿ ಮೃತಪಡಿಸು ಮತ್ತು ಪುನರುತ್ಥಾನದ ದಿನ ಬಡವರ ಗುಂಪಿನಲ್ಲಿಯೇ ಪುನರುಜ್ಜೀವನಗೊಳಿಸು. (ತಿರ್‌ಮಿಝಿ).

ಒಮ್ಮೆ ಹಝ್ರತ್ ಪೈಗಂಬರ್(ಸ) ಪೇಟೆಯಲ್ಲಿ ನಡೆಯುತ್ತಾ ಹೋಗುತ್ತಿದ್ದರು. ಆಗ ಅವರ ಕುರೂಪಿಯಾದ ಒಬ್ಬ ಬಡ ಶಿಷ್ಯ ಬೇಸಗೆಯ ಕಡು ಬಿಸಿಲಲ್ಲಿ ಹೊರೆಗಳನ್ನು ಹೊರುತ್ತಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗುತ್ತಿರುವುದನ್ನು ಕಂಡರು. ಆ ಬಡ ಶಿಷ್ಯ ಮೊದಲೇ ಕುರೂಪಿಯಾಗಿದ್ದು, ಬೆವರು ಮತ್ತು ಧೂಳಿನಿಂದ ಆವರಿಸಲ್ಪಟ್ಟುದರಿಂದ ಇನ್ನಷ್ಟು ಕುರೂಪಿಯಾಗಿ ಕಾಣಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಆ ಶಿಷ್ಯನ ಮುಖದಲ್ಲಿ ಆಯಾಸ ಮತ್ತು ಬೇಸರದ ಚಿಹ್ನೆಗಳನ್ನು ಕಂಡರು. ಅವರು ಆ ಶಿಷ್ಯನ ಹಿಂದೆ ಮೌನವಾಗಿ ಹೋಗಿ, ಮಕ್ಕಳು ಆಟವಾಡುವಾಗ ಒಬ್ಬರಿನ್ನೊಬ್ಬರ ಹಿಂದೆ ಅವಿತುಕೊಂಡು ಹೋಗಿ ಸ್ನೇಹಿತನ ಕಣ್ಣನ್ನು ಕೈಗಳಿಂದ ಮುಚ್ಚಿ, ಹಾಗೆ ಕಣ್ಣು ಮುಚ್ಚಿದುದು ಯಾರೆಂದು ಪತ್ತೆ ಹಚ್ಚಲು ಹೇಳುವ ಹಾಗೆ, ಆ ಬಡ ಶಿಷ್ಯನ ಕಣ್ಣುಗಳನ್ನು ತನ್ನ ಕೈಗಳಿಂದ ಮುಚ್ಚಿದರು. ಆ ಶಿಷ್ಯ ಕೈಗಳಿಂದ ಹಝ್ರತ್ ಪೈಗಂಬರರ ತೋಳುಗಳನ್ನೂ, ಶರೀರವನ್ನೂ ಸವರಲು ತೊಡಗಿದರು. ತನ್ನ ಕಣ್ಣುಗಳನ್ನು ಮುಚ್ಚಿದುದು ಹಝ್ರತ್ ಪೈಗಂಬರರೆಂದು ಅವರಿಗೆ



ಮನವರಿಕೆಯಾಯಿತು. ತನ್ನಂತಹ ಬಡ, ಕುರೂಪಿ ಮತ್ತು ಇಂತಹ ದುಸ್ಥಿತಿಯಲ್ಲಿರುವವನನ್ನು ಹಝ್ರತ್ ಪೈಗಂಬರರ ಹೊರತು ಬೇರೆ ಯಾರೂ ಪ್ರೀತಿಸಲಾರರು ಎಂದು ಅವರು ಊಹಿಸಿದ್ದರು. ತನ್ನ ಬಗ್ಗೆ ಪ್ರೀತಿಯನ್ನು ಸೂಚಿಸುತ್ತಿರುವವರು ಹಝ್ರತ್ ಪೈಗಂಬರರೇ ಎಂದು ತಿಳಿದುಕೊಂಡಾಗ, ಆ ಶಿಷ್ಯ ಬೆವರು ಮತ್ತು ಧೂಳಿನಿಂದ ಆವೃತವಾದ ತನ್ನ ಶರೀರವನ್ನು ಹಝ್ರತ್ ಪೈಗಂಬರರ ಬಟ್ಟೆಗಳಿಗೆ ಒರೆಸಲು ತೊಡಗಿದರು. ಹಝ್ರತ್ ಪೈಗಂಬರರ ಪ್ರೀತಿ ಮತ್ತು ಮನೋಸ್ಥೈರ್ಯ ಎಷ್ಟಿದೆ ಎಂದು ಪ್ರಾಯಶಃ ಆ ವ್ಯಕ್ತಿ ನೋಡಲು ಬಯಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಮುಗುಳು ನಗುತ್ತಾ ಇದ್ದರು. ಅವರು ತನ್ನ ಶಿಷ್ಯನನ್ನು ಹಾಗೆ ಮಾಡುವುದರಿಂದ ತಡೆಯಲಿಲ್ಲ. ಆ ಶಿಷ್ಯ ಹಝ್ರತ್ ಪೈಗಂಬರರ(ಸ) ಬಟ್ಟೆಗಳನ್ನು ತನಗೆ ತೃಪ್ತಿಯಾಗುವ ತನಕ ಕೊಳಕು ಮಾಡಿದಾಗ ಹಝ್ರತ್ ಪೈಗಂಬರ್(ಸ) ತಮಾಷೆಗೆ ಹೇಳಿದರು: "ನನ್ನ ಬಳಿ ಒಬ್ಬ ಗುಲಾಮನಿದ್ದಾನೆ, ಯಾರಾದರೂ ಆತನನ್ನು ಖರೀದಿ ಮಾಡುವವರು ಇದ್ದಾರೆಯೋ?"

ಹಝ್ರತ್ ಪೈಗಂಬರರ(ಸ) ಈ ಮಾತು ತನ್ನನ್ನು ಭೂಮಿಯಿಂದ ಆಕಾಶಕ್ಕೆ ಏರಿಸಿದಂತೆ ಆ ಶಿಷ್ಯರಿಗೆ ಭಾಸವಾಯಿತು. ಹಝ್ರತ್ ಪೈಗಂಬರರ ಹೊರತು ಬೇರೆ ಯಾರು ತನ್ನನ್ನು ಗೌರವದಿಂದ ಕಾಣಬಲ್ಲರು. ಗುಲಾಮನನ್ನಾಗಿ ಖರೀದಿಸಲ್ಪಡುವ ಯೋಗ್ಯತೆ ಸಹ ತನಗಿಲ್ಲ ಎಂದು ಯೋಚಿಸುತ್ತಾ ಆ ಶಿಷ್ಯ ದುಃಖದಿಂದ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನನ್ನನ್ನು ಖರೀದಿಸುವವರು ಈ ಲೋಕದಲ್ಲಿ ಯಾರೂ ಇಲ್ಲ." ಆಗ ಹಝ್ರತ್ ಪೈಗಂಬರ್ ಹೇಳಿದರು: "ಹಾಗೆ ಹೇಳಬೇಡಿರಿ, ನಿಮ್ಮ ಮೌಲ್ಯ ಅಲ್ಲಾಹನ ದೃಷ್ಟಿಯಲ್ಲಿ ಬಹಳ ಹೆಚ್ಚಾಗಿದೆ." (ಮಿಶ್ಕಾತ್)

ಹಝ್ರತ್ ಪೈಗಂಬರ್(ಸ) ಸ್ವತಃ ಬಡವರ ಬಗ್ಗೆ ಕಾಳಜಿ ಹೊಂದಿದ್ದರಲ್ಲದೆ ಅವರು ತನ್ನ ಅನುಯಾಯಿಗಳೊಂದಿಗೆ ಬಡವರ ಬಗ್ಗೆ ಲಕ್ಷಿಸಲು ಯಾವಾಗಲೂ ಉಪದೇಶಿಸುತ್ತಿದ್ದರು. ಹಝ್ರತ್ ಅಬೂ ಮೂಸಾ ಅಶ್‌ಅರೀ(ರ) ಹೀಗೆ ವರದಿ ಮಾಡಿದ್ದಾರೆ:

ಹಝ್ರತ್ ಪೈಗಂಬರರ ಸಮೀಪಕ್ಕೆ ಯಾರಾದರೂ ಬೇಡಿಕೆಯೊಂದಿಗೆ ಬಂದರೆ ಅವರು ತನ್ನೊಂದಿಗೆ ಕುಳಿತವರೊಂದಿಗೆ ಹೇಳುತ್ತಿದ್ದರು: "ನೀವು ಸಹ ಆತನಿಗೆ ಸಹಾಯ ನೀಡಿರಿ. ಒಳ್ಳೆಯ ಕೆಲಸದಲ್ಲಿ ಸಹಾಯ ಮಾಡಿದ ಪುಣ್ಯದಲ್ಲಿ ಪಾಲುಗಾರರಾಗಿರಿ." (ಬುಖಾರಿ)

ಈ ರೀತಿ ಹಝ್ರತ್ ಪೈಗಂಬರ್(ಸ) ಬಡವರಿಗೆ ಸಹಾಯ ನೀಡಬೇಕಾದ ಮನೋಭಾವನೆಯನ್ನು ತನ್ನ ಅನುಯಾಯಿಗಳಲ್ಲಿ ಉಂಟು ಮಾಡುತ್ತಿದ್ದರು. ಅದರೊಂದಿಗೆ, ಸಹಾಯ ಅಪೇಕ್ಷಿಸುವವನ ಹೃದಯದಲ್ಲಿ ಬೇರೆಯವರ ಬಗ್ಗೆ ಪ್ರೀತಿಯನ್ನು ಉಂಟುಮಾಡಲು ಸಹ ಪ್ರಯತ್ನಿಸುತ್ತಿದ್ದರು.

## ಬಡವರ ಸಂಪತ್ತಿನ ಸಂರಕ್ಷಣೆ

ಇಸ್ಲಾಮ್ ಜಯಗಳಿಸಿದ ನಂತರ ಹಝ್ರತ್ ಪೈಗಂಬರರ(ಸ) ವಶಕ್ಕೆ ಬಹಳ ಸಂಪತ್ತು ಲಭಿಸಿತು. ಅದನ್ನು ಅವರು ಅರ್ಹರಿಗೆ ಹಂಚುತ್ತಿದ್ದರು. ಒಮ್ಮೆ ಹಝ್ರತ್ ಪೈಗಂಬರರ ಸ್ವಾಧೀನಕ್ಕೆ ಬಹಳ ಸಂಪತ್ತು ದೊರೆತಾಗ ಅವರ ಪುತ್ರಿ ಹಝ್ರತ್ ಫಾತಿಮ(ರ) ಅವರ ಸಮೀಪಕ್ಕೆ ಬಂದು ಹೇಳಿದರು: "ಕಡೆಯುವ ಕಲ್ಲಿನಿಂದ ಹಿಟ್ಟು ಬೀಸಿ ಬೀಸಿ ನನ್ನ ಕೈಗಳು ಗಾಯಗೊಂಡಿವೆ. ನೀವು ನಿಮಗೆ ಲಭಿಸಿದ ಸಂಪತ್ತಿನಿಂದ ಒಬ್ಬ ದಾಸನನ್ನೋ ದಾಸಿಯನ್ನೋ ನೀಡಿದರೆ ನನಗೆ ಕೆಲಸಕ್ಕೆ ಸಹಾಯವಾಗುವುದು."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನನ್ನ ಮಗಳೇ, ಫಾತಿಮ, ನೀನು ದಾಸ ಅಥವಾ ದಾಸಿಯನ್ನು ನಿನ್ನ ಸಹಾಯಕ್ಕೆ ನೇಮಿಸುವುದಕ್ಕಿಂತ ಹೆಚ್ಚು ಬೆಲೆಬಾಳುವುದನ್ನು ನಿನಗೆ ಹೇಳಿಕೊಡುತ್ತೇನೆ. ನೀನು ನಿದ್ರಿಸಲು ಮಲಗುವಾಗ 33 ಸಾರಿ ಅಲ್‌ಹಮ್ದುಲಿಲ್ಲಾಹ್ (ಎಲ್ಲಾ ಸ್ತುತಿಗಳು ಅಲ್ಲಾಹನಿಗೆ ಅರ್ಹವಾಗಿವೆ.), 33 ಸಾರಿ ಸುಬ್‌ಹಾನಲ್ಲಾಹ್ (ಅಲ್ಲಾಹನು ಪರಿಶುದ್ದನು) ಮತ್ತು 34 ಸಾರಿ ಅಲ್ಲಾಹು ಅಕ್‌ಬರ್ (ಅಲ್ಲಾಹನು ದೊಡ್ಡವನು) ಎಂದು ಹೇಳು. ಇದು ನಿನಗೆ ದಾಸ ಅಥವಾ ದಾಸಿಗಿಂತ ಹೆಚ್ಚು ಉತ್ತಮವಾಗಿರುವುದು." (ಬುಖಾರಿ)

ಒಮ್ಮೆ ಸ್ವಲ್ಪ ಹಣ ಬಂದಾಗ ಹಝ್ರತ್ ಪೈಗಂಬರ್(ಸ) ಅದನ್ನು ಹಂಚಿದರು. ಆಗ ಒಂದು ನಾಣ್ಯ ಜಾರಿ ಬಿದ್ದು ಯಾವುದೋ ವಸ್ತುವಿನ ಕೆಳಗೆ ಉಳಿಯಿತು. ಅವರು ಹಣವನ್ನು ಹಂಚುತ್ತಾ ಇದ್ದಾಗ ಈ ವಿಷಯ ಮರೆತುಹೋಯಿತು. ಹಣ ಹಂಚಿದ ನಂತರ ಅವರು ಮಸ್‌ಜಿದ್‌ಗೆ ಬಂದು ನಮಾಝ್‌ಗೆ ನೇತೃತ್ವ ವಹಿಸಿದರು. ಅವರು ನಮಾಝ್ ಅನುಷ್ಠಿಸಿದ ನಂತರ ಎಂದಿನ ಹಾಗೆ ಅಲ್ಲಾಹನ ನಾಮಸ್ಮರಣೆ ಮಾಡಲು ಕುಳಿತುಕೊಳ್ಳುವ ಅಥವಾ ಜನರ ಅಹವಾಲು ಕೇಳಲು ಮತ್ತು ಅವರ ಸಮಸ್ಯೆಗಳಿಗೆ ಉತ್ತರ ಕೊಡಲು ನಿಲ್ಲುವ ಬದಲು ಬೇಗನೆ ಮನೆಗೆ ಹೋದರು. ಅದರ ಬಗ್ಗೆ ಕೆಲವು ಶಿಷ್ಯರು ಹೀಗೆ ಹೇಳುತ್ತಾರೆ: "ಹಝ್ರತ್ ಪೈಗಂಬರ್ ಧುಮುಕುತ್ತಾ ಬೇಗನೆ ಮನೆಗೆ ತೆರಳಿ ಕಾಣದಾದ ದೀನಾರನ್ನು ಹುಡುಕತೊಡಗಿದರು." ಹಝ್ರತ್ ಪೈಗಂಬರ್(ಸ) ಬಿದ್ದುಹೋದ ಆ ನಾಣ್ಯವನ್ನು ಹೊರಗೆ ತಂದು ಒಬ್ಬ ಅರ್ಹ ವ್ಯಕ್ತಿಗೆ ಕೊಡುತ್ತಾ ಹೇಳಿದರು: "ಈ ದೀನಾರ್ ಬಿದ್ದು ಹೋಗಿತ್ತು. ನಾನು ಅದನ್ನು ಮರೆತು ಬಿಟ್ಟಿದ್ದೆ. ನಮಾಝ್ ಮಾಡುವಾಗ ನನಗೆ ಅದರ ನೆನಪುಂಟಾಯಿತು. ನಾನು ಮೃತನಾದರೆ ಮತ್ತು ಸಾರ್ವಜನಿಕರ ಸ್ವತ್ತಾದ ಈ ನಾಣ್ಯ ನನ್ನ ಮನೆಯಲ್ಲಿ ಬಿದ್ದು ಇದ್ದರೆ ನಾನು ಅಲ್ಲಾಹನಿಗೆ ಏನು ಉತ್ತರ ಕೊಡಬಲ್ಲೆನು ಎಂದು ಯೋಚಿಸುತ್ತಾ ನಾನು ಆತಂಕಗೊಂಡೆನು. ಆದುದರಿಂದ ಕೂಡಲೇ ನಾನು ಮನೆಯೊಳಗೆ ಹೋದೆನು ಮತ್ತು ನಾಣ್ಯವನ್ನು ಹುಡುಕಿ ತಂದೆನು." (ಬುಖಾರಿ)

ಇದಕ್ಕಿಂತಲೂ ವಿಶೇಷವಾದ ವಿಷಯವೇನೆಂದರೆ, ಅವರು ದಾನಧರ್ಮದ ಹಣವನ್ನು ತನ್ನ ಸಂತಾನಕ್ಕೆ ನಿಷಿದ್ದ ಗೊಳಿಸಿದರು. ಹಝ್ರತ್ ಪೈಗಂಬರರ(ಸ)



ಬಗ್ಗೆ ಜನರಿಗಿದ್ದ ಗೌರವಾದರಗಳ ಕಾರಣದಿಂದ ಅವರು ದಾನಧರ್ಮದ ಹಣವನ್ನೆಲ್ಲಾ ತನ್ನ ಸಂತಾನಕ್ಕೆ ಸೇರಿದವರಿಗೆ ಮಾತ್ರ ವಿತರಣೆ ಮಾಡಿ ಬಡವರನ್ನು ಅದರಿಂದ ವಂಚಿತರನ್ನಾಗಿ ಮಾಡಬಾರದೆಂಬ ಉದ್ದೇಶದಿಂದ ಹೀಗೆ ಆಜ್ಞಾಪಿಸಿದರು.

ಒಮ್ಮೆ ದಾನ ಧರ್ಮದ ಸ್ವಲ್ಪ ಖರ್ಜೂರವನ್ನು ಅವರ ಮುಂದೆ ತರಲಾಯಿತು. ಆಗ ಅವರ ಮೊಮ್ಮಗನಾದ ಹಝ್ರತ್ ಹಸನ್(ರ) (ಆಗ ಅವರ ಪ್ರಾಯ ಎರಡೂವರೆ ವರ್ಷವಾಗಿತ್ತು.) ಅವರ ಸಮೀಪ ಕುಳಿತ್ತಿದ್ದರು. ಹಝ್ರತ್ ಹಸನ್ ಒಂದು ಖರ್ಜೂರವನ್ನು ತನ್ನ ಬಾಯಿಗೆ ಹಾಕಿದರು. ಆಗ ಹಝ್ರತ್ ಪೈಗಂಬರ್(ಸ) ಕೂಡಲೇ ಮಗುವಿನ ಬಾಯಿಗೆ ಬೆರಳು ತುರುಕಿಸಿ, ಆ ಖರ್ಜೂರವನ್ನು ಹೊರಗೆ ತೆಗೆದು ಹೇಳಿದರು: "ಇದು ನಮಗೆ ಸೇರಿದುದಲ್ಲ. ಇದು ಬಡ ಜನರಿಗೋಸ್ಕರ ಇರುವುದಾಗಿದೆ." (ಬುಖಾರಿ)

## ಗುಲಾಮರೊಂದಿಗೆ ಉತ್ತಮ ವರ್ತನೆ

ಗುಲಾಮರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಲು ಹಝ್ರತ್ ಪೈಗಂಬರ್(ಸ) ತನ್ನ ಅನುಯಾಯಿಗಳಿಗೆ ಯಾವಾಗಲೂ ಉಪದೇಶಿಸುತ್ತಿದ್ದರು. ಅವರು ಹೀಗೆ ನಿರ್ದೇಶಿಸಿದ್ದರು: "ಯಾರಾದರೂ ಒಬ್ಬ ಗುಲಾಮನನ್ನು ಹೊಂದಿದ್ದರೆ ಮತ್ತು ಅವನನ್ನು ಸ್ವತಂತ್ರನನ್ನಾಗಿ ಮಾಡಲು ಆ ವ್ಯಕ್ತಿಗೆ ಸಾಧ್ಯವಾಗುವುದಿಲ್ಲವಾದರೆ, ಅವನು ಯಾವಾಗಲಾದರೂ ತನ್ನ ಗುಲಾಮನಿಗೆ ಹೊಡೆದರೆ ಅಥವಾ ಅವನನ್ನು ಬೈದರೆ ಅದಕ್ಕಿರುವ ಪರಿಹಾರ ಆ ಗುಲಾಮನನ್ನು ವಿಮೋಚಿಸುವುದಾಗಿದೆ." (ಮುಸ್ಲಿಮ್)

ಇದೇ ರೀತಿ ಗುಲಾಮರನ್ನು ವಿಮೋಚಿಸುವ ಬಗ್ಗೆ ಹಝ್ರತ್ ಪೈಗಂಬರ್(ಸ) ಯಾವಾಗಲೂ ಆಗ್ರಹಪೂರ್ಣವಾಗಿ ಉಪದೇಶಿಸುತ್ತಿದ್ದರು– ಯಾರಾದರೂ ಒಬ್ಬ ಗುಲಾಮನನ್ನು ವಿಮೋಚಿಸಿದರೆ ಅಲ್ಲಾಹನು ಆ ಗುಲಾಮನ ಪ್ರತಿಯೊಂದು ಅಂಗಕ್ಕೆ ಪ್ರತಿಯಾಗಿ ವಿಮೋಚಿಸಿದವನ ಪ್ರತಿಯೊಂದು ಅಂಗವನ್ನು ನರಕಾಗ್ನಿಯಿಂದ ನಿಷಿದ್ಧಗೊಳಿಸುವನು ಎಂದು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: "ಗುಲಾಮನಿಗೆ ಎಷ್ಟು ಕೆಲಸ ಮಾಡಲು ಸಾಧ್ಯವೋ ಅಷ್ಟೇ ಕೆಲಸವನ್ನು ಅವನಿಂದ ಮಾಡಿಸಿರಿ. ಒಬ್ಬ ಗುಲಾಮನಿಂದ ಕೆಲಸ ಮಾಡಿಸುವಾಗ ಅವನ ಜೊತೆಗೂಡಿ ಕೆಲಸ ಮಾಡಿ ಅವನಲ್ಲಿ ಕೀಳರಿಮೆ ಉಂಟಾಗದಂತೆ ನೋಡಬೇಕು." (ಮುಸ್ಲಿಮ್)

ಒಬ್ಬ ಗುಲಾಮನ ಜೊತೆಗೆ ಪ್ರಯಾಣಕ್ಕೆ ಹೊರಟಾಗ ಅವನನ್ನು ಮಾಲೀಕನು ತನ್ನೊಂದಿಗೆ ಸವಾರಿ ಮೃಗದ ಮೇಲೆ ಸವಾರಿ ಮಾಡಿಸಬೇಕೆಂದೂ ಅಥವಾ ಒಬ್ಬರ ನಂತರ ಇನ್ನೊಬ್ಬರ ಪ್ರಕಾರ ಮೃಗದ ಮೇಲೆ ಸವಾರಿ ಮಾಡಬೇಕೆಂದೂ ಹಝ್ರತ್ ಪೈಗಂಬರ್(ಸ) ಆದೇಶಿಸಿದರು.

ಹಝ್ರತ್ ಪೈಗಂಬರ್(ಸ) ಗುಲಾಮರ ಬಗ್ಗೆ ಎಷ್ಟು ಒತ್ತಿ ಹೇಳುತ್ತಿದ್ದರೆಂದರೆ,

ಇಸ್ಲಾಮ್ ಧರ್ಮಕ್ಕೆ ಸೇರಿದ ನಂತರ ಯಾವಾಗಲೂ ಹಝ್ರತ್ ಪೈಗಂಬರರ(ಸ) ಜೊತೆಗಿದ್ದು ಹಝ್ರತ್ ಪೈಗಂಬರರ ಉಪದೇಶಗಳನ್ನು ಹೆಚ್ಚು ಹೆಚ್ಚಾಗಿ ಆಲಿಸುತ್ತಿದ್ದ ಅವರ ಶಿಷ್ಯ ಹಝ್ರತ್ ಅಬೂ ಹುರೈರ(ರ) ಹೀಗೆ ಹೇಳುತ್ತಿದ್ದರು: "ಅಬೂ ಹುರೈರನ ಪ್ರಾಣವು ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಪ್ರಮಾಣ ಮಾಡಿ ಹೇಳುತ್ತೇನೆ – ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡುವ ಸಂದರ್ಭಗಳು ನನಗೆ ದೊರಕದೆ ಇರುತ್ತಿದ್ದರೆ, ನನಗೆ ಹಜ್ಜ್ ಮಾಡುವ ಸಂದರ್ಭಗಳು ದೊರಕದೆ ಇರುತ್ತಿದ್ದರೆ, ನಾನು ಸೇವೆ ಮಾಡುವುದು ಕಡ್ಡಾಯವಾಗಿರುವ ನನ್ನ ಮುದಿ ತಾಯಿ ಜೀವಂತವಾಗಿ ಇಲ್ಲದಿರುತ್ತಿದ್ದರೆ, ನಾನು ಗುಲಾಮನಾಗಿರುವ ಸ್ಥಿತಿಯಲ್ಲಿ ಮೃತನಾಗಲು ಇಷ್ಟ ಪಡುತ್ತಿದ್ದೆನು. ಏಕೆಂದರೆ ಹಝ್ರತ್ ಪೈಗಂಬರ್(ಸ) ಗುಲಾಮರ ಹಿತಕ್ಕಾಗಿ ಅತ್ಯಂತ ಉತ್ತಮ ಉಪದೇಶಗಳನ್ನು ನೀಡುತ್ತಾ ಇದ್ದರು." (ಮುಸ್ಲಿಮ್)

ಹಝ್ರತ್ ಮಅರೂರ್ ಬಿನ್ ಸವೀದ್(ರ) ಹೀಗೆ ವರದಿ ಮಾಡುತ್ತಾರೆ: "ಹಝ್ರತ್ ಪೈಗಂಬರ್(ಸ) ಶಿಷ್ಯರಾದ ಹಝ್ರತ್ ಅಬೂಝುರ್ ಗಫ್ಫಾರಿಯನ್ನು(ರ) ನಾನು ನೋಡಿದಾಗ ಅವರು ಧರಿಸಿದಂತಹ ಬಟ್ಟೆಗಳನ್ನು ಅವರ ಗುಲಾಮನು ಸಹ ಧರಿಸಿರುವುದಾಗಿ ಕಂಡೆನು. ನಾನು ಅವರೊಂದಿಗೆ ವಿಚಾರಿಸಿದೆ – 'ನಿಮ್ಮ ಬಟ್ಟೆಗಳು ಮತ್ತು ನಿಮ್ಮ ಗುಲಾಮನ ಬಟ್ಟೆಗಳು ಒಂದೇ ರೀತಿಯವು ಆಗಿರಲು ಕಾರಣವೇನು?' ಅವರು ಹೀಗೆ ಉತ್ತರ ನೀಡಿದರು – ಹಝ್ರತ್ ಪೈಗಂಬರ್(ಸ) ಜೀವಿಸಿದ್ದಾಗ ನಾನು ಒಬ್ಬ ವ್ಯಕ್ತಿಯ ಕುರಿತು ಆತನ ತಾಯಿಯು ಗುಲಾಮ ಮಹಿಳೆಯಾಗಿದ್ದಳು ಎಂಬುದನ್ನು ವ್ಯಂಗ್ಯವಾಗಿ ಸೂಚಿಸಿದೆ. ಆ ಮಾತನ್ನು ಆಲಿಸಿದ ಹಝ್ರತ್ ಪೈಗಂಬರ್(ಸ) ಹೇಳಿದರು: 'ನೀವು ಎಂತಹವರೆಂದರೆ, ನಿಮ್ಮಲ್ಲಿ ಈಗಲೂ ಅವಿಶ್ವಾಸದ ಕಾಲದ ಚಿಂತನೆಗಳು ಬಾಕಿಯಾಗಿ ಉಳಿದಿವೆ. ಗುಲಾಮರು ಯಾರು? ಅವರು ನಿಮ್ಮ ಸಹೋದರರಾಗಿದ್ದಾರೆ. ಅವರೇ ನಿಮ್ಮ ಶಕ್ತಿ ಸಾಮರ್ಥ್ಯಗಳ ಗಳಿಕೆಗೆ ಮಾರ್ಗವಾಗಿದ್ದಾರೆ. ಅಲ್ಲಾಹನ ಯಾವುದೋ ಉದ್ದೇಶದ ಕಾರಣದಿಂದ ಅವರು ಸ್ವಲ್ಪ ಕಾಲ ನಿಮ್ಮ ಅಧೀನಕೊಳ್ಳಪಡುತ್ತಾರೆ. ಯಾರ ಸಹೋದರನು ಸೇವೆಗಾಗಿ ನಿಯುಕ್ತನಾಗಿ ಬರುತ್ತಾನೋ ಅವನಿಗೆ ನೀವು ತಿನ್ನುವುದನ್ನೇ ತಿನ್ನಲು ಕೊಡಬೇಕು. ನೀವು ಧರಿಸುವ ಬಟ್ಟೆಗಳಂತಹ ಬಟ್ಟೆಗಳನ್ನೇ ಅವನಿಗೂ ಧರಿಸಲು ಕೊಡಬೇಕು. ನಿಮ್ಮ ಗುಲಾಮನಿಗೆ ಮಾಡಲು ಸಾಧ್ಯವಿಲ್ಲದ ಕೆಲಸವನ್ನು ಅವನಿಂದ ಮಾಡಿಸಲು ಪ್ರಯತ್ನಿಸಬಾರದು. ನೀವು ಯಾವುದಾದರೂ ಕೆಲಸವನ್ನು ಮಾಡಲು ನಿಮ್ಮ ಗುಲಾಮನೊಂದಿಗೆ ಹೇಳಿದರೆ ನೀವು ಸಹ ಅವನ ಜೊತೆ ಸೇರಿ ಕೆಲಸ ಮಾಡಿರಿ.' " (ಮುಸ್ಲಿಮ್)

ಹಝ್ರತ್ ಪೈಗಂಬರ್(ಸ) ಹೀಗೆಯೂ ಹೇಳಿದ್ದರು: "ನಿಮ್ಮ ಕೆಲಸಗಾರ ನಿಮಗೆ ಆಹಾರ ತಂದರೆ ನೀವು ಅವನನ್ನು ನಿಮ್ಮ ಹತ್ತಿರ ಕುಳಿತುಕೊಳ್ಳಲು ಹೇಳಿ ಅದರಿಂದ ಸ್ವಲ್ಪವಾದರೂ ಆಹಾರ ಆವಶ್ಯಕವಾಗಿಯೂ ಅವನಿಗೆ ತಿನ್ನಲು ಕೊಡಿರಿ. ಏಕೆಂದರೆ ಅವನು ನಿಮಗೆ ಆಹಾರವನ್ನು ಪಾಕಮಾಡಿ ಅದರಲ್ಲಿ ತನ್ನ ಹಕ್ಕನ್ನು ಪಡೆಯುವ ಅರ್ಹತೆಯನ್ನೂ ಹೊಂದಿಕೊಂಡಿರುತ್ತಾನೆ." (ಮುಸ್ಲಿಮ್)



## ಮಾನವರ ಸೇವೆ ಮಾಡುವವರ ಬಗ್ಗೆ ಆದರ

ಮಾನವರ ಸೇವೆಯನ್ನು ಮಾಡಲಿಕ್ಕೋಸ್ಕರ ತಮ್ಮ ಸಮಯವನ್ನು ವಿನಿಯೋಗಿಸುವವರ ಬಗ್ಗೆ ಹಝ್ರತ್ ಪೈಗಂಬರರಿಗೆ(ಸ) ಬಹಳ ಗೌರವಾದರಗಳು ಇದ್ದುವು. ಒಮ್ಮೆ ತಾಯೀ ಗೋತ್ರದ ಜನರು ಹಝ್ರತ್ ಪೈಗಂಬರ್(ಸ) ವಿರುದ್ಧ ಯುದ್ಧ ಮಾಡಿದಾಗ ಆ ಗೋತ್ರದ ಕೆಲವರು ಸೆರೆಡಿಯಲ್ಪಟ್ಟು ಹಝ್ರತ್ ಪೈಗಂಬರರ(ಸ) ಮುಂದೆ ಹಾಜರುಗೊಳಿಸಲ್ಪಟ್ಟರು. ಅರಬ್ ದೇಶದಲ್ಲಿಯೇ ತನ್ನ ಔದಾರ್ಯಕ್ಕೆ ಪ್ರಸಿದ್ಧನಾಗಿ ಜೀವಿಸಿ ಮೃತನಾದ ಹಾತಿಮ್‌ತಾಯಿಯ ಪುತ್ರಿ ಆ ಸೆರೆಯಾಳುಗಳಲ್ಲಿ ಸೇರಿದ್ದಳು. ಆಕೆಯು ತಾನು ಹಾತಿಮ್‌ತಾಯಿಯ ಪುತ್ರಿ ಎಂದು ಹೇಳಿದಾಗ ಹಝ್ರತ್ ಪೈಗಂಬರ್(ಸ) ಆಕೆಯೊಂದಿಗೆ ಬಹಳ ಗೌರವಾದರಗಳಿಂದ ವರ್ತಿಸಿದರು. ಆಕೆಯ ಗೋತ್ರದ ಜನರಿಗೆ ವಿಧಿಸಿದ ಶಿಕ್ಷೆಯನ್ನು ಆಕೆಯ ಅಪೇಕ್ಷೆಯಂತೆ ರದ್ದುಗೊಳಿಸಿ ಅವರನ್ನು ಕ್ಷಮಿಸಿದರು. (ಅಸ್ಸೀರತುಲ್ ಹಲ್‌ಬಿಯ್ಯ ಸಂಪುಟ 3 ಪುಟ 227)

## ಮಹಿಳೆಯರೊಂದಿಗೆ ಉತ್ತಮ ನಡೆವಳಿಕೆ

ಹಝ್ರತ್ ಪೈಗಂಬರ್(ಸ) ಮಹಿಳೆಯರೊಂದಿಗೆ ಉತ್ತಮವಾಗಿ ವರ್ತಿಸುವ ಕುರಿತು ವಿಶೇಷ ಶ್ರದ್ಧೆ ವಹಿಸುತ್ತಿದ್ದರು. ಅವರು ಲೋಕದಲ್ಲಿ ಎಲ್ಲರಿಗಿಂತ ಮೊದಲು ಮಹಿಳೆಯರಿಗೆ ವಾರೀಸು ಹಕ್ಕುಗಳನ್ನು ನೀಡಿದರು. ಪುತ್ರರು ಮತ್ತು ಪುತ್ರಿಯರು ತಮ್ಮ ತಂದೆ ಮತ್ತು ತಾಯಿಯ ಸ್ವತ್ತಿನ ವಾರೀಸುದಾರರಾಗಿರುವರು ಎಂದು ಪವಿತ್ರ ಖುರ್‌ಆನ್ ಹೇಳಿದೆ. ಮಾತಾಪಿತೃಗಳನ್ನು ಪುತ್ರ ಅಥವಾ ಪುತ್ರಿಯ ವಾರೀಸುದಾರರನ್ನಾಗಿ ಸಹ ಮಾಡಲಾಗಿದೆ. ಪತ್ನಿ ತನ್ನ ಪತಿಯ ವಾರೀಸುದಾರರಲ್ಲಿ ಸೇರುತ್ತಾಳೆ. ಕೆಲವು ಸಂದರ್ಭಗಳಲ್ಲಿ ಸಹೋದರ, ಸಹೋದರಿಯನ್ನು ಸಹ ಮೃತನ ವಾರೀಸುದಾರನನ್ನಾಗಿ ಮಾಡಲಾಗಿದೆ. ಇಸ್ಲಾಮಿಗೆ ಮುಂಚಿತವಾಗಿ ಯಾವುದೇ ಧರ್ಮದಲ್ಲಿ ಮಹಿಳೆಯರಿಗೆ ಈ ರೀತಿಯ ವಾರೀಸು ಹಕ್ಕುಗಳು ದೊರೆತಿರಲಿಲ್ಲ. ಮಹಿಳೆಗೆ ಅವಳ ಸ್ವಂತ ಸಂಪತ್ತಿನಲ್ಲಿ ಪೂರ್ಣ ಅಧಿಕಾರ ನೀಡಲಾಯಿತು. ಒಬ್ಬ ಮಹಿಳೆಯ ಪತಿಗೆ, ಪತಿಯಾಗಿರುವ ಕಾರಣದಿಂದ ತನ್ನ ಪತ್ನಿಯ ಸ್ವತ್ತಿನಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರ ಇರುವುದಿಲ್ಲ. ಮಹಿಳೆ ತನ್ನ ಹಣವನ್ನು ಖರ್ಚು ಮಾಡುವ ಪೂರ್ಣ ಅಧಿಕಾರ ಹೊಂದಿರುತ್ತಾಳೆ.

ಹಝ್ರತ್ ಪೈಗಂಬರ್(ಸ) ಮಹಿಳೆಯರೊಂದಿಗೆ ಉತ್ತಮದಾದ ರೀತಿಯಲ್ಲಿ ವರ್ತಿಸುವುದರಲ್ಲಿ ಎಷ್ಟು ಮುಂದುವರಿದಿದ್ದರೆಂದರೆ, ಇಂತಹ ರೀತಿಯ ವರ್ತನೆಯ ಅಭ್ಯಾಸವನ್ನು ಹೊಂದಿರದ ಅರಬ್ ಜನರಿಗೆ ಈ ವಿಷಯಗಳನ್ನು ನೋಡಿ ಆಘಾತವಾಗುತ್ತಿತ್ತು.

ಹಝ್ರತ್ ಉಮರ್(ರ) ಹೀಗೆ ವರದಿ ಮಾಡಿದ್ದಾರೆ: "ನನ್ನ ಪತ್ನಿ ನನಗೆ

ಸಂಬಂಧಿಸಿದ ವಿಷಯಗಳಲ್ಲಿ ಕೆಲವು ಸಾರಿ ಹಸ್ತಕ್ಷೇಪ ಮಾಡಿದಾಗ ನಾನು ಆಕೆಯ ಆ ಪ್ರವೃತ್ತಿಯನ್ನು ಖಂಡಿಸಿ, 'ಪುರುಷ ಮಾಡುವ ಕೆಲಸಗಳ ಬಗ್ಗೆ ಸಲಹೆ ನೀಡಲು ಮಹಿಳೆಯರಿಗೆ ಹಕ್ಕು ಇದೆ ಎಂದು ಅರಬ್ ಜನತೆ ಎಂದೂ ಅಂಗೀಕರಿಸಿಲ್ಲ' ಎಂದು ಹೇಳುತ್ತಿದ್ದೆನು. ಆಗ ನನ್ನ ಪತ್ನಿ ಹೇಳುತ್ತಿದ್ದಳು – 'ನೀವು ಹೋಗಿರಿ, ಹಝ್ರತ್ ಪೈಗಂಬರರ(ಸ) ಪತ್ನಿಯರು ಅವರಿಗೆ ಸಲಹೆ ನೀಡುತ್ತಾರೆ. ಆದರೆ ಪೈಗಂಬರರು ತನ್ನ ಪತ್ನಿಯರನ್ನು ಎಂದೂ ಅದರಿಂದ ತಡೆದಿಲ್ಲ. ನೀವು ಏಕೆ ಹೀಗೆ ಹೇಳುತ್ತಿರುವಿರಿ.' ಆಗ ನಾನು ನನ್ನ ಪತ್ನಿಗೆ ಹೇಳುತ್ತಿದ್ದೆ – 'ಹಝ್ರತ್ ಆಯಿಶಾ ಹಝ್ರತ್ ಪೈಗಂಬರರ ಬಹಳ ಪ್ರಿಯ ಪತ್ನಿಯಾಗಿದ್ದಾರೆ. ಅವರ ಬಗ್ಗೆ ಪ್ರಸ್ತಾಪಿಸಬೇಡ. ಆದರೆ ನಿನ್ನ ಮಗಳಾದ ಅವರ ಪತ್ನಿ ಹಾಗೇನಾದರೂ ಮಾಡಿದರೆ ಅವಳು ತನ್ನ ತಪ್ಪಿಗೆ ಶಿಕ್ಷೆಯನ್ನು ಎಂದಾದರೊಂದು ದಿನ ಪಡೆಯುವಳು.' ಒಮ್ಮೆ ಹಝ್ರತ್ ಪೈಗಂಬರ್(ಸ) ತನ್ನ ಪತ್ನಿಯರೊಂದಿಗೆ ಯಾವುದೋ ವಿಷಯದ ಕಾರಣ ಬೇಸರಗೊಂಡು, ತಾನು ಕೆಲವು ದಿವಸ ಮನೆಯಿಂದ ಹೊರಗಿರುವೆನು, ಪತ್ನಿಯರ ಸಮೀಪ ಹೋಗಲಾರೆನು ಎಂದು ತೀರ್ಮಾನಿಸಿದ್ದರು. ಇದರ ಬಗ್ಗೆ ನನಗೆ ವರದಿ ಲಭಿಸಿದಾಗ ನಾನು ನನ್ನ ಪತ್ನಿಯೊಂದಿಗೆ ಹೇಳಿದೆ, 'ನೋಡು ನಾನು ಹೇಳಿದ ಹಾಗೆಯೇ ಆಯಿತು.' ಅನಂತರ ನಾನು ನನ್ನ ಮಗಳು ಹಫ್‌ಸಳ ಮನೆಗೆ ಹೋದೆನು. ಆಗ ಅವಳು ಅಳುತ್ತಾ ಇದ್ದಳು. ನಾನು ಕೇಳಿದೆ – 'ಏನಾಗಿದೆ, ಹಝ್ರತ್ ಪೈಗಂಬರ್ ನಿನಗೆ ತಲಾಖ್ ನೀಡಿರುವವರೇ?' ಆಗ ಹಫ್‌ಸ ಹೇಳಿದಳು – 'ಆ ವಿಷಯ ನನಗೆ ತಿಳಿಯದು. ಆದರೆ ಹಝ್ರತ್ ಪೈಗಂಬರ್ ಸ್ವಲ್ಪ ದಿವಸ ಮನೆಗೆ ಬರುವುದಿಲ್ಲ ಎಂದು ತೀರ್ಮಾನಿಸಿರುವರು.' ಆಗ ನಾನು ಹೇಳಿದೆ – 'ಹಫ್‌ಸ, ನಾನು ನಿನಗೆ ಮನವರಿಕೆ ಮಾಡಿಕೊಡುತ್ತಾ ಇದ್ದೆ. ನೀನು ಆಯಿಶಾರನ್ನು ಅನುಕರಿಸುತ್ತಿರುವೆ. ಆಯಿಶಾ ಹಝ್ರತ್ ಪೈಗಂಬರರಿಗೆ ವಿಶಿಷ್ಟವಾಗಿ ಪ್ರಿಯರಾಗಿದ್ದಾರೆ. ನೋಡು, ನಾನು ಭಯಪಡುತ್ತಿದ್ದ ವಿಪತ್ತನ್ನೇ ನೀನು ನಿನ್ನ ಮೇಲೆ ಎಳೆದುಕೊಂಡಿರುವೆ.' ಹೀಗೆ ಹೇಳಿದ ನಂತರ ನಾನು ಹಝ್ರತ್ ಪೈಗಂಬರರ ಸಮೀಪಕ್ಕೆ ಹೋದೆನು. ಆಗ ಅವರು ಒಂದು ಒರಟು ಚಾಪೆಯ ಮೇಲೆ ಮಲಗಿದ್ದರು. ಅವರ ಶರೀರದಲ್ಲಿ ಅಂಗಿ ಇರಲಿಲ್ಲ. ಅವರ ಶರೀರದಲ್ಲಿ ಚಾಪೆಯ ಗುರುತು ಅಚ್ಚೊತ್ತಿತ್ತು. ನಾನು ಅವರ ಸಮೀಪದಲ್ಲಿ ಕುಳಿತು ಹೀಗೆ ಹೇಳಿದೆನು: 'ಅಲ್ಲಾಹನ ಪೈಗಂಬರರೇ, ಖೈಸರ್ ಮತ್ತು ಕಿಸ್ರಾರಿಗೆ ಎಲ್ಲಾ ಸುಖ ಸಂಪತ್ತುಗಳು ಲಭಿಸಿ ಐಶಾರಾಮದಿಂದಿರಲು ಇರುವ ಅರ್ಹತೆಯಾದರೂ ಏನು, ಅಲ್ಲಾಹನ ಪೈಗಂಬರರು ಈ ರೀತಿ ಕಷ್ಟ ಅನುಭವಿಸುತ್ತಿರುವಾಗ?' ಹಝ್ರತ್ ಪೈಗಂಬರ್ ಹೇಳಿದರು: 'ಅದು ಸರಿಯಲ್ಲ. ಅಂತಹ ಜೀವಿತ ಅಲ್ಲಾಹನ ಪೈಗಂಬರರಿಗೆ ಯೋಗ್ಯವಾಗಿರುವುದಿಲ್ಲ. ಅದು ಲೌಕಿಕ ದೊರೆಗಳ ಜೀವಿತ ಶೈಲಿಯಾಗಿದೆ.' ಅನಂತರ ನಾನು ಪೈಗಂಬರರಿಗೆ ನನ್ನ ಪತ್ನಿ ಮತ್ತು ಮಗಳೊಂದಿಗೆ ನಾನು ಹೇಳಿದ ಮಾತುಗಳನ್ನೆಲ್ಲಾ ವಿವರಿಸಿದೆನು. ನನ್ನ ಮಾತುಗಳನ್ನು ಆಲಿಸಿ ಹಝ್ರತ್ ಪೈಗಂಬರ್ ನಗುತ್ತಾ ಹೇಳಿದರು – 'ನಾನು ನನ್ನ ಪತ್ನಿಯರಿಗೆ ತಲಾಖ್ ನೀಡಿರುವೆನೆಂದು



ಹೇಳುವುದು ಸರಿಯಲ್ಲ. ನಾನು ಒಂದು ಪ್ರತ್ಯೇಕ ಉದ್ದೇಶದ ಕಾರಣದಿಂದ ಮನೆಯಿಂದ ಸ್ವಲ್ಪ ಕಾಲ ಹೊರಗಿರಲು ತೀರ್ಮಾನಿಸಿರುವೆನು.' " (ಬುಖಾರಿ)

ಹಝ್ರತ್ ಪೈಗಂಬರರಿಗೆ(ಸ) ಮಹಿಳೆಯರ ಭಾವನೆಗಳ ಬಗ್ಗೆ ಬಹಳ ಕಾಳಜಿ ಇತ್ತು. ಒಮ್ಮೆ ನಮಾಝ್‌ಗೆ ನೇತೃತ್ವ ನೀಡುವಾಗ ಅವರಿಗೆ ಒಂದು ಮಗು ಅಳುವ ಶಬ್ದ ಕೇಳಿಸಿತು. ಅವರು ಆಗ ನಮಾಝ್ ಬೇಗ ಬೇಗನೆ ಅನುಷ್ಠಿಸಿ ಮುಕ್ತಾಯಗೊಳಿಸಿದರು. ಅನಂತರ ಹೇಳಿದರು: "ಮಗು ಅಳುವ ಶಬ್ದ ಕೇಳಿಸಿದಾಗ ಆ ಮಗುವಿನ ತಾಯಿಗೆ ಉಂಟಾಗಬಹುದಾದ ಕಷ್ಟವನ್ನು ಪರಿಗಣಿಸಿ ನಾನು ನಮಾಝನ್ನು ಬೇಗನೆ ಅನುಷ್ಠಿಸಿ ಮುಗಿಸಿದೆ. ಆ ಮಗುವಿನ ತಾಯಿ ಆ ಮಗುವನ್ನು ಬೇಗನೆ ಸಂತೈಸಲಿ ಎಂದು ನಾನು ಹಾಗೆ ಮಾಡಿದೆ." (ಬುಖಾರಿ)

ಮಹಿಳೆಯರು ಜೊತೆಗಿದ್ದು ಪ್ರಯಾಣ ಮಾಡುವಾಗ ಯಾವಾಗಲೂ ಮಂದಗತಿಯಿಂದ ಪ್ರಯಾಣ ಮಾಡಬೇಕೆಂದು ಹಝ್ರತ್ ಪೈಗಂಬರ್(ಸ) ಆಜ್ಞಾಪಿಸುತ್ತಿದ್ದರು. ಒಮ್ಮೆ ಇಂತಹ ಸನ್ನಿವೇಶದಲ್ಲಿ ಕುದುರೆ ಸವಾರರೂ ಒಂಟೆ ಸವಾರರೂ ತಮ್ಮ ಸವಾರಿ ಮೃಗಗಳನ್ನು ವೇಗದಿಂದ ಓಡಿಸಲು ಪ್ರಯತ್ನಿಸಿದಾಗ ಹಝ್ರತ್ ಪೈಗಂಬರ್ ಹೇಳಿದರು: "ರಫ್‌ಖನ್ ಬಿಲ್ ಖವಾರೀರ." ಅಂದರೆ, "ನೀವು ಏನು ಮಾಡುತ್ತಿರುವಿರಿ, ನಿಮ್ಮ ಜೊತೆಗೆ ಮಹಿಳೆಯರೂ ಇದ್ದಾರೆ. ನೀವು ಈ ರೀತಿ ಸವಾರಿ ಮೃಗಗಳನ್ನು ಓಡಿಸಿದರೆ ಗಾಜು ಪುಡಿಪುಡಿಯಾಗುವುದು." (ಬುಖಾರಿ)

ಒಂದು ಸಾರಿ ಯುದ್ಧ ಕ್ಷೇತ್ರದಲ್ಲಿ ಯಾವುದೋ ಗೊಂದಲದ ಕಾರಣದಿಂದ ಸವಾರಿ ಮೃಗಗಳನ್ನು ನಿಯಂತ್ರಣದಲ್ಲಿಡಲು ಅಸಾಧ್ಯವಾಯಿತು. ಹಝ್ರತ್ ಪೈಗಂಬರ್(ಸ) ಕುದುರೆಯ ಮೇಲಿನಿಂದ ಕೆಳಗೆ ಬಿದ್ದರು. ಕೆಲವು ಮಹಿಳೆಯರೂ ಸವಾರಿ ಮೃಗಗಳ ಮೇಲಿನಿಂದ ಕೆಳಗೆ ಬಿದ್ದರು. ಒಬ್ಬ ಶಿಷ್ಯರ ಒಂಟೆ ಹಝ್ರತ್ ಪೈಗಂಬರರ ಹಿಂದೆ ಇತ್ತು. ಆ ಶಿಷ್ಯ ಹಝ್ರತ್ ಪೈಗಂಬರ್ ಕುದುರೆಯಿಂದ ಕೆಳಗೆ ಬೀಳುತ್ತಿರುವುದನ್ನು ಕಂಡು ಗಾಬರಿಗೊಂಡು ತನ್ನ ಒಂಟೆಯಿಂದ ಜಿಗಿದು ಹಝ್ರತ್ ಪೈಗಂಬರರ ಸಮೀಪಕ್ಕೆ ಬಂದು ಹೇಳಿದರು: "ಓ ಪೈಗಂಬರರೇ, ನಾನು ಸತ್ತರೂ ನೀವು ಬದುಕಬೇಕು." ಆಗ ಹಝ್ರತ್ ಪೈಗಂಬರರ ಕಾಲು ಕುದುರೆಯ ರಿಕಾಪಿಗೆ ಸಿಕ್ಕಿಕೊಂಡಿತ್ತು. ಅವರು ಬೇಗ ಬೇಗನೆ ತನ್ನ ಕಾಲನ್ನು ರಿಕಾಪಿನಿಂದ ಬಿಡಿಸಿ ಆ ಶಿಷ್ಯನೊಂದಿಗೆ ಹೇಳಿದರು: "ನೀವು ನನ್ನನ್ನು ಬಿಟ್ಟು ಮಹಿಳೆಯರ ಕಡೆಗೆ ಹೋಗಿರಿ."

ಹಝ್ರತ್ ಪೈಗಂಬರ್(ಸ) ನಿಧನ ಹೊಂದುವ ಸಮಯ ಸಮೀಪಿಸಿದಾಗ ಅವರು ಮುಸ್ಲಿಮರನ್ನು ಒಗ್ಗೂಡಿಸಿ ಅವರಿಗೆ ಮಾಡಿದ ಉಪದೇಶಗಳಲ್ಲಿ ಒಂದು ಹೀಗೆ ಇತ್ತು: "ನಾನು ನಿಮಗೆ ಅಂತಿಮವಾಗಿ ಹೀಗೆ ಮರಣ ಶಾಸನ ರೂಪದಲ್ಲಿ ಹೇಳಲು ಬಯಸುತ್ತೇನೆ. ನೀವು ಯಾವಾಗಲೂ ಮಹಿಳೆಯರೊಂದಿಗೆ ಉತ್ತಮವಾದ ರೀತಿಯಲ್ಲಿ ವರ್ತಿಸುತ್ತಾ ಇರಬೇಕು."

ಹಝ್ರತ್ ಪೈಗಂಬರ್(ಸ) ಅನೇಕ ಬಾರಿ ಹೀಗೆ ಹೇಳುತ್ತಿದ್ದರು: "ಯಾರ ಮನೆಯಲ್ಲಿ ಹೆಣ್ಣು ಮಕ್ಕಳಿದ್ದಾರೋ ಮತ್ತು ಅವರು ಆ ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು ಉತ್ತಮವಾದ ತರಬೇತಿ ನೀಡುತ್ತಾರೋ ಅಲ್ಲಾಹನು ಅಂತಹ ಜನರಿಗೆ ಪುನರುತ್ಥಾನದ ದಿನ ನರಕವನ್ನು ನಿಷಿದ್ಧಗೊಳಿಸುವನು." (ತಿರ್‌ಮಿಝಿ)

ಮಹಿಳೆಯರಿಂದ ಏನಾದರೂ ತಪ್ಪು ಆದರೆ ಅವರನ್ನು ಹೊಡೆಯುವುದು, ಬಡಿಯುವುದು ಅರಬ್ ಜನರ ಸಂಪ್ರದಾಯವಾಗಿತ್ತು. ಹಝ್ರತ್ ಪೈಗಂಬರರಿಗೆ(ಸ) ಇಂತಹ ಸಂಭವಗಳ ವರದಿ ತಲಪಿದಾಗ ಅವರು ಹೇಳಿದರು: "ಮಹಿಳೆಯರು ಅಲ್ಲಾಹನ ದಾಸಿಯರಾಗಿದ್ದಾರೆ, ನಿಮ್ಮ ದಾಸಿಯರಲ್ಲ. ಅವರಿಗೆ ಹೊಡೆಯಬೇಡಿರಿ." ಆದರೆ ಮಹಿಳೆಯರ ತರಬೇತಿ ಪೂರ್ಣರೂಪದಲ್ಲಿ ಆಗಿರದ ಕಾರಣ ಅವರು ಧೈರ್ಯಗೊಂಡು ಪುರುಷರನ್ನು ಎದುರಿಸಲು ಪ್ರಾರಂಭಿಸಿದರು. ಮನೆಗಳಲ್ಲಿ ಕಲಹಗಳುಂಟಾಗಲು ತೊಡಗಿದುವು. ಕೊನೆಗೆ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರಿಗೆ(ಸ) ಹೀಗೆ ಹೇಳಿ ದೂರಿತ್ತರು: "ನೀವು ನಮ್ಮನ್ನು ಮಹಿಳೆಯರಿಗೆ ಹೊಡೆಯುವುದರಿಂದ ತಡೆದಿರುವಿರಿ. ಆದರೆ ಅವರು ಬಹಳ ಧೈರ್ಯತೋರಿಸಲು ತೊಡಗಿರುವರು. ಇಂತಹ ಪರಿಸ್ಥಿತಿಯಲ್ಲಿ ಅವರನ್ನು ಹೊಡೆಯಲು ನಮಗೆ ನೀವು ಅನುಮತಿ ನೀಡಬೇಕು." ಅಷ್ಟರ ತನಕ ಮಹಿಳೆಯರಿಗೆ ಸಂಬಂಧಿಸಿ ಸವಿವರವಾದ ಆಜ್ಞೆಗಳು ಅವತೀರ್ಣಗೊಂಡಿರಲಿಲ್ಲವಾದುದರಿಂದ ಹಝ್ರತ್ ಪೈಗಂಬರ್(ಸ) ಹೇಳಿದರು: "ಯಾವುದಾದರೂ ಮಹಿಳೆ ಮಿತಿಮೀರಿ ವರ್ತಿಸುತ್ತಾಳಾದರೆ ನೀವು ನಿಮ್ಮ ಸಂಪ್ರದಾಯ ಪ್ರಕಾರ ಆಕೆಗೆ ಹೊಡೆಯಿರಿ." ಇದರ ಪರಿಣಾಮ ಏನಾಯಿತೆಂದರೆ ಯಾವುದಾದರೂ ವಿಶಿಷ್ಟ ಕಠಿಣ ಪರಿಸ್ಥಿತಿಯಲ್ಲಿ ಪುರುಷನು ಮಹಿಳೆಗೆ ಹೊಡೆಯಬಹುದೆಂದು ನೀಡಿದ ಅನುಮತಿ ಅರಬಿಗಳು ದುರುಪಯೋಗಪಡಿಸಿ ಅವರು ತಮ್ಮ ಪುರಾತನ ಸಂಪ್ರದಾಯವನ್ನು ಜಾರಿಗೊಳಿಸಲು ತೊಡಗಿದರು. ಮಹಿಳೆಯರು ಹಝ್ರತ್ ಪೈಗಂಬರರ ಪತ್ನಿಯರಿಗೆ ದೂರಿತ್ತಾಗ ಅದನ್ನು ತಿಳಿದು ಹಝ್ರತ್ ಪೈಗಂಬರ್(ಸ) ತನ್ನ ಶಿಷ್ಯರೊಂದಿಗೆ ಹೀಗೆ ಹೇಳಿದರು: "ಯಾರು ಮಹಿಳೆಯರೊಂದಿಗೆ ಉತ್ತಮವಾಗಿ ವರ್ತಿಸುವುದಿಲ್ಲವೋ ಅಥವಾ ಅವರಿಗೆ ಹೊಡೆಯುತ್ತಾರೋ ಅವರ ಬಗ್ಗೆ ನಾನು ಹೇಳಲು ಬಯಸುತ್ತೇನೆ – ಅವರು ಅಲ್ಲಾಹನ ದೃಷ್ಟಿಯಲ್ಲಿ ಒಳ್ಳೆಯವರೆಂದು ಗಣಿಸಲ್ಪಡಲಾರರು." ಅನಂತರ ಮಹಿಳೆಯರ ಹಕ್ಕುಬಾಧ್ಯತೆಗಳು ನಿಗದಿಗೊಳಿಸಲ್ಪಟ್ಟವು, ಮಹಿಳೆಯರು ಹಝ್ರತ್ ಪೈಗಂಬರರ ಉಪಕಾರಗಳ ಮೂಲಕ ಪ್ರಥಮ ಬಾರಿ ಸ್ವತಂತ್ರರಾಗಿ ಉಸಿರಾಡಲು ತೊಡಗಿದರು. (ಅಬೂದಾವೂದ್)

ಮುಆವಿಯ ಬಿನ್ ಹೈದಃ ಖಶೀರಿ ಹೀಗೆ ವರದಿ ಮಾಡುತ್ತಾರೆ: "ನಾನು ಹಝ್ರತ್ ಪೈಗಂಬರರೊಂದಿಗೆ ಕೇಳಿದೆ – "ಓ ಅಲ್ಲಾಹನ ಪೈಗಂಬರರೇ, ಮಹಿಳೆಯರಿಗೆ ನಮ್ಮಿಂದ ದೊರಕಬೇಕಾದ ಹಕ್ಕುಗಳು ಯಾವುವು?" ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನಿಮಗೆ ಅಲ್ಲಾಹನು ತಿನ್ನಲು ನೀಡಿದುದನ್ನು ಅವರಿಗೂ ತಿನ್ನಿಸಬೇಕು. ನಿಮಗೆ ಅಲ್ಲಾಹನು ಧರಿಸಲು ನೀಡಿರುವುದನ್ನು ಅವರಿಗೂ ಧರಿಸಲು



ಕೊಡಬೇಕು. ಅವರಿಗೆ ಹೊಡೆಯಬಾರದು. ಅವರನ್ನು ಬೈಯ್ಯಬಾರದು. ಅವರನ್ನು ಮನೆಯಿಂದ ಹೊರಹಾಕಬಾರದು." (ಅಬೂದಾವೂದ್)

ಹಝ್ರತ್ ಪೈಗಂಬರ್(ಸ) ಮಹಿಳೆಯರ ಭಾವನೆಗಳ ಬಗ್ಗೆ ಬಹಳ ಗಮನ ಕೊಡುತ್ತಿದ್ದರು. ಅವರು ಯಾವಾಗಲೂ ಹೀಗೆ ಉಪದೇಶಿಸುತ್ತಿದ್ದರು: "ಯಾರು ಮನೆಯಿಂದ ಹೊರಗೆ ಹೋಗಿ ಪ್ರಯಾಣ ಮಾಡುತ್ತಾರೋ, ಅವರು ಬೇಗನೆ ಮರಳಿ ಬರಬೇಕು ಮತ್ತು ತಮ್ಮ ಮನೆಯವರಿಗೆ ಕಷ್ಟವಾಗದಂತೆ ನೋಡಿಕೊಳ್ಳಬೇಕು."

ಹಝ್ರತ್ ಅಬೂ ಹುರೈರ(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳಿದರು – "ಯಾವನಾದರೂ ವ್ಯಕ್ತಿ ಪ್ರಯಾಣವನ್ನು ಯಾವ ಉದ್ದೇಶಕ್ಕಾಗಿ ಕೈಗೊಂಡಿರುವನೋ ಆ ಉದ್ದೇಶ ನೆರವೇರಿದ ಕೂಡಲೆ ತನ್ನ ಮನೆಯವರನ್ನು ಗಮನದಲ್ಲಿಟ್ಟುಕೊಂಡು ಬೇಗನೆ ಮನೆಗೆ ಮರಳಬೇಕು." (ಬುಖಾರಿ)

ಹಝ್ರತ್ ಪೈಗಂಬರ್(ಸ) ಪ್ರಯಾಣದಿಂದ ಮರಳುವಾಗ ಹಗಲು ಹೊತ್ತಿನಲ್ಲಿ ನಗರವನ್ನು ಪ್ರವೇಶಿಸುತ್ತಿದ್ದರು. ನಗರ ತಲಪುವಾಗ ರಾತ್ರಿಯಾಗುವುದಾದರೆ ನಗರದ ಹೊರವಲಯದಲ್ಲಿ ಬಿಡಾರ ಹೂಡಿ ಬೆಳಗ್ಗಿನ ಹೊತ್ತು ನಗರವನ್ನು ಪ್ರವೇಶಿಸುತ್ತಿದ್ದರು. ಅವರು ತನ್ನ ಶಿಷ್ಯರಿಗೆ ಯಾವಾಗಲೂ ಹೀಗೆ ಉಪದೇಶಿಸುತ್ತಿದ್ದರು: "ನೀವು ರಾತ್ರಿ ಹೊತ್ತು ಅಚಾನಕವಾಗಿ ಮನೆಗೆ ಹೋಗಿ ನಿಮ್ಮ ಮನೆಯವರನ್ನು ಕಷ್ಟಕ್ಕೆ ಗುರಿಪಡಿಸಬಾರದು." (ಅಬೂದಾವೂದ್)

ಹಝ್ರತ್ ಪೈಗಂಬರರ(ಸ) ಈ ಆಜ್ಞೆ ಜಾಣ್ಮೆಯಿಂದ ಕೂಡಿತ್ತು. ಪತಿ ಪತ್ನಿಯರ ಸಂಬಂಧವು ಪರಸ್ಪರ ಭಾವೋದ್ವೇಗಗಳನ್ನು ಅವಲಂಬಿಸಿರುತ್ತದೆ. ತನ್ನ ಪತಿ ಮನೆಯಲ್ಲಿ ಇಲ್ಲದ ಸಮಯದಲ್ಲಿ ಪತ್ನಿ ತನ್ನ ಶರೀರ ಮತ್ತು ಉಡುಗೆಗಳ ಸ್ವಚ್ಛತೆ ಬಗ್ಗೆ ಪೂರ್ಣವಾಗಿ ಶ್ರದ್ಧೆ ವಹಿಸದಿರಬಹುದು. ಅಂತಹ ಸಂದರ್ಭದಲ್ಲಿ ಪತಿ ಅಚಾನಕವಾಗಿ ಮನೆಯೊಳಗೆ ಪ್ರವೇಶಿಸಿದರೆ, ತನಗೆ ಜಿಗುಪ್ಸೆ ಹುಟ್ಟಿಸುವ ರೀತಿಯಲ್ಲಿ ಪತ್ನಿಯನ್ನು ಕಂಡರೆ ಆಕೆಯ ಬಗ್ಗೆ ಆತನು ಹೊಂದಿದ ಪ್ರೇಮ ಭಾವನೆಗೆ ಯಾವುದಾದರೂ ರೀತಿ ಹಾನಿ ಉಂಟಾಗಬಾರದೆಂದು ಹಝ್ರತ್ ಪೈಗಂಬರ್(ಸ) ಉದ್ದೇಶಿಸಿದ್ದರು. ಆದುದರಿಂದ ಅವರು ಹೀಗೆ ಆಜ್ಞಾಪಿಸಿದ್ದರು – ಯಾರಾದರೂ ಪ್ರಯಾಣದಿಂದ ಮರಳಿ ಬರುವಾಗ ಮನೆಗೆ ಹಗಲು ಹೊತ್ತಿನಲ್ಲಿ ಪ್ರವೇಶಿಸಬೇಕು. ಪತ್ನಿ ಮತ್ತು ಮಕ್ಕಳಿಗೆ ಅದರ ಬಗ್ಗೆ ಮುಂಚಿತವಾಗಿ ತಿಳಿಸಿ ಅವರು ಆತನನ್ನು ಸ್ವಾಗತಿಸಲು ಪೂರ್ಣವಾಗಿ ಸಿದ್ಧರಾಗುವಂತೆ ಮಾಡಬೇಕು.

## ಮೃತರ ಬಗ್ಗೆ ಹಝ್ರತ್ ಪೈಗಂಬರರ(ಸ) ನಿರ್ದೇಶಗಳು

ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸುತ್ತಿದ್ದರು: "ಮರಣಾಸನ್ನನಾಗುವವನು ಮರಣಶಾಸನ ರೂಪದಲ್ಲಿ ತನ್ನ ಕೊನೆಯ ಇಚ್ಛೆಯನ್ನು ಹೇಳಬೇಕು. ಅನಂತರ ಸಂಬಂಧಿಕರಿಗೆ ಯಾವುದೇ ತೊಂದರೆ ಉಂಟಾಗಬಾರದು."

ಮೃತರಾದವರ ಕುರಿತು ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದ್ದರು:

"ಯಾರಾದರೂ ಮೃತರಾದರೆ ಜನರು ಮೃತನಾದ ವ್ಯಕ್ತಿಯ ದುರ್ಗುಣಗಳನ್ನು ಎಂದೂ ಹೇಳಬಾರದು. ಅವನ ಸದ್ಗುಣಗಳನ್ನು ವಿವರಿಸಬೇಕು. ಏಕೆಂದರೆ ದುರ್ಗುಣಗಳ ವಿವರಣೆಯಿಂದ ಯಾವ ಪ್ರಯೋಜನವೂ ಸಿಗಲಾರದು. ಆದರೆ ಮೃತನ ಸದ್ಗುಣಗಳ ವಿವರಣೆಯಿಂದ ಜನರು ಅವನಿಗೋಸ್ಕರ ಪ್ರಾರ್ಥಿಸಲು ಪ್ರೇರಣೆ ಉಂಟಾಗುವುದು." (ಬುಖಾರಿ)

ಮೃತರಾದ ವ್ಯಕ್ತಿಗಳ ಸಾಲವನ್ನು ಬೇಗನೆ ತೀರಿಸಬೇಕೆಂದು ಹಝ್ರತ್ ಪೈಗಂಬರ್[ಸ] ಬಹಳ ಕಾಳಜಿ ಹೊಂದಿದ್ದರು. ಒಬ್ಬ ಮೃತನಾದವನ ಸಾಲವು ಸಂದಾಯವಾಗಬೇಕಿದ್ದರೆ ಆ ಸಾಲದ ಹಣವನ್ನು ಹಝ್ರತ್ ಪೈಗಂಬರ್[ಸ] ಸ್ವತಃ ಕೊಟ್ಟು ತೀರಿಸುತ್ತಿದ್ದರು. ಅವರಿಗೆ ಅದು ಸಾಧ್ಯವಾಗದಿದ್ದರೆ ಮೃತನ ಸಂಬಂಧಿಕರಿಗೆ ಆ ಬಗ್ಗೆ ಪ್ರೇರೇಪಿಸಿ ಸಾಲವನ್ನು ತೀರಿಸಲು ಪ್ರಯತ್ನಿಸುತ್ತಿದ್ದರು. ಮೃತನಾದವನ ಸಾಲ ಸಂದಾಯ ಮಾಡುವ ತನಕ ಹಝ್ರತ್ ಪೈಗಂಬರ್[ಸ] ಮೃತನ ನಮಾಝ್ ಜನಾಝ (ದಫನು ಮಾಡುವ ಮೊದಲು ಅನುಷ್ಠಿಸಲಾಗುವ ನಮಾಝ್) ಅನುಷ್ಠಿಸುತ್ತಿರಲಿಲ್ಲ.

## ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ

ನೆರೆ ಹೊರೆಯವರೊಂದಿಗೆ ಹಝ್ರತ್ ಪೈಗಂಬರ್[ಸ] ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: "ದಿವ್ಯದೂತರಾದ ಹಝ್ರತ್ ಜಿಬ್ರೀಲ್ ನನಗೆ ನೆರೆಹೊರೆಯವರೊಂದಿಗೆ ಉತ್ತಮವಾಗಿ ವರ್ತಿಸುವ ಕುರಿತು ಪದೇ ಪದೇ ಎಷ್ಟರ ಮಟ್ಟಿಗೆ ಆಜ್ಞಾಪಿಸುತ್ತಾ ಇರುತ್ತಾರೆ ಎಂದರೆ ನೆರೆಹೊರೆಯವರನ್ನು ವಾರೀಸುದಾರರನ್ನಾಗಿ ಘೋಷಿಸಲಾಗುವುದೋ ಎಂದು ನಾನು ಯೋಚಿಸಲು ತೊಡಗಿದೆ." (ಬುಖಾರಿ)

ಹಝ್ರತ್ ಅಬೂ ಝರ್[ರ] ಹೀಗೆ ಹೇಳುತ್ತಾರೆ: ನನ್ನೊಂದಿಗೆ ಹಝ್ರತ್ ಪೈಗಂಬರ್[ಸ] ಹೇಳುತ್ತಾ ಇದ್ದರು: "ಅಬೂ ಝರ್, ನೀವು ಸಾರು ಪಾಕ ಮಾಡುವಾಗ ಅದಕ್ಕೆ ಸ್ವಲ್ಪ ನೀರನ್ನು ಹೆಚ್ಚಿಗೆ ಹಾಕಿರಿ. ನೀವು ನಿಮ್ಮ ನೆರೆಹೊರೆಯವರ ಬಗ್ಗೆ ಸಹ ಗಮನ ಕೊಡುತ್ತಾ ಇರಬೇಕು." (ಮುಸ್ಲಿಮ್)

ಇದರ ಅರ್ಥ ಸಾರು ಮಾತ್ರ ನೆರೆಹೊರೆಯವರಿಗೆ ನೀಡಿದರೆ ಸಾಕು, ಬೇರೆ ವಸ್ತುಗಳನ್ನು ಕೊಡಬೇಕಾಗಿಲ್ಲ ಎಂದಲ್ಲ. ಅರಬಿಗಳಲ್ಲಿ ಬಹುತೇಕ ಜನರು ಗ್ರಾಮಗಳ ನಿವಾಸಿಗಳಾಗಿದ್ದರು. ಅವರ ಅತ್ಯುತ್ತಮ ಭಕ್ಷ್ಯವಸ್ತು ಸಾರು ಆಗಿತ್ತು. ಹಝ್ರತ್ ಪೈಗಂಬರ್[ಸ] ನೆರೆಹೊರೆಯವರಿಗೆ ನೆರವು ನೀಡುವ ವಿಷಯವನ್ನು ಭಕ್ಷ್ಯ ವಸ್ತುಗಳೊಂದಿಗೆ ಸಂಬಂಧಿಸಿ ಹೇಳಿದರು – ನೀವು ನಿಮ್ಮ ರುಚಿಯ ಆಸ್ವಾದನೆಯ ಬಗ್ಗೆ ಮಾತ್ರ ಯೋಚಿಸಬಾರದು. ನಿಮ್ಮ ನೆರೆಹೊರೆಯವರು ಸಹ ನಿಮ್ಮ ಆಹಾರ ಪದಾರ್ಥಗಳಲ್ಲಿ ಪಾಲನ್ನು ಪಡೆಯುವ ಹಾಗೆ ಆಗಲಿ.

ಹಝ್ರತ್ ಅಬೂ ಹುರೈರ[ರ] ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್[ಸ] ಒಮ್ಮೆ ಕುಳಿತಿದ್ದಾಗ ಹೇಳಿದರು: "ಅಲ್ಲಾಹನಾಣೆ ಅವನು ಖಂಡಿತವಾಗಿಯೂ ಸತ್ಯ ವಿಶ್ವಾಸಿ ಅಲ್ಲ. ಅಲ್ಲಾಹನಾಣೆ ಅವನು ಖಂಡಿತವಾಗಿಯೂ ಸತ್ಯ ವಿಶ್ವಾಸಿ ಅಲ್ಲ. ಅಲ್ಲಾಹನಾಣೆ ಅವನು ಖಂಡಿತವಾಗಿಯೂ ಸತ್ಯ ವಿಶ್ವಾಸಿ ಅಲ್ಲ." ಆಗ ಶಿಷ್ಯರು ಕೇಳಿದರು: "ಅಲ್ಲಾಹನ ಪೈಗಂಬರರೇ, ಯಾರು ಸತ್ಯ ವಿಶ್ವಾಸಿ ಅಲ್ಲ?" ಹಝ್ರತ್ ಪೈಗಂಬರ್ ಹೇಳಿದರು: "ಯಾರ ನೆರೆಹೊರೆಯವರು ಅವನ ದುರ್ವರ್ತನೆಗಳಿಂದಲೂ ಉಪದ್ರವಗಳಿಂದಲೂ ಸುರಕ್ಷಿತರಾಗಿಲ್ಲವೋ ಅವನು ಖಂಡಿತವಾಗಿಯೂ ಸತ್ಯವಿಶ್ವಾಸಿಯಲ್ಲ." (ಬುಖಾರಿ)



ಹಝ್ರತ್ ಪೈಗಂಬರ್[ಸ] ಮಹಿಳೆಯರಿಗೂ ಉಪದೇಶಿಸುತ್ತಾ ಇದ್ದರು: "ನೀವು ನಿಮ್ಮ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯವಿರಿಸಬೇಕು."

ಒಮ್ಮೆ ಹಝ್ರತ್ ಪೈಗಂಬರ್[ಸ] ಮಹಿಳೆಯರಿಗೆ ಉಪದೇಶ ನೀಡುತ್ತಾ ಇದ್ದಾಗ ಹೀಗೆ ಹೇಳಿದರು: "ಆಡಿನ ಕೇವಲ ಒಂದು ಕಾಲಿನ ಮಾಂಸ ಯಾರಿಗಾದರೂ ದೊರಕಿದರೆ ಕೂಡ ಅದರಿಂದ ಒಂದು ಪಾಲನ್ನು ತನ್ನ ನೆರೆಹೊರೆಯವರಿಗೆ ತೆಗೆದಿಡಬೇಕು." (ಬುಖಾರಿ)

ಹಝ್ರತ್ ಪೈಗಂಬರ್[ಸ] ಯಾವಾಗಲೂ ತನ್ನ ಶಿಷ್ಯರಿಗೆ ಹೀಗೆ ಉಪದೇಶಿಸುತ್ತಿದ್ದರು: "ನಿಮ್ಮ ನೆರೆಹೊರೆಯವ ನಿಮ್ಮ ಗೋಡೆಗೆ ಮೊಳೆ ಹೊಡೆಯುವುದಾದರೆ ಅಥವಾ ನಿಮಗೆ ಹಾನಿಯಾಗದ ಯಾವುದಾದರೂ ಉಪಯೋಗವನ್ನು ನಿಮ್ಮ ಗೋಡೆಯಿಂದ ಪಡೆಯುವುದಾದರೆ ನೀವು ಅದನ್ನು ತಡೆಯಬೇಡಿರಿ." (ಮುಸ್ಲಿಮ್)

ಹಝ್ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್[ಸ] ಹೀಗೆ ಹೇಳುತ್ತಾ ಇದ್ದರು: "ಅಲ್ಲಾಹನ ಬಗ್ಗೆಯೂ ಅಂತಿಮ ವಿಚಾರಣೆಯ ದಿನದ ಬಗ್ಗೆಯೂ ವಿಶ್ವಾಸ ಹೊಂದಿದವರು ತಮ್ಮ ನೆರೆಹೊರೆಯವನಿಗೆ ಕಷ್ಟಕೊಡಬಾರದು. ಅಲ್ಲಾಹನ ಬಗ್ಗೆಯೂ ಅಂತಿಮ ವಿಚಾರಣೆಯ ದಿನದ ಬಗ್ಗೆಯೂ ವಿಶ್ವಾಸ ಹೊಂದಿದವರು ತಮ್ಮ ಅತಿಥಿಗಳಿಗೆ ಕಷ್ಟಕೊಡಬಾರದು. ಅಲ್ಲಾಹನ ಬಗ್ಗೆಯೂ ಅಂತಿಮ ವಿಚಾರಣೆಯ ದಿನದ ಬಗ್ಗೆಯೂ ವಿಶ್ವಾಸ ಹೊಂದಿದವರು ಒಳ್ಳೆಯ ಮಾತನ್ನು ಹೇಳಬೇಕು ಅಥವಾ ಮೌನವಾಗಿ ಇರಬೇಕು." (ಮುಸ್ಲಿಮ್)

## ತಂದೆ, ತಾಯಿ ಮತ್ತು ಅನ್ಯ ಸಂಬಂಧಿಕರೊಂದಿಗೆ ಉತ್ತಮ ವರ್ತನೆ ಬಗ್ಗೆ ಉಪದೇಶಗಳು

ಲೋಕದಲ್ಲಿ ಬಹುತೇಕ ಜನರು ಪ್ರೌಢರಾದ ನಂತರ ತಮ್ಮ ಪತ್ನಿ ಮತ್ತು ಮಕ್ಕಳ ಚಿಂತೆಯಲ್ಲಿ ಮಗ್ನರಾಗುತ್ತಾರೆ. ಅವರು ತಮ್ಮ ತಂದೆ ತಾಯಂದಿರೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಅಲಕ್ಷ್ಯ ತೋರಿಸಲು ತೊಡಗುತ್ತಾರೆ. ಹಝ್ರತ್ ಪೈಗಂಬರ್[ಸ] ಜನರ ಈ ನ್ಯೂನತೆಯನ್ನು ದೂರೀಕರಿಸಲು ತಂದೆ ತಾಯಂದಿರೊಂದಿಗೆ ಉತ್ತಮವಾಗಿ ವರ್ತಿಸುವುದರ ಪ್ರಾಮುಖ್ಯತೆ ಬಗ್ಗೆ ಪದೇ

ಪದೇ ಸ್ಪಷ್ಟಪಡಿಸುತ್ತಾ ಇದ್ದರು. ಇದರ ಬಗ್ಗೆ ಹಝ್ರತ್ ಅಬೂ ಹುರೈರ(ರ) ಹೀಗೆ ಹೇಳುತ್ತಾರೆ: "ಒಬ್ಬನು ಹಝ್ರತ್ ಪೈಗಂಬರ್(ಸ) ಸಮೀಪಕ್ಕೆ ಬಂದು ಹೇಳಿದನು: "ಓ ಅಲ್ಲಾಹನ ಪೈಗಂಬರರೇ, ನಾನು ಉತ್ತಮವಾಗಿ ವರ್ತಿಸಲು ಯಾರು ಹೆಚ್ಚು ಅರ್ಹರಾಗಿದ್ದಾರೆ?" ಹಝ್ರತ್ ಪೈಗಂಬರ್(ಸ) ಹೇಳಿದರು: "ನಿನ್ನ ತಾಯಿ." ಆಗ ಆ ವ್ಯಕ್ತಿ ಕೇಳಿದನು: "ಅನಂತರ ಯಾರು ಅರ್ಹರು?" ಆಗ ಹಝ್ರತ್ ಪೈಗಂಬರ್ ಪುನಃ ಹೇಳಿದರು: "ಅನಂತರ ಸಹ ನಿನ್ನ ತಾಯಿ." ಆ ವ್ಯಕ್ತಿ ಪುನಃ ಕೇಳಿದನು: "ಅನಂತರ ಯಾರು?" ಆಗ ಹಝ್ರತ್ ಪೈಗಂಬರ್ ಪುನಃ ಹೇಳಿದರು: "ಅನಂತರ ಸಹ ನಿನ್ನ ತಾಯಿ." ಆಗ ಆ ವ್ಯಕ್ತಿ ನಾಲ್ಕನೆಯ ಸಲ ಕೇಳಿದನು: "ಅನಂತರ ಯಾರು?" ಹಝ್ರತ್ ಪೈಗಂಬರ್ ಹೇಳಿದರು: "ಅನಂತರ ನಿನ್ನ ತಂದೆ, ಆಮೇಲೆ ನಿನ್ನ ಇತರ ಸಂಬಂಧಿಕರು." (ಬುಖಾರಿ)

ಹಝ್ರತ್ ಪೈಗಂಬರರ(ಸ) ಹಿರಿಯರು ಅವರ ಬಾಲ್ಯ ಕಾಲದಲ್ಲಿಯೇ ಮೃತರಾಗಿದ್ದರು. ಆದರೆ ಪತ್ನಿಯರ ಹಿರಿಯರು ಜೀವಿಸಿದ್ದರು. ಹಝ್ರತ್ ಪೈಗಂಬರ್(ಸ) ಅವರನ್ನೆಲ್ಲಾ ಗೌರವಾದರಗಳಿಂದ ಕಾಣುತ್ತಿದ್ದರು. ಹಝ್ರತ್ ಪೈಗಂಬರ್(ಸ) ಮಕ್ಕದ ವಿಜಯದ ಸಂದರ್ಭದಲ್ಲಿ ಒಬ್ಬ ಜಯಶಾಲಿ ಸೇನಾಧಿಪತಿಯ ಹಾಗೆ ಮಕ್ಕವನ್ನು ಪ್ರವೇಶಿಸಿದಾಗ ಹಝ್ರತ್ ಅಬೂಬಕರ್(ರ) ತನ್ನ ತಂದೆಯವರನ್ನು ಅವರ ಭೇಟಿಗಾಗಿ ಕರೆದುಕೊಂಡು ಬಂದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಅವರನ್ನು ಏಕೆ ಕಷ್ಟಕ್ಕೊಳಪಡಿಸಿದಿರಿ. ನಾನೇ ಸ್ವತಃ ಅವರನ್ನು ಭೇಟಿಯಾಗಲು ಹೋಗುತ್ತಿದ್ದೆನು." (ಅಸ್ಸೀರತುಲ್ ಹಲ್‌ಬಿಯ್ಯ– ಸಂಪುಟ 3 ಪುಟ 99)

ಹಝ್ರತ್ ಪೈಗಂಬರ್(ಸ) ತನ್ನ ಶಿಷ್ಯರೊಂದಿಗೆ ಯಾವಾಗಲೂ ಹೀಗೆ ಹೇಳುತ್ತಿದ್ದರು: "ಯಾರಾದರೂ ತನ್ನ ವೃದ್ಧರಾದ ತಂದೆ ತಾಯಂದಿರನ್ನು ಹೊಂದಿದ್ದರೂ ಅವನು ಸ್ವರ್ಗಕ್ಕೆ ಅರ್ಹನಾಗಲು ಸಾಧ್ಯವಾಗದಿದ್ದರೆ ಅವನು ಬಹಳ ದುರದೃಷ್ಟಶಾಲಿಯಾಗಿದ್ದಾನೆ." ಹಝ್ರತ್ ಪೈಗಂಬರ್(ಸ) ಹೇಳಿದುದರ ಅರ್ಥವೇನೆಂದರೆ, ವೃದ್ಧರಾದ ತಂದೆ ತಾಯಂದಿರ ಸೇವೆಯನ್ನು ಮಾಡಿದರೆ ಮನುಷ್ಯನು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರ ನಾಗಿರುತ್ತಾನೆ. ಯಾರಿಗೆ ತನ್ನ ವೃದ್ಧ ತಂದೆ ತಾಯಂದಿರ ಸೇವೆ ಮಾಡುವ ಸಂದರ್ಭ ಸಿಗುವುದೋ ಅವನು ನಿಶ್ಚಯವಾಗಿಯೂ ಒಳಿತಿನಲ್ಲಿ ಸ್ಥಿರವಾಗಿ ನಿಲ್ಲುವವನೂ ಅಲ್ಲಾಹನ ಅನುಗ್ರಹಗಳಿಗೆ ಅರ್ಹನೂ ಆಗುತ್ತಾನೆ. (ಮುಸ್ಲಿಮ್)

ಒಬ್ಬ ವ್ಯಕ್ತಿ ಹಝ್ರತ್ ಪೈಗಂಬರರಿಗೆ(ಸ) ಹೀಗೆ ದೂರು ನೀಡಿದನು: "ಓ ಅಲ್ಲಾಹನ ಪೈಗಂಬರರೇ, ನನ್ನ ಸಂಬಂಧಿಕರು ಹೇಗಿದ್ದಾರೆಂದರೆ, ನಾನು ಅವರೊಂದಿಗೆ ಉತ್ತಮವಾಗಿ ವರ್ತಿಸುತ್ತೇನೆ. ಆದರೆ ಅವರು ನನ್ನೊಂದಿಗೆ ದುರ್ವರ್ತನೆ ಮಾಡುತ್ತಾರೆ. ನಾನು ಅವರಿಗೆ ಉಪಕಾರ ಮಾಡುತ್ತೇನೆ. ಆದರೆ ಅವರು ನನ್ನ ಮೇಲೆ ದೌರ್ಜನ್ಯ ಮಾಡುತ್ತಾರೆ. ನಾನು ಅವರೊಂದಿಗೆ ಪ್ರೀತಿಯಿಂದ ವರ್ತಿಸುತ್ತೇನೆ. ಆದರೆ ಅವರು ನನ್ನನ್ನು ಸಿಡುಕಿನಿಂದ ನೋಡುತ್ತಾರೆ." ಆಗ



ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಹೇಳಿದ ಹಾಗೆಯೇ ಆಗಿದ್ದರೆ, ನೀವು ಭಾಗ್ಯಶಾಲಿ ಆಗಿರುವಿರಿ. ಏಕೆಂದರೆ ನಿಮಗೆ ಅಲ್ಲಾಹನ ಸಹಾಯ ಯಾವಾಗಲೂ ದೊರಕುತ್ತಾ ಇರುವುದು." (ಮುಸ್ಲಿಮ್)

ಒಮ್ಮೆ ಹಝ್ರತ್ ಪೈಗಂಬರ್(ಸ) ದಾನ ಧರ್ಮದ ಬಗ್ಗೆ ಉಪದೇಶಿಸುತ್ತಾ ಇದ್ದರು. ಆಗ ಅವರ ಒಬ್ಬ ಶಿಷ್ಯರಾದ ಅಬೂ ತಲ್‌ಹ ಅನ್‌ಸಾರಿ(ರ) ಮುಂದೆ ಬಂದು ತನ್ನ ಒಂದು ತೋಟವನ್ನು ದಾನವಾಗಿ ನೀಡಿದರು. ಆಗ ಹಝ್ರತ್ ಪೈಗಂಬರರಿಗೆ ಬಹಳ ಸಂತೋಷವಾಯಿತು. ಅವರು ಹೇಳಿದರು: "ಇದು ಬಹಳ ಉತ್ತಮ ದಾನವಾಗಿದೆ. ಬಹಳ ಒಳ್ಳೆಯ ದಾನವಾಗಿದೆ." ಅನಂತರ ಅವರು ಹೇಳಿದರು: "ನೀವು ನಿಮ್ಮ ತೋಟವನ್ನು ದಾನವಾಗಿ ನೀಡಿರುವಿರಿ. ಈಗ ನೀವು ಈ ತೋಟವನ್ನು ನಿಮ್ಮ ಸಂಬಂಧಿಕರಿಗೆ ಹಂಚಿಕೊಡಬೇಕೆಂದು ನಾನು ಇಚ್ಛಿಸುತ್ತೇನೆ." (ಬುಖಾರಿ)

ಒಮ್ಮೆ ಒಬ್ಬನು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಬಂದು ಹೇಳಿದನು: "ನಾನು ಹಿಜ್‌ರತ್ (ವಲಸೆ) ಹೋಗುವ ಬಗ್ಗೆ ನಿಮ್ಮೊಂದಿಗೆ ನಿಷ್ಠೆಯ ಪ್ರತಿಜ್ಞೆ (ಬೈಅತ್) ಮಾಡಲು ಬಯಸುತ್ತೇನೆ. ಅಲ್ಲಾಹನ ಮಾರ್ಗದಲ್ಲಿ ಹೋರಾಡಲು ನಿಮ್ಮೊಂದಿಗೆ ನಿಷ್ಠೆಯ ಪ್ರತಿಜ್ಞೆ ಮಾಡಲು ಬಯಸುತ್ತೇನೆ. ನಾನು ದೇವ ಸಂಪ್ರೀತಿಯನ್ನು ಪಡೆಯಲು ಬಯಸುತ್ತೇನೆ." ಆಗ ಹಝ್ರತ್ ಪೈಗಂಬರ್ ವಿಚಾರಿಸಿದರು: "ನಿಮ್ಮ ತಂದೆ ತಾಯಂದಿರಲ್ಲಿ ಯಾರಾದರೂ ಜೀವಿಸಿರುವರೋ?" ಆ ವ್ಯಕ್ತಿ ಹೇಳಿದನು: "ಇಬ್ಬರೂ ಜೀವಿಸಿದ್ದಾರೆ." ಆಗ ಹಝ್ರತ್ ಪೈಗಂಬರ್ ಹೇಳಿದರು: "ಅಲ್ಲಾಹನು ನಿಮ್ಮ ನಡವಳಿಕೆಯಿಂದ ತೃಪ್ತನಾಗಬೇಕೆಂದು ನೀವು ಬಯಸುತ್ತೀರೋ?" ಆ ವ್ಯಕ್ತಿ ಹೇಳಿದನು: "ಅಲ್ಲಾಹನ ಪೈಗಂಬರರೇ, ನಾನು ಅದನ್ನು ಬಯಸುತ್ತೇನೆ." ಆಗ ಹಝ್ರತ್ ಪೈಗಂಬರ್ ಹೇಳಿದರು: "ನೀವು ಮನೆಗೆ ಮರಳಿ ನಿಮ್ಮ ತಂದೆ ತಾಯಂದಿರ ಸೇವೆ ಮಾಡಿರಿ. ಅದೇ ನಿಮಗೆ ಉತ್ತಮವಾಗಿದೆ. ಆದುದರಿಂದ ಚೆನ್ನಾಗಿ ಅವರ ಸೇವೆ ಮಾಡಿರಿ." (ಬುಖಾರಿ, ಮುಸ್ಲಿಮ್)

ಹಝ್ರತ್ ಪೈಗಂಬರ್(ಸ) ಯಾವಾಗಲೂ ಹೀಗೆ ಉಪದೇಶಿಸುತ್ತಿದ್ದರು: "ಉತ್ತಮ ವರ್ತನೆಗೆ ಧರ್ಮದ ಯಾವುದೇ ಶರತ್ತು ಇಲ್ಲ. ಬಡವರಾದ ಸಂಬಂಧಿಕರು ಅವರು ಯಾವ ಧರ್ಮಕ್ಕೆ ಸೇರಿದವರಾದರೂ ಅವರಿಗೆ ಸಹಾಯ ಮಾಡುವುದು ಒಳ್ಳೆಯ ಕೆಲಸವಾಗಿದೆ." ಹಝ್ರತ್ ಅಬೂಬಕರ್‌ರವರ(ರ) ಒಬ್ಬ ಪತ್ನಿ ಮುಸ್ಲಿಮಳಾಗಿರಲಿಲ್ಲ. ಹಝ್ರತ್ ಅಬೂಬಕರ್‌ರವರ ಮಗಳು ಅಸ್ಮಾ(ರ) ಹಝ್ರತ್ ಪೈಗಂಬರ್‌ರೊಂದಿಗೆ ಕೇಳಿದರು: "ಓ ಅಲ್ಲಾಹನ ಪೈಗಂಬರರೇ, ಬಹುದೇವಾರಾಧಕಳಾದ ನನ್ನ ತಾಯಿಯೊಂದಿಗೆ ಉತ್ತಮವಾಗಿ ವರ್ತಿಸಬಹುದೇ?" ಹಝ್ರತ್ ಪೈಗಂಬರ್ ಹೇಳಿದರು: "ನಿಶ್ಚಯವಾಗಿಯೂ, ಅವರು ನಿನ್ನ ತಾಯಿಯಾದುದರಿಂದ ನೀನು ಅವರೊಂದಿಗೆ ಉತ್ತಮವಾದ ರೀತಿಯಲ್ಲಿ ವರ್ತಿಸಬೇಕು." (ಬುಖಾರಿ)

ಹಝ್ರತ್ ಪೈಗಂಬರ್(ಸ) ತನ್ನ ಸಂಬಂಧಿಕರನ್ನು ಮಾತ್ರವಲ್ಲ, ಸಂಬಂಧಿಕರ ಸಂಬಂಧಿಕರನ್ನೂ ಅವರ ಸಂಬಂಧಿಕರನ್ನೂ ಗಮನದಲ್ಲಿ ಇಟ್ಟುಕೊಳ್ಳುತ್ತಿದ್ದರು. ಅವರು ಯಾವುದಾದರೂ ಮೃಗವನ್ನು ಬಲಿದಾನವಾಗಿ ವಧಿಸಿದರೆ ಅದರ ಮಾಂಸವನ್ನು ಹಝ್ರತ್ ಖದೀಜರ(ರ) ಸ್ನೇಹಿತೆಯರಿಗೆ ತಪ್ಪದೆ ಕಳುಹಿಸಿ ಕೊಡುತ್ತಿದ್ದರು. ಅವರು ಹೇಳುತ್ತಿದ್ದರು. "ಖದೀಜರ ಸ್ನೇಹಿತೆಯರನ್ನು ಮರೆತು ಬಿಡಬಾರದು. ಅವರಿಗೆ ಅವಶ್ಯಕವಾಗಿಯೂ ಮಾಂಸ ಕಳುಹಿಸಿ ಕೊಡಬೇಕು." (ಬುಖಾರಿ)

ಹಝ್ರತ್ ಖದೀಜ(ರ) ಮೃತರಾಗಿ ಎಷ್ಟೋ ವರ್ಷ ದಾಟಿ ಹೋದ ನಂತರ ಒಮ್ಮೆ ಹಝ್ರತ್ ಪೈಗಂಬರ್(ಸ) ಶಿಷ್ಯರೊಂದಿಗೆ ಕುಳಿತಿದ್ದಾಗ ಹಝ್ರತ್ ಖದೀಜರ ಸಹೋದರಿ ಹಾಲಃ ಅವರನ್ನು ಭೇಟಿಯಾಗಲು ಬಂದರು. ಅವರು, "ನಾನು ಒಳಗೆ ಬರಬಹುದೇ?" ಎಂದು ಕೇಳಿದಾಗ, ಅವರ ಧ್ವನಿಯು ಅವರ ಮೃತ ಸಹೋದರಿ ಹಝ್ರತ್ ಖದೀಜರ ಧ್ವನಿಯ ಹಾಗೆ ಕೇಳಿಸಿತು. ಆ ಧ್ವನಿ ಕೇಳಿದ ಕೂಡಲೇ ಹಝ್ರತ್ ಪೈಗಂಬರರ ದೇಹವು ರೋಮಾಂಚನಗೊಂಡಿತು. ಅನಂತರ ಅವರು ಸಾವರಿಸಿಕೊಂಡು ಹೇಳಿದರು: "ಓ ನನ್ನ ಅಲ್ಲಾಹ್, ಇವರು ಖದೀಜ ಸಹೋದರಿ ಹಾಲಃ ಆಗಿರುವರು." (ಬುಖಾರಿ)

ವಾಸ್ತವಿಕವಾಗಿ ನೈಜ ಪ್ರೀತಿಯ ತತ್ವವೇನೆಂದರೆ, ಯಾರ ಬಗ್ಗೆ ಪ್ರೀತಿ ಮತ್ತು ಆದರ ಇದೆಯೋ ಅಂತಹ ವ್ಯಕ್ತಿಯ ಸಂಬಂಧಿಕರೊಂದಿಗೆ ಮತ್ತು ಇನ್ನಿತರ ರೀತಿ ಅವರೊಂದಿಗೆ ಸಂಬಂಧ ಹೊಂದಿದವರೊಂದಿಗೆ ಸಹ ಪ್ರೀತಿಯು ಮೂಡಿ ಬರುತ್ತದೆ.

ಅನಸ್ ಬಿನ್ ಮಾಲಿಕ್(ರ) ಹೀಗೆ ಹೇಳುತ್ತಾರೆ: "ನಾನು ಒಮ್ಮೆ ಪ್ರಯಾಣ ಮಾಡುತ್ತಿದ್ದೆ, ಜರೀರ್ ಬಿನ್ ಅಬ್ದುಲ್ಲಾ ಎಂಬ ಇನ್ನೊಬ್ಬ ಶಿಷ್ಯ ಸಹ ನನ್ನ ಜೊತೆಗಿದ್ದರು. ಅವರು ನನ್ನ ಸೇವಕನ ಹಾಗೆ ನನ್ನ ಕೆಲಸಗಳನ್ನು ಮಾಡುತ್ತಿದ್ದರು. ಜರೀರ್ ನನಗಿಂತ ಪ್ರಾಯದಲ್ಲಿ ಹಿರಿಯರಾದ ಕಾರಣ ಅವರನ್ನು ಗೌರವಭಾವದಿಂದ ಕಾಣುವುದು ಅವಶ್ಯಕ ಎಂದು ನಾನು ನಿರ್ಧರಿಸಿ, 'ನೀವು ಹೀಗೆ ಮಾಡಬೇಡಿರಿ' ಎಂದು ಅವರೊಂದಿಗೆ ಹೇಳಿದೆ. ಆಗ ಜರೀರ್ ಹೇಳಿದರು, 'ಮದೀನದ ನಿವಾಸಿಗಳು (ಅನ್‌ಸಾರ್) ಹಝ್ರತ್ ಪೈಗಂಬರರಿಗೆ(ಸ) ಅಪರಿಮಿತವಾಗಿ ಸೇವೆ ಮಾಡುತ್ತಿದ್ದುದನ್ನು ನಾನು ನೋಡಿದ್ದೆನು. ಹಝ್ರತ್ ಪೈಗಂಬರರ ಬಗ್ಗೆ ಮದೀನ ನಿವಾಸಿಗಳು ಹೊಂದಿದ್ದ ಈ ಗಾಢ ಪ್ರೇಮವನ್ನು ಕಂಡು ನಾನು ನನ್ನ ಹೃದಯದಲ್ಲಿ ಪ್ರತಿಜ್ಞೆ ಮಾಡಿದೆನು – 'ನನಗೆ ಯಾವಾಗಲಾದರೂ ಒಬ್ಬ ಮದೀನ ನಿವಾಸಿಯೊಂದಿಗೆ ಪ್ರಯಾಣ ಮಾಡುವ ಸಂದರ್ಭ ಲಭಿಸಿದರೆ ಅಥವಾ ಅವರೊಂದಿಗೆ ವಾಸಿಸುವ ಸಂದರ್ಭ ಒದಗಿ ಬಂದರೆ ನಾನು ಮದೀನ ನಿವಾಸಿಯಾದ ಆ ಸಹೋದರನ ಸೇವೆಯನ್ನು ಮಾಡುವೆನು. ಆದುದರಿಂದ ನನ್ನನ್ನು ತಡೆಯಬೇಡಿರಿ. ನಾನು ನನ್ನ ಪ್ರತಿಜ್ಞೆಯನ್ನು ಈಡೇರಿಸುತ್ತಿರುವೆನು.' " (ಬುಖಾರಿ, ಮುಸ್ಲಿಮ್)

ಈ ಸಂಭವದಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಒಬ್ಬನಿಗೆ ಪ್ರಿಯರಾದವರ



ಸೇವೆಯನ್ನು ಯಾರು ಮಾಡುತ್ತಾನೋ ಅವನು ಸಹ ಪ್ರೀತಿಗೆ ಪಾತ್ರನಾಗುತ್ತಾನೆ. ಯಾರ ಹೃದಯದಲ್ಲಿ ತಮ್ಮ ತಂದೆ ತಾಯಂದಿರ ಬಗ್ಗೆ ನೈಜ ಆದರವಿದೆಯೋ ಅವರು ತಮ್ಮ ತಂದೆ ತಾಯಂದಿರನ್ನು ಮಾತ್ರವಲ್ಲ ಅವರ ಸಂಬಂಧಿಕರನ್ನೂ ಸ್ನೇಹಿತರನ್ನೂ ಆದರ ಭಾವದಿಂದ ಕಾಣುತ್ತಾರೆ.

ಒಮ್ಮೆ ಹಝ್ರತ್ ಪೈಗಂಬರ್(ಸ) ತನ್ನ ಶಿಷ್ಯರೊಂದಿಗೆ ಕುಳಿತಿದ್ದಾಗ ಸಂಬಂಧಿಕರ ಸೇವೆ ಮಾಡುವ ಬಗ್ಗೆ ಪ್ರಸ್ತಾಪಿಸಲಾಯಿತು. ಆಗ ಹಝ್ರತ್ ಪೈಗಂಬರ್ ಹೇಳಿದರು: "ಅತ್ಯುತ್ತಮ ಸದ್ಗುಣ ಯಾವುದೆಂದರೆ ಮನುಷ್ಯನು ತನ್ನ ತಂದೆಯ ಸ್ನೇಹಿತರ ಬಗ್ಗೆಯೂ ಗಮನ ಕೊಡುವುದಾಗಿದೆ." ಹಝ್ರತ್ ಪೈಗಂಬರ್(ಸ) ಈ ಮಾತನ್ನು ಹಝ್ರತ್ ಅಬ್ದುಲ್ಲಾ ಬಿನ್ ಉಮರ್‌ರೊಂದಿಗೆ ಹೇಳಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಹಝ್ರತ್ ಪೈಗಂಬರರ ಉಪದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಿದರು. ಅವರು ಹಜ್ಜ್‌ಗೋಸ್ಕರ ಯಾತ್ರೆ ಮಾಡುತ್ತಿದ್ದಾಗ ಮಾರ್ಗದಲ್ಲಿ ಒಬ್ಬ ವ್ಯಕ್ತಿಯನ್ನು ಕಂಡರು. ಆಗ ಅವರು ತಾನು ಸವಾರಿ ಮಾಡುತ್ತಿದ್ದ ಕತ್ತೆಯನ್ನು ಆ ವ್ಯಕ್ತಿಗೆ ಕೊಟ್ಟರು. ತನ್ನ ತಲೆಯ ಮೇಲಿದ್ದ ಸುಂದರ ಪೇಟವನ್ನು ಆ ವ್ಯಕ್ತಿಗೆ ಕೊಟ್ಟರು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಉಮರ್‌ರ ಜೊತೆಗಾರರು ಅವರೊಂದಿಗೆ ಹೇಳಿದರು: "ನೀವು ಇದೇನು ಮಾಡಿದಿರಿ. ಈ ಗ್ರಾಮ ವಾಸಿಗಳಾದ ಜನರಿಗೆ ಏನಾದರೂ ಸ್ವಲ್ಪ ವಸ್ತುವನ್ನು ಕೊಟ್ಟರೂ ಅವರು ಸಂತೋಷಪಡುತ್ತಾರೆ. ಆಗ ಅವರು ಹೇಳಿದರು: "ಈ ಮನುಷ್ಯನ ಪಿತ ಹಝ್ರತ್ ಉಮರ್‌ರವರ(ರ) ಸ್ನೇಹಿತರಾಗಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದ್ದರ – ಮನುಷ್ಯನು ತನ್ನ ತಂದೆಯ ಸ್ನೇಹಿತರ ಬಗ್ಗೆ ಸಹ ಗಮನವಿರಿಸುವುದು ಉತ್ತಮವಾದ ನಡತೆಯ ಅತ್ಯುನ್ನತ ಮಟ್ಟದ ಪ್ರದರ್ಶನವಾಗಿದೆ." (ಮುಸ್ಲಿಮ್)

## ಸತ್ಸಂಗ

ಹಝ್ರತ್ ಪೈಗಂಬರ್(ಸ) ತನ್ನ ಸುತ್ತುಮುತ್ತು ಸಾತ್ವಿಕರಾದ ಜನರಿರುವುದನ್ನು ಇಷ್ಟಪಡುತ್ತಿದ್ದರು. ಯಾರಲ್ಲಾದರೂ ಬಲಹೀನತೆಗಳಿದ್ದರೆ ಉತ್ತಮವಾಗಿ ಮತ್ತು ಆ ವಿಷಯ ಇತರರಿಗೆ ತಿಳಿಯದ ಹಾಗೆ ಗುಟ್ಟಾಗಿ ಉಪದೇಶಿಸುತ್ತಿದ್ದರು. ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು – "ಒಳ್ಳೆಯ ಸ್ನೇಹಿತ ಮತ್ತು ಒಳ್ಳೆಯ ಜೊತೆಗಾರರು ಹಾಗೂ ಕೆಟ್ಟ ಸ್ನೇಹಿತ ಮತ್ತು ಕೆಟ್ಟ ಜೊತೆಗಾರರು ಇವರ ಉದಾಹರಣೆ ಹೇಗೆಂದರೆ, ಒಳ್ಳೆಯ ಸ್ನೇಹಿತ ಮತ್ತು ಒಳ್ಳೆಯ ಜೊತೆಗಾರರನ್ನು ಹೊಂದಿದವನು ಕಸ್ತೂರಿಯನ್ನು ತೆಗೆದುಕೊಂಡು ತಿರುಗಾಡುತ್ತಿರುವವನ ಹಾಗೆ. ಅವನು ಅದನ್ನು ತಿಂದರೆ ಅದು ಅವನಿಗೆ ಪ್ರಯೋಜನಕರವಾಗುವುದು. ಅದನ್ನು ಇಟ್ಟುಬಿಟ್ಟರೆ ಅದರಿಂದ ಸುವಾಸನೆಯನ್ನು ಪಡೆಯುವನು. ಕೆಟ್ಟ ಸ್ನೇಹಿತ ಮತ್ತು ಕೆಟ್ಟ ಜೊತೆಗಾರರನ್ನು ಹೊಂದಿದವನು ಕುಲುಮೆಯ ಬೆಂಕಿಯೊಳಗೆ ಅದು ಪ್ರಜ್ವಲಿಸಲು ಊದುವವನ ಹಾಗೆ, ಕುಲುಮೆಯಿಂದ ಕಿಡಿಯೊಂದು ಹಾರಿ ಬಂದು ಅವನ ಬಟ್ಟೆಯನ್ನು

ಸುಡಬಹುದು. ಅಥವಾ ಇಂಧನದ ದುರ್ವಾಸನೆಯಿಂದ ಆತನ ತಲೆ ಕೆಟ್ಟು ಹೋಗಬಹುದು." (ಮುಸ್ಲಿಮ್)

ಹಝ್ರತ್ ಪೈಗಂಬರ್[ಸ] ತನ್ನ ಶಿಷ್ಯರಿಗೆ ಪದೇ ಪದೇ ಹೀಗೆ ಉಪದೇಶಿಸುತ್ತಿದ್ದರು: "ಒಬ್ಬ ಮನುಷ್ಯನ ಸ್ವಭಾವವು ಅವನು ಯಾರ ಜೊತೆ ಕುಳಿತುಕೊಳ್ಳುತ್ತಾನೋ ಅವರ ಸ್ವಭಾವದ ಹಾಗೆ ಆಗುತ್ತದೆ. ಆದುದರಿಂದ ಒಳ್ಳೆಯವರ ಸಹವಾಸ ಮಾಡಿರಿ." (ಬುಖಾರಿ ಮತ್ತು ಮುಸ್ಲಿಮ್)

## ಜನರ ವಿಶ್ವಾಸವನ್ನು ರಕ್ಷಿಸುವ ಬಗ್ಗೆ ಶ್ರದ್ಧೆ

ಹಝ್ರತ್ ಪೈಗಂಬರ್[ಸ] ಯಾರೂ ತಪ್ಪು ಗ್ರಹಿಕೆಗೆ ಗುರಿಯಾಗಬಾರದೆಂದು ಜಾಗರೂಕರಾಗುತ್ತಿದ್ದರು. ಒಮ್ಮೆ ಅವರು ಮಸ್‌ಜಿದ್‌ನಲ್ಲಿದ್ದಾಗ ಅವರ ಪತ್ನಿ ಸಫಿಯಾ[ರ] ಅವರನ್ನು ಕಾಣಬಂದರು. ಅವರೊಂದಿಗೆ ಮಾತನಾಡುತ್ತಾ ರಾತ್ರಿ ಹೆಚ್ಚು ಸಮಯ ಕಳೆಯಿತು. ಅವರನ್ನು ಮನೆಗೆ ತಲಪಿಸಿ ಹಿಂದಕ್ಕೆ ಬರುವುದು ಉತ್ತಮವೆಂದು ಹಝ್ರತ್ ಪೈಗಂಬರ್[ಸ] ನಿರ್ಧರಿಸಿದರು. ಅವರೊಂದಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಇಬ್ಬರನ್ನು ಕಂಡರು. ಆ ಜನರ ಹೃದಯದಲ್ಲಿ ಪೈಗಂಬರ್ ರಾತ್ರಿ ಹೊತ್ತು ಒಬ್ಬ ಸ್ತ್ರೀಯ ಜೊತೆಯಲ್ಲಿ ಎಲ್ಲಿಗೆ ಹೋಗುತ್ತಿದ್ದಾರೆ ಎಂಬ ದುರಾಲೋಚನೆ ಬರದಿರಲಿ ಎಂದು ಉದ್ದೇಶಿಸಿ ಹಝ್ರತ್ ಪೈಗಂಬರ್[ಸ] ಆ ಇಬ್ಬರನ್ನು ನಿಲ್ಲಲು ಹೇಳಿ ಹೀಗೆಂದರು: "ನೋಡಿರಿ, ಈಕೆ ನನ್ನ ಪತ್ನಿ ಸಫಿಯಾ." ಆಗ ಅವರು ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನಮಗೆ ನಿಮ್ಮ ಬಗ್ಗೆ ಕೆಟ್ಟ ಸಂಶಯ ಹೇಗೆ ತಾನೆ ಉಂಟಾಗಲು ಸಾಧ್ಯ?" ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: "ಶೈತಾನನು (ಪೈಶಾಚಿಕ ಚಿಂತೆಗಳು) ಮನುಷ್ಯನ ರಕ್ತದಲ್ಲಿ ಹರಿಯುತ್ತಿವೆ. ನಿಮ್ಮ ವಿಶ್ವಾಸಕ್ಕೆ ಯಾವುದೇ ಬಲಹೀನತೆ ತಟ್ಟದಿರಲಿ ಎಂದು ಭಾವಿಸಿ ನಾನು ಹೀಗೆ ಮಾಡಿದೆ." (ಬುಖಾರಿ)

## ಅನ್ಯರ ತಪ್ಪುಗಳನ್ನು ಮರೆಮಾಡುವುದು

ಹಝ್ರತ್ ಪೈಗಂಬರರ[ಸ] ದೃಷ್ಟಿಗೆ ಯಾರದಾದರೂ ತಪ್ಪು ಕಾಣಿಸಿದರೆ ಅವರು ಅದನ್ನು ಮುಚ್ಚಿಡುತ್ತಿದ್ದರು. ಯಾರಾದರೂ ತನ್ನ ಲೋಪ ದೋಷಗಳನ್ನು ಪ್ರಕಟಿಸಲು ಬಯಸಿದರೆ ಅವರು ಅದನ್ನು ಬಹಿರಂಗಪಡಿಸಬಾರದೆಂದು ಹೇಳಿ ತಡೆಯುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: "ಒಬ್ಬ ದಾಸನು, ಇನ್ನೊಬ್ಬ ದಾಸನು ಮಾಡಿದ ಪಾಪವನ್ನು ಈ ಲೋಕದಲ್ಲಿ ಮರೆಮಾಡುವುದಾದರೆ ಅಲ್ಲಾಹನು ಅವನು ಮಾಡಿದ ಪಾಪವನ್ನು ಪುನರುತ್ಥಾನದ ದಿನ ಮುಚ್ಚಿಡುವನು." (ಮುಸ್ಲಿಮ್)

ಹಝ್ರತ್ ಪೈಗಂಬರ್[ಸ] ಹೀಗೆ ಸಹ ಹೇಳಿದ್ದರು: "ನನ್ನ ಸಮುದಾಯದ ಪ್ರತಿಯೊಬ್ಬನ ಪಾಪವು ಅಳಿಸಿ ಹೋಗಲು ಸಾಧ್ಯವಿದೆ. (ಎಂದರೆ ಪಶ್ಚಾತ್ತಾಪದಿಂದ ಅಲ್ಲಾಹನ ಕಡೆಗೆ ಬಾಗುವ ಮೂಲಕ.) ಆದರೆ ತಾವು ಮಾಡಿದ ಪಾಪ ಕೃತ್ಯಗಳನ್ನು ತಾವೇ ಸ್ವತಃ ಬಹಿರಂಗಪಡಿಸುತ್ತಾ ಹೋಗುವವರಿಗೆ ರಕ್ಷಾ ಮಾರ್ಗವಿಲ್ಲ."



ಹಝ್ರತ್ ಪೈಗಂಬರ್[ಸ] ಹೀಗೆ ವಿವರಿಸಿದರು: "ಪಾಪ ಕೃತ್ಯವನ್ನು ತಾವೇ ಸ್ವತಃ ಬಹಿರಂಗಪಡಿಸುವುದು ಎಂದರೆ ಹೀಗೆ: ಒಬ್ಬನು ರಾತ್ರಿಯ ಅಂಧಕಾರದಲ್ಲಿ ಒಂದು ಪಾಪಕೃತ್ಯ ಮಾಡುತ್ತಾನೆ. ಅಲ್ಲಾಹನು ಅದರ ಮೇಲೆ ಪರದೆ ಹಾಕುತ್ತಾನೆ. ಆದರೆ ಆ ಪಾಪಕೃತ್ಯ ಮಾಡಿದವನು ಬೆಳಗ್ಗೆ ತನ್ನ ಸ್ನೇಹಿತರನ್ನು ಕಂಡಾಗ ಹೇಳುತ್ತಾನೆ – 'ಓ ನನ್ನ ಸ್ನೇಹಿತರೇ, ನಾನು ರಾತ್ರಿ ಈ ಕೆಲಸ ಮಾಡಿದೆನು. ನಾನು ರಾತ್ರಿ ಆ ಕೆಲಸ ಮಾಡಿದೆನು.' ರಾತ್ರಿ ಅಲ್ಲಾಹನು ಅವನು ಮಾಡಿದ ಪಾಪ ಕೃತ್ಯದ ಮೇಲೆ ಪರದೆ ಹಾಕಿದ್ದನು. ಆದರೆ ಅವನು ಬೆಳಗ್ಗೆ ತನ್ನ ಪಾಪವನ್ನು ತಾನೇ ಬಹಿರಂಗಪಡಿಸುತ್ತಾನೆ." (ಬುಖಾರಿ)

ಪಾಪಕೃತ್ಯ ಮಾಡಿದುದನ್ನು ಪ್ರಕಟಿಸಿದರೆ ಅದರಿಂದ ಪಶ್ಚಾತ್ತಾಪಗೊಂಡಂತೆ ಆಗಿ ಪಾಪ ಪರಿಹಾರ ಆಗುತ್ತದೆ ಎಂದು ಕೆಲವು ಜನರು ತಮ್ಮ ಮೌಢ್ಯದ ಕಾರಣದಿಂದ ನಂಬುತ್ತಾರೆ. ವಾಸ್ತವಾಂಶವೇನೆಂದರೆ, ಪಾಪಕೃತ್ಯಗಳನ್ನು ಪ್ರಕಟಿಸುವ ಮೂಲಕ ಪಶ್ಚಾತ್ತಾಪಗೊಂಡಂತೆ ಅಥವಾ ಪಾಪ ಪರಿಹಾರ ಆಗುವುದಿಲ್ಲ. ಪಾಪಕೃತ್ಯ ಬಹಿರಂಗಗೊಳ್ಳುವುದರಿಂದ ನಿರ್ಲಜ್ಜತೆ ಸೃಷ್ಟಿಯಾಗುತ್ತದೆ. ಪಾಪವೆಂಬುದು ಕೆಟ್ಟದ್ದಾಗಿದೆ. ಆದರೆ ಪಾಪ ಮಾಡಿದವರಿಗೆ ನಾಚಿಕೆ ಮತ್ತು ಖೇದ ಉಂಟಾಗುವುದಾದರೆ ಅಂತಹ ಜನರಿಗೆ ಅಲ್ಲಾಹನ ಕಡೆಗೆ ಪಶ್ಚಾತ್ತಾಪಗೊಂಡು ಬಾಗುವ (ಎಂದರೆ ತೌಬ ಮಾಡುವ) ಮಾರ್ಗವು ತೆರೆದಿರುತ್ತದೆ. ಭಯ ಭಕ್ತಿಯು ಅದರ ನಂತರ ಅವರಲ್ಲಿ ಉಂಟಾಗುತ್ತದೆ. ಅವರಿಗೆ ಮುಂದೆ ಒಳ್ಳೆಯ ಸಂದರ್ಭ ದೊರಕುತ್ತದೆ. ಆಗ ಅವರ ಭಯ ಭಕ್ತಿ ಜಯಗಳಿಸುತ್ತದೆ ಮತ್ತು ಪಾಪವು ಓಡಿ ಹೋಗುತ್ತದೆ.

ಆದರೆ ಯಾರು ತಮ್ಮ ಪಾಪ ಕೃತ್ಯಗಳನ್ನು ಹೇಳಿಕೊಂಡು ಹೋಗುತ್ತಾ ಅದರ ಬಗ್ಗೆ ಹೆಮ್ಮೆಪಡುತ್ತಾರೋ ಅಂತಹ ಜನರ ಹೃದಯದಿಂದ ಪಾಪಪ್ರಜ್ಞೆಯೇ ಅಳಿಸಿ ಹೋಗುತ್ತದೆ. ಪಾಪದ ಬಗ್ಗೆ ಪ್ರಜ್ಞೆಯೇ ಅಳಿಸಿ ಹೋಗುವುದಾದರೆ ಅಂತಹ ಜನರು ಪಶ್ಚಾತ್ತಾಪಗೊಂಡು ದೇವನ ಕಡೆಗೆ ತಿರುಗುವ ಪ್ರಶ್ನೆಯೇ ಉಂಟಾಗುವುದಿಲ್ಲ.

ಒಮ್ಮೆ ಹಝ್ರತ್ ಪೈಗಂಬರರ[ಸ] ಸಮೀಪಕ್ಕೆ ಒಬ್ಬನು ಬಂದು ಹೇಳಿದನು: "ಓ ಅಲ್ಲಾಹನ ಪೈಗಂಬರರೇ, ನಾನು ವ್ಯಭಿಚಾರ ಮಾಡಿರುವೆನು." (ವ್ಯಭಿಚಾರವೆಂಬುದು ಇಸ್ಲಾಮ್ ಧರ್ಮದಲ್ಲಿ ದಂಡನೆಗೆ ಅರ್ಹವಾದ ಅಪರಾಧವಾಗಿದೆ. ಇಸ್ಲಾಮ್ ಧರ್ಮದ ನಿಯಮಗಳು ಜಾರಿಗೊಂಡಿರುವ ಸ್ಥಳಗಳಲ್ಲಿ ಇಸ್ಲಾಮೀ ತತ್ವಗಳ ಪ್ರಕಾರ ವ್ಯಭಿಚಾರದ ಅಪರಾಧವು ಸಾಬೀತಾದರೆ ಶಿಕ್ಷೆ ನೀಡಲ್ಪಡುತ್ತದೆ.) ಆ ವ್ಯಕ್ತಿ "ಓ ಅಲ್ಲಾಹನ ಪೈಗಂಬರರೇ, ನಾನು ವ್ಯಭಿಚಾರ ಮಾಡಿರುವೆನು" ಎಂದು ಹೇಳಿದಾಗ ಹಝ್ರತ್ ಪೈಗಂಬರ್[ಸ] ಅವನ ಕಡೆಯಿಂದ ಮುಖ ತಿರುಗಿಸಿದರು. ಅವನನ್ನು ಗಮನಿಸದೆ ಬೇರೆ ಮಾತುಗಳಲ್ಲಿ ಮಗ್ನರಾದರು. ವಾಸ್ತವಿಕವಾಗಿ ಹಝ್ರತ್ ಪೈಗಂಬರರು ಹೀಗೆ ಸೂಚಿಸಿದ್ದರು: "ನೀನು ಮಾಡಿದ ಪಾಪದ ಮೇಲೆ ಅಲ್ಲಾಹನು ಪರದೆ ಹಾಕಿದ್ದಾನೆ. ಅದಕ್ಕಿರುವ ಪರಿಹಾರ ಮಾರ್ಗ

ಅಲ್ಲಾಹನ ಕಡೆಗೆ ಪಶ್ಚಾತ್ತಾಪಗೊಂಡು ಬಾಗುವುದಾಗಿದೆ. ಅದಕ್ಕಿರುವ ಪರಿಹಾರ ಆ ಪಾಪದ ಬಹಿರಂಗ ಪ್ರಕಟಣೆ ಮಾಡುವುದಲ್ಲ." ಆದರೆ ಆ ವ್ಯಕ್ತಿ ಹಝ್ರತ್ ಪೈಗಂಬರರ ಇಂಗಿತವನ್ನು ಮನವರಿಕೆ ಮಾಡಿಕೊಳ್ಳಲಿಲ್ಲ. ಪ್ರಾಯಶಃ ಹಝ್ರತ್ ಪೈಗಂಬರ್(ಸ) ತನ್ನ ಮಾತನ್ನು ಆಲಿಸಲಿಲ್ಲವೆಂದು ಅವನು ಭಾವಿಸಿದನು. ಅವನು ಹಝ್ರತ್ ಪೈಗಂಬರರು ಅಭಿಮುಖೀಕರಿಸಿದ ಕಡೆಗೆ ಹೋಗಿ ಅವರ ಮುಂದೆ ನಿಂತು: "ಓ ಅಲ್ಲಾಹನ ಪೈಗಂಬರರೇ, ನಾನು ವ್ಯಭಿಚಾರ ಮಾಡಿದೆ" ಎಂದನು. ಆಗ ಹಝ್ರತ್ ಪೈಗಂಬರ್ ಆತನ ಮಾತಿಗೆ ಕಿವಿಗೊಡಲಿಲ್ಲ, ಅವರು ಬೇರೆ ಕಡೆಗೆ ಮುಖ ತಿರುಗಿಸಿದರು. ಆಗ ಸಹ ಆ ವ್ಯಕ್ತಿ ಹಝ್ರತ್ ಪೈಗಂಬರರ ಇಂಗಿತವೇನೆಂದು ಮನವರಿಕೆ ಮಾಡಲಿಲ್ಲ. ಅವನು ಮೂರನೆಯ ಸಲ ಸಹ ಹಝ್ರತ್ ಪೈಗಂಬರರ ಎದುರಿಗೆ ಬಂದು ತನ್ನ ಮಾತನ್ನು ಪುನರಾವರ್ತಿಸಿದನು. ಹಝ್ರತ್ ಪೈಗಂಬರರು ಪುನಃ ಅವನನ್ನು ನಿರ್ಲಕ್ಷಿಸಿ ಮುಖ ತಿರುಗಿಸಿದರು. ಆಗ ಆ ವ್ಯಕ್ತಿ ನಾಲ್ಕನೆಯ ಸಲ ಹಝ್ರತ್ ಪೈಗಂಬರರ ಮುಂದೆ ಬಂದು ತನ್ನ ಮಾತನ್ನು ಪುನರಾವರ್ತಿಸಿದನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅಲ್ಲಾಹನು ಅವನನ್ನು ಹಿಡಿಗೂಡುವ ನಿರ್ಧಾರ ಕೈಗೊಳ್ಳುವ ತನಕ ಈ ವ್ಯಕ್ತಿ ತನ್ನ ಪಾಪವನ್ನು ಬಹಿರಂಗಪಡಿಸಬಾರದೆಂದು ನಾನು ಇಚ್ಛಿಸುತ್ತಿದ್ದೆ. ಆದರೆ ಈ ವ್ಯಕ್ತಿ ನಾಲ್ಕು ಸಾರಿ ತನ್ನ ಅಪರಾಧದ ಬಗ್ಗೆ ತಾನೇ ಸಾಕ್ಷಿ ಹೇಳಿದ್ದಾನೆ. ಆದುದರಿಂದ ನಾನು ಈಗ ಆತನಿಗೆ ಶಿಕ್ಷೆ ನೀಡಲು ನಿರ್ಬಂಧಿತನಾಗಿರುವೆನು." (ತಿರ್ಮಿಝಿ)

ಹಝ್ರತ್ ಪೈಗಂಬರ್(ಸ) ಅನಂತರ ಹೀಗೆ ಹೇಳಿದರು: "ಈ ವ್ಯಕ್ತಿ ತನ್ನ ಮೇಲೆಯೇ ಅಪರಾಧದ ಆರೋಪ ಮಾಡಿದ್ದಾನೆ. ಆದರೆ ಆ ಮಹಿಳೆ ಇವನ ಹಾಗೆ ತನ್ನ ಮೇಲೆ ಅಪರಾಧದ ಆರೋಪ ಹೊರಿಸಿಲ್ಲ. ಈ ವ್ಯಕ್ತಿ ಯಾರ ಬಗ್ಗೆ ವ್ಯಭಿಚಾರದ ಆರೋಪ ಮಾಡಿರುವನೋ ಆ ಮಹಿಳೆಯನ್ನು ವಿಚಾರಿಸಿರಿ. ಆ ಮಹಿಳೆ ನಿರಾಕರಿಸಿದರೆ ಅವಳ ವಿರುದ್ಧ ಏನೂ ಹೇಳಬೇಡಿರಿ. ಈ ವ್ಯಕ್ತಿಗೆ ಮಾತ್ರ ಅವನ ತಪ್ಪೊಪ್ಪಿಗೆ ಪ್ರಕಾರ ಶಿಕ್ಷೆ ನೀಡಿರಿ. ಆದರೆ ಆ ಮಹಿಳೆ ಸಹ ಅಪರಾಧವನ್ನು ಒಪ್ಪಿದರೆ ಆಕೆಗೂ ಶಿಕ್ಷೆ ನೀಡಿರಿ."

ಹಝ್ರತ್ ಪೈಗಂಬರರ(ಸ) ನಡವಳಿಕೆ ಹೇಗಿತ್ತೆಂದರೆ, ಯಾವುದಾದರೂ ವಿಷಯದ ಬಗ್ಗೆ ಉಪದೇಶವು ಪವಿತ್ರ ಖುರ್ಆನ್‌ನಲ್ಲಿ ಅಂದಿನ ತನಕ ಅವತೀರ್ಣವಾಗಿರದಿದ್ದರೆ ಆ ವಿಷಯದ ಕುರಿತು ಹಝ್ರತ್ ಮೂಸಾ ಪ್ರವಾದಿಯ(ಅ) ಗ್ರಂಥವಾದ ತೌರಾತ್ ಪ್ರಕಾರ ಆಜ್ಞೆ ನೀಡುತ್ತಿದ್ದರು. ಮೂಸಾ ಪ್ರವಾದಿಯ ಗ್ರಂಥದಲ್ಲಿ ವ್ಯಭಿಚಾರದ ಅಪರಾಧಕ್ಕೆ ಕಲ್ಲೆಸೆದು ಕೊಲ್ಲುವ ಶಿಕ್ಷೆ ವಿಧಿಸಲಾಗಿದೆ. ಈ ಕಾರಣದಿಂದ ಹಝ್ರತ್ ಪೈಗಂಬರರು ಆ ವ್ಯಕ್ತಿಗೆ ಕಲ್ಲೆಸೆದು ಕೊಲ್ಲುವ ಶಿಕ್ಷೆ ವಿಧಿಸಿದರು. ಅವನಿಗೆ ಜನರು ಕಲ್ಲೆಸೆಯಲು ತೊಡಗಿದಾಗ ಅವನು ಓಡಿ ಹೋಗಲು ಪ್ರಯತ್ನಿಸಿದನು. ಆದರೆ ಜನರು ಅವನನ್ನು ಬೆನ್ನಟ್ಟಿ ಕಲ್ಲೇಟಿನಿಂದ ಹೊಡೆದು ಮೂಸಾ ಪ್ರವಾದಿಯ ನಿಯಮಕ್ಕೆ ಅನುಸಾರವಾಗಿ ಕೊಂದರು. ಹಝ್ರತ್ ಪೈಗಂಬರರಿಗೆ ಈ ವಿಷಯ ತಿಳಿದಾಗ ಅವರು ಜನರ ವರ್ತನೆ ಬಗ್ಗೆ ಅತೃಪ್ತಿ



ಸೂಚಿಸಿದರು. ಅವರು ಹೀಗೆ ಹೇಳಿದರು: "ಅವನಿಗೆ ಶಿಕ್ಷೆಯು ಅವನ ತಪ್ಪೊಪ್ಪಿಗೆ ಕಾರಣದಿಂದ ನೀಡಲಾಯಿತು. ಅವನು ಓಡಿ ಹೋದಾಗ ಅವನು ತನ್ನ ತಪ್ಪೊಪ್ಪಿಗೆಯನ್ನು ಹಿಂತೆಗೆದಂತೆ ಆಯಿತು. ಆದುದರಿಂದ ಅನಂತರ ಅವನಿಗೆ ಕಲ್ಲೆಸೆದು ಕೊಲ್ಲುವ ಅಧಿಕಾರ ನಿಮಗೆ ಇರಲಿಲ್ಲ. ನೀವು ಅವನನ್ನು ಬಿಟ್ಟು ಬಿಡಬೇಕಾಗಿತ್ತು."

ನಿಯಮವು ಜಾರಿಗೊಳಿಸಬೇಕಾದುದು ಬಹಿರಂಗವಾಗಿ ಮಾಡಿದ ಕೃತ್ಯಕ್ಕೆ ಅನುಸಾರವಾಗಿರಬೇಕು ಎಂದು ಹಝ್ರತ್ ಪೈಗಂಬರ್(ಸ) ಯಾವಾಗಲೂ ನಿರ್ದೇಶಿಸುತ್ತಿದ್ದರು. ಒಮ್ಮೆ ಒಂದು ಯುದ್ಧಕ್ಕೆ ಕೆಲವು ಶಿಷ್ಯರು ಹೋಗುತ್ತಿದ್ದಾಗ ಒಬ್ಬ ಬಹುದೇವಾರಾಧಕನನ್ನು ಅವರು ಕಂಡರು. ಅವನು ಕಾಡುಗುಡ್ಡಗಳಲ್ಲಿ ಹೊಂಚುಹಾಕುತ್ತಾ ತಿರುಗುತ್ತಿದ್ದನು. ಅವನಿಗೆ ಯಾರಾದರೂ ಮುಸ್ಲಿಮ್ ಒಬ್ಬಂಟಿಗನಾಗಿ ಕಾಣಲು ಸಿಕ್ಕಿದರೆ ಆತನ ಮೇಲೆ ಆಕ್ರಮಣ ಮಾಡಿ ಕೊಂದು ಬಿಡುತ್ತಿದ್ದನು. ಉಸಾಮ ಬಿನ್ ಝೈದ್(ರ) ಅವನನ್ನು ಬೆನ್ನಟ್ಟಿ ಹಿಡಿದು ಕೊಲ್ಲಲು ಖಡ್ಗವೆತ್ತಿದರು. ಆಗ ಅವನು ತನಗೆ ಬಿಡುಗಡೆಗೆ ಬೇರೆ ದಾರಿ ಇಲ್ಲ ಎಂದು ಗ್ರಹಿಸಿ, "ಲಾ ಇಲಾಹ ಇಲ್ಲಲ್ಲಾಹ್" (ಅಲ್ಲಾಹನ ಹೊರತು ಅನ್ಯ ದೇವನಿಲ್ಲ) ಎಂದನು. ಅವನು ಹೇಳಲು ಉದ್ದೇಶಿಸಿದುದು "ನಾನು ಮುಸ್ಲಿಮನಾಗುತ್ತೇನೆ" ಎಂದಾಗಿತ್ತು. ಆದರೆ ಉಸಾಮ ಅವನ ಈ ಮಾತನ್ನು ಗಮನಿಸದೆ ಅವನನ್ನು ಕೊಂದುಬಿಟ್ಟರು.

ಹಝ್ರತ್ ಪೈಗಂಬರರಿಗೆ(ಸ) ಯುದ್ಧದ ಸಮಾಚಾರ ತಲಪಿಸಲು ಒಬ್ಬ ವ್ಯಕ್ತಿ ಮದೀನಕ್ಕೆ ತಲಪಿದಾಗ ಯುದ್ಧದ ಸಮಾಚಾರದೊಂದಿಗೆ ಈ ಘಟನೆಯನ್ನು ವಿವರಿಸಲಾಯಿತು. ಅದನ್ನು ಆಲಿಸಿದ ನಂತರ ಹಝ್ರತ್ ಪೈಗಂಬರ್(ಸ) ಉಸಾಮರನ್ನು ಕರೆದು ಕೇಳಿದರು: "ನೀವು ಆ ಮನುಷ್ಯನನ್ನು ಕೊಂದಿರುವಿರೋ?" ಉಸಾಮ ಹೇಳಿದರು: "ಹೌದು, ನಾನು ಕೊಂದೆನು." ಆಗ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಕೇಳಿದರು: "ಪುನರುತ್ಥಾನದ ದಿನ ಅವನು ಉಚ್ಚರಿಸಿದ 'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಅನ್ಯ ದೇವನಿಲ್ಲ) ಎಂಬ ವಾಕ್ಯ ನಿಮ್ಮ ವಿರುದ್ಧ ಸಾಕ್ಷಿ ಹೇಳುವಾಗ ನೀವು ಏನು ಮಾಡುವಿರಿ?" ಹಝ್ರತ್ ಪೈಗಂಬರ್(ಸ) ಉದ್ದೇಶಿಸಿದ್ದೇನೆಂದರೆ, ಪುನರುತ್ಥಾನದ ದಿನ ಅಲ್ಲಾಹನು ಪ್ರಶ್ನಿಸುವನು: ಆ ಮನುಷ್ಯನು ಅಲ್ಲಾಹನ ಹೊರತು ಅನ್ಯ ದೇವನಿಲ್ಲ ಎಂದು ಹೇಳಿರುವಾಗ ನೀನೇಕೆ ಕೊಂದೆ? ಆ ವ್ಯಕ್ತಿ ಕೊಲೆಗಡುಕನಾಗಿದ್ದರೂ ಅವನು ಪಶ್ಚಾತ್ತಾಪಗೊಂಡು ಅಲ್ಲಾಹನ ಕಡೆಗೆ ಮರಳಿದ್ದನು. ಹಝ್ರತ್ ಉಸಾಮ(ರ) ಹಲವು ಸಾರಿ ಹಝ್ರತ್ ಪೈಗಂಬರರಿಗೆ(ಸ) ಉತ್ತರ ರೂಪವಾಗಿ ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ಅವನು ಹೆದರಿಕೆಯ ಕಾರಣದಿಂದ ವಿಶ್ವಾಸ ಸೂಚಕ ಮಾತುಗಳನ್ನಾಡಿದ್ದನು." ಆಗ ಹಝ್ರತ್ ಪೈಗಂಬರ್ ಕೇಳಿದರು: "ನೀವು ಆ ವ್ಯಕ್ತಿಯ ಹೃದಯವನ್ನು ಸೀಳಿ ಅವನು ಸುಳ್ಳು ಹೇಳುತ್ತಿದ್ದಾನೆಂದು ನೋಡಿರುವಿರೋ?" ಅನಂತರ ಹಝ್ರತ್ ಪೈಗಂಬರ್(ಸ) ಪದೇ ಪದೇ ಹೀಗೆ ಹೇಳುತ್ತಾ ಇದ್ದರು: "ಪುನರುತ್ಥಾನದ ದಿನ ಅವನು ಉಚ್ಚರಿಸಿದ

‘ಲಾ ಇಲಾಹ ಇಲ್ಲಲ್ಲಾಹ್’ (ಅಲ್ಲಾಹನ ಹೊರತು ಅನ್ಯ ದೇವನಿಲ್ಲ)ಎಂಬ ವಾಕ್ಯ ನಿಮ್ಮ ವಿರುದ್ಧ ಸಾಕ್ಷಿ ಹೇಳುವಾಗ ನೀವು ಏನು ಉತ್ತರ ನೀಡುವಿರಿ?” ಹಝ್‌ರತ್ ಉಸಾಮ(ರ) ಹೇಳುತ್ತಾರೆ: “ಆಗ ನನ್ನ ಹೃದಯದಲ್ಲಿ ಹೀಗೆ ಆಶೆ ತಲೆದೋರಿತು – ನಾನು ಇದರ ಮೊದಲು ಇಸ್ಲಾಮ್ ಧರ್ಮಕ್ಕೆ ಸೇರದೆ ಇದ್ದು ಇಂದು ಹೊಸದಾಗಿ ಇಸ್ಲಾಮಿಗೆ ಸೇರಿದ್ದರೆ ಎಷ್ಟು ಚೆನ್ನಾಗಿತ್ತು! ಹಾಗೆ ಆಗಿದ್ದರೆ ಆ ಕೃತ್ಯ ನನ್ನಿಂದ ಘಟಿಸುತ್ತಿರಲಿಲ್ಲ.” (ಮುಸ್ಲಿಮ್)

ಹಝ್‌ರತ್ ಪೈಗಂಬರ್(ಸ) ಅನ್ಯರ ಪಾಪಕೃತ್ಯಗಳನ್ನು ಕ್ಷಮಿಸುವ ಬಗ್ಗೆ ಸದಾ ಆಸಕ್ತಿ ಹೊಂದಿದ್ದರು. ಹಝ್‌ರತ್ ಪೈಗಂಬರರ ಪತ್ನಿ ಹಝ್‌ರತ್ ಆಯಿಶಾ(ರ) ವಿರುದ್ಧ ಕೆಲವರು ಮಿಥ್ಯಾರೋಪ ಮಾಡಿದ್ದರು. ಹೀಗೆ ಮಿಥ್ಯಾರೋಪ ಮಾಡಿದವರಲ್ಲಿ ಒಬ್ಬನು ಹಝ್‌ರತ್ ಅಬೂಬಕರರ(ರ) ಪಾಲನೆ ಪೋಷಣೆಗೆ ಪಾತ್ರನಾಗಿದ್ದನು. ಆರೋಪವು ಸುಳ್ಳೆಂದು ಸಾಬೀತಾದಾಗ ಹಝ್‌ರತ್ ಅಬೂಬಕರ್(ರ) ತಾನು ಕೊಡುತ್ತಿದ್ದ ಸಹಾಯ ಧನವನ್ನು ಅವನ ಮೇಲೆ ಅವರಿಗಿದ್ದ ಸಿಟ್ಟಿನ ಕಾರಣದಿಂದ ನಿಲ್ಲಿಸಿದರು. ಲೋಕದ ಯಾವುದೇ ವ್ಯಕ್ತಿ ಹೀಗಲ್ಲದೆ ಬೇರೆ ಏನು ತೀರ್ಮಾನ ಮಾಡಲು ಸಾಧ್ಯವಿದೆ? ಬಹಳ ಜನರು ಇಂತಹ ಸುಳ್ಳು ಆರೋಪ ಮಾಡುವವರನ್ನು ಕೊಂದೇ ಬಿಡುತ್ತಾರೆ. ಆದರೆ ಹಝ್‌ರತ್ ಅಬೂಬಕರ್(ರ) ಮಾಡಿದುದು ಇಷ್ಟು ಮಾತ್ರ – ಅವರು ಅವನ ಪಾಲನೆ ಪೋಷಣೆಯನ್ನು ನಿಲ್ಲಿಸಿದರು. ಈ ವಿಷಯ ಹಝ್‌ರತ್ ಪೈಗಂಬರರಿಗೆ ತಿಳಿದಾಗ ಅವರು ಹಝ್‌ರತ್ ಅಬೂಬಕರರೊಂದಿಗೆ ಹೀಗೆ ಹೇಳಿ ಅವರನ್ನು ಸಮಾಧಾನಪಡಿಸಿದರು: “ಆ ವ್ಯಕ್ತಿ ತಪ್ಪು ಕೆಲಸ ಮಾಡಿದ್ದಾನೆ. ಅವನು ಪಾಪ ಮಾಡಿರುವನು, ಆದರೆ ನಿಮ್ಮ ಅಂತಸ್ತು ಅವನಿಗಿಂತ ಉನ್ನತವಾಗಿದೆ. ಒಬ್ಬ ದಾಸನ ಪಾಪಕೃತ್ಯದ ಕಾರಣದಿಂದ ಅವನನ್ನು ಆಹಾರದಿಂದ ವಂಚಿತನನ್ನಾಗಿ ಮಾಡುವುದು ತಮಗೆ ಯೋಗ್ಯವಾಗಿರುವುದಿಲ್ಲ.” ಅನಂತರ ಹಝ್‌ರತ್ ಅಬೂಬಕರ್(ರ) ಹಝ್‌ರತ್ ಪೈಗಂಬರರ(ಸ) ಉಪದೇಶ ಪ್ರಕಾರ ಆ ವ್ಯಕ್ತಿಯ ಪಾಲನೆ ಪೋಷಣೆ ಮುಂದುವರಿಸಿದರು. (ಬುಖಾರಿ)

## ಸಹನೆ

ಹಝ್‌ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: “ಸತ್ಯ ವಿಶ್ವಾಸಿಗೆ ಈ ಲೋಕದಲ್ಲಿ ಒಳಿತೇ ಒಳಿತು ಇದೆ. ಸತ್ಯ ವಿಶ್ವಾಸಿಯ ಹೊರತು ಬೇರೆ ಯಾರಿಗೂ ಇದು ಲಭಿಸುವುದಿಲ್ಲ. ಸತ್ಯ ವಿಶ್ವಾಸಿಗೆ ಯಾವುದಾದರೂ ಜಯ ಸಿಗುವುದಾದರೆ ಆತನು ಅದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಾನೆ. ಹಾಗೆ ಆತನು ಅಲ್ಲಾಹನ ಬಹುಮಾನಗಳಿಗೆ ಪಾತ್ರನಾಗುತ್ತಾನೆ. ಆತನಿಗೆ ಯಾವುದಾದರೂ ಕಷ್ಟ ಉಂಟಾದರೆ ಆತನು ಸಹನೆ ಪಾಲಿಸುತ್ತಾನೆ. ಆಗ ಸಹ ಆತನು ಅಲ್ಲಾಹನ ಬಹುಮಾನಗಳಿಗೆ ಅರ್ಹನಾಗುತ್ತಾನೆ.” (ಮುಸ್ಲಿಮ್)

ಹಝ್‌ರತ್ ಪೈಗಂಬರ್(ಸ) ಮೃತರಾಗುವ ಕಾಲ ಸಮೀಪಿಸಿದಾಗ ಅವರು ತನ್ನ ಅಸ್ವಸ್ಥತೆಯ ಕಾರಣದಿಂದ ಸಂಕಟಪಡುತ್ತಿದ್ದರು. ಒಮ್ಮೆ ಅವರ ಮಗಳು



ಹಝ್‌ರತ್ ಫಾತಿಮ(ರ) ದುಃಖ ತಡೆಯಲಾರದೆ ಹೇಳಿದರು: “ಆಹ್, ನನ್ನ ತಂದೆಯವರ ಕಷ್ಟವನ್ನು ನನ್ನಿಂದ ನೋಡಲಾಗುವುದಿಲ್ಲ.” ಆಗ ಹಝ್‌ರತ್ ಪೈಗಂಬರ್(ಸ) ಹೇಳಿದರು: “ತಾಳ್ಮೆ ವಹಿಸು. ಇಂದಿನ ನಂತರ ನಿನ್ನ ಪಿತನಿಗೆ ಯಾವುದೇ ಸಂಕಟ ಉಂಟಾಗಲಾರದು.” (ಬುಖಾರಿ)

ಹಝ್‌ರತ್ ಪೈಗಂಬರ್(ಸ) ಹೀಗೆ ಉದ್ದೇಶಿಸಿದ್ದರು: ನನ್ನ ಕಷ್ಟ ಈ ಲೋಕದ ಜೀವಿತದ ಮುಗಿತಾಯದ ತನಕ ಮಾತ್ರವಿದೆ. ನಾನು ಈ ದಿನ ನನ್ನ ಸೃಷ್ಟಿಕರ್ತನ ಬಳಿಗೆ ತೆರಳಿದರೆ ನನಗೆ ಕಷ್ಟದ ಯಾವುದೇ ಸಮಯ ಬರಲಾರದು.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಸಹ ವಿವರಿಸಬಹುದಾಗಿದೆ. ಸಾಂಕ್ರಾಮಿಕ ರೋಗಗಳು ಹಬ್ಬಿದಾಗ ಆ ರೋಗ ಹಬ್ಬಿದ ನಗರದಿಂದ ಇನ್ನೊಂದು ನಗರಕ್ಕೆ ಪಲಾಯನ ಮಾಡುವುದನ್ನು ಹಝ್‌ರತ್ ಪೈಗಂಬರ್(ಸ) ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಹೀಗೆ ಮಾಡಿದರೆ ಒಂದು ಪ್ರದೇಶದ ರೋಗ ಇನ್ನೊಂದು ಪ್ರದೇಶದಲ್ಲಿ ಹರಡಲು ಕಾರಣವಾಗುತ್ತದೆ. ಅವರು ಹೀಗೆ ಹೇಳುತ್ತಿದ್ದರು: “ಸಾಂಕ್ರಾಮಿಕ ರೋಗ ಹಬ್ಬಿದ ಪ್ರದೇಶದಲ್ಲಿ ಯಾರಾದರೂ ಅಲ್ಲಿಂದ ಓಡಿ ಹೋಗದೆ ಸಹನೆ ಪಾಲಿಸಿ ಬೇರೆ ಪ್ರದೇಶದಲ್ಲಿ ರೋಗ ಹರಡಲು ಕಾರಣೀಭೂತನಾಗದಿದ್ದು, ಅವನಿಗೆ ಅವನಿರುವ ಸ್ಥಳದಲ್ಲಿ ಮರಣವು ಪ್ರಾಪ್ತವಾದರೆ ಅವನು ಹುತಾತ್ಮ (ಶಹೀದ್) ಆಗುವ ಭಾಗ್ಯ ಗಳಿಸುವನು.” (ಬುಖಾರಿ)

## ಪರಸ್ಪರ ಸಹಾಯ

ಹಝ್‌ರತ್ ಪೈಗಂಬರ್(ಸ) ತನ್ನ ಶಿಷ್ಯರಿಗೆ ಹೀಗೆ ಉಪದೇಶ ನೀಡುತ್ತಿದ್ದರು: “ನೀವು ಪರಸ್ಪರ ಸಹಕರಿಸಿ ಕೆಲಸ ಮಾಡಿರಿ.”

ಹಝ್‌ರತ್ ಪೈಗಂಬರ್(ಸ) ತನ್ನ ಅನುಯಾಯಿಗಳು ಈ ಕೆಳಗಿನ ಸಿದ್ಧಾಂತವನ್ನು ಪಾಲಿಸಬೇಕೆಂದು ನಿಶ್ಚಯಿಸಿದ್ದರು:

ಒಬ್ಬನು ಯಾವುದಾದರೊಂದು ತಪ್ಪನ್ನು ಮಾಡಿದ ಕಾರಣ ಅದಕ್ಕೆ ಪರಿಹಾರವಾಗಿ ದಂಡ ರೂಪದಲ್ಲಿ ಹಣ ನೀಡಬೇಕಾಗಿದ್ದಲ್ಲಿ, ಅವನಿಗೆ ಅದು ಸಾಧ್ಯವಾಗುವುದಿಲ್ಲವಾದರೆ ಅವನು ವಾಸಿಸುವ ಬಡಾವಣೆಯ ಜನರು ಅಥವಾ ಪಟ್ಟಣದ ಜನರು ಅಥವಾ ಸಮುದಾಯದ ಜನರು ಆ ದಂಡವನ್ನು ಅವನ ಪರವಾಗಿ ಕೊಟ್ಟು ತೀರಿಸಬೇಕು.

ಕೆಲವರು ಹಝ್‌ರತ್ ಪೈಗಂಬರರ(ಸ) ಬಳಿಗೆ ಧಾರ್ಮಿಕ ಸೇವೆ ಮಾಡಲಿಕ್ಕೋಸ್ಕರ ಬರುತ್ತಾ ಹೋಗುತ್ತಾ ಇದ್ದರು. ಅಂತಹ ಜನರ ಭಾರವನ್ನು ನಿರ್ವಹಿಸಲು ಮತ್ತು ಅವರ ಆವಶ್ಯಕತೆಗಳನ್ನು ನೆರವೇರಿಸಲು ಅವರ ಸಂಬಂಧಿಕರಿಗೆ ಹಝ್‌ರತ್ ಪೈಗಂಬರ್(ಸ) ಉಪದೇಶಿಸುತ್ತಿದ್ದರು.

ಹಝ್‌ರತ್ ಅನಸ್(ರ) ಹೀಗೆ ವರದಿ ಮಾಡಿದ್ದಾರೆ: ಹಝ್‌ರತ್ ಪೈಗಂಬರ್(ಸ) ಜೀವಿಸಿದ್ದಾಗ ಇಬ್ಬರು ಸಹೋದರರು ಮುಸ್ಲಿಮರಾದರು. ಒಬ್ಬ ಸಹೋದರ

ಹಝ್ರತ್ ಪೈಗಂಬರರ(ಸ) ಸಮೀಪ ಇರತೊಡಗಿದನು. ಇನ್ನೊಬ್ಬ ತನ್ನ ಕೆಲಸಗಳಲ್ಲಿ ಮಗ್ನನಾದನು. ಕೆಲಸ ಮಾಡುತ್ತಾ ಇರುವ ಸಹೋದರ ಒಂದು ದಿನ ಹಝ್ರತ್ ಪೈಗಂಬರರಿಗೆ ತನ್ನ ಸಹೋದರನ ವಿರುದ್ಧ ಹೀಗೆ ದೂರಿತ್ತನು – "ಅವನು ಸುಮ್ಮನೆ ಕುಳಿತಿರುತ್ತಾನೆ. ಏನೂ ಕೆಲಸ ಮಾಡುವುದಿಲ್ಲ." ಆಗ ಹಝ್ರತ್ ಪೈಗಂಬರ್ ಹೇಳಿದರು – "ನೀವು ಹಾಗೆ ಹೇಳಬೇಡಿರಿ. ಅವರ ಕಾರಣದಿಂದಲೇ ನಿಮಗೂ ಆಹಾರವನ್ನು ಅಲ್ಲಾಹನು ನೀಡುತ್ತಾನೆ. ಆದುದರಿಂದ ನೀವು ಅವರ ಸೇವೆ ಮಾಡಿರಿ. ಅವರನ್ನು ಧಾರ್ಮಿಕ ಸೇವೆ ಮಾಡಲು ಸ್ವತಂತ್ರರಾಗಿ ಬಿಟ್ಟು ಬಿಡಿರಿ." (ತಿರ್ಮಿಝಿ)

ಒಮ್ಮೆ ಹಝ್ರತ್ ಪೈಗಂಬರ್(ಸ) ಶಿಷ್ಯರೊಂದಿಗೆ ಪ್ರಯಾಣ ಮಾಡುತ್ತಿದ್ದರು. ಮಾರ್ಗದಲ್ಲಿ ಒಂದು ತಂಗುದಾಣದಲ್ಲಿ ಶಿಬಿರ ಹೂಡಲಾಯಿತು. ಶಿಷ್ಯಂದಿರು ಡೇರೆ ಹಾಕಲಿಕ್ಕೋಸ್ಕರ ಮತ್ತು ಬೇರೆ ಕೆಲಸಗಳಿಗೋಸ್ಕರ ಮೈದಾನದಲ್ಲಿ ಚದುರಿ ಹೋಗಿ ಕಾರ್ಯ ಪ್ರವೃತ್ತರಾದರು. ಅವರು ಎಲ್ಲಾ ಕೆಲಸಗಳನ್ನು ತಮ್ಮಲ್ಲಿ ಹಂಚಿಕೊಂಡರು. ಹಝ್ರತ್ ಪೈಗಂಬರರಿಗೆ ಯಾವುದೇ ಕೆಲಸ ವಹಿಸಿ ಕೊಡಲಿಲ್ಲ. ಹಝ್ರತ್ ಪೈಗಂಬರ್ ಆಗ ಹೀಗೆಂದರು: "ನೀವು ನನಗೆ ಯಾವುದೇ ಕೆಲಸವನ್ನು ಹಂಚಿಕೊಡಲಿಲ್ಲ. ಆದರೆ ನಾನು ಆಹಾರ ಬೇಯಿಸಲು ಸೌದೆಯನ್ನು ಸಂಗ್ರಹಿಸುವ ಕೆಲಸ ಮಾಡುವೆನು." ಆಗ ಶಿಷ್ಯಂದಿರು ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ಕೆಲಸ ಮಾಡಲು ನಾವೆಲ್ಲಾ ಇರುವಾಗ ನೀವು ಕೆಲಸ ಮಾಡುವ ಅವಶ್ಯಕತೆ ಏನಿದೆ?" ಆಗ ಹಝ್ರತ್ ಪೈಗಂಬರ್ ಹೇಳಿದರು: "ಇಲ್ಲ, ಇಲ್ಲ, ನಿಮ್ಮ ಕೆಲಸದಲ್ಲಿ ಪಾಲ್ಗೊಳ್ಳುವುದು ನನ್ನ ಕರ್ತವ್ಯವೂ ಆಗಿದೆ." ಹಝ್ರತ್ ಪೈಗಂಬರರು ಅನಂತರ ಕಾಡಿನಿಂದ ಸೌದೆ ಸಂಗ್ರಹಿಸಿದರು. ಅದರಿಂದ ಶಿಷ್ಯಂದಿರು ಬೆಂಕಿಯುರಿಸಿ ಆಹಾರ ಪಾಕ ಮಾಡಿದರು. (ಝುರ್ಖಾನಿ–ಸಂಪುಟ 4, ಪುಟ 265)

## ಪರರ ತಪ್ಪನ್ನು ಹುಡುಕದಿರುವಿಕೆ

ಹಝ್ರತ್ ಪೈಗಂಬರ್(ಸ) ಯಾವಾಗಲೂ ಹೀಗೆ ಉಪದೇಶಿಸುತ್ತಾ ಇದ್ದರು: "ನೀವು ಬೇರೆಯವರ ಕೆಲಸಗಳ ಕುರಿತು ಅನಾವಶ್ಯಕವಾಗಿ ಆಕ್ಷೇಪ ಮಾಡಬೇಡಿರಿ. ನಿಮಗೆ ಸಂಬಂಧಿಸದ ವಿಷಯಗಳಲ್ಲಿ ಮಧ್ಯೆ ಪ್ರವೇಶ ಮಾಡಬೇಡಿರಿ. ಅದರಿಂದ ಕಲಹಗಳು ತಲೆದೋರುತ್ತವೆ."

ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: "ಒಬ್ಬ ವ್ಯಕ್ತಿ ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದುದಕ್ಕೆ ಇರುವ ಉತ್ತಮ ನಿದರ್ಶನವೇನೆಂದರೆ, ತನಗೆ ನೇರವಾಗಿ ಸಂಬಂಧವಿರದ ವಿಷಯದಲ್ಲಿ ಅವನು ಅನಾವಶ್ಯಕವಾಗಿ ಹಸ್ತಕ್ಷೇಪ ಮಾಡಲಾರನು."

ಹಝ್ರತ್ ಪೈಗಂಬರ್(ಸ) ಹೊಂದಿದ್ದ ಈ ಸ್ವಭಾವ ಗುಣ ಎಷ್ಟು ಮಹತ್ವ ಪೂರ್ಣವಾಗಿದೆ ಎಂದರೆ ಅದನ್ನು ನಿಷ್ಠೆಯಿಂದ ಪಾಲಿಸಿದರೆ ಲೋಕದಲ್ಲಿ ಶಾಂತಿಯು ಸ್ಥಾಪಿಸಲ್ಪಡಲು ಸಾಧ್ಯವಾಗುವುದು. ಲೋಕದಲ್ಲಿ ವಿಪತ್ತಿಗೊಳಗಾದವರಿಗೆ ನೆರವು



ನೀಡಲು ಯಾರೂ ಸಿದ್ಧರಾಗುವುದಿಲ್ಲ. ಆದರೆ ಬೇರೆ ಜನರ ವ್ಯವಹಾರಗಳ ಬಗ್ಗೆ ಆಕ್ಷೇಪಿಸಲು ಸಿದ್ಧರಾಗುತ್ತಾರೆ. ಇದೇ ಕಾರಣದಿಂದ ಲೋಕದಲ್ಲಿ ಸಾವಿರಾರು ಕೆಡುಕುಗಳು ತಲೆದೋರುತ್ತವೆ.

## ಸತ್ಯ ಸಂಧತೆ

ಹಝ್ರತ್ ಪೈಗಂಬರ್(ಸ) ಸತ್ಯಕ್ಕೆ ಎಷ್ಟು ಉನ್ನತ ಸ್ಥಾನ ನೀಡಿದ್ದರೆಂದರೆ ಅವರ ಸಮುದಾಯ ಅವರನ್ನು ಸಿದ್ದೀಖ್ (ಅತ್ಯಂತ ಸತ್ಯವಂತ) ಎಂದು ಹೆಸರಿಸಿತ್ತು. ಅವರು ತನ್ನ ಅನುಯಾಯಿಗಳಿಗೆ ಯಾವಾಗಲೂ ಸತ್ಯವನ್ನು ಅವಲಂಬಿಸಲು ಉಪದೇಶಿಸುತ್ತಾ ಇದ್ದರು.

ಅವರು ತನ್ನ ಅನುಯಾಯಿಗಳ ಸಮೂಹವನ್ನು ಸತ್ಯದ ಎಂತಹ ಉನ್ನತ ಸ್ಥಾನದಲ್ಲಿ ನಿಲ್ಲಿಸಲು ಪ್ರಯತ್ನಿಸುತ್ತಿದ್ದರೆಂದರೆ, ಅವರು ಎಲ್ಲಾ ರೀತಿಯ ಸುಳ್ಳುಗಳ ಕಳಂಕದಿಂದ ಮುಕ್ತರಾಗಿ ಪರಿಶುದ್ಧಿ ಪಡೆಯುವಂತಾಗಬೇಕೆಂದು ಬಯಸಿದ್ದರು. ಅವರು ಹೀಗೆ ಹೇಳುತ್ತಿದ್ದರು: ಸತ್ಯವೇ ಒಳಿತಿನ ಕಡೆಗೆ ಮಾರ್ಗದರ್ಶನ ನೀಡುತ್ತದೆ. ಒಳಿತಿನಿಂದಲೇ ಮನುಷ್ಯನಿಗೆ ಸ್ವರ್ಗ ದೊರಕುತ್ತದೆ. ಸತ್ಯದ ಯಥಾರ್ಥ ಸ್ಥಾನವೇನೆಂದರೆ, ಮನುಷ್ಯನು ಸತ್ಯವನ್ನು ಹೇಳುತ್ತಾ ಹೋಗಬೇಕು. ಎಲ್ಲಿಯ ತನಕ ಎಂದರೆ ಅಲ್ಲಾಹನ ಸನ್ನಿಧಿಯಲ್ಲಿಯೂ ಅವನು ಸತ್ಯವಂತನೆಂದು ಗುರುತಿಸಲ್ಪಡಬೇಕು. (ತಿರ್ಮಿಝಿ)

ಒಮ್ಮೆ ಒಬ್ಬನನ್ನು ಸೆರೆಹಿಡಿದು ಪೈಗಂಬರರ(ಸ) ಬಳಿಗೆ ತರಲಾಯಿತು ಅವನು ಅನೇಕ ಮುಸ್ಲಿಮರ ಹತ್ಯೆಗೈದಿದ್ದನು. ಹಝ್ರತ್ ಉಮರ್(ರ) ಅವನು ವಧಾರ್ಹನೆಂದು ಗಣಿಸಿದ್ದರು. ಅವರು ಹಝ್ರತ್ ಪೈಗಂಬರರ(ಸ) ಕಡೆಗೆ ಪದೇ ಪದೇ ನೋಡುತ್ತಾ ಇದ್ದರು. ಹಝ್ರತ್ ಪೈಗಂಬರ್(ಸ) ಏನಾದರೂ ಸಂಜ್ಞೆ ನೀಡಿದರೆ ತಕ್ಷಣ ಅವನನ್ನು ಕೊಲ್ಲುವ ಉದ್ದೇಶ ಅವರಿಗಿತ್ತು. ಆ ಮನುಷ್ಯ ಅಲ್ಲಿಂದ ಹೋದ ನಂತರ ಹಝ್ರತ್ ಉಮರ್(ರ) ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ಅವನು ವಧಾರ್ಹನಾಗಿದ್ದನು." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅವನು ವಧಾರ್ಹನಾಗಿದ್ದರೆ ಅವನನ್ನು ನೀವು ಏಕೆ ವಧಿಸಲಿಲ್ಲ?" ಆಗ ಹಝ್ರತ್ ಉಮರ್(ರ) ಹೇಳಿದರು: "ಓ ಅಲ್ಲಾಹನ ಪೈಗಂಬರರೇ, ನೀವು ನಿಮ್ಮ ಕಣ್ಣಿನಿಂದ ಸಂಜ್ಞೆ ಮಾಡಿದ್ದರೆ ನಾನು ಅವನನ್ನು ಕೊಲ್ಲುತ್ತಿದ್ದೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಪ್ರವಾದಿಗಳು ವಂಚಕರಾಗಿರುವುದಿಲ್ಲ. ನಾನು ಅವನೊಂದಿಗೆ ಪ್ರೀತಿಯ ಮಾತುಗಳನ್ನು ಆಡುತ್ತಿರುವಾಗ ನನ್ನ ಕಣ್ಣಿನ ಮೂಲಕ ಸಂಜ್ಞೆ ನೀಡಿ ಅವನನ್ನು ಕೊಲ್ಲಲು ಹೇಗೆ ತಾನೆ ಸೂಚಿಸಲು ಸಾಧ್ಯ?" (ಸೀರತ್ ಇಬ್ನು ಹಿಶಾಮ್– ಭಾಗ 2 ಪುಟ 217)

ಒಮ್ಮೆ ಒಬ್ಬನು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಬಂದು ಹೀಗೆ ಹೇಳಿದನು: "ನನ್ನಲ್ಲಿ ಮೂರು ನ್ಯೂನತೆಗಳಿವೆ. ಸುಳ್ಳು ಹೇಳುವುದು, ಮದ್ಯಪಾನ ಮಾಡುವುದು ಮತ್ತು ವ್ಯಭಿಚಾರ ಮಾಡುವುದು. ನನ್ನಿಂದ ಈ ನ್ಯೂನತೆಗಳನ್ನು ದೂರೀಕರಿಸಲು ಬಹಳ ಪ್ರಯತ್ನ ಮಾಡಿದೆ. ಆದರೆ ನನ್ನ ಪ್ರಯತ್ನಗಳು

ಸಫಲವಾಗಲಿಲ್ಲ. ತಾವು ಯಾವುದಾದರೂ ಪರಿಹಾರ ಮಾರ್ಗವನ್ನು ಸೂಚಿಸಿರಿ."

ಹಝ್ರತ್ ಪೈಗಂಬರ್(ಸ) ಹೇಳಿದರು: "ನೀನು ಒಂದು ಪಾಪಕೃತ್ಯವನ್ನು ಮಾಡುವುದಿಲ್ಲ ಎಂದು ನನ್ನೊಂದಿಗೆ ವಾಗ್ದಾನ ಮಾಡು. ಉಳಿದ ಎರಡು ಪಾಪಕೃತ್ಯಗಳನ್ನು ನಿನ್ನಿಂದ ನಾನು ದೂರೀಕರಿಸುವೆನು." ಆಗ ಅವನು ಹೇಳಿದನು: "ನಾನು ಯಾವ ಪಾಪಕೃತ್ಯ ಮಾಡುವುದನ್ನು ತ್ಯಜಿಸಬೇಕು? ನಾನು ಆ ಬಗ್ಗೆ ನಿಮಗೆ ವಾಗ್ದಾನ ನೀಡುತ್ತೇನೆ."

ಹಝ್ರತ್ ಪೈಗಂಬರ್ ಹೇಳಿದರು: "ನೀನು ಸುಳ್ಳು ಹೇಳುವುದನ್ನು ಬಿಟ್ಟು ಬಿಡು."

ಕೆಲವು ದಿನಗಳ ನಂತರ ಅವನು ಬಂದು ಹಝ್ರತ್ ಪೈಗಂಬರರೊಂದಿಗೆ ಹೇಳಿದನು: "ನಾನು ನಿಮ್ಮ ಮಾರ್ಗದರ್ಶನಕ್ಕೆ ಅನುಸಾರವಾಗಿ ವರ್ತಿಸಿದೆನು. ನನ್ನ ಎಲ್ಲಾ ಪಾಪಕೃತ್ಯಗಳು ನನ್ನಿಂದ ಬಿಟ್ಟು ಹೋದುವು."

ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅದು ಹೇಗೆ ಸಂಭವಿಸಿತು ಎಂದು ವಿವರಿಸು." ಅವನು ಹೇಳಿದನು: "ನನ್ನ ಮನಸ್ಸಿನಲ್ಲಿ ಒಂದು ದಿನ ಮದ್ಯಪಾನ ಮಾಡುವ ಯೋಚನೆ ಉಂಟಾಯಿತು. ನಾನು ಮದ್ಯಪಾನ ಮಾಡಲು ಎದ್ದಾಗ ಹೀಗೆ ಯೋಚಿಸಿದೆ. ನನ್ನ ಸ್ನೇಹಿತರು ನನ್ನೊಂದಿಗೆ ನೀನು ಮದ್ಯಪಾನ ಮಾಡಿದ್ದೀಯಾ ಎಂದು ಕೇಳಿದರೆ ನಾನು ಇದರ ಮೊದಲು ಮದ್ಯಪಾನ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದೆ. ಈಗ ನಾನು ಸತ್ಯ ಹೇಳುವೆನೆಂದು ಪ್ರತಿಜ್ಞೆ ಮಾಡಿದ್ದೇನೆ. ನಾನು ಮದ್ಯಪಾನ ಮಾಡಿದ್ದೇನೆಂದು ನನ್ನ ಸ್ನೇಹಿತರೊಂದಿಗೆ ಹೇಳಿದರೆ ಅವರು ನನ್ನನ್ನು ಬಿಟ್ಟು ಹೋಗುವರು. ಅವರೊಂದಿಗೆ ನಾನು ಮದ್ಯಪಾನ ಮಾಡಿಲ್ಲ ಎಂದು ಹೇಳಿದರೆ ನಾನು ಸುಳ್ಳು ಹೇಳಿದಂತಾಗುವುದು. ನಾನು ಸುಳ್ಳು ಹೇಳುವುದಿಲ್ಲ ಎಂದು ಮಾಡಿದ ಪ್ರತಿಜ್ಞೆಗೆ ಅದು ಭಂಗ ಉಂಟುಮಾಡುವುದು. ಆಗ ನಾನು ಮನಸ್ಸಿನಲ್ಲಿಯೇ ನಿರ್ಧರಿಸಿದೆ. ಈಗ ಮದ್ಯಪಾನ ಮಾಡುವುದಿಲ್ಲ, ಇನ್ನೊಮ್ಮೆ ಮಾಡುವೆನೆಂದು. ಇದೇ ರೀತಿ ನನ್ನ ಮನಸ್ಸಿನಲ್ಲಿ ವ್ಯಭಿಚಾರದ ಯೋಚನೆ ಉಂಟಾಯಿತು. ಅದರ ಬಗ್ಗೆ ಸಹ ನನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದೆ: ನನ್ನ ಸ್ನೇಹಿತರು ನನ್ನೊಂದಿಗೆ ಕೇಳಿದರೆ ಅವರಿಗೆ ನಾನು ಏನು ಹೇಳಲಿ? ನಾನು ವ್ಯಭಿಚಾರ ಮಾಡಿದೆನೆಂದು ಹೇಳಿದರೆ ನನ್ನ ಸ್ನೇಹಿತರು ನನ್ನನ್ನು ಬಿಟ್ಟು ಹೋಗುವರು. ನಾನು ವ್ಯಭಿಚಾರ ಮಾಡಿಲ್ಲ ಎಂದು ಹೇಳಿದರೆ ಸುಳ್ಳು ಹೇಳಿದಂತಾಗುವುದು. ನಾನು ಸುಳ್ಳು ಹೇಳುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದೇನೆ. ಇದೇ ರೀತಿ ನನ್ನ ಹೃದಯದಲ್ಲಿ ಅನೇಕ ದಿನಗಳ ತನಕ ವಾದ ಪ್ರತಿವಾದಗಳು ಜಾರಿಯಲ್ಲಿದ್ದುವು. ಕೊನೆಗೆ ಈ ಎರಡು ಪಾಪಕೃತ್ಯಗಳಿಂದ ನಾನು ಸ್ವಲ್ಪ ಕಾಲ ದೂರ ಸರಿದು ಇದ್ದ ಕಾರಣದಿಂದ ನನ್ನ ಹೃದಯದಲ್ಲಿ ಅವುಗಳ ಬಗ್ಗೆ ಇದ್ದ ಆಸಕ್ತಿ ಅಳಿಸಿ ಹೋಯಿತು. ನಾನು ಸತ್ಯ ಹೇಳುವುದನ್ನು ಅವಲಂಬಿಸಿದುದರಿಂದ ನನ್ನಿಂದ ಇತರ ನ್ಯೂನತೆಗಳು ಸಹ ದೂರ ಸರಿದುವು."



## ಗುಪ್ತಾನ್ವೇಷಣೆಯ ನಿಷೇಧ ಮತ್ತು ಒಳ್ಳೆಯದನ್ನೇ ಯೋಚಿಸಬೇಕೆಂಬ ಆಜ್ಞೆ

ಹಝ್ರತ್ ಪೈಗಂಬರ್(ಸ) ಅನ್ಯರ ಬಗ್ಗೆ ಗುಪ್ತಾನ್ವೇಷಣೆ ಮಾಡುವುದನ್ನು ನಿಷಿದ್ಧಗೊಳಿಸಿದ್ದರು ಮತ್ತು ಪರರ ಕುರಿತು ಉತ್ತಮವಾಗಿಯೇ ಚಿಂತಿಸಬೇಕೆಂದು ಆಜ್ಞಾಪಿಸಿದ್ದರು. ಹಝ್ರತ್ ಅಬೂಹುರೈರ(ರ) ಹೀಗೆ ವರದಿ ಮಾಡಿದ್ದಾರೆ:

ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸುತ್ತಾ ಇದ್ದರು: "ಅನ್ಯರ ಬಗ್ಗೆ ಕೆಟ್ಟ ಶಂಕೆಗಳನ್ನು ಹೊಂದಬೇಡಿರಿ. ಕೆಟ್ಟ ಸಂಶಯ ಮೂಡುವುದು ಅತ್ಯಂತ ದೊಡ್ಡ ಸುಳ್ಳು ಆಗಿದೆ. ಜನರ ಬಗ್ಗೆ ಗುಪ್ತಾನ್ವೇಷಣೆ ನಡೆಸಬೇಡಿರಿ. ಜನರನ್ನು ತಾತ್ಸಾರ ಭಾವದಿಂದ ಕಂಡು ಅಡ್ಡ ಹೆಸರು ಇರಿಸಬೇಡಿರಿ. ಅನ್ಯರ ಬಗ್ಗೆ ಅಸೂಯೆ ಪಡಬೇಡಿರಿ. ನೀವು ಪರಸ್ಪರ ಹಗೆತನ ಹೊಂದಬೇಡಿರಿ. ಎಲ್ಲರೂ ತಮ್ಮನ್ನು ಏಕದೇವನ ದಾಸರೆಂದು ಪರಿಗಣಿಸಿರಿ. ನೀವು ಅಲ್ಲಾಹನ ಆಜ್ಞೆ ಪ್ರಕಾರ ಪರಸ್ಪರ ಸಹೋದರರೆಂದು ವರ್ತಿಸಿರಿ. ಪ್ರತಿಯೊಬ್ಬ ಮುಸ್ಲಿಮ್ ಮತ್ತೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ಅವನು ದೌರ್ಜನ್ಯ ಮಾಡಲಾರನು ಮತ್ತು ವಿಪತ್ತಿನ ಸಂದರ್ಭದಲ್ಲಿ ತನ್ನ ಸಹೋದರನನ್ನು ಕೈಬಿಡಲಾರನು. ಸಂಪತ್ತು, ವಿದ್ಯೆ ಅಥವಾ ಬೇರೆ ಯಾವುದಾದರೂ ವಸ್ತುವಿನ ಕೊರತೆಯ ಕಾರಣದಿಂದ ತನ್ನ ಸಹೋದರನನ್ನು ಕೀಳೆಂದು ಭಾವಿಸಲಾರನು. ಭಯ ಭಕ್ತಿಯು ಮನುಷ್ಯನ ಹೃದಯದಿಂದ ಹುಟ್ಟುತ್ತದೆ. ಯಾರು ತನ್ನ ಸಹೋದರನನ್ನು ಕೀಳು ಎಂದು ಭಾವಿಸುತ್ತಾನೋ ಈ ಭಾವನೆಯು ಅವನನ್ನು ಕೊಳಕನನ್ನಾಗಿ ಮಾಡಲು ಸಾಕು. ಪ್ರತಿಯೊಬ್ಬ ಮುಸ್ಲಿಮನಿಗೆ ಬೇರೆ ಮುಸ್ಲಿಮ್ ಸಹೋದರನ ರಕ್ತ, ಅವನ ಗೌರವ ಮತ್ತು ಅವನ ಸಂಪತ್ತಿನ ಮೇಲೆ ಆಕ್ರಮಣ ಮಾಡುವುದು ನಿಷಿದ್ಧವಾಗಿದೆ. ಅಲ್ಲಾಹನು ನಿಮ್ಮ ಶರೀರವನ್ನಾಗಲೀ ನಿಮ್ಮ ರೂಪಲಾವಣ್ಯವನ್ನಾಗಲೀ ನಿಮ್ಮ ಬಾಹ್ಯಾಚರಣೆಗಳ ನ್ನಾಗಲೀ ನೋಡುವುದಿಲ್ಲ. ಆದರೆ ಅವನು ನಿಮ್ಮ ಹೃದಯಗಳನ್ನು ನೋಡುತ್ತಾನೆ." (ಮುಸ್ಲಿಮ್)

## ವ್ಯಾಪಾರದ ಸರಕುಗಳಲ್ಲಿ ಮೋಸ ವಂಚನೆಗಳ ಬಗ್ಗೆ ಅತೃಪ್ತಿ

ಮುಸ್ಲಿಮರಲ್ಲಿ ಮೋಸ ವಂಚನೆ ಸ್ವಲ್ಪವೂ ಇರಬಾರದೆಂದು ಹಝ್ರತ್ ಪೈಗಂಬರ್(ಸ) ವಿಶೇಷ ಗಮನವಿರಿಸಿದ್ದರು. ಒಮ್ಮೆ ಅವರು ಪೇಟೆಯಲ್ಲಿ ಹೋಗುತ್ತಿದ್ದಾಗ ಅವರು ಧಾನ್ಯದ ಒಂದು ರಾಶಿಯನ್ನು ಕಂಡರು. ಅದನ್ನು ಹರಾಜು ಹಾಕಲಾಗುತ್ತಿತ್ತು. ಹಝ್ರತ್ ಪೈಗಂಬರ್ ಧಾನ್ಯದ ರಾಶಿಗೆ ಕೈಯನ್ನು ತೂರಿದಾಗ ಅದರ ಒಳಭಾಗ ಒದ್ದೆಯಾಗಿದೆ ಎಂದೂ ಹೊರಭಾಗ ಒಣಗಿದೆ ಎಂದೂ ತಿಳಿಯಿತು. ಹಝ್ರತ್ ಪೈಗಂಬರ್ ಕೈಯನ್ನು ಹೊರ ತೆಗೆದು ಧಾನ್ಯದ ರಾಶಿಯ ಮಾಲಿಕನೊಡನೆ ಕೇಳಿದರು: "ಇದೇಕೆ ಹೀಗೆ?" ಅವನು ಹೇಳಿದನು: "ಹನಿಮಳೆ ಸುರಿದಿತ್ತು. ಆ ಕಾರಣದಿಂದ ಧಾನ್ಯದ ರಾಶಿಯ ಸ್ವಲ್ಪ ಭಾಗ ನೆನೆದು ಹೋಯಿತು." ಹಝ್ರತ್ ಪೈಗಂಬರ್(ಸ) ಹೇಳಿದರು: "ನೀನು ಹೇಳಿದುದು ಸರಿ. ಆದರೆ ನೀನು ಒದ್ದೆಯಾದ ಧಾನ್ಯಗಳನ್ನು ಹೊರಗೆ ಏಕೆ ಇರಿಸಲಿಲ್ಲ. ಹಾಗೆ

ಮಾಡಿದ್ದರೆ ಜನರಿಗೆ ಅದು ತಿಳಿಯುತ್ತಿತ್ತು." ಅನಂತರ ಅವರು ಹೇಳಿದರು: "ಯಾರು ಅನ್ಯರಿಗೆ ವಂಚನೆ ಮಾಡುತ್ತಾನೋ ಅವನು ನಮ್ಮ ಸಮಾಜಕ್ಕೆ ಉಪಕಾರದಾಯಕನಾಗಲಾರನು." (ತಿರ್‌ಮಿಝೀ)

ಹಝ್ರತ್ ಪೈಗಂಬರ್(ಸ) ಹೀಗೆ ತಾಕೀತು ಮಾಡುತ್ತಿದ್ದರು: "ವ್ಯಾಪಾರದಲ್ಲಿ ಯಾವುದೇ ವಂಚನೆ ಇರಬಾರದು. ನೋಡದೆ ಯಾವುದೇ ವಸ್ತುವನ್ನು ಖರೀದಿ ಮಾಡಬಾರದು. ಒಬ್ಬನು ಒಂದು ವಸ್ತುವಿನ ವ್ಯಾಪಾರವನ್ನು ಕುದುರಿಸುತ್ತಿರುವಾಗ ಮಧ್ಯೆ ಪ್ರವೇಶಿಸಿ ಅದೇ ವಸ್ತುವಿನ ಖರೀದಿಗೆ ಮುಂದಾಗಬಾರದು. ಬೆಲೆ ಏರಿಕೆಯಾದಾಗ ಮಾರಾಟ ಮಾಡಬಹುದೆಂಬ ಉದ್ದೇಶದಿಂದ ಸಾಮಗ್ರಿಗಳನ್ನು ಸಂಗ್ರಹಿಸಿಡಬಾರದು. ಆವಶ್ಯಕತೆ ಇರುವವರಿಗೆ ಅವರ ಆವಶ್ಯಕತೆಗನುಸಾರವಾಗಿ ಸಾಮಗ್ರಿಗಳನ್ನು ವಿಕ್ರಯಿಸುತ್ತಾ ಇರಬೇಕು."

## ನಿರಾಶೆ

ಹಝ್ರತ್ ಪೈಗಂಬರ್(ಸ) ನಿರಾಶೆಯ ಭಾವನೆಯನ್ನು ಕಠಿಣವಾಗಿ ವಿರೋಧಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: "ಯಾರು ಸಮಾಜದಲ್ಲಿ ನಿರಾಶಾದಾಯಕ ಮಾತುಗಳನ್ನು ಹೇಳುತ್ತಾನೋ, ಅವನು ಸಮಾಜದ ನಾಶಕ್ಕೆ ಜವಾಬ್ದಾರನಾಗುತ್ತಾನೆ. ಏಕೆಂದರೆ ನಿರಾಶೆಯ ಭಾವನೆಯನ್ನು ಹರಡುವ ಮಾತುಗಳಿಂದ ಸಮಾಜದ ಧೈರ್ಯವು ಕುಂದಿ ಹೋಗುತ್ತದೆ. ಅದು ಅವನತಿಯ ಕಡೆಗೆ ಸಮಾಜವನ್ನು ಒಯ್ಯಲು ಪ್ರಾರಂಭಿಸುತ್ತದೆ."

ಹಝ್ರತ್ ಪೈಗಂಬರ್(ಸ) ದುರಹಂಕಾರವನ್ನೂ ಡಂಭಾಚಾರವನ್ನೂ ತಡೆಯುತ್ತಿದ್ದ ಹಾಗೆಯೇ ಅವರು ನಿರಾಶೆಯ ಭಾವನೆಯನ್ನೂ ತಡೆಯು ತ್ತಿದ್ದರು. ಇವು ಸಹ ಸಮಾಜವನ್ನು ಅವನತಿಯ ಕಡೆಗೆ ಕೊಂಡೊಯ್ಯುತ್ತವೆ ಎಂದು ಅವರು ಹೇಳುತ್ತಿದ್ದರು. ಅವರು ಹೀಗೆ ಆಜ್ಞಾಪಿಸಿದ್ದರು: "ಇವೆರಡರ ಮಧ್ಯೆ ಇರುವ ಮಾರ್ಗವನ್ನು ಅವಲಂಬಿಸಬೇಕು. ದುರಹಂಕಾರ ಮತ್ತು ಡಂಭಾಚಾರದ ಮಾರ್ಗವನ್ನಾಗಲೀ ನಿರಾಶೆಯ ಮಾರ್ಗವನ್ನಾಗಲೀ ಮನುಷ್ಯನು ಅವಲಂಬಿಸಬಾರದು. ಮನುಷ್ಯನು ಕೆಲಸವನ್ನು ಮಾಡಬೇಕು ಮತ್ತು ಅದರ ಪ್ರತಿಫಲದ ಬಗ್ಗೆ ಅಲ್ಲಾಹನ ಮೇಲೆ ಭರವಸೆ ಇಡಬೇಕು. ಪ್ರತಿಯೊಬ್ಬನಿಗೆ ತನ್ನ ಸಮುದಾಯದ ಅಭಿವೃದ್ಧಿ ಬಗ್ಗೆ ಆಶೆ ಹೃದಯದಲ್ಲಿರಬೇಕು. ಆದರೆ ದುರಹಂಕಾರ ಮತ್ತು ಡಂಭಾಚಾರ ಹೃದಯದಲ್ಲಿ ಉದ್ಭವಿಸಬಾರದು."

## ಮೃಗ ಪಕ್ಷಿಗಳೊಂದಿಗೆ ಉತ್ತಮ ವರ್ತನೆ

ಹಝ್ರತ್ ಪೈಗಂಬರ್(ಸ) ಮೃಗಗಳಿಗೆ ಹಿಂಸೆ ನೀಡುವುದನ್ನು ಕಠಿಣವಾಗಿ ವಿರೋಧಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು: "ಇಸ್ರಾಯೇಲ್ ಸಂತತಿಗಳಿಗೆ ಸೇರಿದ ಒಬ್ಬ ಮಹಿಳೆ ತನ್ನ ಬೆಕ್ಕಿಗೆ ಆಹಾರ ನೀಡದೆ ಅದನ್ನು ಕೊಂದ ಕಾರಣದಿಂದ ಅಲ್ಲಾಹನ ಶಿಕ್ಷೆಗೆ ಗುರಿಯಾದಳು."



ಇದೇ ರೀತಿ ಇನ್ನೊಂದು ಸಂಭವವನ್ನು ಹೀಗೆ ವಿವರಿಸುತ್ತಿದ್ದರು: "ಹಿಂದೆ ಗತಿಸಿಹೋದ ಒಂದು ಸಮುದಾಯಕ್ಕೆ ಸೇರಿದ ಒಬ್ಬಳು ಬಾಯಾರಿಕೆ ಯಿಂದ ಬಳಲುತ್ತಿದ್ದ ಒಂದು ನಾಯಿಯನ್ನು ಆಳವಾದ ಒಂದು ಬಾವಿಯ ಸಮೀಪ ಕಂಡಳು. ಆಕೆ ತನ್ನ ಬೂಟನ್ನು ಕಾಲಿನಿಂದ ಕಳಚಿ ಅದನ್ನು ಬಾವಿಗೆ ಇಳಿಸಿ ನೀರನ್ನು ಸೇದಿ ಆ ನಾಯಿಗೆ ಕುಡಿಸಿದಳು. ಈ ಸತ್ಕಾರ್ಯದ ಕಾರಣದಿಂದ ಅಲ್ಲಾಹನು ಆಕೆ ಹಿಂದೆ ಮಾಡಿದ ಎಲ್ಲಾ ಪಾಪಗಳನ್ನು ಕ್ಷಮಿಸಿದನು." (ಬುಖಾರಿ)

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೀಗೆ ವರದಿ ಮಾಡುತ್ತಾರೆ: "ನಾವು ಹಝ್ರತ್ ಪೈಗಂಬರರ(ಸ) ಜೊತೆ ಪ್ರಯಾಣ ಮಾಡುತ್ತಿದ್ದಾಗ ಒಂದು ಪಾರಿವಾಳದ ಎರಡು ಚಿಕ್ಕ ಮರಿಗಳನ್ನು ಕಂಡೆವು. ನಾವು ಆ ಮರಿಗಳನ್ನು ಎತ್ತಿಕೊಂಡೆವು. ತಾಯಿ ಪಾರಿವಾಳ ಗೂಡಿಗೆ ಮರಳಿ ಬಂದಾಗ ಮರಿಗಳನ್ನು ಕಾಣದೆ ಗಾಬರಿಗೊಂಡು ಸುತ್ತು ಮುತ್ತಲೂ ಹಾರಾಡತೊಡಗಿತು. ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ಸಹ ಅಲ್ಲಿಗೆ ಆಗಮಿಸಿದರು. ಅವರು ಹೇಳಿದರು – ಈ ಪಕ್ಷಿಗೆ ಅದರ ಮರಿಗಳ ಕಾರಣದಿಂದ ಕಷ್ಟಕೊಳ್ಳಪಡಿಸಿದವರು ಯಾರು? ಅದರ ಮರಿಗಳನ್ನು ಕೂಡಲೇ ಬಿಟ್ಟು ಬಿಡಿರಿ. ಅವುಗಳ ತಾಯಿಗೆ ಸಮಧಾನವಾಗಲಿ." (ಅಬೂ ದಾವೂದ್)

ಇದೇ ರೀತಿ ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ವೂದ್(ರ) ಹೀಗೆ ಇನ್ನೊಂದು ವರದಿ ಮಾಡುತ್ತಾರೆ: "ಒಮ್ಮೆ ನಾವು ಇರುವೆಗಳ ಒಂದು ಬಿಲವನ್ನು ಕಂಡಾಗ ಕಸಕಡ್ಡಿ ಹಾಕಿ ಅದನ್ನು ಸುಟ್ಟುಹಾಕಿದೆವು ಹಝ್ರತ್ ಪೈಗಂಬರ್(ಸ) ಆ ವಿಷಯ ತಿಳಿದಾಗ ಹೇಳಿದರು: ನೀವು ಹಾಗೆ ಏಕೆ ಮಾಡಿದಿರಿ? ನೀವು ಹಾಗೆ ಮಾಡುವುದು ತಪ್ಪಾಗಿದೆ." (ಅಬೂದಾವೂದ್)

ಒಮ್ಮೆ ಹಝ್ರತ್ ಪೈಗಂಬರ್(ಸ) ಯಾರೋ ಒಂದು ಕತ್ತೆಯ ಮುಖಕ್ಕೆ ಬರೆ ಹಾಕುತ್ತಾ ಇರುವುದನ್ನು ಕಂಡರು. ಅವರು ಕೇಳಿದರು: "ನೀವು ಈ ರೀತಿ ಬರೆ ಹಾಕುವುದು ಏಕೆ?" ಜನರು ಹೇಳಿದರು: "ರೂಮೀ ಜನರು ಶ್ರೇಷ್ಠ ತಳಿಯ ಕತ್ತೆಗಳನ್ನು ಗುರುತಿಸಲು ಬರೆ ಹಾಕುತ್ತಾರೆ." ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಹಾಗೆ ಮಾಡಬೇಡಿರಿ. ಮುಖವು ಶರೀರದ ಕೋಮಲ ಭಾಗವಾಗಿದೆ. ಬರೆ ಹಾಕುವುದು ಆವಶ್ಯಕವಾದರೆ ಪ್ರಾಣಿಯ ಬೆನ್ನಿನ ಮೇಲೆ ಗುರುತಿನ ಬರೆ ಹಾಕಿರಿ." (ಅಬೂದಾವೂದ್)

ಅನಂತರ ಅಂದಿನಿಂದ ಮುಸ್ಲಿಮರು ಮೃಗಗಳ ಬೆನ್ನಿಗೆ ಗುರುತಿನ ಬರೆ ಹಾಕಲು ತೊಡಗಿದರು. ಈಗ ಅವರನ್ನು ನೋಡಿಕೊಂಡು ಯೂರೋಪಿನ ಜನರು ಸಹ ಮೃಗಗಳ ಬೆನ್ನಿಗೆ ಗುರುತಿನ ಬರೆ ಹಾಕುತ್ತಾರೆ.

## ಧಾರ್ಮಿಕ ಸೌಹಾರ್ದ

ಹಝ್ರತ್ ಪೈಗಂಬರ್(ಸ) ಧಾರ್ಮಿಕ ಸೌಹಾರ್ದದ ಬಗ್ಗೆ ಅತ್ಯಂತ ಹೆಚ್ಚು ಒತ್ತಿ ಹೇಳುತ್ತಿದ್ದರು. ಇದಕ್ಕೆ ಸಂಬಂಧಿಸಿ ಅವರು ಸ್ವತಃ ಉನ್ನತ ಆದರ್ಶ ಸ್ವಭಾವ ಗುಣವನ್ನು ಪ್ರಕಟಿಸುತ್ತಿದ್ದರು. ಒಮ್ಮೆ ಯೆಮನ್ ದೇಶದ ಕ್ರೈಸ್ತರ ಒಂದು ಗುಂಪು ಹಝ್ರತ್ ಪೈಗಂಬರರೊಂದಿಗೆ ಧಾರ್ಮಿಕ ವಿಚಾರ ವಿನಿಮಯಕ್ಕೆ ಬಂದಿದ್ದರು. ಅವರ ಜೊತೆ ಅವರ ಹಿರಿಯ ಪಾದರಿಗಳು ಸಹ ಇದ್ದರು. ಮಸ್‌ಜಿದ್‌ನಲ್ಲಿ ಕುಳಿತು ಚರ್ಚೆ ಪ್ರಾರಂಭಿಸಲಾಯಿತು. ಚರ್ಚೆ ದೀರ್ಘವಾಗಿ ನಡೆಯಿತು. ಆಗ ಅವರ ನಾಯಕ ಪಾದರಿ ಹೇಳಿದರು: "ನಾವು ಪ್ರಾರ್ಥನೆ ಮಾಡುವ ಹೊತ್ತಾಗಿದೆ. ನಾವು ಹೊರಗೆ ಹೋಗಿ ಪ್ರಾರ್ಥನೆ ಮಾಡಿ ಬರುತ್ತೇವೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಹೊರಗೆ ಹೋಗುವ ಅಗತ್ಯವೇನಿದೆ? ನಮ್ಮ ಮಸ್‌ಜಿದ್‌ನಲ್ಲಿಯೇ ನಿಮ್ಮ ಪ್ರಾರ್ಥನೆ ಮಾಡಿರಿ. ನಮ್ಮ ಮಸ್‌ಜಿದ್ ಏಕದೇವನನ್ನು ಸ್ಮರಿಸಲಿಕ್ಕಾಗಿಯೇ ನಿರ್ಮಿಸಲ್ಪಟ್ಟಿದೆ." (ಝುರ್‌ಖಾನಿ ಭಾಗ 4 ಪುಟ41)

## ಶೌರ್ಯ

ಹಝ್ರತ್ ಪೈಗಂಬರ್(ಸ) ಪ್ರದರ್ಶಿಸಿದ ಶೌರ್ಯದ ಅನೇಕ ಸನ್ನಿವೇಶಗಳನ್ನು ಅವರ ಜೀವನ ಚರಿತ್ರೆಯಲ್ಲಿ ಈ ಮೊದಲೇ ಬರೆಯಲಾಗಿದೆ. ಒಂದು ಘಟನೆಯನ್ನು ಇಲ್ಲಿ ವಿವರಿಸಲು ಬಯಸುತ್ತೇನೆ.

ಪೌರ್ವಾತ್ಯ ರೋಮನ್ ಸಾಮ್ರಾಜ್ಯದ ಸರಕಾರ ಒಂದು ದೊಡ್ಡ ಸೈನ್ಯವನ್ನು ಮದೀನದ ಆಕ್ರಮಣಕ್ಕಾಗಿ ಕಳುಹಿಸಲಿದೆ ಎಂಬ ವದಂತಿಗಳು ಮದೀನದಲ್ಲಿ ಹರಡಲು ಪ್ರಾರಂಭವಾದಾಗ ಮದೀನದ ಮುಸ್ಲಿಮರು ರಾತ್ರಿ ಹೊತ್ತು ಬಹಳ ಜಾಗರೂಕರಾಗಿದ್ದು ಎಚ್ಚರದಿಂದ ಇರುತ್ತಿದ್ದರು. ಇಂತಹ ಒಂದು ರಾತ್ರಿ ದೂರದ ಕಾಡುಗುಡ್ಡಗಳಲ್ಲಿ ಯಾವುದೋ ಬೊಬ್ಬೆಯ ಧ್ವನಿ ಕೇಳಿಸಿತು. ಶಿಷ್ಯರು ಬೇಗ ಬೇಗನೆ ತಮ್ಮ ಮನೆಗಳಿಂದ ಹೊರಟರು. ಕೆಲವರು ಆಚೆ ಈಚೆ ಓಡಲು ಪ್ರಾರಂಭಿಸಿದರು. ಕೆಲವರು ಮಸ್‌ಜಿದ್‌ಗೆ ಬಂದು ಸೇರಿದರು. ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಗೆ ಬಂದರೆ ಅವರು ನೀಡುವ ಆಜ್ಞೆ ಪ್ರಕಾರ ವರ್ತಿಸಲು ಅವರನ್ನು ಪ್ರತೀಕ್ಷಿಸ ತೊಡಗಿದರು. ಯಾವುದಾದರೂ ಅಪಾಯವಿದ್ದರೆ ಅದನ್ನು ದೂರ ಸರಿಸಲು ಅವರು ಉತ್ಸುಕರಾಗಿದ್ದರು. ಜನರು ಹಝ್ರತ್ ಪೈಗಂಬರರನ್ನು, ಅವರು ಮನೆಯಿಂದ ಹೊರಗೆ ಬರುವುದನ್ನು ಕಾಯುತ್ತಾ ಇದ್ದಾಗ, ಹಝ್ರತ್ ಪೈಗಂಬರ್(ಸ) ಒಬ್ಬನೇ ಅಶ್ವಾರೂಢರಾಗಿ ನಗರದ ಹೊರವಲಯದಿಂದ ಬರುತ್ತಾ ಇರುವುದಾಗಿ ಕಂಡರು. ಹಝ್ರತ್ ಪೈಗಂಬರ್(ಸ) ದೂರದಿಂದ ಶಬ್ದ ಕೇಳಿಸಿದ ಕೂಡಲೇ ಕುದುರೆಯನ್ನೇರಿ ಶಬ್ದದ ಕಾರಣ ತಿಳಿಯಲು ಮತ್ತು ಅಪಾಯವೇನಾದರೂ ಇದೆಯೋ ಎಂದು ಮನವರಿಕೆಮಾಡಲು ಹೋಗಿದ್ದರು. ಅವರು ತನ್ನ ಶಿಷ್ಯರು ಬಂದು ಸೇರುವುದನ್ನು ಕಾಯದೆ, ಅವರ ಜೊತೆ ಹೋಗಲು ನಿಲ್ಲದೆ ಒಬ್ಬನೇ ಹೋಗಿ ವಿಷಯವೇನೆಂದು ಪರಿಶೀಲಿಸಿ



ಬಂದು ಶಿಷ್ಯರಿಗೆ ಸಮಾಧಾನ ಹೇಳಿದರು: "ಯಾವುದೇ ಅಪಾಯವಿಲ್ಲ, ನೀವು ಮನೆಗೆ ಹೋಗಿ ನಿದ್ರಿಸಿರಿ." (ಬುಖಾರಿ)

## ತಿಳಿಗೇಡಿಗಳೊಂದಿಗೆ ಸಹಾನುಭೂತಿ

ಬುದ್ಧಿ ಕಮ್ಮಿ ಇರುವವರೊಂದಿಗೆ ಹಝ್ರತ್ ಪೈಗಂಬರ್(ಸ) ಅತ್ಯಂತ ಪ್ರೀತಿ ವಾತ್ಸಲ್ಯದಿಂದ ವರ್ತಿಸುತ್ತಿದ್ದರು. ಒಮ್ಮೆ ಗ್ರಾಮೀಣ ಅರಬಿ ಹೊಸದಾಗಿ ಇಸ್ಲಾಮ್ ಧರ್ಮಕ್ಕೆ ಸೇರಿದ್ದನು. ಅವನು ಮಸ್‌ಜಿದ್‌ನಲ್ಲಿ ಕುಳಿತಿದ್ದಾಗ ಅವನಿಗೆ ಮೂತ್ರ ವಿಸರ್ಜಿಸಬೇಕೆಂದು ತೋಚಿತು. ಅವನು ಎದ್ದು ಮಸ್‌ಜಿದಿನ ಒಂದು ಮೂಲೆಯಲ್ಲಿ ಮೂತ್ರ ವಿಸರ್ಜಿಸಲು ಪ್ರಾರಂಭಿಸಿದನು. ಶಿಷ್ಯರು ಅವನನ್ನು ತಡೆಯಲು ಪ್ರಯತ್ನಿಸಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅವನನ್ನು ಮೂತ್ರ ವಿಸರ್ಜನೆಯಿಂದ ಪಕ್ಕನೆ ತಡೆದರೆ ಅವನ ಆರೋಗ್ಯಕ್ಕೆ ಹಾನಿಯಾಗಬಹುದು. ಆದುದರಿಂದ ಅವನನ್ನು ತಡೆಯಬೇಡಿರಿ. ಅವನು ಮೂತ್ರ ವಿಸರ್ಜನೆ ಮಾಡಿದ ನಂತರ ಆ ಸ್ಥಳಕ್ಕೆ ನೀರು ಹಾಕಿ ತೊಳೆದುಬಿಡಿರಿ." (ಬುಖಾರಿ)

## ಒಪ್ಪಂದದ ಪಾಲನೆ

ಹಝ್ರತ್ ಪೈಗಂಬರ್(ಸ) ಒಪ್ಪಂದಗಳನ್ನು ಪಾಲಿಸಲು ಅತ್ಯಂತ ಹೆಚ್ಚು ಶ್ರದ್ಧೆ ವಹಿಸುತ್ತಿದ್ದರು. ಒಮ್ಮೆ ಅನ್ಯ ಸರಕಾರದ ಒಬ್ಬ ಪ್ರತಿನಿಧಿ ಯಾವುದೋ ಸಂದೇಶ ತಂದಿದ್ದನು. ಅವನು ಕೆಲವು ದಿವಸ ಹಝ್ರತ್ ಪೈಗಂಬರರ(ಸ) ಜೊತೆಗೆ ಇದ್ದುಕೊಂಡು ಇಸ್ಲಾಮಿನ ಸತ್ಯವನ್ನು ಮನವರಿಕೆ ಮಾಡಿಕೊಂಡನು. ಅವನು ಹಝ್ರತ್ ಪೈಗಂಬರರೊಂದಿಗೆ(ಸ) ಹೀಗೆ ಹೇಳಿದನು: "ಅಲ್ಲಾಹನ ಪೈಗಂಬರರೇ, ನಾನು ಹೃದಯದಲ್ಲಿ ಮುಸ್ಲಿಮನಾಗಿರುವೆನು. ನಾನು ನನ್ನ ವಿಶ್ವಾಸವನ್ನು ಬಹಿರಂಗಪಡಿಸಲು ಇಚ್ಛಿಸುತ್ತೇನೆ." ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವು ಹೀಗೆ ಮಾಡುವುದು ಸರಿಯಾಗಲಾರದು. ನೀವು ನಿಮ್ಮ ಸರಕಾರದಿಂದ ಒಂದು ವಿಶಿಷ್ಟ ಸ್ಥಾನವನ್ನು ಪಡೆದು ಇಲ್ಲಿಗೆ ಅವರ ಪ್ರತಿನಿಧಿಯಾಗಿ ಬಂದಿರುವಿರಿ. ನೀವು ಇದೇ ಸ್ಥಿತಿಯಲ್ಲಿ ಮರಳಿ ಹೋಗಿರಿ. ಅಲ್ಲಿಗೆ ಹೋದ ನಂತರ ನಿಮ್ಮ ಹೃದಯದಲ್ಲಿ ಇಸ್ಲಾಮಿನ ಬಗ್ಗೆ ಪ್ರೀತಿ ಬಾಕಿಯಾಗಿ ಉಳಿದಿದ್ದರೆ ನೀವು ಪುನಃ ಇಲ್ಲಿಗೆ ಬಂದು ಇಸ್ಲಾಮ್ ಧರ್ಮವನ್ನು ಸ್ವೀಕರಿಸಬಹುದು." (ಅಬೂದಾವೂದ್)

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಭಾವ ಗುಣಗಳ ವಿವರಣೆಯನ್ನು ಕೆಲವು ಪುಟಗಳಲ್ಲಿ ಬರೆದು ಪೂರ್ಣಗೊಳಿಸಲು ಸಾಧ್ಯವಾಗಲಾರದು. ಅವರ ಸ್ವಭಾವ ಗುಣಗಳನ್ನು ಕೇವಲ ಕೆಲವು ಸನ್ನಿವೇಶಗಳ ವಿವರಣೆಯಿಂದ ಮಾತ್ರ ಪೂರ್ಣವಾಗಿ ಮನವರಿಕೆ ಮಾಡಲು ಸಹ ಸಾಧ್ಯವಾಗಲಾರದು. ಪವಿತ್ರ ಖುರ್‌ಆನಿನ ವ್ಯಾಖ್ಯಾನ ಗ್ರಂಥಕ್ಕೆ ಮುನ್ನುಡಿಯ ಒಂದು ಭಾಗವಾಗಿ ಈ ವಿಷಯದ ಬಗ್ಗೆ ಪ್ರಸ್ತಾಪಿಸಿದ ಕಾರಣ ಈ ಸಂದರ್ಭದಲ್ಲಿ ಹೆಚ್ಚು ವಿಸ್ತಾರವಾಗಿ ಬರೆಯಲು ಸಾಧ್ಯವಿಲ್ಲದುದರಿಂದ ನಾನು ಇಲ್ಲಿಗೆ ಮುಕ್ತಾಯಗೊಳಿಸುತ್ತಿದ್ದೇನೆ.

**ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**